Rare 853 116

ಶೀ:- ಹೊಟ್ಟೆ ದೇವರೆ

ಲೇ:- ಶ್ರೀನಿವಾಸರಾವ ಕೊರಟಿ

ಪರಾಮರ್ಶನ ಗ್ರಂಥ

ಸೇಸಂ - 021976

ಅಕ್ಷರ ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ.

1957

1957

ಪರಾಮರ್ಶೆಗೆ ಮಾತ್ರ

'ಸಿರಿಗನ್ನಡ' ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

'ಸಿರಿಗನ್ನಡ' ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ ೫೮೩ ೨೭೬

A.K. Krishna Raja
7-2-58

'ಸಿರಿಗನ್ನಡ' ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ. ಹಂಪಿ.

ಹುಚ್ಚು ದೊರೆ

ಶ್ರೀನಿವಾಸರಾವ್ ಕೊರಟಿ

ಮೋಹನ ಪ್ರಕಾಶನ
ಕೃಷ್ಣಮೂರ್ತಿಪುರಂ :: ಮೈಸೂರು

ಮೊದಲನೆಯ ಮುದ್ರಣ: ಸೆಪ್ಟೆಂಬರ್ ೧೯೫೭

ಮೋಹನ ಕಾದಂಬರಿ ೧೨

ಎಲ್ಲ ಹಕ್ಕುಗಳೂ ಲೇಖಕರವು

ಮುಖಚಿತ್ರ :

ಜಿ. ಕೆ. ಮೂರ್ತಿ, ಧಾರವಾಡ

S 021976

8K3·6
KOR h

ಬೆಲೆ: ರೂ. ೧-೨೫

ಮುದ್ರಕರು :

ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್

ಕೃಷ್ಣಮೂರ್ತಿಪುರಂ, ಮೈಸೂರು

ಗಣಕೀಕರಣ ಆಗಿದೆ.

ಮುನ್ನುಡಿ

ಹುಚ್ಚು ದೊರೆ—ವಿಜಯನಗರದ ಏಳಿಗೆ– ಅವನತಿಗಳನ್ನು ಚಿತ್ರಿಸುವ ರುದ್ರಮನೋಹರ ಬೃಹದ್ ಕಾದಂಬರಿ "ಸಾಮ್ರಾಜ್ಯ ದುರಂತ"ದ ಐದನೇ ಘಟ್ಟದ ಕಥೆ. ಜಗನ್ಮೋಹಿನಿಯಲ್ಲಿ ಆರಂಭವಾದ ಈ ಸಾಮ್ರಾಜ್ಯ ಕಥಾ ವಾಹಿನಿ ಶಾಂತಿವಾದಿ, ರಾಜದ್ರೋಹಿ, ಅಮಾತ್ಯರತ್ನಗಳಾಗಿ ಹರಿದು, ಈಗ ಹುಚ್ಚುದೊರೆಯ ಘಟ್ಟಕ್ಕೆ ಬಂದುನಿಂತಿದೆ. ಮುಂದಿನ ಹಾಗೂ ಅಂತಿಮ ಘಟ್ಟದ ಕಥೆಯನ್ನು 'ರಕ್ಕಸತಂಗಡಿ'ಯಲ್ಲಿ ಚಿತ್ರಿಸಿದ್ದೇನೆ. ಅದೂ ಸದ್ಯ ದಲ್ಲಿಯೇ ಪ್ರಕಟವಾಗಿ ಓದುಗರ ಕೈಸೇರಲಿದೆ.

ಈ ಕಾದಂಬರಿಗೆ ಸಾಮ್ರಾಟ ಕೃಷ್ಣದೇವರಾಯನನಂತರ ಪಟ್ಟಕ್ಕೆ ಬಂದ ಅಚ್ಯುತರಾಯನ ಆಳ್ವಿಕೆ (ಕ್ರಿ. ಶ. ೧೫೩೦–೪೨) ಯ ಕೆಲವು ಘಟನೆ ಗಳನ್ನು ಕಥಾವಸ್ತುವಾಗಿ ತೆಗೆದುಕೊಂಡಿದ್ದೇನೆ. ಈ ಕಾದಂಬರಿಯ ವಸ್ತುವಿನ ಐತಿಹ್ಯದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದ್ದಂತಿದೆ. ಕಾದಂಬರಿಯ ಮುಖ್ಯ ಘಟನೆಗಳನ್ನು ಫಾದರ್ ಹೆರಾಸರು ಬರೆದಿರುವ ಆರವೀಡು ವಂಶಾವಳಿ ಗ್ರಂಥದಿಂದ ತೆಗೆದುಕೊಂಡಿದ್ದೇನೆ. ಇದಕ್ಕೆ ಪೂರಕವಾಗಿ ಶ್ರೀ ಹಯವದನ ರಾಯರ **ಮೈಸೂರು ಗೆಜಿಟಿಯರ್** ಗ್ರಂಥದಿಂದಲೂ ಕೆಲವು ಸಂಗತಿಗಳನ್ನು ತೆಗೆದುಕೊಂಡಿದ್ದೇನೆ. ಕೃಷ್ಣದೇವರಾಯನ ಮರಣಾನಂತರ ವಿಜಯನಗರದ ಸಿಂಹಾಸನವನ್ನು ಕೊಲೆ, ಮೋಸ, ವಂಚನೆಗಳಿಂದ ಆಕ್ರಮಿಸಲೆತ್ನಿಸದ 'ಹುಚ್ಚು ತಿಮ್ಮ'ನು ಐತಿಹಾಸಿಕ ವ್ಯಕ್ತಿ ಎಂಬುದನ್ನು ವಿದ್ವಾಂಸರು ಒಪ್ಪಿದರೂ, ಇವನು ಯಾರೆಂಬ ಬಗ್ಗೆ ಅವರಲ್ಲೂ ಒಮ್ಮತವಿಲ್ಲ. ಈ ಹುಚ್ಚು ತಿಮ್ಮನೇ – ಸಲಕಂ ರಾಜನ ಮಕ್ಕಳೂ, ಅಚ್ಯುತರಾಯನ ಭಾವಮೈದುನರೂ ಆಗಿದ್ದ ಸಲಕಂ ಸಹೋದರರಲ್ಲಿ ಹಿರಿಯನಾದ – ಪೆದ್ದತಿರುಮಲನು ಇರಬೇಕೆಂದು ಹಯವದನ ರಾಯರು ಮಾಡಿರುವ ಊಹೆ ಹೆಚ್ಚು ಸಮಂಜಸವಿರುವಂತೆ ತೋರುತ್ತದೆ. ಈ ಬಗ್ಗೆ ನೂತನ ಸಂಶೋಧನೆಗಳು ಹೆಚ್ಚು ಬೆಳಕು ಬೀರಬೇಕಾಗಿದೆ.

ಈ ಕಾದಂಬರಿಯಲ್ಲಿ ಬರುವ ವರದಾದೇವಿ ಅನ್ನಪೂರ್ಣಾದೇವಿಯರ ಅಂತ್ಯವು ನನ್ನ ಕಲ್ಪನೆಯಾದರೂ ಉಳಿದ ವ್ಯಕ್ತಿಗಳು, ಘಟನೆಗಳು ಐತಿ ಹಾಸಿಕ ಸಂಗತಿಗಳೇ ಆಗಿವೆ. ಈ ಕೃತಿಯ ಪ್ರಕಟಣೆಯಲ್ಲಿ ನೆರವಾದ ಸನ್ಮಿತ್ರ ಶ್ರೀ ರಾ. ವೆಂ. ಶ್ರೀನಿವಾಸರಿಗೂ, ಈ ಕೃತಿಯನ್ನು ಹೊರತರುವ ಕಾರ್ಯದಲ್ಲಿ

ನೆರವಾದ ಹಿರಿಯರಾದ ಶ್ರೀ ವೆಂಕೋಬರಾಯರಿಗೂ ನನ್ನ ಹೃತ್ಪೂರ್ವಕ ವಂದನೆಗಳು. ಈ ಕೃತಿಯ ರಚನೆಗೆ ಕಾರಣಳಾಗಿ, ಹಸ್ತಪ್ರತಿಯನ್ನು ಸಿದ್ಧ ಪಡಿಸಿಕೊಟ್ಟ ಸೌ|| ಮಂಜುಳೆಗೂ ನಾನು ಆಭಾರಿಯಾಗಿದ್ದೇನೆ.

೧೨೪, ರಾಘವೇಂದ್ರ ಕಾಲೋನಿ
೫ನೇ ರಸ್ತೆ, ಚಾಮರಾಜಪೇಟೆ
ಬೆಂಗಳೂರು ೨

ಶ್ರೀನಿವಾಸರಾವ್ ಕೊರಟಿ

೧

ಎಲ್ಲವೂ ಮಿಂಚಿನ ವೇಗದಲ್ಲಿ ನಡೆದಿತ್ತು.

ಸಾಮ್ರಾಟ್ ಕೃಷ್ಣದೇವರಾಯನು ಕ್ರಿ. ಶ. ೧೫೩೦ನೆಯ ಸಂವತ್ಸರದಲ್ಲಿ ತನ್ನ ಇಹಲೋಕದ ಲೀಲೆಯನ್ನು ಮುಗಿಸಿ, ಸಾಮ್ರಾಜ್ಯವನ್ನು ಗಂಡಾಂತರ ಕ್ಕೀಡು ಮಾಡಿ, ಅಂತಿಮ ಯಾತ್ರೆ ಮಾಡಿದ್ದನು. ಮೂರು ಸಮುದ್ರಗಳವರೆಗೆ ತನ್ನ ಬಾಹುಬಲದಿಂದ ಸಾಮ್ರಾಜ್ಯವನ್ನು ವಿಸ್ತರಿಸಿ, ಗೋವೆಯ ಪೋರ್ಚುಗೀಸ ರಿಂದಲೂ, ಸಿಂಹಳದ ಭುವನೈಕ ಬಾಹುವಿನಿಂದಲೂ, ಉತ್ಕಲದ ಗಜಪತಿ ಯಿಂದಲೂ, ಬಹಮನಿ ಸುಲ್ತಾನರಿಂದಲೂ ಓಲೈಸಿಕೊಂಡು, ಅಖಂಡ ಭೂಮಂಡಲೈಕಚಕ್ರಾಧಿಪನೆನಿಸಿ, ಕರ್ಣಾಟಕ ರಮಾರಮಣನಾಗಿ, ಆಂಧ್ರ ಭೋಜನಾಗಿ ಮೆರೆದು, ಅರಿರಾಯಗಂಡನೆನಿಸಿ ಇಪ್ಪತ್ತು ವರ್ಷಗಳಕಾಲ ವಿಜಯ ನಗರ ಸಾಮ್ರಾಜ್ಯವನ್ನು ವೈಭವದಿಂದ ಆಳಿ, ಸಾಮ್ರಾಜ್ಯದ ಕೀರ್ತಿಯನ್ನು ದಶ ದಿಕ್ಕುಗಳಿಗೂ ಹರಡಿ, ವಿಜಯನಗರದ ಇತಿಹಾಸದಲ್ಲಿ ಸುವರ್ಣ ಅಧ್ಯಾಯವನ್ನು ಬರೆದ ಸಾಮ್ರಾಟ್ ಕೃಷ್ಣದೇವರಾಯನು, ತಾನು ಕೈಕೊಂಡಿದ್ದ ಮಹತ್ಕಾರ್ಯ ಸಾಧನೆಯಾಗುವ ಮೊದಲೇ, ಸಾಮ್ರಾಜ್ಯವನ್ನು ಶತ್ರುನಿಷ್ಕಂಟಕವಾಗಿ ಮಾಡದ ಮೊದಲೇ ಮೃತ್ಯುಗೀಡಾಗಿದ್ದನು. ಸಾಮ್ರಾಟನು ಇಷ್ಟು ಬೇಗ, ಈ ರೀತಿ ಯಲ್ಲಿ ತೀರಿಕೊಳ್ಳುವನೆಂದು ಯಾರೂ ತಿಳಿದಿರಲಿಲ್ಲ. ಅಂತಹ ಒಂದು ಹೆದರಿಕೆ ಕಳೆದ ಮೂರುವರ್ಷಗಳ ಹಿಂದೆ ಬಂದೊದಗಿತ್ತು. ಆದರೆ ದಾರುಣವಾದ ಕಾಹಿಲೆಯಿಂದ, ಮೃತ್ಯುವಿನ ಕರಾಳ ಮುಷ್ಟಿಯಿಂದ ಸಾಮ್ರಾಟನು ಪಾರಾ ಗಿದ್ದುದು ಮಾತ್ರವಲ್ಲದೆ, ಜನತೆಗೆ ಉಂಟಾಗಿದ್ದ ಸಾಮ್ರಾಜ್ಯದ ಭೀತಿ ನಿರ್ಮೂಲ ವಾಗುವಂತೆ, ಸಾಮ್ರಾಟನಿಗೆ ಪುತ್ರೋತ್ಸವವೂ ಆಗಿತ್ತು. ಜನತೆ ಈ ವಿಷಯಗಳನ್ನರಿತು ಹರ್ಷಿಸುತ್ತಿರುವಾಗಲೇ, ಕುಲಶತ್ರುಗಳಾದ, ಪ್ರತಾಪರುದ್ರ ಗಜಪತಿಯೂ ಬಹಮನಿ ಸುಲ್ತಾನರೂ ತಮ್ಮ ಹಳೆಯ ವೈರವನ್ನು ನೆನೆದು ಪುನಃ ದಂಡೆತ್ತಿ ಬಂದಿದ್ದರು. ಅವರನ್ನು ಸೋಲಿಸಿ ಸದೆಬಡಿದು, ಮುಂದೆಂ ದಿಗೂ ವಿಜಯನಗರದ ತಂಟೆಗೆ ಬಾರದಂತೆ ಬುದ್ಧಿ ಕಲಿಸಲು ಸಾಮ್ರಾಟ್ ಕೃಷ್ಣದೇವರಾಯನು ತನ್ನ ಸಕಲ ಸೈನ್ಯವನ್ನು ಸಜ್ಜುಗೊಳಿಸಿ, ಕುಟಿಲನಾದ ಆಸದ್ ಖಾನನಿಂದ ಬೆಳಗಾಂ ದುರ್ಗವನ್ನು ವಶಪಡಿಸಿಕೊಂಡು, ಗೋವೆಯ ಪೋರ್ಚುಗೀಸರಿಗೆ ಕೊಡಲು ದಂಡೆತ್ತಿ ಹೊರಟದ್ದ. ಆದರೆ ಕೃಷ್ಣದೇವ ರಾಯನು ಹಠಾತ್ತನೆ ತನ್ನ ಹಳೆಯ ಕಾಹಿಲೆಯಾದ ಉದರ ವ್ಯಾಧಿಗೆ ತುತ್ತಾ ದನು. ದಂಡಯಾತ್ರೆಯನ್ನು ಅರ್ಧಕ್ಕೆ ನಿಲ್ಲಿಸಿ, ರಾಜಧಾನಿಗೆ ಹಿಂದಿರುಗಿ

ಹಾಸಿಗೆ ಹಿಡಿದವನು ಮತ್ತೆ ಏಳಲಿಲ್ಲ. ಎಂತಹ ಸಾಮ್ರಾಟನಿಗೆ ಎಂತಹ ಸಾವು? ಎಂತಹ ಭವ್ಯವಾದ ಆಳ್ವಿಕೆಗೆ ಎಂತಹ ಮುಗಿವು?

ತನ್ನ ಕಣ್ಣೆದುರಿಗೇ ತಾನು ರಕ್ತ ಹರಿಸಿ ಸಂಪಾದಿಸಿದ ಸಾಮ್ರಾಜ್ಯ ಮರಳಿನ ಮನೆಯಂತೆ ಕುಸಿದು ಬಿದ್ದಿತ್ತು. ದೇಶದ ಒಳಗೆ, ಹೊರಗೆ ಶತ್ರುಗಳು ಸಾಮ್ರಾಜ್ಯವನ್ನು ನುಂಗಲು ಕಾದು ಕುಳಿತಿದ್ದರು. ರಾಜಧಾನಿ ವಿದ್ರೋಹಿಗಳ ಹುತ್ತವಾಗಿತ್ತು – ಸಿಂಹಾಸನಕ್ಕಾಗಿ, ತನ್ನ ಕಣ್ಣೆದುರಿಗೇ, ಅಳಿಯ ರಾಮರಾಯ, ತಿರುಮಲರಾಯ, ಅಚ್ಯುತರಾಯರು ಹೋರಾಟ ನಡೆಸಿದ್ದರು. ತನ್ನ ಪ್ರಿಯಪತ್ನಿಯರೇ ತನ್ನ ಎದುರು ನಿಂತಿದ್ದರು. ತನ್ನ ನಂಬಿಕೆಯ ಸೇವಕರೇ ತನಗೆ ದ್ರೋಹ ಚಿಂತನೆ ಮಾಡಿದ್ದರು. ಹೊರಗಿನ ಶತ್ರುಗಳೊಂದಿಗೇ ಯುದ್ಧಕ್ಕೆ ಸನ್ನಿಹಿತವಾಗುವ ಮೊದಲೇ ವಿಜಯನಗರದ ರಕ್ಷಾಮಣಿಯಂತಿದ್ದ ತಿಮ್ಮರಸನನ್ನು ಕಳೆದುಕೊಂಡಿದ್ದ! ವಿಧಿ ಇಷ್ಟಕ್ಕೆ ಸಮ್ಮನಾಗದೆ, ಈಗ ಉದರ ವ್ಯಾಧಿಯ ನಿಮಿತ್ತದಲ್ಲಿ ಕೃಷ್ಣದೇವರಾಯನ, ಇಹಲೋಕದ ಜೀವನವನ್ನು ಹಠಾತ್ತನೆ ಕೊನೆಗಾಣಿಸಿತ್ತು; ಅತ್ತ ಹೊರಗಿನ ಪ್ರಬಲ ಶತ್ರುಗಳು, ಇತ್ತ ಅಳಿಯಂದಿರೂ, ಮಲಸಹೋದರರು! ಇವರುಗಳಿಂದ ಸಿಂಹಾಸನವನ್ನು ಉಳಿಸುವ ಭಾರ, ಕೃಷ್ಣದೇವರಾಯನಿಗೆ, ಕಡೆಗಾಲದಲ್ಲಿ ಹುಟ್ಟಿದ್ದ ಅನ್ನಪೂರ್ಣಾದೇವಿಯ ಪುತ್ರನ ಮೇಲೆ ಬಿತ್ತು! ಮಂತ್ರಿಗಳ ಸಂಪುಟದಲ್ಲಿ, ಸಾಮಂತ ಮಾಂಡಲೀಕರ ಪರಸ್ಪರ ವೈರ ಕಲಹಗಳ ಜ್ವಾಲೆ ಪ್ರಜ್ವಲಿಸುತ್ತಿರುವಾಗ, ಸಾಮ್ರಾಜ್ಯದ ಹಿತರಕ್ಷಣೆಯ ಭಾರ, ಸೋಮರಸನಂತಹ, ಒಬ್ಬಿಬ್ಬ ಸ್ವಾಮಿನಿಷ್ಠ ಸೇವಕರ ಮೇಲೆ ಬಿತ್ತು. ಸಿಂಹಾಸನಕ್ಕಾಗಿ ಯಾದವೀ ಕಲಹ ನಡೆಯುವ ಮುನ್ನ, ಅರಾಜಕತೆ ಏರ್ಪಡುವ ಮುನ್ನ, ಶತ್ರುಧಾಳಿಗೆ ಅವಕಾಶವಾಗುವ ಮುನ್ನ, ಸಿಂಹಾಸನಕ್ಕೆ ನ್ಯಾಯವಾದ ಹಕ್ಕುದಾರನಾದ ಬಾಲರಾಜನಿಗೆ ಉಳಿಸಿಕೊಟ್ಟು, ದೇಶದಲ್ಲಿ ದಂಗೆ, ದ್ರೋಹ ನಡೆಯದಂತೆ, ಕಾಪಾಡುವ ಗುರುತರವಾದ ಜವಾಬ್ದಾರಿಯನ್ನು ರಾಯನ ಅಂತರಂಗಕ್ಕೆ ಪಾತ್ರರಾಗಿದ್ದ, ಸೋಮರಸ, ಭರತಾಚಾರ್ಯ, ಮುಂತಾದವರ ಮೇಲೆ ಬಿದ್ದಿತ್ತು. ಅವರು ಈ ವಿಷಮ ಪರಿಸ್ಥಿತಿಯಲ್ಲೂ ಧೈರ್ಯಗೆಡದೆ, ಅಧೀರರಾಗದೆ, ಕೃಷ್ಣದೇವರಾಯನ ಆದೇಶದಂತೆ ನಡೆಯಲು ಕಂಕಣ ಕಟ್ಟಿ ನಿಂತಿದ್ದರು. ಅವರು ಕೆಲವು ರಾಜಕೀಯ ಕಾರಣಗಳಿಗಾಗಿ ಕೃಷ್ಣದೇವರಾಯನ ಮರಣವನ್ನು ಗೋಪ್ಯವಾಗಿಟ್ಟಿದ್ದರು.

ಅಂತಲೇ ಸಾಮ್ರಾಟ್ ಕೃಷ್ಣದೇವರಾಯನು ಮರಣಹೊಂದಿದುದರ ಸಂಕೇತವಾಗಿ, ಭುವನ ವಿಜಯದ ಮೇಲೆ, ಪಟಪಟನೆ ಹಾರುತ್ತಿದ್ದ ವರಹಾಂಕಿತ ಧ್ವಜ ಕೆಳಗಿಳಿಯಲಿಲ್ಲ. ಅರಮನೆಯಲ್ಲಿ ದುಃಖ ಸೂಚಕವಾದ ವಾದ್ಯಗಳು ಮೊಳಗಲಿಲ್ಲ. ಸ್ವಯಂ ರಾಣಿಯರಿಗೂ ಸಾಮ್ರಾಟನ ಸಾವಿನ ವಿಷಯ

ತಿಳಿಸದೆ ಗೋಪ್ಯವಾಗಿಡಲಾಗಿತ್ತು. ಈ ಸುದ್ದಿ ಸೋಮರಸ, ಭರತಾಚಾರ್ಯ, ರಾಜವೈದ್ಯ ಈ ಮೂವರ ಹೊರತು ಅನ್ಯರಿಗೆ ತಿಳಿದಿರಲಿಲ್ಲ.

ಆ ದಿನ ಕೃಷ್ಣದೇವರಾಯನು ತಾನು ಇನ್ನು ಉಳಿಯುವುದಿಲ್ಲವೆಂದು ಖಚಿತವಾದೊಡನೆ, ತನ್ನ ಆಪ್ತರಾಗಿದ್ದ ಪ್ರಧಾನಿ ಸೋಮರಸ, ನಾಟ್ಯಾಚಾರ್ಯರಾದ ಭರತಾಚಾರ್ಯರನ್ನು ಕರೆತರಿಸಲು ರಾಜವೈದ್ಯರಿಗೆ ಆಜ್ಞಾಪಿಸಿದನು. ಅದರಂತೆ ಸೋಮರಸ, ಭರತಾಚಾರ್ಯರು ಒಂದೇ ಉಸಿರಿನಿಂದ ಓಡಿಬಂದರು. ಆ ಮೂವರನ್ನು ತನ್ನ ಹಾಸಿಗೆಯ ಬಳಿ ಕೂಡಿಸಿಕೊಂಡು ಕ್ಷೀಣವಾದ ಧ್ವನಿಯಲ್ಲಿ ರಾಯನು ಉಸಿರಿದ.

"ಸೋಮರಸರೇ, ನನ್ನ ಮಾತನ್ನು ಚೆನ್ನಾಗಿ ಆಲಿಸಿ. ನಾನು ಇನ್ನು ಹೆಚ್ಚು ಕಾಲ ಬದುಕುವುದಿಲ್ಲ. ತಿಮ್ಮರಸರಿಲ್ಲದ ಮೇಲೆ ಬರಿದಾದ ಈ ಭಾಳನ್ನು ತುಂಬಲು ಯಾರಿಂದಲೂ ಸಾಧ್ಯವಿಲ್ಲ....! ನಾನು ಅವರ ಬಳಿಗೆ ಹೋಗುತ್ತಿದ್ದೇನೆ........"

"ಪ್ರಭು........" ಎಂದ ಸೋಮರಸ ಆತಂಕಗೊಂಡು, ಕಂಬನಿದುಂಬಿ.

"ನೀವು ಧೈರ್ಯಗೆಡಬಾರದು. ನನಗೆ ಕಾಲನ ಕರೆ ಬಂದಿದೆ....ಅವನ ಕರೆಯನ್ನು ಯಾರೂ ಮೀರಲಾರರು ನಾನೂ ತಿಮ್ಮರಸರಷ್ಟೇ ಸಂತೋಷದಿಂದ ಸಾವನ್ನು ಗೆಳೆಯನಾಗಿ, ಬಂಧುವಾಗಿ ಆಹ್ವಾನಿಸುತ್ತಿದ್ದೆ....ಆದರೆ...." ರಾಯನು ಕಂಬನಿದುಂಬಿದನು. ಧ್ವನಿ ಗದ್ಗದಿತವಾಯಿತು—

ಆ ದೃಶ್ಯವನ್ನು ನೋಡಲಾರದೆ ಸೋಮರಸನು

"ಪ್ರಭು, ತಾವು ಸಾವಿನ ಮಾತು ತೆಗೆಯಬಾರದು. ಸಾವಿರ ವರ್ಷ ಚಿರಂಜೀವಿಗಳಾಗಿ ಬದುಕಬೇಕು."

"ಇಲ್ಲ ಸೋಮರಸರೇ, ಬದುಕುವ ಆಸೆಯೇ ನನಗಿಲ್ಲ. ತಿಮ್ಮರಸ—ಅಪ್ಪಾಜಿ ಇಲ್ಲದ ಮೇಲೆ ಈ ಕ್ರೂರ ಜಗತ್ತಿನಲ್ಲಿ ಉಳಿಯುವ ಆಸೆಯಿಲ್ಲ, ನನ್ನ ದೈಹಿಕ ಯಾತನೆಗಳನ್ನೂ, ಮಾನಸಿಕ ಯಾತನೆಗಳನ್ನೂ ಕೊನೆಗಾಣಿಸುವ ಸಾವು ನಿಜವಾಗಿಯೂ, ನನಗೆ ಪ್ರಿಯವೇ ಆಗಿದೆ....ಆದರೆ ಈ ಕಣ್ಣೀರೇಕೆಂದು? ನೀವು ಕೇಳಬಹುದು....ಈ ಸಾವಿಗಾಗಿ - ನನಗೆ ಬಂದಿರುವ ಸಾವಿಗಾಗಿ ದುಃಖಿಸುತ್ತಿದ್ದೇನೆ. ರಣರಂಗದಲ್ಲಿ ವೀರನಂತೆ ಹೋರಾಡುತ್ತಾ ಮರಣ ಹೊಂದಿದ್ದರೆ ಇಷ್ಟು ಚಿಂತಿಸುತ್ತಿರಲಿಲ್ಲ. ಆ ಪುಣ್ಯ ನನಗಿಲ್ಲ. ವೀರನಾಗಿ ಬಾಳಿ ಬದುಕಿ, ಇಪ್ಪತ್ತು ವರ್ಷಗಳನ್ನು ರಣರಂಗದಲ್ಲಿ ಕಳೆದ ನನಗೆ ವಿಧಿ ಎಂತಹ ಸಾವನ್ನು ಕಾದಿರಿಸಿದ್ದನೆಂದು ನೆನೆದರೆ ದುಃಖ ಉಮ್ಮಳಿಸಿ ಬರುತ್ತದೆ. ನಾನು ಯಃಕಶ್ಚಿತ ಉದರ ವ್ಯಾಧಿಯಿಂದ ನರಳಿ, ಹಾಸಿಗೆಯಲ್ಲಿ ಹೊರಳಿ ಸಾಯುವಂತಾಯಿತೇ ಎಂದು ಪರಿತಪಿಸುತ್ತಿದ್ದೇನೆ....!"

" ಪ್ರಭುಗಳು ಇಷ್ಟು ಅಲ್ಪಕಾರಣಕ್ಕಾಗಿ ದುಃಖಿಸಬಾರದು. ತಾವು ರಣರಂಗದಲ್ಲಿ ಇದ್ದರೇನು? ಹಾಸಿಗೆಯಲ್ಲಿದ್ದರೇನು? ತಮಗೆ ವೀರ ಮರಣವೇ ಬಂದಿದೆ. ಸಮರ ಯಾತ್ರೆಯನ್ನು ನೆನೆಯುತ್ತಿರುವ ನಿಮ್ಮ ಮನಸ್ಸು ವೈರಿ ಮರ್ದನದಲ್ಲೇ ಇದೆ...."

" ಇಂತಹ ಸಮಾಧಾನ ನನ್ನನ್ನು ತೃಪ್ತಿಗೊಳಿಸಲಾರದು ಸೋಮರಸರೇ. ನಾನು ಅನೇಕ ಜನರ ರಕ್ತ ಹರಿಸಿ, ಅಪಾರ ಹಣ, ಶ್ರಮಗಳ ಬಲಿದಾನದಿಂದ ಕಟ್ಟಿ ವಿಸ್ತರಿಸಿದ ಸಾಮ್ರಾಜ್ಯವನ್ನು ಸುಭದ್ರವಾದ ಅಡಿಪಾಯದ ಮೇಲೆ ಸಲ್ಲಿಸುವ ಮೊದಲೇ, ಗಂಡಾಂತರಕ್ಕೆ ಒಡ್ಡಿ ಹೋಗುತ್ತಿರುವೆನಲ್ಲಾ ಎಂದು ವ್ಯಥೆ! ....ನನ್ನ ನಂತರ ಪಟ್ಟಕ್ಕೆ ಬರುವ ಆ ಹಸುಳೆ ಇನ್ನೂ ಹಾಲುಗಲ್ಲದ ಕಂದಮ್ಮ. ಎರಡು ವರ್ಷ ಕೂಡಾ ತುಂಬಿಲ್ಲ. ಆ ಮಗುವಿನ ಮೇಲೆ ಹೊರಿಸುತ್ತಿರುವ ಈ ಸಾಮ್ರಾಜ್ಯದ ಹೊರೆ ಅಪಾರವಾದುದು."

" ಪ್ರಭು ಈ ಬಗ್ಗೆ ತಾವು ಕಳವಳಗೊಳ್ಳಬಾರದು. ಕುಮಾರರಿಗಾಗಲೀ, ಸಿಂಹಾಸನಕ್ಕಾಗಲೀ, ಸಾಮ್ರಾಜ್ಯಕ್ಕಾಗಲೀ ಯಾವ ಭಯವೂ ಇಲ್ಲ. ನಮ್ಮ ದೇಹದಲ್ಲಿ ಜೀವವಿರುವ ತನಕ ಸಾಮ್ರಾಜ್ಯಕ್ಕೆ ಯಾವ ಹಾನಿಯೂ ಇಲ್ಲ.... ಕುಮಾರನ ಕೂದಲೂ ಕೊಂಕದಂತೆ ನೋಡಿಕೊಳ್ಳುವ ಜವಾಬ್ದಾರಿ ನಮಗಿರಲಿ. ಪಂಪಾಪತಿಯಾಣೆಗೂ ಈ ಮಾತು ಸತ್ಯ!"

" ಈ ಬಗ್ಗೆ ನನ್ನದೇ ಆದ ಭೀತಿ, ಕಳವಳ ನನಗಿದೆ ಸೋಮರಸರೇ, ನಿಮ್ಮ ಶಕ್ತಿ ಸಾಮರ್ಥ್ಯಗಳಲ್ಲಿ ಅಪನಂಬಿಕೆ ಎಂದು ನೀವು ಭಾವಿಸಬಾರದು. ಮುಂದೆ ನಡೆಯಲಿರುವ ವಿದ್ರೋಹ, ಯಾದವೀ ಕಲಹಗಳನ್ನು ಹೊಸೆದು ಹಾಕುವಷ್ಟು ಪ್ರಾಪ್ತ ವಯಸ್ಸು ಆ ಮಗುವಿಗಿಲ್ಲ! ಶತ್ರುಗಳಿಂದ ಆ ಮಗುವಿನ ಜೀವಕ್ಕೆ ಗಂಡಾಂತರವೆಲ್ಲಿ ಒದಗುವುದೋ, ಎಲ್ಲಿ ಅಂತಃಕಲಹಗಳಲ್ಲಿ ಸಾಮ್ರಾಜ್ಯ ಶತ್ರುಗಳ ಪಾಲಾಗುವುದೋ ಎಂಬ ಹೆದರಿಕೆ ನನಗೆ—ಇದನ್ನೆಲ್ಲಾ ಊಹಿಸಿದರೆ ನನ್ನ ಎದೆ ಒಡೆಯುತ್ತದೆ!"

" ಪ್ರಭು ನಾವು ನಮ್ಮ ದೇಹದಲ್ಲಿ ಒಂದು ತೊಟ್ಟು ರಕ್ತವಿರುವವರೆಗೂ ಈ ದುರಂತವನ್ನು ತಪ್ಪಿಸಲು ಹೋರಾಡುತ್ತೇವೆ. ಇಷ್ಟರ ಮೇಲೆ ಪಂಪಾಪತಿಯ ಇಚ್ಛೆಯಿದ್ದಂತೆ ಆಗಲಿ! ಆದರೂ ಪಂಪಾಪತಿಯ ಅನುಗ್ರಹ ಈ ಧರ್ಮ ಸಾಮ್ರಾಜ್ಯಕ್ಕಿದೆ ಎಂದು ನನಗನಿಸುತ್ತಿದೆ. ಸಾಮ್ರಾಜ್ಯಕ್ಕೆ ಯಾವ ಭೀತಿಯೂ ಇಲ್ಲ."

" ಈಗ ನಾನು ಪ್ರಾರ್ಥಿಸುವುದೂ ದೈವಾನುಗ್ರಹವನ್ನೇ! ನಾಳಿನ ಸಿಂಹಾಸನದ ಭದ್ರತೆ ಹೇಗೆಂದು ಆತಂಕಗೊಂಡಾಗ, ಪಂಪಾಪತಿಯು ಒಂದು ದಾರಿ ತೋರಿಸಿದಂತೆ, ಅವನ ಅನುಗ್ರಹದಿಂದ, ವರಪ್ರಸಾದದಿಂದ, ಹುಟ್ಟಿದ ಕುಮಾರ

ನನ್ನು ಕಾಯುವುದು ಅವನಿಗೇ ಸೇರಿದೆ....ನಾನು ಬದುಕಿ ಉಳಿದರೆ ಶತ್ರುಗಳಿಂದ ಸಾಮ್ರಾಜ್ಯವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತೇನೆ. ನನಗೆ ಆ ಭಾಗ್ಯ ಲಭಿಸದೆ ಹೋದರೆ, ನನ್ನ ಈ ಆಸೆಯನ್ನು – ಕಡೆಯಾಸೆಯನ್ನು ನೀವು ಕಾರ್ಯ ಗತಗೊಳಿಸಿ. ನನ್ನ ನಂತರ ನೀವು ಕುಮಾರನಿಗೆ ಪಟ್ಟಗಟ್ಟಿ, ಅವನ ಹೆಸರಿನಲ್ಲಿ ಅಚ್ಯುತರಾಯನನ್ನು ಆಳುವಂತೆ ಮಾಡಿ, ಅಳಿಯಂದಿರಾದ – ರಾಮರಾಯ, ತಿರುಮಲರನ್ನು, ರಾಜ್ಯಾಡಳಿತದ ಜವಾಬ್ದಾರಿಯನ್ನು ಹೊರುವಂತೆ ಮಾಡಿ, ಸಾಮ್ರಾಜ್ಯದ ಸೇವೆಯಲ್ಲಿ, ಅವರನ್ನೂ ಉಚಿತರೀತಿಯಲ್ಲಿ ಉಪಯೋಗಿಸಿ ಕೊಳ್ಳಿ........ನಾನೇ ಈ ವಿಷಯವನ್ನು ಎಲ್ಲರೊಡನೆ ಆಲೋಚಿಸಿ ನಿರ್ಧರಿಸ ಬೇಕೆಂದಿದ್ದೆ....ಆದರೆ ಸಾಧ್ಯವಿಲ್ಲ. ನನ್ನ ಅಂತಿಮ ಆಸೆಯನ್ನು ಕುರಿತು ಮರಣಶಾಸನವನ್ನು ತಿಮ್ಮರಸರ ಸಲಹೆಯ ಮೇರೆಗೆ ರಚಿಸಿದ್ದೇನೆ. ಅದನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ನಿಮ್ಮದು" ಎಂದು ಹೇಳಿ ತಲೆಯ ಕೆಳಗೆ ಇಟ್ಟುಕೊಂಡಿದ್ದ ಮರಣಶಾಸನವನ್ನು ಸೋಮರಸನ ಕೈಗಿತ್ತು ಮಂದಸ್ಮಿತ ನಾಗಿ ನೋಡಿದ.

'ಮಹದಾಜ್ಞೆ!' ಎಂದು ತಲೆಬಾಗಿ, ಅದನ್ನು ಕಣ್ಣಿಗೆ ಒತ್ತಿಕೊಂಡ ಸೋಮರಸ.

"ಪ್ರಭು! ಪಂಪಾಪತಿಯಾಣೆಗೂ, ನಮ್ಮ ಜೀವನದ ಕೊನೆಯುಸಿರನ್ನು ಬಿಡುವವರೆಗೂ, ನಿಮ್ಮ ಆಜ್ಞೆಯನ್ನು ಕಾರ್ಯಗತ ಮಾಡಲು ಹೋರಾಡು ತ್ತೇವೆ" ಎಂದು ಮೂವರೂ ವಾಗ್ದಾನ ಮಾಡಿದರು.

ಆಗಲೇ ಕೃಷ್ಣದೇವರಾಯನ ಮನಸ್ಸಿಗೆ ನೆಮ್ಮದಿಯುಂಟಾದುದು. ಅವನು ತೃಪ್ತಿ ಸೂಚಕ ನಗೆ ನಕ್ಕು, ಕಣ್ಮುಚ್ಚಿ ಮಲಗಿದವನು ಮತ್ತೆ ಏಳಲಿಲ್ಲ.

ಕೃಷ್ಣದೇವರಾಯನಿಗೆ ಕೊಟ್ಟಿದ್ದ ವಚನದಂತೆ, ಚಂದ್ರಗಿರಿಯಲ್ಲಿ ನಿರ್ಬಂಧದಲ್ಲಿ ಅಚ್ಯುತರಾಯನನ್ನು ವಿಜಯನಗರಕ್ಕೆ ಕರೆತಂದು ಅಭಿಷೇಕ ಮಾಡುವುದು ಅನಿವಾರ್ಯವಾಗಿತ್ತು. ಆದರೆ ಸಾಮ್ರಾಟನ ಅಪರಕರ್ಮಗಳು ಮುಗಿಯುವವರೆಗೂ ಕಾದರೆ ಅಳಿಯ ರಾಮರಾಯ ಹಾಗೂ ತಿರುಮಲರು ರಾಜಧಾನಿಗೆ ಬಂದು, ಸಿಂಹಾಸನಕ್ಕೆ ತಮ್ಮ ಹಕ್ಕುದಾರಿಕೆಯನ್ನು ಮುಂದೆ ಮಾಡಿ, ಕೃಷ್ಣದೇವರಾಯನ ಆಶಯಗಳು ನೆರವೇರದಿರಲು ವಿಘ್ನವುಂಟುಮಾಡ ಬಹುದೆಂದು ಹೆದರಿ, ಸಿಂಹಾಸನವು ಒಂದು ನಿಮಿಷವೂ ತೆರವಾಗಿರಕೂಡ ದೆಂದು ಆಲೋಚಿಸಿ, ಅಚ್ಯುತರಾಯನು ರಾಜಧಾನಿಗೆ ಬಂದಮೇಲೆ ರಾಯನ ಮರಣ ಸಂಗತಿಯನ್ನು ಬಹಿರಂಗಗೊಳಿಸಬೇಕೆಂದು ಚಂದ್ರಗಿರಿಗೆ ಸೋಮ ರಸನೇ ಹೋಗಿದ್ದ – ಯಾರಿಗೂ ಸುದ್ದಿ ಕೊಡದೆ ಮಿತಪರಿವಾರದೊಂದಿಗೆ.

ಅವನು ರಾಜಧಾನಿಗೆ ಹಿಂದಿರುಗಿ ಬರುವುದನ್ನೇ ರಾಜವೈದ್ಯರೂ, ಭರ

ತಾಚಾರ್ಯರೂ ಎದುರು ನೋಡುತ್ತಿದ್ದರು.

ರಾಯನ ಮರಣದ ಸಂಗತಿಯನ್ನು ಗೋಪ್ಯವಾಗಿಡಲು, ಅವನ ಬಳಿಗೆ ಯಾರನ್ನೂ ಬಿಡದೆ ಖಾಯಿಲೆ ಗುಣವಾಗುತ್ತಲಿದೆ ಎಂದು ಹೇಳಿಕೊಂಡು ರಾಜ ವೈದ್ಯರು, ಸರ್ಪಕಾವಲು ನಿಂತಿದ್ದರು. ಉಳಿದ ಆಡಳಿತದ ಕಡೆ ಗಮನ ಕೊಡುತ್ತಾ ಭರತಾಚಾರ್ಯರು ನಿಂತಿದ್ದರು.

ಈ ಅವಧಿಯಲ್ಲಿ ಕೃಷ್ಣದೇವರಾಯನ ದೇಹ ಕೆಡದಂತೆ ಪರಿಮಳದ್ರವ್ಯ ಗಳಲ್ಲಿ ಕಾಯ್ದಿಟ್ಟು ಚಂದ್ರಗಿರಿಗೆ ಹೋಗಿದ್ದ ಸೋಮರಸನ ಬರವನ್ನೇ ನಿರೀಕ್ಷಿ ಸುತ್ತಾ ಕುಳಿತಿದ್ದರು.

ಅವರ ಪಾಲಿಗೆ ನಿಮಿಷವೊಂದು ಯುಗವಾಗಿ ತೋರುತ್ತಿತ್ತು.

೨

ಚಂದ್ರಗಿರಿಗೆ ಹೋಗಿದ್ದ ಸೋಮರಸ ಮೂರುದಿನಗಳಾದರೂ ಹಿಂದಿರು ಗಿರಲಿಲ್ಲ. ಅವನ ವಿಳಂಬ ರಾಜವೈದ್ಯರಿಗೆ ಕಳವಳವನ್ನುಂಟು ಮಾಡಿತ್ತು. ಸಾಮ್ರಾಟರ ಕಳೇಬರವನ್ನು ಅಂತ್ಯಕ್ರಿಯೆಗಳಿಲ್ಲದೆ ಹೆಚ್ಚು ಕಾಲ ಇಟ್ಟಿರಲು ಸಾಧ್ಯವಿರಲಿಲ್ಲ. ದೇಹ ಕೆಡದಂತೆ ತಡೆಯಲು ಅವರ ವೈದ್ಯಕೀಯ ಜ್ಞಾನದಿಂದ ಸಾಧ್ಯವಾಗಿತ್ತಾದರೂ, ಕೃಷ್ಣದೇವರಾಯನ ಆತ್ಮಕ್ಕೆ ಶಾಂತಿ ಕಾಣದೆ, ಅಂತರ ಪಿಶಾಚಿಯಾಗಿ, ತೊಳಲುವುದು ಅವರಿಗೆ ಇಷ್ಟವಾಗಿರಲಿಲ್ಲ. ಅವರ ಆತ್ಮ ಪ್ರಜ್ಞೆಗೆ ಇದು ಅಹಿತ ಕಾರ್ಯವಾಗಿತ್ತು. ಇದಕ್ಕಿಂತಲೂ ರಾಯನ ಮರಣದ ಸುದ್ದಿಯನ್ನು ಅನಿಶ್ಚಿತಕಾಲದವರೆಗೆ ಗೋಪ್ಯವಾಗಿಡುವುದು ಸಾಹಸದ ಮಾತಾ ಗಿತ್ತು. ಕೃಷ್ಣದೇವರಾಯನು ಜೀವಂತ ಇರುವಾಗ ನಡೆಸಲಾಗಿದ್ದ ಪ್ರತಿ ಯೊಂದು ಚಲನವಲನ, ಕಾರ್ಯ ಚಟುವಟಿಕೆಗಳನ್ನು ಸಂದೇಹಕ್ಕೆ ಆಸ್ಪದವಿಲ್ಲ ದಂತೆ ನೋಡಿಕೊಂಡರೂ, ಕೃಷ್ಣದೇವರಾಯನನ್ನು ನೋಡಲು ಬರುತ್ತಿದ್ದ, ಅವನ ಆತ್ಮೀಯವರ್ಗದವರನ್ನು ತಡೆಯುವುದು ಕಷ್ಟವಾಗಿತ್ತು. ತಮ್ಮನ್ನು ಯಾರೂ ನೋಡಬಾರದೆಂದು ಸ್ವಯಂಪ್ರಭುಗಳೇ ಆಜ್ಞೆಮಾಡಿದ್ದಾರೆಂದು ಹೇಳಿಕೊಂಡು ಎಲ್ಲರನ್ನೂ ತಡೆಯಲು ಸಾಧ್ಯವಾಗಿದ್ದರೂ, ಈ ಮಾತನ್ನು ಹೇಳಿ ಸಾಮ್ರಾಟರ ಪತ್ನಿಯರನ್ನು ತಡೆಯಲು ಸಾಧ್ಯವಾಗಿರಲಿಲ್ಲ. ಅವರಿಗೆ ತಮ್ಮ ಮಾಂಗಲ್ಯ ಉಳಿಸಿಕೊಳ್ಳಬೇಕೆಂಬ ಸಂಕಲ್ಪದಿಂದ, ದೇಹಸ್ಥಿತಿಯನ್ನು ತಿಳಿಯುವ ಆತುರದಲ್ಲಿ ಹಗಲೂ, ರಾತ್ರಿ ಎನ್ನದೆ ದಿನಕ್ಕೆ ನಾಲ್ಕಾರು ಬಾರಿ ಬಂದು ಹೋಗುತ್ತಿದ್ದರು. ಮೂರುದಿನಗಳಿಂದ ಭೇಟಿಕೊಡದೆ ಇದ್ದ ಸಂಗತಿ, ಅಂತಃಪುರದ ಜನರಿಗೆ ಇನ್ನಷ್ಟು ಕಳವಳ, ಭೀತಿ, ಸಂಶಯಗಳಿಗೆ ಆಸ್ಪದ ವಾಯಿತು.

ಹಗಲಿರುಳು ಕೃಷ್ಣದೇವರಾಯನ ಚಿಂತೆಯಲ್ಲೇ ಸೊರಗಿ, ಅನೇಕ ದುಃಸ್ವಪ್ನ ದುಶ್ಶಕುನಗಳನ್ನು ಕಂಡು ಗಾಬರಿಯಾದ, ತಿರುಮಲಾದೇವಿ ತನ್ನ ಪತಿಯು ಮಲಗಿದ್ದ ಭುವನ ವಿಜಯದ ಅಂತಃಪುರಕ್ಕೆ ಬಂದಳು.

"ರಾಜವೈದ್ಯರೇ, ಈಗ ಪ್ರಭುಗಳ ದೇಹಸ್ಥಿತಿ ಹೇಗಿದೆ? ಏಕೋ ನನ್ನ ಎದೆಯಲ್ಲಿ ತಳಮಳವೆದ್ದಿದೆ. ಹೀಗೆಂದು ಹೇಳಲಾಗದ ಅವ್ಯಕ್ತ ಶಂಕೆ ಕಾತರಗಳು—ನಾನು ಪ್ರಭುಗಳ ಮುಖವನ್ನು, ಅವರನ್ನು ಎಚ್ಚರಿಸದಂತೆ ನೋಡಿ ಬರಬಹುದೇ?" ದೈನ್ಯದಿಂದ ಕೇಳಿದಳು. ಅವಳ ಕಳೆಗೊಂದಿದ ದೈನ್ಯ ಮುಖವನ್ನು ನೋಡಿ ರಾಜವೈದ್ಯರ ಕರುಳಿಗೆ ಬರೆಯಿಟ್ಟಂತಾಯಿತು. ಅವಳನ್ನು ನೋಡಲಾರದೆ ತಲೆ ತಗ್ಗಿಸಿ ಹೇಳಿದರು.

"ನನ್ನಿಂದ ಅಪರಾಧವಾಗಿದ್ದರೆ ಕ್ಷಮಿಸಬೇಕು ತಾಯಿ! ಅವರನ್ನು ನೋಡಲು ಯಾರನ್ನೂ ಬಿಡಬಾರದೆಂದು ಆಜ್ಞೆಮಾಡಿದ್ದಾರೆ....ಅವರ ಆಜ್ಞೆಯನ್ನು ಧಿಕ್ಕರಿಸುವ ಧೈರ್ಯ ನನಗಿಲ್ಲ ತಾಯಿ!"

"ನನ್ನನ್ನೂ—ಕೈಹಿಡಿದ ಪತ್ನಿಯನ್ನೂ ಒಳಗೆ ಬಿಡಬಾರದೆಂದು ಅಪ್ಪಣೆ ಮಾಡಿದ್ದಾರೆಯೆ? ನನ್ನಲ್ಲಿ ಪ್ರಭುಗಳಿಗೆ ನಂಬಿಕೆಯಿಲ್ಲವೇ? ವಿಶ್ವಾಸವಿಲ್ಲವೇ?"

"ಇದು ನಂಬಿಕೆ ವಿಶ್ವಾಸಗಳ ಪ್ರಶ್ನೆ ಅಲ್ಲ ತಾಯಿ. ಈಗ ಪ್ರಭುಗಳು ಸಾವು, ಬದುಕುಗಳ ಹೋರಾಟದಲ್ಲಿದ್ದಾರೆ. ತಮ್ಮ ಯಾತನೆಯನ್ನು ಮೃದು ಹೃದಯದ ಪರಿಜನರು ನೋಡಿದರೆ ಅನಾಹುತವಾಗುವುದೆಂದು ಹೆದರಿ, ಈ ಗಂಡಾಂತರ ಕಳೆಯುವವರೆಗೆ ಯಾರನ್ನೂ ಒಳಗೆ ಬಿಡಬಾರದೆಂದು ಅಪ್ಪಣೆ ಮಾಡಿದ್ದಾರೆ!"

"ಪ್ರಭುಗಳ ಕಡೆಗಾಲದಲ್ಲಿ ಬಳಿಯಲ್ಲಿರಬಾರದೆ?"

"ಪ್ರಭುಗಳ ಜೀವಕ್ಕೆ ಯಾವ ಶಂಕೆಯೂ ಇಲ್ಲ. ಈ ಗಂಡಾಂತರ ಇನ್ನು ಒಂದೆರಡು ದಿನಗಳಲ್ಲಿ ನಿವಾರಣೆಯಾಗಬಹುದು. ಅಲ್ಲಿಯವರೆಗೆ ಸಮಾಧಾನ ತಾಳಿ. ಅನಂತರ ನೀವು ಅವರ ಬಳಿಯಲ್ಲೇ ಇರಬಹುದು...." ಈ ಮಾತು ಹೇಳುವಾಗ ಅವರ ಗಂಟಲುಬ್ಬಿ ಬಂತು.

"ಹಾಗಾದರೆ ನಿಮಗೆ ಅಹಿತವಾದ ಕಾರ್ಯವನ್ನು ಮಾಡಲು ನನಗೆ ಇಚ್ಛೆಯಿಲ್ಲ. 'ವೈದ್ಯೋ ನಾರಾಯಣ ಹರಿಃ' ಎಂದು ಶಾಸ್ತ್ರವಚನವಿದೆ. ನಿಮ್ಮ ಆಜ್ಞೆ ನನಗೆ ಹರಿಯಾಜ್ಞೆ! ನಿಮ್ಮ ಮಾತಿನಂತೆ ಪ್ರಭುಗಳು ಉಳಿದುಕೊಂಡರೆ, ನನ್ನ ಮುತ್ತೈದೆತನ ಉಳಿದುಕೊಂಡರೆ ಸಾಕು. ನನಗೆ ಇನ್ನು ಯಾವ ಭೋಗ ಭಾಗ್ಯಗಳೂ ಬೇಡ. ಇದೇ ಪಂಪಾಪತಿಯಲ್ಲಿ ನನ್ನ ನಿರಂತರ ಪ್ರಾರ್ಥನೆ...." ಎಂದು ಹೇಳಿ ಕಂಬನಿದುಂಬಿದ ಕಣ್ಣುಗಳನ್ನು ಒರೆಸಿಕೊಂಡು, ಅಲ್ಲಿಂದ ಹೊರಟಳು—ಭಾರವಾದ ಹೃದಯವನ್ನು ಹೊತ್ತು ಚಿಂತೆಯ ಮೂರ್ತಿಯಾಗಿ, ಮಹಾರಾಣಿ ತಿರುಮಲಾದೇವಿ.

ಅವಳ ನೊಂದ ಮುಖವನ್ನು ನೋಡಿ ಅಯ್ಯೋ! ಎನಿಸಿತು ರಾಜವೈದ್ಯ ರಿಗೆ....ಇಂತಹ ಸರಳ ಹೃದಯದ ವ್ಯಕ್ತಿಗೆ ತಾನು ಮೋಸಮಾಡುತ್ತಿರುವೆನಲ್ಲಾ ಎಂದು ವ್ಯಥೆಯಾಯಿತು. ತನಗೆ ಯಾವ ಶಿಕ್ಷೆ ಕಾದಿದೆಯೋ ಎಂದುಕೊಂಡರು. ಆದರೆ ಕರ್ತವ್ಯಕ್ಕಾಗಿ ಅವರು ಈ ಅಪ್ರಿಯವಾದ ಕಾರ್ಯವನ್ನು ಮಾಡ ಬೇಕಾಗಿತ್ತು.

ಮಹಾರಾಣಿಯವರು ಹೊರಟುಹೋದ ಸ್ವಲ್ಪಕಾಲದ ಮೇಲೆ ರಾಣಿ ಅನ್ನಪೂರ್ಣಾದೇವಿಯು ಪ್ರಭುಗಳನ್ನು ಕಾಣಲು ಅಲ್ಲಿಗೆ ಬಂದಳು ಜೊತೆಯಲ್ಲಿ ತನ್ನ ಕುಮಾರನನ್ನೂ – ಹದಿನೆಂಟು ತಿಂಗಳ ಮಗುವನ್ನೂ ಕರೆತಂದಿದ್ದಳು.

ಅವಳನ್ನೂ ಅವಳ ಹಾಲುಗಲ್ಲದ ಕಂದಮ್ಮನನ್ನೂ ಕಂಡು ಅವರ ಹೃದಯ ದುಃಖದಿಂದ ಬಿರಿಯಿತು.

"ವೈದ್ಯರೇ ನನ್ನದೊಂದು ಆಸೆಯಿದೆ. ಅದನ್ನು ಈಡೇರಿಸಿ ಕೊಡ ಬೇಕು."

"ಏನದು ತಾಯಿ?"

"ಎರಡು ದಿನಗಳಿಂದಲೂ ಅಪ್ಪಾಜಿಯನ್ನು ಕಾಣಲು ಈ ಮಗು ಹಠ ಮಾಡುತ್ತಿದೆ! ಒಮ್ಮೆ ಪ್ರಭುಗಳ ದರ್ಶನ ಮಾಡಿಸುವಿರಾ?"

"ತಮ್ಮ ಕೋರಿಕೆಯನ್ನು ಈಡೇರಿಸಲು ಸಾಧ್ಯವಿಲ್ಲವೆಂದು ಯಾವ ಬಾಯಲ್ಲಿ ಹೇಳಲ್ಲಿ ತಾಯಿ!"

"ಏಕೆ ರಾಜವೈದ್ಯರೇ?"

"ಇದು ಪ್ರಭುಗಳ ಜೀವನದಲ್ಲಿ ಏಕೆ....? ರಾಷ್ಟ್ರದ ಜೀವಿತದಲ್ಲಿ ಪರ್ವ ಕಾಲ – ವಿಷಮಕಾಲ! ಈ ಗಂಡಾಂತರದಿಂದ ಪ್ರಭುಗಳು ಉಳಿದುಕೊಂಡರೆ ಇನ್ನು ಮೂರುವರ್ಷ ಭಯವಿಲ್ಲವೆಂದು ರಾಜಜ್ಯೋತಿಷ್ಯರು ಹೇಳಿದ್ದಾರೆ. ಇಂದೂ ನಾಳೆ ಕಳೆದರೆ ಪ್ರಭುಗಳ ಗಂಡಾಂತರ ಕಳೆಯುವುದಂತೆ! ಅಲ್ಲಿಯ ತನಕ ಯಾರನ್ನೂ ಪ್ರಭುಗಳ ಸಮ್ಮುಖಕ್ಕೆ ಬಿಡುಬಾರದೆಂದು ಪ್ರಭುಗಳ ಅಪ್ಪಣೆ. ಅದನ್ನು ಹೇಗೆ ಧಿಕ್ಕರಿಸಲಿ ತಾಯಿ?" ಎಂದು ಪ್ರಶ್ನಾರ್ಥಕವಾಗಿ ಅನ್ನಪೂರ್ಣಾ ದೇವಿಯ ಮುಖ ನೋಡಿದರು. ಹಾಗೆಯೇ ದಾಸಿಯ ಕೈಲಿದ್ದ, ಪೂರ್ಣಿ ಮೆಯ ಚಂದ್ರನಂತೆ ಕಂಗೊಳಿಸುತ್ತಿರುವ, ಮಗುವಿನ ಮುಖದ ಮೇಲೆ ದೃಷ್ಟಿ ಹರಿದು ಕಣ್ಣುಗಳು ಅಲ್ಲೇ ನಿಂತವು. ಆ ಮುಗ್ಧ ಮಗುವಿಗೆ ಕಣ್ಣು ತೆರೆಯುವ ಮುನ್ನವೇ ಎಂತಹ ವಿಯೋಗ ಎಂದು ತಮ್ಮಲ್ಲೇ ಖತಿಗೊಂಡರು! ಅವರಿಗೆ ಅದೇನೆನಿಸಿತೋ

"ತಾಯಿ! ಇನ್ನು ಮೇಲೆ ಕುಮಾರರನ್ನು ಹೀಗೆಲ್ಲಾ ಅಂತಃಪುರದಿಂದ ಹೊರಗೆ ಕರೆತರಬೇಡಿ."

" ಏಕೆ ಮಗುವಿಗೆ ದೃಷ್ಟಿಯಾಗುವುದೇ ?"

" ಒಂದು ರೀತಿಯಲ್ಲಿ ಈ ಮಾತು ನಿಜವೇ. ಕುಮಾರರ ಉಜ್ವಲ ಭವಿಷ್ಯ ವನ್ನು ನೆನೆದು, ಕಣ್ಣು ತಿಸರಾಗಿರುವ ವ್ಯಕ್ತಿಗಳಿಗೇನೂ ಅರಮನೆಯಲ್ಲಿ ಕಡಿಮೆ ಯಿಲ್ಲ. ಇನ್ನು ಮುಂದೆ ತಾವು ಕುಮಾರರನ್ನು ಹೀಗೆ ರಕ್ಷಣೆಯಿಲ್ಲದೆ ಹೊರಗೆ ಕರೆದೊಯ್ಯುವುದು ಅನುಚಿತವಲ್ಲ ತಾಯಿ !"

" ಕುಮಾರನ ಬಗ್ಗೆ ನನಗಿಂತಲೂ ಹೆಚ್ಚಿನ ಆತಂಕ ನಿಮಗಿರುವಂತಿದೆ !" ಎಂದು ನಕ್ಕಳು.

" ಕುಮಾರರ ಬಗ್ಗೆ ನಾನು ಮಾತ್ರವಲ್ಲ ಇಡೀ ರಾಷ್ಟ್ರವೇ ಎಚ್ಚರ ವಹಿಸ ಬೇಕಾಗಿದೆ. ಒಳಗೂ, ಹೊರಗೂ ಶತ್ರುಗಳು ಸಿಂಹಾಸನದ ಮೇಲೆ ಕಣ್ಣಿಟ್ಟ ದ್ದಾರೆ. ನಾಳಿನ ಸಾಮ್ರಾಟರ ಜೀವಕ್ಕೆ ಅಪಾಯ ಒದಗದಂತೆ ಕಾಪಾಡಬೇಕಾ ಗಿದೆ. ಅಂತಲೇ ಈ ಮಾತು ಹೇಳುತ್ತಿದ್ದೇನೆ ತಾಯಿ !"

" ಪ್ರಭುಗಳನ್ನು ಕಂಡು ಮೂರು ದಿನವಾಯಿತು. ಅವರ ಜೀವಕ್ಕೆ ಭಯವಿಲ್ಲವೆಂದು ನೀವು ಹೇಳುತ್ತಿದ್ದರೂ; ಪ್ರಭುಗಳನ್ನು ಕಣ್ಣಾರ ಕಂಡ ಹೊರತು ಮನಸ್ಸಿಗೆ ನೆಮ್ಮದಿಯಿಲ್ಲ. ದಯವಿಟ್ಟು ಈ ಮಗುವನ್ನು ನೋಡಿ ಯಾದರೂ ಒಮ್ಮೆ ದರ್ಶನಕ್ಕೆ ಅವಕಾಶವನ್ನು ನೀಡಿ...." ಎಂದಳು ಗದ್ಗದಿತ ಳಾಗಿ.

" ತಾಯಿ ! ನಿಮ್ಮ ಕೋರಿಕೆಯನ್ನು ಈಡೇರಿಸಲಾಗದ ಕೃತಘ್ನ ನಾನು. ಇನ್ನೊಂದು ದಿನ ತಡೆಯಿರಿ. ಮುಂದೆ ಪ್ರಭುಗಳನ್ನು ನೋಡಲು ಯಾರನ್ನೂ ಅಡ್ಡಿಪಡಿಸುವುದಿಲ್ಲ.... ಇನ್ನೊಂದು ದಿನ ಮಾತ್ರ.... ನನ್ನನ್ನು ಕ್ಷಮಿಸಬೇಕು."

" ರಾಜವೈದ್ಯರೇ ನಿಮ್ಮನ್ನು ಧರ್ಮಸಂಕಟಕ್ಕೆ ಈಡುಮಾಡಲು ನನಗೆ ಇಷ್ಟವಿಲ್ಲ. ಮೂರು ದಿನದಿಂದ ಕಾದಿದ್ದವಳಿಗೆ ಇನ್ನೊಂದು ದಿನ ಕಷ್ಟವಾಗ ಲಾರದು ! ಆಗಲಿ ಸಂಯಮದಿಂದ ಕಾಯುತ್ತೇನೆ. ಆದರೂ ತಮ್ಮಲ್ಲಿ ಒಂದು ಕೋರಿಕೆ. ಕುಮಾರನು ಪ್ರಭುಗಳನ್ನು ಕಾಣಲು ಬಂದಿದ್ದುದನ್ನು ಅವರು ಎಚ್ಚರಗೊಂಡರೆ ತಿಳಿಸಿ. ಅವರು ನನ್ನನ್ನು ಕಾಣಲು ಬಯಸಿದರೆ ನಾನು ಬರುತ್ತೇನೆ" ಎಂದು ಹೇಳಿ ಅಲ್ಲಿಂದ ಹೊರಟಳು ರಾಣಿ ಅನ್ನಪೂರ್ಣಾದೇವಿ.

ಅವಳು ಹೊರಟು ಹೋದ ಕೆಲವೇ ನಿಮಿಷಗಳಲ್ಲಿ ಮಹಾರಾಣಿ ಚಿನ್ನಾ ದೇವಿ ಅಯ್ಯಪ್ಪರಸನೊಡನೆ ಆಗಮಿಸಿದಳು. ಅವಳನ್ನು ನೋಡುತ್ತಲೇ ಅವಳು ಯಾವುದೋ ಮಹತ್ಕಾರ್ಯ ಸಾಧನೆಗಾಗಿ ಬಂದಿರುವಳೆಂದು ರಾಜವೈದ್ಯರು ಅರಿ ತರು. ಉಳಿದವರನ್ನು ಮರುಳುಗೊಳಿಸಿದಂತೆ ಅವಳನ್ನು ಮರುಳುಗೊಳಿಸು ವುದು ಸುಲಭವಲ್ಲವೆಂದು ಭಾವಿಸಿ ರಾಜವೈದ್ಯರು ಮುಂಜಾಗ್ರತೆ ವಹಿಸಿದರು.

" ರಾಜವೈದ್ಯರಿಗೆ ನಮಸ್ಕಾರ ! ಪ್ರಭುಗಳ ಪತ್ನಿ ಚಿನ್ನಾದೇವಿಯವರು

ಅವರನ್ನು ಕಾಣಲು ಬಂದಿದ್ದಾರೆ. ಅವಕಾಶವಾದರೆ ಒಳಗೆ ಕರೆದೊಯ್ಯುತ್ತೇನೆ" ಎಂದು ಬಾಗಿಲಬಳಿಗೆ ಬಂದ ಅಯ್ಯಪ್ಪರಸ.

ಸುಮ್ಮನೆ ನಿಂತರೆ ಕೆಲಸ ಕೆಡುವುದೆಂದು ಬಾಗಿಲ ಬಳಿಯಿದ್ದ ಪಹರೆಯವರಿಗೆ ಎಚ್ಚರ ವಹಿಸಲು ಕಣ್ಣು ಸಂಜ್ಞೆಯಿಂದಲೇ ಅಪ್ಪಣೆ ಮಾಡಿದರು, ಅವರ ಮನವೊಲಿಸಬೇಕೆಂಬಂತೆ ಸವಿನಯವಾಗಿ, ಹೇಳಿದರು.

"ಪ್ರಭುಗಳ ಪ್ರೀತಿಪಾತ್ರರಾದ ಮಹಾರಾಣಿ ಚಿನ್ನಾದೇವಿಯವರಿಗೆ ನನ್ನ ಅಪ್ಪಣೆಯೆ? ನಾನೆಲ್ಲಿ ಅವರೆಲ್ಲಿ?....ಆದರೆ...."

"ಏನು ವೈದ್ಯರೇ ಏಕೋ ಅನುಮಾನಿಸುತ್ತಿದ್ದೀರಲ್ಲಾ?

"ಪ್ರಭುಗಳು ಯಾರನ್ನೂ ನೋಡಲಿಚ್ಛಿಸುವುದಿಲ್ಲ."

"ನಿನ್ನೆಯ ದಿನವೂ ನೀವು ಇದೇ ಮಾತನ್ನು ಹೇಳಿದಿರಿ!"

"ಹೌದು, ಪ್ರಭುವಾಜ್ಞೆಯನ್ನು ಪಾದಸೇವಕರು ಉಲ್ಲಂಘಿಸಲು ಸಾಧ್ಯವೇ?"

"ಪ್ರಭುವಾಜ್ಞೆಯಂತೆ! ಪ್ರಭುವಾಜ್ಞೆ! ತಮ್ಮ ಪ್ರಿಯ ಪತ್ನಿಯರನ್ನು ತಮ್ಮ ಪ್ರಾಣೋತ್ಕ್ರಮಣ ಕಾಲದಲ್ಲಿ ದೂರವಿಡಿರೆಂದು ಆಜ್ಞೆ ಮಾಡುತ್ತಾರೆಯೇ? ಎಲ್ಲವೂ ನಿಮ್ಮ ಆಜ್ಞೆ....ನಿಮ್ಮ ಆ ಸೋಮರಸನ ಆಜ್ಞೆ...."

"ಪೂರ್ವಾಗ್ರಹದಿಂದ ಮಾತನಾಡುವವರಿಗೆ ಏನು ಹೇಳಿದರೂ ಪ್ರಯೋಜನವಿಲ್ಲ!"

"ಅಂತಲೇ ನಾನು ಹೇಳುವುದು. ಮಾತಿಲ್ಲದೆ ನಮ್ಮನ್ನು ಒಳಗೆ ಬಿಡಿ!"

"ಸಾಧ್ಯವಿಲ್ಲ!"

"ನಾನು ನಿಮ್ಮನ್ನು ಬಲಾತ್ಕರಿಸಬೇಕಾಗುತ್ತದೆ."

"ನನ್ನನ್ನು ಬಲಾತ್ಕಾರದಿಂದ ಹೊರತಳ್ಳಿ ಪ್ರಭುಗಳನ್ನು ನೋಡಲೆತ್ನಿಸಿದರೆ, ನಿಮ್ಮ ಗತಿ ಏನಾಗುವುದೆಂದು ಆಲೋಚಿಸಿದ್ದೀರಾ?"

"ಚೆನ್ನಾಗಿ ಆಲೋಚಿಸಿದ್ದೇನೆ. ನಿಮ್ಮಂಥ ಮುದಿಗೃಧ್ರಗಳಿಗೆ ಹೆದರಿ ನಾನು ಹಿಂದಿರುಗುವುದಿಲ್ಲ?" ಪರಿಸ್ಥಿತಿ ವಿಪರೀತಕ್ಕೆ ಬಂದುದನ್ನು ನೋಡಿ, ಚಿನ್ನಾದೇವಿ.

"ಬಿಸಿರಕ್ತದ ಅಯ್ಯಪ್ಪರಸರು ಮಾಡಿದ ದುಡುಕನ್ನು ತಾವು ಕ್ಷಮಿಸಬೇಕು! ಪ್ರಭುಗಳನ್ನು ನೋಡುವ ತೀವ್ರಾಪೇಕ್ಷೆ ಅವರನ್ನು ಈ ಕೃತ್ಯಕ್ಕೆಳೆಸಿತು." ಎಂದು ಹೇಳಿ ಅಯ್ಯಪ್ಪರಸನನ್ನು ತಡೆದಳು.

"ತಾಯಿ ದುಡುಕುವುದಕ್ಕೂ ಸಮಯಾಸಮಯ ಬೇಡವೆ! ಈಗ ನಾನು ಸ್ವಇಚ್ಛೆಯಿಂದ ನಿಮ್ಮನ್ನು ತಡೆಯುತ್ತಿರುವೆನೆ? ನಾನೂ ಎಲ್ಲರಂತೆ ಪ್ರಭುವಾಜ್ಞೆಯನ್ನು ಪಾಲಿಸುವ ಪ್ರಭುಗಳ ಪಾದಸೇವಕ. ರಾಜಜ್ಯೋತಿಷ್ಯರ ಹೇಳಿಕೆಯ

ಮೇರೆಗೆ ಬಂದಿರುವ ಗಂಡಾಂತರದಿಂದ ಪಾರಾಗಲು ಮೂರು ದಿನಗಳಿಂದಲೂ ಅಖಂಡವಾಗಿ ಜಪತಪಗಳು ನಡೆದಿವೆ. ಅವು ಮುಗಿಯುವವರೆಗೂ ಪ್ರಭುಗಳು ಏಕಾಂತವನ್ನು ಬಯಸುತ್ತಿದ್ದಾರೆ."

"ನೀವು ನಮ್ಮ ಒಂದು ಕೋರಿಕೆಯನ್ನು ಈಡೇರಿಸಿಕೊಡಬೇಕು. ನಾನು ಪ್ರಭುಗಳೊಂದಿಗೆ ಒಂದು ಮಹತ್ವದ ಸಂಗತಿಯನ್ನು ಆಲೋಚಿಸಬೇಕಾಗಿದೆ. ಅವರ ಬಳಿಗೆ ಹೋಗಿ ನಾವು ಒಮ್ಮೆ ಅವರನ್ನು ಸಂದರ್ಶಿಸಲು ಅವಕಾಶ ಕೊಡುವರೇನೋ ತಿಳಿದುಬನ್ನಿ. ನಾನು ಅವರ ಚಿತ್ತಶಾಂತಿಯನ್ನು ಕದಡುವ ಯಾವ ಸಂಗತಿಯನ್ನೂ ಪ್ರಸ್ತಾಪಿಸುವುದಿಲ್ಲವೆಂದು ತಿಳಿಸಿ."

"ಅದೇನು ಸಂಗತಿ ಎಂದು ನಾನು ತಿಳಿಯಬಹುದೆ ?"

"ಅವಶ್ಯವಾಗಿ.... ಇದರಲ್ಲಿ ಯಾವ ಗೋಪ್ಯವೂ ಇಲ್ಲ.... ಸೋಮರಸರು ಮೂರು ದಿನಗಳ ಹಿಂದೆ, ಚಂದ್ರಗಿರಿಗೆ ಹೋದರೆಂದು ಸುದ್ದಿ ಬಂತು, ಅದು ನಿಜವೇ ಎಂದು ತಿಳಿಯಲು ಬಂದೆ."

ಈ ಮಾತು ಕೇಳಿ ರಾಜವೈದ್ಯರ ಮುಖ ಬಿಳುಚಿಕೊಂಡಿತು. ಸೋಮರಸನು ಚಂದ್ರಗಿರಿಗೆ ಪ್ರಯಾಣ ಬೆಳಸಿದ ವಿಷಯ ಚಿನ್ನಾದೇವಿಗೆ ತಿಳಿದಿದೆ! ಅವಳಿಂದ ತಮ್ಮ ಹಂಚಿಕೆಗಳು ನೆರವೇರುವ ಮೊದಲೇ, ಕಾರ್ಯ ಕೈಗೂಡುವ ಮೊದಲೇ ತೊಂದರೆಗಳುಂಟಾದರೆ ಎಂದು ಹೆದರಿದರು. ಆದರೂ ಅದನ್ನು ತೋರಗೊಡದೆ ಹೇಳಿದರು.

"ಈ ವಿಷಯವಾಗಿ ನನಗೇನೂ ದಿಳಿಯದು ತಾಯಿ!"

"ಅವರ ಆತ್ಮೀಯರಾದ ನಿಮಗೆ ತಿಳಿಯದೆಹೋಗುವುದೇ? ನೀವೆಲ್ಲರೂ ಸೇರಿ ಯಾವುದೋ! ಪಿತೂರಿ ನಡೆಸುತ್ತಿರುವಂತಿದೆ. ಜನ ಏನೇನೋ ಹೇಳುತ್ತಿದ್ದಾರೆ?"

"ಏನು ಸುದ್ದಿ ಹೇಳುತ್ತಿದ್ದಾರೆ ತಾಯಿ....?"

"ಪ್ರಭುಗಳು ಮರಣೋತ್ಕ್ರಮಣ ಸ್ಥಿತಿಯಲ್ಲಿರುವುದನ್ನು ಅರಿತು, ನೀವೂ, ಭರತಾಚಾರ್ಯರೂ, ಸೋಮರಸರೂ – ಅಚ್ಯುತರಾಯನನ್ನು ಪಟ್ಟಕ್ಕೆ ತರಲು ಪ್ರಯತ್ನಿಸುತ್ತಿದ್ದೀರಂತೆ. ಅನ್ನಪೂರ್ಣಾದೇವಿಯ ಪುತ್ರರ ಸಿಂಹಾಸನದ ಹಕ್ಕನ್ನು ಮೂಲೆಗೊತ್ತಿ, ಅಳಿಯಂದಿರ ಹಕ್ಕನ್ನು ನಿರ್ಲಕ್ಷಿಸಿ, ಪ್ರಭುಗಳು ಜೀವಂತರಿರುವಾಗಲೇ ಸಿಂಹಾಸನವನ್ನು ಕಸಿದುಕೊಂಡು, ಮಲಸಹೋದರ ಅಚ್ಯುತರಾಯನನ್ನು ಸಿಂಹಾಸನಕ್ಕೆ ತರಲು ಪ್ರಯತ್ನಿಸುತ್ತಿದ್ದೀರಂತೆ."

"ಜನರ ಊಹಾಪೋಹಗಳಿಗೆ ಬೆಲೆಯಿಲ್ಲ ತಾಯಿ?"

"ಇಂತಹ ಸುದ್ದಿಗಳು ವೃಥಾ ಕಾರಣ ಹುಟ್ಟಲಾರದು. ಬೆಂಕಿಯಿಲ್ಲದೆ ಹೊಗೆ ಏಳುವುದಿಲ್ಲ, ಈಗ ಸೋಮರಸರು ಎಲ್ಲಿಗೆ ಹೋಗಿದ್ದಾರೆ ಎಂದು ನಿಮ್ಮ ಭಾವನೆ?"

"ನಾನು ಅವರನ್ನು ನೋಡಿಯೇ ಮೂರು ದಿನಗಳಾದುವು. ಅವರ ತಂದೆ ಅನಾರೋಗ್ಯದಿಂದಿರುವರೆಂದು ಪತ್ರ ಬಂದಿತ್ತು! ಬಹುಶಃ ಅಲ್ಲಿಗೇ ಹೋಗಿರಬಹುದು!"

"ಅವರು ಚಂದ್ರಗಿರಿಗೇ ಹೋದರೆಂದು ನನಗೆ ಖಚಿತವಾಗಿ ತಿಳಿದಿದೆ ವೈದ್ಯರೇ. ಎಲ್ಲರನ್ನೂ ಮೋಸಗೊಳಿಸಿದಂತೆ ನನ್ನನ್ನು ಮೋಸಗೊಳಿಸಲಾರಿರಿ. ನಾವು ನಾಗಲಾಪುರದಲ್ಲಿದ್ದ ಮಾತ್ರಕ್ಕೆ ನಮಗೆ ಯಾವ ಸುದ್ದಿಯೂ ತಿಳಿಯ ದೆಂದು ಭಾವಿಸಿದಿರಾ? ಸಾಮ್ರಾಜ್ಯದಲ್ಲಿ ಯಾವ ವಿದ್ರೋಹದ ಕಾರ್ಯ ನಡೆ ದರೂ ನಮ್ಮ ವಿಶ್ವಾಸಿ ಜನಗಳಿಂದ ನಮಗೆ ತಿಳಿದೇ ತಿಳಿಯುತ್ತದೆ!"

ವಾಸ್ತವಾಂಶವೂ ಹಾಗೆಯೇ ಇತ್ತು. ಚಿನ್ನಾದೇವಿಯ ಪಕ್ಷಪಾತಿಗಳಾದ ಜನರಿಂದ ಅವಳಿಗೆ ಬೇಕಾಗಿದ್ದ ಎಲ್ಲ ಸಂಗತಿಯೂ ತಿಳಿದೇ ತಿಳಿಯುತ್ತಿತ್ತು. ಈ ಸಂಗತಿ ನಿಜವಾದರೆ ಕೂಡಲೇ, ಅಳಿಯ ತಿರುಮಲರಾಯ ಹಾಗೂ ರಾಮ ರಾಯರನ್ನು, ಕೃಷ್ಣದೇವರಾಯನ ದೇಹಸ್ಥಿತಿ ತಿಳಿದು ಕರೆಸಿಕೊಳ್ಳಬೇಕೆಂದು ನಿರ್ಧರಿಸಿ ಅಯ್ಯಪ್ಪರಸನೊಡನೆ ಬಂದಿದ್ದಳು. ಆದರೆ ಅವಳಿಗೆ ರಾಯನು ಮಡಿದಿದ್ದ ಸುದ್ದಿ ಮಾತ್ರ ತಿಳಿದಿರಲಿಲ್ಲ.

"ನನಗೆ ಇದೊಂದು ವಿಷಯವೂ ತಿಳಿಯದು ತಾಯಿ! ನನ್ನದು ವೈದ್ಯ ವೃತ್ತಿ, ನನಗೇಕೆ ರಾಜಕೀಯದಗೊಡವೆ? ಸೋಮರಸರು ನನ್ನೊಡನೆ ವಿಶ್ವಾಸ ದಿಂದಿದ್ದಾರೆ. ಭಾತೃವಾತ್ಸಲ್ಯವನ್ನು ತೋರಿಸಿದ್ದಾರೆ—ಎಂದ ಮಾತ್ರಕ್ಕೆ ಅವ ರೆಲ್ಲ ಸಂಗತಿಗಳನ್ನೂ ನನ್ನ ಮುಂದೆ ಹೇಳುವರೆಂಬ ಮಾತು ಸುಳ್ಳು. ನನಗೆ ಇದೊಂದು ಸಂಗತಿಯೂ ತಿಳಿಯದು. ನೀವು ಹೇಳಿದ ಮೇಲೆಯೇ ನನಗೆ ತಿಳಿದುದು" ಎಂದು ಆಶ್ಚರ್ಯವನ್ನು ವ್ಯಕ್ತಪಡಿಸಿದರು.

"ಪ್ರಭುಗಳ ಮನಸ್ಸಿಗೆ ಆಘಾತವಾಗುವ ಯಾವ ವಿಷಯವನ್ನೂ ಪ್ರಸ್ತಾ ಪಿಸುವುದಿಲ್ಲನೆಂದು ನಿಮಗೆ ವಚನಕೊಡುತ್ತೇನೆ. ಒಮ್ಮೆ ಅವರ ಮುಖ ದರ್ಶನ ಮಾಡಿಸಿ. ಅವರನ್ನು ಕಣ್ಣಾರೆ ಕಂಡರೆ, ನೀವು ಸಾವಿರ ಮಾತಿನಿಂದ ಕೊಡುವ ಧೈರ್ಯ ಒಂದು ಕಣ್ಣುನೋಟದಿಂದಾಗುತ್ತದೆ. ಪ್ರಭುಗಳು ಬಂದಿರುವ ಈ ಗಂಡಾಂತರದಿಂದ ಪಾರಾದರೆ ಸಾಕು! ಅವರನ್ನು ಒಮ್ಮೆ ನೋಡದ ಹೊರತು ನಮಗೆ ಜೀವದಲ್ಲಿ ಜೀವವಿಲ್ಲ. ನಿಮ್ಮ ಜೊತೆಯಲ್ಲಿ ಬಂದು ನಿಮ್ಮೊಂದಿಗೇ ಹಿಂದಿರುಗುತ್ತೇನೆ. ನೀವು ಅವಕಾಶ ಕೊಡಲೇ ಬೇಕು" ಎಂದಳು ಚಿನ್ನಾದೇವಿ.

ಚಿನ್ನಾದೇವಿಯ ಕೋರಿಕೆಯನ್ನು ಕಡೆಗಣಿಸುವಂತಿರಲಿಲ್ಲ. ಅದನ್ನು ಪೂರೈಸುವುದೂ ಸಾಧ್ಯವಿರಲಿಲ್ಲ. ರಾಜವೈದ್ಯರು ಇಕ್ಕಟ್ಟಿಗೆ ಸಿಕ್ಕಿದ್ದರು. ಕರ್ತ ವ್ಯದ ಕಡೆಗೆ ಓಗೊಡಲೇ ಬೇಕಾಗಿದ್ದಿತು. ಏನು ಮಾಡಬೇಕೆಂದು ತಿಳಿಯದೆ ಹೊಯ್ದಾಡುತ್ತಿರುವಾಗ, ದೇವರೇ ಅವರ ನೆರವಿಗೆ ಬಂದಂತೆ ದೂತನೊಬ್ಬನು

ಕಾಣಿಸಿಕೊಂಡು ಸೋಮರಸನು ಬಂದಿರುವುದಾಗಿ ತಿಳಿಸಿದ. ಅವರ ಹೃದಯ ಈ ವಾರ್ತೆಯಿಂದ ಹಿರಿದೊಂದು ಭಾರ ಕೆಳಗಿಳಿಸಿದಷ್ಟು ಹಗುರವಾಯಿತು. ಅವರು ಸಮಾಧಾನದ ನಿಟ್ಟುಸಿರು ಬಿಟ್ಟರು ....

೩

ಚಿನ್ನಾದೇವಿಯು ಭುವನ ವಿಜಯದಲ್ಲಿರುವಂತೆಯೇ, ಸೋಮರಸನು ಅಚ್ಯುತರಾಯನೊಡನೆ ಅಲ್ಲಿಗೆ ಬಂದುದು ಒಂದು ರೀತಿಯಲ್ಲಿ ಅನುಕೂಲವೇ ಆಯಿತು. ಅಚ್ಯುತರಾಯನ ಮುಖವನ್ನು ಕಾಣುತ್ತಲೇ ಚಿನ್ನಾದೇವಿ, ಅಯ್ಯಪ್ಪ ರಸನಿಗೆ ಇಂಗು ತಿನ್ನಿಸಿದಂತೆ ಮುಖ ಕಹಿಯಾಯಿತು. ಆದರೂ ಶಿಷ್ಟಾಚಾರ ವನ್ನು ಮರೆಯದೆ ಸೌಜನ್ಯದಿಂದಲೇ ವರ್ತಿಸಿದಳು.

ಸೋಮರಸನು ಅಚ್ಯುತರಾಯನೊಡನೆ ರಾಜಧಾನಿಗೆ ಸಕಾಲದಲ್ಲಿ ಬಂದಿದ್ದ. ಚಂದ್ರಗಿರಿಯಲ್ಲಿದ್ದ ಅಚ್ಯುತರಾಯನನ್ನು ಹಾಗೇ ರಾಜಧಾನಿಗೆ ಕರೆತಂದರೆ ಮುಂದೆ, ಕಿರೀಟಧಾರಣೆಯಾಗುವಾಗ, ಇಲ್ಲದ ಗದ್ದಲಕ್ಕೆ ಅವಕಾಶ ವಾಗಬಹುದೆಂದು ಊಹಿಸಿ, ಕುಲದೈವವಾದ ತಿರುಪತಿ ವೆಂಕಟರಮಣ ಸ್ವಾಮಿಯ ಸನ್ನಿಧಿಯಲ್ಲಿ ಅವನಿಗೆ ಕಿರೀಟಧಾರಣೆ ಮಾಡಿಸಿ, ಹಗಲೂ ರಾತ್ರಿ ಎನ್ನದೆ ಪ್ರಯಾಣ ಮಾಡಿ ಸಕಾಲದಲ್ಲಿ ವಿಜಯನಗರಕ್ಕೆ ಹಿಂದಿರುಗಿದ್ದ. ಹೀಗೆ ಕೃಷ್ಣದೇವರಾಯನ ಆದೇಶ ನಿರ್ವಿಘ್ನವಾಗಿ ನೆರವೇರಿತ್ತು. ಇನ್ನು ಈ ಸಾಮ್ರಾಟನ ಮರಣವನ್ನು ರಹಸ್ಯವಾಗಿಡಬೇಕಾಗಿರಲಿಲ್ಲ.

ಭುವನ ವಿಜಯದ ಉತ್ತುಂಗ ಹೊನ್ನ ಕಲಶದ ಮೇಲೆ ಪಟಪಟನೆ ಹಾರುತ್ತಿದ್ದ ಪಂಚವರ್ಣದ ವರಹಾಂಕಿತ ಧ್ವಜ, ಒಮ್ಮೆಲೆ ಸ್ತಬ್ಧವಾಗಿ ಕೆಳ ಗಿಳಿದುದನ್ನು ಕಂಡು ಜನ ಕಳವಳಗೊಂಡರು. ಅರಮನೆಯ ಕೋಟೆಯ ಬತೇರಿಗಳಿಂದ ಶೋಕಸೂಚಕವಾಗಿ ಗುಂಡುಗಳು ಹಾರಿದವು. ನಗರದ ಪ್ರಮುಖ ಬೀದಿಗಳಲ್ಲಿ ರಾಜದೂತರು ದುಃಖಸೂಚಕವಾದ ಪೋಷಾಕು ಧರಿಸಿ, ಶೋಕ ವನ್ನು ಪ್ರದರ್ಶಿಸುವ ವಾದ್ಯಗಳಿಂದ ಸಾಮ್ರಾಟನ ಮರಣವನ್ನು ಸಾರಿದರು. ಕೃಷ್ಣದೇವರಾಯನ ಸಾವಿನ ಸುದ್ದಿ, ನಿಮಿಷ ಮಾತ್ರದಲ್ಲಿ ಕಾಳ್ಗಿಚ್ಚಿನಂತೆ ಹರಡಿ. ಜನತೆ ಗರಬಡಿದವರಂತೆ ಸ್ತಬ್ಧರಾಗಿ ಮುಂದೇನು ಎಂದು ಆತಂಕ ಗೊಂಡು ಅರಮನೆಯ ಮುಂದೆ ನೆರೆದರು. ಅವರ ಮುಂದೆ ಇದ್ದ ಪ್ರಶ್ನೆ ಶತ್ರು ಧಾಳಿಯಿಂದ ಸಾಮ್ರಾಜ್ಯವನ್ನು ಉಳಿಸುವ ವ್ಯಕ್ತಿ ಯಾರು? ಬರಿದಾದ ಸಿಂಹಾಸನವನ್ನು ತುಂಬಬಲ್ಲ ವ್ಯಕ್ತಿ ಯಾರು? ಎಂಬುದೇ ಆಗಿತ್ತು. ಎಲ್ಲರೂ ರಾಜಘೋಷಣೆಯನ್ನು ಎದುರುನೋಡುತ್ತಾ, ರಾಯನ ವಿಯೋಗದಿಂದ ತಲ್ಲಣ ಗೊಂಡು ನಿಂತರು ಅವರ ಬಾಳು ಬರಿದಾದಂತೆ ತೋರಿತು. ಅವರ ಬಾಳಿನಲ್ಲಿ

ಒಮ್ಮೆಲೆ ಗಾಢಾಂಧಕಾರ ಆವರಿಸಿ ತಳಕಾಣದ ಪಾತಾಳಕ್ಕೆ ಅವರ ಭವಿಷ್ಯವನ್ನು ನೂಕಿದಂತೆ ಆಗಿತ್ತು. ಜನತೆಗೆ ಬೇಕಾಗಿದ್ದ ಅಭಯ ಸಂದೇಶ ಕೊಡುವ ಮೊದಲು ಅಚ್ಯುತರಾಯನನ್ನು ಸಾಮ್ರಾಟನೆಂದು ಸಾರುವ ಮೊದಲು, ಅವನನ್ನು ರಾಜಬಂಧುಗಳು ಸಾಮ್ರಾಜ್ಯದ ಹಿತೈಷಿಗಳು ಸಾಮ್ರಾಟನೆಂದು ಒಮ್ಮನಸ್ಸಿನಿಂದ ಒಪ್ಪಿಕೊಳ್ಳುವುದು ಅನಿವಾರ್ಯವಾಗಿತ್ತು. ಅದಾಗದ ಹೊರತು ಪಟ್ಟಾಭಿಷೇಕಕ್ಕೆ ನೂರೆಂಟು ವಿಘ್ನಗಳು ಬರುವ ಸೂಚನೆಗಳಿತ್ತು. ಸೋಮರಸನು ಈ ದಿಕ್ಕಿನಲ್ಲಿ ಕಾರ್ಯೋನ್ಮುಖನಾದನು.

ಅವನು ರಾಜಾಂತಃಪುರಕ್ಕೆ ಬರುವ ಮುನ್ನ ಸಾಮ್ರಾಜ್ಯದ ಹಿತೈಷಿಗಳೆಲ್ಲರಿಗೆ ಆಮಂತ್ರಣ ಕೊಟ್ಟು ಬಂದಿದ್ದ. ರಾಯನ ಮೂವರು ರಾಣಿಯರೂ, ಸಾಮ್ರಾಜ್ಯದ ಹಿತೈಷಿಗಳೆಲ್ಲರೂ ನೆರೆದರು. ಮಂತ್ರಿಪರಿಷತ್ತಿನ ಸಚಿವರೂ, ಆಸ್ಥಾನದ ಆಡಳಿತದ ಪ್ರಮುಖರೂ, ಸೈನ್ಯದ ಹಿರಿಯ ವ್ಯಕ್ತಿಗಳೂ, ಪುರಪ್ರಮುಖರೂ, ನಿಶ್ಚಿತ ವೇಳೆಯಲ್ಲಿ ಅರಮನೆಯ ಸಭಾಂಗಣದಲ್ಲಿ ನೆರೆದರು. ಸಮಸ್ತರೂ ಸೇರಿದ ಮೇಲೆ ಸೋಮರಸನು ಎದ್ದು ನಿಂತು, ಮರಣಕ್ಕೆ ಸಂಬಂಧಿಸಿದ ಎಲ್ಲ ವಿಷಯವನ್ನೂ ಸವಿಸ್ತಾರವಾಗಿ ಸಭಿಕರ ಅವಗಾಹನೆಗೆ ತಂದನು.

ಅವನು ತನ್ನ ಭಾಷಣದಲ್ಲಿ ಕೃಷ್ಣದೇವರಾಯನ ಗುಣಗಾನಮಾಡಿ, ಎಂತಹ ವಿಷಮ ವೇಳೆಯಲ್ಲಿ ಸಾಮ್ರಾಟರು ತಮ್ಮನ್ನು ಅಗಲಿದರೆಂಬುದರ ಬಗ್ಗೆ, ತಮ್ಮೊಡನೆ ಕೃಷ್ಣದೇವರಾಯನು ನಡೆಸಿದ ಸಂಭಾಷಣೆಯನ್ನು ಕಲ್ಲೂ ಕಣ್ಣೀರಿಡುವಂತೆ ತಿಳಿಸಿದನು. ಸಾಮ್ರಾಟರ ಮರಣ ಶಾಸನವನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಇಂದಿನ ಸಭಿಕರ ಮೇಲೆ ಬಿದ್ದಿರುವುದಾಗಿ ತಿಳಿಸಿ ರಾಯನ ಮರಣ ಶಾಸನವನ್ನು ಓದಲು ಆರಂಭಿಸಿದನು.

"ಸ್ವಸ್ತಿ ॥ ಶ್ರೀಮನ್ಮಹಾರಾಜಾಧಿರಾಜ, ರಾಜಪರಮೇಶ್ವರ ಇತ್ಯಾದಿ ಬಿರುದಾಂಕಿತ, ವಿದ್ಯಾನಗರ ರಾಜಧಾನಿ ರತ್ನ ಸಿಂಹಾಸನಾಧೀಶ್ವರ ಸಾಮ್ರಾಟ್ ಕೃಷ್ಣದೇವರಾಯನು ಬರೆದ ಮರಣ ಶಾಸನವೇನೆಂದರೆ,

ನನ್ನ ನಂತರ ಪಟ್ಟಕ್ಕೆ ಬರಲಿರುವ ಮಗು ಇನ್ನೂ ಸಣ್ಣ ವಯಸ್ಸಿನವನಾದ ಕಾರಣ, ಅವನು ಪ್ರಾಪ್ತವಯಸ್ಕನಾಗುವ ತನಕ, ಪವಿತ್ರ ತುಳುವಂಶದಲ್ಲಿ ಹುಟ್ಟಿದ ಶ್ರೀಮನ್ನರಸರಾಜೇಂದ್ರರ ಕುಮಾರನೂ, ಆದ ನನ್ನ ಮಲಸಹೋದರನಾದ ಅಚ್ಯುತರಾಯನು ವಿದ್ಯಾನಗರದ ರತ್ನಸಿಂಹಾಸನದಲ್ಲಿ ರಾಜ ಪ್ರತಿನಿಧಿಯಾಗಿ ಕುಳಿತು, ಪ್ರಜಾಪರಿಪಾಲನೆಯನ್ನು, ಧರ್ಮದಿಂದ ಶೃತಿವಾಕ್ಯಕ್ಕನುಸಾರವಾಗಿ, ಮಾಡತಕ್ಕದೆಂದು ಈ ಮೂಲಕ ತಿಳಿಸಿದ್ದೇನೆ. ಪೂಜ್ಯವೂ, ಪುರಾತನವೂ ಆದ ಈ ಧರ್ಮ ಸಿಂಹಾಸನವು ವಂಶಪಾರಂಪರ್ಯವಾಗಿ ಬಂದಿರುವ ಕಾರಣ, ಕುಮಾರನು ಪ್ರಾಪ್ತ ವಯಸ್ಕನಾಗುವವರೆಗೂ ಆ ಸಹೋದರನೇ,

ರಾಜಪ್ರತಿನಿಧಿಯಾಗಿ ಆಳುವುದು, ನ್ಯಾಯಸಮ್ಮತವೂ, ಶಾಸ್ತ್ರಸಮ್ಮತವೂ ಆಗಿವೆ. ಆದರೆ ಅವನಿಗೆ ರಾಜ್ಯಾಡಳಿತದಲ್ಲಿ ಹೆಚ್ಚು ಅನುಭವವಿಲ್ಲದ ಕಾರಣ, ವಿಜಯನಗರ ಸಾಮ್ರಾಜ್ಯಕ್ಕೆ ಹಿಂದಿನಿಂದಲೂ, ಅರವೀಡು ವಂಶದ ಅಳಿಯ ರಾಮರಾಯ, ತಿರುಮಲರಾಯರು ಮಾಡಿರುವ ಸೇವೆಯನ್ನು ನೆನೆದು, ಆರಾಜ ಬಂಧುಗಳನ್ನು—ಅಳಿಯ ರಾಮರಾಯನನ್ನು ಸಾಮ್ರಾಜ್ಯದ ಮಹಾದಂಡನಾಯಕನ ಪದವಿಗೂ—ಅಳಿಯ ತಿರುಮಲರಾಯನನ್ನು ಹಣಕಾಸಿನ ಆಡಳಿತಕ್ಕೂ ಅಧಿಕಾರಿಗಳಾಗಿ ನೇಮಿಸಿರುತ್ತೇನೆ. ಆ ಸಹೋದರರು ಹಿಂದೆ ಸೇವೆ ಸಲ್ಲಿಸಿದಂತೆ, ಈ ಮುಂದೆಯೂ ಯಾವ ಬಗೆಯ ವೈಮನಸ್ಯ, ಅಂತಃಕಲಹಗಳಿಗೆ ಆಸ್ಪದ ಕೊಡದಂತೆ ಧರ್ಮದಿಂದ ರಾಜ ಪ್ರತಿನಿಧಿ ಅಚ್ಯುತರಾಯನಿಗೆ ನೆರವಾಗಬೇಕೆಂದು ಪ್ರಾರ್ಥಿಸುತ್ತೇನೆ. ತಿಮ್ಮರಸನಂತರ ಸಾಮ್ರಾಜ್ಯದ ಸಮಸ್ತ ಅಧಿಕಾರವನ್ನೂ ದಕ್ಷತೆಯಿಂದ ನಿರ್ವಹಿಸಿದ ಸೋಮರಸರೇ ಅಮಾತ್ಯರಾಗಿರಬೇಕೆಂದೂ, ಕೋರಿದ್ದೇನೆ. ಸಾಮ್ರಾಜ್ಯಕ್ಕೆ ಕೊಂಡಮರಸಯ್ಯನವರು ಮಾಡಿರುವ ಸೇವೆಯನ್ನು ನೆನೆದು ಅವರ ಪುತ್ರ ಅಯ್ಯಪ್ಪರಸರಿಗೆ ಗಾಂದೀಕೋಟೆಯ ಮಾಂಡಲೀಕ ಪದವಿಯನ್ನು ಕೊಡಲಾಗಿದೆ.

ಈ ನನ್ನ ವ್ಯವಸ್ಥೆಯು ಕುಮಾರನು ಪಟ್ಟಕ್ಕೆ ಬರುವತನಕ ಯಾವ ಬಗೆಯ ಅಡ್ಡಿ ಆತಂಕಗಳಿಲ್ಲದೆ ಮುಂದುವರೆಯಬೇಕೆಂದು ಕುಲದೈವವಾದ ತಿರುವೆಂಕಟಚಲಪತಿ, ಪಂಪಾಪತಿ, ಭುವನೇಶ್ವರಿ ಇವರ ಅಂಕಿತದಲ್ಲಿ ಸ್ವಂತ ಇಷ್ಟದಿಂದ ಮಾಡಿರುವ ಮರಣಶಾಸನ. ಇದನ್ನು ಸಾಮ್ರಾಜ್ಯದ ಹಿತೈಷಿಗಳೆಲ್ಲರೂ, ಮುಖ್ಯವಾಗಿ ಕುಮಾರನ ಮಾತೃಸ್ಥಾನದಲ್ಲಿರುವ ಮೂವರು ರಾಣಿಯರೂ ನಿಂತು ಕಾರ್ಯರೂಪಕ್ಕೆ ತರಬೇಕೆಂದು ನನ್ನ ವಿನಂತಿ.

ಎಲ್ಲಿಯ ತನಕ ಈ ಸಾಮ್ರಾಜ್ಯಕ್ಕೆ ಧರ್ಮದ ರಕ್ಷಾಕವಚವಿರುವುದೋ ಅಲ್ಲಿಯ ತನಕ ಸಾಮ್ರಾಜ್ಯಕ್ಕೆ ಯಾವ ವಿಪತ್ತೂ ಇಲ್ಲವೆಂದು ಪೂಜ್ಯರಾದ ವಿದ್ಯಾರಣ್ಯಮುನೀಂದ್ರರ ವಚನವಿದೆ. ಅವರ ತಪಃ ಪ್ರಭಾವ, ಸಾಮ್ರಾಟರನ್ನು ಕಾಪಾಡಲಿ! ಭುವನೇಶ್ವರಿಯ ಕೃಪೆಯಿಂದ ಸಾಮ್ರಾಜ್ಯವು ಅನಂತ ಕಾಲದವರೆಗೆ ಬಾಳಲಿ!

ಸಾಮ್ರಾಟ್ ಕೃಷ್ಣದೇವರಾಯ.

ಎಂಬುದಾಗಿ ಸಹಿಹಾಕಿ ರಾಜಮುದ್ರೆಯನ್ನು ಒತ್ತಿದ್ದ ಕೃಷ್ಣದೇವರಾಯ.

ಈ ಮರಣಶಾಸನವನ್ನು ಕೇಳಿದ ಸಭಾಸದರು ಕೃಷ್ಣದೇಯರಾಯನ ದೂರಾಲೋಚನೆಯನ್ನು ಬಹುವಾಗಿ ಮೆಚ್ಚಿಕೊಂಡರು. ರಾಯನ ಈ ಶಾಸನ ಸಾಮ್ರಾಜ್ಯದ ದಿಗಂತದಲ್ಲಿ ಕಾಣಿಸಿಕೊಂಡಿದ್ದ ಎಲ್ಲ ಭೀತಿಗಳನ್ನು ನಿವಾರಿಸಿತ್ತು. ನಡೆಯಬಹುದಾದ ಯಾದವೀ ಕಲಹವನ್ನು ನಿಲ್ಲಿಸಿತ್ತು. ಅಷ್ಟು ಮಾತ್ರವಲ್ಲದೆ

ಸಾಮ್ರಾಜ್ಯದ ಜನತೆಗೆ ಅಭಯ ಸಂದೇಶಕೊಟ್ಟಿತ್ತು. ಸಾಮ್ರಾಟರ ಮರಣ ಶಾಸನವನ್ನು ಜನತೆ ಒಕ್ಕೊರಲಿನಿಂದ ಸ್ವಾಗತಿಸಿತು. ಆದರೆ ಚಿನ್ನಾದೇವಿಯ ಪಕ್ಷದವರಿಗೆ, ಈ ವ್ಯವಸ್ಥೆ ಸರಿಹೋಗಲಿಲ್ಲ. ತುಂಬಿದ ಸಭೆಯಲ್ಲಿ ಚಿನ್ನಾದೇವಿಯಿಂದ ಪ್ರಚೋದನೆಗೊಂಡ ಅಯ್ಯಪ್ಪರಸನು ಎದ್ದು ನಿಂತು,

"ಸಾಮ್ರಾಟರ ಮರಣಶಾಸನದಿಂದ ರಾಷ್ಟ್ರಕ್ಕೆ ಅನ್ಯಾಯವಾಗಿದೆ! ಅಪಮಾನವಾಗಿದೆ!" ಎಂದು ಕೂಗಿದ.

ನಾಲ್ಕಾರು ಧ್ವನಿಗಳು ಹೇಗೆ ಎಂದು ಕೂಗಿದವು.

ಸಭೆಯಲ್ಲಿ ಗದ್ದಲವಾಯಿತು. ಅದನ್ನು ಅಡಗಿಸಿ ಗಂಭೀರವಾಗಿ ಸೋಮರಸ ಉತ್ತರಿಸಿದ,

"ಅಯ್ಯಪ್ಪರಸರೇ, ಕೊಂಚ ಸಮಾಧಾನ ತಾಳಿ. ತುಂಬಿದ ಸಭೆಯಲ್ಲಿ ಪ್ರಭುಗಳ ಆಜ್ಞೆಯನ್ನು ಹೀಗೆ ಧಿಕ್ಕರಿಸುವುದು ವಿಹಿತವಲ್ಲ. ದುಡುಕದೆ ಸಮಾಧಾನದಿಂದ ಆಲೋಚಿಸಿ ನಡೆಯಿರಿ. ಇದು ದುಡುಕುವ ವೇಳೆಯಲ್ಲ"

"ಎಲ್ಲವನ್ನು ಚೆನ್ನಾಗಿಯೇ ಆಲೋಚಿಸಿದ್ದೇನೆ. ಇದರಲ್ಲಿ ಯಾವುದೋ ದುರುದ್ದೇಶ, ಮೋಸವಿದೆ! ಪ್ರಭುಗಳು ನ್ಯಾಯವಾದ ಹಕ್ಕುದಾರರನ್ನು ಕಡೆಗಣಿಸಿ ಅನ್ಯಾಯವೆಸಗಿದ್ದಾರೆ! ಈ ರಾಜ್ಯ ಅನ್ನಪೂರ್ಣಾದೇವಿಯವರ ಪುತ್ರರಿಗೆ ಸೇರಬೇಕಾದ್ದು ನ್ಯಾಯ! ಆದರೆ ಕುಮಾರನು ಪಟ್ಟಕ್ಕೆ ಬರುವವರೆಗೂ ರಾಜಪ್ರತಿನಿಧಿಯಾಗಿ ಆಳಲು ನೇಮಿಸಲ್ಪಟ್ಟಿರುವುದನ್ನು ಮಾತ್ರ ನಾವು ಒಪ್ಪಲಾರೆವು. ಪ್ರಭುಗಳಿಗೆ ಯಾರೋ ದುರ್ಬೋಧನೆ ಮಾಡಿ, ನ್ಯಾಯವಾಗಿ ಅಳಿಯಂದಿರಿಬ್ಬರಲ್ಲಿ ಒಬ್ಬರಿಗೆ ಸಲ್ಲಬೇಕಾಗಿದ್ದ ರಾಜಪ್ರತಿನಿಧಿತ್ವ ಮಲಸಹೋದರರಿಗೆ ಸಲ್ಲುವಂತೆ ಮಾಡಿದ್ದಾರೆ.

ಈಗ ಸಾಮ್ರಾಜ್ಯಕ್ಕೆ ಹೊರಗಿನ ಶತ್ರುಗಳು ಪ್ರಬಲಿಸುತ್ತಿದ್ದಾರೆ. ಹುಟ್ಟಿದಾಗಿನಿಂದ ರಣರಂಗವನ್ನೇ ಕಾಣದಿರುವ, ರಾಜ್ಯಾಡಳಿತದ ಗಂಧವನ್ನೇ ಅರಿಯದಿರುವ, ವಿಲಾಸ ಜೀವನ ನಡೆಸಿಕೊಂಡು, ಚಂದ್ರಗಿರಿಯ ಕೋಟೆಯಲ್ಲಿ ರಾಜದ್ರೋಹದ ಅಪಾದನೆಯಿಂದ ನಿರ್ಬಂಧದಲ್ಲಿದ್ದ, ಅಚ್ಯುತರಾಯರಿಂದ ದೇಶವನ್ನು ಶತ್ರುಗಳಿಂದ ಉಳಿಸಿ, ದಕ್ಷತೆಯಿಂದ ಆಳಲು ಸಾಧ್ಯವೇ? ಇಂತಹವರ ಅಡಿಯಾಳಾಗಿ, ಅಳಿಯ ರಾಮರಾಯರು, ತಿರುಮಲರಾಯರಂತಹ ಅಪ್ರತಿಮ ವೀರರು ಸಾಮ್ರಾಜ್ಯ ಸೇವೆ ಸಲ್ಲಿಸುವುದೆಂದರೆ ಸತ್ಯಕ್ಕೆ ಬಳಿದ ಮಸಿ, ನ್ಯಾಯಕ್ಕೆ ಕಳಂಕ!.... ಈಗ ಸಾಮ್ರಾಜ್ಯವನ್ನು ಉತ್ಕಲ ಹಾಗೂ ಬಿಜಾಪುರದ ಶತ್ರುಗಳಿಂದ ಉಳಿಸಬಲ್ಲ ಧೀರರಿಗೆ ಸಾಮ್ರಾಜ್ಯವು ಸೇರಬೇಕು. ರಣವಿಕ್ರಮರಿಗೆ ಸಾಮ್ರಾಜ್ಯಲಲನೆ ಮಾಲೆ ಹಾಕಬೇಕೇ ಹೊರತು ಹೇಡಿಗಳಿಗಲ್ಲ! ಅಸಮರ್ಥರಿಗಲ್ಲ!...."

ಈ ವೀರೋದ್ಗಾರವನ್ನು ಕೇಳಿ ಅವರ ಕಡೆಯ ವಿಶ್ವಾಸಿಜನ ಉಘೇ ಉಘೇ ಎಂದು ಜಯಘೋಷ ಮಾಡಿದರು. ಸಭೆಯಲ್ಲಿ ಬಹಳ ಗದ್ದಲವಾಯಿತು. ಯಾರೆಷ್ಟು ಪ್ರಯತ್ನಿಸಿದರೂ ಗದ್ದಲ ಅಡಗಲಿಲ್ಲ. ಆಗ ಹಿರಿಯ ರಾವ ಭರತಾಚಾರ್ಯರು ಎದ್ದು ನಿಂತು ಉಚ್ಚಕಂಠದಿಂದ ಸಾರಿದರು.

"ಪ್ರಭುಗಳ ಮರಣಶಾಸನ – ಅವರ ಅಂತಿಮ ಇಚ್ಛೆ. ಇಷ್ಟು ಸ್ವಲ್ಪ ಕಾಲದಲ್ಲಿ, ಸಾಮ್ರಾಜ್ಯ ಸೇವಕರಿಂದ ಉಲ್ಲಂಘಿಸಲ್ಪಡುವುದೆಂದು ನಾನು ತಿಳಿದಿರಲಿಲ್ಲ. ಪ್ರಭುಗಳೆಂದಿಗೂ ಅಧರ್ಮಪ್ರೇರಕರಾಗರು. ಅವರು ಮಾಡಿದ ಶಾಸನ ಅವರ ಜೀವಂತವಾಣಿ. ಎಲ್ಲವನ್ನೂ ಬಲ್ಲ ಪ್ರಭುಗಳು ಸಿಂಹಾಸನದ ಪ್ರಶ್ನೆಯನ್ನು ಸುಲಭವಾಗಿ ಬಿಡಿಸಿಹೋಗಿದ್ದಾರೆ. ಇದನ್ನು ವಿಮರ್ಶಿಸುವ ಅಧಿಕಾರ ಪ್ರಭುಗಳ ಪಾದಸೇವಕರು ಅವರ ಆಜ್ಞೆಯನ್ನು ಕಾರ್ಯಗತ ಮಾಡುವುದಷ್ಟೇ ನಮ್ಮ ಕರ್ತವ್ಯ. ಪ್ರಭುಗಳು ಸತ್ತು ಸ್ವರ್ಗ ಸೇರಿದರೂ, ಅವರ ಪಂಚಭೂತ ಕಾಯ ನಮ್ಮೆದುರಿಗಿರುವುದು ಅನುಚಿತ. ಇದರಿಂದ ಅವರ ಆತ್ಮಕ್ಕೆ ತೃಪ್ತಿಯುಂಟಾಗುವ ಕಾರ್ಯ ಮಾಡುವುದರ ಮೂಲಕ ನಮ್ಮ ಸಾಮ್ರಾಜ್ಯ ನಿಷ್ಠೆ, ರಾಜಭಕ್ತಿಗಳನ್ನು ತೋರಿಸಬೇಕಾಗಿದೆ. ಇದುವರೆಗೆ ನೀವು ಪ್ರಭುಗಳ ಭೌತಿಕ ದೇಹವನ್ನಿಟ್ಟುಕೊಂಡುದೇ ತಪ್ಪು. ಇನ್ನಾದರೂ ಅವರ ಅಂತಿಮ ಯಾತ್ರೆಗೆ ಸಿದ್ಧಪಡಿಸಿಕೊಳ್ಳಿ!" ಎಂದು ಹೇಳಿ ಕುಳಿತರು.

ಸಭೆಯಲ್ಲಿ ಈ ಬಗ್ಗೆ ಭಿನ್ನಾಭಿಪ್ರಾಯವಿರಲಾರದೆಂದು ತಿಳಿದಿದ್ದ ಭರತಾಚಾರ್ಯರ ಊಹೆ ಸುಳ್ಳಾಯಿತು.

ಸಾಮ್ರಾಟನ ಮೋಹದ ರಾಣಿಯೇ ಈ ಮಾತನ್ನು ವಿರೋಧಿಸಿ ಹೇಳಿದಳು.

"ಸಿಂಹಾಸನದ ಹಕ್ಕುದಾರಿ ಪ್ರಶ್ನೆ ಇತ್ಯರ್ಥವಾಗುವವರೆಗೆ ಅವರ ಕಳೇಬರವನ್ನು ಮುಟ್ಟಲಾಗದು."

"ಸಿಂಹಾಸನದ ಪ್ರಶ್ನೆಗೂ, ಪ್ರಭುಗಳ ಅಂತಿಮಕಾರ್ಯಕ್ಕೂ ಯಾವ ಸಂಬಂಧ ತಾಯಿ?"

"ಸಂಬಂಧವಿದೆ ಆಚಾರ್ಯರೇ, ಸಿಂಹಾಸನದ ಪ್ರಶ್ನೆ ಭಾವಾವೇಶದಲ್ಲಿ ಇತ್ಯರ್ಥವಾಗುವ ಪ್ರಶ್ನೆಯಲ್ಲ. ಈ ಪ್ರಶ್ನೆ ಪ್ರಭುಗಳ ಪಂಚಭೂತ ಕಾಯದ ಮುಂದೆಯೇ ಇತ್ಯರ್ಥವಾಗಬೇಕು! ಇದಾಗದ ಹೊರತು ಅಂತ್ಯಕ್ರಿಯೆ ನಡೆಸಲು ಸಾಧ್ಯವಿಲ್ಲ!" ರಣಚಂಡಿಯಂತೆ ಚರ್ಚಿಸಿದಳು, ಸ್ತ್ರೀಸಹಜವಾದ ಲಜ್ಜೆಯನ್ನು ತೊರೆದು, ಪತಿವಿಯೋಗದಿಂದ ವಿಚಲಿತಳಾಗದೆ ಚಿನ್ನಾದೇವಿ ಸಾಮ್ರಾಟರ ಮೋಹದ ರಾಣಿ ಚಿನ್ನಾದೇವಿ!

"ಸಿಂಹಾಸನದ ಪ್ರಶ್ನೆ ಅನಂತರ ಇತ್ಯರ್ಥವಾಗಲಿ. ಅದರ ಸಲುವಾಗಿ ದೇಹವನ್ನು ಇಲ್ಲಿ, ಈ ಸ್ಥಿತಿಯಲ್ಲಿ ಇಟ್ಟುಕೊಂಡಿರಬಾಗುವುದೆ?"

"ಸಿಂಹಾಸನದ ಪ್ರಶ್ನೆ ಇದೇ ಘಳಿಗೆಯಲ್ಲಿ ಇಲ್ಲಿ ಇತ್ಯರ್ಥವಾದಂತೆ ಮುಂದೆ ಆಗಲು ಸಾಧ್ಯವಿಲ್ಲ. ಆಚಾರ್ಯರೆ! ಸಾಮ್ರಾಜ್ಯದ ಹಿತೈಷಿಗಳೆಲ್ಲರೂ, ಪ್ರಭುಗಳ ಮರಣಶಾಸನವಿಲ್ಲದಿದ್ದರೆ ಹೇಗೆ ನಿರ್ಧರಿಸುತ್ತಿದ್ದರೋ ಹಾಗೇ ನಿರ್ಧರಿಸಲಿ...."

ಈ ವೇಳೆಗೆ ಸ್ಪಷ್ಟವಾಗಿ, ಎರಡು ಗುಂಪು ಉಂಟಾಗಿತ್ತು. ಒಂದು ಗುಂಪಿನ ಮುಖಂಡನಾಗಿ ಅಯ್ಯಪ್ಪರಸನು ಅಳಿಯಂದಿರ ಪಕ್ಷ ಎತ್ತಿ ಹಿಡಿದು, ಸಿಂಹಾಸನ ಅವರಿಗೆ ಸಲ್ಲಬೇಕೆಂದು ಅಭಿಪ್ರಾಯ ಪಟ್ಟರೆ, ಇನ್ನೊಂದು ಗುಂಪು ಅಚ್ಯುತರಾಯನ ಪಕ್ಷ ಕಟ್ಟಿತ್ತು. ಹಿಂದಿನಿಂದಲೂ ಇದ್ದ ವೈಷಮ್ಯ ಇಂದು ನಿಶ್ಚಿತ ಸ್ವರೂಪ ತೆಗೆದುಕೊಂಡಿತ್ತು. ಯಾರೊಬ್ಬರ ಅಭಿಪ್ರಾಯವನ್ನು ನಿರ್ಲಕ್ಷಿಸುವಂತಿರಲಿಲ್ಲ. ಈ ಧರ್ಮಸಂಕಟದಲ್ಲಿ ರಾಜವೈದ್ಯರು ಒಂದು ಸಲಹೆ ಮಾಡಿದರು.

"ಈ ಸಿಂಹಾಸನದ ಸಮಸ್ಯೆ, ಕುಮಾರನ ಪರ ಯಾರು, ರಾಜಪ್ರತಿನಿಧಿಯಾಗಿರಬೇಕೆಂದು ರಾಜಮಾತೆಯೇ ತಿಳಿಸಲಿ."

"ಇದು ಸಾಧ್ಯವಿಲ್ಲ. ಇದು ಕೇವಲ ರಾಜಮಾತೆಯ ವೈಯುಕ್ತಿಕ ಪ್ರಶ್ನೆ!" ಎಂದು ಅಯ್ಯಪ್ಪರಸ ಗರ್ಜಿಸಿದ.

ಈ ಮಾರ್ಗವು ತಪ್ಪಿದ ಮೇಲೆ ಅವರಿಗೆ ಬೇರೆನೂ ಹೊಳೆಯಲಿಲ್ಲ.

"ಹೋಗಲಿ. ಸಿಂಹಾಸನದ ಪ್ರಶ್ನೆ ಅನಂತರ ನಿರ್ಣಯಿಸೋಣ. ಮೊದಲು ಅಂತಿಮ ಕಾರ್ಯ ಮುಗಿಯಲಿ."

"ಸಾಧ್ಯವಿಲ್ಲ!" ಮತ್ತೆ ಯಾರೋ ಕೂಗಿದರು.

"ಹಾಗಾದರೆ ವೈಯುಕ್ತಿಕ ಕಾರಣಗಳಿಗಾಗಿ ಪ್ರಭುಗಳ ಅಂತಿಮ ಯಾತ್ರೆ ಅನಿಶ್ಚಿತವಾಗಿ ಮುಂದೂಡಬೇಕೆ? ನಮ್ಮನ್ನು ಮಕ್ಕಳಿಗೂ ಅತಿಶಯವಾಗಿ ಪೊರೆದು ಪೋಷಿಸಿದ ತಂದೆಗೆ ನಾವು ತೋರಿಸುವ ಗೌರವ ಇಷ್ಟು ತುಚ್ಛವಾಯಿತೆ? ಅವರ ದೇಹ ನಿಮ್ಮ ಒಳಜಗಳ ತೀರ್ಮಾನವಾಗುವವರೆಗೆ, ನಾಯಿ ನರಿಗಳಿಗೂ ಕೀಳಾಗಿ, ಕೊಳೆತು ನಾರಬೇಕೆಂದು, ನಿಮ್ಮ ಅಭಿಪ್ರಾಯವೋ ಹೇಗೆ? ನಿಮ್ಮಲ್ಲಿ ರಾಜಭಕ್ತಿಯಿಲ್ಲದಿದ್ದರೆ ಮಾನವೀಯತೆಯೂ ಬೇಡವೆ? ನೀವು ಮನುಷ್ಯರಾದರೆ ಅಂತ್ಯಕಾರ್ಯಗಳಿಗೆ ಗಮನ ಕೊಡಿ, ಇಲ್ಲವಾದರೆ ನಾಯಿ ನರಿಗಳಂತೆ ಕಚ್ಚಾಡುತ್ತಿರಿ!" ಸಭೆಯಲ್ಲಿ ಗದ್ದಲ ಅಡಗಿತು.

"ನಾನು ಪ್ರಭುಗಳ ಉಪ್ಪು ತಿಂದಿದ್ದೇನೆ. ನನ್ನ ದೇಹ ಬಿದ್ದು ಹೊದರೂ ಸರಿ. ಪ್ರಭುಗಳಿಗೆ ದ್ರೋಹ ಬಗೆಯಲಾರೆ! ನನ್ನ ದೇಹವನ್ನು ಬಲಿಗೊಟ್ಟಾದರೂ, ಅವರ ಅಂತ್ಯ ಸಂಸ್ಕಾರ ಮಾಡುವೆನೇ ಹೊರತು, ನಿಮ್ಮಂತೆ ಕೃತಘ್ನ ನೀಚ ಪಶುವಾಗುವುದಿಲ್ಲ?" ಎಂದು ಭರತಾಚಾರ್ಯರು ಅಲ್ಲಿಂದ ಎದ್ದು ಹೊರ

ಟರು, ಅವರನ್ನು ರಾಜವೈದ್ಯರು ಹಿಂಬಾಲಿಸಿದರು.

ಇದುವರೆಗೆ ನಡೆದ ಎಲ್ಲವನ್ನೂ ನಿರ್ಜೀವ ವ್ಯಕ್ತಿಯಂತೆ, ತನ್ನ ದುಃಖದಲ್ಲಿ, ಪತಿವಿಯೋಗದಲ್ಲಿ ಮುಳುಗಿ ಕುಳಿತ ತಿರುಮಲಾದೇವಿಯು ಚಂಡಿಯಂತೆ ರೌದ್ರಾವೇಶದಲ್ಲಿ ಎದ್ದು ನಿಂತಳು.

"ಮಹಾಪ್ರಭುಗಳ ಕಳೇಬರದ ಎದುರಿನಲ್ಲಿ ಮನುಷ್ಯತ್ವವನ್ನು ಮರೆತು ನಾಯಿನರಿಗಳಂತೆ ಕಿತ್ತಾಡುವ ನಿಮಗೆ ಧಿಕ್ಕಾರ? ನಿಮ್ಮ ಸಿಂಹಾಸನ, ಸಾಮ್ರಾಜ್ಯ ಹೇಳ ಹೆಸರಿಲ್ಲವಾಗಲಿ! ಸ್ವಾರ್ಥಸಾಧಕರು, ದ್ರೋಹಿಗಳೂ, ವಂಚಕರೂ ಆದ ನಿಮ್ಮನ್ನು ಸ್ವಾಮಿನಿಷ್ಠ ಸೇವಕರೆಂದು ಬಗೆದುದಕ್ಕೆ ಸರಿಯಾದ ಶಿಕ್ಷೆಯಾದಂತಾಯಿತು! ನನಗಿಲ್ಲಿ ತೋಳುಗಳ ಮಧ್ಯದಲ್ಲಿ ಕೆಲಸವಿಲ್ಲ! ಬನ್ನಿ ಆಚಾರ್ಯರೇ, ವೈದ್ಯರೇ ಅಂತಿಮಯಾತ್ರೆ ನಡೆಸೋಣ. ಪ್ರಭುಗಳ ದೇಹವನ್ನು ಮುಟ್ಟಬೇಕೆನ್ನುವವರು, ನಮ್ಮ ದೇಹವನ್ನು ತುಂಡರಿಸಿ ಅನಂತರ ಮುಂದೆ ಸಾಗಲಿ!" ಎಂದು ಸಿಂಹಿಣಿಯಂತೆ ಗರ್ಜಿಸಿದಳು.

"ಅಕ್ಕಾ ಇದೋ ನಿಮ್ಮೊಂದಿಗೆ ನಾನೂ ಬಂದೆ...." ಎಂದು ಅನ್ನಪೂರ್ಣಾದೇವಿ ಎದ್ದಳು.

ಸಭೆಯಲ್ಲಿ ಮಿಂಚು ಹೊಡೆದಂತೆ ಆಯಿತು.

ಕ್ಷಣಕಾಲ ಸದ್ದಡಗಿತು. ಆಗ ತಾನು ಸುಮ್ಮನಿದ್ದರೆ, ಪರಿಸ್ಥಿತಿ ವಿಕೋಪಕ್ಕೆ ಹೊರಡುವುದೆಂದು, ಸೋಮರಸನು ಉಚ್ಚಕಂಠದಲ್ಲಿ ಹೇಳಿದನು.

"ಸಭಿಕರೇ ಪಂಪಾಪತಿಯಾಣೆಯಿಟ್ಟು ಹೇಳುವ ಈ ಮಾತನ್ನು ಕೇಳಿ. ಯಾರೆಷ್ಟು ವಿರೋಧಿಸಿದರೂ ಅಂತಿಮಯಾತ್ರೆಯನ್ನು ನಿಲ್ಲಿಸಲು ಸಾಧ್ಯವಿಲ್ಲ. ಇದು ನನ್ನ ಮಾತಲ್ಲ. ರಾಜಾಜ್ಞೆ!"

"ಯಾವ ರಾಜಾಜ್ಞೆ?"

"ಮಹಾರಾಜಾಧಿರಾಜ, ಅಚ್ಯುತ ಸಾರ್ವಭೌಮರ ಆಜ್ಞೆ!"

"ಅಚ್ಯುತರಾಯನನ್ನು ಸಾರ್ವಭೌಮ ಪದವಿಗೇರಿಸಿದವರು ಯಾರು?"

"ಸ್ವಯಂ ಸಾಮ್ರಾಟರು."

"ಇದಕ್ಕೇನು ಆಧಾರ!"

"ಇದೋ ಮುದ್ರೆಯುಂಗುರ! ರಾಜ ಲಾಂಛನ!" ಎಂದು ತೋರಿಸಿದ.

"ಸುಳ್ಳು! ಸುಳ್ಳು! ಇದರಲ್ಲೇನೋ ಮೋಸವಿದೆ."

"ಇದರಲ್ಲಿ ಯಾವ ಮೋಸವೂ ಇಲ್ಲ! ದೈವದ ಸಾನ್ನಿಧ್ಯದಲ್ಲಿ ಅಚ್ಯುತರಾಯರನ್ನು ಸಾಮ್ರಾಟರಾಗಿ ಪಟ್ಟಕಟ್ಟಲಾಗಿದೆ! ಇದಕ್ಕೆ ವೆಂಕಟರಮಣನೇ ಸಾಕ್ಷಿ!" ಎಂದ ಸೋಮರಸ.

ಅಷ್ಟರಲ್ಲಿ ಆಕಾಶದಲ್ಲಿ ಭಯಂಕರವಾದ ಸಿಡಿಲ ಗರ್ಜನೆ ಕೇಳಿತು!

ಇದಕ್ಕೆ ನೂರ್ಮಡಿಯಾಗಿ, ಗುಡುಗಿನ ಆರ್ಭಟ ಕೇಳಿಸಿತು. ಅಲ್ಲಿ ನೆರೆದಿದ್ದವರೆಲ್ಲ ತತ್ತರಿಸಿದರು. ಅವರಿಗೆ ದೈವಸಾಕ್ಷಿಗೆ ಇದಕ್ಕಿಂತ ಪ್ರಮಾಣ ಬೇಕಿರಲಿಲ್ಲ.

"ಅಚ್ಯುತ ಪ್ರಭುಗಳಿಗೆ ಜಯವಾಗಲಿ!" ಎಂದು ಸೋಮರಸನು ಒಕ್ಕೊರಲಿನಿಂದ ಜಯಕಾರ ಮಾಡಿದ. ನೂರಾರು ಕಂಠಗಳು ಅದನ್ನು ಅನುಸರಿಸಿದವು.

"ಇದು ರಾಜಾಜ್ಞೆ! ಪ್ರಭುಗಳ ಅಂತಿಮಯಾತ್ರೆ ಗೋಧೂಳಿಲಗ್ನದಲ್ಲಿ, ಸಕಲ ವೈಭವದೊಡನೆ ನಡೆಯುತ್ತದೆ. ಇದನ್ನು ವಿರೋಧಿಸಿದವರನ್ನು ರಾಜದ್ರೋಹಿಗಳೆಂದು ಶಿಕ್ಷಿಸಲಾಗುವುದು!" ಎಂದು ಘೋಷಿಸಿ ಅಲ್ಲಿಂದ ಸೋಮರಸನು ಎದ್ದು ಹೋದನು. ಸೋಮರಸನ ಸೈನಿಕರು ರಾಜಸಭೆಯನ್ನು ಬಿಚ್ಚುಗತ್ತಿಯಲ್ಲಿ ಕಾಯುತ್ತಾ ನಿಂತರು. ಉಳಿದವರು ಸೋಮರಸನ ಉದ್ಧಟ ವರ್ತನೆಗಾಗಿ ತಮ್ಮಲ್ಲೇ ಹಲ್ಲುಕಡಿಯುತ್ತಾ ಸಭೆಯಿಂದ ನಿರ್ಗಮಿಸಿದರು.

ನಿಶ್ಚಿತವೇಳೆಯಲ್ಲಿ, ಸಾಮ್ರಾಟ್ ಕೃಷ್ಣದೇವರಾಯನ, ಅಂತಿಮಯಾತ್ರೆ ರಾಜೋಚಿತವಾದ ವೈಭವದಿಂದ ನಿರ್ವಿಘ್ನವಾಗಿ ನಡೆಯಿತು. ಆಗ ನಡೆಸಬೇಕಾದ ಯಾವ ದಾನ ಧರ್ಮಗಳಿಗೂ ಕಡಿಮೆ ಮಾಡಲಿಲ್ಲ.

ಇಂತು ಮಡಿದ ಮೂರು ದಿನಗಳ ನಂತರ ರಾಯನ ಪಂಚಭೂತ ದೇಹ, ಪಂಚಭೂತಗಳಲ್ಲಿ ಲೀನವಾಯಿತು. ಸಾಮ್ರಾಜ್ಯದ ಸಂಪುಟದಲ್ಲಿ ಒಂದು ಅಧ್ಯಾಯ ಮುಗಿದು, ಇನ್ನೊಂದು ಅಧ್ಯಾಯಕ್ಕೆ ಆರಂಭವಾಯಿತು.

೪

ಎಲ್ಲವೂ ಕೃಷ್ಣದೇವರಾಯನ ಮರಣಶಾಸನದಂತೆ ನಡೆದಿತ್ತು. ಅದರಂತೆ ಅನ್ನಪೂರ್ಣಾದೇವಿಯ ಕುಮಾರನ ಹೆಸರಿನಲ್ಲಿ ಅಚ್ಯುತರಾಯನು ರಾಜಪ್ರತಿನಿಧಿಯಾಗಿ, ಕೃಷ್ಣದೇವರಾಯನು ಸತ್ತ ಹದಿನಾಲ್ಕನೆಯ ದಿನ, ಕೃಷ್ಣದೇವರಾಯನ ಅಂತ್ಯ ಸಂಸ್ಕಾರಗಳೆಲ್ಲವೂ ಮುಗಿದ ನಂತರ, ಸಕಲ ರಾಜವೈಭವದಲ್ಲಿ ಮತ್ತು ಶಾಸ್ತ್ರೋಕ್ತವಾಗಿ, ಪಟ್ಟಾಭಿಷಿಕ್ತನಾಗಿದ್ದನು. ಈ ವೇಳೆಗೆ ಪುಲಿಕಾಟಿನಿಂದ ರಾಜಧಾನಿಗೆ ಅಳಿಯ ರಾಮರಾಯ ಮತ್ತು ಅಳಿಯ ತಿರುಮಲರಾಯರು, ರಾಜನ ಮರಣಶಾಸನವನ್ನು ತಿಳಿದು, ಅದರಂತೆ, ಸಾಮ್ರಾಜ್ಯಾಭಿಷಿಕ್ತನಾಗಿದ್ದ ಅಚ್ಯುತರಾಯನ ವಿರುದ್ಧ, ಸಿಂಹಾಸನಕ್ಕಾಗಿ ಹೋರಾಡುವುದು, ವ್ಯರ್ಥ ಸಾಹಸವಲ್ಲದೆ, ಜನತೆಯ ದೃಷ್ಟಿಯಲ್ಲಿ ದ್ರೋಹಿಗಳಾಗುವ ಸಂಭವ ಉಂಟೆಂದೂ, ಅನಾಯಾಸವಾಗಿ ಸಾಮ್ರಾಜ್ಯದ ಆಡಳಿತದಲ್ಲಿ ತಮಗೆ ದೊರೆತ ಅಧಿಕಾರಗಳನ್ನು ಕಳೆದುಕೊಳ್ಳಬೇಕಾಗುವುದೆಂದು ಆಲೋಚಿಸಿ ಯಾವ ಬಗೆಯ ವಿರೋಧವನ್ನೂ ವ್ಯಕ್ತಪಡಿಸದೆ, ತಮ್ಮ ಪಾಲಿಗೆ ಬಂದಿದ್ದ ಹುದ್ದೆಗಳನ್ನು

ಸಂತೋಷದಿಂದ ಸ್ವೀಕರಿಸಿದ್ದರು. ಮಹಾದಂಡನಾಯಕನ ಪದವಿಯನ್ನು ಸ್ವೀಕರಿಸಿದ ರಾಮರಾಯನೂ, ಅರ್ಥಸಚಿವನಾದ ತಿರುಮಲರಾಯನೂ, ಸಾಮ್ರಾಜ್ಯದ ಪ್ರಮುಖ ಸ್ಥಾನಗಳಾದ ಹಣ ಮತ್ತು ಜನಬಲಗಳು ತಮ್ಮವಾದ ಮೇಲೆ, ಅಚ್ಯುತರಾಯನು ಸಾಮ್ರಾಟನಾದರೂ, ಅವನ ಮೇಲೆ ತಮ್ಮ ಅಧಿಕಾರ ವರ್ಚಸ್ಸನ್ನು ಬೀರಿ, ತಮ್ಮ ಕೈಗೊಂಬೆಯನ್ನಾಗಿ ಮಾಡಿಕೊಂಡು, ಅವನ ಹೆಸರಿನಲ್ಲಿ ತಾವೇ ರಾಜ್ಯವಾಳಬಹುದೆಂದು ಆಲೋಚಿಸಿ ಯಾವ ಪ್ರತಿಭಟನೆಯನ್ನೂ ತೋರಲಿಲ್ಲ. ಅಚ್ಯುತರಾಯ, ಸೋಮರಸರಿಗೆ, ಅವರು ಚಿನ್ನಾದೇವಿಯಂತೆ ಕೃಷ್ಣದೇವರಾಯನ ಮರಣ ಶಾಸನವನ್ನು ತಿರಸ್ಕರಿಸದೆ, ಪುರಸ್ಕರಿಸಿದುದು ಒಂದು ಪವಾಡವೇ ಆಯಿತು. ಮುಂದೆ ಎಷ್ಟು ವಿಪತ್ಪರಂಪರೆಗೆ ಕಾರಣವಾಗುವುದೋ ಎಂದು ಹೆದರಿದ್ದ ಅವರಿಗೆ ಇದು ದೈವಾನುಗ್ರಹವೆಂದು ತಿಳಿಯುವಂತಾಯಿತು.

ಕೃಷ್ಣದೇವರಾಯನ ಆದೇಶದಂತೆ ಸೋಮರಸನು ಮಹಾಪ್ರಧಾನಿಯಾಗಿ ನಿಂತು, ರಾಮಪ್ಪ, ರಾಮಭೂತಲಯ್ಯ ಮುಂತಾದ ನುರಿತ ಅಮಾತ್ಯರ ಸಹಾಯ, ಸಹಕಾರಗಳಿಂದ ಸಾಮ್ರಾಜ್ಯದ ಆಡಳಿತದ ಭಾರಕ್ಕೆ ಹೆಗಲು ಕೊಟ್ಟನು.

ಕೊಂಡಮರಸಯ್ಯನ ಮಗನಾದ ಅಯ್ಯಪ್ಪರಸನಿಗೆ, ಅಚ್ಯುತರಾಯನ ಪಟ್ಟಾಭಿಷೇಕವನ್ನು ವಿರೋಧಿಸಿದರೂ, ಪೂರ್ವಾಗ್ರಹಕ್ಕೆ ಒಳಗಾಗದೆ, ಅವನನ್ನು ಗಾಂಧೀಕೋಟೆಗೆ ಅಧಿಪತಿಯನ್ನಾಗಿ ಮಾಡಿದ್ದನು. ಇದರಿಂದ ಸಾಮ್ರಾಜ್ಯಕ್ಕೆ ಅವನ ಕಾರಣದಿಂದ ಬರಬಹುದಾಗಿದ್ದ ಎಲ್ಲ ತೊಂದರೆ ಪರಿಹಾರವಾದಂತೆ ಆಗಿತ್ತು.

ಹೀಗೆ ಕೃಷ್ಣದೇವರಾಯನ ಹಂಚಿಕೆಯಿಂದ ಸಾಮ್ರಾಜ್ಯದ ಭವಿಷ್ಯ ಸಮರ್ಥರಾದ ಆಡಳಿತ ಕುಶಲರ ಕೈಯಲ್ಲಿ ಸುಭದ್ರವಾದುದು ಮಾತ್ರವಲ್ಲದೆ ಅಂತರಂಗದ ದ್ವೇಷಾಸೂಯೆಗಳು ನಿಶ್ಶೇಷವಾಗಿ ಎಲ್ಲರೂ ಸಾಮ್ರಾಜ ಸೇವೆಗೆ ಟೊಂಕಕಟ್ಟಿ ನಿಲ್ಲುವಂತೆ ಆಗಿತ್ತು. ಈಗ ಅಂತಃಕಲಹಗಳ ಭಯ ನಿರ್ಮೂಲವಾದೊಡನೆ, ಸೋಮರಸನು ಹೊರಗಿನ ಶತ್ರುಗಳಿಂದ ಸಾಮ್ರಾಜ್ಯವನ್ನು ಉಳಿಸಲು, ಶತ್ರು ಭಾಧೆಯಿಂದ ಜನತೆಯನ್ನು ಬಿಡಿಸಲು, ಕೃಷ್ಣದೇವರಾಯನ ಮೇಲೆ ಹಳೆಯ ಶತೃತ್ವವನ್ನು ನೆನೆದು ದಂಡೆತ್ತಿ ಬಂದ ಉತ್ಕಲದ ಗಜಪತಿಯನ್ನು, ಬಿಜಾಪುರದ ಸುಲ್ತಾನರನ್ನು ಸದೆಬಡಿಯಲು ಸಮರ ಸನ್ನಾಹ ಮಾಡಿದ.

ಕೃಷ್ಣದೇವರಾಯನು ಬದುಕಿರುವವರೆಗೆ, ಸಾಮ್ರಾಜ್ಯ ತಂಟೆಗೆ ಬರದಿದ್ದ ಉತ್ಕಲಾಧಿಪತಿಯು, ರಾಯನ ಅಸ್ವಸ್ಥವಾದ ಸುದ್ದಿಯನ್ನು ಕೇಳಿ ದಂಡೆತ್ತಿ ಬಂದುದನ್ನು ನೋಡಿ, ಸಾಮ್ರಾಜ್ಯದ ಜನತೆ ಒಬ್ಬ ವ್ಯಕ್ತಿಯಂತೆ ಎದುರು ನಿಂತ

ದ್ದರು. ಜನತೆಯ ಆಕ್ರೋಶಗಳನ್ನು ಮೈಗೂಡಿಸಿ, ಮಹಾಕವಿ ಅಲ್ಲಸಾನಿ ಪೆದ್ದನು ಗಜಪತಿಯ ಕೃತಘ್ನತೆಯನ್ನು ನೆನೆದು ಕೃಷ್ಣದೇವರಾಯನು ಬದುಕಿರುವವರೆಗೆ ನಾಯಿಯಂತೆ ಮೆತ್ತಗಿದ್ದವನು ಈಗ ತೋಳನಂತೆ ಬೀಳಲು ಬಂದುದನ್ನು ಕಂಡು ಕೆರಳಿ, ಜನತೆಯನ್ನು ಹುರಿದುಂಬಿಸಲು ಕಾವ್ಯವನ್ನು ರಚಿಸಿದನು.

ಬಹಮನಿ ಸುಲ್ತಾನರಲ್ಲಿ, ಒಬ್ಬ ನಾಕಲಾಲಿ ಕುಕುಬ್‌ಷಹ ಸುಲ್ತಾನನೊಂದಿಗೆ ಸ್ನೇಹ ಬೆಳಸಿ, ಪ್ರತಾಪರುದ್ರ ಗಜಪತಿಯು ತಾನು ಹಿಂದೆ ಕೃಷ್ಣದೇವರಾಯನಿಗೆ ಬಿಟ್ಟುಕೊಟ್ಟಿದ್ದ ಕೃಷ್ಣೆಯ ದಕ್ಷಿಣ ಗಡಿಯನ್ನು ಮತ್ತೆ ಗೆದ್ದುಕೊಳ್ಳಲು ದಂಡೆತ್ತಿ ಬಂದು, ಕೊಂಡಪಲ್ಲಿ, ವೆಳುಕೊಂಡ ಮುಂತಾದ ಗಿರಿದುರ್ಗಗಳನ್ನು ಸ್ವಾಧೀನಪಡಿಸಿಕೊಂಡಿದ್ದನು.

ಇತ್ತ ಬಿಜಾಪುರದ ಸುಲ್ತಾನನು ಬೆಳಗಾಂ ದುರ್ಗವನ್ನು ಹಿಡಿಯಲು ಬಂದ, ತಿಮ್ಮರಸನ ಮರಣ ಹಾಗೂ ಕೃಷ್ಣದೇವರಾಯನು ಉದರವ್ಯಾಧಿಯಿಂದ ಹಾಸಿಗೆ ಹಿಡಿದು ಮಲಗಿದ ಸಮಯ ಸಾಧಿಸಿ, ಧೈರ್ಯವಾಗಿ ದಂಡೆತ್ತಿ ಬಂದು, ರಕ್ಷಕರಿಲ್ಲದ ರಾಯಚೂರು ಮುದ್ಗಲ್ಲಿಗಳನ್ನು ಕೈವಶಮಾಡಿಕೊಂಡುದಲ್ಲದೆ, ಇತರ ಗಡಿಪ್ರದೇಶಗಳ ಆಕ್ರಮಣಕ್ಕೆ ತೊಡಗಿದ್ದನು. ಇದರಿಂದಾಗಿ ಅವರಿಗೆ ಬುದ್ಧಿ ಕಲಿಸಲು ಅವರ ಮೇಲೆ ದಂಡೆತ್ತಿ ಹೋಗುವುದು ಅನಿವಾರ್ಯವಾಗಿತ್ತು.

ಸೋಮರಸನು ಒಳಾಡಳಿತವು ಒಂದು ವ್ಯವಸ್ಥೆಗೆ ಬರುತ್ತಲೂ, ಆಳಿಯ ರಾಮರಾಯನ ಕೈಕೆಳಗೆ, ಪ್ರತಾಪರುದ್ರಗಜಪತಿಯನ್ನು ಗೆದ್ದು ಬರಲು ದೊಡ್ಡದೊಂದು ಸೈನ್ಯವನ್ನು ಕೊಟ್ಟು ಕಳುಹಿಸಿದನು.

ಇತ್ತ ಬಿಜಾಪುರದ ಸುಲ್ತಾನ ಅದಿಲ್‌ಷಹನು ಮುಂದೊತ್ತಿ ಬರುವುದನ್ನು ತಡೆಯಲು ತಿರುಮಲರಾಯನೊಡನೆ ಸಾಕಷ್ಟು ಸೈನ್ಯವನ್ನು ಕಳುಹಿಸಿಕೊಟ್ಟು ಅವರಿಗೆ ಬೇಕಾಗುವ ಪೂರೈಕೆಯ ಸಲುವಾಗಿ ತಾನು ರಾಜಧಾನಿಯಲ್ಲೇ ನಿಂತನು.

ಈಗ ಸೋಮರಸನು ರಾಜಧಾನಿಯನ್ನು ಕ್ಷಣಕಾಲ ಬಿಟ್ಟು ಕದಲುಹಂತಿರಲಿಲ್ಲ. ರಾಜಧಾನಿಯಲ್ಲಿ ಅವನ ಇರವು ಅತ್ಯಾವಶ್ಯಕವಾಗಿತ್ತು. ಅವನು ಅಚ್ಯುತರಾಯನಿಗೆ ರಾಜ್ಯಾಡಳಿತದಲ್ಲಿ ತರಪೇತು ಕೊಡುವುದರ ಜೊತೆಗೆ ಬಾಲರಾಜನ ಪೋಷಣೆಯ ಭಾರ ಅವನ ತಲೆಯ ಮೇಲೆ ಬಿದ್ದಿತ್ತು. ರಾಜಧಾನಿಯಲ್ಲಿ ವಿದ್ರೋಹಿಗಳಿಗೇನೂ ಕೊರತೆ ಇರಲಿಲ್ಲ. ಎಲ್ಲಿಯವರೆಗೆ ಚಿನ್ನಾದೇವಿ ಅತೃಪ್ತ ಮಹಿಷಿಯಾಗಿದ್ದಳೋ ಅಲ್ಲಿಯವರೆಗೆ ಅನ್ನಪೂರ್ಣಾದೇವಿಯ ಮಗುವಿಗೆ ಗಂಡಾಂತರ ತಪ್ಪದೆಂದು ಅವನು ಭಾವಿಸಿದ್ದನು.

ಚಿನ್ನಾದೇವಿಯು ತನ್ನ ಹೊಟ್ಟೆಯಲ್ಲಿ ಹುಟ್ಟಿದ ವೆಂಗಡಾಂಬೆ ಮತ್ತು ತಿರುಮಲನಿಗೆ ರಾಜ್ಯ ಸಲ್ಲಿಸಲು ಅವಳು ಪಟ್ಟ ಶ್ರಮವೆಲ್ಲವೂ ವ್ಯರ್ಥವಾಗಿತ್ತು.

ತನ್ನ ಅಳಿಯ ತಿರುಮಲರಾಯನಾಗಲೀ, ಅಳಿಯ ರಾಮರಾಯರಾಯನಾಗಲೀ ತಮ್ಮ ಹಕ್ಕುದಾರಿಕೆಯನ್ನು ಮುಂದೊತ್ತಿ ಪ್ರತಿಭಟಿಸದೆ, ಅಚ್ಯುತರಾಯನ ಸಾರ್ವಭೌಮ ಪದವಿಯನ್ನು ಒಪ್ಪಿಕೊಂಡುದು ಅವಳ ಮುಖಕ್ಕೆ ಮಸಿ ಬಳಿದಂತಾಗಿತ್ತು. ಎಲ್ಲರ ದೃಷ್ಟಿಯಲ್ಲಿ ಅವಳು ದ್ರೋಹಿಯಾದಳೇ ಹೊರತು, ಅವಳ ಪರ ಮಾತನಾಡಿದವರೆಲ್ಲರೂ ಈಗ ಸಾಮ್ರಾಟರ ಪಾದಸೇವಕರೇ ಆಗಿದ್ದರು. ಅವಳು ತನಗಾದ ಅಪಮಾನ, ನಿರಾಶೆಗಳಿಂದ ಕೆಣಕಿದ ಸರ್ಪದಂತೆ ಬುಸುಗುಟ್ಟುತ್ತಿದ್ದಳು. ಹೀಗಾಗಿ ಸೋಮರಸನು ಅವಳಿಂದ ಕುಮಾರನ ಜೀವಕ್ಕೆ ಗಂಡಾಂತರ ಬರಬಹುದೆಂದು ಕುಮಾರನ ಪೋಷಣೆಯಲ್ಲಿ ಮೈಯೆಲಾ ಕಣ್ಣಾಗಿಸಿಕೊಂಡು ಎಚ್ಚರದಿಂದ ಕಾರಬೇಕಾಗಿತ್ತು.

ಸೋಮರಸನು ಭಾವೀ ಸಾಮ್ರಾಟನ ಮಾತೆಯಾದ ಅನ್ನಪೂರ್ಣಾದೇವಿಗೆ ಅವಳಿದ್ದ ಅಂತಃಪುರ ತಕ್ಕುದಲ್ಲವೆಂಬ ಕಾರಣವನ್ನು ಮುಂದುಮಾಡಿಕೊಂಡು, ಅವಳನ್ನು ಬೇರೆಯ ಅರಮನೆಗೆ ಸಾಗಿಸಿದ್ದ. ಅಲ್ಲಿ ತನ್ನ ನಂಬಿಕೆಗೆ ಪಾತ್ರರಾಗಿದ್ದ ಪರಿಜನರನ್ನು ನೇಮಿಸಿ, ಕುಮಾರನ ಜೀವಕ್ಕೆ ಯಾವ ಅಪಾಯವಾದರೂ ಅವರು ತಲೆದಂಡ ಕೊಡಬೇಕಾಗುವುದೆಂದು ಎಚ್ಚರಿಸಿದ್ದ. ಅಂತೆಯೇ ಮೈಗಾವಲು ಪಡೆಯ ವಿಶ್ವಾಸ ಪಾತ್ರರಾದ ವ್ಯಕ್ತಿಗಳನ್ನೇ ಆರಿಸಿ, ಅರಮನೆಯ ರಕ್ಷಣೆಯ ಭಾರ ವಹಿಸಿದ್ದ. ತನ್ನ ಅಪ್ಪಣೆಯಿಲ್ಲದೆ ಯಾರನ್ನೂ ಅರಮನೆಯ ಒಳಗೆ ಬಿಡಬಾರದೆಂದು ಕಟ್ಟು ಮಾಡಿದ್ದ.

ಹೀಗೆ ಸೋಮರಸನು ಕುಮಾರನ ಸಮಸ್ತ ರಕ್ಷಣೆಯ ಭಾರವನ್ನು ಕೈಗೆತೆಗೆದುಕೊಂಡು ಮಾಡಿದ್ದ ವ್ಯವಸ್ಥೆಯನ್ನು ಕೇಳಿ, ತಿರುಮಲಾದೇವಿ, ಭರತಾಚಾರ್ಯರೇ ಮೊದಲಾದ ಹಿರಿಯರಿಗೆ ಎಷ್ಟೋ ಸಮಾಧಾನ ಉಂಟಾಯಿತು. ಆದರೆ ಅಚ್ಯುತರಾಯನ ಮಡದಿಯಾದ ವರದಾಂಬಿಕೆಗೆ ಮಾತ್ರ ಇದು ಸಹನವಾಗಲಿಲ್ಲ.

ರಾಣಿ ವರದಾಂಬಿಕೆ ಅಚ್ಯುತರಾಯನಂತೆ, ಲೋಲುಪಜೀವಿಯಾಗಿರಲಿಲ್ಲ. ಅವಳು ಸಲಕಂ ರಾಜನ ಮುದ್ದಿನ ಮಗಳಾದರೂ, ತಂದೆಯ ಕಾಲದಲ್ಲಿ ಲಲಿತ ಕಲೆಗಳಲ್ಲಿ ಆಸಕ್ತಿ ತೋರಿಸಿದ್ದಂತೆ, ರಾಜ್ಯಾಡಳಿತದ ವಿಷಯದಲ್ಲೂ ಆಸಕ್ತಿ ತೋರಿಸಿದ್ದ ಕ್ಷತ್ರಿಯ ರಮಣಿ. ಅವಳು ಮೊದಲಿನಿಂದಲೂ ಅಧಿಕಾರಪ್ರಿಯಳು. ಮುಂದೆ ಸಾಮ್ರಾಜ್ಞಿಯಾಗುವ ಆಸೆಯಿಂದ ಅಚ್ಯುತರಾಯನ ಕೈಹಿಡಿದಿದ್ದಳು. ಆದರೆ ಅಚ್ಯುತರಾಯನು ಸಾಮ್ರಾಟನ ಹೊಟ್ಟೆಯಲ್ಲಿ ಹುಟ್ಟಿಯೂ, ತನ್ನ ತಿಳಿಗೇಡಿತನದಿಂದಾಗಿ, ತನ್ನ ಯೌವನದ ಇಪ್ಪತ್ತು ವರ್ಷಗಳನ್ನು ಚಂದ್ರಗಿರಿಯಲ್ಲಿ ಸೆರೆಬಂಧದಲ್ಲಿ ಕಳೆಯುವ ಪ್ರಸಂಗ ಬಂದಿತ್ತು. ಹೇಳಿಕೆಯ ಮಾತು ಕೇಳಿಕೊಂಡು ಕೃಷ್ಣದೇವರಾಯನ ವಿರುದ್ಧ, ಕತ್ತಿ ಕಟ್ಟಿದುದೇ ಅವನ ತಪ್ಪಾಗಿ.

ಅವನ ದೀರ್ಘಕಾಲ ರಾಜ್ಯಾಡಳಿತದಿಂದ ವಂಚಿತನಾಗಿ, ಚಂದ್ರಗಿರಿಯ ಅರಮನೆಯಲ್ಲಿ ವಿಲಾಸಜೀವನ ನಡೆಸುತ್ತಾ, ಹೇಡಿಯಾಗಿ, ದುರ್ಬಲನಾಗಿ ಇರಬೇಕಾದ ಪ್ರಸಂಗ ಬಂದಿತ್ತು. ತನ್ನ ಜೀವನ ಕಡೆಯತನಕ ಹೀಗೆಯೇ ಕಳೆದು ಹೋದರೆ ಸಾಕೆಂಬ ತೃಪ್ತಿ ಅವನಿಗೆ ಉಂಟಾಗಿತ್ತು. ಇಂಥವನಿಗೆ ಸುದೈವದಿಂದ ವಿಜಯನಗರದ ಸಾಮ್ರಾಟ್ ಪದವಿ ಅನಾಯಾಸವಾಗಿ ದೊರೆತಿದ್ದಿತು. ಇದು ದೊರಕುವುದೆಂದು ಅವನಿಗಾಗಲೀ ವರದಾಂಬಿಕೆಗಾಗಲೀ ಕನಸಿನಲ್ಲೂ ತಿಳಿದಿರಲಿಲ್ಲ.

ಸಾಮ್ರಾಟ್ ಕೃಷ್ಣದೇವರಾಯನು ಅವನನ್ನು ನಿರ್ಬಂಧದಿಂದ ಬಿಡುಗಡೆ ಮಾಡುವ ಮಾತು ಹಾಗಿರಲಿ, ತನ್ನ ಕಡೆಗಾಲದಲ್ಲಿ ತನ್ನ ಬಳಿಯಿರಲೂ ಅವಕಾಶ ಕೊಟ್ಟಿರಲಿಲ್ಲ. ಅವರ ಬಗ್ಗೆ ಇದ್ದ ಪೂರ್ವಾಗ್ರಹ ಕಳೆದು, ಸದಭಿಪ್ರಾಯವನ್ನುಂಟುಮಾಡಲು ಕಳುಹಿಸಿಕೊಟ್ಟಿದ್ದ ಸಲಕಂ ಸಹೋದರರು—ಪೆದ್ದತಿರುಮಲ, ಚಿನ್ನತಿರುಮಲರು ಅಕಾರಣವಾಗಿ ಪ್ರಧಾನಿ ಕೊಂಡಮರಸಯ್ಯನನ್ನು ಕೊಲೆಮಾಡಿದ್ದರು. ಈ ಸೋದರರ ಅನುಚಿತ ವರ್ತನೆಯಿಂದ ಅಚ್ಯುತರಾಯನ ಸ್ಥಿತಿ ಮತ್ತಷ್ಟು ಜಟಿಲವಾಯಿತು. ಅಚ್ಯುತರಾಯನ ಬಿಡುಗಡೆಯ ಮಾತು ದೂರವೇ ಉಳಿಯಿತು. ಸೋದರರ ದುಡುಕಿನಿಂದ ವರದಾಂಬಿಕೆಯ ಎಲ್ಲ ಆಶೋತ್ತರಗಳು ಸಮಾಧಿಯಾಗಿತ್ತು. ಅವರ ಸಾಮ್ರಾಜ್ಯ ಲಲಾಸೆ, ಗಗನ ಕುಸುಮವೇ ಆಯಿತು. ಅವರು ಹೀಗೆ ಹತಾಶಳಾಗಿದ್ದ ಹೊತ್ತಿನಲ್ಲಿ, ಕೃಷ್ಣದೇವರಾಯನ ಆಕಸ್ಮಿಕ ಮರಣ ಹೊಂದುತ್ತಾ ಅವನ ಮರಣಶಾಸನದಿಂದ ಅವಳ ಭಾಗ್ಯೋದಯವಾಗಿತ್ತು. ದೈವ ಅವಳ ನಿರೀಕ್ಷೆಗೂ ಮೀರಿ ಅವಳನ್ನು ಅನುಗ್ರಹಿಸಿತ್ತು.

ಇಷ್ಟರಿಂದ ಅವಳು ತೃಪ್ತಳಾಗದೆ, ತನ್ನ ಮಹಾರಾಣಿ ಪದವಿಯನ್ನು ಶಾಶ್ವತಗೊಳಿಸಿಕೊಳ್ಳಲು, ಹಾತೊರೆದಿದ್ದಳು. ತನ್ನ ರಾಣಿಯ ಪದವಿ, ಕೇವಲ ಕೆಲವು ವರ್ಷಗಳ ಕಾಲ – ಅನ್ನಪೂರ್ಣಾದೇವಿಯ ಪುತ್ರನು ಪ್ರಾಪ್ತವಯಸ್ಕನಾಗುವವರೆಗೆ – ಅಂದರೆ ಹತ್ತೆಂಟು ವರ್ಷಗಳು ಮಾತ್ರ – ಎಂಬ ಸಂಗತಿ ಅವಳ ಎಲ್ಲ ಸುಖ ಸಂತೃಪ್ತಿಗಳ ಕ್ಷೀರಕ್ಕೆ ಹುಳಿಯನ್ನು ಹಿಂಡಿತ್ತು. ಅವಳನ್ನು ಅಸುಖಿಯನ್ನಾಗಿ ಮಾಡಿತ್ತು. ಅವಳಿಗೆ ಬಾಲರಾಜನ ಮೇಲೆ ಅಕಾರಣವಾಗಿ ಅಸೂಯೆ ಉಂಟಾಗಿತ್ತು. ಅವನು ಬದುಕಿರುವ ವರೆಗೆ ತನ್ನ ಅಧಿಕಾರ ಶಾಶ್ವತವಲ್ಲವೆಂದು ತಿಳಿದಿತ್ತು. ಆದರೂ ಅವಳಿಗೆ ಒಂದು ರೀತಿಯ ಆಸೆ ಇದ್ದೇ ಇತ್ತು. ಈ ಮಗುವೂ ಅಕಾಲ ಮೃತ್ಯುವಿಗೀಡಾಗಬಹುದೆಂದು! ಈ ಮಗು ಹಸುಗೂಸು, ಇನ್ನೂ ಹದಿನೆಂಟು ತಿಂಗಳು ತುಂಬಿಲ್ಲ. ಈ ಮಗು ಬೆಳೆದು ದೊಡ್ಡದಾದ ಕಾಲಕ್ಕೆ, ತಾನು ಸಾಮ್ರಾಜ್ಯವನ್ನು ನಿರ್ವಹಿಸುವ ಕಾಲಕ್ಕೆ ತಾನೇ ಸಾಮ್ರಾಜ್ಯ ಪದವಿ ತಮ್ಮ ಕೈಯಿಂದ ತಪ್ಪಿಹೋಗುವುದು! ಆದರೂ ಬಾಲರಾಜ

ನನ್ನು ಹೇಗಾದರೂ ನಿವಾರಿಸಬೇಕೆಂದು ಅವಳ ಹಂಬಲ. ಆದರೆ ಸೋಮರಸನು ಅವಳ ಎಲ್ಲ ದುಷ್ಟ ಆಲೋಚನೆಗಳು ಕೈಗೂಡದಂತೆ ಮುಂಜಾಗ್ರತೆ ತೆಗೆದುಕೊಂಡು, ಆ ತಾಯಿಮಕ್ಕಳ ರಕ್ಷಣೆಯ ಬಗ್ಗೆ, ವಿಶೇಷ ವ್ಯವಸ್ಥೆ ಮಾಡಿದ್ದುದರಿಂದ ವರದಾಂಬಿಕೆಯ ಎಲ್ಲ ಹಂಚಿಕೆಗಳೂ ಬುಡಮೇಲಾಗಿತ್ತು. ಅವಳಿಗೆ ಸೋಮರಸನ ಮೇಲೆ ಪ್ರಥಮಬಾರಿಗೆ ಕ್ರೋಧ ಉಂಟಾಗಿತ್ತು.

ಸೋಮರಸನು ಕೃಷ್ಣದೇವರಾಯನ ಆಜ್ಞೆಯಂತೆ, ಅಚ್ಯುತರಾಯನನ್ನು ರಾಜಧಾನಿಗೆ ಕರೆತಂದು ಪಟ್ಟಗಟ್ಟಿದಾಗ, ವರದಾಂಬಿಕೆ ಅವನನ್ನು ಭಾಗ್ಯದೇವತೆ ಎಂದು ಹೊಗಳಿದ್ದಳು. ಅವನ ಬಗ್ಗೆ ಅವಳಿಗೆ ಪೂಜ್ಯತೆ ಉಂಟಾಗಿತ್ತು. ಅವನಿಂದ ತಮಗೆ ಸಾಮ್ರಾಜ್ಯ ದೊರೆಯಿತೆಂದು, ಅವನಿಗಾಗಿ ಯಾವ ಕಾರ್ಯ ಮಾಡಲು ಸಿದ್ಧಳಿದ್ದಳು. ಈಗ ಶತ್ರು ನಿಷ್ಕಂಟಕವಾಗಿ, ತಾನು ಸಾಮ್ರಾಜ್ಞಿಯಾದ ಮೇಲೆ ಅವಳಿಗೆ ಸೋಮರಸನಲ್ಲಿ ಮೊದಲಿನ ಪೂಜ್ಯತೆಯುಳಿಯಲಿಲ್ಲ. ಅವನ ಬಗ್ಗೆ ದ್ವೇಷಾಸೂಯೆಗಳು ತುಂಬಿದುವು. ತಮ್ಮನ್ನು ನಂಬದೆ ರಾಜಕುಮಾರನ ಭಾರವನ್ನು ತಾನೇ ವಹಿಸಿಕೊಂಡನಲ್ಲಾ ಎಂದು. ಅಷ್ಟೇ ಅಲ್ಲದೆ ಕುಮಾರನನ್ನು ರಕ್ಷಿಸುವ ನೆಪದಲ್ಲಿ, ಸಾಮ್ರಾಜ್ಯದಲ್ಲಿ ಪ್ರಭಾವಶಾಲಿಯಾದ ವ್ಯಕ್ತಿಯಾಗಿ, ತಮಗೆ ಪ್ರತಿಸ್ಪರ್ಧಿಯಾಗಿರುವನೆಂದು ಅವಳು ಭಾವಿಸತೊಡಗಿದಳು. ತಮ್ಮನ್ನು ನೆಪಮಾತ್ರಕ್ಕೆ ರಾಜಪ್ರತಿನಿಧಿಯಾಗಿ ಉಳಿಸಿ, ತಾನೇ ಎಲ್ಲ ರಾಜಸೂತ್ರ ಕೈಲಿ ಹಿಡಿಯಬೇಕೆಂದು, ಅವನೂ ತನ್ನಂತೆ ದುರಾಲೋಚನೆ ಮಾಡುತ್ತಿರುವನೆಂದೂ ಅವಳು ಊಹಿಸಿದ್ದಳು. ಅವನ ಬಗ್ಗೆ ಅಚ್ಯುತರಾಯನ ಮನಸ್ಸನ್ನು ಕೆಡಿಸಲು ಹಿಂದೆಗೆಯಲಿಲ್ಲ.

ಸ್ವಭಾವತಃ ರಾಜ್ಯಾಡಳಿತವನ್ನು ಒಂದು ಹೊರೆ ಎಂದು ತಿಳಿದಿದ್ದ ಅಚ್ಯುತರಾಯನಿಗೆ, ತನ್ನ ವಿನೋದ, ಮನರಂಜನೆಗಳಿಗೆ ತನ್ನನ್ನು ಬಿಟ್ಟು, ರಾಜ್ಯಾಡಳಿತದ ಭಾರವನ್ನು ಹೊತ್ತು ದಕ್ಷತೆಯಿಂದ ನಿರ್ವಹಿಸಲು ಮುಂದೆ ಬಂದ ಸೋಮರಸನಿಗೆ ಎಲ್ಲವನ್ನು ಒಪ್ಪಿಸಿ ತಾನು ನಿಶ್ಚಿಂತೆಯಿಂದ ಇರಬಹುದಾದ ಸುಯೋಗ ಒದಗಿದುದಕ್ಕಾಗಿ ಸಂತೋಷವಾಗಿತ್ತು. ಈ ಒಂದು ರೀತಿಯಲ್ಲಿ ಅವನು ಸೋಮರಸನಿಂದ ಉಪಕೃತನೇ ಆಗಿದ್ದ. ಅವಕಾಶ ದೊರಕಿದಾಗ ಅದನ್ನು ಸದುಪಯೋಗಪಡಿಸಿಕೊಂಡು, ಪದವಿಗೆ ತಕ್ಕ ಅರ್ಹತೆಯನ್ನು ಸಂಪಾದಿಸಿ ಪ್ರಜಾಕೋಟಿಯು, ತಾವು ಅಸಮರ್ಥ ಹೇಡಿಯನ್ನು ಸಿಂಹಾಸನದ ಮೇಲೆ ಕೂಡಿಸಿ ಅವಿವೇಕ ಮಾಡಿದೆವೆಂದು ತಿಳಿಯದಂತೆ, ದಕ್ಷತೆಯಿದ ರಾಜ್ಯವಾಳಿ, ಅಜರಾಮರ ಕೀರ್ತಿಗೆ ಪಾತ್ರರಾಗುವ ಬದಲು, ಮೊದಲಿನ ಬೇಜವಾಬ್ದಾರಿಯ ಜೀವನವನ್ನೇ ಅಚ್ಯುತರಾಯನು ಅಪೇಕ್ಷಿಸುವುದನ್ನು ಅರಿತು ವರದಾಂಬಿಕೆಗೆ ಬೇಸರವಾಗಿತ್ತು.

ಅಚ್ಯುತರಾಯನು ರಾಜ್ಯಾಡಳಿತದಲ್ಲಿ ಆಸಕ್ತಿ ವಹಿಸಲು ಅವಳು ಮಾಡಿದ ಎಲ್ಲ ಪ್ರಯತ್ನ ವಿಫಲವಾಗಿತ್ತು. ಜರೆದು ಹೇಳಿದ್ದಾಯಿತು. ಕಾಂತಾ ಸಮ್ಮಿತಿಯಲ್ಲಿ ಉಪದೇಶವಿತ್ತುದಾಯಿತು. ಅವಳ ಯಾವ ಮಾತೂ ಪರಿಣಾಮಕಾರಿಯಾಗಲಿಲ್ಲ. ಇದರಿಂದ ಅವನಿಗೆ ವರದಾಂಬಿಕೆಯ ಬಗ್ಗೆ ಅಸಮಾಧಾನ ಹೆಚ್ಚಿತೇ ಹೊರತು, ಯಾವ ಪ್ರಯೋಜನವೂ ಆಗಲಿಲ್ಲ.

ತಾವು ಉಂಡುಟ್ಟು, ಸಾಮ್ರಾಟರಾಗಿ ಮೆರೆದು ಸುಖವಾಗಿ ಇರುವ ಯೋಗ ಬಂದಾಗ, ಇಲ್ಲದ ಕಾಷ್ಟವ್ಯಸನಗಳನ್ನು ಹಚ್ಚಿಕೊಂಡು ಏಕೆ ಕೊರಗಬೇಕೆಂದು ಅಚ್ಯುತರಾಯನ ವಾದ ದೈಭೀರುವಾದ ಅವರಿಗೆ, ದೈವಕಾರ್ಯ, ದಾನಧರ್ಮಗಳನ್ನು ಮಾಡಿಕೊಂಡು, ತನಗೆ ದೊರೆತ ವಿರಾಮವನ್ನು ರಾಜಕೀಯ ಆಡಳಿತ ಕೋಟಲೆಗಳಿಲ್ಲದೆ ಸುಖಸಂತೃಪ್ತಿಗಳಿಂದ ಸದ್ವಿನಿಯೋಗಿಸುವುದೇ ಅವನ ಜೀವತಾದರ್ಶನವಾಗಿತ್ತು. ಇಂತಹ ಅವಕಾಶ ಅವನಿಗೆ ಅನಾಯಾಸವಾಗಿ ದೊರೆತಿತ್ತು.

ಒಮ್ಮೆಯಂತೂ ತನಗೆ ಉಪದೇಶಿಸಲು ಬಂದ ಪತ್ನಿಯಮೇಲೆ ಕೆರಳಿ ಹೀಗೆ ಹೇಳಿದ್ದ, “ಇದು ನಮಗೆ ಶಾಶ್ವತವಲ್ಲ. ನಾವು ತಾತ್ಕಾಲಿಕಕ್ಕೆ ಸಾಮ್ರಾಟರಾದರೂ, ನಾವು ರಾಜ ಪ್ರತಿನಿಧಿಗಳು. ನಮ್ಮದಲ್ಲದ ನಮ್ಮದಾಗದ ಪದವಿಯ ಸಲುವಾಗಿ ನಾವೇಕೆ ಇಲ್ಲದ ಚಿಂತೆ ಹಚ್ಚಿಕೊಳ್ಳಬೇಕು?”

ಈ ಮಾತಿಗೆ ಅಷ್ಟೇ ಸಹಜವಾಗಿ ವರದಾಂಬಿಕೆ ಉತ್ತರಕೊಟ್ಟಳು.

“ಹೌದು ನಿಜ, ನಾವು ರಾಜಪ್ರತಿನಿಧಿಗಳು. ಆದರೆ ನಿಮ್ಮಂತಹ ಮೂರ್ಖರನ್ನು ನಾನೆಲ್ಲೂ ಕಂಡಿಲ್ಲ, ಕಾಣುವುದೂ ಇಲ್ಲ! ಸಾಮ್ರಾಟ ಪದವಿ ಎಲ್ಲರಿಗೂ ದೊರಕುವ ವಸ್ತುವಲ್ಲ. ಇದು ಬಯಸಿಪಡೆಯುವ ಭಾಗ್ಯವಲ್ಲ. ರಾಜಯೋಗವಿದ್ದರೆ ಮಾತ್ರ – ಪೂರ್ವಾರ್ಜಿತ ಪುಣ್ಯವಿಶೇಷದಿಂದ ಮಾತ್ರವೇ ದೊರೆಯುವುದು. ಇದು ದೊರೆತಾಗ, ಇದನ್ನು ನಮ್ಮದಾಗಿಸಿಕೊಳ್ಳುವ ಪ್ರಯತ್ನಮಾಡುವುದನ್ನು ಬಿಟ್ಟು, ಅನ್ಯರ ಪಾಲಾಗಲು ಅವಕಾಶ ಕೊಡುವುದೇ? ಸಾಮ್ರಾಜ್ಯಪದವಿ ನಿಮ್ಮಂಥಹ ವಿಲಾಸಿಗಳಿಗಲ್ಲ – ಗೊಡ್ಡು ಸನ್ಯಾಸಿಗಳಿಗಲ್ಲ. ಕೃಷ್ಣದೇವರಾಯರು ನೀವು ಕಬ್ಬಿನ ಹೊಟ್ಟೆಯಲ್ಲಿ ಹುಟ್ಟಿದ ಸುಟ್ಟಿದ ಸೂಲಂಗಿ ಎಂದು ತಿಳಿಯದೆ ಮೋಸಹೋದರು!”

“ನೀನು ನನ್ನನ್ನೇಕೆ ವೃಥಾ ದೂಷಿಸುತ್ತಿದ್ದಿ? ನಾನೇನು ಮಾಡಬೇಕೆಂದು ನಿನ್ನ ಅಪೇಕ್ಷೆ? ಅದನ್ನು ನೀನು ಬಳಸಿ ಬಳಸಿ ಹೇಳದೆ ನೇರವಾಗಿ ಹೇಳಬಾರದೆ?”

“ನಾನು ಹೇಳುವುದಿಷ್ಟು ನಮಗೆ ಅನಾಯಾಸವಾಗಿ ದೊರೆತಿರುವ, ಈ ಸಿಂಹಾಸನವನ್ನು ಶಾಶ್ವತವಾಗಿ ನಮ್ಮದಾಗಿಸಿಕೊಳ್ಳುವುದು! ನಮ್ಮ ಪುತ್ರ

ಪೌತ್ರರು ಎಂದೆಂದಿಗೂ ಇದನ್ನು ಅನುಭವಿಸುವಂತೆ ಮಾಡುವುದು!"

"ಇದು ಹೇಗೆ ಸಾಧ್ಯ?"

"ಏಕೆ ಸಾಧ್ಯವಿಲ್ಲ? ನಾವು ಅಧಿಕಾರದಿಂದ ಸಾಮ್ರಾಟರಲ್ಲ – ರಾಜ ಪ್ರತಿನಿಧಿಗಳು ಮಾತ್ರ! ಅಂತಲೇ ನಾನು ಹೇಳುವುದು!"

"ಇದು ಹೆಗಾದೀತು?"

"ಏಕಾಗಬಾರದು? ನೀವು ಕೃಷ್ಣದೇವರಾಯನಂತೆ, ಶ್ರೀಮನ್ನರಸ ರಾಜೇಂದ್ರರ ಕುಮಾರರಲ್ಲವೇ? ವೀರನರಸಿಂಹರ ತರುವಾಯ ಅವರಿಗೆ ದೊರೆ ತಂತೆ ಸಿಂಹಾಸನ ಈಗ ನಮ್ಮದಾಗಬಾರದೇಕೆ? ನೀವು ಇದನ್ನು ಊರ್ಜಿತ ಗೊಳಿಸಿಕೊಳ್ಳಬೇಕು. ನಿಮಗೆ ಪ್ರತಿಸ್ಪರ್ಧಿಯಾಗಿರುವ ಆ ಕುಮಾರನನ್ನು ನಿವಾರಿಸಿ ಹಕ್ಕುದಾರಿಕೆಯನ್ನು ಸ್ಥಿರಪಡಿಸಿಕೊಳ್ಳಬೇಕು...."

"ನನ್ನನ್ನು ಈ ಸ್ಥಿತಿಗೆ ತಂದ ಕೃಷ್ಣದೇವರಾಯನಿಗೆ ಕೃತಘ್ನನಾಗುವುದೇ, ನಾನು ಸಾಮ್ರಾಟ ಪದವಿಗೇರಲು ಕಾರಣನಾದ ಆ ನಿರಪರಾಧಿ ಹಸುಳೆಯನ್ನು – ತೌಳವಂಶದ ಮೊಳಕೆಯನ್ನು ಹೊಸೆದುಹಾಕುವುದೇ? ನಾನಿನ್ನೂ ಅಷ್ಟು ಪಶುವಾಗಿಲ್ಲ – ನನ್ನಲ್ಲಿ ಇನ್ನೂ ಮಾನವತೆ ಉಳಿದಿದೆ. ಸಿಂಹಾಸನ ದೊರೆಯದಿದ್ದರೂ ಚಿಂತೆಯಿಲ್ಲ...."

"ಹಾಗಾದರೆ ನಮ್ಮ ಕುಮಾರ ವೆಂಕಟಾದ್ರಿ ಸಾಮ್ರಾಟರ ಹೊಟ್ಟೆಯಲ್ಲಿ ಹುಟ್ಟಿಯೂ ಅನಾಮಿಕರಂತೆ, ಬಾಳಬೇಕೆಂದು ನಿಮ್ಮ ಆಸೆಯೇ?"

"ಅವನ ಹಣೆಯಲ್ಲಿ ಏನು ಬರೆದಿದೆಯೋ ಕಂಡವರು ಯಾರು? ಇದುವರೆಗೆ ನಿರ್ಬಂಧದಲ್ಲಿದ್ದ ನನಗೆ, ಸಲಕಂ ಸೋದರರು ಕೊಂಡಮರಸಯ್ಯನವರ ಕೊಲೆಮಾಡಿ, ಕೃಷ್ಣದೇವರಾಯನ ಮನಸ್ಸು ಕೆಡಿಸಿದ ಮೇಲೂ, ಅಳಿಯಂದಿರನ್ನು ನಿರ್ಲಕ್ಷಿಸಿ, ನನಗೆ ಸಾಮ್ರಾಟಪದವಿ ದೊರಕುವುದೆಂದು ಯಾರು ತಿಳಿದಿದ್ದರು. ಇಷ್ಟೆಲ್ಲ ಆದರೂ ನನಗೆ ಸಾಮ್ರಾಟ್ ಪದವಿ ದೊರೆಯಿತು ಎಂದ ಮೇಲೆ – ಕುಮಾರ ವೆಂಕಟಾದ್ರಿಯ ಹಣೆಯಲ್ಲಿ ಏನು ಬರೆದಿದೆಯೋ ಕಂಡವರು ಯಾರು?"

"ಹಾಗಾದರೆ ಕುಮಾರನ ಭವಿಷ್ಯ ನಿರ್ಧರವಾದಂತಾಯಿತು!" ಎಂದು ಕಂಬನಿ ಸುರಿಸುತ್ತಾ ಅಲ್ಲಿಂದ ಹೊರಟುಹೋದವಳು ಪುನಃ ಅಚ್ಯುತರಾಯನೊಡನೆ ಆ ಬಗ್ಗೆ ಮಾತು ತೆಗೆದಿರಲಿಲ್ಲ.

ಇಂದು ಅವಳು ಅಚ್ಯುತರಾಯನೆದುರಿಗೆ ದೊಡ್ಡ ರಂಪವನ್ನೇ ಮಾಡಿದಳು.

"ನೋಡಿ, ನಿಮ್ಮ ಪಾದಸೇವಕರ ದರ್ಪ ಎಷ್ಟೆಂದು ಈಗಲಾದರೂ ತಿಳಿಯಿತೆ? ಹೆಸರಿಗೆ ನೀವು ಪ್ರಭುಗಳು ನಾನು ಮಹಾರಾಣಿ! ನಮ್ಮ ಸೇವಕರು

ನಮ್ಮ ಮಾತನ್ನು ಧಿಕ್ಕರಿಸಿ ನಡೆಯುತ್ತಿದ್ದಾರೆ. ಇಂತಹ ಅಧಿಕಾರ - ಪದವಿ ಯಾರಿಗೆ ಬೇಕು" ಎಂದು ರೋಧಿಸಿದಳು ವರದಾದೇವಿ.

"ಏನಾಯಿತು ವರದಾ, ನಡೆಯಬಾರದ ಅಚಾತುರ್ಯ ಅದೇನು ನಡೆಯಿತು ಹೇಳು? ನಿನ್ನನ್ನು ಯಾರು ಧಿಕ್ಕರಿಸಿದರು? ಅಪಮಾನ ಮಾಡಿದರು? ಆ ದ್ರೋಹಿಗಳು ಯಾರು ಹೇಳು? ಸಾಮ್ರಾಟರೆಂದರೆ ಅವರಿಗೆ ಅಷ್ಟು ಅಸಡ್ಡೆಯಾಯಿತೆ?" ಎಂದು ರೋಷಾವೇಶದಿಂದ ಕೆರಳಿ ಹೇಳಿದ ಅಚ್ಯುತರಾಯ.

"ನನ್ನನ್ನು - ಸಾಮ್ರಾಜ್ಞಿಯನ್ನು ತಡೆಯುವ ಅಧಿಕಾರ ಇನ್ನು ಯಾರಿಗೆ ಇದೆ! ಆ ನಿಮ್ಮ ಸೋಮರಸ - ನಿಮ್ಮ ನೆಚ್ಚಿನ ಪ್ರಧಾನಿ ಸೋಮರಸನಿಗಲ್ಲದೆ ಮಹಾರಾಣಿಯನ್ನು ಇಷ್ಟು ತುಚ್ಛವಾಗಿ ಕಾಣುವ ಧೈರ್ಯ ಇನ್ನಾರಿಗಿದೆ?"

"ಏನು ಪ್ರಧಾನಿ ಸೋಮರಸರು ನಿನಗೆ ಅಪಮಾನ ಮಾಡಿದರೆ? ಆಶ್ಚರ್ಯ! ಪರಮಾಶ್ಚರ್ಯ!"

"ಅವರು ಮಾಡಲಿಲ್ಲ - ಅವರ ಸೇವಕರು ಮಾಡಿದರು. ಅವರಿಗೂ ಕೀಳಾಯಿತು ನಮ್ಮ ಬಾಳು!"

"ಏನಾಯಿತು ವಿವರವಾಗಿ ಹೇಳಬಾರದೆ?" ಎಂದು ಬೇಸರಗೊಂಡು ಕೇಳಿದಾಗ ವರದಾಂಬಿಕೆ ನಡೆದ ಎಲ್ಲ ಸಂಗತಿಯನ್ನು ಬಣ್ಣಗಟ್ಟಿ ಹೇಳಿದಳು.

ವರದಾದೇವಿಯು ಆ ದಿನ ಅರಮನೆಯಲ್ಲಿ ಬೇಸರವಾಗಿ, ಬಹಳ ದಿನಗಳಿಂದಲೂ ಕಾಣದಿದ್ದ ಅನ್ನಪೂರ್ಣಾದೇವಿಯನ್ನೂ, ಅವಳ ಕುಮಾರನನ್ನೂ ಕಂಡು ಬರಲು, ದಾಸಿಯೊಡನೆ, ಹಣ್ಣು ಹಂಪಲುಗಳನ್ನು ತೆಗೆಯಿಸಿಕೊಂಡು ಅನ್ನಪೂರ್ಣಾದೇವಿಯ ಅರಮನೆಗೆ ಬಂದಳು.

ತನ್ನ ಅಪ್ಪಣೆಯಿಲ್ಲದೆ ಯಾರನ್ನೂ ಒಳಗೆ ಬಿಡಬಾರದೆಂಬ ಸೋಮರಸನ ಆಜ್ಞೆಯನ್ನು ನೆನೆದು, ಅರಮನೆಯ ಸೇವಕರು ಬಾಗಿಲಲ್ಲೇ ವರದಾಂಬಿಕೆಯನ್ನು ತಡೆದರು. ಕಾರಣಕೇಳಲು ಸೋಮರಸನ ಆಜ್ಞೆಯಿಲ್ಲದೆ ಯಾರನ್ನೂ ಬಿಡುವುದಿಲ್ಲವೆಂದರು. ಅಷ್ಟು ಜನರೆದುರಿಗೆ ತನ್ನನ್ನು ತಡೆದು ಮಾಡಿದ ಅಪಮಾನಕ್ಕೆ, ಮುಖಭಂಗವಾದಂತಾಗಿ ಅಚ್ಯುತರಾಯನೊಡನೆ ದೂರು ಹೇಳಿದ್ದಳು.

"ಆ ನಿಮ್ಮ ಸೋಮರಸನಿಗೆ ನಮ್ಮ ವಿಷಯದಲ್ಲೂ ನಂಬಿಕೆಯಿಲ್ಲ. ಸಾಮ್ರಾಟರು ಮಹಾಪ್ರಧಾನಿಗಳ ಅನುಮತಿಯಿಲ್ಲದೆ, ತಮ್ಮ ಸಹೋದರರ ಪುತ್ರರನ್ನು ನೋಡಲು ಅವಕಾಶವಿಲ್ಲ! ಎಷ್ಟೆಂದರೂ ನಮ್ಮನ್ನು ಅಧಿಕಾರಕ್ಕೆ ತಂದವರಲ್ಲವೇ ಅವರು. ಇವರ ಇಚ್ಛೆಯಂತೆ ನಡೆಯಬೇಕು - ನಮ್ಮ ಎಲ್ಲ ಚಲನ ವಲನಗಳಿಗೂ ಅವರ ಅಪ್ಪಣೆ ಬೇಕು - ಹೀಗಿದೆ ಸಾಮ್ರಾಜ್ಯ ಪದವಿ! ಇಂತಹ ಪದವಿಗಿಂತಲೂ ಆ ಸೆರೆಮನೆಯೇ ನಮಗೆ ಎಷ್ಟೋ ಹಿತಕರವಾಗಿತ್ತು!

ಅಲ್ಲಿ ಸ್ವತಂತ್ರವಿಲ್ಲದಿದ್ದರೂ ಈಬಗೆಯ ಸುಖ ಭಂಗವಿರಲಿಲ್ಲ! ನಾವು ಸಾಮ್ರಾಟರು – ವಾಸ್ತವವಾಗಿ ಅವರ ಸೂತ್ರದ ಬೊಂಬೆಗಳು! ಇಂತಹ ಸಾಮ್ರಾಟ ಪದವಿಗೆ ಧಿಕ್ಕಾರವಿರಲಿ!" ರೋಷಾವೇಶದಲ್ಲಿ ನುಡಿದಳು.

ಅಚ್ಯುತರಾಯನಿಗೆ ಸೋಮರಸನು ತನ್ನನ್ನು ಧಿಕ್ಕರಿಸುವಷ್ಟು ಸೊಕ್ಕಿರುವನೆಂದು ಎಷ್ಟು ಆಲೋಚಿಸಿದರೂ ನಂಬುವುದು ಕಷ್ಟವಾಯಿತು. ಇರಲಾರದು ಯಾರೋ ಸೇವಕರು ತಿಳಿಯದೆ, ವಿಚಾರಶೂನ್ಯರಾಗಿ ವರ್ತಿಸಿರಬೇಕು ಎಂದುಕೊಂಡು ಮತ್ತೆ ವಿಚಾರಿಸಿದ.

"ಹಾಗಾದರೆ ನಾನು ನಿಮಗೆ ಸುಳ್ಳು ಹೇಳುವೆನೆಂದು ನಿಮ್ಮ ಭಾವನೆಯೆ?"

"ಹಾಗಲ್ಲ ವರದಾ...."

"ನನ್ನ ಮಾತು ಸುಳ್ಳೆನಿಸುವುದಾದರೆ ಆ ಸೋಮರಸನನ್ನೇ ಕರೆದು ವಿಚಾರಿಸಿ."

"ಅವರನ್ನು ವಿಚಾರಿಸುವ ಮೊದಲು ವಾಸ್ತವಾಂಶ ತಿಳಿಯಲು ಕೇಳದೆ ಬೇಸರಗೊಳ್ಳಬೇಡ ನಿನಗೆ ಅಪಮಾನವಾದರೇನು – ನನಗೆ ಅಪಮಾನವಾದರೇನು – ನಮಗಿಲ್ಲದಿದ್ದರೂ ಈ ಪದವಿಗಾದರೂ ಮನ್ನಣೆ ಬೇಡವೇ?"

"ನಿಮಗೆ ಈಗಲಾದರೂ ವಿವೇಕೋದಯವಾಯಿತಲ್ಲ. ಅದೇ ನನ್ನ ಪುಣ್ಯ! ನೀವು ಎಲ್ಲವನ್ನು ಕಣ್ಮುಚ್ಚಿ ಅವನಿಗೊಪ್ಪಿಸಿ ಕುಳಿತರೆ ನಿಮಗೇನು ತಿಳಿದೀತು? ಅನ್ನಪೂರ್ಣಾದೇವಿಯ ಕುಮಾರನನ್ನು ಇಲ್ಲಿಂದ ಕರೆದೊಯ್ದು ಬೇರೆ ಅರಮನೆಯಲ್ಲಿ ಇಟ್ಟಿರುವ ಸಂಗತಿ ನಿಮಗೆ ತಿಳಿಸಿದ್ದಾರೆಯೇ?"

"ತಿಳಿದಿದೆ!"

"ಅವರನ್ನು ಸ್ಥಳಾಂತರಿಸಲು ಕಾರಣ ತಿಳಿದಿದೆಯೆ?"

"ಇದ್ದ ಅಂತಃಪುರ ಸಾಲದೆಂದು!"

"ಅದು ತೋರಿಕೆಗೆ ನಿಜವಾದ ಕಾರಣ. ಅವರನ್ನು ನಮ್ಮೆಲ್ಲರಿಂದ ದೂರವಿಡಲು, ನಮ್ಮಿಂದ ಅವರಿಗೆ ಯಾವುದಾದರೂ ತೊಂದರೆ, ಅಪಾಯ ಸಂಭವಿಸಬಹುದೆಂದು ಹೆದರಿ!"

"ನಮ್ಮಿಂದ ಕುಮಾರನಿಗೆ ಅಪಾಯವೇ?"

"ಹೌದು! ಇಲ್ಲದಿದ್ದರೆ ಬೇರೆ ಅರಮನೆಯಲ್ಲಿ ಸರ್ಪಕಾವಲಿಟ್ಟು ನೋಡಲು ಬರುವವರು ತಮ್ಮ ಆಜ್ಞೆಯನ್ನು ತೆಗೆದುಕೊಂಡು ಬರಬೇಕೆನ್ನುವುದರ ಅರ್ಥವೇನು?"

"ಹೌದು ಈ ಆಜ್ಞೆಯ ಅರ್ಥವೇನು?" ಅಚ್ಯುತರಾಯ ಅಚ್ಚರಿಪಟ್ಟ.

"ನಿಮಗೆ ಇನ್ನೂ ಅವನ ಕಾರಾಗಾರ ತಿಳಿಯದಲ್ಲ. ನಮ್ಮಿಂದ ಕುಮಾರನನ್ನು ದೂರವಿಟ್ಟು, ಅವನ ರಕ್ಷಣೆಯ ಹೆಸರಿನಲ್ಲಿ, ತಾನೇ ರಾಜ್ಯಕ್ಕೆ

ಏಕೈಕ ಅಧಿಪತಿಯಾಗಿ ಮೆರೆಯಬೇಕೆಂದು ಆಶಿಸಿದ್ದಾನೆ! ಎಲ್ಲ ವೇಷ! ನಮ್ಮನ್ನು ತನ್ನಡಿಯಾಳಾಗಿ ಮಾಡಿಕೊಳ್ಳುವುದೇ ಇದರ ಅರ್ಥ. ನಾವು ಇನ್ನು ಕಣ್ಮುಚ್ಚಿ ಕುಳಿತರೆ, ನಮ್ಮನ್ನು ಮೂಲೆಗೊತ್ತಿ ಅವರೇ ಸರ್ವಾಧಿಕಾರಿಯಾಗುತ್ತಾರೆ. ಈಗ ನಾವು ಎಚ್ಚರಗೊಳ್ಳದಿದ್ದರೆ ಸಾಮ್ರಾಜ್ಯಕ್ಕೆ ಗಂಡಾಂತರ ಬಂದೀತು!"

ಏಕೋ ಇದನೆಲ್ಲವನ್ನೂ ಆಲೋಚಿಸಲೂ ಹೆದರಿದ ಅಚ್ಯುತರಾಯ. ಸದ್ಯಕ್ಕಂತೂ ಸಾಮ್ರಾಜ್ಯದಲ್ಲೆಲ್ಲೂ ಪ್ರಭಾವಶಾಲಿಯಾದ ವ್ಯಕ್ತಿಯಾದ ಅವನನ್ನು ಅಧಿಕಾರದಿಂದ ಕೆಳಗೆ ಉರುಳಿಸುವುದು ಸಾಧ್ಯವಿರಲಿಲ್ಲ. ಅವನ ಅಧಿಕಾರವನ್ನು ಕ್ರಮಕ್ರಮವಾಗಿ ಕಡಿಮೆಮಾಡಿ, ಅವನನ್ನು ತಮ್ಮ ಇಚ್ಛಾನುವರ್ತಿಯಾಗಿ, ಮಾಡಿಕೊಳ್ಳುವುದೇ ತಮಗೆ ಇರುವದಾರಿ! ಎಂದು ಆಲೋಚಿಸಿ ಪತ್ನಿಯೊಡನೆ ಆಬಗ್ಗೆ ಒಂದು ಕಾರ್ಯಕ್ರಮದ ರೂಪರೇಷೆಯನ್ನು ಸಿದ್ಧಗೊಳಿಸಿದ.

೫

ಮಾರನೆಯದಿನ ಅಚ್ಯುತರಾಯನು ಸೋಮರಸನನ್ನು ತನ್ನ ಬಳಿಗೆ ಕರೆಸಿಕೊಂಡು, ಹಿಂದಿನ ದಿನ ನಡೆದ ಯಾವ ಘಟನೆಯ ಸುಳಿವೂ ಕೊಡದೆ, ಅದೂ ಇದೂ ಮಾತನಾಡುತ್ತಾ ಸಹಜವಾಗಿ ಕೇಳಿದನು.

"ಅಮಾತ್ಯರೇ, ರಾಜಕುಮಾರನನ್ನು ನಾನು ನೋಡಿ ಬಹಳ ದಿನಗಳಾಯಿತು. ಕುಮಾರರೂ ಮಹಾರಾಣಿಯವರೂ ಆರೋಗ್ಯದಿಂದಿರುವರೇ?"

"ಪಂಪಾಪತಿಯ ಅನುಗ್ರಹದಿಂದ ಆರೋಗ್ಯವಾಗಿದ್ದಾರೆ ಪ್ರಭು."

"ನಿನ್ನೆಯದಿನ ಮಹಾರಾಣಿ ವರದಾಂಬಿಕೆ ಕುಮಾರನನ್ನು ನೋಡಿ ಬರಲು ಹೋಗಿದ್ದಳು. ಆದರೆ ಅರಮನೆಯ ಪಹರೆಯವರು ನಿಮ್ಮ ಅಪ್ಪಣೆಯಿಲ್ಲದೆ ಯಾರನ್ನೂ ಒಳಗೆ ಬಿಡುವುದಿಲ್ಲವೆಂದು ತಡೆದುದರಿಂದ ಹಿಂದಿರುಗಿ ಬಂದಳು."

"ಈ ಸುದ್ದಿ ನನಗೂ ತಿಳಿಯಿತು ಪ್ರಭು! ಅಂತಃಪುರದ ಸೇವಕರಿಂದ ಮಹಾರಾಣಿಯವರಿಗೆ ಅಪಚಾರವಾಗಿದ್ದರೆ ಕ್ಷಮಿಸಬೇಕು. ಅವರಿಗೆ ಹಾಗೆ ಆಜ್ಞೆ ಮಾಡಲಾಗಿತ್ತು – ಮಹಾರಾಣಿಯವರು ನನಗೆ ಒಂದು ಮಾತು ತಿಳಿಸಿದ್ದರೆ....ನಾನೇ ಕುಮಾರನನ್ನು ಬಳಿಗೆ ಕಳುಹಿಸುತ್ತಿದ್ದೆ."

"ಚಿಂತೆಯಿಲ್ಲ. ಕುಮಾರನನ್ನು ಕಾಣಲು ತಾವೂ ಅಪ್ಪಣೆ ಪಡೆಯಬೇಕೆ ಎಂದು ಮಹಾರಾಣಿಯವರು ಬೇಸರಗೊಂಡರು.... ಇಷ್ಟೇಕೆ ನಿರ್ಬಂಧ ಹಾಕಿದ್ದೀರೋ ತಿಳಿಯದಾಗಿದೆ. ನಮ್ಮ ಮೇಲೂ ನಿಮಗೆ ಸಂಶಯವೇ?"

" ಪ್ರಭು, ನನ್ನಿಂದ ಅಪರಾಧವಾಗಿದ್ದರೆ ಕ್ಷಮಿಸಬೇಕು. ಇದು ಸಂಶಯದ ಪ್ರಶ್ನೆಯಲ್ಲ – ನಾನು ನನ್ನ ಕರ್ತವ್ಯವನ್ನು ಪಾಲಿಸುತ್ತಿದ್ದೇನೆ."

" ನಿಮ್ಮ ಕರ್ತವ್ಯ ?"

" ಕುಮಾರನ ಕೂದಲು ಕೊಂಕಾಗದಂತೆ ನೋಡಿಕೊಳ್ಳುವುದಾಗಿ ಅಗಲಿದ ಮಹಾಪ್ರಭುಗಳಿಗೆ ವಚನವಿತ್ತಿದ್ದೇನೆ. ಪ್ರಭುಗಳಿಗೆ ತಿಳಿದಿದೆ – ಕುಮಾರರ ಜೀವ ಎಷ್ಟು ಅಮೂಲ್ಯವಾದುದೆಂದು – ಅವರು ಪ್ರಾಪ್ತವಯಸ್ಸಿಗೆ ಬರುವವರೆಗೂ, ಅವರನ್ನು ಕಾಪಾಡುವುದು ಎಂತಹ ಗುರುತರ ಜವಾಬ್ದಾರಿ ಎಂದು ಸಿಂಹಾಸನಕ್ಕಾಗಿ ದ್ರೋಹಿಗಳು ಕುಮಾರನ ಮೇಲೆ ಕೈಮಾಡುವುದು ಹೆಚ್ಚಲ್ಲ. ಅಂತಹವರಿಂದ ರಕ್ಷಿಸಲು ನಾನು ಮುಂಜಾಗ್ರತೆ ತೆಗೆದುಕೊಂಡಿದ್ದೇನೆ ಅಷ್ಟೆ !"

" ಈಗಲೂ ಸಿಂಹಾಸನ ಸುರಕ್ಷಿತವಾಗಿಲ್ಲವೆಂದು ನಿಮ್ಮ ಭಾವನೆಯೇ."

" ಅರಮನೆಯಲ್ಲಿ, ವಿಶ್ವಾಸಿಗಳ ಸೋಗಿನಲ್ಲಿ ವಿದ್ರೋಹಿಗಳು ಇರುವತನಕ ಸಿಂಹಾಸನ ಅಭದ್ರವೇ ಪ್ರಭು. ಕ್ಷಣಕಾಲ ಎಚ್ಚರತಪ್ಪಿದರೆ ಸಾಮ್ರಾಜ್ಯಕ್ಕೆ ಗಂಡಾಂತರ ಬಂದೀತು !"

" ನೀವು ಯಾರನ್ನು ಸಂದೇಹಿಸುತ್ತಿದ್ದೀರೊ ನನಗೆ ತಿಳಿಯದಾಗಿದೆ !"

" ನಿಮ್ಮ ಪಟ್ಟಾಭಿಷೇಕವನ್ನು ಯಾರು ವಿರೋಧಿಸಿದರೋ ಅವರನ್ನು. ಈಗ ರಾಜ್ಯಾಡಳಿತದ ಪ್ರಮುಖ ಅಧಿಕಾರಿಗಳು ಅವರೇ ಆಗಿದ್ದಾರೆ. ಅವರು ಅಧಿಕಾರೋನ್ಮತ್ತರಾಗಿ, ಸಾಮ್ರಾಜ್ಯಕ್ಕೆ ದ್ರೋಹಚಿಂತನ ಬಗೆಯದಂತೆ ನಾವು ಮೈಯೆಲ್ಲಾ ಕಣ್ಣಾಗಿಸಿ ನೋಡಬೇಕಾಗಿದೆ."

" ಆದರೆ ನೀವಿರುವವರೆಗೆ ಸಾಮ್ರಾಜ್ಯಕ್ಕೆ ಯಾವ ಭಯವಿದೆ ?"

" ಸಾಮ್ರಾಜ್ಯದ ವಿರುದ್ಧ ರಾಷ್ಟ್ರ ಶಕ್ತಿಗಳೆಲ್ಲ, ಒಟ್ಟುಗೂಡಿದರೆ ಒಬ್ಬ ವ್ಯಕ್ತಿ ಏನು ತಾನೆ ಮಾಡಲು ಸಾಧ್ಯ ?"

"ದೈವ ಸಹಾಯವಿದ್ದರೆ ಹುಲ್ಲುಕಡ್ಡಿಯೂ ಬಹ್ಮಾಸ್ತ್ರವಾಗುತ್ತದೆ ಅಮಾತ್ಯರೇ"

" ಅದನ್ನೇ ನಾನು ಹಗಲಿರುಳೂ ಬೇಡುತ್ತಿರುವುದು – ನಾನು ಹೊತ್ತಿರುವ ಸಾಮ್ರಾಜ್ಯದ ಹೊರೆಯನ್ನು ಯಶಸ್ವಿಯಾಗಿ ನಿರ್ವಹಿಸಲು, ಪ್ರಭುಗಳಿಗೆ ನಾನು ಕೊಟ್ಟಿರುವ ವಾಗ್ದಾನವನ್ನು ಪಾಲಿಸಲು ಶಕ್ತಿಯನ್ನು ಪಂಪಾಪತಿಯು ಕರುಣಿಸಲೆಂದು."

" ಈ ಹೊರೆ ಎಷ್ಟು ಗುರುತರವಾದುದೆಂದು ನಾನು ಬಲ್ಲೆ. ನೀವು ಅನ್ಯಥಾ ಭಾವಿಸದಿದ್ದರೆ ರಾಜ್ಯಾಡಳಿತದಲ್ಲಿ ಕುಮಾರನ ರಕ್ಷಣೆಯ ಚಿಂತೆಯಿಂದ ನೀವು ಕಂಗೆಡಬಾರದು. ಈ ಜವಾಬ್ದಾರಿಯನ್ನು ನನಗೆ ವಹಿಸಿ ನಿಶ್ಚಿಂತೆಯಿಂದ ನೀವು ಇರಬೇಕೆಂದು ನನ್ನ ಕೋರಿಕೆ, ನನ್ನ ಬಳಿ ಇರಲಿ. ಅವನು ಬೇರೆ,

ನನ್ನ ಮಗ ವೆಂಕಟಾದ್ರಿ ಬೇರೆ ಎಂದು ನಾನು ತಿಳಿದಿಲ್ಲ. ಅವರಿಬ್ಬರೂ ನಮ್ಮ ವಂಶದ ಎರಡು ಹೂಗಳು ಅದನ್ನು ಪಾಲಿಸುವ ಭಾರ ನನಗಿರಲಿ!"

"ನಿಮ್ಮ ಸೂಚನೆ ಶ್ಲಾಘ್ಯವಾಗಿದೆ ಪ್ರಭು! ಆದರೆ ಈ ಬಗ್ಗೆ ನಾನೇನೂ ಹೇಳಲಾರೆ. ಮಹಾರಾಣಿ ಅನ್ನಪೂರ್ಣಾದೇವಿಯವರು ಅರಮನೆಯಲ್ಲಿ ನಿಮ್ಮ ರಕ್ಷಣೆಯಲ್ಲಿರಲು ಒಪ್ಪುತ್ತಾರೋ ಇಲ್ಲವೋ ಹೇಳಲಾರೆ ಅವರ ಅಭ್ಯಂತರವಿಲ್ಲದಿದ್ದರೆ ಕುಮಾರರು ಇಲ್ಲೇ ಇರಬಹುದು."

"ಅವರ ಮಾತು ಹಾಗಿರಲಿ. ಈಗ ನೀವು ಹೇಳಿ. ನಿಮ್ಮ ಮಾತಿಗೆ ಅನ್ನಪೂರ್ಣಾದೇವಿಯವರು ಎಂದೂ ಎದುರಾಡುವುದಿಲ್ಲ!"

"ಪ್ರಭು ನಿಮ್ಮ ಸಲಹೆ ಸೂಕ್ತವಾದರೂ, ಮಹಾರಾಣಿಯವರು ಈ ಸಲಹೆಗೆ ಒಪ್ಪುವುದಿಲ್ಲವೆಂದು ನನ್ನ ಭಾವನೆ. ಈಗ ತಾವಿರುವ ಕಡೆ ತಮಗೆ ಯಾವ ಭೀತಿಯೂ ಇಲ್ಲದೆ, ಸುರಕ್ಷಿತವಾಗಿರುವರೆಂದು ಅವರು ನನ್ನೊಂದಿಗೆ ಎಷ್ಟೋ ಬಾರಿ ಹೇಳಿದ್ದಾರೆ. ಬಹುಶಃ ಅವರು ಮತ್ತೆ ರಾಜಾಂತಃಪುರಕ್ಕೆ ಬರಲು ಒಪ್ಪಲಾರರು!"

"ನೀವು ಒಪ್ಪುವುದಿಲ್ಲವೋ, ಅವರು ಒಪ್ಪುವುದಿಲ್ಲವೋ." ಎಂದು ನಕ್ಕು ಪ್ರಶ್ನಿಸಿದ ಅಚ್ಯುತರಾಯ ಅವನ ಅಂತರಂಗವನ್ನು ಭೇದಿಸಿ ನೋಡುವಂತೆ.

"ನಿಜ ಹೇಳುವುದಾದರೆ ನಾವಿಬ್ಬರೂ ಈ ಸೂಚನೆಗೆ ಒಪ್ಪುವುದಿಲ್ಲ!"

"ನಿಮಗೇಕೆ ಒಪ್ಪಿಗೆಯಿಲ್ಲ?"

"ನಾನು ಆಗಲೇ ನಿವೇದಿಸಿಕೊಂಡಿರುವಂತೆ ಪ್ರಭುಗಳಿಗೆ ವಚನ ಕೊಟ್ಟಿದ್ದೇನೆ."

"ಕುಮಾರನ ಶ್ರೇಯಾಕಾಂಕ್ಷೆಯ ಬಗ್ಗೆ ನಿಮಗಿರುವಷ್ಟೇ ನಮಗೂ ಆಸಕ್ತಿಯಿದೆ ಅಮಾತ್ಯರೇ. ಕುಮಾರನು ಎಲ್ಲಿಯಾದರೂ ಸುಖವಾಗಿರಲಿ. ನಾವು ಸದಾ ಇದನ್ನೇ ಕೋರುವುದು." ಎಂದು ನಿಟ್ಟುಸಿರುಬಿಟ್ಟ ಅಚ್ಯುತರಾಯ.

"ಕುಮಾರರು ನಿಮ್ಮವರೇ ಆಗಿದ್ದಾರೆ ಯಾವಾಗ ಬೇಕಾದರೂ ನೀವು ನೋಡಬಹುದು. ನಿಮ್ಮನ್ನು ಯಾರೂ ಅಡ್ಡಿಪಡಿಸಲಾರರು."

"ಹಾಗಾದರೆ ಮಹಾರಾಣಿಯವರನ್ನು ತಡೆದುವೇಕೆ?"

"ಮಹಾಪ್ರಭುಗಳು ಕ್ಷಮಿಸಬೇಕು – ಮಹಾರಾಣಿಯವರಿಗೆ ಕುಮಾರರ ಬಗ್ಗೆ ಆತನು ಪ್ರಾಪ್ತವಯಸ್ಕನಾದ ಕೂಡಲೇ ಅಧಿಕಾರವನ್ನು ಬಿಟ್ಟುಕೊಡಬೇಕಲ್ಲಾ ಎಂದು ಅಸೂಯೆ ಉಂಟೆಂದು ಕೇಳಿದ್ದೇನೆ."

"ನಿಮಗೆ ಹೇಗೆ ತಿಳಿಯಿತು?"

"ಹೀಗೆ ಚಾರರಿಂದ ವರದಿಯಾಗಿದೆ! ಮಹಾರಾಣಿಯವರಿಗೆ ಕುಮಾರರ ಬಗ್ಗೆ ಅಸೂಯೆ ಇದೆಯೋ ಇಲ್ಲವೋ ನಾನು ಕಾಣೆ. ಆದರೆ ಪ್ರೀತಿ ವಿಶ್ವಾಸ

ಗಳು ಇಲ್ಲವೆಂಬುದು ಮಾತ್ರ ನನ್ನ ಗಮನಕ್ಕೆ ಬಂದಿದೆ!"

"ಅಮಾತ್ಯರು ನನ್ನೊಂದಿಗೆ ಇಷ್ಟು ಮನಬಿಚ್ಚಿ ಮಾತನಾಡಿದುದಕ್ಕೆ ವಂದನೆಗಳು. ವರದಾಂಬಿಕೆಯದು ಸ್ವಲ್ಪ ಸಂಕುಚಿತ ಸ್ವಭಾವ. ತನ್ನ ಸ್ವಂತ ಮಗನಿಗಿಂತ ಆ ಕುಮಾರನು ಹೆಚ್ಚು ಎಂಬ ಒಂದು ಬಗೆಯ ಕುರುಡು ಅಭಿಮಾನದಿಂದ ಒಂದೆರಡು ಮಾತು ಹೆಚ್ಚಾಗಿ ಹೇಳಿರಬಹುದು. ಆದರೆ ಅವಳ ಹೃದಯ ನಿರ್ಮಲವಾಗಿದೆ. ಅವಳಿಗೆ ಕುಮಾರನ ಬಗ್ಗೆ ದ್ವೇಷವಿಲ್ಲ – ಇದನ್ನು ಅಮಾತ್ಯರು ಅರಿಯಬೇಕು."

"ನಾನೆಂದಿಗೂ ವದಂತಿಗಳನ್ನು ನಂಬುವುದಿಲ್ಲ ಪ್ರಭು! ಮಹಾರಾಣಿಯವರ ವಿಷಯದಲ್ಲಿ ನಿಮ್ಮಲ್ಲಿರುವಷ್ಟೇ ಪೂಜ್ಯಭಾವನೆ ನನಗಿದೆ."

"ನಿಮ್ಮ ಪ್ರೀತಿ ಗೌರವಗಳಿಗೆ ನಾನು ಅಭಾರಿಯಾಗಿದ್ದೇನೆ. ನೀವು ನನ್ನೊಡನೆ ಬಿಚ್ಚು ಮನಸ್ಸಿನಿಂದ ಮಾತನಾಡಿದಂತೆ, ನಾನೂ ಮಾತನಾಡಬಹುದೇ?"

"ಖಂಡಿತವಾಗಿ ಪ್ರಭು."

"ನಿಮ್ಮ ವಿಷಯದಲ್ಲೂ ನಾನು ಒಂದು ವದಂತಿ ಕೇಳಿದ್ದೇನೆ. ಕುಮಾರನ ರಕ್ಷಣೆಯ ನೆಪದಲ್ಲಿ, ನೀವು ಸರ್ವಾಧಿಕಾರಿಗಳಾಗಲು ಪ್ರಯತ್ನಿಸುತ್ತಿದ್ದೀರಂತೆ ಹೌದೆ?"

"ನನ್ನ ಏಳಿಗೆಯನ್ನು ಸಹಿಸದವರು – ಪ್ರಭುಗಳು ನನ್ನ ವಿಷಯದಲ್ಲಿ ಇಟ್ಟಿರುವ ನಂಬಿಕೆ ವಿಶ್ವಾಸಗಳನ್ನು ಕಂಡು ಸಹಿಸದವರು – ಹೊರಡಿಸಿರುವ ಮಿಥ್ಯಾರೋಪ ಪ್ರಭು!"

"ಸತ್ಯಾಂಶವೂ ರವೆಯಷ್ಟೂ ಇಲ್ಲದೆ ಇಂತಹ ಮಿಥ್ಯಾರೋಪಗಳು ಹುಟ್ಟುವುದೇ?"

"ಬಹುಶಃ ಕುಮಾರನ ರಕ್ಷಣೆಯ ಭಾರವನ್ನು ನಾನು ವಹಿಸಿಕೊಂಡುದನ್ನು ಸಹಿಸದ ಜನ ಅಸೂಯೆಯ ನೆಂಟೆ ಇದಕ್ಕೆ ಕಾರಣವಿರಬಹುದು."

"ಹೇಗೇ ಇರಲಿ. ನೀವು ಕೂಡ ಎಚ್ಚರದಿಂದ ಇರುವುದು ಲೇಸು. ಅಧಿಕಾರವನ್ನು ಹಿಡಿಯುವುದು, ಎರಡು ಕಡೆಯೂ ಹರಿತವಾದ ಕೂರ್ಗತ್ತಿಯನ್ನು ಹಿಡಿದಂತೆ. ಇದರಿಂದ ಶತ್ರುನಾಶವೂ ಸಾಧ್ಯ. ಆತ್ಮನಾಶವೂ ಸಾಧ್ಯ. ನೀವು ಸಾಮ್ರಾಜ್ಯದ ಸಮಸ್ತ ಆಡಳಿತದ ಜವಾಬ್ದಾರಿಯನ್ನು ಹೊತ್ತಿರುವ ಕಾರಣ ಎಷ್ಟು ಜಾಗರೂಕರಾಗಿದ್ದರೂ ಸಾಲದು." ಎಂಬ ಹಿತವಚನದೊಂದಿಗೆ ಸೋಮರಸನನ್ನು ಬೀಳ್ಕೊಟ್ಟ ಅಚ್ಯುತರಾಯ.

ಇಷ್ಟೆಲ್ಲ ಮಾತುಕತೆ ನಡೆದ ಮೇಲೂ ಸೋಮರಸನ ಮೇಲೆ ಸಂಶಯ ಉಳಿದೇ ಉಳಿಯಿತು. ತನ್ನ ವಶಕ್ಕೆ ಕುಮಾರನನ್ನು ಒಪ್ಪಿಸಲು ಸಂದೇಹಿ

ಸಿದ್ದ ಅವನನ್ನು ಸಂಬುವುದೆಂತು? ಅವನಿಗೆ ಯಾವ ಬಗೆಯ ದುರುದ್ದೇಶ ವಿದೆಯೋ ಕಂಡವರಾರು? ತಮ್ಮ ಮಾತು, ಕತೆ, ನಡೆನುಡಿಗಳ ಮೇಲೆ ಬೇಹುಗಾರರನ್ನು ಹಾಕಿ, ತಮ್ಮಿಬ್ಬರನೂ ಸಂಶಯದೃಷ್ಟಿಯಿಂದ ಕಾಣುವ ಅವನಿಗೆ ಅಧಿಕಾರ ವಹಿಸಿದ್ದು ಮೂರ್ಖತನವಾಯಿತೆಂದು ಯೋಚಿಸತೊಡಗಿದನು. ಸೋಮರಸನನ್ನು ತಾವು ಸಂಪೂರ್ಣವಾಗಿ ನಂಬಬಾರದೆಂದು, ವರದಾಂಬಿಕೆಯು ಉರಿಯುತ್ತಿದ್ದ ಸಂಶಯದ ಬೆಂಕಿಗೆ ಮತ್ತಷ್ಟು ಅಜ್ಯ ಸುರಿಯುತ್ತಿದ್ದಳು.

ಸೊಮರಸನು ಮೊದಲಿನಿಂದಲೂ ರಾಜ್ಯಾಡಳಿತದ ವಿಷಯದಲ್ಲಿ ಆಸಕ್ತಿ ತೆಗೆದುಕೊಳ್ಳದೆ ಇರುತ್ತಿದ್ದ ಅಚ್ಯುತರಾಯನ ಸಲಹೆಯನ್ನು, ರಾಜ್ಯಾಡಳಿತದ ಪ್ರಮುಖ ಸಮಸ್ಯೆಗಳ ವಿನಹ, ಉಳಿದ ದೈನಂದಿನ ಕಾರ್ಯಗಳಿಗೆ ಮಂತ್ರಿ ಪರಿಷತ್ತಿನ ಅಭಿಪ್ರಾಯವನ್ನು ತೆಗೆದುಕೊಂಡು ಅದರಂತೆ ನಡೆಯುತ್ತಿದ್ದ. ಮೊದಲಿನಂತೆಯೇ ಅಚ್ಯುತರಾಯನು ವಿಲಾಸಿ ಎಂದೇ ತಿಳಿದ ಸೋಮರಸ ಅವನಲ್ಲಿ ಈಚೆಗಾಗಿದ್ದ ಮಾರ್ಪಟನ್ನು ಅರಿಯದೆ ಹೋದ. ಇದರಿಂದಾಗಿ ಅಚ್ಯುತರಾಯನ ಕಣ್ಣಿನಲ್ಲಿ ಅವನು ಸಾಮ್ರಾಜ್ಯವನ್ನು ಕಬಳಿಸಲು ಕುಳಿತ, ದ್ರೋಹಿ ವಿಶ್ವಾಸಘಾತುಕನಂತೆ ಕಾಣತೊಡಗಿದನು. ಹಾವಿಗಂಜಿದವನಿಗೆ ಹುತ್ತದ ಬಳಿಯಿರುವ ಹುಲಿನರವು ಹಾವಾಗುವಂತೆ, ಸೋಮರಸನ ಬಗ್ಗೆ ಒಮ್ಮೆ ಸಂಶಯ ಉಂಟಾದುದು. ಅವನ ಪ್ರತಿಯೊಂದು ಚಲನವಲನದಲ್ಲೂ, ರಷ್ಟ್ರಘಾತುಕವಾದ ವಿದ್ರೋಹವನ್ನೇ ಕಾಣಲೆತ್ನಿಸಿದ ಅಚ್ಯುತರಾಯ!

ಹೀಗಿರುವಲ್ಲಿ ಇದ್ದಕ್ಕಿದ್ದಂತೆ, ರಾಜಧಾನಿಯಲ್ಲಿ ಕಾಣಿಸಿಕೊಂಡ, ಸಿದ್ಧಪುರುಷರೆಂದೂ, ತ್ರಿಕಾಲ ಜ್ಞಾನಿಗಳೆಂದೂ ಹೇಳಲಾಗಿದ್ದ ಸಿದ್ಧಾನಾಥನೆಂಬ ಮಹಾತ್ಮನು ಉಸುರಿದ ಭವಿಷ್ಯವಾಣಿ ಕರ್ಣಾಕರ್ಣಿಕವಾಗಿ ಹರಡಿ, ಅರಮನೆಯನ್ನು ಮುಟ್ಟಿ, ಅಚ್ಯುತರಾಯನ ಕಿವಿಗೂ ಬಿದ್ದಿತು. ಈ ಭವಿಷ್ಯಕ್ಕೆ ತಲ್ಲಣಗೊಂಡ ಅವನಿಗೆ, ಸೋಮರಸನ ವಿಷಯದಲ್ಲಿ ಉಂಟಾಗಿದ್ದ ಅವ್ಯಕ್ತ ಭೀತಿ ಮೂರ್ತಿ ಸ್ವರೂಪವನ್ನು ಪಡೆಯಿತು.

ಸಿದ್ಧಾನಾಥಯತಿಗಳು ಶ್ರೀಶೈಲದ ಸಾಧುಗಳಂತೆ, ಮಹಾಮಹಿಮರಂತೆ, ಇಪ್ಪತ್ತುನಾಲ್ಕುವರ್ಷ ನೆಲಗರ್ಭದಲ್ಲಿ ಸಮಾಧಿಹೊಂದಿ ಅಪೂರ್ವ ಸಿದ್ಧಿಪಡೆದಿರುವರಂತೆ. ಈಗ ದೇಶಾಟನೆ ಮಾಡಲು ಹೊರಟು ವಿರೂಪಾಕ್ಷ ದೇವಾಲಯಕ್ಕೆ ಬಂದಿದ್ದರು. ಅವರದು ನೋಡಲು ಪುಷ್ಟವಾದ ಕಾಯ, ಸುಮಾರು ನಲವತ್ತರ ಪ್ರಾಯ, ತೇಜಃಪುಂಜವಾದ ಕಣ್ಣುಗಳು ಅವರ ಯೋಗಶಕ್ತಿಗೆ ಸಾಕ್ಷಿಯಾಗಿದ್ದವು. ವಿಭೂತಿ, ರುದ್ರಾಕ್ಷಿಗಳಿಂದ ಅಲಂಕೃತರಾದ ಅವರು ಪರಮೇಶ್ವರನಂತೆ ಕಂಗೊಳಿಸುತ್ತಿದ್ದರು. ಉಟ್ಟಿದ್ದ ಕಾವಿವಸ್ತ್ರ, ಅವರು ಪರಿವ್ರಾಜಕ ಸನ್ಯಾಸಿ ಎಂಬುದಕ್ಕೆ ಸಾಕ್ಷಿಯಾಗಿತ್ತು. ಜಪಮಣಿ, ದಂಡಕಮಲ

ಗಳಿಂದ ಭೂಷಿತರಾಗಿ, ಮರದ ಪಾದರಕ್ಷೆಗಳನ್ನು ಮೆಟ್ಟಿ ಅವರು ಬರುತ್ತಿದ್ದರೆ ಎಂತಹ ನಾಸ್ತಿಕರಲ್ಲೂ, ಆಸ್ತಿಕಭಾವ ಕೊನರುತಿತ್ತು. ಅವರು ತಮ್ಮ ಒಬ್ಬನೇ ಶಿಸ್ಯನ ಜೊತೆಯಲ್ಲಿ ಸಂಚಾರ ಹೊರಟು ಕ್ಷೇತ್ರಯಾತ್ರೆ ಮಾಡಿಕೊಂಡು ವಿಜಯನಗರಕ್ಕೆ ಬಂದಿದ್ದರು.

ಪಂಪಾಪತಿಯ ದೇವಾಲಯಕ್ಕೆ ಬಂದು ಹೋಗುತ್ತಿದ್ದ ಭಾವುಕ ಜನರು ಮಂಟಪದಲ್ಲಿದ್ದ ಆ ಸನ್ಯಾಸಿಯನ್ನು ನೋಡಿ, ಕುತೂಹಲದಿಂದ ಗುಂಪುಕಟ್ಟಿ ನೋಡುತ್ತಾ ನಿಂತರು. ಅವರು ಯಾರು, ಎಲ್ಲಿಂದ ಬಂದರು? ಎಂಬಿವೇ ಪ್ರಶ್ನೆಗಳನ್ನು ಕೇಳಿದುವೇ ತಡ, ಆ ಮಹಾತ್ಮರ ಸಿದ್ಧಿ, ಸಾಮರ್ಥ್ಯಗಳ ಬಗ್ಗೆ ಶಿಸ್ಯನು ದೀರ್ಘವಾದ ಪ್ರವಾಸವನ್ನೇ ಮಾಡಿದ.

ಸಿದ್ಧಾನಾಥಯತಿಯು ಶ್ರೀಶೈಲದ ಮಲ್ಲಿಕಾರ್ಜುನನ್ನು ಸಾಕ್ಷಾತ್ಕರಿಸಿ ಕೊಂಡಿರುವರೆಂದೂ, ತ್ರಿಕಾಲಜ್ಞಾನಿಗಳೆಂದೂ ತಿಳಿದುದೇ ತಡ, ಜನ ತಂಡ ತಂಡವಾಗಿ ಬಂದು ತಮ್ಮ ಭವಿಸ್ಯವನ್ನು ತಿಳಿಯಲು ಆತುರ ತೋರಿಸಿದರು. ಕೆಲವರು ತಮ್ಮ ಮನೆಗಳಲ್ಲಿ ಆತಿಥ್ಯ ಸ್ವೀಕರಿಸಿ, ಕೃತಾರ್ಥರನ್ನಾಗಿಸಲು ಕೋರಿದರು. ಮಹಾತ್ಮರಾದ ಸಿದ್ಧನಾಥರು, ತಮ್ಮ ಸ್ವಯಂ ಪಾಕವಲ್ಲದೆ ಅನ್ಯರ ಮನೆಯ ಆಹಾರ ಸೇವಿಸುವುದಿಲ್ಲವೆಂದೂ, ಸ್ತ್ರೀದರ್ಶನ ಮಾಡುವುದಿಲ್ಲವೆಂದೂ ತಿಳಿಸಿದಾಗ ಅವರ ಬಗ್ಗೆ ಗೌರವ ಇಮ್ಮಡಿಸಿತು.

ಅವರು ಬಂದ ಸಂದರ್ಶನಾರ್ಥಿಗಳಿಗೆ ಅನೇಕ ಸಂಗತಿಗಳ ಜತೆಗೆ ದೇಶಕ್ಕೆ ಬಂದಿರುವ ಗಂಡಾಂತರದ ಸಂಗತಿಯನ್ನೂ ಹೇಳಿ ಎಚ್ಚರಿಸಿದ್ದರು. ಅವರು ದೇವಾಲಯದಿಂದ ನಿರ್ಗಮಿಸಿದ್ದರೂ ಅವರು ಹೇಳಿದ್ದ ಭವಿಸ್ಯ – ಸಾಮ್ರಾಜ್ಯಕ್ಕೆ ಒದಗಲಿರುವ ವಿಪ್ಪತ್ತು ಮಾತ್ರ ಒಬ್ಬರ ಬಾಯಿಂದ ಒಬ್ಬರಿಗೆ ತಿಳಿದು, ಬಹುಬೇಗನೆ ಮೂರ್ತಿರೂಪ ತಾಳಿ ಅಚ್ಯುತರಾಯನ ಕಿವಿಗೂ ಬಿತ್ತು.

ಸಿದ್ಧನಾಥರು ಹೇಳಿದ್ದ ಸಾಮ್ರಾಜ್ಯಕ್ಕೆ ಬರಲಿದ್ದ ಗಂಡಾಂತರದ ಸಾರಾಂಶವಿಷ್ಟು.

ಸಾಮ್ರಾಜ್ಯದ ಚಂದ್ರ ರಾಹುಗ್ರಸ್ತವಾಗಿದೆ. ಚಂದ್ರನಿಗೆ ಚಂದ್ರನಿಂದಲೇ ಮೃತ್ಯು ಬರಲಿದೆ. ಮೀನನ್ನು ದೊಡ್ಡ ಮೀನು ನುಂಗುವಂತೆ, ದೊಡ್ಡ ಮೀನನ್ನು, ತಿಮಿಂಗಿಲವು ನುಂಗುವಂತೆ ಬಾಲಚಂದ್ರಮನನ್ನು ಪೂರ್ಣಚಂದ್ರಮನು ನುಂಗಿ ಬೆಳೆಯಲು ಆಶಿಸಿದ್ದಾನೆ. ಅಧಿಕಾರದ ಸೋಮಾಮೃತರಿಂದ ಸೊಕ್ಕಿದ ಪೂರ್ಣಚಂದ್ರನು ಬಾಲಚಂದ್ರನನ್ನು ನುಂಗಿದಂತೆ, ಪೂರ್ಣ ಚಂದ್ರನನ್ನು ರಾಹು ಕೇತುಗಳು ನುಂಗುತ್ತವೆ. ಇದು ಪ್ರಕೃತಿ ನಿಯಮ. ಆದುದರಿಂದ ಪ್ರಜೆಗಳು ಎಚ್ಚೆತ್ತು, ಬಾಲಚಂದ್ರನಿಗೆ ಒದಗಿರುವ ಮೃತ್ಯುವನ್ನು ತಪ್ಪಿಸಿ, ಸಾಮ್ರಾಜ್ಯದ ಸೌಭಾಗ್ಯ ಚಂದ್ರನನ್ನು ಉಳಿಸಿ ಕಾಪಾಡಿ.

ಭವಿಷ್ಯವಾಣಿಯನ್ನು ಅಚ್ಯುತರಾಯನು ಕೇಳಿದೊಡನೆ ಒಮ್ಮೆಲೇ ಸಹಸ್ರ ಚೇಳುಗಳು ಕಡಿದಂತೆ ಆಯಿತು. ಈ ಭವಿಷ್ಯ ಮೊದಲು ಅರ್ಥವಾಗಲಿಲ್ಲ. ಕೂಲಂಕುಶವಾಗಿ ವಿಚಾರ ಮಾಡಿದಮೇಲೆ ತಾನಾಗಿ ಅರ್ಥವಾಯಿತು.

'ಬಾಲಚಂದ್ರನೆಂದರೆ, ಚಂದ್ರನಂತೆ ದಿನದಿನಕ್ಕೆ ವೃದ್ಧಿಸುತ್ತಿದ್ದ ತೇಜಸ್ವಿಯಾದ ಕುಮಾರ. ಪೂರ್ಣ ಚಂದ್ರನೆಂದರೆ ಸೋಮರಸ. ಧರ್ಮಾಧರ್ಮ, ನ್ಯಾಯಾನ್ಯಾಯಗಳನ್ನು ನೋಡಗೊಡದೆ, ಅವನು ಕುಮಾರನನ್ನು ತನ್ನ ಅಧಿಕಾರ ಲಲಾಸೆಗೆ ಬಲಿಗೊಟ್ಟು ದೊಡ್ಡವನಾಗಲು ಆಶಿಸಿದ್ದಾನೆ – ಅಧಿಕಾರೋನ್ಮತ್ತ ಸೋಮರಸನಿಗೆ ಬುದ್ಧಿ ಕಲಿಸಲು ರಾಹುಕೇತುಗಳಂತೆ ಇಬ್ಬರು ವ್ಯಕ್ತಿಗಳು ಕಾದಿದ್ದಾರೆ. ಜನ ಎಚ್ಚೆತ್ತುಕೊಳ್ಳಲೀ ಬಿಡಲಿ ಸೋಮರಸನು ತನ್ನ ಪತನದ ದಾರಿಯನ್ನು ತುಳಿಯಲೇ ಬೇಕು – ಇದು ಪ್ರಕೃತಿ ನಿಯಮ. ಇಷ್ಟೆಲ್ಲ ಅನರ್ಥ ಪರಂಪರೆ ನಡೆಯುವ ಮುನ್ನ ಸಾಮ್ರಾಜ್ಯದ ಸೌಭಾಗ್ಯ ಚಂದ್ರನಂತಿರುವ ಕುಮಾರನನ್ನು ಕಾಪಾಡಲು ತಮಗೆ ಮುನ್ಸೂಚನೆ ಕೊಟ್ಟಿದ್ದಾರೆ.'

ಮೊದಲೇ ಸೋಮರಸನ ಬಗ್ಗೆ ಸಂಶಯವನ್ನು ತಳೆದಿದ್ದ ಅಚ್ಯುತರಾಯನಿಗೆ ಸಿದ್ಧನಾಥರನ್ನು ಕರೆಸಿಕೊಂಡು, ಈ ಬಗ್ಗೆ ಪ್ರಶ್ನಿಸಿದರೆ, ಹೆಚ್ಚಿನ ಸಂಗತಿಗಳು ಹೊರಪಡಬಹುದೆಂದು, ಅವರನ್ನು ರಾಜಧಾನಿಯಲ್ಲೆಲ್ಲಾ ಶೋಧಿಸಿದರೂ, ಎಲ್ಲಿಯೂ ಪತ್ತೆಯಾಗಲಿಲ್ಲ. ಈ ಭೀತಿ ದಿನದಿನಕ್ಕೂ ಬೆಳೆದು ಬೃಹದಾಕಾರವಾಯಿತು. ಈ ಬಗ್ಗೆ ಸೋಮರಸನೊಡನೆ ಪ್ರಶ್ನಿಸಿದ ಹೊರತು ಅಚ್ಯುತರಾಯನಿಗೆ ಸಮಾಧಾನ ಉಳಿಯಲಿಲ್ಲ.

ಒಂದು ದಿನ ಇದೇ ಕಾರ್ಯಕ್ಕಾಗಿ ಅವನನ್ನು ಬರಮಾಡಿಕೊಂಡು ಅಳುಕುತ್ತಲೇ ಮಾತು ತೆಗೆದ.

"ಅಮಾತ್ಯರೇ, ನಿಮಗೆ ಈ ಸುದ್ದಿ ಕಿವಿಗೆ ಬಿತ್ತೆ?"

"ಯಾವ ಸುದ್ದಿ ಪ್ರಭು!"

"ರಾಜಧಾನಿಗೆ ಶ್ರೀಶೈಲದಿಂದ ಸಿದ್ಧನಾಥರೆಂಬ ಯತಿಗಳು ಬಂದಿದ್ದರಂತೆ. ಅವರು ತ್ರಿಕಾಲ ಜ್ಞಾನಿಗಳಂತೆ. ಅವರು ಸಾಮ್ರಾಜ್ಯಕ್ಕೆ ಕೆಲವು ದಿನಗಳಲ್ಲಿ ಯಾವುದೋ ಗಂಡಾಂತರ ಬರುವುದೆಂದು ಹೇಳಿ ಹೋಗಿರುವರಂತೆ."

"ಹೌದು ನನ್ನ ಕಿವಿಗೂ ಈ ಸುದ್ದಿ ಬಿತ್ತು. ಯಾರೋ ಇಬ್ಬರು ಜೋಗಿಗಳು ಭವಿಷ್ಯ ಹೇಳುವ ಸೋಗಿನಲ್ಲಿ, ಜನರ ತಲೆಯಲ್ಲಿ ಇಲ್ಲದ ವಿದ್ರೋಹದ ಭೀತಿ ಬಿತ್ತಿ ಹೋಗಿದ್ದಾರೆಂದು ದೂತರಿಂದ ತಿಳಿಯಿತು—ಈ ಸುದ್ದಿ ನಿಮ್ಮ ತನಕ ಬಂದಿತೆ?!" ಎಂದು ಆಶ್ಚರ್ಯ ವ್ಯಕ್ತಪಡಿಸಿದ.

"ಅವರು ಮಹಾತ್ಮರಂತೆ, ಅವರ ಭವಿಷ್ಯ ಸುಳ್ಳಾಗುವುದಿಲ್ಲವೆಂದು. ರಾಜಧಾನಿಯ ಜನ ಕಂಗಾಲಾಗಿದ್ದಾರೆ – ಸಾಮ್ರಾಜ್ಯಕ್ಕೆ ಯಾವುದೋ

ಗಂಡಾಂತರ ಕಾದಿದೆ ಎಂದು ತಲ್ಲಣಗೊಂಡಿದ್ದಾರೆ."

"ಆ ಜೋಗಿಗಳು ಯಾರೋ – ಅವರು ಹೇಳಿದ ಭವಿಷ್ಯ ಏನೆಂದು ನಾನೆಷ್ಟು ಶೋಧಿಸಿದರೂ ತಿಳಿಯಲಿಲ್ಲ. ಅವರು ಎಲ್ಲಿಂದ ಬಂದರೋ, ಎಲ್ಲಿಗೆ ಹೋದರೋ ಯಾರಿಗೂ ತಿಳಿಯದಾಗಿದೆ. ಅವರ ಭವಿಷ್ಯದ ಬಗ್ಗೆ ಒಬ್ಬೊಬ್ಬರು ಒಂದೊಂದು ಕಥೆಕಟ್ಟುತ್ತಿದ್ದಾರೆ – ಇದರಲ್ಲಿ ಯಾವುದು ನಂಬುವುದು– ಯಾವುದು ಬಿಡುವುದೆಂಬುದು ತಿಳಿಯದಾಗಿದೆ. ಎಲ್ಲವೂ ಗಾಳಿಯ ಸುದ್ದಿ. ಯಾರೋ ತಲೆಹೋಕರು ಹರಡಿರುವ ಸುದ್ದಿ! ಇವುಗಳಿಗೆ ಇಲ್ಲದ ಮಹತ್ವ ಕೊಡಬಾರದು ಪ್ರಭು!"

"ಅಮಾತ್ಯರೇ ಮಹಾತ್ಮರನ್ನು ಹೀಗೆಲ್ಲ ನಿರ್ಲಕ್ಷಿಸುವುದು ಶ್ರೇಯಸ್ಕರವಲ್ಲ. ಅದು ತಲೆಹೋಕರು ಹರಡಿರುವ ಗಾಳಿಸುದ್ದಿಯಲ್ಲ. ಸಾಮ್ರಾಜ್ಯಕ್ಕೆ ಒದಗಿರುವ ಗಂಡಾಂತರದ ಮುನ್ಸೂಚನೆಯಾಗಿರುವುದರಲ್ಲಿ ನನಗೆ ಸಂದೇಹವಿಲ್ಲ." ಎಂದು ಹೇಳಿ ಅವರ ಭವಿಷ್ಯವನ್ನು ತಿಳಿಸಿದ.

ಇದನ್ನು ಶಾಂತಚಿತ್ತದಿಂದ ಆಲಿಸಿದನಂತರ ನಿರುದ್ವೇಗದಿಂದ ಸೋಮರಸ ಹೇಳಿದ.

"ಒಂದು ರೀತಿಯಾಗಿ ಇದಕ್ಕೆ ಅರ್ಥವಿದೆ. ನಾಳೆ ಜೇಷ್ಠ ಶುದ್ಧ ಹುಣ್ಣಿಮೆಯ ದಿನ ಬರಲಿರುವ ಚಂದ್ರಗ್ರಹಣವನ್ನು, ಶ್ಲೇಷೆಯಿಂದ ಹೇಳಿದ್ದಾರೆ. ಚಂದ್ರಗ್ರಹಣದಿಂದ ಕುಮಾರರಿಗೆ ಕೆಡಕುಂಟಾಗುವುದೆಂದು ನೀವು ಭಾವಿಸುವುದಾದರೆ, ಅದಕ್ಕಾಗಿ ಜಪ, ತಪ, ಹೋಮ, ಹವನಗಳನ್ನೂ, ದೇವಾಲಯಗಳಲ್ಲಿ ವಿಶೇಷ ಪೂಜೆಗಳನ್ನೂ ಮಾಡಿ, ಬ್ರಾಹ್ಮಣರನ್ನು ದಾನಧರ್ಮಗಳಿಂದಲೂ, ಅನ್ನಸಂತರ್ಪಣೆಗಳಿಂದಲೂ ತೃಪ್ತಿಗೊಳಿಸಿ, ಭೂತ ಶಾಂತಿಯನ್ನು ಮಾಡೋಣ. ಕುಮಾರನಿಗೆ ಉಂಟಾಗಿರುವ ಗ್ರಹಪೀಡೆ ನಿವಾರಣೆಯಾಗುತ್ತದೆ – ಇಷ್ಟಕ್ಕಾಗಿ ನೀವು ಕಳವಳಗೊಳ್ಳಬೇಕೆ ಪ್ರಭು?" ಎಂದು ಅಚ್ಯುತರಾಯನನ್ನು ಸಂತೈಸಿದ.

"ನನ್ನ ಭೀತಿ ಕ್ರೂರಗ್ರಹಗಳಿಂದ ತೊಂದರೆಯಾಗುವುದೆಂದಲ್ಲ ಅಮಾತ್ಯರೇ, ಅನಿಷ್ಟವಾದ ಯಾವುದೋ ವಿಪತ್ತು ಚಂದ್ರನಿಂದಾಗುವುದೆಂದು ಭವಿಷ್ಯ ಸೂಚಿಸುತ್ತದೆ."

"ಇದಕ್ಕೆ ನವಗ್ರಹಗಳ ಶಾಂತಿ ಮಾಡಿದರೆ, ದುಷ್ಟಗ್ರಹಗಳ ಕ್ರೂರದೃಷ್ಟಿಯಿಂದ ಸಾಮ್ರಾಜ್ಯಕ್ಕೆ ಯಾವ ಹಾನಿಯೂ ತಟ್ಟದು ಪ್ರಭು!"

"ದೂರದ ನವಗ್ರಹಗಳಿಗಿಂತಲೂ, ಹತ್ತಿರದ ಗ್ರಹಗಳ ಭಾದೆಯನ್ನು ನಾವು ನಿವಾರಿಸಬೇಕಾಗಿದೆ!"

"ನಿಮ್ಮ ಮಾತು ನನಗೆ ಅರ್ಥವಾಗುವುದಿಲ್ಲ."

"ಭವಿಷ್ಯವಾಣಿಯಲ್ಲಿ ಸೂಚಿತವಾಗಿರುವ ಸೌಭಾಗ್ಯ ಚಂದ್ರ ನಮ್ಮ

ಕುಮಾರ. ಇವನನ್ನು ಯಾವನೋ ಪೂರ್ಣಚಂದ್ರನು ಅಧಿಕಾರಲಾಲಸೆಯಿಂದ ನುಂಗಲು ಹಾತೊರೆಯುತ್ತಿದ್ದಾನಂತೆ" ಎಂದು ಸೋಮರಸನನ್ನು ಅರ್ಥಗರ್ಭಿ ವಾಗಿ ನೋಡಿ. ಆ ನೋಟದ ಅರ್ಥವನ್ನು ಗ್ರಹಿಸಿ, ಸೋಮರಸನು ವಿಚಲಿತ ನಾಗದೆ, ಗಂಭೀರವಾಗಿ ಇಂತೆಂದ.

"ಪ್ರಭು ನಿಮಗೆ ನನ್ನಲ್ಲಿ ಸಂದೇಹವಿದ್ದರೆ ನೇರ ಹೇಳಿಬಿಡಿ!"

"ಭವಿಷ್ಯವಾಣಿಯ ಅರ್ಥವಿಷ್ಟು. ಬಾಲಚಂದ್ರನಂತೆ ವೃದ್ಧಿಸುತ್ತಿರುವ ಕುಮಾರನಿಗೆ ಮೃತ್ಯುಸ್ವರೂಪರು ನೀವು — ಚಂದ್ರನಾಮಧೇಯ ಹೊಂದಿರುವ ನೀವು! ಇದಕ್ಕೆ ನೀವು ಏನು ಹೇಳುತ್ತೀರಿ!"

"ನನ್ನ ಮೇಲೆ ಯಾವುದೋ ದಾರಿಹೋಕ ಸನ್ಯಾಸಿ ಹೇಳುವ ಮಾತಿನ ಮೇಲೆ ಆರೋಪವನ್ನು ಹೊರಿಸುವುದಾದರೆ, ನಾನು ಏನುತಾನೆ ಹೇಳಬಲ್ಲೆ ಪ್ರಭು!"

"ಮಹಾತ್ಮರ ವಾಣಿ ಎಂದಿಗೂ ಸುಳ್ಳಾಗುವುದಿಲ್ಲ!"

"ಈಗ ಅವರ ಮಾತು ನಿಜವೋ, ಸುಳ್ಳೋ! ತಿಳಿಯುವ ಮುನ್ನ ಅವರು ಮಹಾತ್ಮರು ಹೌದೋ ಅಲ್ಲವೋ ತಿಳಿಯಬೇಕಾಗಿದೆ!"

"ಅವರ ಭವಿಷ್ಯವಾಣಿ ನಮ್ಮೆದುರಿಗಿದೆಯಲ್ಲಾ!"

"ಇದೆ ಅದೊಂದು ಅಸಂಬದ್ಧ ಪ್ರಲಾಪ, ತಲೆತಿರುಕನ ಅರ್ಥವಿಲ್ಲದ ಉದಾರ."

"ನಿಮಗೆ ಇದು ಶೂನ್ಯವಾದರೂ – ಇಡೀ ಜನತೆಗೆ ಇದರ ಅರ್ಥವೇನೆಂದು ತಿಳಿದಿದೆ!"

"ಅದರ ಅರ್ಥವೇನು ತಿಳಿದಿದೆ?"

"ಇದೊಂದು ಮಿಥ್ಯಾರೋಪ!"

"ಇದು ಮಿಥ್ಯಾರೋಪವೋ ಸತ್ಯಾರೋಪವೋ ಇದನ್ನು ನಾಳೆ ಜನತೆಯೇ ನಿರ್ಧರಿಸಿ ತೀರ್ಪುಕೊಡುತ್ತದೆ – ಈಗ ನಿಮ್ಮ ವಾದವೇನು?"

"ನಾನು ನಿರಪರಾಧಿ. ನನಗೆ ಇದೊಂದು ಆರೋಪಗಳೂ ತಿಳಿಯದು! ನಾನು ಇದುವರೆಗೆ ಪ್ರಭುಗಳಿಗಾಗಲೀ, ಸಾಮ್ರಾಜ್ಯಕ್ಕಾಗಲೀ, ಕಾಯಾ ವಾಚಾ ಮನಸಾ ದ್ರೋಹ ಬಗೆದವನಲ್ಲ. ಅಂತಹ ಹೀನ ಕೃತ್ಯಕ್ಕೆಳಿಸುವುದಕ್ಕಿಂತ, ನಂಬಿದ ಸ್ವಾಮಿಗೆ ದ್ರೋಹ ಬಗೆಯುವುದಕ್ಕಿಂತ, ಅನ್ನ ಕೊಟ್ಟ ಧಣಿಗೆ ಎರಡು ಬಗೆಯುವುದಕ್ಕಿಂತ, ನನ್ನ ದೇಹವನ್ನು ಚೆಂಡಾಡುವುದು ಲೇಸು! ನಾನು ತ್ರಿಕಾಲದಲ್ಲಿ ಸ್ವಾಮಿನಿಷ್ಠ ಸೇವಕನಾಗಿದ್ದರೆ, ನನ್ನ ಮಿಥ್ಯಾರೋಪ ನಿಲ್ಲುವುದಿಲ್ಲ. ಇಂತಹ ಆರೋಪ ಸಿದ್ಧವಾದ ದಿನವೇ ನನ್ನ ತಲೆಯನ್ನು ಪ್ರಭುಗಳ ಪಾದದ ಮೇಲೆ ತಂಡಿಸುತ್ತೇನೆಯೇ ಹೊರತು, ಇಂತಹ ಆರೋಪ ಹೊತ್ತು ಕ್ಷಣಕಾಲ

ಬದುಕುವುದಿಲ್ಲ. ನನ್ನ ಮೇಲೆ ಪ್ರಭುಗಳಿಗೆ ಸಂಶಯವಿದಿದ್ದರೆ, ನನ್ನ ಆರೋಪಗಳನ್ನು ನ್ಯಾಯಾಲಯದಲ್ಲಿ, ಬಹಿರಂಗ ವಿಚಾರಣೆಗೆ ಗುರಿಪಡಿಸಿ, ಶಿಕ್ಷಿಸಿ ನಾನು ಬೇಡವೆನುವುದಿಲ್ಲ. ಆದರೆ ವೃಥಾಕಾರಣಕ್ಕಾಗಿ, ಮಿಥ್ಯಾರೋಪದಿಂದ ನನ್ನನ್ನು ಶಿಕ್ಷಿಸುವುದಾದರೆ, ಅನ್ಯಾಯದ ವಿರುದ್ಧ ಹೋರಾಡುವೆನೇ ಹೊರತು, ಅನ್ಯಾಯಕ್ಕೂ, ಅಧರ್ಮಕ್ಕೂ, ಮಣಿಯುವುದಿಲ್ಲ! ಸೋಮರಸನೆಂದಿಗೂ ಕೊಟ್ಟ ವಚನವನ್ನು ಮುರಿಯುವುದಿಲ್ಲ. ಈ ಮಾತು ಸೂರ್ಯ ಚಂದ್ರರಾಣೆಗೂ ಸತ್ಯ!"

ಎಂದು ಹೇಳಿ ಅಲ್ಲಿಂದ ಹೊರಟುಹೋದನು.

ಇದಾದ ಕೆಲವೇ ದಿನಗಳಲ್ಲಿ ಈ ಮಾತನ್ನು ಒರೆಹಚ್ಚಿ ನೋಡುವಂತಹ, ಭಯಂಕರ ಸುದ್ದಿಯೊಂದು ಅವರಿಗಾಗಿ ಕಾದಿತ್ತು.

೬

ಆ ದಿನ ಅಚ್ಯುತರಾಯ ಇನ್ನೂ ಹಾಸಿಗೆ ಬಿಟ್ಟು ಎದ್ದಿರಲಿಲ್ಲ. ಅಂತಃಪುರದಲ್ಲಿ ಪ್ರಭುಗಳನ್ನು ಎಚ್ಚರಗೊಳಿಸುವುದಕ್ಕಾಗಿ, ಪದ್ಧತಿಯಂತೆ ಮಂಗಳಗೀತೆ, ಮಂಜುಳ ರವ ಕೇಳಿಸುತ್ತಿತ್ತು. ಗಾಯಕಿಯರು ವೀಣೆಯ ಸ್ವರದೊಂದಿಗೆ ದನಿಗೂಡಿಸಿ, ಸುಶ್ರಾವ್ಯವಾಗಿ ಉದಯರಾಗ ಹಾಡುತ್ತಿದ್ದರು. ಅನತಿ ದೂರದಲ್ಲಿ ಪಂಪಾಪತಿಯ ದೇವಾಲಯದಲ್ಲಿ, ಬೆಳಗಿನ ಪೂಜೆಯ ಭೇರಿ, ನಗಾರಿ, ಗಂಟೆಗಳ ಧ್ವನಿ ಮೆಲ್ಲನೆ ಕೇಳಿಬರುತ್ತಿತ್ತು. ಅರಮನೆಯ ಪ್ರಕಾರದಲ್ಲಿದ್ದ ಹಜಾರ ರಾಮದೇವಾಲಯದಿಂದ, ಬೆಳಗಿನ ಅಷ್ಟೋತ್ತರ ಪೂಜೆಯ ಮಂತ್ರಗಳು ಅಸ್ಪಷ್ಟವಾಗಿ ಕೇಳಿಸುತ್ತಿತ್ತು. ಅರಮನೆಯ ಉದ್ಯಾನದ ಗಿಡಮರಗಳಿಂದ, ಹಕ್ಕಿಗಳ ಚಿಲಿಪಿಲಿರವ, ಪ್ರಾತಃ ಸೂರ್ಯನ ಮಂಗಲ ಪ್ರಭಾತಕ್ಕೆ ಸಾಂದಿ ಹಾಡಿದಂತೆ ಆಹ್ಲಾದಕರವಾಗಿತ್ತು. ಪೂರ್ವದಿಗಂತದಲ್ಲಿ ಅರುಣೋದಯದ ಛಾಯೆ ಮೂಡಿತ್ತು. ಬೆಳ್ಳಿ ಬಾಡಿತ್ತು. ಆಕಾಶದಲ್ಲಿನ ಅಗಣಿತ ಸಂಖ್ಯೆಯ ನಕ್ಷತ್ರಗಳು ನಿಸ್ತೇಜವಾಗಿದ್ದುವು. ಕಾರಿರುಳು ಕಳೆದು ಸುಪ್ರಭಾತ ಜಗತ್ತಿನ ಪಾಲಿಗೆ ಕಾದಿತ್ತು. ಆದರೆ ಸಾಮ್ರಾಜ್ಯದ ಪಾಲಿಗೆ ಅದೊಂದು ಕಾಳರಾತ್ರಿ—ಕೊನೆಗಾಣದ ತಮೋರಾತ್ರಿ!

ಸಾಮ್ರಾಜ್ಯದ ಜನತೆ ಯಾವುದನ್ನು ನಡೆಯಬಾರದೆಂದು ಆಶಿಸಿದ್ದರೋ ಅದು ನಡದೇ ಹೋಗಿತ್ತು. ಸೋಮರಸನು ಯಾವುದನ್ನು ತಡೆಗಟ್ಟಲು ಪ್ರಯತ್ನಿಸಿದ್ದನೋ, ಅದು ನಡೆದಿತ್ತು. ಅಚ್ಯುತರಾಯನು ಯಾವುದನ್ನು ಕನಸುಮನಸಿನಲ್ಲಿ ಎಣಿಸಲಿಲ್ಲವೋ ಅದು ಸಂಭವಿಸಿತ್ತು. ವರದಾಂಬಿಕೆಯ ಬಹುದಿನಗಳ ಆಶೆ ಫಲಿಸಿತ್ತು. ಅನ್ನಪೂರ್ಣಾದೇವಿಯ ಕುಮಾರನನ್ನು

ಯಾರೋ ಕೊಲೆಪಾತಕರು ಆ ರಾತ್ರಿ ಕೊಲೆಮಾಡಿದ್ದರು!

ಈ ಸುದ್ದಿಯನ್ನು ಕೇಳಿ ಅಚ್ಯುತರಾಯನು ಹೌಹಾರಿ, ಶಯನಗೃಹದಿಂದ ಹೊರಗೆ ಬಂದ. ಇದನ್ನು ಅವನು ನಂಬಲಾಗದೆ, ಸುದ್ದಿ ತಂದ ಚಾರರನ್ನು ಮತ್ತೆ ಮತ್ತೆ ಪ್ರಶ್ನಿಸಿದ. ಆದರೆ ಈ ಸುದ್ದಿಯನ್ನು ತಿಳಿಸಲು ಖಿನ್ನವದನನಾಗಿ ಸೋಮರಸನೇ ರಾಜಾಂತಃಪುರಕ್ಕೆ ಬಂದಾಗ ಈ ಸುದ್ದಿ ನಿಜವೆಂದು ನಂಬಲೇ ಬೇಕಾಯಿತು.

ಸೋಮರಸನು ಶೋಕವೇ ಮೂರ್ತಿವೆತ್ತಂತಾಗಿ ಬಂದು ಕರ್ಣಕಠೋರ ವಾದ ಸಂಗತಿಯನ್ನು ತಿಳಿಸಿದನು. ಅವನ ಮುಖ ಬಿಳುಚಿಕೊಂಡಿತ್ತು. ದುಃಖದಿಂದ ಧ್ವನಿ ಗದ್ಗದಿಸುತ್ತಿತ್ತು. ಎದೆ ಉದ್ವೇಗದಿಂದ ಪುಟ ಹಾರು ತಿತ್ತು. ಕಣ್ಣಿನಲ್ಲಿ ಧಾರಾಕಾರವಾಗಿ ಕಣ್ಣೀರು. ಸೋಮರಸನು ಕುಮಾರನ ಅಪಮೃತ್ಯುವನ್ನು, ರಾತ್ರಿ ನಡೆದಿದ್ದ ಸಂಗತಿಯನ್ನು ಒಂದೇ ಉಸಿರಿನಲ್ಲಿ ವರದಿ ಮಾಡಿದನು.

"ಪ್ರಭು! ಅನಾಹುತವಾಯಿತು! ಅತ್ಯಾಚಾರವಾಯಿತು! ಕುಮಾರ ನನ್ನು ಯಾರೋ ಘಾತುಕರು ಕತ್ತು ಮುರಿದು ಕೊಂದಿದ್ದಾರೆ!" ಎಂದು ಬಡ ಬಡಿಸಿದ, ಉದ್ವೇಗವನ್ನು ತಡೆಯಲಾರದೆ.

"ಏನು? ಕುಮಾರನನ್ನು ಕೊಲೆಮಾಡಿದ್ದಾರೆಯೆ? ಯಾರು ಆ ನೀಚರು? ಈ ಕೊಲೆ ಎಂತಾಯಿತು?"

ನಂಬದವನಂತೆ ಮತ್ತೆ ಮತ್ತೆ ಪ್ರಶ್ನಿಸಿದ ಅಚ್ಯುತರಾಯ.

"ಯಾರೋ ಘಾತುಕರು, ಕೊಲೆಪಾತಕರು ಕುಮಾರನನ್ನು ಕೊಂದು ದ್ವೇಷ ಸಾಧಿಸಿದ್ದಾರೆ."

"ತಮ್ಮ ರಕ್ಷಣೆಯಲ್ಲಿ ಸುಭದ್ರವಾಗಿದ್ದ ಕುಮಾರನನ್ನು ಯಾರು ಕೊಲೆ ಮಾಡಿದರು? ಹೇಗೆ ಕೊಲೆಮಾಡಿದರು?"

"ಇದೇ ನನಗೂ ದೊಡ್ಡ ಸಮಸ್ಯೆಯಾಗಿದೆ ಪ್ರಭು!"

"ನಿಮ್ಮ ಅನುಮತಿಯಿಲ್ಲದೆ, ಯಾರೂ ಅನ್ನಪೂರ್ಣಾದೇವಿಯ ಅಂತಃ ಪುರವನ್ನು ಪ್ರವೇಶಿಸುವಂತಿರಲಿಲ್ಲವಲ್ಲ! ಆದರೂ ಕೊಲೆ ನಡೆದಿದೆ. ಆಶ್ಚರ್ಯ! ಮಹದಾಶ್ಚರ್ಯ!"

"ಇದೇ ನನಗೂ ತಿಳಿಯದೆ ಹೋಗಿರುವ ಸಂಗತಿ ಪ್ರಭು! ಕುಮಾರನ ರಕ್ಷಣೆಗಾಗಿ ನಾನು, ನನ್ನ ಕೈಲಾಗುವ ಎಲ್ಲ ಮುಂಜಾಗ್ರತೆ ಕ್ರಮ ಕೈಗೊಂಡಿ ದ್ದರೂ, ಈ ಕೊಲೆಯಾಗಿದೆ. ಹೇಗಾಯಿತೆಂದು ಯಾರಿಗೂ ತಿಳಿದಿಲ್ಲ. ನನಗೂ ಬೆಳಗಾದ ಮೇಲೆ ಇದು ವರದಿಯಾದುದು!"

ಎಂದು ಅಂದಿನ ಘಟನೆಯನ್ನು ವಿವರಿಸಿದ.

ಮಧ್ಯರಾತ್ರಿಯ ವೇಳೆಗೆ ಮಗುವು ಎಚ್ಚೆತ್ತು ಯಾಕೋ ಅಳಲು ಪ್ರಾರಂಭಿಸಿತು. ಅದನ್ನು ಸಮಾಧಾನಗೊಳಿಸಿ, ನಿದ್ರಿಸುವಂತೆ ಮಾಡಲು ಅನ್ನಪೂರ್ಣಾದೇವಿ, ತನ್ನ ಚಾತುರ್ಯವನ್ನೆಲ್ಲಾ ವೆಚ್ಚಮಾಡಿದಳು. ಮಗುವು ಹಸಿದಿರಬಹುದೆಂದು ಹಾಲುಣಿಸಿದಳು. ಆಟದ ಸಾಮಾನುಗಳನ್ನು ಕೊಟ್ಟಳು. ಬಾಲಭಾಷೆಯಲ್ಲಿ ಅದನ್ನು ಎಷ್ಟು ಸಂತೈಸಲೆತ್ನಿಸಿದರೂ, ಸಮಾಧಾನಗೊಳ್ಳದೆ, ಏಕೋ ಕೆಟ್ಟ ಹಟ ಹಿಡಿದು ರೋದಿಸುತ್ತಿತ್ತು. ಅವಳಿಗೆ ಸೈರಣೆ ಮೀರಿ, ಮಗುವನ್ನು ಗದರಿಸಿ, ಅದನ್ನು ಸಂತೈಸಲು ದಾಸಿಯರ ವಶಕ್ಕೆ ಕೊಟ್ಟಳು. ಅಂದು ಅವಳಿಗೆ ಏಕೋ ವಿಪರೀತ ನಿದ್ದೆ ಬಂದಂತಾದುದರಿಂದ ಹಾಸಿಗೆಯಲ್ಲಿ ಮಲಗಿದಳು. ಮಲಗಿದುದೆ ತಡ ಭಯಂಕರವಾದ ನಿದ್ರೆ ಹತ್ತಿತು. ಬೆಳಗಿನ ಜಾವದ ವೇಳೆಗೆ ಪಕ್ಕದಲ್ಲಿ ಕಾಣದಿದ್ದ ಮಗುವಿನ ನೆನಪುಂಟಾಗಿ, ಮಗುವು ನಿದ್ರಿಸುತ್ತಿದೆಯೋ ಇಲ್ಲವೋ ತಿಳಿಯಲು, ಹೊನ್ನ ಮಂಚಕ್ಕೆ ಅನತಿದೂರದಲ್ಲಿದ್ದ ಹೊನ್ನ ತೊಟ್ಟಿಲನ್ನು ಬಂದು ನೋಡುತ್ತಾಳೆ. ಅಲ್ಲಿ ಮಗುವಿಲ್ಲ. ಗಾಬರಿಯಾಯಿತು. ಅಂತಃಪುರದ ಮೂಲೆ ಮೂಲೆಯನ್ನು ಹುಡುಕಿದಳು. ಮಗುವಿರಲಿಲ್ಲ. ರಾತ್ರಿ ಮಗುವನ್ನು ಕೊಟ್ಟ ದಾಸಿಯೂ ಕಾಣೆಯಾಗಿದ್ದಳು. ಅವಳು ಮಗುವಿನೊಡನೆ ಎಲ್ಲಿರುವಳೆಂದು ಹುಡುಕುತ್ತಾ ಬಂದಾಗ, ಅರಮನೆಯ ಹಿಂದಣ ಕುದುರೆ ಲಾಯದ ಬಳಿ, ಮಗುವಿನ ಮೃತದೇಹ ಕಣ್ಣಿಗೆ ಬಿತ್ತು. ಮಗುವನ್ನು ಯಾರೋ ಘಾತುಕರು, ನಿಷ್ಕರುಣೆಯಿಂದ ಕತ್ತು ಮುರಿದು ಕೊಂದಿದ್ದರು! ಮಗುವಿನ ಬಳಿಯಲ್ಲೇ ಕಾಣೆಯಾಗಿದ್ದ ದಾಸಿ ಮೈಯೆಲ್ಲಾ ಗಾಯಗೊಂಡು, ರಕ್ತದ ಮಡುವಿನಲ್ಲಿ ಸತ್ತು ಬಿದ್ದಿದ್ದಳು. ಅವಳನ್ನೂ ಮಗುವನ್ನು ಯಾರು ಕೊಂದರು? ಏಕೆ ಕೊಂದರು? ಹೇಗೆ ಕೊಂದರು? ಎಂಬುದು ಯಾರಿಗೂ ಬಗೆ ಹರಿಯದೆ ಹೋಗಿತ್ತು.

ಇದನ್ನು ಕಂಡು ಅನ್ನಪೂರ್ಣಾದೇವಿಗೆ ಭರಸಿಡಿಲೆರಗಿದಂತಾಗಿ ಮೂರ್ಛೆ ಹೋದಳು. ಅವಳು ಮೂರ್ಛೆ ತಿಳಿಯುವ ವೇಳೆಗೆ, ಸೋಮರಸನಿಗೆ ಸುದ್ದಿ ಹೋಗಿ, ಅವನೂ ಅಲ್ಲಿಗೆ ಬಂದಿದ್ದ. ಮಗುವಿನ ಮರಣದಿಂದ ಮಹಾರಾಣಿಯುಮೆಲ್ಲಿ ಎದೆಯೊಡೆದು ಪ್ರಾಣಬಿಡುವಳೋ ಎಂದು ಎಲ್ಲರೂ ಗಾಬರಿಗೊಂಡು, ಶೈತ್ಯೋಪಚಾರ ಮಾಡಿದರು. ಅವಳು ಎಚ್ಚರಗೊಂಡಳು. ಮತ್ತೆ ಮಗುವಿನ ನೆನಪು ಬಂದು, ದುಃಖದ ಕಟ್ಟೆಯೊಡೆದು, ಹುಚ್ಚಳಂತೆ ಚೀರಿ ಪುನಃ ಮೂರ್ಛಿತಳಾದಳು. ಅವಳನ್ನು ಸಂತೈಸಿ ಸಮಾಧಾನ ಗೊಳಿಸುವ ಕಾರ್ಯವನ್ನು ದಾಸಿಯರಿಗೆ ವಹಿಸಿ, ಮಗುವಿನ ಕಗ್ಗೊಲೆ ಮಾಡಿದ ಹತ್ಯಾಕಾರಿಗಳ ಶೋಧನೆಗೆ ಸೋಮರಸ ಗಮನ ಕೊಟ್ಟ.

ಒಂದೇ ರಾತ್ರಿ ಇಬ್ಬರ ಕೊಲೆಯಾಗಿತ್ತು. ಅದೂ ಯಾವ ಗದ್ದಲವೂ,

ಇಲ್ಲದೆ. ಯಾರಿಗೂ ಸುಳಿವು ಕೊಡದೆ, ಹತ್ಯಾಕಾರಿಗಳು ತಮ್ಮ ಕೆಲಸವನ್ನು ಜಾಗ್ರತೆಯಿಂದ ಸಾಧಿಸಿ, ಹೇಗೋ ತಲೆ ತಪ್ಪಿಸಿಕೊಂಡಿದ್ದರು. ಯಾರಿಗೂ ಯಾವ ಬಗೆಯ ಕೇಡನ್ನು ಬಗೆಯದಿದ್ದ ಆ ಮಗುವನ್ನು ಕೊಲೆ ಮಾಡಿದ ನೀಚಕರು ಯಾರು? ಕುಮಾರನ ಮೇಲೆ ಅಕಾರಣವಾಗಿ ದ್ವೇಷ ಸಾಧಿಸಿದ ವಿಶ್ವಾಸ ಘಾತುಕರು ಯಾರು? ಹಸು ಮಗುವನ್ನು ಕತ್ತು ಮುರಿದು ಕೊಲೆ ಮಾಡಿದ ಪಾತಕಿಗಳು ಯಾರು? ಎಂದು ಎಷ್ಟು ಯೋಚಿಸಿದರೂ ಸೋಮರಸನಿಗೆ ಬಗೆಹರಿಯಲಿಲ್ಲ. ಕುಮಾರನ ಕೊಲೆ ಸಿಂಹಾಸನದ ಮೇಲೆ ಕಣ್ಣಿಟ್ಟಿರುವ ಯಾರೋ ನಡೆಸಿರುವರೆಂಬುದರ ಬಗ್ಗೆ ಅವನಿಗೆ ಸಂಶಯ ಉಳಿಯಲಿಲ್ಲ. ಅವನ ಕಣ್ಣ ಮುಂದೆ ಹಲವಾರು ವ್ಯಕ್ತಿಗಳು ಹಾದು ಹೋದರು....

ಮಹಾರಾಣಿ ಚಿನ್ನಾದೇವಿ....ಅಯ್ಯಪ್ಪರಸ....ಅಳಿಯ ರಾಮರಾಯ.... ತಿರುಮಲರಾಯ...ಮಹಾರಾಣಿ ವರದಾಂಬಿಕೆ.. ಸಾಮ್ರಾಟ್ ಅಚ್ಯುತರಾಯ...

ಯಾರ ಬಗ್ಗೆಯೂ ಆರೋಪ ಹೊರಿಸುವಂತೆ ಇರಲಿಲ್ಲ. ಖಂಡಿತವಾದ ಪ್ರಮಾಣಗಳು ದೊರಕುವವರೆಗೆ....

ಕೊಲೆಪಾತಕರು ಹೇಗೆ ಸಮಸ್ಯೆಯಾಯಿತೋ, ನಡೆದಿದ್ದ ಕೊಲೆಯ ರೀತಿಯೂ ಅಷ್ಟೇ ವಿಸ್ಮಯವಾಗಿತ್ತು. ಕೈಗಿತ್ತಿದ್ದ ಮಗುವನ್ನು ದಾಸಿ ತೂಗಿ ಮಲಗಿಸುತ್ತಿದ್ದುದನ್ನು ಅನ್ನಪೂರ್ಣಾದೇವಿ ನೋಡಿದ್ದಳು. ಆಗ ಮಧ್ಯರಾತ್ರಿಯ ಸಮಯ. ಅಂತಃಪುರದಲ್ಲಿ ಇತರ ಪರಿಚಾರಿಕೆಯರು ನಿದ್ರಿಸುತ್ತಿದ್ದರೂ, ಅಂತಃಪುರದ ಹೊರಗೆ ಕಾಯುತ್ತಿದ್ದ ಪಹರೆಯವರು ಎಂದಿನಂತೆ ಎಚ್ಚರದಿಂದಲೇ ಕಾಯುತ್ತಿದ್ದರು. ಅವರಿಗೆ ಮಗು ಚೀರಿದ ದನಿಯಾಗಲೀ ಮತ್ತೆ ಯಾವ ಗದ್ದಲವಾಗಲೀ ನಿಶೆಯ ಗಾಢತನದಲ್ಲಿ ಕೇಳಿಸಿರಲಿಲ್ಲ. ಅಲ್ಲಿ ಯಾರೂ ಆ ರಾತ್ರಿ ಸುಳಿದಿರಲಿಲ್ಲ. ಹೀಗಿದ್ದೂ ಕೊಲೆಯಾಗಿತ್ತು! ಎಲ್ಲರಿಗೂ ಅಚ್ಚರಿಯಾಗಿತ್ತು!

"ಒಂದು ವೇಳೆ ಆ ದಾಸಿಯೇ ಕುಮಾರನನ್ನು ಕೊಲೆ ಮಾಡಿದ ಹತ್ಯಾಕಾರಿಣಿ ಏಕಾಗಿರಬಾರದು? ಮಗುವು ತೊಟ್ಟಿಲಲ್ಲಿ ನಿದ್ರಿಸಿದ ಮೇಲೆ, ಮಗುವನ್ನು ಎತ್ತಿಕೊಂಡು ಅಂತಃಪುರದ ಒಳಬಾಗಿಲಿನ ಮೂಲಕ, ಅರಮನೆಯಿಂದ ಒಳಗೆ ಬಂದು ಅಲ್ಲಿ ಮಗುವನ್ನು ಕೊಲೆ ಮಾಡಿ, ಹಿಂದಿರುಗುತ್ತಿರುವಾಗ, ಹಠಾತ್ತನೆ ಅವಳು ಯಾರ ಕೈಯಲ್ಲೋ ಮೃತ್ಯುವಿಗೀಡಾಗಿರಬಾರದೇಕೆ? ಎಂಬ ಸಂಶಯ ಉಂಟಾಯಿತು. ಅದಕ್ಕೆ ಮಗುವಿನ ದೇಹದೊಂದಿಗೇ, ದಾಸಿಯ ಕೊಲೆಯಾದ ದೇಹವೂ ಇದ್ದುದು ಅನುಮಾನಕ್ಕೆ ಕಾರಣವಾಗಿತ್ತು. ದಾಸಿಯ ಮುಖದಲ್ಲಿ ಯಾವುದನ್ನೋ ಕಂಡು ಹೆದರಿದ ಭಯವಿತ್ತು. ದೇಹದ ಒಂದೆರಡು ಕಡೆಗಳಲ್ಲಿ ಗಾಯಗಳಾಗಿ ಅಲ್ಲಿಂದ ರಕ್ತಸ್ರಾವವಾಗುತ್ತಿತ್ತು. ಅವಳು ಮಡಿದು

ಒಂಪೆರಡು ಗಂಟೆಗಳಾಗಿರಬಹುದೆಂದು, ರಕ್ತವನ್ನು ಪರೀಕ್ಷಿಸಿದ ವೈದ್ಯರು ತಿಳಿಸಿದ್ದರು. ಅವಳಿಂದ ತಮ್ಮ ಕಾರ್ಯ ಸಾಧಿಸಿಕೊಂಡ ಘಾತುಕರು, ಅವಳು ಬದುಕಿದ್ದರೆ ತಮ್ಮ ಗುಟ್ಟು ಹೊರಬೀಳುವುದೆಂದು ಅರಿತು ಅವಳನ್ನು ಹಠಾತ್ತನೆ ತೀರಿಸಿರಬೇಕು. ಅವರು ಯಾರು? ಮಧ್ಯರಾತ್ರಿಗೆ ಮೊದಲು ಕುದುರೆ ಕೆನೆದ ಶಬ್ದವಾಗಲು ಲಾಯಕ್ಕೆ ಹೋಗಿ ನೋಡಲು ಅಲ್ಲಿ ಯಾರೂ ಇರಲಿಲ್ಲವಂತೆ. ಮಧ್ಯರಾತ್ರಿಯಿಂದ ಮುಂಜಾವಿನ ಒಳಗೆ ಕೊಲೆ ನಡೆದಿರಬೇಕೆಂಬುದರ ಬಗೆ ಸಂಶಯ ಉಳಿಯಲಿಲ್ಲ.

ಈ ಸಂಗತಿ ಬಹಳಕಾಲ ರಹಸ್ಯವಾಗಿ ಉಳಿಯಲಿಲ್ಲ. ಅರಮನೆಯ ರಕ್ಷಣೆಯ ಸೈನಿಕರಲ್ಲಿ ಒಬ್ಬನ ಕಣ್ಮರೆಯಾಗಿತ್ತು. ಅವನ ದೇಹ ತುಂಗಭದ್ರೆಯ ತೀರದಲ್ಲಿ ಮೃತವಾಗಿ ಬಿದ್ದಿತ್ತು. ಈ ಮೂರು ಕೊಲೆಗಳು ಒಬ್ಬ ವ್ಯಕ್ತಿಯ—ಪ್ರಭಾವಶಾಲಿಯಾದ, ಚಾಣಾಕ್ಷ ವ್ಯಕ್ತಿಯ ಕೈವಾಡವೆಂದು ತಿಳಿಯಲು ಅವಕಾಶವಾಯಿತು. ಕುಮಾರನನ್ನು ದಾಸಿಯಿಂದ ಕೊಲೆಮಾಡಿಸಿ—ದಾಸಿಯನ್ನು ಸೈನಿಕನಿಂದ ಕೊಲೆಮಾಡಿಸಿ ಸೈನಿಕನನ್ನು ತಾವು ಕೊಲೆಮಾಡಿಸಿ– ತಮ್ಮ ರಹಸ್ಯವನ್ನು ತಾವು ಕಾಯ್ದಿರಿಸಿಕೊಂಡಿದ್ದಾರೆ – ಯಾರೋ ನೀಚರು ಅವರು ಅತ್ಯಂತ ಪ್ರಬಲರೂ, ಕುಶಾಗ್ರಮತಿಗಳೂ ಮಹೋದ್ದೇಶ ಸಾಧಕರೂ – ರಾಜಬಂಧುಗಳೂ ಆಗಿದ್ದಾರೆ! ಎಂಬುದು ಸ್ಪಷ್ಟವಾಗಿತ್ತು. ಅವರು ಯಾರೆಂಬುದು ಮಾತ್ರ ತಿಳಿಯದೆ ಹೋಗಿತ್ತು!

ಈಗ ಸೋಮರಸನಿಗೆ ಒಬ್ಬಿಬ್ಬರ ಮೇಲೆ ಅನುಮಾನ ಬಂದಿತ್ತು.

ಅಳಿಯ ರಾಮರಾಯ, ತಿರುಮಲರಾಯರು ಈ ಕೆಲಸ ನಡೆಸಿರಲಾರರು. ಏಕೆಂದರೆ ಅವರು ರಾಜಧಾನಿಯಲ್ಲಿರಲಿಲ್ಲ. ಬಹುಶಃ ಚಿನ್ನಾದೇವಿ ಈ ಕೊಲೆ ನಡೆಸಿರಬಹುದು! ಇಲ್ಲವಾದರೆ ವರದಾಂಬಿಕೆ ತನ್ನ ಅಧಿಕಾರವನ್ನು ಸ್ಥಿರಪಡಿಸಿಕೊಳ್ಳಲು ಇದನ್ನು ನಡೆಸಿರಬೇಕು – ಆದರೆ ಈ ಅನುಮಾನವನ್ನು ಪ್ರಭುಗಳಾದ ಅಚ್ಯುತರಾಯರಿಗೆ ತಿಳಿಸುವುದೆಂತು?

ಈ ಹೊಯ್ದಾಟದಲ್ಲಿರುವಾಗ ಅಚ್ಯುತರಾಯನೇ ಪ್ರಶ್ನಿಸಿದ.

"ಸೋಮರಸರೇ, ಕುಮಾರನ ಹತ್ಯಾಕಾರಿಗಳು ಯಾರೇ ಇರಲಿ ಅವರನ್ನು ಹಿಡಿತರಿಸಿ, ಕ್ರೂರವಾಗಿ ಶಿಕ್ಷಿಸಬೇಕು – ತಮ್ಮ ಅಕೃತ್ಯಕ್ಕಾಗಿ ಮರುಗುವಂತೆ ಮಾಡಬೇಕು."

"ಹೌದು ಪ್ರಭು, ಕೊಲೆಪಾತಕರಿಗೆ ತಕ್ಕರೀತಿಯಲ್ಲಿ ಶಿಕ್ಷೆ ವಿಧಿಸಬೇಕು. ಅವರು ತಮ್ಮ ಅಪರಾಧಕ್ಕೆ ಪಶ್ಚಾತ್ತಾಪ ಪಡುವ ವರೆಗೂ, ಸಾಮ್ರಾಟ್ ಕೃಷ್ಣದೇವರಾಯರ ಆತ್ಮಕ್ಕೆ ಶಾಂತಿಯಿಲ್ಲ."

"ಈ ಕೊಲೆ ಯಾರಿಂದ ನಡೆದಿರಬಹುದು? ಈ ಬಗ್ಗೆ ನಿಮಗೇನಾದರೂ ತಿಳಿದಿದೆಯೇ?"

"ಇಲ್ಲ ಪ್ರಭು! ಈ ಕೊಲೆ ಯಾರಿಂದ ನಡೆದಿದ್ದರೂ, ಸಿಂಹಾಸನದ ಮೇಲೆ ಕಣ್ಣಿಟ್ಟ, ಯಾರೋ ರಾಜ ಬಂಧುಗಳು ಮಾಡಿರುವ ಕೆಲಸ. ಅವರು ಅತ್ಯಂತ ಸಮರ್ಥರೂ, ಕುಶಾಗ್ರಮತಿಗಳು ಆಗಿರುವರು. ಅವರನ್ನು ಹಿಡಿಯುವುದು ಕಷ್ಟ!"

"ಅಂದರೆ!"

"ಕುಮಾರನ ಕೊಲೆಯಿಂದ, ಯಾರಿಗೆ ಅನುಕೂಲವಾಗುವುದೋ, ಕುಮಾರನ ಕೊಲೆಯಿಂದ ಯಾರಿಗೆ ಸಿಂಹಾಸನ ನಿಷ್ಕಂಟಕವಾಗುವುದೋ, ಅವರು ಮಾಡಿರುವ ಹೇಯ ಕೃತ್ಯವೇ ಇದು! ಸಂಶಯವಿಲ್ಲ!"

"ಹಾಗಾದರೆ ನಿಮಗೆ ಯಾರ ಮೇಲೆ ಸಂಶಯ?"

"ಈಗಿನ ಸ್ಥಿತಿಯಲ್ಲಿ ಯಾರ ಮೇಲೂ ಆರೋಪ ಹೊರಿಸಲಾರೆ ಪ್ರಭು!"

"ಏಕೆ?"

"ಆರೋಪವನ್ನು ಹೊರಿಸುವಂತಿದ್ದರೆ, ಅದಕ್ಕೆ ಪ್ರಮಾಣಗಳು ಬೇಕು. ಕೇವಲ ಊಹೆಗಳಿಂದ, ಕಲ್ಪನೆಗಳಿಂದ ಇಂತಹ ಆರೋಪಗಳನ್ನು ಮಾಡಲಾಗದು! ಇದಕ್ಕೆ ಪ್ರಬಲವಾದ ಆಧಾರಗಳು ಬೇಕು– ಇಲ್ಲದಿದ್ದರೆ, ಆರೋಪಿಯೇ ತಪ್ಪಿತಸ್ಥನಾಗುವ ಪ್ರಸಂಗ ಬರಬಹುದು!".

"ಹಾಗಾದರೆ ನೀವು ಹೇಳುವುದೇನು?"

"ಈ ಕೊಲೆ ರಾಜಬಂಧುಗಳಿಂದ ಸಿಂಹಾಸನದ ಸಲುವಾಗಿ ನಡೆದಿದೆ ಇದಂತೂ ಸ್ಪಷ್ಟ." ಎಂದು ಅರ್ಥಗರ್ಭಿತವಾಗಿ ಅಚ್ಯುತರಾಯನ ಮುಖ ನೋಡಿದ.

"ನೀವು ಹೇಳುವುದನ್ನು ನೇರ ಹೇಳಿಬಿಡಿ– ಏಕೆ ಬಳಸಿ ಬಳಸಿ ಹೇಳುತ್ತಿದ್ದೀರಿ. ಈ ಕೊಲೆಯನ್ನು ನಾವು ಯಾರೋ ಮಾಡಿರಬೇಕೆಂದು ನೀವು ಊಹಿಸಿದ್ದಂತಿದೆ—"

"ನಾನು ತಮ್ಮನ್ನು ಆರೋಪಿಸಲಿಲ್ಲ ಪ್ರಭು!"

"ನೀವು ಆರೋಪಿಸಲಿಲ್ಲ, ಆದರೆ ನಿಮ್ಮ ಸಂಶಯದ ನೋಟ ಧ್ವನಿ, ಮಾತಿನ ಧಾಟಿ ಎಲ್ಲವೂ ನಮ್ಮನ್ನು ಆರೋಪಿಸಿದಂತಿವೆ—"

"ತಾವು ಹಾಗೇಕೆ ತಿಳಿಯಬೇಕು ಪ್ರಭು!"

"ನೀವೇ ಅಪ್ಪಣೆ ಕೊಡಿಸಿದಿರಲ್ಲ– ಈ ಕೊಲೆ ಸಿಂಹಾಸನಕ್ಕಾಗಿ, ತಮ್ಮ ಹಕ್ಕನ್ನು ಊರ್ಜಿತಗೊಳಿಸುವ ಸಲುವಾಗಿ, ರಾಜಬಂಧುಗಳಿಂದ ಆಗಿದೆ ಎಂದು. ಈ ಮಾತಿನ ಅರ್ಥ—ರಾಜಪ್ರತಿನಿಧಿಯಾಗಿರುವವನು ನಾನು, ಸಿಂಹಾಸನವನ್ನು

ದಕ್ಕಿಸಿಕೊಳ್ಳಲು ಮಾಡಿದ್ದೇನೆ ಎಂದಲ್ಲವೇ?"

"ನೀವೊಬ್ಬರೆ ಕೊಲೆಯಿಂದ ಉಪಕೃತರಲ್ಲ ಪ್ರಭು!"

"ಮತ್ತೆ ಈ ಕೊಲೆಯಿಂದ ಯಾರಿಗೆ ಪ್ರಯೋಜನವಿದೆ?"

"ಚಿನ್ನಾದೇವಿಯವರಿಗೆ, ಆಳಿಯ ರಾಮರಾಯ, ತಿರುಮಲರಾಯರಿಗೆ...." ಎಂದು ಹೇಳಿ ನಿಟ್ಟುಸಿರುಬಿಟ್ಟ.

"ಅಮಾತ್ಯರೇ ನೀವು ಸ್ಪಷ್ಟವಾಗಿ ಮಾತನಾಡಿದಂತೆ, ನಾನೂ ಸ್ಪಷ್ಟವಾಗಿ ಮಾತನಾಡುತ್ತಿದ್ದೇನೆ ಈ ಕೊಲೆಯ ಆರೋಪದಿಂದ ನೀವೂ ಹೊರತಾಗಿಲ್ಲ!"

"ನನ್ನ ಮೇಲೆ ನಿಮಗೆ ಸಂಶಯವೇ ಪ್ರಭು!"

"ಸಂಶಯಕ್ಕೆ ಕಾರಣವಿದೆ ಅಮಾತ್ಯರೇ!"

"ಹೇಗೆ?"

"ನೀವು ಕುಮಾರನ ರಕ್ಷಣೆಯ ಭಾರ ವಹಿಸಿದ್ದವರು ಅವರ ಅರಮನೆಯಲ್ಲಿ ನಿಮ್ಮ ವಿನಹ ಬೇರೆ ನರಹುಳುವಿನ ಪ್ರವೇಶವಿಲ್ಲ. ಅಂದ ಮೇಲೆ ಈ ಕೊಲೆ ನಿಮ್ಮಿಂದಲೇ ನಡೆದಿರಬಾರದೇಕೆ?"

"ಶಿವಶಿವಾ! ಎಂಥಹ ಕರ್ಣಕಠೋರವಾದ ಮಾತು. ನಾನು ಈ ಬಾಲಹತ್ಯೆಯಿಂದ ಸಾಧಿಸಬೇಕಾದ್ದೇನಿದೆ ಪ್ರಭು!"

"ಅದು ನನಗೇನು ಗೊತ್ತು? ಕುಮಾರನ ಬಳಿಗೆ ಯಾರೂ ಸುಳಿಯಕೂಡದಂತೆ. ನೀವು ಬೇರೆ ಅರಮನೆಯಲ್ಲಿಟ್ಟು ಸರ್ಪಗಾವಲು ಹಾಕಿದಿರಿ. ಕುಮಾರನನ್ನು ನಮ್ಮ ವಶಕ್ಕೆ ಕೊಡಲು ಸಮ್ಮತಿಸದೆ ಹೋದಿರಿ. ಕರ್ತವ್ಯದ ಹೆಸರನ್ನು ಮುಂದೆ ಮಾಡಿ ನಮ್ಮಲ್ಲೂ ಸಂದೇಹ ತಾಳಿದಿರಿ. ಸ್ವಯಂ ರಾಣಿಯವರ ಬಗ್ಗೆ ಸಂಶಯ ತಾಳಿ ಅವರು ಕುಮಾರನನ್ನು ನೋಡದಂತೆ ತಡೆದಿರಿ. ನೀವು ಯಾವುದೋ ಮಹತ್ಕಾರ್ಯ ಸಾಧಿಸಲು ಹೊಂಚು ಹಾಕಿರುವಿರೆಂದು ನಿಮ್ಮ ಬಗ್ಗೆ ಜನ ಸಂಶಯ ವ್ಯಕ್ತಪಡಿಸುತ್ತಿರುವರೆಂಬ ಸಂಗತಿಯನ್ನು ಹಿಂದೆ ನಾವು ನಿಮ್ಮ ಗಮನಕ್ಕೆ ತಂದು ಎಚ್ಚರಿಸಿದ್ದೆವು. ಅದನ್ನು ನೀವು ಉಪೇಕ್ಷೆಮಾಡಿದಿರಿ. ಅನಂತರ ಸಿದ್ಧಸಾಧರ ವಾಣಿಯನ್ನು ಕುಹಕಿಗಳ ಅಸಂಬದ್ಧ ಪ್ರಲಾಪವೆಂದು ತಿರಸ್ಕರಿಸಿದಿರಿ! ಈಗ ನೋಡಿ ಆ ಮಹಾತ್ಮರ ವಚನ ಎಷ್ಟರಮಟ್ಟಿಗೆ ನಿಜವಾಗಿದೆ. ಅವರು ಭವಿಷ್ಯ ನುಡಿದು ಎಚ್ಚರಿಸಿದ ಹದಿನೈದು ದಿನಗಳಲ್ಲಿ—ಕುಮಾರನ ಕೊಲೆ ನಡೆದಿದೆ—ಇದರ ಅರ್ಥವೇನು? ನಿಮ್ಮನ್ನೇ ಕೊಲೆಪಾತಕರೆಂದು ನಾವೇಕೆ ಆರೋಪಿಸಬಾರದು?"

"ಪ್ರಭು, ಕುಮಾರನ ಕೊಲೆ ಮಾಡಿ, ಸಿಂಹಾಸನಕ್ಕೆ ಕಣ್ಣಿಟ್ಟಿರುವೆನೇ?"

"ಇರಬಹುದು ಯಾರಿಗೆ ಗೊತ್ತು."

" ನಮ್ಮ ಮೇಲೆ ನಿಮಗೆ ಅಪನಂಬಿಕೆಯೆ ?"

" ನಮ್ಮಲ್ಲಿ ನಿಮಗೆ ಅಪನಂಬಿಕೆ ಇರುವುದಾದರೆ – ನಿಮ್ಮಲ್ಲೂ ನಮಗೆ ಅಪನಂಬಿಕೆ."

" ನಮ್ಮಲ್ಲಿ ನಿಮಗೆ ಸಂದೇಹವೇ ?"

" ಮೇಲೆ ಹೇಳಿದ ಕಾರಣಗಳಿಂದ ನಿಮ್ಮನ್ನು ಸಂದೇಹಿಸಲು ಆಧಾರಗಳಿವೆ. ಅಷ್ಟು ಮಾತ್ರವಲ್ಲ ಅಳಿಯ ರಾಮರಾಯ, ತಿರುಮಲರಾಯರನ್ನು ದಂಡ ಯಾತ್ರೆಯ ನೆಪದಲ್ಲಿ ಹೊರಗಟ್ಟಿದ್ದೀರಿ ಮಹಾತ್ಮರ ಸಿದ್ಧವಾಣಿಯನ್ನು ತಿರಸ್ಕರಿಸಿ ನಮ್ಮ ಬಾಯಿ ಮುಚ್ಚಲು ಪ್ರಯತ್ನಿಸಿದಿರಿ. ಈಗ ಕುಮಾರನ ಕೊಲೆಯನ್ನು ರಹಸ್ಯವಾಗಿ ನಡೆಸಿ ಬೇರೊಬ್ಬರ ಮೇಲೆ ಜಾಣ್ಮೆಯಿಂದ ಆರೋಪ ಹೊರೆಸಿ, ಪಾರಾಗಲು ಪ್ರಯತ್ನಿಸುತ್ತಿದ್ದೀರಿ. ನೀವು ಹೀಗೆ ಹೇಳಿದ ಮಾತ್ರಕ್ಕೆ ನಿಮ್ಮ ಮೇಲಿನ ಆರೋಪಗಳು ಹುಸಿಯಾಗುವುದೆಂದು ಭಾವಿಸಿದಿರಾ ? ನೀವು ನಿಮ್ಮ ಸವಿಮಾತುಗಳಿಂದ ನಮ್ಮನ್ನು ಮರುಳುಮಾಡಲಾರಿರಿ ! ನಿಮ್ಮ ಕಾರಾಗಾರ ವೇನೆಂದು ನಮಗೂ ಅರಿವಾಗಿದೆ !"

" ನನ್ನ ಕಾರಾಗಾರವೇನೆಂದು ಅರಿವಾಗಿದೆ ?" ನಿರುದ್ವೇಗದಿಂದ ಪ್ರಶ್ನಿಸಿದ ಸೋಮರಸ.

" ಕುಮಾರನನ್ನು ನಿವಾರಿಸಿ, ಸಾಧ್ಯವಾದರೆ ನಮ್ಮನ್ನು ಮೂಲೆಗೊತ್ತಿ, ನೀವೇ ಸಾಮ್ರಾಟರಾಗಿ ಮೆರೆಯಲು ಸಂಚುಮಾಡುತ್ತಿರುವಿರಿ ?"

" ಇದನ್ನು ನೀವು ನಂಬುವಿರಾ ?"

" ಇದುವರೆಗೆ ನಂಬಿರಲಿಲ್ಲ – ನಿಮ್ಮ ಆಶ್ರಯದಲ್ಲಿ – ರಕ್ಷಣೆಯಲ್ಲಿ ಇದ್ದು ಕುಮಾರನ ಕೊಲೆಯಾದ ಮೇಲೆ ನಂಬಬೇಕಾಗಿದೆ ಎಂದು ವಿಷಾದದಿಂದ ತಿಳಿಸಬೇಕಾಗಿದೆ."

" ಹಾಗಾದರೆ ನಾನು ನಿಜವಾಗಿಯೂ ನಿರ್ಭಾಗ್ಯನೇ ಸರಿ !"

" ಏಕೆ ?"

" ನಾನು ಸಾಮ್ರಾಜ್ಯಕ್ಕೆ ಇಷ್ಟು ನಿಷ್ಠೆಯಿಂದ ಸೇವೆ ಸಲ್ಲಿಸಿದರೂ, ನನ್ನಲ್ಲಿ ಇನ್ನೂ ನಿಮಗೆ ನಂಬಿಕೆ ಉಂಟಾಗಲಿಲ್ಲ !"

" ನಿಮ್ಮ ಸೇವೆಯ ಹಿಂದೆ ದುರುದ್ದೇಶವಿದೆ ಎಂದು ಇದುವರೆಗೆ ಕಂಡಿರಲಿಲ್ಲ. ಇಂದು ಕುಮಾರನ ಕೊಲೆಯಿಂದ ನಿಮ್ಮ ಗೋಮುಖವ್ಯಾಘ್ರತನ ಬಯಲಾಯಿತು !"

" ಪ್ರಭು ! ಅಕಾರಣವಾಗಿ ನನ್ನ ಮೇಲೆ ಮಿಥ್ಯಾರೋಪ ಹೊರಿಸುತ್ತಿದ್ದೀರಿ !"

" ನಾನು ಮಿಥ್ಯಾರೋಪ ಹೊರೆಸುತ್ತಿಲ್ಲ – ನಾನು ಕಂಡುಕೊಂಡ ಸಂಗತಿಗಳನ್ನು ತಿಳಿದಿವೆ ಅಷ್ಟೆ."

SK3.6 KBR R

“ನಾನು ಪ್ರಭುಗಳನ್ನು ನಿಷ್ಠೆಯಿಂದ ಸೇವಿಸಿದ್ದೇನೆ. ನಾನೆಂದಿಗೂ ಕಾಯಾ, ವಾಚಾ, ಮನಸಾ ದ್ರೋಹ ಬಗೆದಿಲ್ಲ!”

“ಇದನ್ನು ಹೇಳಬೇಕಾದವರು ನೀವಲ್ಲ – ನಾವು!”

“ಪ್ರಭುಗಳು ನನ್ನಲ್ಲಿ ಯಾವ ಸ್ವಾರ್ಥವನ್ನು ಕಂಡಿದ್ದೀರಿ?”

“ನಿಮ್ಮ ಪ್ರತಿಯೊಂದು ಕಾರ್ಯದಲ್ಲೂ ಸ್ವಾರ್ಥ ಅಡಗಿದೆ. ಕೃಷ್ಣದೇವರಾಯರ ನಂತರ, ರಾಜ್ಯಾಡಳಿತದ ಗಂಧ ಲವಲೇಶವೂ ತಿಳಿಯದಿದ್ದ ನನ್ನನ್ನು ಸಿಂಹಾಸನದ ಮೇಲೆ ಕೂಡಿಸಿ, ನನ್ನನ್ನು ನಿಮ್ಮ ಕೈಗೊಂಬೆಯನ್ನಾಗಿ ಮಾಡಿಕೊಂಡು, ಸರ್ವಾಧಿಕಾರಿಯಾಗಿ ಮೆರೆಯಲು ಹವಣಿಸಿದಿರಿ. ಪ್ರಬಲರಾದ ಅಳಿಯಂದಿರು ಹತ್ತಿರವಿದ್ದರೆ ನಿಮ್ಮ ಚಟುವಟಿಕೆಗಳಿಗೆ ಕಂಟಕವಾಗುವುದೆಂದು ಅವರನ್ನು ದೂರ ಕಳುಹಿದಿರಿ. ಇವೆಲ್ಲವೂ ಸ್ವಾರ್ಥವಲ್ಲವೇ? ಇನ್ನು ನ್ಯಾಯಾಸ್ಥಾನ ಇದನ್ನು ನಿರ್ಧರಿಸುವುದು.”

S 021976

“ನನ್ನ ನಿಷ್ಠೆಯ ಅಗ್ನಿಪರೀಕ್ಷೆ ನ್ಯಾಯಾಲಯದಲ್ಲಿ ನಡೆಯುವುದಾದರೆ, ನಾನು ವಿಚಾರಣೆಯನ್ನು ಸಂತೋಷದಿಂದ ಸ್ವಾಗತಿಸುತ್ತೇನೆ.”

“ನೀವು ಅಲ್ಲಿಯವರೆಗೆ ಬಂಧನದಲ್ಲಿರಬೇಕಾಗುತ್ತದೆ!”

“ಏಕೆ? ನಾನು ತಲೆತಪ್ಪಿಸಿಕೊಳ್ಳುವೆನೆಂದು ಸಂಶಯವೇ?”

“ನಿಷ್ಪಕ್ಷ ನ್ಯಾಯ ತೀರ್ಮಾನಕ್ಕೆ ನೀವು ಬಂಧನದಲ್ಲಿರುವುದು ಅಗತ್ಯ!”

“ಹಾಗಾದರೆ ನಿಮ್ಮಿಚ್ಛೆಯಿದ್ದಂತಾಗಲಿ!” ಎಂದು ಸೊಂಟದಲ್ಲಿದ್ದ ಕತ್ತಿಯನ್ನು ಒಪ್ಪಿಸಿಕೊಟ್ಟು, ತಾನಾಗಿ ಬಂಧನಕ್ಕೆ ಒಳಗಾದ ಸೋಮರಸ.

ಅಚ್ಯುತರಾಯನು ತನ್ನ ಅಂಗರಕ್ಷಕ ಪಡೆಯವರಿಗೆ, ಸೋಮರಸನನ್ನು ಬಂಧಿಸಿ, ಅರಮನೆಯ ಕೋಟೆಯ ಕಾರಾಗೃಹದಲ್ಲಿಡುವಂತೆ ಆಜ್ಞೆ ಮಾಡಿದ. ಆದರಂತೆ ಸೈನಿಕರು ಸೋಮರಸನನ್ನು ಬಂಧಿಸಿ ಸೆರೆಮನೆಗೊಯ್ದರು.

ಕುಮಾರನ ಕೊಲೆ, ಹಾಗೂ ಸೋಮರಸನ ಬಂಧನದ ಸುದ್ದಿ ರಾಜಧಾನಿಯಲ್ಲಿ ಕಾಳ್ಗಿಚ್ಚಿನಂತೆ ಹರಡಿತು. ಮೊದಲೇ ಸಿದ್ಧನಾಥರ ಭವಿಷ್ಯದಿಂದ ಕಂಗೆಟ್ಟಿದ್ದ ಜನಕ್ಕೆ ಈ ಸುದ್ದಿ ಬರಸಿಡಿಲು ಬಡಿದಂತೆ ಆಗಿತ್ತು. ಅವರು ಹೌಹಾರಿದರು. ರಾಜಕುಮಾರನ ದುರ್ಮರಣವನ್ನು ಕೇಳಿ ಕಂಗೆಟ್ಟರು. ಸೋಮರಸನ ಕೈವಾಡ ಈ ಕೊಲೆಯಲ್ಲಿರುವುದೆಂಬ ಸುದ್ದಿ ಕೇಳಿ ಅವರು ಕನಲಿದರು. ಕೆಲವರಿಗೆ ಸೋಮರಸನಂತಹ, ನಿಸ್ಪೃಹ ಸ್ವಾಮಿನಿಷ್ಠ ವ್ಯಕ್ತಿಯಿಂದ ಕೊಲೆಯಂತಹ ಹೇಯಕಾರ್ಯ ನಡೆದಿರುವುದೇ ಎಂದು ಸಂದೇಹವಾಯಿತು. ರಾಜಧಾನಿಯ ಜನತೆ, ಕುಮಾರನ ವಿಯೋಗಕ್ಕಾಗಿ ಮರುಗುತ್ತಾ ಕೊಲೆಪಾತಕರನ್ನು ದೂಷಿಸುತ್ತಾ, ಮುಂದಾಗುವುದನ್ನು ಇದಿರು ನೋಡುತ್ತಾ ಭಯಭ್ರಾಂತರಾಗಿ ಕುಳಿತರು. ಎಲ್ಲರೂ ವಿಚಾರಣೆಯ ದಿನವನ್ನು ಎದುರು ನೋಡುತ್ತಾ ಕುಳಿತರು.

'ಸಿಂಗನ್ನರ' ಗ್ರಂಥಾಲಯ

ಈ ಸುದ್ದಿಯನ್ನು ಕೇಳಿ ಚಿನ್ನಾದೇವಿಗೆ ಸಿಂಹಾಸನ, ತನ್ನ ಅಳಿಯನಿಗಾಗುವ ಬಗ್ಗೆ ಆಸೆ ಮತ್ತೆ ಅಂಕುರಿಸಿತು. ರಣಹೇಡಿಯಾದ ಅಚ್ಯುತರಾಯನನ್ನು ಸುಲಭವಾಗಿ, ಕೈಗೊಂಬೆಯನ್ನಾಗಿ ಮಾಡಿಕೊಂಡು ರಾಜ್ಯವನ್ನು ತಾನೇ ಆಳಬಹುದೆಂದು ಮನಸ್ಸಿನಲ್ಲೆ ಹಿಗ್ಗಿದಳು. ಕೂಡಲೇ ಅಳಿಯಂದಿರಿಬ್ಬರಿಗೂ ರಾಜಧಾನಿಗೆ ಬರುವಂತೆ ಪತ್ರಗಳನ್ನು ಬರೆದು, ಚಾರರನ್ನು ಅವರ ಬಳಿಗೆ ಅಟ್ಟಿ, ಕುಮಾರನ ಕೊಲೆಗೆ ಸಂತಾಪ ವ್ಯಕ್ತಪಡಿಸಲು, ಅರಮನೆಗೆ ಬಂದು ಅನ್ನಪೂರ್ಣಾದೇವಿಯನ್ನು ಕಂಡಳು. ಈ ಅವಧಿಯಲ್ಲಿ, ತಿರುಮಲಾದೇವಿ, ಅಚ್ಯುತರಾಯ, ವರದಾದೇವಿ ಮತ್ತಿತರ ರಾಜಬಂಧುಗಳು, ಸಾಮ್ರಾಜ್ಯದ ಹಿತೈಷಿಗಳು ನೆರೆದು – ಶೋಕತಪ್ತಳಾದ ಅನ್ನಪೂರ್ಣಾದೇವಿಯನ್ನು ಸಮಾಧಾನಗೊಳಿಸಲೆತ್ನಿಸುತ್ತಿದ್ದರು.

ಕುಮಾರನ ಭೀಕರ ಕೊಲೆ – ದುರ್ಬಲ ಮನಸ್ಸಿನ ಅನ್ನಪೂರ್ಣಾದೇವಿಗೆ ಸಹಿಸಲಾಗದ ಪೆಟ್ಟಾಗಿದ್ದಿತು. ಅವಳಿಗೆ ದುಃಖ ಆವೇಗದಿಂದ ಒಂದು ಬಗೆಯ ಉನ್ಮಾದ – ಹುಚ್ಚು ಉಂಟಾಗಿತ್ತು. ಅವಳು ಮಗುವಿಗಾಗಿ ಹಂಬಲಿಸುತ್ತಿದ್ದಳು. ಅವನು ಬದುಕಿರುವನೆಂದೇ, ಭ್ರಮಿಸಿ, ಅವನನ್ನು ತಂದುಕೊಡಿರೆಂದು ಕಲ್ಲೂ ಕರಗುವಂತೆ, ಕಣ್ಣೀರಿಡುತ್ತಿದ್ದಳು. ಅವಳ ಉನ್ಮತ್ತ ಮನಸ್ಸಿಗೆ, ಯಾವ ಸ್ವಾಂತನ ವಚನಗಳೂ ಹಿಡಿಯದೆ ಹೋಗಿತ್ತು. ಅವಳಿಗೆ ದುಃಖ ಶಮನವಾಗದಿದ್ದರೆ ಹುಚ್ಚು ಹಿಡಿಯುವುದೆಂದು ರಾಜವೈದ್ಯರು ತಿಳಿಸಿದರು. ಆದರೆ ಸಮಾಧಾನ ಮಾಡುವ ಮಾರ್ಗ ಮಾತ್ರ ತಿಳಿಯದೆಹೋಗಿತ್ತು.

ಅನ್ನಪೂರ್ಣಾದೇವಿಯ ದುಃಖಕಂಡು ಚಿನ್ನಾದೇವಿ, ತಿರುಮಲಾದೇವಿಯರ ಮಾತು ಹೃದಯಕರಗಿ, ಅವರಿಗೆ ತಮ್ಮ ಪುತ್ರವಿಯೋಗದ ದುಃಖ ಮರಳಿಸಿತು. ಅವರು ಅನ್ನಪೂರ್ಣಾದೇವಿಯೊಂದಿಗೆ ತಮ್ಮ ದೌರ್ಭಾಗ್ಯವನ್ನು ನೆನೆದು, ರೋಧಿಸಿದರು. ಸಾಮ್ರಾಟ್ ಕೃಷ್ಣದೇವರಾಯನ ಮೂವರು ಮಕ್ಕಳು, ಮೂರುದಾರಿಯಾದ ಕಥೆಯನ್ನು ನೆನೆದು ಅವರು ರೋಧಿಸಿದರು. ಚಿನ್ನಾದೇವಿಯ ಮಗ ಸುಮಾರು ಆರೆಂಟುವರ್ಷಗಳ ಹಿಂದೆ ಇದೇ ರೀತಿ, ದ್ರೋಹಿಗಳಿಂದ ವಿಷಪಿಡಲ್ಪಟ್ಟು ಕೊಲ್ಲಲ್ಪಟ್ಟಿದ್ದ. ಕೇವಲ ಮೂರು ನಾಲ್ಕುವರ್ಷಗಳ ಹಿಂದೆ ತಿರುಮಲಾದೇವಿಯ ಪುತ್ರ ಕ್ರೂರಗ್ರಹಗಳಿಗೆ ತುತ್ತಾಗಿ ಇಹಲೋಕವನ್ನು ತೊರೆದಿದ್ದ. ಈಗ ಅನೇಕ ಹರಕೆ, ದಾನಧರ್ಮಗಳಿಂದ ಹುಟ್ಟಿದ್ದ, ಸಾಮ್ರಾಜ್ಯದ ಆಶಾದೀವಿಗೆಯಂತಿದ್ದ, ಕೃಷ್ಣದೇವರಾಯನ ಏಕೈಕ ಪುತ್ರಸಂತಾನ, ಕೊಲೆಪಾತಕರ ಕೈಲಿ ಕೊಲೆಯಾಗಿತ್ತು. ಆ ಮಕ್ಕಳು ಯಾವ ಸುಖಪಡಲು ತಮ್ಮ ಹೊಟ್ಟೆಯಲ್ಲಿ ಹುಟ್ಟಿದರು. ಸಾಮಾನ್ಯ ಜನರ ಜೀವನದಲ್ಲಿ ಇರುವ ನೆಮ್ಮದಿ, ಶಾಂತಿ ಸೌಖ್ಯಗಳು ಮಹಾರಾಣಿಯರಾದ ತಮ್ಮ ಮಕ್ಕ

ಳಿಗೆ ಇಲ್ಲವಾಯಿತೆಂದು ತಮ್ಮ ದೌರ್ಭಾಗ್ಯವನ್ನು ನೆನೆದು ಅತ್ತರು. ಯಾವ ಜನ್ಮದ ಕರ್ಮವೋ ಅದನ್ನು ಅನುಭವಿಸಲೇಬೇಕಾಗಿತ್ತು. ಸಾಮ್ರಾಟ್ ಕೃಷ್ಣದೇವರಾಯನ ಮೂವರು ರಾಣಿಯರ ಶೋಕ ಕರುಣಾಜನಕವಾಗಿತ್ತು. ಯಾರನ್ನು ಯಾರೂ ಸಂತೈಸುವಂತಿರಲಿಲ್ಲ.

ಇವನ್ನೆಲ್ಲಾ ನೋಡಿ ಮೇಲೆ ಸಂತಾಪವನ್ನು ನಟಿಸಿ, ಒಳಗೆ ಸಂತೋಷ ಪಟ್ಟವಳೆಂದರೆ ಮಹಾರಾಣಿ ವರದಾದೇವಿ. ಅವಳಿಗೆ ನಿಜಕ್ಕೂ, ತನ್ನ ಸೌಭಾಗ್ಯವನ್ನು ನೆನೆದು ಸಂತೋಷವಾಗಿತ್ತು. ಅವಳ ದೀರ್ಘಕಾಲದ ಹಂಬಲ ಈಡೇರಿತ್ತು. ತಮ್ಮ ಮಾರ್ಗ ನಿಷ್ಕಂಟಕವಾಗಿತ್ತು. ಕೃಷ್ಣದೇವರಾಯನ ಮಗ ಹಿಂದಿರುಗದ ಲೋಕಕ್ಕೆ ಹೋಗಿದ್ದ – ಈ ಕೊಲೆಯ ಆರೋಪ ಸೋಮರಸನ ಮೇಲೆ ಬಂದು ಅವನು ವಿಚಾರಣೆಯನ್ನು ನೋಡುತ್ತಾ ಸೆರೆಮನೆಯಲ್ಲಿದ್ದ. ತನ್ನ ಮಹತ್ವಾಕಾಂಕ್ಷೆಯಲ್ಲಿ, ಇದ್ದ ಅವನ ಆತಂಕ ನಿವಾರಣೆಯಾಗಿತ್ತು. ಒಮ್ಮೆ ಸೆರೆಯನ್ನು ಸೇರಿದ್ದ ಸೋಮರಸನಿಗೆ ಇನ್ನು ಬಿಡುಗಡೆಯಿಲ್ಲವೆಂದು ಅವಳು ಅರಿತಳು. ಪ್ರತಿಸ್ಪರ್ಧಿಗಳಾದ ಅಳಿಯಂದಿರು ರಾಜಧಾನಿಗೆ ಬರುವ ಮುನ್ನ ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಳ್ಳಬೇಕೆಂದು ಅವಳು ಆಲೋಚಿಸಿದಳು. ಈ ಸಮಯದಲ್ಲಿ ತನ್ನ ಸಹೋದರರಾದ, ಪೆದ್ದ ತಿರುಮಲ, ಚಿನ್ನ ತಿರುಮಲರು ತನ್ನ ಬಳಿ ಇದ್ದಿದ್ದರೆ ಅದೆಷ್ಟು ಲೇಸಾಗುತ್ತಿತ್ತು ಎಂದು ಅವಳು ಯೋಚಿಸಿದಳು. ಈ ಬಗ್ಗೆ ಅಚ್ಯುತರಾಯನೊಡನೆ ಪ್ರಸ್ತಾಪಿಸದೆ ಇರಲಿಲ್ಲ.

"ಈಗ ಬಳಿಯಲ್ಲಿ ಸಲಕಂ ಸಹೋದರರು ಇದ್ದಿದ್ದರೆ ನಮಗೆ ಅದೆಷ್ಟು ಸಹಾಯವಾಗುತಿತ್ತು."

"ಹೌದು ವರದಾ. ಅವರು ಇದ್ದಿದ್ದರೆ ಬಹಳ ನೆರವಾಗುತ್ತಿದ್ದರು. ನಾವು ಈ ಸ್ಥಿತಿಗೆ ಬರಲು ಅವರು ಸದಾ ಹಾರೈಸುತ್ತಿದ್ದರು. ಇದಕ್ಕಾಗಿ ಅವರು ಯಾವ ತ್ಯಾಗಕ್ಕೂ, ಸಾಹಸಕ್ಕೂ ಸಿದ್ಧರಾಗಿದ್ದರು. ಆದರೆ ನಮ್ಮ ದುರ್ವಿಧಿ! ಕೊಂಡಮರಸಯ್ಯನವರ ಕೊಲೆಯ ಆರೋಪದಿಂದ ಅವರು ತಲೆ ತಪ್ಪಿಸಿಕೊಳ್ಳಬೇಕಾಯಿತು!"

"ಅವರು ಎಲ್ಲಿದ್ದಾರೆ? ತಿಳಿದಿದ್ದರೆ ಅವರ ಎಲ್ಲ ಅಪರಾಧಗಳನ್ನು ಕ್ಷಮಿಸಿ ಅವರನ್ನು ಇಲ್ಲಿಗೆ ಕರೆಸಿಕೊಂಡು, ಅವರ ಅಮೂಲ್ಯವಾದ ಸೇವೆಗೆ ಅವಕಾಶ ಕಲ್ಪಿಸಿಕೊಡಬಹುದಾಗಿತ್ತು. ಅವರನ್ನು ಎಲ್ಲಿದ್ದರೂ ಹುಡುಕಿ, ಕರೆತರಲು ದೂತರನ್ನು ಕಳುಹಿಸಿತ್ತಲ್ಲಾ, ಅವರಿಂದ ಏನಾದರೂ ಸುದ್ದಿ ತಿಳಿಯಿತೆ?"

"ಅವರ ಬಗ್ಗೆ ಇನ್ನೂ ಯಾವ ಸುದ್ದಿಯೂ ಬಂದಿಲ್ಲ. ಅವರು ಗಜಪತಿಯ ಆಶ್ರಯದಲ್ಲಿ ತಲೆಮರೆಸಿಕೊಂಡಿರುವರೆಂಬ ಸುದ್ದಿ ಬಂದಿತ್ತು. ಈಗ ಅವರೊಂದಿಗೆ ಯುದ್ಧ ಸನ್ನಿಹಿತವಾಗಿರುವುದರಿಂದ ಬಹುಶಃ ಇಲ್ಲಿರಲಾರರು!"

"ನಾವು ಅಧಿಕಾರಕ್ಕೆ ಬಂದ ಸಂಗತಿ ತಿಳಿದ ಮೇಲಾದರೂ ಅವರು ಇಲ್ಲಿಗೆ ಧೈರ್ಯವಾಗಿ ಬರುವರೆಂದು ತಿಳಿದಿದ್ದೆ. ಆದರೆ ಇಷ್ಟು ಕಾಲವಾದರೂ ಅವರು ಬಂದಿಲ್ಲ. ಬಹುಶಃ ಅವರಿಗೆ ನಾವು ಸಾಮ್ರಾಟರಾದ ಸುದ್ದಿ ತಿಳಿದಿದೆಯೋ ಇಲ್ಲವೋ? ತಿಳಿದಿದ್ದರೆ ಎಲ್ಲಿದ್ದರೂ ಓಡಿಬರುತ್ತಿದ್ದರು!"

"ಆದರೆ ಅವರ ಮೇಲೆ ಕೊಂಡಮರಸಯ್ಯನವರ ಕೊಲೆಯ ಆರೋಪವಿದೆಯಲ್ಲ."

"ಇದ್ದರೆ ಏನಂತೆ? ಅವರೇ ಕೊಲೆಮಾಡಿದರೆಂದು ಯಾವ ಆಧಾರವಿದೆ. ಇದು ಮಿಥ್ಯಾರೋಪವೇಕಾಗಿರಬಾರದು. ಕೃಷ್ಣದೇವರಾಯನ ಕೈಗೆ ಸಿಕ್ಕಿ ಬಿದ್ದಿದ್ದರೆ ನ್ಯಾಯಾನ್ಯಾಯಗಳನ್ನು ನೋಡದೆ ತಮ್ಮ ತಲೆ ತೆಗೆಸುವನೆಂದು ಹೆದರಿ ಅವರು ತಲೆತಪ್ಪಿಸಿಕೊಂಡಿದ್ದರು! ಈಗ ಬರಲು ಏನು ಅಡ್ಡಿ! ಸೋಮರಸರು ಕೂಡಾ ಸೆರೆಮನೆಯಲ್ಲಿದ್ದಾರೆ?"

"ಅವರು ನಿರಪರಾಧಿಗಳಾಗಿದ್ದರೆ ಯಾವ ಭಯವೂ ಇಲ್ಲದೆ ರಾಜಧಾನಿಗೆ ಬರಲು ಅಡ್ಡಿಯಿಲ್ಲ!"

"ಈ ಬಗ್ಗೆ ಒಂದು ರಾಜಶಾಸನ ಹೊರಡಿಸಿ, ಕ್ಷಮಾಧಾನ ನೀಡಿರುವುದಾಗಿ ತಿಳಿಸಿದರೆ – ಅವರು ರಾಜಧಾನಿಗೆ ಬರುವ ಸಂಭವ ಉಂಟು!"

"ಆ ನಿನ್ನ ಸಹೋದರರು ಶಿಕ್ಷೆಯ ಭೀತಿಯಿಂದ ರಾಜಧಾನಿಗೆ ಬರಲು ಹಿಂದೆಗೆಯುತ್ತಿದ್ದರೆ, ಒಂದಲ್ಲ ನಾಲ್ಕು ರಾಜಘೋಷಣೆ ಹೊರಡಿಸಿ, ಅವರಿಗೆ ಕ್ಷಮಾದಾನ ದೊರೆತಿದೆ ಎಂದು ತಿಳಿಸಲು ನನ್ನ ಅಡ್ಡಿಯಿಲ್ಲ. ಮುಖ್ಯ ನನಗಾಗಿ ಅವರು ಬಹಳ ಕಷ್ಟ ಪಟ್ಟಿದ್ದಾರೆ – ಅವರ ಸೇವೆ ಈಗ ಸಾಮ್ರಾಜ್ಯಕ್ಕೆ ಅಮೂಲ್ಯವಾಗಿದೆ – ಎಂದಿಗಿಂತಲೂ ಈಗ ಅಮೂಲ್ಯವಾಗಿದೆ!"

ಅಚ್ಯುತರಾಯನ ಇಚ್ಛೆ ರಾಜಘೋಷಣೆಯಾಗಿ ಪ್ರಕಟವಾಗಲು ತಡವಾಗಲಿಲ್ಲ. ಸಲಕಂ ಸಹೋದರರಿಗೆ, ಕ್ಷಮಾಧಾನ ನೀಡಿದ ರಾಜಶಾಸನ ಹೊರಬಿದ್ದ ಮಾರನೆಯ ದಿನವೇ, ಸಲಕಂ ಸೋದರರು ಅಚ್ಯುತರಾಯ, ವರದಾಂಬಿಕೆಯರ ಮುಂದೆ ಎಲ್ಲಿಂದಲೋ ಪ್ರತ್ಯಕ್ಷರಾದರು.

ಅವರನ್ನು ಆದರದಿಂದ ಬರಮಾಡಿಕೊಂಡು, ಸತ್ಕರಿಸಿ, ಅವರ ಕುಶಲ ವೃತ್ತಾಂತ ಕೇಳಿದರು. ಸಲಕಂ ಸೋದರರು ಕೆಲವೇ ಮಾತುಗಳಲ್ಲಿ, ಚಂದ್ರಗಿರಿಯನ್ನು ಬಿಟ್ಟು ಹೊರಟನಂತರ ನಡೆದ ಸಂಗತಿಗಳನ್ನು – ಮೂರು ವರ್ಷದ ತಮ್ಮ ಅಲೆದಾಟದ ಕಥೆಯನ್ನು ಸ್ವಲ್ಪದರಲ್ಲಿ ವಿವರಿಸಿದರು.

ತಾವು ಕೊಂಡಮರಸಯ್ಯನವರನ್ನು ಕಂಡೇ ಇರಲಿಲ್ಲವೆಂದೂ, ತಮಗಾಗದವರು ಯಾರೋ, ಅಚ್ಯುತರಾಯನ ನಿರ್ಬಂಧದ ಪ್ರಶ್ನೆ ಇನ್ನಷ್ಟು ಜಟಿಲವಾಗಲು ಕೊಂಡಮರಸಯ್ಯನ ಕೊಲೆ ಮಾಡಿ, ಅದರ ಆರೋಪವನ್ನು ತಮ್ಮ

ತಲೆಗೆ ಕಟ್ಟಿದರೆಂದೂ, ಕೃಷ್ಣದೇವರಾಯನ ಆಳ್ವಿಕೆಯಲ್ಲಿ ತಿಮ್ಮರಸನಂಥಹ ನಿರಪರಾಧಿಗಳು ಕಣ್ಣು ಕಳೆದುಕೊಳ್ಳಬೇಕಾಗಿ ಬಂದ ಪ್ರಸಂಗವನ್ನು ನೆನೆದು, ತಾವು ನಿರಪರಾಧಿಗಳಾಗಿದ್ದರೂ ನ್ಯಾಯ ತಮಗೆ ದೊರಕುವುದಿಲ್ಲವೆಂದು ತಿಳಿದು, ಕೃಷ್ಣದೇವರಾಯನ ವಿರುದ್ಧ ತಮಗೆ ಆಶ್ರಯ ಕೊಡಬಲ್ಲ ಗಜಪತಿಯ ಆಶ್ರಯಕ್ಕೆ ಹೋದುದಾಗಿ ತಿಳಿಸಿದರು. ಅಲ್ಲಿ ತಿಮ್ಮರಸನ ಪುತ್ರ ಗೋವಿಂದ ರಾಜನ ಸಹಾಯದಿಂದ, ತಮಗೆ ಆಶ್ರಯ, ರಕ್ಷಣೆ ದೊರೆಕಿತೆಂದೂ, ಕೃಷ್ಣ ದೇವರಾಯನು ಮರಣಹೊಂದಿ, ಅಚ್ಯುತರಾಯನು ಪಟ್ಟಕ್ಕೆ ಬಂದ ಸಂಗತಿಯನ್ನು ತಿಳಿದು ಹಿಂದಿರುಗಿ ಬಂದುದಾಗಿಯೂ, ದಾರಿಯಲ್ಲಿ ತಮ್ಮನ್ನು ಆರಸುತ್ತಾ ಹೊರಟಿದ್ದ ಗೂಢಚಾರರ ಭೇಟಿಯಾಗಿ, ಅವರಿಂದ ತಮ್ಮ ಕ್ಷಮಾದಾನದ ರಾಜಘೋಷಣೆಯನ್ನು ಕೇಳಿ ಹಗಲಿರುಳು ಪ್ರಯಾಣ ಮಾಡಿ ರಾಜಧಾನಿಗೆ ಬಂದುದಾಗಿ ತಿಳಿಸಿದರು.

ಅವರು ತಮ್ಮ ಕಥೆಯನ್ನು ಹೇಳಿ ಮುಗಿಸಿದನಂತರ ಆಗಷ್ಟೇ ತಾವು ಕೇಳಿದ ಕುಮಾರನ ಕೊಲೆ ಸೋಮರಸನ ಬಂಧನಗಳ ಬಗ್ಗೆ, ಹೆಚ್ಚಿನ ವಿವರಗಳನ್ನು ತಿಳಿಯಲು ಕುತೂಹಲರಾದರು.

ವರದಾಂಬಿಕೆ, ಅಚ್ಯುತರಾಯರು ತಮಗಿದ್ದ ಏಕೈಕ ಬಂಧುಗಳಾದ, ಅವರೊಡನೆ ಹೃದಯಬಿಚ್ಚಿ, ಎಲ್ಲ ಸಂಗತಿಯನ್ನು ಹೇಳಿದರು. ಸೋಮರಸನು ತಮಗೆ ಪಟ್ಟಗಟ್ಟಲು ಚಂದ್ರಗಿರಿಯಿಂದ ಕರೆದೊಯ್ದುಲಾಗಾಯಿತು ಇದು ತನಕ ನಡೆದ ಸಂಗತಿಯನ್ನು ಸವಿಸ್ತಾರವಾಗಿ ಹೇಳಿ,

"ಈಗ ನಿಮ್ಮನ್ನೇ ಕುರಿತು ಹಗಲಿರುಳು ಧ್ಯಾನಿಸುತ್ತಿದ್ದೆವು. ನೀವು ಬಂದುದು ನಮಗೆ ತಲೆಯಮೇಲಿದ್ದ ದೊಡ್ಡ ಭಾರ ಇಳಿಸಿದಂತಾಗಿದೆ" ಎಂದರು.

"ಭಾವನವರು ಸಾಮ್ರಾಟರಾದಮೇಲೆ, ನಮ್ಮನ್ನೆಲ್ಲಾ ಮರೆತುಬಿಟ್ಟಿದ್ದಿರೇನೋ ಎಂದು ಹೆದರಿದ್ದೆವು........ನಮ್ಮ ಪುಣ್ಯ. ನಮ್ಮ ನೆನಪು ಉಳಿದಿದೆಯಲ್ಲಾ" ಎಂದ ಚಿನ್ನ ತಿರುಮಲ.

"ಇಲ್ಲದೇ ಉಂಟೇ, ನೀವು ನಮಗಾಗಿ ಪಟ್ಟ ಕಷ್ಟ ಮಾಡಿರುವ ತ್ಯಾಗ ಅಲ್ಲವೇ? ನೀವು ನಮ್ಮ ದೆಸೆಯಿಂದ, ಈ ಮೂರು ವರ್ಷ ಮನೆಮಠತೊರೆದು, ಕಾಣಬಾರದ ದೇಶದಲ್ಲಿ, ತಲೆಮರೆಸಿಕೊಂಡು ಇರಬೇಕಾಯಿತು. ನೀವು-ಬಾರದಿದ್ದರೆ, ನೀವೆಲ್ಲಿದ್ದರೂ ಹುಡುಕಿಸಿ, ಕರೆಸಿಕೊಳ್ಳುತ್ತಿದ್ದೆವು!"

"ಏಕೆ?"

"ಈಗ ನಿಮ್ಮಿಂದ ಆಗಬೇಕಾಗಿರುವ ಉಪಕಾರ ಅಷ್ಟಿಷ್ಟಲ್ಲ. ಸೋಮರಸನ ದ್ರೋಹ ಹೊರಬಿದ್ದಮೇಲೆ ಯಾರನ್ನು ನಂಬುವುದು ಎಂಬುದೇ ದೊಡ್ಡ

ಸಮಸ್ಯೆಯಾಗಿತ್ತು. ನೀವು ಸಕಾಲದಲ್ಲಿ ನಮ್ಮ ನೆರವಿಗೆ ಬಂದಿರಿ. ನಮ್ಮ ದೈವ ದೊಡ್ಡದು" ಎಂದು ನಿಟ್ಟುಸಿರುಬಿಟ್ಟ ಅಚ್ಯುತರಾಯ.

"ನಾವು ಪ್ರಭುಗಳ ಪಾದಸೇವಕರು. ಈ ದೇಹ ಎಂದಿದ್ದರೂ ಸಾಮ್ರಾಟರ ಹಾಗೂ ಸಾಮ್ರಾಜ್ಯದ ಸೇವೆಗೆ ಮುಡಿಪು." ಎಂದು ಪೆದ್ದ ತಿರುಮಲ ಹೇಳಿದ.

"ನೀವೆಂತಹ ಸ್ವಾಮಿನಿಷ್ಠ ಸೇವಕರೆಂಬುದನ್ನು ನಾವು ಹೊಸದಾಗಿ ತಿಳಿಯಬೇಕೆ? ಈಗ ಸಾಮ್ರಾಜ್ಯದ ಸಮಸ್ತ ಜವಾಬ್ದಾರಿಯನ್ನು ದಕ್ಷತೆಯಿಂದ ಹೊರಬಲ್ಲ ದಕ್ಷರು, ಸಮರ್ಥರೂ, ನಮ್ಮ ನಂಬಿಕೆಗೆ ಪಾತ್ರರೂ ಎಂದರೆ ನೀವಿಬ್ಬರೇ. ನಿಮಗೆ ಸಾಮ್ರಾಜ್ಯದ ಜವಾಬ್ದಾರಿಯನ್ನು ಹೊರಸಿ ನಾವು ನಿಶ್ಚಿಂತೆಯಿಂದಿರಲು ಆಶಿಸಿದ್ದೇವೆ. ಪೆದ್ದತಿರುಮಲರು ಸೋಮರಸನ ಅಮಾತ್ಯ ಪದವಿಯನ್ನು ಅಲಂಕರಿಸಲಿ, ಚಿನ್ನತಿರುಮಲರು ರಾಜಭಂಡಾರ ಮತ್ತಿತರ ಹಣಕಾಸಿನ ಸಚಿವರಾಗಲಿ ಇದಕ್ಕೆ ನಿಮ್ಮ ಅಭ್ಯಂತರವೇನೂ ಇಲ್ಲ ತಾನೇ?"

"ನಾವು ಪ್ರಭುಗಳ ಆಜ್ಞಾಧಾರಕರು, ಪ್ರಭುಗಳ ಇಚ್ಛೆಯೇ ನಮ್ಮ ಇಚ್ಛೆ."

ಅಂದೇ ಸಲಕಂ ಸಹೋದರರಿಗೆ ಈ ಹುದ್ದೆಗಳನ್ನು ಕೊಟ್ಟ, ಅಚ್ಯುತರಾಯನ ಅಂಕಿತದಲ್ಲಿ ರಾಜಘೋಷಣೆಯೊಂದು ಹೊರಡಲು ತಡವಾಗಲಿಲ್ಲ.

೭

ಎಲ್ಲವೂ ಸಲಕಂ ಸಹೋದರರು ನಿರೀಕ್ಷಿಸಿದಂತೆ ನಡೆದಿತ್ತು. ಆ ದಿನ ಕೊಂಡಮರಸಯ್ಯನನ್ನು ಕೊಲೆಮಾಡಿ, ತಮ್ಮನ್ನು ಹಿಡಿಯಲು ಕೃಷ್ಣದೇವರಾಯನು ಸೈನ್ಯವನ್ನು ಚಂದ್ರಗಿರಿಗೆ ಕಳುಹಿಸುವನೆಂದು ನಿರೀಕ್ಷಿಸಿ ಅವರು ಕಟಕಪುರಿಯ ಮಾರ್ಗ ಹಿಡಿದಿದ್ದರು. ಸಾಮ್ರಾಜ್ಯದಲ್ಲಿ ಎಲ್ಲಿದ್ದರೂ, ಕೃಷ್ಣದೇವರಾಯನ ಕೈಗೆ ಸಿಕ್ಕಿಬೀಳುವುದು ದಿಟವೆಂದೂ ಸಿಕ್ಕಿಬಿದ್ದರೆ ತಮ್ಮ ಸ್ಥಿತಿ ನೆಟ್ಟಗಾಗುವುದಿಲ್ಲವೆಂದೂ ಊಹಿಸಿ, ಉತ್ಕಲದ ಪ್ರತಾಪರುದ್ರ ಗಜಪತಿಯ ಆಶ್ರಯಕ್ಕೆ ವೇಷಾಂತರದಲ್ಲಿ ಬಂದಿದ್ದರು. ಅಲ್ಲಿದ್ದ ತಿಮ್ಮರಸನ ಪುತ್ರ ಗೋವಿಂದರಾಜನ ಸ್ನೇಹವಾಗಿ, ಕೃಷ್ಣದೇವರಾಯನ ಮೇಲೆ ಸೇಡಿಗಾಗಿ ಹಾತೊರೆಯುತ್ತಿದ್ದ – ಅವನ ಮಿತ್ರತ್ವದಿಂದಾಗಿ, ಗಜಪತಿಯ ಪ್ರೀತಿವಿಶ್ವಾಸಗಳಿಗೆ ಪಾತ್ರವಾಗಿ, ಕೃಷ್ಣದೇವರಾಯನ ವಿರುದ್ಧ ವಿದ್ರೋಹ ಕಾರ್ಯಗಳಲ್ಲಿ ಗಜಪತಿಗೆ ನೆರವಾಗುತ್ತಾ – ಅವನ ಆಶ್ರಯದಲ್ಲಿದ್ದರು. ಗಜಪತಿಯು ವಿಜಯನಗರದ ಮೇಲೆ ದಂಡೆತ್ತಿ ಬಂದಾಗ, ದಂಡಿನೊಡನೆ ಸಲಕಂ ಸಹೋದರರೂ ಬಂದಿದ್ದರು. ಕೃಷ್ಣದೇವರಾಯನ ಆಕಸ್ಮಿಕ ಮರಣ ತಿಳಿದೊಡನೆ, ಗಜಪತಿಯನ್ನು ತೊರೆದು

ವಿಜಯ ನಗರಕ್ಕೆ ಧಾವಿಸಿ ಬಂದಿದ್ದರು. ಆದರೆ ಕೃಷ್ಣದೇವರಾಯನ ನಂಬಿಕೆಗೆ ಪಾತ್ರನಾಗಿದ್ದ ಸೋಮರಸನು ಪ್ರಧಾನಿಯಾಗಿರುವವರೆಗೆ ತಮ್ಮ ಆಶಯಗಳೊಂದೂ ಈಡೇರದೆಂದು ತಿಳಿದು, ಬೈರಾಗಿಗಳ ವೇಷದಲ್ಲಿ ವಿಜಯನಗರಕ್ಕೆ ಬಂದು ಸೋಮರಸನ ವಿಷಯದಲ್ಲಿ ಜನರ ಮನಸ್ಸನ್ನು ಕೆಡಿಸಲು ಪ್ರಾರಂಭಿಸಿದರು. ಶ್ರೀಶೈಲದ ಮಲ್ಲಿಕಾರ್ಜುನಸ್ವಾಮಿಯನ್ನು ಸಾಕ್ಷಾತ್ಕರಿಸಿಕೊಂಡ ಸಿದ್ಧಪುರುಷರು ತಾವೆಂದು ಹೇಳಿಕೊಳ್ಳುತ್ತಾ, ಯುಕ್ತಿ ಚಮತ್ಕಾರಗಳಿಂದ ಜನರ ಮನಸ್ಸನ್ನು ಕೆಡಿಸುತ್ತಾ ಬಂದಿದ್ದರು. ಅವರು ಹೇಳಿದ ಭವಿಷ್ಯದಿಂದ ಜನಸಾಮಾನ್ಯರ ಮನಸ್ಸಿನಲ್ಲಿ ಅವರು ಊಹಿಸಿದ್ದ ಆಂಧೋಳನ ಉಂಟಾದ ಸೂಚನೆ ಕಂಡೊಡನೆಯೇ, ತಮ್ಮ ಕೆಲಸ ಮುಗಿಯಿತೆಂದು – ಅವರಿಬ್ಬರೂ ತಲೆಗೂದಲು ಗಡ್ಡವನ್ನು ಬೋಳಿಸಿ, ಕಾಷಾಯ ವಸ್ತ್ರವನ್ನು ಬಿಸುಟು, ದಂಡ ಕಮಂಡಲಗಳನ್ನು ಮೂಲೆಗೆ ತಳ್ಳಿ ನಾಗರೀಕರಾದರು. ಈಗ ವ್ಯಾಪಾರಿಗಳ ವೇಷದಲ್ಲಿ, ಯಾರಿಗೂ ಸಂಶಯ ಕೊಡದಂತೆ ಓಡಾಡುತ್ತಾ, ಅನ್ನಪೂರ್ಣಾದೇವಿಯ ಅರಮನೆಯ ಸೇವಕರ ಸ್ನೇಹವನ್ನು ಗಳಿಸಿಕೊಂಡರು. ವಿಜಯನಗರದ ಸಿಂಹಾಸನದಲ್ಲಿ ಸಾಮ್ರಾಟರಾಗಿ ಮೆರೆಯಲು ಆಶಿಸಿದ್ದ ಅವರಿಗೆ, ಕೃಷ್ಣದೇವ ರಾಯನ ಕುಮಾರನನ್ನೂ, ಸೋಮರಸನನ್ನೂ ನೆಲಕ್ಕುರುಳಿಸುವುದು ಅನಿವಾರ್ಯವಾಗಿತ್ತು. ಸೋಮರಸನ ಪತನಕ್ಕೆ ಸಿದ್ಧಪಡಿಸಿದ ಕೂಡಲೇ, ತಮ್ಮ ವಿಶ್ವಾಸಕ್ಕೆ ಪಾತ್ರರಾಗಿದ್ದ, ಒಬ್ಬ ಸೇವಕನ ಮೂಲಕ ಸಂಧಾನ ನಡೆಸಲಾರಂಭಿಸಿದರು. ಇದಕ್ಕಾಗಿ ಹಣವನ್ನು ನೀರಿನಂತೆ ವೆಚ್ಚಮಾಡತೊಡಗಿದರು. ಅಂತೂ ಕುಮಾರನ ಕೊಲೆಯನ್ನು ಸಾಧಿಸಿದರು. ಈ ಕೊಲೆಯಲ್ಲಿ ತಮ್ಮ ಕೈವಾಡವಿರುವುದು ತಿಳಿಯದಂತೆ ಮಾಡಲು, ದಾಸಿಯನ್ನು ಸುದ್ದಿ ಕೊಡದೆ ತೀರಿಸಿಬಿಡಲು ಆ ಸೈನಿಕನಿಗೆ ತಿಳಿಸಿ, ಈ ಸುದ್ದಿ ಹೇಳಲು ಬಂದ ಸೈನಿಕನನ್ನು ಮುಗಿಸಿ ಅವನ ದೇಹವನ್ನು ನಾಯಿನರಿಗಳ ಪಾಲುಮಾಡಿ, ತಮ್ಮ ಬಿಡಾರ ಸೇರಿಕೊಂಡಿದ್ದರು. ಇಷ್ಟೆಲ್ಲಾ ಸಂಗತಿಗಳು ಎರಡು ಮೂರು ತಾಸುಗಳಲ್ಲಿ ನಡೆದು ಹೋಗಿತ್ತು. ಅವರ ಕಾರ್ಯ ಕುಶಲತೆ ಅಷ್ಟು ನಿರ್ದಿಷ್ಟವಾಗಿತ್ತು.

ಸೋಮರಸನಿಗೆ ಸಲಕಂ ಸೋದರರ ಬಗ್ಗೆ ಯಾವ ಸಂಶಯವೂ ಇಲ್ಲದುದ್ದರಿಂದ, ಅವನ ಸಂಶಯವೆಲ್ಲಾ, ವರದಾದೇವಿ, ಚಿನ್ನಾದೇವಿಯರಲ್ಲಿ ಕೇಂದ್ರೀಕೃತವಾಗಿತ್ತು. ಆ ಸೋದರರು ಯಾರ ಸಂಶಯಕ್ಕೂ ಪಾತ್ರರಾಗದೆ ಜಾಣ್ಮೆಯಿಂದ ಕೆಲಸ ಸಾಧಿಸಿದ್ದರು. ಎಲ್ಲ ಅನುಮಾನ ಸಂಶಯ ರಾಜಬಂಧುಗಳ ಕಡೆಗೇ ಹರಿದಿತ್ತು. ಇದೇ ಸೋಮರಸನನ್ನು ನುಂಗಿದ ಅವನ ಪಾಲಿನ ಮೃತ್ಯುವಾಗಿತ್ತು. ಅವನು ಸಾಮ್ರಾಟ್ ಅಚ್ಯುತರಾಯನನ್ನು ಸಂದೇಹಿಸಲು ಹೊರಟು, ಅವನ ಸಂದೇಹಕ್ಕೆ ತಾನೇ ಪಾತ್ರನಾಗಿ ಕಾರಾಗೃಹವನ್ನು

ಸೇರುವಂತೆ ಆಗಿತ್ತು. ಸಿದ್ಧನಾಥನ ವೇಷದಲ್ಲಿ ಹರಡಿದ್ದ ಭವಿಷ್ಯವಾಣಿ ತನ್ನ ಕೆಲಸ ಮಾಡಿತ್ತು. ಅದನ್ನು ಉಪೇಕ್ಷಿಸಿದ್ದ ಸೋಮರಸ ತನ್ನ ಪತನವನ್ನು ತಾನೇ ತಂದುಕೊಂಡಿದ್ದ.

ಈಗ ಕುಮಾರನ ಕೊಲೆಯಿಂದ ಅಚ್ಯುತರಾಯನಿಗೆ ರಾಜ್ಯ ನಿಷ್ಕಂಟಕವಾಗಿತ್ತು. ಸೋಮರಸನಿಂದ ಮುಂದೆ ಯಾವ ಬಗೆಯ ತೊಂದರೆ ಬರದಂತೆ ಮಾಡಲು ಅವನನ್ನು ಪೂರೈಸುವುದೇ ರಾಜಮಾರ್ಗವಾಗಿತ್ತು. ಅಚ್ಯುತರಾಯನ ಮನವೊಲಿಸಿ ಸೋಮರಸನ ವಿಚಾರಣೆಯನ್ನು ತಾವೇ ವಹಿಸಿಕೊಂಡರು.

ಸೋಮರಸನು ತನ್ನ ಮೇಲಿನ ಆರೋಪಗಳನ್ನು, ರಾಜಸಭೆಯಲ್ಲಿ ಬಹಿರಂಗ ವಿಚಾರಣೆಯಾಗುವುದೆಂದು ತಿಳಿದು, ನಿರಪರಾಧಿಯಾದ ತನಗೆ ಶಿಕ್ಷೆಯಾಗುವುದಿಲ್ಲವೆಂದು ನಿಶ್ಚಿಂತೆಯಿಂದ ಇದ್ದ. ಬಹಿರಂಗ ವಿಚಾರಣೆಯಾದರೆ, ಸೋಮರಸನ ಮೇಲಿನ ಆರೋಪ ನಿಲ್ಲಲಾರದೆಂದು ಊಹಿಸಿಯೇ, ಸೋಮರಸನನ್ನು ವಿಶೇಷ ರೀತಿಯಲ್ಲಿ ವಿಚಾರಣೆ ಮಾಡಲು ಸಲಕಂ ಸಹೋದರರು ವ್ಯವಸ್ಥೆ ಮಾಡಿದರು.

ಈ ನ್ಯಾಯಾಲಯದಲ್ಲಿ ಅಚ್ಯುತರಾಯ, ಹಾಗೂ, ಸಲಕಂ ಸಹೋದರರ ವಿಶ್ವಾಸಿಗಳು ವಿನಹ ಬೇರೆಜನರಿರಲಿಲ್ಲ. ಅದನ್ನು ಗುಟ್ಟಾಗಿ ನಡೆಸಿ, ಹೆಚ್ಚು ಗದ್ದಲವಿಲ್ಲದೆ, ಸೋಮರಸನ ಕಥೆಯನ್ನು ಮುಗಿಸುವುದೇ ಅವರ ಉದ್ದಿಶ್ಯವಾಗಿತ್ತು.

ವಿಚಾರಣೆಗೆಂದು ಸೋಮರಸನನ್ನು ಕರೆದೊಯ್ಯುವಾಗ, ವಿಚಾರಣೆಯಲ್ಲಿ ತನ್ನ ನಿಷ್ಠೆ, ಮಹಾಜನಕ್ಕೆ ತಿಳಿದು ತಾನು ಮೊದಲಿನ ಸ್ವಾತಂತ್ರ್ಯವನ್ನು ಪಡೆಯಬಹುವೆಂದು ನ್ಯಾಯಾಲಯಕ್ಕೆ ಬಂದಿದ್ದ. ಆದರೆ ನ್ಯಾಯ ತೀರ್ಮಾನ ಬಹಿರಂಗವಾಗಿ ನಡೆಯುದೆ, ಅಂತರಂಗದಲ್ಲಿ ನಡೆಯುವುದನ್ನು ಕಂಡು, ಅವನಿಗೆ ನಿರಾಶೆಯಾಯಿತು. ನ್ಯಾಯಾಲಯದಲ್ಲಿ ನ್ಯಾಯಪೀಠದಲ್ಲಿ, ಅಚ್ಯುತರಾಯನ ವಿನಹ ತನಗೆ ಪರಿಚಿತರಾದ ವ್ಯಕ್ತಿ ಇರಲಿಲ್ಲ. ಇದಕ್ಕೆ ಕಿರೀಟವಿಟ್ಟಂತೆ ಸಲಕಂ ಸಹೋದರರು—ಅವನ ವಿಚಾರಣೆ ಮಾಡಲು ನಿಂತುದನ್ನು ನೋಡಿ ಅವನ ಜಂಘಾಬಲವೇ ಉಡುಗಿತು. ಸಲಕಂ ಸಹೋದರರು ಹಠಾತ್ತನೆ ಎಲ್ಲಿಂದ ಬಂದರೆಂದು ತಿಳಿಯದೆ ದಿಙ್ಮೂಢನಾದ. ಕೊಂಡಮರಸಯ್ಯನ ಕೊಲೆ ಮಾಡಿ ತಪ್ಪಿಸಿಕೊಂಡಿದ್ದ ಅವರು, ತನ್ನ ವಿಚಾರಣೆಗೆ ನಿಂತುದನ್ನು ಕಂಡೇ ಕುಮಾರನ ಕೊಲೆಪಾತಕರು ಅವರೇ ಎಂದು ಹೊಳೆಯಿತು. ಅವರು ರಾಜಧಾನಿಯಲ್ಲಿ ಬಂದಿದ್ದ ಸಂಗತಿ ತಿಳಿದಿದ್ದರೆ, ಅಥವಾ ಸಿದ್ಧನಾಥರ ದರ್ಶನ ಮಾಡಿದ್ದರೆ ಅವರ ಕಾರಾಗಾರ ತಿಳಿಯುತ್ತಿತ್ತು. ಕೊಂಡಮರಸಯ್ಯನನ್ನು ಕೊಂದು ನಿರಪರಾಧಿ

ಗಳಾಗಿ ಉಳಿದಂತೆ ಈಗ ಕುಮಾರನನ್ನು ಕೊಂದು ನಿರಪರಾಧಿಗಳಾಗಿ ಉಳಿದು ಕೊಂಡಿರುವುದು ಮಾತ್ರವಲ್ಲ. ನಿರಪರಾಧಿಯನ್ನು ಕೊಲೆಯ ಮಿಥ್ಯಾರೋಪ ದಿಂದ ಶಿಕ್ಷಿಸಲು ಬಂದಿದ್ದರು. ವಿಧಿವಿಲಾಸವನ್ನು ಕಂಡು ಸೋಮರಸನಿಗೆ ನಗೆ ಬಂತು. ವಿಕಟವಾಗಿ ನಕ್ಕು, ನ್ಯಾಯಾಲಯದಲ್ಲಿ ಅಪರಾಧಿಯ ಸ್ಥಾನ ದಲ್ಲಿ ನಿಂತುಕೊಂಡ.

ವಿಚಾರಣೆಗೆ ಆರಂಭವಾಯಿತು.

ಪೆದ್ದ ತಿರುಮಲನು ನ್ಯಾಯಪೀಠಕ್ಕೆ ವಂದಿಸಿ, ನ್ಯಾಯಮೂರ್ತಿಯ ಆಜ್ಞೆಯಂತೆ, ಸೋಮರಸನ ಮೇಲಣ ಆರೋಪಗಳನ್ನು ವಿವರಿಸಿದ.

"ಇವುಗಳಿಗೆ ಉತ್ತರ ಕೊಡುವ ಮೊದಲು ಪ್ರಭುಗಳಲ್ಲಿ ನನ್ನದೊಂದು ಸಣ್ಣ ಬೇಡಿಕೆಯಿದೆ." ಎಂದ ಸೋಮರಸ.

"ಅಪ್ಪಣೆಯಾಗಲಿ!" ಅಚ್ಯುತರಾಯನು ಹೇಳಿದ.

"ನನ್ನ ವಿಚಾರಣೆಯನ್ನು ಬಹಿರಂಗವಾಗಿ ನಡೆಸುವುದಾಗಿ ಹಿಂದೆ ಹೇಳಿ ದ್ದಿರಿ!"

"ನಿಮ್ಮ ಮೇಲಣ ಗುರುತರ ಆರೋಪವನ್ನು ಮನಗೊಂಡು, ನಿಮ್ಮನ್ನು ಅಂತರಂಗದಲ್ಲಿ ವಿಚಾರಣೆ ಮಾಡುವುದೇ ಸೂಕ್ತವೆನಿಸಿದುದರಿಂದ ಬಹಿರಂಗ ವಿಚಾರಣೆಯನ್ನು ರದ್ದು ಪಡಿಸಿದೆವು!"

"ನನ್ನ ಮೇಲಿನ ಆರೋಪಗಳ ಸತ್ಯಾಸತ್ಯತೆ ಲೋಕಕ್ಕೆ ತಿಳಿಯಬೇಕು ಪ್ರಭು! ಬಹಿರಂಗ ವಿಚಾರಣೆಯಾಗಲೇ ಬೇಕು!"

"ಬಹಿರಂಗ ವಿಚಾರಣೆಯ ಕೋರಿಕೆಯನ್ನು ಮಾನ್ಯ ಮಾಡಲು ಸಾಧ್ಯ ವಿಲ್ಲ. ಈಗ ನಿಮ್ಮ ಮೇಲಣ ಆರೋಪಗಳಿಗೆ ಏನು ಉತ್ತರ ಕೊಡುವಿರಿ."

"ನಾನು ನಿರಪರಾಧಿ!"

"ನಿಮ್ಮ ಅಪರಾಧಗಳ ಬಗ್ಗೆ ನಮಗೆ ಪ್ರಬಲ ಆಧಾರಗಳಿವೆ. ನೀವು ಒಳ್ಳೆಯ ಮಾತಿನಲ್ಲಿ ನಿಮ್ಮ ಅಪರಾಧಗಳನ್ನು ಒಪ್ಪಿಕೊಳ್ಳುವುದು ಲೇಸು!" ಎಂದು ಪೆದ್ದ ತಿರುಮಲ ಗುಡುಗಿದ.

"ಹುಟ್ಟುಕೊಲೆಪಾತಕರಾದ ನೀವು ನನ್ನನ್ನು ವಿಚಾರಣೆಗೆ ಗುರಿಪಡಿಸು ವುದೇ! ಛೀ ನಿಮ್ಮ ಮುಖಾವಲೋಕನ ಮಾಡಬಾರದು ನೀವು ಸಾಮ್ರಾಜ್ಯ ದ್ರೋಹಿಗಳು. ಮೊದಲು ನಿಮ್ಮ ವಿಚಾರಣೆ ಆಗಲಿ – ಅನಂತರ ನನ್ನದು!"

"ಸೋಮರಸರಿಗೆ ಏಕೋ, ನನ್ನಮೇಲೆ ಆಗ್ರಹವಿದ್ದಂತಿದೆ. ಅದು ಏನಿದ್ದರೂ ಅನಂತರ ಆಕ್ಷೇಪಿಸಿರಿ. ಈಗ ಕುಮಾರನ ಕೊಲೆಯ ಬಗ್ಗೆ ಏನು ಹೇಳುತ್ತೀರಿ!"

"ಕುಮಾರನ ಕೊಲೆಪಾತಕರು ನೀನೆ ಎಂದು ನನ್ನ ಅಂತರಾತ್ಮ ಹೇಳು ತ್ತಿದೆ."

"ನೀವು ಉಪಾಯವಾಗಿ ಕೊಲೆಯ ಆರೋಪವನ್ನು ಜಾರಿಸಲೆತ್ನಿಸುತ್ತಿದ್ದೀರಿ. ಇದು ವ್ಯರ್ಥಸಾಹಸ. ಪ್ರಭುಗಳಿಗೆ ಕೊಲೆಗಾರರು ಯಾರೆಂಬುದು ತಿಳಿದಿದೆ. ಈ ನಾಟಕವಾಡಿ ಪ್ರಯೋಜನವಿಲ್ಲ. ನಿಮ್ಮ ಅಪರಾಧವನ್ನು ಒಪ್ಪಿಕೊಳ್ಳಿ. ಇಲ್ಲವಾದರೆ ಬಲಾತ್ಕಾರದಿಂದ ಬಾಯಿಬಿಡಸಬೇಕಾಗುತ್ತದೆ."

"ನೀವು ಸಾವಿರಬಾರಿ ಪ್ರಶ್ನಿಸಿದರೂ, ನಾನು ನಿರಪರಾಧಿ! ನನಗೂ ಕುಮಾರನ ಕೊಲೆಗೂ ಯಾವ ಸಂಬಂಧವೂ ಇಲ್ಲ."

"ಹಾಗಾದರೆ ನಿಮ್ಮ ರಕ್ಷಣೆಯ ಸರ್ಪಕಾವಲಿನಲ್ಲಿ ಇದ್ದ ಕುಮಾರನನ್ನು ಅನ್ಯರು ಕೊಲೆಮಾಡಲು ಹೇಗೆ ಸಾಧ್ಯ. ಈ ಕೊಲೆಯಲ್ಲಿ ನಿಮ್ಮ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ನಿಮ್ಮ ನೆರವಿದೆ ಅನ್ಯರು ಈ ಕೊಲೆ ನಡೆಸಲು ಸಾಧ್ಯವೇ ಇಲ್ಲ. ಈಗ ನನ್ನ ಪ್ರಶ್ನೆಗಳಿಗೆ ಸರಳವಾಗಿ ಉತ್ತರ ಕೊಡಿ."

"ಸಾಮ್ರಾಟ್ ಅಚ್ಯುತರಾಯರನ್ನು ಸಾಮ್ರಾಟರನ್ನಾಗಿ ಮಾಡಲು ನಿಮ್ಮ ಉದ್ದಿಶ್ಯವೇನು?"

"ನನಗೆ ಯಾವ ಉದ್ದೇಶವೂ ಇಲ್ಲ – ನಾನು ಸಾಮ್ರಾಟರ ಆಜ್ಞೆಯನ್ನು ಪಾಲಿಸಿದೆ – ನನ್ನ ಕರ್ತವ್ಯವನ್ನು ನಾನು ಮಾಡಿದೆ."

"ಇದಕ್ಕೆ ಸಾಮ್ರಾಟ್ ಕೃಷ್ಣದೇವರಾಯರ ಮರಣವನ್ನು ಏಕೆ ಗೋಪ್ಯವಾಗಿರಿಸಿದಿರಿ?"

"ಸಿಂಹಾಸನಕ್ಕಾಗಿ ಅಂತಃಕಲಹಗಳಾಗಬಾರದೆಂದು ಇತರರ ಸಲಹೆಯಂತೆ ಹಾಗೆ ಮಾಡಬೇಕಾಯಿತು."

"ಆಡಳಿತದಲ್ಲಿ ಅನುಭವವಿಲ್ಲದ ಅಚ್ಯುತ ಪ್ರಭುಗಳು ಸಾಮ್ರಾಟರಾದರೆ, ನೀವು ಸರ್ವಾಧಿಕಾರಿಯಾಗಿ, ಸಿಂಹಾಸನವನ್ನು ದಕ್ಕಿಸಿಕೊಳ್ಳಬಹುದೆಂದು ಯೋಚಿಸಿದಿರಿ. ಕಡೆಗೂ ಯಶಸ್ವಿಯಾದನೆಂದು ನಿಮ್ಮ ಭಾವನೆ!"

"ಇದು ಸುಳ್ಳು ನನಗೆ ಯಾವ ದುರುದ್ದೇಶವೂ ಇರಲಿಲ್ಲ."

"ಶತ್ರು ಧಾಳಿಯನ್ನು ಇದಿರಿಸುವ ನೆಪದಲ್ಲಿ, ಅಳಿಯ ರಾಮರಾಯ, ತಿರುಮಲರಾಯರನ್ನು ಕಳುಹಿಸಿಕೊಟ್ಟು, ನೀವೇಕೆ ಕುಮಾರನ ರಕ್ಷಣೆಯ ಬಗ್ಗೆ ವಿಶೇಷ ವ್ಯವಸ್ಥೆ ಮಾಡಿದಿರಿ?"

"ಪರಿಸ್ಥಿತಿ ಹಾಗೆ ಬಂತು. ನಾನು ರಾಜ್ಯಾಡಳಿತವನ್ನು ನೋಡುತ್ತಾ ರಾಜಧಾನಿಯಲ್ಲಿರಬೇಕಾಯಿತು."

"ಪರಿಸ್ಥಿತಿ ಹಾಗೆ ಬರಲಿಲ್ಲ – ಹಾಗೆ ಮಾರ್ಪಡಿಸಿದಿರಿ ಕುಮಾರನ ರಕ್ಷಣೆಯ ಭಾರ ಪ್ರಭುಗಳು ವಹಿಸಿಕೊಳ್ಳಲು ಇಚ್ಛಿಸಿದಾಗ ನೀವೇಕೆ ನಿರಾಕರಿಸಿದಿರಿ?"

"ಕುಮಾರನನ್ನು ವೈಯುಕ್ತಿಕ ಜವಾಬ್ದಾರಿಯಿಂದ ರಕ್ಷಿಸುವುದಾಗಿ ಸಾಮ್ರಾಟರಿಗೆ ವಚನ ಕೊಟ್ಟಿದ್ದೆ."

"ನೀವು ವಚನ ಪಾಲಿಸಿದಿರಾ ?"

"ಪಾಲಿಸಲಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ."

"ಇದರಲ್ಲಿ ವಿಷಾದಕ್ಕೆ ಅವಕಾಶವೇ ಇಲ್ಲ – ನಿಮ್ಮ ಆಶಯ ಅಂತಿತ್ತು – ಅದು ಕಾರ್ಯಗತವಾಯಿತು."

"ಅದು ಹೋಗಲಿ, ಸಿದ್ಧನಾಥರ ಭವಿಷ್ಯವಾಣಿಯನ್ನು ಉಪೇಕ್ಷಿಸಿದ್ದೇಕೆ?"

"ನನಗೆ ಆ ಮಾತಿನಲ್ಲಿ ಯಾವ ಹುರುಳೂ ಕಾಣಲಿಲ್ಲ."

"ಪ್ರಭುಗಳು ಆ ಬಗ್ಗೆ ಕಳವಳಗೊಂಡಾಗ ನೀವೇಕೆ ಅದನ್ನು ನಿವಾರಿಸಲು ಪ್ರಯತ್ನಿಸಲಿಲ್ಲ."

ಈ ಮಾತಿಗೆ ಏನು ಹೇಳಬೇಕೆಂದು ಸೋಮರಸನಿಗೆ ತೋರಲಿಲ್ಲ.

"ನೀವು ಆ ಭವಿಷ್ಯವಾಣಿಗೆ ವಿಪರೀತಾರ್ಥ ಕಲ್ಪಿಸಿ ಪ್ರಭುಗಳನ್ನು ಅಡ್ಡ ದಾರಿಗೆಳೆಯಲು ಪ್ರಯತ್ನಿಸಲಿಲ್ಲವೇ ?"

"ಇಲ್ಲ !"

"ನೀವು ಆ ಭವಿಷ್ಯಕ್ಕೆ ಗ್ರಹಬಾಧೆ ಇತ್ಯಾದಿ ಅರ್ಥಮಾಡಲಿಲ್ಲವೇ ?"

"ಹೌದು ಮಾಡಿದ್ದುಂಟು."

"ಇದರ ಉದ್ದೇಶವೇನು ? ಪ್ರಭುಗಳು ನಿಮ್ಮ ಬಗ್ಗೆ ಸಂದೇಹ ತಾಳಬಾರದೆಂದಲ್ಲವೇ ?"

"ಇಲ್ಲ...."

"ನಿಮ್ಮ ವಿರುದ್ಧ ಭವಿಷ್ಯವಾಣಿಯನ್ನು ನುಡಿದ ಆ ಸಿದ್ಧನಾಥರನ್ನೇಕೆ ಬಂಧಿಸಲಿಲ್ಲ ?"

"ಅವರು ನನ್ನ ಕೈಗೆ ಸಿಕ್ಕಲಿಲ್ಲ !"

"ನಿಮ್ಮ ಕೈಗೆ ಸಿಕ್ಕದೆ ತಪ್ಪಿಸಿಕೊಳ್ಳಬೇಕಾದರೆ ಅವರು ಮಹಾತ್ಮರೇ ದಿಟ. ಅಸಾಧಾರಣ ಶಕ್ತಿಯುಳ್ಳ ಮಹಾತ್ಮರೇ ದಿಟ. ಅವರಿಗೆ ವಿದ್ರೋಹದ ಸುಳಿವು ಹೇಗೋ ತಿಳಿದು ಎಚ್ಚರಿಸಿದರು. ತಮ್ಮ ಕಾರ್ಯ ಮುಗಿದೊಡನೆ ಹೊರಟು ಹೋದರು. ಆದರೆ ಆ ಭವಿಷ್ಯವನ್ನು ನೀವು ಅಡಗಿಸಲು ಯತ್ನಿಸಿದಿರಿ ! ತಲೆಹೋಕರ ಅಸಂಬದ್ಧ ಪ್ರಲಾಪವೆಂದು ! ಆದರೆ ಮಹಾತ್ಮರ ವಾಣಿ ಎಂದಿಗೂ ಸುಳ್ಳಾಗುವುದಿಲ್ಲ. ಕುಮಾರನು ಚಂದ್ರನಾಮಾಂಕಿತರಾದ ನಿಮ್ಮಿಂದಲೇ ಹತನಾದ !"

"ನಾನು ಕುಮಾರನ ಕೊಲೆ ಮಾಡಲಿಲ್ಲ !"

"ನೀವಾಗಿ ನೀವೇಕೆ ಕುಮಾರನು ಕೊಲೆಯಾದ ಸುದ್ದಿಯನ್ನು ಪ್ರಭುಗಳಿಗೆ ತಿಳಿಸಲು ಬಂದಿರಿ ?"

"ಅದು ನನ್ನ ಕರ್ತವ್ಯ ಪರಿಪಾಲನೆ !"

"ಹೋಗಲಿ ಕೊಲೆಯಾದ ದಾಸಿಯನ್ನು ನೀವು ಅನ್ನಪೂರ್ಣಾದೇವಿಯ ಅಂತಃಪುರದಲ್ಲಿ ನೇಮಿಸಲು ಕಾರಣವೇನು ?"

"ಅವಳು ನಮ್ಮ ಮನೆಯಲ್ಲಿ ಬಾಲ್ಯದಿಂದಲೂ ಇದ್ದು ನಮ್ಮ ನಂಬಿಕೆಗೆ ಪಾತ್ರಳಾಗಿದ್ದಳು."

"ಆ ನಿಮ್ಮ ನಂಬಿಕೆಯ ದಾಸಿಯೇ ಕುಮಾರನನ್ನು ಕೊಲೆಮಾಡಿದ್ದಾಳೆ. ಹೌದೋ ?"

ಉತ್ತರ ಹೇಳಲಾಗಲಿಲ್ಲ.

"ನೀವು ಈ ಮಾತಿಗೆ ಉತ್ತರ ಕೊಡಲಾರಿರಿ. ಏಕೆಂದರೆ ಆ ನಿಮ್ಮ ನಂಬಿಕೆಯ ದಾಸಿಯಿಂದಲೇ ಕುಮಾರನ ಕೊಲೆಯಾಗಿದೆ. ಅಂದಮೇಲೆ ನೀವು ಆ ದಾಸಿಯಿಂದ ಯಾವುದೋ ಸ್ವಾರ್ಥಸಾಧನೆಗಾಗಿ ಕುಮಾರನ ಕೊಲೆ ಮಾಡಿಸಿದ್ದೀರೆಂದು ಸ್ಪಷ್ಟವಾಗುತ್ತದೆ. ಇನ್ನೂ ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವುದಿಲ್ಲವೇ ?"

"ಇಲ್ಲ.... ಇಲ್ಲ.... ಇಲ್ಲ...."

"ಪ್ರಭೂ ಆರೋಪಿಗಳು ತನ್ನ ತಪ್ಪನ್ನು ಒಪ್ಪಿಕೊಳ್ಳುವುದಿಲ್ಲ – ವಿಚಾರಣೆಯನ್ನು ತಾವು ಪರಾಂಬರಿಸಿದ್ದೀರಿ. ತಾವು ನ್ಯಾಯಮೂರ್ತಿಗಳು. ಸಭಾಸದರ ಅಭಿಪ್ರಾಯ ತಿಳಿದು ಅಪರಾಧಿಗೆ ತಕ್ಕ ಶಿಕ್ಷೆಯನ್ನು ವಿಧಿಸಬೇಕೆಂದು ಬೇಡುತ್ತೇನೆ."

ನ್ಯಾಯಮೂರ್ತಿಗಳು ಸಭಾಸದರೊಂದಿಗೆ ವಿಚಾರವಿನಿಮಯಮಾಡಿ, ಒಮ್ಮತಕ್ಕೆ ಬಂದು ತಮ್ಮ ತೀರ್ಮಾನವನ್ನು ಹೇಳಿದರು—

"ಸೋಮರಸರು ಕುಮಾರನ ಕೊಲೆಘಾತಕರೆಂಬುದರಲ್ಲಿ ಸಂದೇಹವಿಲ್ಲ– ಅವರಿಗೆ ಮರಣದಂಡನೆಯ ಶಿಕ್ಷೆ ವಿಧಿಸಲಾಗಿದೆ !"

"ಈ ತೀರ್ಪು ಅನ್ಯಾಯ ! ನಾನು ಪ್ರತಿಭಟಿಸುತ್ತೇನೆ.... ನಾನು ಪ್ರತಿಭಟಿಸುತ್ತೇನೆ" ಎಂದು ಹೇಳುತ್ತಿರುವಂತೆಯೇ ಸಲಕಂ ತಿರುಮಲ ಸೋದರರ ಆಜ್ಞೆಯಂತೆ ಸಶಸ್ತ್ರ ಸೈನಿಕರು ಅವನನ್ನು ಬಂಧಿಸಿ ವಧಾಸ್ಥಾನಕ್ಕೆ ಕರೆದೊಯ್ದರು.

ಸೋಮರಸನು ಅಲ್ಲಿಂದ ಹೋಗುವಾಗ ಅನ್ಯಾಯ, ಅನ್ಯಾಯ, ಅನ್ಯಾಯ ಎಂದು ಕೂಗುತ್ತಲೇ ಇದ್ದನು. ಆದರೆ ಅವನ ಮೇಲೆ ಯಾರಿಗೂ ಕರುಣೆ ಬರುವಂತೆ ತೋರಲಿಲ್ಲ. ಅವನನ್ನು ಶಸ್ತ್ರಸಜ್ಜಿತ ಸೈನಿಕರ ಕೈಗೆ ಒಪ್ಪಿಸಿದ ಕೂಡಲೇ ಅವನ ಕಥೆ ಮುಗಿಯಿತೆಂದು ಆ ಸಹೋದರರು ಸಮಾಧಾನದ ನಿಟ್ಟುಸಿರು ಬಿಟ್ಟರು.

ಆದರೆ ಅಚ್ಯುತರಾಯನ ಮುಖ ಮಾತ್ರ ಏಕೋ ಕಳೆಗುಂದಿತ್ತು. ಹೃದಯ ಭಾರವಾಯಿತು ! ತಾನು ಹೇಳಿದ್ದ ತೀರ್ಪು ತನ್ನ ಅಂತರಂಗಕ್ಕೆ ಸಮ್ಮತಿ

ಯಿಲ್ಲವೆಂದು ಹೇಳಲು ಅವನ ಕಳೆಗೊಂದಿದ ಮುಖವೇ ಸಾಕ್ಷಿಯಾಗಿತ್ತು. ತಾನು ಯಾವುದೋ ದುಃಸ್ವಪ್ನ ಕಂಡವನಂತೆ ದುಗುಡಗೊಂಡ ಮನಸ್ಸಿನಲ್ಲಿ ನ್ಯಾಯಾಲಯವನ್ನು ಬಿಟ್ಟು ಹೊರಟ. ಅವನನ್ನು ಹಿಂಬಾಲಿಸಿ ಹೋದ ಸಲಕಂ ಸಹೋದರರನ್ನು ತೀಕ್ಷ್ಣವಾಗಿ ನೋಡಿದನೇ ಹೊರತು ಏನನ್ನೂ ನುಡಿಯ ಲಿಲ್ಲ. ಸದ್ಯದ ಮಾನಸಿಕ ಸ್ಥಿತಿಯಲ್ಲಿ ಅವನನ್ನು ಏಕಾಂಗಿಯಾಗಿ ಬಿಡುವುದೇ ಲೇಸೆಂದು, ದಿಗ್ವಿಜಯ ಸಾಧನೆಯ ಹಿಗ್ಗಿನಲ್ಲಿ ಅವರು ಅಲ್ಲಿಂದ ಹೊರಟರು. ದಾರಿಯಲ್ಲೇ ವಧಾಸ್ಥಾನದಿಂದ ಬಂದಿದ್ದ ದೂತನೊಬ್ಬ, ಸೋಮರಸನ ಕಥೆ ಮುಗಿದ ವಾರ್ತೆಯನ್ನು ತಂದಿತ್ತ.

"ಒಂದು....ಎರಡು....ಮೂರು! ಮೂವರ ಕಥೆ ಮುಗಿಯಿತು. ಇನ್ನೂ ಒಂದು... ಎರಡು....ಮೂರು! ಅನಂತರ ನಾನೇ ರಾಜ, ನೀನೇ ಮಂತ್ರಿ." ಎಂದು ತಮ್ಮನನ್ನು ನೋಡಿ ಬೆನ್ನು ತಟ್ಟಿ, ತನ್ನ ದುರಾಲೋಚನೆಗೆ ತಾನೇ ಹಿಗ್ಗಿ ಅಲ್ಲಿಂದ ಕಾಲ್ತೆಗೆದ ಹಿರಿಯ ತಿರುಮಲ.

ಸೋಮರಸನ ಸಾವಿನ ಸುದ್ದಿಯನ್ನು ಕೇಳಿ "ಅಯ್ಯೋ! ಎಂತಹ ಅನ್ಯಾಯವಾಯಿತು." ಎಂದು ಜನ ತಲ್ಲಣಿಸಿದರು. ಸೋಮರಸನ ವಿಷಯ ದಲ್ಲಿ ಅಭಿಮಾನವಿಟ್ಟಿದ್ದ ಜನಕ್ಕೆ ಈ ಸುದ್ದಿ ಕೇಳಿ ಗರಬಡಿದಂತೆ ಆಯಿತು. ಯಾವ ವ್ಯಕ್ತಿ ಅಚ್ಯುತರಾಯನು ಪಟ್ಟಕ್ಕೆ ಬರಲು ಕಾರಣನಾದನೋ, ಅವನಿಗೆ ಮರಣಶಿಕ್ಷೆ ವಿಧಿಸಿ ಆ ಮೂಲಕ ಅಚ್ಯುತರಾಯ ತನ್ನ ಕೃತಘ್ನತೆಯನ್ನು ತೋರಿಸಿದ್ದ. ಅಪರಂಜಿಯಂತೆ ಪರಿಶುದ್ಧನಾಗಿದ್ದ, ನಿಷ್ಕಳಂಕ ಚರಿತನನ್ನು ದ್ರೋಹಿಗಳ ಮಾತು ಕೇಳಿ ವೃಥಾಕಾರಣದಿಂದ ಗಲ್ಲಿಗೇರಿಸಿ, ನಂಬಿಕೆಯ ದ್ರೋಹ ಮಾಡಿದನೆಂದು ಜನ ಅಚ್ಯುತರಾಯನನ್ನು ಜರೆದರು. ಅಚ್ಯುತ ರಾಯನ ಆಳ್ವಿಕೆಯಲ್ಲಿ, ನ್ಯಾಯ, ನಿಷ್ಠೆಗಳಿಗೆ ಬೆಲೆಯಿಲ್ಲವೆಂದೂ, ಸತ್ಯಧರ್ಮ ಗಳನ್ನು ದೈತ್ಯ ಶಕ್ತಿ ನುಂಗಿ, ಪೈಶಾಚಿಕ ಪ್ರಭುತ್ವಕ್ಕೆ ಆರಂಭವಾದುದಕ್ಕೆ ಸೋಮರಸನನ್ನು ಬಹಿರಂಗದಲ್ಲಿ, ಸರಿಯಾಗಿ ವಿಚಾರಣೆ ಮಾಡದೆ, ಶಿಕ್ಷೆ ವಿಧಿ ಸಿದುದೇ ಸಾಕ್ಷಿ ಎಂದು ಸಜ್ಜನರು ಹೆದರಿ ಕಂಗೆಟ್ಟರು. ಕಳೆದ ನಾಲ್ಕಾರು ವರ್ಷಗಳಿಂದ ಸೋಮರಸನ ಜನಪ್ರಿಯ ಆಡಳಿತ, ನಿಷ್ಪಕ್ಷಪಾತವಾದ ನ್ಯಾಯ ದಾನ, ಪ್ರಜಾಹಿತ ಕಾರ್ಯಗಳನ್ನು ನೋಡಿದ್ದ ಜನರಿಗೆ, ಕುಮಾರನ ಕೊಲೆಯಲ್ಲಿ ಸಲಕಂ ಸಹೋದರರ ಕೈವಾಡವಿರುವುದೆಂದು ಊಹಿಸಲೂ ಸಾಧ್ಯವಾಗಿತ್ತು. ಇದುವರೆಗೆ ಕೊಲೆಯ ಉದ್ದೇಶ ರಹಸ್ಯವಾಗಿದ್ದುದು, ಈ ಸಹೋದರರನ್ನು ನೋಡುತ್ತಲೇ ಬಯಲಾಗಿತ್ತು. ತಮ್ಮ ಉದ್ದೇಶ ಸಾಧನೆಗೆ ವಿರುದ್ಧವಾದ ಯಾರನ್ನಾಗಲೀ, ನಿಸ್ಸಂಕೋಚದಿಂದ ಕತ್ತಿಯ ಬಾಯಿಗೆ ಕೊಟ್ಟು, ಕಾರ್ಯ ಸಾಧಿಸಿ ಕೊಳ್ಳುವ ಅವರ ಪೈಶಾಚಿಕ ಧೈರ್ಯವನ್ನು ಕಂಡು ಜನ ಕನಲಿದರು. ದೈವಕ್ಕೂ

ಧರ್ಮಕ್ಕೂ, ಅಂಜದ ಅವರಿಗೇ ಮಾನವೀಯ ಭಾವನೆಗಳು ಎಳ್ಳಷ್ಟೂ ಇಲ್ಲದ ಕಿರಾತರಂತೆ ಜನರಿಗೆ ಕಂಡರು. ಇನ್ನೆಷ್ಟು ಜನ ನಿರಪರಾಧಿಗಳ ರಕ್ತ ಹರಿ ಸುತ್ತಾರೋ ಎಂದು ಹೌಹಾರಿದರು. ಇದುವರೆಗೆ ಅಧಿಕಾರವಿಲ್ಲದೆ ಇಷ್ಟೆಲ್ಲಾ ದೌರ್ಜನ್ಯ ಕೃತ್ಯಗಳನ್ನು ನಡೆಸಿದ ಅವರು ಆಡಳಿತದ ಸೂತ್ರ ಅವರದಾದ ಮೇಲೆ ಇನ್ನೂ ಅವರ ಪೈಶಾಚಿಕ ಪ್ರಭುತ್ವಕ್ಕೆ ಆರಂಭಿಸಬಹುದು. ಅಚ್ಯುತ ರಾಯನಿಗೆ ರಾಜ್ಯಾಡಳಿತದಲ್ಲಿ ಅನುಭವವಿರಲಿಲ್ಲ. ಸಮರ್ಥರಾದ ಈ ಸಹೋ ದರರ ದುಷ್ಕೃತ್ಯವನ್ನು ತಡೆಯುವ ಸಾಮರ್ಥ್ಯವಿಲ್ಲ. ಅವರ ನಿರಂಕುಶ ಪ್ರಭುತ್ವ ವನ್ನು, ದಬ್ಬಾಳಿಕೆಯನ್ನು ತಡೆಯಬಲ್ಲವರು ಅಳಿಯ ರಾಮರಾಯ ಮತ್ತು ತಿರುಮಲರಾಯರು ಮಾತ್ರವೇ. ದುರ್ದೈವದಿಂದ ಅವರ ಸಾಮ್ರಾಜ್ಯ ಸಂರಕ್ಷ ಣೆಯ ಪವಿತ್ರ ಕಾರ್ಯದಲ್ಲಿ ರಾಜಧಾನಿಯ ಹೊರಗಿದ್ದರು. ಅವರು ರಾಜಧಾನಿ ಯಲ್ಲಿದ್ದಿದ್ದರೆ ಇಷ್ಟೆಲ್ಲಾ ಅನಾಹುತ ನಡೆಯುತ್ತಿರಲಿಲ್ಲವೆಂದು ಜನರು ಆಲೋಚಿ ಸಿದರು. ಆದರೆ ಸಾಮ್ರಾಜ್ಯದ ಪ್ರಮುಖ ಆಡಳಿತಗಳನ್ನು ಕೈಲಿರಿಸಿಕೊಂಡ ಅವರಿಂದ ಅಳಿಯಂದಿರಿಗೂ ವಿಪತ್ತು ಬರುವುದೂ ಹೆಚ್ಚಲ್ಲ. ಅವರು ಅಧಿ ಕಾರೋನ್ಮತ್ತರಾಗಿ, ದುರ್ಬಲ ಸಾಮ್ರಾಟರನ್ನು ಮೂಲೆಗೊತ್ತಿ, ತಾವೇ ಪ್ರಭುತ್ವ ಮಾಡುವುದೂ ಹೆಚ್ಚಲ್ಲ. ಅವರ ನಿರಂಕುಶಾಡಳಿತವನ್ನು ವಿರೋಧಿಸಿದವರು, ಅವರ ಕೂರ್ಗತ್ತಿಗೆ ಬಲಿಯಾಗುವುದೂ ಹೆಚ್ಚಲ್ಲ ಅಂತೂ ಸಾಮ್ರಾಜ್ಯಕ್ಕೆ ಈ ಸಲಕಂ ಸಹೋದರರು ಯಾವುದೋ ಗಂಡಾಂತರ ತರಲು ಧೂಮಕೇತುಗಳಂತೆ ಅವತರಿಸಿದ್ದಾರೆ! ದೇವರೇ ಸಾಮ್ರಾಜ್ಯವನ್ನು ಕಾಪಾಡು ಎಂದು ಮೊರೆಯಿಟ್ಟರು.

ಸೋಮರಸನ ಅಂತ್ಯವನ್ನು ಕೇಳಿದ ಜನ, ಇನ್ನು ಮುಂದೆ ತಾವು ಮೈಯೆಲ್ಲಾ ಕಣ್ಣಾಗಿಸಿಕೊಂಡಿರಬೇಕೆಂದೂ, ಕೊಂಚ ಎಚ್ಚರ ತಪ್ಪಿದರೂ, ಆ ಸಹೋದರರ ಕಣ್ಣಿನಲ್ಲಿ ವಿದ್ರೋಹಿಗಳಾಗುವ ಸಂಭವ ಉಂಟೆಂದು ಹೆದರಿದರು. ಅವರಿಗೆ ಸೋಮರಸನನ್ನು ವಿಚಾರಣೆಯಿಲ್ಲದೆ ಶಿಕ್ಷಿಸಿದುದು, ಪ್ರಭುತ್ವದ ಬಗ್ಗೆ ಇದ್ದ ಎಲ್ಲ ನಂಬಿಕೆಗಳನ್ನು ತಪ್ಪಿಸಿತ್ತು. ಇಂತಹ ಅವಿವೇಕಿಯಾದ ಪ್ರಭುವನ್ನು ನಿಷ್ಠೆಯಿಂದ ಸೇವಿಸಿದುದು ತಪ್ಪಾಗಿ ಕಾಣಿಸಿತು. ಅವರೆಲ್ಲರಿಗೆ ಕೊಟ್ಟ ಎಚ್ಚ ರಿಕೆ ಎಂಬಂತೆ ಸಾಯುವಾಗ, ಸೋಮರಸನು ಹೀಗೆ ಹೇಳಿ ಸತ್ತನಂತೆ "ನಾನು ಪ್ರಭುಗಳಲ್ಲಿ ಇಟ್ಟಿದ್ದ ನಿಷ್ಠೆಯಲ್ಲಿ ನೂರರಲ್ಲಿ ಒಂದು ಪಾಲು ನಿಷ್ಠೆಯನ್ನು ದೈವದ ವಿಷಯದಲ್ಲಿ ಇಟ್ಟಿದ್ದರೆ ದೇವರು ನನ್ನನ್ನು ಎಂದಿಗೂ ಹೀಗೆ ಕೈ ಬಿಡುತ್ತಿರಲಿಲ್ಲ."

ಸೋಮರಸನಿಗೆ ಕಡೆಗಾಲದಲ್ಲಿ ಉಂಟಾಗಿದ್ದ ನಿರಾಶೆಯನ್ನು ಸೂಚಿಸಲು ಈ ಮಾತಿಗಿಂತ ಬೇರೆ ಪ್ರಮಾಣ ಅನವಶ್ಯಕ, ಅವನು ಬದುಕಿದಷ್ಟು ದಿನವೂ ಪರಮ ಸ್ವಾಮಿ ನಿಷ್ಠ ಸೇವಕನಾಗಿ ಬದುಕಿದ್ದ. ಆದರೆ ಅವನ ನಿಷ್ಠೆಯ ತಪಸ್ಸು ಅವನನ್ನು ಕಾಯದೆ ಹೋಗಿತ್ತು. ಅವನು ಯಾರನ್ನು ದೈವವೆಂದು ಸ್ವಾಮಿ

ಎಂದು ನಿರ್ವಂಚನೆಯಿಂದ ತ್ರಿಕರಣಪೂರ್ವಕವಾಗಿ ಸೇವೆ ಸಲ್ಲಿಸಿದ್ದನೋ, ಯಾವಾತನ ಶ್ರೇಯಸ್ಸಿಗಾಗಿ ಹಗಲಿರುಳು ದೇವರಲ್ಲಿ ಮೊರೆಯಿಡುತ್ತಿದ್ದನೋ, ಅಂಥ ಪ್ರಭುವಿನಿಂದಲೇ, ನಿರಾನಿಮಿತ್ತವಾಗಿ, ಮರಣದಂಡನೆಯ ಶಿಕ್ಷೆಯನ್ನು ಅನುಭವಿಸಬೇಕಾಯಿತು. ಹೀಗೆ ನಿರಪರಾಧಿಗಳ ರಕ್ತ ಹರಿಸಿ, ರಾಜ್ಯಾಡಳಿತದ ಸೂತ್ರಗಳನ್ನು ಸಲಕಂ ಸಹೋದರರು ಹಿಡಿದ ಮೇಲೆ, ಸಾಮ್ರಾಜ್ಯದ ಇತಿಹಾಸದಲ್ಲಿ ರಕ್ತಾಕ್ಷರಗಳಲ್ಲಿ ಬರೆದಿಡಬೇಕಾದ ಹೊಸ ಅಧ್ಯಾಯ ಆರಂಭವಾಯಿತು.

೮

ಚಿನ್ನಾದೇವಿಯಿಂದ ಬಂದ ಪತ್ರಗಳನ್ನು ನೋಡಿ, ರಾಜಧಾನಿಗೆ ಹಿಂದಿರುಗಿ ಬರಲು ಅಳಿಯ ರಾಮರಾಯ, ತಿರುಮಲರಾಯರಿಗೆ ಒಂದೆರಡು ತಿಂಗಳು ಹಿಡಿದವು. ಅವರು ತಮ್ಮ ಕಾರ್ಯವನ್ನು ಅರ್ಧಕ್ಕೆ ನಿಲ್ಲಿಸಿ, ಆತುರದಲ್ಲಿ ವಿಜಯನಗರಕ್ಕೆ ಓಡಿ ಬಂದಿದ್ದರು. ಆದರೆ ಅವರು ಬರುವುದರೊಳಗೆ ಸೋಮರಸನ ಅಂತ್ಯವಾಗಿತ್ತು. ಅಧಿಕಾರಸೂತ್ರಗಳೆಲ್ಲವೂ, ಪೆದ್ದ ತಿರುಮಲ, ಚಿನ್ನ ತಿರುಮಲರ ಕೈಲಿ ಭದ್ರವಾಗಿತ್ತು. ಸಾಮ್ರಾಟ್ ಅಚ್ಯುತರಾಯನ, ನಂಬಿಕೆ, ವಿಶ್ವಾಸಗಳಿಗೆ ಪಾತ್ರರಾಗಿದ್ದ ಅವರನ್ನು ಯಾರೂ ಕದಲಿಸುವಂತಿರಲಿಲ್ಲ.

ಕೃಷ್ಣದೇವರಾಯನ ರಾಣಿಯರಿಂದ ಅಂದರೆ, ತಿರುಮಲಾದೇವಿ, ಚಿನ್ನಾದೇವಿ, ಅನ್ನಪೂರ್ಣಾದೇವಿಯರಿಂದ ತಮಗೆ ಯಾವ ಬಗೆಯ ತೊಡಕೂ ಬರಬಾರದೆಂದು ಅವರ ಚಟುವಟಿಕೆಗಳನ್ನು ತಿಳಿದು ವರದಿ ಮಾಡಲು ಅನೇಕ ಬೇಹುಗಾರರನ್ನು ಹಾಕಿದ್ದರು. ಅರಮನೆಯ ಪ್ರಮುಖ ಹುದ್ದೆಗಳಿದ್ದ, ಕೃಷ್ಣದೇವರಾಯನ ಪಕ್ಷಪಾತಿಗಳೆಲ್ಲರನ್ನೂ, ಸೋಮರಸನ ಮಿತ್ರರನ್ನು ಒಂದಲ್ಲ ಒಂದು ಕಾರಣದಿಂದ, ಸ್ಥಳಾಂತರಿಸಿ, ಆ ಸ್ಥಾನಗಳಲ್ಲಿ ತಮ್ಮ ವಿಶ್ವಾಸಿಗಳನ್ನು ನೇಮಿಸಿಕೊಂಡಿದ್ದರು. ಅಮಾತ್ಯ ಸಂಪುಟದಲ್ಲಿದ್ದ ಹಲವರನ್ನು ಅವರವರ ಮಂಡಲಗಳಿಗೆ ಹಿಂದಿರುಗಿಸಲಾಗಿತ್ತು. ಅವರ ವಿಚಾರಣೆಯನ್ನು ಶಂಕಿಸಿದುದೇ ತಪ್ಪಾಗಿ, ಮಂತ್ರಿಗಳಾಗಿದ್ದ ಬಾಯಕರ ರಾಮಪ್ಪಯ್ಯ, ಅವನ ಅಳಿಯ ಬಾಚಯ್ಯರನ್ನು ಕೊಂಡವೀಡಿಗೆ ಹಿಂದಿರುಗಿಸಿದ್ದನು. ರಾಮಭೂಪಾಲಯ್ಯನನ್ನು ಚಂದ್ರಗಿರಿ ರಾಜ್ಯಕ್ಕೆ ಅಧಿಪತಿಯಾಗಿ ಕಳುಹಿಸಿಕೊಟ್ಟಿದ್ದ. ತೆರವಾದ ಅವರ ಸ್ಥಾನಗಳಲ್ಲಿ, ಸಲಕಂ ರಘುಪತಿ ರಾಚಯ್ಯ, ಅಬ್ಬರಾಜ ತಿಮ್ಮಪ್ಪ, ಮುಂತಾದವರು ನೇಮಿತರಾಗಿದ್ದರು. ಸಲಕಂ ಸಹೋದರರ ಆಜ್ಞೆಗಳನ್ನು ಹಿಂದು ಮುಂದೆ ನೋಡದೆ ಪರಿಪಾಲಿಸುವುದರಲ್ಲಿ ಹೆಸರುಗಳಿಸಿದ್ದ ಹನುಮನಾಯಕನೆಂಬುವನು ಈಗ ಸಲಕಂ ಸಹೋದರರ ಬಲಗೈ ಭಂಟನಾಗಿದ್ದನು.

ಸಲಕಂ ಸಹೋದರರು, ಈಗ ಮಹಾಮಂಡಲೇಶ್ವರರೆಂಬ ಬಿರುದಿಗೆ ಪಾತ್ರರಾಗಿ, ಉದಯಗಿರಿ, ಮುಂತಾದ ಪ್ರದೇಶಗಳ ಅಧಿಪತಿಗಳೂ ಆಗಿದ್ದರು. ಈಗ ಎಲ್ಲೆಲ್ಲೂ ಆ ಸಹೋದರರ ಪ್ರಾಬಲ್ಯವೇ ಎದ್ದು ಕಾಣುತ್ತಿತ್ತು. ಅಳಿಯ ರಾಮರಾಯ, ತಿರುಮಲರಾಯರು ರಾಜಧಾನಿಗೆ ಬರುವ ವೇಳೆಗೆ ತಮ್ಮ ಮನೆಯಲ್ಲಿ ತಾವೇ ಪರಕೀಯರೆಂಬಂತೆ ಆಗಿತ್ತು.

ರಾಜಧಾನಿಗೆ ಒಮ್ಮೆಲೆ ಬಂದ ಅಳಿಯಂದಿರ ಆಗಮನದ ವಾರ್ತೆ, ಗೂಢಚಾರರಿಂದ ಸಲಕಂ ಸಹೋದರರಿಗೆ ವರದಿಯಾಯಿತು. ಅವರು ಅಳಿಯಂದಿರನ್ನು ತಮ್ಮ ಬಳಿಗೆ ಕರೆಸಿಕೊಳ್ಳುವ ಬದಲು, ಅವರಿದ್ದೆಡೆಗೇ ಹೋಗಿ ಕುಶಲ ಪ್ರಶ್ನೆ ಮಾಡಿ ವಿಶ್ವಾಸ ಪಾತ್ರರೆಂಬಂತೆ ನಟಿಸಿದರು.

ಅಳಿಯ ರಾಮರಾಯನಿಗೆ ಸಲಕಂ ಸಹೋದರರ ವಿಷಯ ಅಷ್ಟು ಪರಿಚಯವಿರಲಿಲ್ಲ. ಆದರೂ ಅವರ ಕೀರ್ತಿಯನ್ನು ಕೇಳಿದ್ದ. ಕೃಷ್ಣದೇವರಾಯನ ಬಳಿ ಕೆಲಕಾಲ ಮಂತ್ರಿಯಾಗಿದ್ದ ಸಲಕಂರಾಜ ಅಥವಾ ಲಕ್ಕರಾಜನ ಮಕ್ಕಳೆಂದು ತಿಳಿದಿತ್ತು. ಅವರ ಸಹೋದರಿ ವರದಾಂಬಿಕೆಯನ್ನು ಅಚ್ಯುತರಾಯನಿಗೆ ವಿವಾಹ ಮಾಡಿಕೊಟ್ಟಿದೆ ಎಂಬುದೂ ತಿಳಿದಿತ್ತು. ಆದರೆ ಅವರ ಶಕ್ತಿ ಸಾಮರ್ಥ್ಯಗಳು ಪ್ರಥಮಬಾರಿಗೆ ಬೆಳಕಿಗೆ ಬಂದುದು ಕೊಂಡಮರಸಯ್ಯನ ಕೊಲೆಯ ಪ್ರಕರಣದಲ್ಲಿ. ಅವರು ಮಹಾ ಪ್ರಧಾನಿಯಾಗಿದ್ದ, ಕೊಂಡಮರಸಯ್ಯನಂಥ ಚತುರ ರಾಜಕಾರಣ ನಿಪುಣನನ್ನು, ಮಹಾ ಬಲಾಢ್ಯನನ್ನು ಹೇಗೆ ಮೋಸಗೊಳಿಸಿ, ಕೊಲೆಮಾಡಿದರೆಂಬುದು ಎಲ್ಲರಿಗೂ ಆಚ್ಚರಿಯ ಸಂಗತಿಯಾಗಿತ್ತು! ಆಶ್ಚರ್ಯವೆಂದರೆ, ಕೃಷ್ಣದೇವರಾಯನು ಅವರನ್ನು ಕೈಸೆರೆ ಹಿಡಿದು ಶಿಕ್ಷಿಸಬೇಕೆಂದು ಮಾಡಿದ ಎಲ್ಲ ಸಾಹಸ ವ್ಯರ್ಥವಾಗಿತ್ತು. ಅವನು ಬದುಕಿರುವವರೆಗೆ ಸಾಮ್ರಾಟನಿಗೆ ಸಿಕ್ಕಿರಲಿಲ್ಲ. ಕೃಷ್ಣದೇವರಾಯನ ಕಾಲದಲ್ಲಿ ರಾಜದ್ರೋಹಿಗಳೆನಿಸಿದ್ದ ಅವರು, ಅಚ್ಯುತರಾಯನ ಕಾಲದಲ್ಲಿ ಮಹಾ ಪ್ರಧಾನಿಗಳಾಗಿ ಮೆರೆದರು. ಅದೂ ಅತ್ಯಲ್ಪ ಕಾಲಾವಧಿಯಲ್ಲಿ! ಅವರ ಜಾಣ್ಮೆ ಕಾರ್ಯಕುಶಲತೆ, ಯುಕ್ತಿ ಸಾಮರ್ಥ್ಯಗಳಿಗೆ ಇದು ಸಾಕ್ಷಿಯಾಗಿತ್ತು.

ಸಲಕಂ ಸೋದರರರನ್ನು ವಿಶ್ವಾಸದಿಂದಲೇ ಬರಮಾಡಿಕೊಂಡು.

“ತಾವು ಅಪ್ಪಣೆ ಕೊಡಿಸಿದ್ದರೆ ನಾವೇ ತಮ್ಮ ಬಳಿಗೆ ಬರುತ್ತಿದ್ದೆವು. ವೃಥಾ ತಮಗೆ ತೊಂದರೆಯಾಯಿತು” ಎಂದ ಅಳಿಯರಾಮರಾಯ ಕೃತಕ ವಿನಯನಟಿಸುತ್ತಾ.

“ಅಷ್ಟುದೂರ ಪ್ರಯಾಣಮಾಡಿ ನೀವು ಬಂದಿರುವಾಗ ನಾವು ನಿಮ್ಮನ್ನು ನೋಡಲು ಬರುವುದು ಏನು ಹೆಚ್ಚು” ಎಂದು ಪೆದ್ದತಿರುಮಲ ಹೇಳಿದ ವ್ಯಂಗ ನಗೆ ನಗುತ್ತಾ. ಅವನ ನೋಟ, ಅಷ್ಟುದೂರ ಅವರು ಬಂದಿರುವುದಲ್ಲಿ

ಯಾವುದೋ ವಿಶೇಷವಿದೆ ಎಂಬುದನ್ನು ಸೂಚಿಸುತ್ತಿತ್ತು.

"ತಮ್ಮನ್ನು ನಾವೇ ಕರೆಸಬೇಕೆಂದಿದ್ದೆವು. ಅಷ್ಟರಲ್ಲಿ ನೀವೆ ಬಂದಿರಿ!" ಎಂದು ಚಿನ್ನ ತಿರುಮಲ ತನ್ನ ಹಲ್ಲುಗಳನ್ನು ತೋರಿಸಿ ನಕ್ಕ.

"ಹೊಸಪ್ರಧಾನಿಗಳ ಪರಿಚಯ ಮಾಡಿಕೊಳ್ಳಲು ತ್ವರೆಯಾಗಿ ಬಂದೆವು!" ಎಂದು ತಿರುಮಲರಾಯ ಹೇಳಿದ.

"ಸಾಮ್ರಾಜ್ಯದ ಸೇವಕರು ಇಂದಲ್ಲ ನಾಳೆ ಸೇರಲೇಬೇಕಲ್ಲ!"

"ತಮಗೆ ನಮ್ಮ ಅಭಿನಂದನೆಗಳನ್ನು, ಹಾರ್ದಿಕ ಶುಭಾಶಯಗಳನ್ನು ತಿಳಿಸುವ ಸಲುವಾಗಿ, ತಾವು ಪ್ರಧಾನಿಗಳಾದ ಸುದ್ದಿ ತಿಳಿದೊಡನೆ ತ್ವರೆಯಾಗಿ ಬಂದೆವು!"

"ತಮ್ಮ ವಿಶ್ವಾಸಕ್ಕೆ ನಾವಿಬ್ಬರೂ ಅಭಾರಿಯಾಗಿದ್ದೇವೆ!"

"ಹಳೆಯ ಸರಕಾರ ಉರುಳಿ, ಹೊಸಸರಕಾರ ರಚನೆಯಾಗಿದೆ – ಹೊಸ ಅಧಿಕಾರಿಗಳು, ಹೊಸಮಂತ್ರಿಮಂಡಲ – ಎಲ್ಲೆಲ್ಲೂ ಹೊಸಮುಖಗಳೇ ಎದ್ದು ಕಾಣುತ್ತಿದೆ. ಹಳೆಯ ಪ್ರಭುತ್ವದ ವಿದ್ರೋಹಿಗಳನ್ನು ಹೊರಗಟ್ಟಿ ಒಳ್ಳೆಯ ಕೆಲಸ ಮಾಡಿದಿರಿ."

"ರಾಜಧಾನಿಯಲ್ಲಿ ವಿದ್ರೋಹ ನಡೆದಾಗ, ಧರ್ಮಕರ್ಮ ಸಂಯೋಗ ದಿಂದ ನಾವು ಆ ಸಮಯಕ್ಕೆ ರಾಜಧಾನಿಗೆ ಬಂದೆವು. ಪ್ರಭುಗಳು ನಮ್ಮಲ್ಲಿಟ್ಟಿದ್ದ ವಿಶ್ವಾಸಕ್ಕೆ ಕಟ್ಟುಬಿದ್ದು, ನಿರ್ವಾಹವಿಲ್ಲದೆ ಅಧಿಕಾರಕ್ಕೆ ಬರಬೇಕಾಯಿತು. ನಾವು ಎಷ್ಟೆಂದರೂ ಸಾಮ್ರಾಟರ ಪಾದಸೇವಕರು. ಆಜ್ಞಾಧಾರಕರು. ಪ್ರಭುಗಳ ಆಜ್ಞೆಯನ್ನು ಧಿಕ್ಕರಿಸುವ ಕೆಚ್ಚು ನಮಗಿದೆಯೆ? ಸಾಮ್ರಾಟರು ನೀವು ಪ್ರಧಾನಿಗಳಾಗಿ ಎಂದರು. ನಮಗೆ ಸಾಮ್ರಾಜ್ಯದ ಆಡಳಿತದ ಗುರುತರ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಇಷ್ಟವಿಲ್ಲದಿದ್ದರೂ – ಆಗಲಿ ಎನ್ನಬೇಕಾಯಿತು. ಆಡಳಿತದಲ್ಲಿ ಚೆನ್ನಾಗಿ ನುರಿತಿರುವ ಅಳಿಯ ರಾಮರಾಯರು ತಿರುಮಲರಾಯರು ಇದ್ದಾರೆ. ಅವರು ಈ ಅಧಿಕಾರಿಗಳಿಗೆ ತಕ್ಕವರು ಎಂದು ನಾವು ಎಷ್ಟೆಷ್ಟೋ ಹೇಳಿದೆವು. ಆದರೆ ಪ್ರಭುಗಳು ದೂರದ ದಂಡೆಯಾತ್ರೆಯಲ್ಲಿರುವ ಅವರನ್ನು ಈಗ ಕರೆಸುವುದಾದರೆ ತೊಂದರೆಯಾದೀತು. ಅಲ್ಲದೆ ಅವರು ಯುದ್ಧದಲ್ಲಿ ಪರಿಣತರು. ಅವರು ಸೈನ್ಯದಲ್ಲಿದ್ದರೆ ದೇಶಕ್ಕೆ ಹೆಚ್ಚು ಸೇವೆ ಸಲ್ಲುತ್ತದೆಂದು ಹೇಳಿ, ನಮ್ಮ ಮೇಲೆ ಅಧಿಕಾರ ಹೇರಿದರು. ಪ್ರಭುಗಳ ಮನಸ್ಸಿಗೆ ವಿರೋಧವಾಗಿ ನಡೆದರೆ ಬೇಸರಗೊಳ್ಳುವರೆಂದು ನಾವು ಈ ಪದವಿಯನ್ನು ಒಪ್ಪಿಕೊಳ್ಳಬೇಕಾಯಿತು" ಎಂದು ಹೇಳಿದ ಪೆದ್ದ ತಿರುಮಲ ಪ್ರಧಾನ ನಾದುದರಲ್ಲಿ ತನ್ನ ತಪ್ಪು ಯಾವುದೂ ಇಲ್ಲವೆಂಬಂತೆ.

"ನನ್ನಿಂದ ಅಳಿಯ ರಾಮರಾಯರಿಗೆ ತೊಂದರೆಯಾಗಿದೆ. ಅಧಿಕಾರ

ಚ್ಯುತಿಯುಂಟಾಗಿದೆ. ಇದು ಪ್ರಭುಗಳ ಚಿತ್ತ! ದಯವಿಟ್ಟು ನಮ್ಮನ್ನು ಕ್ಷಮಿಸಿ." ಎಂದ ಚಿನ್ನತಿರುಮಲ.

"ಛೆ! ಛೆ! ನಿಮ್ಮಿಂದ ನಮಗೆ ಯಾವ ತೊಂದರೆಯೂ ಇಲ್ಲ. ನಾವು ನಿಮ್ಮಂತೆಯೇ ಪ್ರಭುಗಳ ಆಜ್ಞಾಧಾರಕರು. ಅವರ ಆಜ್ಞೆಯನ್ನು ಶಿರಸಾ ವಹಿಸಿ ನಡೆಯುವುದು ನಮ್ಮ ಕರ್ತವ್ಯ ಈ ಬಗ್ಗೆ ತಾವು ವ್ಯಥೆ ಪಡುವ ಕಾರಣ ವಿಲ್ಲ." ಎಂದು ಸಮಾಧಾನ ಪಡಿಸಿದ ಅಳಿಯ ತಿರುಮಲರಾಯ.

"ತಮಗೆ ರಾಜಧಾನಿಯಲ್ಲಿ ನಡೆದ ವಿದ್ರೋಹದ ವಿವರಗಳು ತಿಳಿದಿರ ಬೇಕೆಂದು ನಮ್ಮ ಭಾವನೆ...."

"ಸೂಕ್ಷ್ಮವಾಗಿ ತಿಳಿದಿದೆ, ಸೋಮರಸರೇ ಇಂತಹ ವಿದ್ರೋಹಿಗಳಾಗುವ ರೆಂದು ನಾವು ಕನಸು ಮನಸಿನಲ್ಲೂ ತಿಳಿದಿರಲಿಲ್ಲ. ಎಲ್ಲವೂ ಅವರ ತಪ್ಪಲ್ಲ ಅಧಿಕಾರದ ತಪ್ಪು!" ಎಂದ.

"ಹೌದು ಅಧಿಕಾರ ಎಂಥಹವರನ್ನೂ ಎಚ್ಚರ ತಪ್ಪಿಸುತ್ತದೆ. ಹೆಚ್ಚು ಅಧಿಕಾರ ಹೆಚ್ಚು ಎಚ್ಚರ ತಪ್ಪಿಸುತ್ತದೆಂಬುದಕ್ಕೆ ಇದೇ ಸಾಕ್ಷಿ. ಪ್ರಭುಗಳನ್ನು ಅಧಿಕಾರಕ್ಕೆ ತರಲು ಕಾರಣರಾಗಿದ್ದ ಅವರು ರಾಜದ್ರೋಹಿಗಳಾದರೆಂದರೆ ಯಾರು ನಂಬುವ ಮಾತು? ಪ್ರಭುಗಳಿಗೆ ತಮ್ಮಲ್ಲಿ ನಂಬುಗೆ ಉಂಟಿದು ತಿಳಿದು, ಅವರ ಜೀವಕ್ಕೆ ಗಂಡಾಂತರ ತರಲು ಪ್ರಯತ್ನಿಸಿದರು. ಸುದೈವದಿಂದ ಪ್ರಭು ಗಳು ಎಚ್ಚತ್ತುಕೊಂಡು, ಅವರ ಪಿತೂರಿಗೆ ತಾವು ಬಲಿಯಾಗುವ ಮುನ್ನವೇ, ಅವರನ್ನು ಸೆರೆಯಲ್ಲಿಟ್ಟು ದೇಶಕ್ಕೆ ಉಪಕಾರ ಮಾಡಿದರು."

"ಹಾಗಾದರೆ, ನಾವು ರಾಜಧಾನಿಯನ್ನು ಬಿಟ್ಟು ಹೊರಟಮೇಲೆ ರಾಜ ಧಾನಿಯಲ್ಲಿ ರಾಜ್ಯಕ್ರಾಂತಿಯೇ ನಡೆದಿದೆ. ಅಂತೂ ಸಾಮ್ರಾಜ್ಯಕ್ಕೆ ಬಂದಿದ್ದ ಗಂಡಾಂತರ ನಿಮ್ಮಿಂದ ತಪ್ಪಿತು!" ಎಂದು ಅರ್ಥಗರ್ಭಿತವಾಗಿ ನೋಡಿದ.

"ನಮ್ಮಿಂದ ಎನ್ನುವುದಕ್ಕಿಂತಲೂ ಪಂಪಾಪತಿಯ ದಯೆಯಿಂದ ತಪ್ಪಿತು!"

"ದೈವ ಸಹಾಯದೊಂದಿಗೆ ಪುರುಷ ಸಹಾಯವೂ ದೊರೆಯಿತಲ್ಲ. ನೀವು ರಾಜಧಾನಿಗೆ ಸಕಾಲದಲ್ಲಿ ಬಾರದಿದ್ದರೆ ಇನ್ನೂ ಏನೇನು ಅನಾಹುತಗಳು ನಡೆ ಯುತ್ತಿತ್ತೋ....ದೇವರೇ ನಿಮ್ಮ ರೂಪದಲ್ಲಿ ಬಂದು ಕಾಪಾಡಿದ."

"ಇದು ದೊಡ್ಡ ಮಾತು! ನಮ್ಮ ವಿಷಯದಲ್ಲಿ ನೀವಿಟ್ಟಿರುವ ಅಭಿ ಮಾನ!"

"ಇದು ನಿಮ್ಮ ಹಿರಿಯಗುಣ!"

"ಅಂತೂ ಪ್ರಥಮದರ್ಶನದಲ್ಲೇ ನೀವು ನನ್ನನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದೀರಿ."

" ಚಿನ್ನದ ಬೆಲೆ ತಿಳಿಯಲು ಹೆಚ್ಚುಕಾಲ ಬೇಕೆ ?"

" ಆದರೆ ನಕಲು ಮಾಲುಗಳು ಚಿನ್ನಕ್ಕಿಂತಲೂ ಮಿಗಿಲಾಗಿ ಮೆರೆಯುವ ಕಾಲ ಇದು !"

" ಆದರೆ ಯೋಗ್ಯತೆ ಒಂದು ದಿನ ಹೊರಗೆ ಬರಲೇಬೇಕಲ್ಲ!"

" ನಿಮ್ಮ ಮಾತು ನಿಜ....ಕಾಲಾನುಕಾಲಕ್ಕೆ ಈ ಮಾತು ಜನತೆ ಮನಗೊಳ್ಳಲೇ ಬೇಕು – ಸದ್ಯದ ಸ್ಥಿತಿಯಲ್ಲಿ ನಮ್ಮ ಬಗ್ಗೆ ಅನೇಕರು ಅಸಮಾಧಾನಗೊಂಡಿದ್ದಾರೆ...." ಎಂದ ಪೆದ್ದತಿರುಮಲ.

" ಏಕೆ ?"

" ಸೋಮರಸನ ಪತನಕ್ಕೆ ನಾವೇ ಕಾರಣರಂತೆ."

" ಅವರು ಬಂಧನದಲ್ಲಿದ್ದಾಗ ನೀವು ರಾಜಧಾನಿಯಲ್ಲಿರಲಿಲ್ಲವೆಂದು ಕೇಳಿದೆ."

" ಹೀಗಿದ್ದೂ ಕುಮಾರನ ಕೊಲೆಮಾಡಿಸಿದವರು ನಾವಂತೆ, ಸೋಮರಸನಿಗೆ ಮರಣದಂಡನೆ ವಿಧಿಸಿದವರೂ ನಾವಂತೆ, ಅಧಿಕಾರದ ಸಲುವಾಗಿ ಹೀಗೆಲ್ಲ ಮಾಡಿದೆವೆಂದು ಜನರಾಡುತ್ತಿದ್ದಾರೆ."

" ಮೌಢ್ಯಜನರ ಮಾತಿಗೆ ತಾವು ಇಷ್ಟೆಲ್ಲಾ ಬೆಲೆಗೊಡಬಾರದು–ಅದಕ್ಕೆ ಬೆಲೆಯಿಲ್ಲ!"

" ತಿಳಿಯದ ಜನ ಹೀಗೆ ಹೇಳುತ್ತಿದ್ದರೆ ನಾವು ಇಷ್ಟು ವ್ಯಥೆಪಡುತ್ತಿರಲಿಲ್ಲ. ಅವರು ಅಜ್ಞರು ಎಂದು ನಾವು ಸುಮ್ಮನಿರಬಹುದಿತ್ತು. ಆದರೆ ಎಲ್ಲವನ್ನೂ ತಿಳಿದವರೇ, ರಾಜಕುಟುಂಬದ ಹಿರಿಯ ವ್ಯಕ್ತಿಗಳೇ, ನಮ್ಮ ಮೇಲೆ ಸಲ್ಲದ ಆರೋಪ ಹೊರಿಸುತ್ತಿದ್ದಾರೆ....ಈ ವಿಷಯದಲ್ಲಿ ನಾವೆಷ್ಟು ನಿರಪರಾಧಿಗಳೆಂದು ದೇವರಿಗೇ ಗೊತ್ತು." ಎಂದು ವಿಷಾದಪೂರ್ಣವಾಗಿ ಹೇಳಿದ.

" ಎಂಥಹವರ ಮೇಲೂ ಇಂತಹ ಆರೋಪ ಬರುವುದು ಹೆಚ್ಚಲ್ಲ. ನೀವು ಈ ಬಗ್ಗೆ ಚಿಂತಿಸಬಾರದು! ನಿಮ್ಮ ನಿಜವಾದ ಯೋಗ್ಯತೆ ತಿಳಿದಮೇಲೆ, ನಿಮ್ಮನ್ನು ನಿಂದಿಸಿದ ಜನವೇ ಪಶ್ಚಾತ್ತಾಪ ಪಡುತ್ತಾರೆ!"

" ನಾವು ಈ ಬಗ್ಗೆ ಚಿಂತಿಸುವುದಿಲ್ಲ! ನಮ್ಮನ್ನು ಅಕಾರಣವಾಗಿ ದೂಷಿಸಿದರೆಂದು ಅವರ ಮೇಲೆ ನಮಗೆ ದ್ವೇಷವೂ ಇಲ್ಲ – ಅದರ ಬದಲು ಸಂತಾಪವೇ ಇದೆ.... !ಈಗ ನಿಮಗೆ ಇದನ್ನೆಲ್ಲಾ ತಿಳಿಸಿದ ಉದ್ದೇಶವಿಷ್ಟು. .ತಮಗೆ ಇಲ್ಲಿನ ವಿದ್ಯಮಾನಗಳೊಂದೂ ತಿಳಿಯದು. ನಿಮಗೆ ನಮ್ಮ ವಿಷಯದಲ್ಲಿ ಜನ ಮನಸ್ಸು ಕೆಡಿಸಲೆತ್ನಿಸಬಹುದು. ಅವರ ಮಾತುಗಳಿಗೆ ಬೆಲೆಕೊಡಬಾರದೆಂದು ಎಚ್ಚರಿಸಲು ಇಷ್ಟು ಹೇಳಬೇಕಾಯಿತು...."

" ಈ ಬಗ್ಗೆ ನೀವು ಹೇಳಬೇಕಾಗಿಯೇ ಇಲ್ಲ – ಯಾರ ಯೋಗ್ಯತೆ

ಎಷ್ಟೆಂದು ನಮಗೆ ಚೆನ್ನಾಗಿ ಗೊತ್ತಿದೆ!" ಎಂದು ಅಳಿಯ ರಾಮರಾಯ ಸಲಕಂ ತಿರುಮಲ ಸಹೋದರರ ಮುಖ ನೋಡಿದ.

"ಹೌದು ಅದು ನಮಗೂ ತಿಳಿದಿದೆ!" ಎಂದು ಸಲಕಂ ಸಹೋದರರೂ ನಕ್ಕು ನುಡಿದರು. ಆ ನಗೆ ಅರ್ಥಗರ್ಭಿತವಾಗಿತ್ತು.

ಇಬ್ಬರು ಜಗಜಟ್ಟಿಗಳು ಒಬ್ಬರ ಅಂತರಂಗವನ್ನು ಒಬ್ಬರನ್ನು ಭೇದಿಸುವಂತಿತ್ತು ಆ ಸಾಹಸ. ಒಬ್ಬರ ಅಂತರಂಗವನ್ನು ಒಬ್ಬರಿಗೆ ತೋರಗೊಡದೆ ಪರಸ್ಪರ ಸದಭಿಪ್ರಾಯ ಮೂಡಿಸಲು ಶಕ್ತಿ ಮೀರಿ ಪ್ರಯತ್ನಿಸಿದ್ದರೂ – ಇಬ್ಬರ ಮನಸ್ಸು ಏನೆಂದು ಇಬ್ಬರಿಗೂ ತಿಳಿದುಹೋಗಿತ್ತು. ಪ್ರಥಮ ಸಂದರ್ಶನದಲ್ಲಿ ಇಬ್ಬರು ಜಟ್ಟಿಗಳು ಪ್ರತಿಸ್ಪರ್ಧಿಗಳ ಬಲಾಬಲಗಳನ್ನು ಶಕ್ತಿಸಾಮರ್ಥ್ಯಗಳನ್ನು ತೂಗಿ ನೋಡಿದ್ದರು. ಇಬ್ಬರೂ ಪರಸ್ಪರ ವಿಶ್ವಾಸಿಗಳಂತೆ ಬಹಿರಂಗದಲ್ಲಿ ತೋರ್ಪಡಿಸಿದ್ದರೂ ಇಬ್ಬರೂ ಅಂತರಂಗದಲ್ಲಿ ವೈರಿಗಳೇ ಆಗಿದ್ದರು. ಸಮಯ ಸಾಧಿಸಿ, ಒಬ್ಬರ ಮೇಲೆ ಒಬ್ಬರು ವಿಜಯ ಸಾಧಿಸಲು ಅಧಿಕಾರ ಸೂಕ್ತ ಅಪಹರಿಸಲು ಆತುರರಾಗಿ ಕಾದಿದ್ದರು.

ಸಲಕಂ ಸಹೋದರರು ಹೊರಟು ಹೋದ ಮೇಲೆ ಅಳಿಯರಾಮರಾಯ ತಿರುಮಲರಾಯರು – ಸಲಕಂ ಸಹೋದರರು ತಾವು ತಿಳಿದುದಕ್ಕಿಂತಲೂ ಹೆಚ್ಚು ಬುದ್ಧಿಶಾಲಿಗಳೆಂದು ತಿಳಿದರು. ತಾವು ಅತ್ಯಂತ ಸಮರ್ಥರಾದ ಪ್ರತಿಸ್ಪರ್ಧಿಗಳೊಂದಿಗೆ ಸೆಣಸಬೇಕೆಂಬ ವಿಷಯವನ್ನು ಮನಗೊಂಡಿದ್ದರು. ತಾವು ಸಾಮ್ರಾಟರ ಅಪ್ಪಣೆಯಿಲ್ಲದೆ ಬಂದಿದ್ದರೂ, ಆ ಬಗ್ಗೆ ಪ್ರಶ್ನಿಸದೆ ಅಸಮಾಧಾನಗೊಳ್ಳದೆ, ತಮ್ಮ ಬಗ್ಗೆ ವಿಶ್ವಾಸಿಗಳಂತೆ ನಟಿಸಿ ತಾವಾಗಿ ಬಂದು ತಮ್ಮ ಎಲ್ಲ ಸಂಗತಿಗಳನ್ನು ವಿಚಾರಿಸಿಕೊಳ್ಳುವ ನೆವದಲ್ಲಿ ತಮ್ಮ ಮನಸನ್ನು ತಮ್ಮ ವಿರೋಧಿಗಳ ಮಾತಿನಿಂದ ನಂಜಾಗದಂತೆ ಮುನ್ನೆಚ್ಚರಿಕೆ ಕೊಟ್ಟು ಹೋಗಿದ್ದರು. ಅವರ ಮುತ್ಸಾದ್ಧಿತನವನ್ನು ಕಂಡು ಅಳಿಯ ರಾಮರಾಯ ಬೆರಗಾಗದೆ ಹೋಗಲಿಲ್ಲ. ತಾನು ಗುಪ್ತವಾಗಿ ರಾಜಧಾನಿಗೆ ಬಂದಿದ್ದರೂ, ತಮ್ಮ ಮೇಲೆ ಬೇಹುಗಾರರನ್ನು ಹಾಕಿ, ಸುದ್ದಿ ಸಂಗ್ರಹಿಸಿಕೊಂಡಿರಬೇಕು. ಹೇಗೇ ಇರಲಿ ಬೇರೊಬ್ಬರು ಅವರ ವಿಷಯ ಮಾತು ತೆಗೆಯುವ ಮೊದಲೇ ತಮ್ಮ ಕಾರ್ಯವನ್ನು ಸಾಧಿಸಿಕೊಂಡು ಹೋಗಿದ್ದರು. ಅವರು ತಾವು ಊಹಿಸಿದ್ದಕ್ಕಿಂತಲೂ ಭಯಂಕರ ವ್ಯಕ್ತಿಗಳೆಂದು ಮನಗೊಂಡರು. ಇಂತಹವರೊಡನೆ ವ್ಯವಹರಿಸುವಾಗ, ಮೈಯೆಲ್ಲಾ ಕಣ್ಣಾಗಿಸಿ ಎಚ್ಚರದಿಂದ ಇರಬೇಕು ಎಂದು ನಿರ್ಧರಿಸಿದರು.

ಅವರಿಬ್ಬರು ಅಚ್ಯುತರಾಯನನ್ನು ನೋಡುವ ಮೊದಲೇ ಇತರ ರಾಣಿಯರ ದರ್ಶನಕ್ಕೆಂದು ಹೋದಾಗ, ನಡೆದಿದ್ದ ವಿದ್ಯಾಮಾನದ ಯಥಾರ್ಥರೂಪ ತಿಳಿಯದೇ ಹೋಗಲಿಲ್ಲ – ಸಲಕಂ ಸಹೋದರರು ಎಂತಹ ಧೂರ್ತರೆಂದು. ಸ್ಪಷ್ಟವಾಗಿ ತಿಳಿದಿತ್ತು.

ಚಿನ್ನಾದೇವಿಯು ಇಬ್ಬರು ಅಳಿಯಂದಿರಿಗೆ ಅವರು ರಾಜಧಾನಿಯನ್ನು ಬಿಟ್ಟು ಹೊರಟಲಾಗಾಯಿತು, ಅದುವರೆಗೆ ನಡೆದ ಎಲ್ಲ ವಿದ್ಯಮಾನಗಳನ್ನು ಸವಿಸ್ತಾರವಾಗಿ ವರದಿಮಾಡಿದಳು. ಕುಮಾರನ ಕೊಲೆಯಲ್ಲಿ ಸೋಮರಸನ ಕೈವಾಡಕ್ಕಿಂತಲೂ, ಸಲಕಂ ಸಹೋದರರ ಕೈವಾಡವಿರಬೇಕೆಂದು ಎಲ್ಲರ ಊಹೆ ಎಂದು ತನ್ನ ಸಂಶಯವನ್ನು ವ್ಯಕ್ತಪಡಿಸಿದಳು.

ತಿರುಮಲಾದೇವಿಯೊಂದಿಗೆ ನಡೆಸಿದ ಮಾತುಕಥೆಗಳಲ್ಲಿ – ಈ ಸಂಶಯ ಇನ್ನಷ್ಟು ಧೃಡಪಟ್ಟಿತಲ್ಲದೆ, ಸಲಕಂ ಸಹೋದರರು ಅಧಿಕಾರ ಭದ್ರಪಡಿಸಿಕೊಳ್ಳುವ ಸಲುವಾಗಿ, ಯಾವ ಹೇಯ ಕಾರ್ಯಕ್ಕೂ ಹೇಸುವುದಿಲ್ಲವೆಂದೂ – ಅವರಿಂದ ಅಳಿಯಂದಿರ ಜೀವಕ್ಕೆ ಎಂದಿದ್ದರೂ ಗಂಡಾಂತರವೆಂದೂ, ಆ ನೀಚರೊಂದಿಗೆ ವ್ಯವಹರಿಸುವಾಗ, ಬಹಳ ಜಾಗರೂಕರಾಗಿರಬೇಕೆಂದೂ ತಿಳಿಸಿ ಆ ಧೂರ್ತರನ್ನು ಅಸಮಾಧಾನಗೊಳಿಸುವ ಯಾವ ಕಾರ್ಯಕ್ಕೂ ತಮ್ಮ ನೆಲೆ ಭದ್ರವಾಗುವ ತನಕ ಕೈಹಾಕಬಾರದೆಂದೂ ಸ್ಪಷ್ಟವಾಗಿ ಎಚ್ಚರಿಸಿದ್ದಳು.

ಅವರು ಕುಮಾರನನ್ನು ಕಳೆದುಕೊಂಡು ಅದೇ ಕೊರಗಿನಿಂದ ಬಹುಮಟ್ಟಿಗೆ ಹುಚ್ಚಿಯಂತಾಗಿದ್ದ ಅನ್ನಪೂರ್ಣಾದೇವಿಯನ್ನು ನೋಡಿ, ತಮ್ಮ ಸಂತಾಪವನ್ನು ವ್ಯಕ್ತಪಡಿಸಲು ಅವಳ ಅರಮನೆಗೆ ತಿರುಮಲಾಂಬೆ, ವೆಂಗಡಾಂಬಿಕೆಯೊಡನೆ ಬಂದಾಗ ಅದೊಂದು ಕರುಣಾಜನಕ ಪ್ರಸಂಗವಾಯಿತು.

ಮಹಾರಾಣಿ ಅನ್ನಪೂರ್ಣಾದೇವಿ ಸಣ್ಣದೊಂದು ತಲೆದಿಂಬನ್ನು ಹೊನ್ನ ತೊಟ್ಟಿಲಿನಲ್ಲಿಟ್ಟು ಮಗುವೆಂದೇ ಭ್ರಮಿಸಿ ಮಗುವನ್ನು ತೂಗುವಂತೆ ತೂಗಿ ಜೋಗುಳ ಹಾಡುತ್ತಿದ್ದಳು. ತನ್ನ ಮಗುವು ಬದುಕಿದ್ದರೆ ಹೇಗೆ ಮುದ್ದಿಸುತ್ತಿದ್ದಳೋ, ಆಟವಾಡುತ್ತಿದ್ದಳೋ, ಲಲ್ಲೆಗೈಯುತ್ತಿದ್ದಳೋ, ಅದರಂತೆ ಆ ತಲೆದಿಂಬನ್ನು ಮುದ್ದು ಮಾಡಿ ಲಲ್ಲೆಗೈಯುತ್ತಿದ್ದಳು. ಅವಳ ಭಾಗ್ಯಕ್ಕೆ ಅದು ತಲೆದಿಂಬಾಗಿರದೆ ಸಜೀವವಾದ ಮಗುವೇ ಆಗಿತ್ತು. ತನ್ನ ಕೈಯಿಂದ ಯಾರಾದರೂ ಅದನ್ನು ಕಿತ್ತುಕೊಂಡು ಹೋಗುವರೆಂದು, ಅದನ್ನು ಬೇರೆಯವರ ಕೈಗೆ ಕೊಡುತ್ತಿರಲಿಲ್ಲ. ಒಂದು ಕ್ಷಣವೂ ಅದನ್ನು ಬಿಟ್ಟು ಅಲುಗುತ್ತಿರಲಿಲ್ಲ. ಅವರ ಭಾವನೆಯಲ್ಲಿ ಆ ತಲೆದಿಂಬು ಗತಿಸಿದ ಕುಮಾರನೇ ಆಗಿತ್ತು.

ಇಂದು ಮಗುವು ಅಳುತ್ತಿರುವುದೆಂದು ಭಾವಿಸಿ, ಅದನ್ನು ಲಲ್ಲೆಗೈಯುತ್ತಾ, ತೊಟ್ಟಿಲಲ್ಲಿಟ್ಟು ಮೆಲುದನಿಯಲ್ಲಿ ಜೋಗುಳ ಹೇಳಿಸಮಾಧಾನ ಮಾಡುತ್ತಿದ್ದಳು. ಅವಳ ಈ ಒಂದು ಭ್ರಮೆ ಉಳಿದು ಅವಳು ಮೊದಲಿನ ಅನ್ನಪೂರ್ಣಾದೇವಿಯೇ ಆಗಿದ್ದಳು. ಅನತಿದೂರದಲ್ಲಿ ತನ್ನ ಒಡತಿಯ ಹುಚ್ಚಾಟಗಳನ್ನು ನೋಡಿದರೂ ನಗದೆ, ಅವಳ ಮನಸ್ಸಿಗೆ ನೋವುಂಟು ಮಾಡಲು ಮನವಿಲ್ಲದೆ, ಆ ದಿಂಬನ್ನು ಮಗುವೆಂದೇ ತಿಳಿದು ನೆರವಾಗುವ ಇತರ ಪರಿಚಾರಿಕೆಯರು ದಾ

ಯರು ಒಮ್ಮೊಮ್ಮೆ ಅವರಿಗೆ ತಮ್ಮ ರಾಣಿಯ ಭಾವೋನ್ಮಾದವನ್ನು ಕಂಡು ಅವಳ ಉದ್ಗಾರವನ್ನು ಕೇಳಿ, ಅಳುಬರುವಂತೆ ಆಗುತ್ತಿತ್ತು. ಆದರೆ ತಮ್ಮ ಒಡತಿಯ ಇದಿರಿನಲ್ಲಿ ಅಳಲು ಹೆದರಿ, ಹೊರಗೆ ಬಂದು ಅಳುತ್ತಿದ್ದರು.

ಪರಿಚಾರಿಕಳು ಅನ್ನಪೂರ್ಣಾದೇವಿಯನ್ನು ಕಾಣಲು ತಿರುಮಲಾಂಬೆ, ವೆಂಗಡಾಂಬೆಯರು ತಮ್ಮ ಪತಿಯರೊಂದಿಗೆ ಬಂದಿರುವ ವಾರ್ತೆ ಅವರಿಗೆ ತಿಳಿಸಲು ತಾನು ಮಗುವನ್ನು ಮಲಗಿಸುತ್ತಿರುವುದಾಗಿಯೂ, ಅವರನ್ನು ಅಲ್ಲಿಗೇ ಕರೆತರಲು ತಿಳಿಸಿದಳು. ಅವಳ ಮಾತನ್ನು ಕೇಳಿ ಅಳಿಯರಾಮರಾಯ, ತಿರುಮಲರಾಯ, ಇಬ್ಬರೂ ಮುಖನೋಡಿಕೊಂಡರು. ಅವರಿಗೆ ಆ ಮಾತಿನ ಅರ್ಥ ತಿಳಿಯಲಿಲ್ಲ. ಅನ್ನಪೂರ್ಣಾದೇವಿಯ ಭಾವೋನ್ಮಾದವನ್ನು ತಿಳಿದಿದ್ದ ತಿರುಮಲಾಂಬೆ, ಆ ಮಾತಿನ ಅರ್ಥವಿವರಿಸಿ – ಮಾತಿನ ಮಧ್ಯೆ ಅಪ್ಪಿ ತಪ್ಪಿ ಕುಮಾರನು ಕೊಲೆಯಾಗಿರುವನೆಂಬ ಸಂಗತಿಯನ್ನು ಎತ್ತಬಾರದೆಂದೂ, ಇದನ್ನು ನೆನೆದೊಡನೆ – ಹಿಂದಿನ ಸಂಗತಿಗಳೆಲ್ಲವೂ ನೆನಪಿಗೆ ಬಂದು, ಹುಚ್ಚುಹಿಡಿದಂತೆ ರೋದಿಸುವಳೆಂದೂ, ಆದಷ್ಟು ಮಟ್ಟಿಗೆ ಅವಳ ದುಃಖವನ್ನು ಮರಕಳಿಸದಂತೆ, ನಗುಮುಖದಲ್ಲಿಯೇ ಅವಳನ್ನು ಬೀಳ್ಕೊಟ್ಟು ಬರಬೇಕೆಂದೂ ಎಚ್ಚರಿಸಿದಳು.

ಅನಂತರ ಅವರು ತಮ್ಮನ್ನು ಕರೆದೊಯ್ಯಲು ಬಂದ ದಾಸಿಯನ್ನು ಹಿಂಬಾಲಿಸಿ, ಅಂತಃಪುರವನ್ನು ಪ್ರವೇಶಿಸಿ, ಅನ್ನಪೂರ್ಣಾದೇವಿಯು ತೋರಿಸಿದ ಆಸನಗಳಲ್ಲಿ ಮೌನವಾಗಿ ಕುಳಿತುಕೊಂಡರು. ಅನ್ನಪೂರ್ಣಾದೇವಿಯೇ ಅವರನ್ನು ಮಾತನಾಡಿಸಿದಳು.

"ಮಕ್ಕಳೇ, ನೀವು ಅಪರೂಪಕ್ಕೆ ಬಂದಿದ್ದೀರಿ! ಇಷ್ಟು ದಿನಗಳ ಮೇಲಾದರೂ ನನ್ನ ನೆನಪಾಯಿತಲ್ಲ!" ಎಂದು ಹೇಳಿ ಅಳಿಯಂದಿರ ಮುಖ ನೋಡಿ ಸಂಕೋಚದಿಂದ,

"ಓ! ನಿಮ್ಮ ಯಜಮಾನರು ಬೇರೆ ಬಂದಿದ್ದಾರೆ. ಅವರುಗಳು ಯಾವಾಗ ಬಂದರು." ಎಂದು ಎಲ್ಲರ ಯೋಗಕ್ಷೇಮಗಳನ್ನು ಕೇಳಿಕೊಂಡಳು.

"ನಿನ್ನೆ ತಾನೇ ಬಂದರು. ನಿಮ್ಮನ್ನು ಹಾಗೇ ಮಾತಾಡಿಸಿ ಯೋಗಕ್ಷೇಮ ವಿಚಾರಿಸಿಕೊಂಡು ಹೋಗಲು ಬಂದರು!" ಎಂದಳು ತಿರುಮಲಾಂಬೆ.

"ನನ್ನ ಯೋಗಕ್ಷೇಮವೇ? ಇದ್ದೇನೆ ಸಾಯದೆ ಬದುಕಿದ್ದೇನೆ."

"ಹಾಗನ್ನಬಾರದು ಚಿಕ್ಕಮ್ಮ. ಹಿರಿಯರಾದ ನೀವು ಸಾವಿರವರ್ಷ ಬದುಕಿ ನಮ್ಮೆಲ್ಲರಿಗೂ ದಾರಿತೋರಬೇಕು." ಎಂದಳು ವೆಂಗಡಾಂಬೆ.

"ಏಕೆ? ವೈಧವ್ಯದ ಸಂಕಟ ಒಂದುಕಡೆ, ಈ ಹಂಗಿನ ಬಾಳು ಮತ್ತೊಂದು ಕಡೆ, ದಹಿಸಿ ತಿನ್ನುತ್ತಿರುವಾಗ ನಾನು ಸಾವಿರವರ್ಷ ಬದುಕಲು ಹಾರೈಸುತ್ತೀಯಾ? ನಾನು ಯಾವ ತಪ್ಪು ಮಾಡಿದೆನೆಂದು ನನಗೆ ಈ ಶಿಕ್ಷೆ?"

"ಏನು ಮಾಡುವುದು ಚಿಕ್ಕಮ್ಮಾ ಇದು ನಿಮ್ಮೊಬ್ಬರ ಸಂಕಟವಲ್ಲ! ನಮ್ಮೆಲ್ಲರ ಮೂಕವೇದನೆಯ ಕಥೆ ಇದು. ಯಾರು ತಿಳಿದಿದ್ದರು? ಅಪ್ಪಾಜಿಯವರು ಇಷ್ಟು ಬೇಗ ನಮ್ಮನ್ನು ತೊರೆದು ಹೋಗುವರೆಂದು? ಅವರು ತೀರಿಕೊಂಡ ವರ್ಷದಲ್ಲೇ ನಮ್ಮ ಸ್ಥಿತಿ ಇಷ್ಟು ಪರಿಶೋಚನೀಯವಾಗುವುದೆಂದು? ಆ ಸಲಕಂ ಸಹೋದರರು ಸಾಮ್ರಾಜ್ಯಕ್ಕೆ ಮೃತ್ಯುವಾಗಿ ಬಂದರು." ಎಂದಳು ವ್ಯಾಕುಲಗೊಂಡ ತಿರುಮಲಾಂಬೆ.

"ಚಿಕ್ಕಮ್ಮಾ! ಆ ನೀಚರ ಹೆಸರನ್ನು ಇಂತಹ ತಂಪುಹೊತ್ತಿನಲ್ಲಿ ಎತ್ತಬಾರದು! ಅವರು ಮನುಷ್ಯರಲ್ಲ – ರಾಕ್ಷಸರು! ಎಷ್ಟೊಂದು ಜನ ನಿರಪರಾಧಿಗಳ ರಕ್ತ ಹರಿಸಿ ಅಧಿಕಾರಕ್ಕೆ ಬಂದರು? ಇನ್ನೆಷ್ಟು ಜನ ನಿರಪರಾಧಿಗಳ ರಕ್ತ ಹರಿಯಬೇಕೋ ಇವರ ಆಳ್ವಿಕೆಯಲ್ಲಿ....ನೆನಸಿಕೊಂಡರೆ ನೆತ್ತರು ಹೆಪ್ಪುಗಟ್ಟುತ್ತದೆ...." ಎಂದಳು ವೆಂಗಡಾಂಬೆ ದ್ವೇಷದಿಂದ ಕುದಿದು.

"ವೆಂಗಡಾ, ಈಗ ಗೋಡೆಗಳಿಗೂ ಕಿವಿಗಳುಂಟೆಂಬುದನ್ನು ನೀನು ಮರೆತಂತಿದೆ." ಎಂದು ಅವಳ ಗಮನವನ್ನು ಅಲ್ಲಿ ನಿಂತಿದ್ದ ಸೇವಕಿಯ ಕಡೆ ಸೆಳೆದು "ನೀನು ಏನು ಮಾತನಾಡಿದರೂ ಎಚ್ಚರವಹಿಸಿ ಮಾತನಾಡು. ನಾವು ಸಾಮ್ರಾಟ್ ಕೃಷ್ಣದೇವರಾಯರ ಪ್ರಭುತ್ವದಲ್ಲಿ ಇಲ್ಲ....ಸೋಮರಸರ ಆಳ್ವಿಕೆಯಲ್ಲೂ ಇಲ್ಲ.......ಎಂಬುದನ್ನು ಮರೆಯಬಾರದು" ಎಂದು ತಿರುಮಲರಾಯ ಪತ್ನಿಯನ್ನು ಎಚ್ಚರಿಸಿದ.

"ಹೌದು ತಿರುಮಲ. ಈಗ ನಾವು ಮೈಯೆಲ್ಲಾ ಕಣ್ಣಾಗಿಸಿಕೊಂಡಿದ್ದರೂ ಸಾಲದು. ನೋಡು ನಾವು ಯಾರಿಗೂ ಸುದ್ದಿಕೊಡದೇ ಬಂದಿದ್ದರೂ– ನಾವು ಬಂದ ಸುದ್ದಿಯನ್ನು ಅವರು ಸಂಗ್ರಹಿಸಿಕೊಂಡು ನಮ್ಮನ್ನು ಭೇಟಿ ಮಾಡಲು ಬಂದಿದ್ದರಲ್ಲ – ಎಲ್ಲರಿಗೂ ಮೊದಲು ಇದೊಂದೇ ಸಾಕು! ಅವರ ಗೂಢಚಾರರು ಎಲ್ಲೆಲ್ಲೂ ಇದ್ದಾರೆಂದು ತಿಳಿಸಲು, ನೀನು ಗಮನಿಸಿದೆಯೋ ನಮ್ಮ ಚಲನವಲನಗಳನ್ನು ನೋಡುತ್ತಾ ಗೂಢಚಾರರು ನಮ್ಮ ಬೆನ್ನಹಿಂದೆ ಸುತ್ತುತ್ತಿರುವುದು...."

"ನನ್ನ ಗಮನಕ್ಕೆ ಬದ್ದಿದೆ ಅಣ್ಣಾ. ಅಂತಲೇ ನಾವು ಏನು ಮಾತನಾಡಿದರೂ....ಏನು ಕೆಲಸಮಾಡಿದರೂ, ಎಚ್ಚರದಿಂದ ಮಾಡಬೇಕೆಂದು ಹೇಳಿದ್ದು."

"ಏನು ಮಾಡುವುದು ನಮ್ಮೆಲ್ಲರ ದುರ್ದೈವ. ನಾವು ರಾಮರಾಜ್ಯ ಬಂದೀತೆಂದು ಹಾರೈಸಿದ್ದೆವು. ಆದರೆ ರಾವಣ ರಾಜ್ಯ ಬಂತು."

"ಮುಖ್ಯ ಅಪ್ಪಾಜಿಯವರು ತಪ್ಪು ಮಾಡಿದರು – ಅವರು ಈ ಸಹೋದರರು ತಲೆಯೆತ್ತಲು ಅವಕಾಶ ಕೊಡಬಾರದಾಗಿತ್ತು. ಅವರು ತಮ್ಮ ಮರಣ

ಶಾಸನದಲ್ಲಿ, ತಮ್ಮ ಮಲಸಹೋದರರನ್ನು ರಾಜಪ್ರತಿನಿಧಿಯಾಗಿ ನೇಮಿಸಬಾರದಿತ್ತು. ಅವರು ಮಾಡಿದ ದುಡುಕಿಗೆ ನಾವು ಈಗ ಪಶ್ಚಾತ್ತಾಪ ಪಡಬೇಕಾಗಿದೆ!" ಎಂದಳು ತಿರುಮಲಾಂಬೆ ಗಂಡನ ಮಾತು ಕೇಳಿ.

"ಪಶ್ಚಾತ್ತಾಪ ಪಟ್ಟರೆ ಏನು ಪ್ರಯೋಜನ. ಅಪ್ಪಾಜಿಯವರು ಮಾಡಿದ ದುಡುಕಿನ ಜಲೆ ಅಲ್ಪವೇ? ನಾವು ಕುಮಾರನನ್ನು [ನಾಲಗೆ ಕಚ್ಚಿ] ಅಲ್ಲ ಸೋಮರಸರನ್ನೂ ಕಳೆದುಕೊಂಡೆವು. ಸಾಮ್ರಾಜ್ಯ ನಿಷ್ಠ ಸೇವಕರೆಲ್ಲಾ ಸೆರೆ ಸೇರುವಂತಾಯಿತು. ನಾವೆಲ್ಲಾ ಇರುವಂತೆಯೇ ಬಂಧನಕ್ಕೆ ಒಳಗಾಗಬೇಕಾಯಿತು. ಈಗ ಅವರ ವಿರುದ್ಧ ಧೈರ್ಯವಾಗಿ ಯಾರು ಮಾತನಾಡಬಲ್ಲರು? ಅವರ ದಬ್ಬಾಳಿಕೆಯನ್ನು ಎದುರಿಸಬಲ್ಲವರಾರು? ನಮ್ಮೆಲ್ಲರ ನಾಲಿಗೆ ಸತ್ತು ಹೋಗಿದೆ...." ಎಂದಳು ವೆಂಗಡಾಂಬಿಕೆ.

"ಅವರ ಅನ್ಯಾಯವನ್ನು ಎದುರಿಸುವ ಎದೆಗಾರಿಕೆ, ಧೈರ್ಯ ನಮ್ಮಲ್ಲಿ ಯಾರಿಗಾದರೂ ಇದ್ದಿದ್ದರೆ, ಸೋಮರಸರು ಸರಿಯಾದ ವಿಚಾರಣೆಯಿಲ್ಲದೆ, ಮಿಥ್ಯಾರೋಪಕ್ಕೆ ಬಲಿಯಾಗಿ, ತಲೆಯನ್ನೇಕೆ ತೆರಬೇಕಾಗಿತ್ತು. ಆಗ ನಾವು ಹೇಡಿಗಳಾದೆವು....ಸೋಮರಸರು, ನೀಚರ ಪಿತೂರಿಗೆ, ದ್ರೋಹಕ್ಕೆ ಒಳಗಾಗಿ, ಅನ್ಯಾಯವಾಗಿ ತಲೆ ತೆತ್ತರು...." ಎಂದಳು ತಿರುಮಲಾಂಬೆ.

"ಇಬ್ಬರು ರಾಣಿಯರೂ ಒಕ್ಕೊರಲಿನಿಂದ, ಈ ಅನ್ಯಾಯವನ್ನು, ಪ್ರತಿಭಟಿಸಿದ್ದರೆ ಈ ಕಗ್ಗೊಲೆ ನಿಲ್ಲುತ್ತಿದ್ದಿತೋ ಏನೋ!...." ಎಂದ ರಾಮರಾಯ.

"ರಾಣಿಯರ ಮಾತು ಒಂದು ಲಕ್ಷವೇ? ಅಚ್ಯುತರಾಯನನ್ನು ಕಾಣಲು ಆ ಸಹೋದರರು ಅವಕಾಶ ಕೊಟ್ಟರೆ ತಾನೇ? ವಿಚಾರಣೆಯ ಮುನ್ನ ಸೋಮರಸರ ಅಪರಾಧದ ಬಗ್ಗೆ ವಿಚಾರಿಸಲು, ಭೇಟಿಗೆ ಅನುಮತಿ ಕೇಳಿದಾಗ – ಅಚ್ಯುತರಾಯನ ಪರ ಸಲಕಂ ಸಹೋದರರು ನಿರಾಕರಿಸಿದರು. ಅವರ ಭೇಟಿಗೆ ಅವಕಾಶ ಕೊಟ್ಟರೆ ಎಲ್ಲಿ ತಮ್ಮ ಗುಟ್ಟು ರಟ್ಟಾಗುವುದೋ ಎಂದು ಹೆದರಿ....ಆದರೂ ಧೃತಿಗೆಡದೆ ರಾಣಿ ವರದಾದೇವಿಯ ಮೂಲಕ, ಅಚ್ಯುತರಾಯನ ಸಂದರ್ಶನ ಏರ್ಪಡಿಸಿದಾಗ, ಸಲಕಂ ಸಹೋದರರ ಮಾತು ಕೇಳಿಕೊಂಡು ಮೊದಲು ಸಂದರ್ಶನ ಕೊಡಲು ಒಪ್ಪಿದ್ದ ಅಚ್ಯುತರಾಯನು ಒಮ್ಮೆಲೆ ಯಾವುದೋ ಕ್ಷುದ್ರ ಕಾರಣ ಮುಂದು ಮಾಡಿಕೊಂಡು ಭೇಟಿಯನ್ನು ನಿರಾಕರಿಸಿದನು....ಹೀಗಿರುವಲ್ಲಿ ರಾಣಿಯರ ಮಾತು ಪ್ರಭುತ್ವದವರಿಗೆ ಯಾವ ಲೆಕ್ಕ!" ಎಂದಳು ತಿರುಮಲಾಂಬೆ.

"ಈಗ ನಿಜವಾದ ರಾಣಿ ಎಂದರೆ ಮಹಾರಾಣಿ – ವರದಾದೇವಿ ಒಬ್ಬಳೇ! ಉಳಿದ ರಾಣಿಯರೆಲ್ಲ – ಹೆಸರಿನ ಮಟ್ಟಿಗೆ ರಾಣಿಯರು. ಅವರಿಗೆ ಯಾವ ಅಧಿಕಾರವೂ ಇಲ್ಲ. ಅವರ ಮಾತು ಯಾರಿಗೂ ಲಕ್ಷವಿಲ್ಲ! ಹೀಗಾಗಬಹುದೆಂದು

ತಿಳಿವೇ ಆದಿನ ಅಮ್ಮ ಪ್ರತಿಭಟಿಸಿದಳು – ನೀವುಗಳು ರಾಜಧಾನಿಗೆ ಬರುವವರೆಗೆ ಸಿಂಹಾಸನ ಬರಿದಾಗಿರಿಸಬೇಕೆಂದು ಎಷ್ಟೋ ಕಷ್ಟಪಟ್ಟಳು! ಕಡೆಗೆ ಪತಿಯ ಕಳೇಬರವನ್ನು ದಹನಮಾಡದಂತೆ ತಡೆದಳೆಂಬ ದುರ್ಜನ ನಿಂದೆ ಅವಳದಾಯಿತೇ ಹೊರತು – ಅವಳ ಉದ್ದಿಶ್ಯವನ್ನು ಯಾರೂ ಅರ್ಥಮಾಡಿಮಾಡಿಕೊಳದೇ ಹೋದರು, ಸ್ವಯಂ ಸೋಮರಸರೇ ಅಮ್ಮನ ಉದ್ದಿಶ್ಯವನ್ನು ತಪ್ಪು ತಿಳಿಯು ವಂತೆ ಆಯಿತು....ಅಂದು ಕರ್ತವ್ಯದ ಹೆಸರಿನಲ್ಲಿ ಸೋಮರಸರು ದುಡುಕಿದ ಪರಿಣಾಮ ಅವರೇ ಅನುಭವಿಸುವಂತೆ ಆಯಿತು. ಆಗ ಅವರು ಅಮ್ಮನಿಗೆ ಕೊಂಚ ಸಹಾಯ ಮಾಡಿದ್ದರೆ – ಅಚ್ಯುತರಾಯನ ಪಟ್ಟವಾಗುತ್ತಿರಲಿಲ್ಲ. ಸಲಕಂ ಸಹೋದರರು ಪ್ರಾಬಲ್ಯಕ್ಕೂ ಬರುತ್ತಿರಲಿಲ್ಲ. ಅನ್ನಪೂರ್ಣಾದೇವಿಯ ಪುತ್ರನ ಕೊಲೆಯೂ ಆಗುತ್ತಿರಲಿಲ್ಲ!" ಎಂದು ಉದ್ವೇಗದಲ್ಲಿ ವೆಂಗಡಾಂಬೆ ಹೇಳಿ ಬಿಟ್ಟಳು.

ಇದುವರೆಗೆ ಅವರ ಎಲ್ಲ ಸಂಭಾಷಣೆಯನ್ನು ಮೌನವಾಗಿ ಕೇಳುತ್ತಿದ್ದ ಅನ್ನಪೂರ್ಣಾದೇವಿಯು ಕಡೆಯ ಮಾತನ್ನು ಕೇಳಿದೊಡನೇ ಅವಳಿಗೆ ಹಿಂದಣ ಸಂಗತಿಯೆಲ್ಲಾ ಮತ್ತೆ ನೆನಪಾಗಿ 'ಅಯ್ಯೋ ಕುಮಾರಾ?' ಎಂದು ಚೀರಿ ಮೂರ್ಛಿತಳಾದಳು.

"ಅಯ್ಯೋ ವೆಂಗಡಾ, ಎಂಥ ಕೆಲಸ ಮಾಡಿಬಿಟ್ಟೆ?" ಎಂದು ಮೂರ್ಛಿತಳಾದ ಅನ್ನಪೂರ್ಣಾದೇವಿಯ ಶೈತ್ಯೋಪಚಾರಕ್ಕೆ ಮುಂದಾದಳು ತಿರುಮಲಾಂಬೆ.

ಕೊಂಚ ಹೊತ್ತಿಗೆ ಅನ್ನಪೂರ್ಣಾದೇವಿ ಎಚ್ಚೆತ್ತು "ಅಯ್ಯೋ ನನ್ನ ಮಗು ವೆಲ್ಲಿ? ನನ್ನ ಕಂದಮ್ಮನೆಲ್ಲಿ? ಎಲ್ಲಿ ನನ್ನ ಕಂದಮ್ಮ?" ಎಂದು ರೋಧಿಸಿದಳು.

"ಇದೋ ನಿನ್ನ ಮಗು" ಎಂದು ತಿರುಮಲಾಂಬೆ ತೊಟ್ಟಿಲಲ್ಲಿದ್ದ ತಲೆ ದಿಂಬನ್ನು ಕೊಡಲು "ಇದು ನನ್ನ ಮಗುವಲ್ಲ. ತಲೆದಿಂಬು!" ಎಂದು ಅದನ್ನು ದೂರ ಎಸೆದಳು. ಅವಳು ಕುಮಾರನ ಕೊಲೆಯಾದ ನಂತರ ಉಂಟಾಗಿದ್ದ ಭ್ರಮೆ – ಒಮ್ಮೆಲೆ ಅವರ ಮಾತಿನಿಂದ ಒಡೆದು, ವಾಸ್ತವ ಲೋಕಕ್ಕೆ ಅವಳನ್ನು ತಂದಿತ್ತು. ಅವಳಿಗೆ ಕುಮಾರನ ಕೊಲೆಗೆ ಸಂಬಂಧಿಸಿದ ಪ್ರತಿಯೊಂದು ವಿಷ ಯವೂ ಕಣ್ಣಿಗೆ ಕಟ್ಟಿದಂತೆ ಆಗಿತ್ತು. ಅವಳು ಕುಮಾರನನ್ನು ಕುರಿತು ರೋಧಿ ಸಿದಳು, ಹಲುಬಿದಳು....

"ಅಯ್ಯೋ ನನ್ನ ಕುಮಾರನನ್ನು ಆ ನೀಚರು ಕೊಲೆಮಾಡಿದರು! ನನ್ನ ಮುದ್ದು ಮಣಿಯನ್ನು ಆ ಪಶುಗಳು ಕೊಂದು ಹಾಕಿದರು! ಆ ಚಂಡಾಲರು ನನ್ನ ಕಂದನ್ನನನ್ನು ಕಿತ್ತುಕೊಂಡರು....!" ಎಂದು ಹುಯ್ಲಿಟ್ಟಳು.

"ನಿಮ್ಮ ಕುಮಾರನಿಗೆ ಏನೂ ಆಗಿಲ್ಲ—ಇದೋ ನಿಮ್ಮ ಕುಮಾರ ಇಲ್ಲಿ ದ್ದಾನೆ" ಎಂದು ಅವಳು ಇದುವರೆಗೆ, ಮಗುವೆಂದು ಭ್ರಮಿಸಿದ್ದ ತಲೆದಿಂಬನ್ನು

ಮತ್ತೆ ತಂದಿತ್ತರು. ಅವಳ ಭ್ರಮೆಯ ತಂತೂ ಕತ್ತರಿಸಿ ಹೋಗಿದ್ದುದು ಮತ್ತೆ ಕೂಡಿಕೊಳ್ಳದೆ ಹೋಗಿತ್ತು. ಚಿತ್ತ ಫಲಕ ಪುಡಿಪುಡಿಯಾಗಿತ್ತು! ಮೊದಲಿನ ಉನ್ಮಾದ, ಚಿತ್ತಭ್ರಮೆ ಮತ್ತೆ ಬರಲು ಸಾಧ್ಯವಿರಲಿಲ್ಲ. ಅವಳು ತಲೆದಿಂಬನ್ನು ಆಚೆಗೆ ಎಸೆದು,

"ಕುಮಾರ! ಕುಮಾರ! ಆ ಪಾಪಿಗಳ ಕೈಗೆ ನಾನಾಗಿ ನಿನ್ನನ್ನು ಒಪ್ಪಿಸಿದೆ ನಾನು ಪಾಪಿ! ಅವರು ನಿನ್ನನ್ನು ಕೊಲ್ಲುವಾಗ ನನ್ನನ್ನು ಎಷ್ಟು ನೆನೆದೆಯೋ ನೀನು. ಆಗ ನಾನು ಏನೂ ಆಗದವಳಂತೆ ಮಲಗಿ ನಿದ್ರಿಸುತ್ತಿದ್ದೆ! ಹಾಳು ನಿದ್ರೆ ಕುಮಾರನ ಕೊಲೆಗೆ ಕಾರಣವಾಯಿತು. ನಾನಾಗಿ ನಾನು ಕುಮಾರನನು ಕೊಲೆಮಾಡಿದೆ! ಅಯ್ಯೋ ನನ್ನ ದೈವವೇ! ನನ್ನಂತಹ ಪತಿತೆ ಬದುಕಿರಲೇ ಬಾರದು – ಎಂದುಕೊಂಡು ಅಲ್ಲಿನ ಕಂಬಕ್ಕೆ ತಲೆಯನ್ನು ಒಡೆದುಕೊಂಡಳು —ಆ ಪೆಟ್ಟಿಗೆ ಕೆನ್ನೀರು ಹಾರಿತು! ಅವಳು ಹಾಗೇ ಮೂರ್ಛಿತಳಾಗಿ ನೆಲಕ್ಕೆ ಉರುಳಿದಳು—

ಅವಳನ್ನು ಹಿಡಿಯುವುದರೊಳಗೆ ಇಷ್ಟೆಲ್ಲಾ ಅನಾಹುತವಾಗಿ ಹೋಗಿತ್ತು. ಗಾಯಗೊಂಡು ಮಲಗಿದ್ದ ಅನ್ನಪೂರ್ಣಾದೇವಿ ಮತ್ತೆ ಮೊದಲಿನಂತೆ ಆಗಲು ಅನೇಕ ದಿನಗಳು ಹಿಡಿದವು. ಅವಳ ಗಾಯ ವಾಸಿಯಾದರೂ – ಅವಳ ಚಿತ್ತ ಸ್ವಾಸ್ಥ್ಯ ಮಾತ್ರ ಮರಳಲಿಲ್ಲ. ಅವಳು ಮಗನ ಹಂಬಲದಲ್ಲಿ ಹುಚ್ಚಿಯಾದಳು!

ಈಗ ಹುಚ್ಚಿಯ ಎಲ್ಲ ಚಹರೆ ಅವಳದಾಗಿತ್ತು. ತಲೆಗೂದಲು ಕಿತ್ತುಕೊಳ್ಳುತ್ತಿದ್ದಳು. ಉಟ್ಟ ಬಟ್ಟೆ ಹರಿದುಕೊಳ್ಳುತ್ತಿದ್ದಳು! ಮೈಮೇಲಿನ ಒಡವೆ ವಸ್ತುಗಳು ಒಂದೂ ಇರಲಿಲ್ಲ. ತನ್ನಲ್ಲೇ ಏನೋ ಮಾತು, ಏನೋ ನಗೆ! ಒಮ್ಮೆ ಅಳು. ಒಮ್ಮೆ ನಗೆ! ಕುಮಾರನ ಬಗ್ಗೆ ಸಾವಿರ ಉದ್ಗಾರ ಒಮ್ಮೆ ಮಡಿದನೆಂದು, ಸತ್ತನೆಂದು ಅವನಿಗಾಗಿ ಅಳು. ಇನ್ನೊಮ್ಮೆ ಕುಮಾರನ್ನ ಕೊಲೆ ಮಾಡಿದವರ ಮೇಲೆ ಸಿಟ್ಟಾಗಿ ಸೇಡಿನಿಂದ ಕಿಡಿಕಿಡಿಯಾಗುವಳು – ಸೇಡು ತೀರಿಸಿಕೊಳ್ಳಲು ಏಳುವಳು. ಅವಳನ್ನು ಸಮಾಧಾನಗೊಳಿಸಿ, ಸುಮ್ಮನಿರಿಸಲು ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಕೊಂಚ ಕಾಲ ಕಳೆದ ಮೇಲೆ ಅವಳೇ ಸಮಾಧಾನ ತಾಳುವಳು – ಕುಮಾರನು ಬದುಕಿರುವನೆಂದು ದಿಂಬನ್ನು ಮಗು ಮಾಡಿಕೊಂಡು ತನಗೆ ಬರುವ ಹಾಡನ್ನು ಹೇಳಿಕೊಳ್ಳುವಳು! ತನಗೆ ಬರುವ ಆಟಗಳನ್ನು ಕುಮಾರನಿಗೆ ಕಲಿಸಲೆತ್ನಿಸುವಳು! ಮರು ನಿಮಿಷದಲ್ಲಿ ಕುಮಾರನು ಸತ್ತನೆಂದು ಅದನ್ನು ದೂರ ಎಸೆದು ಕೊಲೆಪಾತಕರ ಮೇಲೆ ಸೇಡು ತೀರಿಸಿಕೊಳ್ಳಲು ಮುಂದಾಗುವಳು.

ಅಚ್ಚರಿಯ ಸಂಗತಿ ಎಂದರೆ, ಹೇಗೋ ಕುಮಾರನನ್ನು ಕೊಲೆ ಮಾಡಿದವರು, ಸಲಕಂ ಸಹೋದರರೆಂದು ಅವಳ ಮನಸ್ಸಿಗೆ ಖಚಿತವಾಗಿತ್ತು!

ಯಾರೆಷ್ಟು ಹೇಳಿದರೂ – ಅವರೇ ತನ್ನ ಕುಮಾರನನ್ನು ಕೊಂದರೆಂದು ಸಾವಿರ ಬಗೆಯಲ್ಲಿ ಶಪಿಸುತ್ತಿದ್ದಳು. ಸೋಮರಸನು ಕುಮಾರನ ಕೊಲೆ ಮಾಡಿದನೆಂದು ಹೇಳಿದರೆ ಅವಳಿಗೆ ನಂಬುಗೆ ಇರಲಿಲ್ಲ.

ಈ ಸಂಗತಿಯನ್ನು – ಕುಮಾರನನ್ನು ಸಲಕಂ ಸಹೋದರರು ಕೊಲೆ ಮಾಡಿರುವುದನ್ನು – ಎಲ್ಲರೊಂದಿಗೆ ಸಾರುತ್ತಲಿರುವುದನ್ನು ಸಲಕಂ ಸಹೋದರರು ಕೇಳಿ ಅವಳ ಬಾಯಿ ಮುಚ್ಚಿಸಲು ಯತ್ನಿಸಿ ವಿಫಲರಾಗಿ, ಕಡೆಗೆ ಅವಳಿಂದ ತಮ್ಮ ಗುಟ್ಟು ರಟ್ಟಾಗುವುದೆಂದು ಹೆದರಿ, ಅವಳನ್ನು ಅವಳ ಅರಮನೆಯ ಅಂತಃಪುರದಲ್ಲಿ ಬಂಧಿಯಂತೆ ಇಟ್ಟರು. ಅವಳನ್ನು ಭೇಟಿ ಮಾಡಲು ಯಾರಿಗೂ ಅವಕಾಶ ಕೊಡದೆ, ಬಲವಾದ ಸಶಸ್ತ್ರ ಪಡೆ ಕಾವಲು ಹಾಕಿ, ಪೀಡೆ ನಿವಾರಣೆಯಾಯಿತೆಂದು ಭಾವಿಸಿದರು. ಆದರೂ ಅವರ ಅಂತರಗದಲ್ಲಿ ತಾವು ಕೊಲೆಗಾರರೆಂದು ಅನ್ನಪೂರ್ಣಾದೇವಿಗೆ ಹೇಗೆ ತಿಳಿಯಿತೆಂಬುದು ಕಳವಳಕ್ಕೆ ಕಾರಣವಾಗದೆ ಇರಲಿಲ್ಲ. ಅವಳಿಗೆ ತಿಳಿದಿದ್ದಂತೆ ಇತರರಿಗೆ ಸತ್ಯಾಂಶ ತಿಳಿದರೆ ಜನ ತಮ್ಮ ವಿರುದ್ಧ ದಂಗೆ ಏಳಬಹುದೆಂದು ಹೆದರಿದರು. ಈ ವಾರ್ತೆ ಹರಡದಂತೆ ಅವರು ಎಚ್ಚರ ವಹಿಸಿದ್ದರು – ಆದರೇನಂತೆ? ಕುಮಾರನ ಕೊಲೆಪಾತಕರು ಸಲಕಂ ಸಹೋದರರೇ ಎಂಬುದು ಎಲ್ಲರಿಗೂ ತಿಳಿದುಹೋಗಿತ್ತು. ಇದನ್ನು ಮೊದಲು ಬಯಲು ಮಾಡಿದವರು ಭರತಾಚಾರ್ಯರು!

ಸೋಮರಸನ ಬಂಧನ ಎಲ್ಲರಿಗಿಂತಲೂ ಹೆಚ್ಚಿಗೆ ಅವರಿಗೆ ವಿಸ್ಮಯವನ್ನುಂಟು ಮಾಡಿತ್ತು. ಎಷ್ಟು ಪ್ರಯತ್ನಿಸಿದರೂ – ಕುಮಾರನ ಕೊಲೆಯಲ್ಲಿ ಸೋಮರಸನ ಪಾತ್ರವಿದೆ ಎಂದು ನಂಬಲು ಅವರಿಂದ ಸಾಧ್ಯವಾಗಲಿಲ್ಲ! ಸೋಮರಸನ ಸ್ವಭಾವವನ್ನು ಚೆನ್ನಾಗಿ ಬಲ್ಲ ಅವರಿಂದ ಸೋಮರಸನೇ ಕೊಲೆಗಾರನೆಂದು ನಂಬಲಾಗಲಿಲ್ಲ – ಆದರೆ ಅವನ ಮೇಲೆ ಕೊಲೆಯ ಆರೋಪ ಬಂದು ಅವನನ್ನು ಸೆರೆಮನೆಯಲ್ಲಿಟ್ಟ ಮೇಲೆ ಅವರನ್ನು ಬಿಡಿಸುವ ಸಲುವಾಗಿ ಕೊಲೆಯ ರಹಸ್ಯವನ್ನು ಭೇದಿಸಲು ತೊಡಗಿದ್ದರು.

ಅವರಿಗೆ ಮೊದಲಿನಿಂದಲೂ, ಸಲಕಂ ಸಹೋದರರ ಬಗ್ಗೆ ಅನುಮಾನವಿತ್ತು. ಕೊಲೆಯ ಮೊದಲು, ಸಿದ್ಧನಾಥರ ಸೋಗಿನಲ್ಲಿ, ಅವರೇ ಸೋಮರಸನ ವಿರುದ್ಧ ಭವಿಷ್ಯ ಹೇಳಿ ಸಂಶಯದ ಬೀಜ ಬಿತ್ತಿದವರೆಂದು – ಅನುಮಾನವಿತ್ತು. ಸಿದ್ಧನಾಥರನ್ನು ಕಂಡಿದ್ದ ಅವರಿಗೆ ಪೆದ್ದತಿರುಮಲನ ಮುಖಭಾವ ಕಂಡಿತ್ತು. ಆದರೆ ನಿಜವಾದ ಗಡ್ಡ ಮೀಸೆಗಳಿಂದ ಆವೃತರಾದ ಅವರ ಮುಖವನ್ನು ಗುರುತಿಸುವುದು ಕಷ್ಟವಾಗಿತ್ತು. ಅವರ ಕಣ್ಮರೆಯ ಬಗ್ಗೆ ಶೋಧನೆ ನಡೆಸಿದಾಗ ನಾಯಿಂದನೊಬ್ಬನ ಮೂಲಕ, ಗಡ್ಡ ತಲೆಗೂದಲುಗಳನ್ನು ತೆಗೆಯಿಸಿಕೊಂಡ ಸಂಗತಿ ತಿಳಿಯಿತು. ಕುಮಾರನ ಕೊಲೆಯಾದ ದಿನವೇ ರಾಜಧಾನಿಯಲ್ಲಿದ್ದ

ರೆಂಬುದಕ್ಕೆ ಆಧಾರವಿತ್ತು. ಈ ಎಲ್ಲ ಸಾಕ್ಷಿ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು, ಅಚ್ಯುತರಾಯನ ಗಮನಕ್ಕೆ ಈ ಸಂಗತಿಯನ್ನು ತರುವುದರೊಳಗೆ ಸೋಮರಸನ ವಿಚಾರಣೆ, ಮರಣದಂಡನೆ ನಡೆದುಹೋಗಿತ್ತು. ಇದನ್ನು ಅನ್ನಪೂರ್ಣಾದೇವಿಗೆ ಇನ್ನಿತರ ಅಂತರಂಗದ ಮಿತ್ರರಿಗೆ ತಿಳಿಸಿ ತೃಪ್ತಿಗೊಂಡರು. ಒಮ್ಮೆ ಅಚ್ಯುತರಾಯನ ಗಮನಕ್ಕೆ ಈ ಸಂಗತಿ ತರುವ ಪ್ರಯತ್ನ ಮಾಡಿದಾಗ ಸಲಕಂ ಸಹೋದರರು ಅವರನ್ನು ಸೆರೆಮನೆಯಲ್ಲಿಟ್ಟರು. ಭರತಾಚಾರ್ಯರು ಸೆರೆ ಸೇರಿದರೇನು? ಅವರು ಶೋಧಿಸಿದ ಸತ್ಯ ಎಲ್ಲೆಡೆಯಲ್ಲೂ ಹರಡಿತ್ತು. ಸತ್ಯದ ಬಾಯಿ ಮುಚ್ಚಿಸಲು ಸಲಕಂ ಸಹೋದರರು ಮಾಡಿದ ಎಲ್ಲ ಪ್ರಯತ್ನ ವ್ಯರ್ಥವಾಗಿತ್ತು. ಅವರ ಬಾಳಿನ ದುಃಸ್ವಪ್ನದಂತೆ, ಅತ್ತ ಹುಚ್ಚಳಾದ ಅನ್ನಪೂರ್ಣಾದೇವಿ, ಇತ್ತ ಭರತಾಚಾರ್ಯರು ಅವರನ್ನು ಅಂತರಂಗದಲ್ಲಿ ಮೂದಲಿಸುತ್ತಲೇ ಇದ್ದರು. ಇದನ್ನು ಎಷ್ಟು ಮರೆಯಲೆತ್ನಿಸಿದರೂ ಸಾಧ್ಯವಾಗಿರಲಿಲ್ಲ.

೯

ಪ್ರಬಲರಾದ ಅಳಿಯ ರಾಮರಾಯ ಮತ್ತು ತಿರುಮಲರಾಯರನ್ನು ಅಧಿಕಾರದಿಂದ ಉರುಳಿಸಿದ ಹೊರತು, ತಮ್ಮ ಬುಡಭದ್ರವಿಲ್ಲವೆಂದು ಸಲಕಂ ಸಹೋದರರಿಗೆ ವೇದ್ಯವಾಗಿತ್ತು. ಸಮರ್ಥರೂ, ಜನಾನುರಾಗಿಗಳೂ, ಸಾಮ್ರಾಟ್ ಕೃಷ್ಣದೇವರಾಯನ ಅಳಿಯಂದಿರೂ ಆದ ಅವರು ಸಾಮಂತರ ಹಾಗೂ ಮಾಂಡಲೀಕರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಸೈನ್ಯದಲ್ಲಂತೂ ಅವರ ಮಾತಲ್ಲದೆ ಬೇರೆಯವರ ಮಾತು ನಡೆಯುತ್ತಿರಲಿಲ್ಲ. ಇಂತಹವರನ್ನು ಅಧಿಕಾರದಿಂದ ಉರುಳಿಸುವುದೂ ಸುಲಭ ಸಾಧ್ಯವಾಗಿರಲಿಲ್ಲ. ಅವರು ಅಧಿಕಾರದಿಂದ ಉರುಳಿ, ಅವರ ಭಯ ನಿರ್ಮೂಲವಾಗದ ಹೊರತು ಸಲಕಂ ಸಹೋದರರ ಮಹದಾಶೆಗಳು ಕೈಗೂಡುವಂತಿರಲಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಆಸ್ಥಾನದಲ್ಲಿ ಅತ್ಯಂತ ಬಲಾಢ್ಯ ವ್ಯಕ್ತಿಗಳಾಗಿದ್ದರೂ ಅವರಿಗೆ ತಮ್ಮಷ್ಟೇ ಬಲಶಾಲಿಗಳು ಹತ್ತಿರವಿರುವ ತನಕ ಅವರ ಮನಸ್ಸಿಗೆ ಸಮಾಧಾನವಿರಲಿಲ್ಲ. ಹೇಗಾದರೂ ಮಾಡಿ ಅವರನ್ನು ನಿವಾರಿಸಿಕೊಳ್ಳಬೇಕೆಂದು ಪ್ರಯತ್ನಿಸಿದರೂ, ಅವರನ್ನು ತುಳಿಯುವ ದಾರಿ ಕಾಣದಾಗಿತ್ತು. ಸದ್ಯದ ಪರಿಸ್ಥಿತಿಯಲ್ಲಿ ಅವರ ಸೇವೆ, ಸಹಾಯ ಸಾಮ್ರಾಜ್ಯಕ್ಕೆ ಅಮೂಲ್ಯವಾಗಿತ್ತು. ವಿಜಯನಗರದ ಮೇಲೆ ದಂಡೆತ್ತಿ ಬರುತ್ತಿದ್ದ ಶತ್ರುಗಳ ಧಾಳಿಯಿಂದ ಸಾಮ್ರಾಜ್ಯವನ್ನು ಸಂರಕ್ಷಿಸಲು ಅವರೇ ಸಮರ್ಥರಾಗಿದ್ದರು. ಅವರನ್ನು ದೂರೀಕರಿಸುವುದರಿಂದ ಸಾಮ್ರಾಜ್ಯಕ್ಕೆ ತೊಂದರೆಯೇ ಆಗಿತ್ತು. ಈ ದಿಗ್ವಿಜಯದಲ್ಲಿ ಅವರು ಜಯ

ಶಾಲಿಗಳಾಗಿ ಸೈನ್ಯದೊಂದಿಗೆ ಹಿಂದಿರುಗಿ ಬಂದರೆ, ವಿಜಯಿಗಳಾದ ಅವರನ್ನು ನೆಲಕ್ಕುರುಳಿಸುವುದು ಯಾರಿಂದಲೂ ಸಾಧ್ಯವಿರಲಿಲ್ಲ. ಅವರ ವಿಜಯ ಸಾಮ್ರಾಜ್ಯದ ಉಳಿವಿಗೆ ಅನಿವಾರ್ಯವಾಗಿತ್ತು. ಆದರೆ ಸಲಕಂ ಸಹೋದರರ ಅಭ್ಯುದಯ ದೃಷ್ಟಿಯಿಂದ ಅದು ಅವರ ಮಹತ್ವಾಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಪ್ರತಿಬಂಧಕವಾಗಿತ್ತು. ಶತ್ರುಮರ್ದನ ಕಾರ್ಯದಲ್ಲಿ ಅವರಿಬ್ಬರೂ ಯಶಸ್ವಿಯಾಗಬೇಕು – ಅದರೊಂದಿಗೆ ಅವರ ಪತನವೂ ಸನ್ನಿಹಿತವಾಗಬೇಕು —ಎಂದು ಆಲೋಚಿಸಿ ಅವರು ಸೂಕ್ತ ಸುಸಂಧಿಗಾಗಿ ಕಾಯುತ್ತಿದ್ದಾಗ, ಅಂತಹ ಅವಕಾಶವೊಂದು ತಾನಾಗಿ ಒಂದಿತ್ತು. ಅದು ಸೆಲ್ಲಪ್ಪನಾಯಕನ ವಿದ್ರೋಹದ ರೂಪದಲ್ಲಿ.

ಸಾಳ್ವವಂಶದ ಸೆಲ್ಲಪ್ಪ ವೀರನರಸಿಂಹನಾಯಕನು, ಕೃಷ್ಣದೇವರಾಯನ ಕಾಲದಲ್ಲಿ, ವಿಶ್ವಾಸಕ್ಕೆ ಪಾತ್ರನಾಗಿದ್ದ ಒಬ್ಬ ಮಂತ್ರಿಯಾಗಿದ್ದನು. ಇವನ ತಂದೆ ಕಂಚಿಯ ಸಾಳ್ವಕುಲಂದನ್ ಭಟ್ಟನು. ಇವನು ಕೃಷ್ಣದೇವರಾಯನ ದಿಗ್ವಿಜಯಗಳಲ್ಲಿ ಅಮೋಘವಾದ ಸೇವೆ ಸಲ್ಲಿಸಿದ್ದನು. ಸಾಮ್ರಾಟರ ಅನುಗ್ರಹಕ್ಕೆ ಪಾತ್ರನಾಗಿ ತೊಂಡೈಮಂಡಲದ ಮಾಂಡಲೀಕನಾಗಿದ್ದನು.

ತಿಮ್ಮರಸನು ಅಧಿಕಾರಚ್ಯುತನಾದ ಮೇಲೆ ತಾನು ಪ್ರಧಾನ ಮಂತ್ರಿಯಾಗುವ ಆಶಯವಿಟ್ಟುಕೊಂಡಿದ್ದ ಸೆಲ್ಲಪ್ಪನಾಯಕನಿಗೆ ಕೊಂಡಮರಸಯ್ಯನು ಪ್ರಧಾನ ಮಂತ್ರಿಯಾದುದು ಸಹನವಾಗಲಿಲ್ಲ. ಅವನು ದೇಹಾಲಸ್ಯದ ಕಾರಣವನ್ನು ಮುಂದುಮಾಡಿಕೊಂಡು, ಮಂತ್ರಿಪದವಿಯಿಂದ ಬಿಡುಗಡೆ ಪಡೆದು, ತನ್ನ ನಾಡಾದ ತಂಜಾವೂರಿಗೆ ಹಿಂದಿರುಗಿ ಮಾಂಡಲೀಕನಾಗಿರುವುದಲ್ಲಿ ತೃಪ್ತಿಗೊಂಡನು.

ಕೃಷ್ಣದೇವರಾಯನ ಮರಣಾನಂತರ, ಅಚ್ಯುತರಾಯನು ಪಟ್ಟಕ್ಕೆ ಬಂದ ಮೇಲೆ, ಸೆಲ್ಲಪ್ಪನು ತಾನು ಮಹಾಪ್ರಧಾನಿಯಾಗಿ ಮೆರೆಯುವ ಕನಸುಕಂಡನು. ಆದರೆ ಸೋಮರಸನೇ ಮತ್ತೆ ಪ್ರಧಾನ ಅಮಾತ್ಯನಾಗಿ ಉಳಿದನು. ಇದರಿಂದ ಸೆಲ್ಲಪ್ಪನಿಗೆ ನಿರಾಶೆಯಾದರೂ ಸೋಮರಸನ ಮೇಲೆ ಅಸೂಯೆ ಉಂಟಾಗಲಿಲ್ಲ. ಏಕೆಂದರೆ ತಿಮ್ಮರಸನ ಪ್ರಿಯ ಸ್ನೇಹಿತನಾಗಿದ್ದ ಸೆಲ್ಲಪ್ಪನಿಗೆ, ತಿಮ್ಮರಸನ ಅಭಿಮಾನದ ಪುತ್ಥಳಿಯಾಗಿದ್ದ ಸೋಮರಸನೂ ಪ್ರಿಯ ವ್ಯಕ್ತಿಯಾಗಿದ್ದ. ಅಲ್ಲದೆ ಸೋಮರಸನೂ ಸೆಲ್ಲಪ್ಪನೂ ಹಿಂದೊಂದು ಕಾಲದಲ್ಲಿ ಗೆಳೆಯರಾಗಿದ್ದರು. ಗೆಳೆಯನ ಮಗನ ಏಳಿಗೆ ಅವನಲ್ಲಿ ಅಸೂಯೆಗಿಂತಲೂ ಸಂತೋಷವನ್ನು ಮಾಡಿತ್ತು.

ಆದರೆ ಅಚ್ಯುತರಾಯನ ಆಳ್ವಿಕೆಯ ಆರಂಭದಲ್ಲೇ ಸಲಕಂ ಸಹೋದರರ ಪಿತೂರಿಯಿಂದ ಸೋಮರಸನು ಮರಣ ಹೊಂದುವಂತೆ ಆಯಿತು. ಸಾಮ್ರಾಜ್ಯದ ನಿಜವಾದ ಸೇವಕನೂ, ಪ್ರಜಾ ವತ್ಸಲನೂ, ಆಡಳಿತ ಕುಶಲನೂ, ನಿಷ್ಪೃ

ಹನೂ, ನಿರಭಿಮಾನಿಯೂ ಆಗಿದ್ದ ಸೋಮರಸನು, ತನ್ನ ನಿಷ್ಠೆಗೆ ತಾನೇ ಬಲಿಯಾಗಬೇಕಾಯಿತು. ಅವನು ಕೃಷ್ಣದೇವರಾಯನನ್ನು ನಂಬಿದ್ದಂತೆ ಅಚ್ಯುತರಾಯನನ್ನು ನಂಬಿ ಕೆಟ್ಟ. ಅವನ ದುರಂತ ಮರಣ, ಕೃಷ್ಣದೇವರಾಯನ ಕುಮಾರನ ಕಗ್ಗೊಲೆ ಇವುಗಳು ದೇಶದಾದ್ಯಂತ ಕಾಳ್ಗಿಚ್ಚಿನಂತೆ ಹರಡಿ, ಜನತೆ ತಲ್ಲಣಗೊಂಡಿತು. ಇವುಗಳಿಗೆ ಸಲಕಂ ಸಹೋದರರ ಅಧಿಕಾರ ಲಲಾಸೆಯೇ ಕಾರಣವೆಂದು ತಿಳಿದ ಜನತೆ, ಸಲಕಂ ಸಹೋದರರ ವಿರುದ್ಧ ಸಿಡಿದೆದ್ದಿತು. ಈ ಬಗೆಯ ಅನ್ಯಾಯವನ್ನು ಸಹಿಸಲು ಆಗಲಿಲ್ಲ. ಕೊಂಡಮರಸಯ್ಯನ ಕೊಲೆ ಮಾಡಿ ತಲೆ ತಪ್ಪಿಸಿಕೊಂಡಿದ್ದ ಅವರು, ಕುಮಾರನನ್ನೂ ಸೋಮರಸನನ್ನೂ ಮೋಸದಿಂದ ಕೊಲ್ಲಿಸಿ ಅಧಿಕಾರಕ್ಕೆ ಬಂದಿದ್ದರು. ಕೊಲೆಯಿಂದ, ರಕ್ತಪಾತದಿಂದ, ಅನ್ಯಾಯ, ಅಧರ್ಮಗಳಿಂದ ಅಧಿಕಾರಕ್ಕೇರಿದ್ದ ಆ ದುಷ್ಕರ್ಮಿಗಳು ಜನತೆಯ ದೃಷ್ಟಿಯಲ್ಲಿ ಕೊಲೆಪಾತಕರಾಗಿಯೇ ಉಳಿದರು. ಅಂತಹ ವ್ಯಕ್ತಿಗಳು ಸಾಮ್ರಾಟರ ವಿಶ್ವಾಸಪಾತ್ರರಾದ ಮೇಲೆ ಇನ್ನೂ ನಡೆಯಬಾರದ ಅನ್ಯಾಯ ನಡೆಯುವುದು ಮಾತ್ರವಲ್ಲ, ಸಾಮ್ರಾಟರ ಪ್ರಾಣಕ್ಕೂ ಗಂಡಾಂತರ ಬರುವುದೆಂದು ಆ ದ್ರೋಹಿಗಳನ್ನು ನೆಲಕ್ಕುರುಳಿಸಲು ಸಾಮ್ರಾಜ್ಯದಲ್ಲಿ ಎಲ್ಲೆಲ್ಲೂ ಕ್ರಾಂತಿಯ ಮನೋಭಾವವೇ ಪ್ರಜ್ವಲಿಸುತ್ತಿತ್ತು. ತಿಮ್ಮರಸನ, ಸೋಮರಸನ, ಅಭಿಮಾನಿಗಳಾಗಿದ್ದ ಮಾಂಡಲೇಶ್ವರರು ಸಲಕಂ ಸಹೋದರರ ದಬ್ಬಾಳಿಕೆಯ ವಿರುದ್ಧ ದಂಗೆ ಏಳಲು ಸಿದ್ಧರಾದರು. ಸೋಮರಸನಿಗೆ ಆಗಿದ್ದ ಅನ್ಯಾಯವನ್ನು ಪ್ರತಿಭಟಿಸಲು ಸಲಕಂ ಸಹೋದರರ ದುರಾಕ್ರಮಣವನ್ನು ಎದುರಿಸಲು ಸೆಲ್ಲಪ್ಪನಾಯಕನು ಸಾಮ್ರಾಟರ ವಿರುದ್ಧ ದಂಗೆ ಎದ್ದನು. ಅವನಿಗೆ ತಿರುವೇದಿಯ ತುಂಬುಚ್ಚಿ ನಾಯಕನು ಬೆಂಬಲನಾಗಿ ನಿಂತನು.

ಸೆಲ್ಲಪ್ಪನು ದೈವಭಕ್ತನಾಗಿದ್ದ. ಅಚ್ಯುತರಾಯನ ಗಮನ ಸೆಳೆಯಲು ಬೇಕೆಂದೇ ಅನೇಕ ದೇವಾಲಯಗಳಿಗೆ ಬಿಟ್ಟಿದ್ದ ಜೋಡಿ, ಮತ್ತಿತರ ಮಾನ್ಯಗಳನ್ನು ಕಿತ್ತುಕೊಂಡುದಲ್ಲದೆ ಅವನು ತೆಗೆದಿದ್ದ ಅನೇಕ ತೆರಿಗೆಗಳನ್ನು ಮತ್ತೆ ವಿಧಿಸಿದನು. ಉತ್ತರ ಆರ್ಕಾಡಿನ ತಿರುಪ್ಪಾನಂಗಡುವೆಂಬ ಗ್ರಾಮದಲ್ಲಿದ್ದ ದೇವ ಮಾನ್ಯವನ್ನು ಕಿತ್ತುಕೊಂಡು, ಅಚ್ಯುತರಾಯನ ಕಣ್ಣು ಕೆಂಪಾಗುವಂತೆ ಮಾಡಿದ. ಎಲ್ಲೆಡೆಯಲ್ಲೂ ವಿದ್ರೋಹದ ಕಾರ್ಯ ಸಲಕಂ ಸಹೋದರರನ್ನು ಅಧಿಕಾರಚ್ಯುತರನ್ನಾಗಿ ಮಾಡಲು ಘೋಷಣೆಗಳು! ಎಲ್ಲೆಲ್ಲೂ ಸೋಮರಸನಿಗಾದ ಅನ್ಯಾಯವನ್ನು ಪ್ರತಿಭಟಿಸುವ ಘೋಷಣೆಗಳು! ತಂಜಾವೂರು ಮತ್ತು ತಿರುವೇದಿಗಳು ಸಾಮ್ರಾಟರ ವಿರುದ್ಧ ದಂಗೆ ಎದ್ದು, ಇತರ ಮಾಂಡಲೇಶ್ವರರನ್ನು ಈ ಚಳುವಳಿಗೆ ಆಹ್ವಾನಿಸಿದ್ದವು.

ಸಾಮ್ರಾಜ್ಯದಲ್ಲಿ ಹಠಾತ್ತನೆ ಕಾಣಿಸಿಕೊಂಡ ಸೆಲ್ಲಪ್ಪನ ದಂಗೆ, ಸಲಕಂ

ಸಹೋದರರಿಗೆ ಗಾಬರಿಯನ್ನುಂಟು ಮಾಡಿತು. ಸೆಲ್ಲಪ್ಪನಂತೆ ಇತರ ಮಂಡ ಲೇಶ್ವರರೂ ದಂಗೆ ಎದ್ದರೆ ತಮ್ಮ ಸಾಮ್ರಾಜ್ಯ ತೃಷ್ಣೆಗೆ, ಆಜ್ಯಸುರಿದಂತೆ ಎಂದು ಭಾವಿಸಿ, ಈ ರಾಜ್ಯಕ್ರಾಂತಿ ಇತರ ಭಾಗಗಳಿಗೆ ಹರಡದಂತೆ ಅದನ್ನು ಅಡಗಿಸ ಬೇಕೆಂದು ನಿರ್ಧರಿಸಿದರು.

ಇದನ್ನು ತಾವೇ ಅಡಗಿಸಲು ಸೈನ್ಯ ಸಮೇತ ಹೊರಡುವುದು ಮೂರ್ಖ ತನವಾದೀತೆಂದು ತಿಳಿದ ಅವರು ಈ ಕಾರ್ಯಕ್ಕೆ ತಮಗಿಂತ ಹೆಚ್ಚು ಸಮರ್ಥರಾದ ಅಳಿಯ ರಾಮರಾಯರು ಮತ್ತು ತಿರುಮಲರಾಯರನ್ನು ಕಳುಹಿಸಿಕೊಡಲು ಆಲೋಚಿಸಿದರು. ಅವರನ್ನು ರಾಜಧಾನಿಯಿಂದ ದೂರವಿಡುವುದೇ ಅವರ ಉದ್ದೇಶವಾಗಿತ್ತು. ಅವರಿಗೆ ತಮ್ಮ ಉದ್ದೇಶ ತಿಳಿಯಕೊಡದಂತೆ, ಸೆಲ್ಲಪ್ಪನ ದಂಗೆಯನ್ನು ಅಡಗಿಸಲು ಅವರನ್ನು ಕಳುಹಿಸಿಕೊಡಲು ಅಚ್ಯುತರಾಯನನ್ನು ಪ್ರೇರೇಪಿಸಿದರು.

ಅದರಂತೆ ಅಚ್ಯುತರಾಯನು ಅಳಿಯರಾಮರಾಯ ಮತ್ತು ತಿರುಮಲ ರಾಯರನ್ನು ಕರೆಸಿಕೊಂಡು ಈ ಬಗ್ಗೆ ಮಾತುಕತೆ ತೆಗೆದನು.

" ರಾಮಭೂಪಾಲರೇ ಈ ಸುದ್ದಿಯನ್ನು ಕೇಳಿದಿರಾ ?"

" ಯಾವ ಸುದ್ದಿ ಪ್ರಭು ?"

" ಏಕೋ ನಮ್ಮ ವಿಜಯನಗರ ಸಾಮ್ರಾಜ್ಯದ ಗ್ರಹಗತಿಗಳು ನೆಟ್ಟಗಿಲ್ಲ ವೆಂದು ತೋರುತ್ತದೆ. ವಿಪತ್ತಿನ ಮೇಲೆ ವಿಪತ್ತು ಬಂದೊದಗುತ್ತಿದೆ. ಇತ್ತ ಒಳಗಿನ ಶತ್ರುಗಳಿಂದ ಸಾಮ್ರಾಜ್ಯವನ್ನು ಉಳಿಸಬೇಕಾಗಿದೆ. ಅತ್ತ ಹೊರಗಿನ ಶತ್ರುಗಳನ್ನು ನಿಗ್ರಹಿಸಬೇಕಾಗಿದೆ. ಈ ಮಧ್ಯೆ ವಿದ್ರೋಹಗಳ ಪಿತೂರಿಗಳು ಬೇರೆ! ಏಕೋ ನಾವು ಸಿಂಹಾಸನವನ್ನೇರಿದ ಹೊತ್ತು ಸರಿಯಿಲ್ಲವೆಂದು ಕಾಣು ತ್ತಿದೆ" ಎಂದು ವ್ಯಾಕುಲಗೊಂಡು ನುಡಿದ.

" ಈಗ ಅಂತಹ ವಿಪತ್ತು ಏನು ಬಂತು ಪ್ರಭು!"

" ಸಾಮ್ರಾಜ್ಯದ ಉತ್ತರ, ಪಶ್ಚಿಮದಗಡಿಗಳಲ್ಲಿ ಶತ್ರುಗಳು ಮುಂದೊತ್ತಿ ಬರುತ್ತಿರುವ ಸಮಯದಲ್ಲೇ ರಾಜಧಾನಿಯಲ್ಲಿ ಎಂತಹ ವಿದ್ರೋಹ ನಡೆದಿತ್ತೆಂ ಬುದನ್ನು ನೀವು ಬಲ್ಲಿರಿ. ಪಂಪಾಪತಿಯ ದಯದಿಂದ ಆ ದ್ರೋಹಿಗಳ ಕೈ ಮೇಲಾಗುವ ಮೊದಲೇ ವಿದ್ರೋಹವನ್ನು ಹೊಸಕಿ ಹಾಕಿದೆವು. ಈಗ ಇಂತ ಹದೇ ಮತ್ತೊಂದು ವಿದ್ರೋಹದ ಚಳುವಳಿ – ದಂಗೆ – ತಂಜಾವೂರು,. ತಿರು ವೇದಿ ಪ್ರಾಂತ್ಯಗಳಲ್ಲಿ ನಡೆದಿವೆಯಂತೆ. ತಂಜಾವೂರಿನ ಸೆಲ್ಲಪ್ಪನು ತಿರುವೇ ದಿಯ ತುಂಬುಚ್ಚಿ ನಾಯಕನೊಂದಿಗೆ ಸೇರಿಕೊಂಡು ಸಾಮ್ರಾಜ್ಯದ ವಿರುದ್ಧ ದಂಗೆ ಎದ್ದಿರುವನೆಂಬ ವಾರ್ತೆಯನ್ನು ಗೂಢಚಾರರು ತಂದಿದ್ದಾರೆ. ಆ ಲಾಗಾ ಯಿತು ನನ್ನ ಮನಸ್ಸಿಗೆ ಏಕೋ ಭಯವಾಗುತ್ತಿದೆ. ಇತರ ಪ್ರಾಂತ್ಯಗಳಲ್ಲಿ

ಇಂತಹ ವಿದ್ರೋಹ ನಡೆದರೆ ಹೇಗೆ ಎಂದು ಕಳವಳ ಉಂಟಾಗುತ್ತಿದೆ. ಈ ಮಹಾಕಾರ್ಯದಲ್ಲಿ ನಿಮ್ಮ ಸಲಹೆ ಸಹಾಯ ನಮಗೆ ಅಮೂಲ್ಯವಾಗಿದೆ" ಎಂದನು.

"ಹೌದು ಪ್ರಭು. ಸಾಮ್ರಾಜ್ಯದ ಬಾಳ್ದಿಗಂತದಲ್ಲಿ ಮೇಲಿಂದ ಮೇಲೆ ಅಶಾಂತಿಯ ಕಾರ್ಮೋಡಗಳು ಬಂದು ಮುತ್ತುತ್ತಿವೆ. ಎಂದಿಗೆ ಸಾಮ್ರಾಜ್ಯದಲ್ಲಿ ಭಯಭೀತಿಗಳು ಕಳೆದು, ನೆಮ್ಮದಿ ಸೌಖ್ಯಗಳು ನೆಲಸುವುದೋ ತಿಳಿಯದಾಗಿದೆ. ಸಾಮ್ರಾಜ್ಯದ ನೌಕೆಯನ್ನು ಈ ಪ್ರಕ್ಷುಬ್ಧವಾರಿಧಿಯಲ್ಲಿ ಪಂಪಾಪತಿಯೇ ದಡಕ್ಕೆ ಸೇರಿಸಬೇಕು."

"ಏನು ಮಾಡುವುದು ರಾಮಭೂಪಾಲರೇ ನಮ್ಮ ದುರ್ದೈವದಿಂದ ಮೇಲಿಂದ ಮೇಲೆ ಇಂತಹ ವಿಪತ್ತುಗಳು ಬರುತ್ತಿವೆ. ನಮ್ಮ ಸಾಮ್ರಾಜ್ಯ ನಿಷ್ಠೆಯನ್ನು ಒರೆಹಚ್ಚಿನೋಡಲು ಬಂದಿರುವುದೇನೊ? ಅಂತೂ ಅಗ್ನಿ ಪರೀಕ್ಷೆಯಲ್ಲಿ ನಾವು ಗೆದ್ದರೆ ಸಾಮ್ರಾಜ್ಯದ ಉಳಿವು. ಇಲ್ಲದಿದ್ದರೆ ಇಲ್ಲ!"

"ಹೌದು ಪ್ರಭು ಇದು ನಮ್ಮ ಅಳಿವು ಉಳಿವಿನ ಪ್ರಶ್ನೆ!"

"ಈಗ ನಿಮ್ಮಿಂದ ಒಂದು ಸಹಾಯವಾಗಬೇಕಾಗಿದೆ. ಸೆಲ್ಲಪ್ಪ, ತುಂಬುಚ್ಚಿ ನಾಯಕರಂತಹ ಸಮರ್ಥರ ದಂಗೆಯನ್ನು ಅಡಗಿಸಲು ನೀವಲ್ಲದೆ ಅನ್ಯರಿಂದ ಅಸಾಧ್ಯ. ನಿಮಗೆ ಈ ಕಾರ್ಯವನ್ನು ವಹಿಸಬೇಕೆಂದಿದ್ದೇವೆ. ನಿಮ್ಮ ಅಭಿಪ್ರಾಯವೇನು?"

"ಪ್ರಭು! ನಾವು ಈ ಮೊದಲು ಕೈಗೊಂಡಿರುವ ಕಾರ್ಯಗಳು ಇನ್ನೂ ಅಪೂರ್ಣವಾಗಿ ಉಳಿದಿವೆ. ಈ ಕಾರ್ಯಕ್ಕೆ ಬೇರೆಯವರನ್ನು ನಿಯೋಜಿಸಲಾಗದೆ?"

"ಸಾಧ್ಯವಿಲ್ಲ. ರಾಮಭೂಪಾಲರೇ.... ಈ ಕಾರ್ಯಕ್ಕೆ ನೀವಲ್ಲದೆ ಬೇರೆ ಯಾರೂ ತಕ್ಕವರಲ್ಲ.... ನಾವು ಅಂತಿಂತಹವರನ್ನು ಕಳುಹಿಸಿಕೊಟ್ಟರೆ ನಮಗೆ ಸೋಲಾಗಬಹುದು.... ಆದಕ್ಕಾಗಿ ನೀವೇ ಹೊರಡಬೇಕು!"

"ಪ್ರಭು ಸ್ಪಷ್ಟವಾಗಿ ಮಾತನಾಡಿದುದಕ್ಕೆ ಕ್ಷಮಿಸಬೇಕು – ಈಗ ನನ್ನ ಸೈನ್ಯ ಕೃಷ್ಣೆಯ ದಂಡೆಯಲ್ಲಿ ಬೀಡುಬಿಟ್ಟು ಗಜಪತಿಯ ಸೈನ್ಯಕ್ಕಾಗಿ ಕಾದಿದೆ. ಮುಸಲ್ಮಾನದಳಗಳೊಂದಿಗೆ, ಗಜಪತಿಯು ನಮ್ಮ ಮೇಲೆ ಎಂದು ಬೀಳುವನೋ ತಿಳಿಯದಾಗಿದೆ. ಗಜಪತಿಯಿಂದ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡಿದ್ದರೂ – ಇನ್ನೂ ಗಜಪತಿಯ ಸೈನ್ಯ ನಮ್ಮನ್ನು ಎದುರಿಸಿ ಯುದ್ಧ ಕೊಟ್ಟಿಲ್ಲ. ಅಂತಾಗದ ಹೊರತು ಗಜಪತಿಯನ್ನು ಯುದ್ಧದಲ್ಲಿ ಸೋಲಿಸಿ ಹಿಮ್ಮೆಟ್ಟಿಸಿದ ಹೊರತೂ ನಮ್ಮ ಜಯ ಜಯವಲ್ಲ. ಅಲ್ಲಿನ ಸೈನ್ಯ ನಮಗಾಗಿ ಎದುರು ನೋಡುತ್ತಿದೆ. ಇಂತಹ ವೇಳೆಯಲ್ಲಿ ನಾನು ಅವರನ್ನು ಕೈಬಿಟ್ಟರೆ ಅವರಿಗೆ ನಿರುತ್ಸಾಹವಾಗುತ್ತದೆ – ಇದರಿಂದ ನಮಗೆ ಸೋಲಾಗುವ ಸಂಭವ. ಆದ್ದರಿಂದ ಸೆಲ್ಲಪ್ಪನನ್ನು ಅಡಗಿಸಲು ಬೇರೆಯವರನ್ನು ಕಳುಹಿಸಿಕೊಟ್ಟು, ಉತ್ಕಲದ

ದಂಡಯಾತ್ರೆಯನ್ನು ಪೂರ್ಣಗೊಳಿಸಲು ಅವಕಾಶಕೊಡಬೇಕೆಂದು ಸನ್ನಿಧಾನದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ" ಎಂದು ನಮ್ರವಾಗಿ ರಾಮರಾಯ ಹೇಳಿದ.

"ಪ್ರಭೂ, ನನ್ನ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಬಿಜಾಪುರದ ಸುಲ್ತಾನನು ಕೈಬಿಟ್ಟುಹೋಗಿದ್ದ ಮುದ್ಗಲ, ರಾಯಚೂರಗಳನ್ನು ಗೆದ್ದುಕೊಂಡು, ಅಷ್ಟರಿಂದಲೇ ತೃಪ್ತಿಗೊಂಡು, ನನ್ನೊಡನೆ ಸಂಧಾನಾಪೇಕ್ಷಿಯಾಗಿದ್ದಾನೆ. ನಾವು ಈಗ ಸಂಧಾನಕ್ಕೆ ಅವಕಾಶಕೊಟ್ಟರೆ ರಾಯಚೂರು, ಮುದ್ಗಲಗಳು ನಮ್ಮ ಕೈಬಿಟ್ಟು ಹೋದಂತೆಯೇ ಸರಿ! ಅಲ್ಲದೆ ಸಂಧಾನದ ನೆಪದಲ್ಲಿ, ಪೋರ್ಚುಗೀಸರ ನೆರವಿನಿಂದ ಮತ್ತಷ್ಟು ಪ್ರಬಲರಾಗಿ, ನಮ್ಮ ಮೇಲೆ ಬೀಳಲು ಆತುರರಾಗಿದ್ದಾರೆ. ಈ ವೇಳೆಯಲ್ಲಿ ನಾವು ಸಂಧಿಯನ್ನು ಬಯಸದೆ ಅವರ ಮೇಲೆ ಯುದ್ಧಕ್ಕೆ ನಿಲ್ಲುವುದೇ ಉಚಿತವಾದ ದಾರಿ – ಅಂತಲೇ ಆ ನನ್ನ ಸೈನ್ಯಗಳನ್ನು ಗಡಿಯಲ್ಲೇ ಶತ್ರುಗಳ ಚಲನವಲನಗಳನ್ನು ನೋಡಲು ನಿಲ್ಲಿಸಿದ್ದೇನೆ. ನನಗೆ ಅಪ್ಪಣೆಕೊಟ್ಟರೆ ಬಿಜಾಪುರದ ದಂಡಯಾತ್ರೆ ಮುಗಿಸಿ ವಿಜಯವಧುವನ್ನು ವರಿಸಿ ಬರುತ್ತೇನೆ." ಎಂದ ತಿರುಮಲರಾಯ.

"ಸೆಲ್ಲಪ್ಪನ ದಂಗೆಯನ್ನು ನಿಮ್ಮವಿನಹ ಉಳಿದವರಿಂದ ಅಡಗಿಸಲು ಸಾಧ್ಯವಾಗದೆಂದು ನಮ್ಮ ಭಾವನೆ. ಈಗ ಹೊರಗಿನ ಶತ್ರುಗಳಿಗಿಂತ ಒಳಗಿನ ಶತ್ರುಗಳು ಭಯಂಕರ – ನಾವು ಒಳಗೆ ಸುಭದ್ರರಾಗಿದ್ದರೆ, ನೂರು ಮಂದಿ ಹೊರಗಿನ ಶತ್ರುಗಳು ಧಾಳಿಯನ್ನು ಎದುರಿಸಬಹುದು. ನಮ್ಮಲ್ಲಿ ಒಗ್ಗಟ್ಟಿಲ್ಲದ ಮೇಲೆ ಶತ್ರುಗಳ ಮೇಲಿನ ಧಾಳಿ ಫಲಕಾರಿಯಾಗದು. ಆದುದರಿಂದ ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಒಳಗಿನ ಶತ್ರುಗಳ ಮರ್ದನಕಾರ್ಯಕ್ಕೆ, ವಿದ್ರೋಹದ ಮೂಲೋತ್ಪಾಟನೆಗೆ ವಿನಿಯೋಗಿಸಬೇಕಾಗುವುದು. ಎಲ್ಲವನ್ನೂ ಬಲ್ಲ ನಿಮಗೆ ಹೆಚ್ಚಿಗೆ ಹೇಳಬೇಕಾಗಿಲ್ಲ. ಈಗ ನನ್ನ ಕೋರಿಕೆ ಇಷ್ಟು. ರಾಜಧಾನಿಯಲ್ಲಿ ಉಳಿದಿರುವ ನಮ್ಮ ಮೂಲ ಸೈನ್ಯದೊಂದಿಗೆ, ರಾಮಭೂಪಾಲರು ಸೆಲ್ಲಪ್ಪನ ದಂಗೆಯನ್ನು ಅಡಗಿಸಲು ಕೂಡಲೇ ಪ್ರಯಾಣಮಾಡಲಿ. ತಿರುಮಲರಾಯರು ಸಂಧಾನಾಪೇಕ್ಷಿಯಾದ ಸುಲ್ತಾನನೊಂದಿಗೆ ಸಂಧಿಮಾಡಿಕೊಂಡು, ಆ ಸೈನ್ಯದೊಂದಿಗೆ ಸಹೋದರರನ್ನು ಕೂಡಿಕೊಳ್ಳಲಿ. ಉತ್ಕಲದ ಗಜಪತಿಯನ್ನು ವಿಚಾರಿಸಲು ನಾವೇ ಹೋಗುತ್ತೇವೆ. ಅಲ್ಲಿ ನಮ್ಮ ಕಾರ್ಯ ಪೂರೈಸಿದರೆ, ನಿಮ್ಮ ನೆರವಿಗೆ ನಾವು ಸೈನ್ಯದೊಡನೆ ಬರುತ್ತೇವೆ. ಆದರೆ....ಸೆಲ್ಲಪ್ಪ ಮತ್ತು ತುಂಬುಚ್ಚಿ ನಾಯಕರನ್ನು ವಿಚಾರಿಸಿಕೊಳ್ಳಲು ನೀವೇ ಸಾಕೆಂದು ನಮ್ಮ ಭಾವನೆ. ಹೇಗೆ ಇರಲಿ, ಮೊದಲು ಇರುವ ಸೈನ್ಯದೊಂದಿಗೆ ನಾಳೆಯೇ ನೀವು ತಂಜಾವೂರಿಗೆ ಪ್ರಯಾಣ ಬೆಳಸಿ, ಅದನ್ನು ಕೈವಶಮಾಡಿಕೊಂಡು ಆ ದ್ರೋಹಿಗಳನ್ನು ಸೆರೆಹಿಡಿದು ತರಬೇಕೆಂದು ನಮ್ಮ ಆಜ್ಞೆ ...!" ಎಂದು ಹೇಳಿ ರಾಮರಾಯನಿಗೆ ಮಾತನಾಡಲೂ ಅವಕಾಶಕೊಡದೆ ಅಲ್ಲಿಂದ ಎದ್ದು ಹೋದನು.

ಹೀಗೆ ಇಷ್ಟವಿಲ್ಲದಿದ್ದರೂ ಅಳಿಯರಾಮರಾಯನು ಸಾಮ್ರಾಜ್ಯದ ವಿರುದ್ಧ ನಡೆದಿದ್ದ ದ್ರೋಹಕಾರ್ಯವನ್ನು ಅಡಗಿಸಲು ಸೈನ್ಯ ಸಮೇತ ಹೋಗಬೇಕಾಯಿತು. ಇದು ಅವನಿಗೆ ಅಪ್ರಿಯಕಾರ್ಯವಾಗಿದ್ದರೂ ನಿರ್ವಾಹವಿಲ್ಲದ ಈ ಕಾರ್ಯ ಸಾಧಿಸಬೇಕಾಗಿತ್ತು.

ಮೊದಲಿನಿಂದಲೂ ಅಳಿಯ ರಾಮರಾಯನಿಗೆ ಸೆಲ್ಲಪ್ಪ ಹಾಗೂ ತುಂಬುಚ್ಚಿ ನಾಯಕರ ವಿಷಯದಲ್ಲಿ ಸದಭಿಪ್ರಾಯವಿತ್ತು. ಅವರು ಸಾಮ್ರಾಜ್ಯ ನಿಷ್ಠ ಸೇವಕರೆಂದೂ ತಿಳಿದಿತ್ತು. ಜನತೆಯ ಬೆಂಬಲವುಳ್ಳ ಈ ದಂಗೆಯನ್ನು ಅಡಗಿಸಲು ಅವನಿಗೆ ಇಷ್ಟವಿರಲಿಲ್ಲ. ಸಾಧ್ಯವಾದರೆ ಇಂತಹ ಕಾರ್ಯಕ್ಕೆ ತಾನೂ ಬೆಂಬಲಕೊಡುವವನೇ ಅವನಿಗೂ ಅಚ್ಯುತರಾಯನ ಆಳ್ವಿಕೆಯ ಬಗ್ಗೆ ಅಸಮಾಧಾನವೇ ಇತ್ತು. ಸಲಕಂ ಸಹೋದರರನ್ನು ನೆಲಕ್ಕೆ ಉರುಳಿಸುವ ಸಲುವಾಗಿ ನಡೆದ ಈ ದಂಗೆ, ಪ್ರಜಾಸತ್ತಾತ್ಮಕವಾದ ಪ್ರತಿಭಟನೆಯೇ ಆಗಿತ್ತು. ಇದನ್ನು ಅಡಗಿಸುವುದೆಂದರೆ, ಸಲಕಂ ಸಹೋದರರ ದಬ್ಬಾಳಿಕೆಯನ್ನು ಅಡಗಿಸಲು, ದೊರೆತ ಏಕೈಕ ಅವಕಾಶ ತಪ್ಪಿದಂತೆ ಸರಿ ಎಂದು ಅವನ ಭಾವನೆ. ತನ್ನಲ್ಲಿ ನಂಬಿಕೆ ಇರಿಸಿ, ಈ ವಿದ್ರೋಹದ ಕಾರ್ಯವನ್ನು ಅಡಗಿಸಲು ಸೈನ್ಯಸಮೇತ ಕಳುಹಿಸಿಕೊಟ್ಟಿದ್ದಾನೆ – ಅಚ್ಯುತರಾಯ. ಅವನ ನಂಬಿಕೆಯನ್ನು ಉಳಿಸಿಕೊಂಡೇ ವಿದ್ರೋಹದ ಚಳುವಳಿ ಮತ್ತಷ್ಟು ಪ್ರಜ್ವಲಿಸುವಂತೆ ಮಾಡಿ, ಜನತೆಯ ಆಕಾಂಕ್ಷೆ ಈಡೇರಿಸಲು ತನ್ನಿಂದಾದ ಸಹಾಯ ಮಾಡಬೇಕು. ಸಲಕಂ ಸಹೋದರರನ್ನು ಅಧಿಕಾರದಿಂದ ಉಳಿಸಲು ಮಾಡುವ ಎಲ್ಲ ಕಾರ್ಯಕ್ಕೆ ತನ್ನ ಸಹಾಯ, ಸಹಕಾರ ಬೆಂಬಲಗಳನ್ನು ಕೊಡಬೇಕು – ಎಂದು ತನಗೆ ದೊರೆತ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ರಾಮರಾಯನು ನಿಶ್ಚಯಿಸಿದನು. ಹೀಗೆ ತನಗಾದ ನಿರಾಶೆಯಲ್ಲೂ ಒಂದು ಬಗೆಯ ಸಮಾಧಾನ ಕಂಡುಕೊಂಡನು.

ಈ ಬಗ್ಗೆ ಆ ಸಹೋದರರಲ್ಲಿ ದೀರ್ಘವಾದ ಚರ್ಚೆನಡೆದು, ಅವರು ಒಂದು ಕಾರ್ಯಕ್ರಮ ಸಿದ್ಧಗೊಳಿಸಿದರು. ತಮ್ಮ ಬಗ್ಗೆ ಅಚ್ಯುತರಾಯನಾಗಲೀ ಸಲಕಂ ಸಹೋದರಿಗಾಗಲೀ ಯಾವ ಬಗೆಯ ಸಂದೇಹಕ್ಕೆ ಅವಕಾಶ ಕೊಡದಂತೆ ನೋಡಿಕೊಂಡರು. ಅಲ್ಲದೆ ರಾಜಧಾನಿಯಲ್ಲಿ ನಡೆಯುವ ಎಲ್ಲಸಂಗತಿ ವರದಿಮಾಡಲು, ತಮ್ಮ ನಂಬಿಕೆಗೆ ಪಾತ್ರನಾಗಿದ್ದ ಮುಕುಂದನಾಯಕನೆಂಬ ಸೇವಕನನ್ನು ಹಿಂದೆ ಬಿಟ್ಟು, ತಂಜಾವೂರಿನ ಕಡೆ ಸೈನ್ಯ ಸಮೇತ ಹೊರಟನು.

ಮುಕುಂದನಾಯಕನ ಇತಿಹಾಸ ತುಂಬಾ ವಿಚಿತ್ರವಾಗಿತ್ತು. ಅವನು ಆರುವರ್ಷದ ಬಾಲಕನಾಗಿದ್ದಾಗಲೇ ರಾಮರಾಯನ ಆಶ್ರಯಕ್ಕೆ ಬಂದಿದ್ದ. ಅವನ ಜಾತಿಯ ಬಗ್ಗೆ ನಿರ್ದಿಷ್ಟವಾಗಿ ಯಾರಿಗೂ ತಿಳಿದಿರಲಿಲ್ಲ. ಕೆಲವರ

ಪ್ರಕಾರ ಮಹಮದೀಯ ಸರದಾರನಿಗೆ ಹಿಂದೂ ಸ್ತ್ರೀಯಲ್ಲಿ ಹುಟ್ಟಿದ ಮಗ. ಮತ್ತೆ ಕೆಲವರ ಊಹೆಯಲ್ಲಿ ಹಿಂದೂ ಸರದಾರನಿಗೆ ಮಹಮದೀಯ ಸ್ತ್ರೀಯಲ್ಲಿ ಜನಿಸಿದ ಪುತ್ರ. ಅವನು ತಂದೆ ತಾಯಿಗಳನ್ನು ಬಾಲ್ಯದಲ್ಲೇ ಕಳೆದುಕೊಂಡಿದ್ದುದರಿಂದ ಅವನಿಗೆ ತಾಯಿತಂದೆಯರ ನೆನಪೇ ಮರೆತುಹೋಗಿತ್ತು. ಅವನ ಸೂಕ್ಷ್ಮ ಬುದ್ಧಿಗೆ ಪ್ರಾಮಾಣಿಕತನಕ್ಕೆ ಮೆಚ್ಚಿದ್ದ ರಾಮರಾಯನು ಅವನನ್ನು ತನ್ನ ಮಗನಂತೆ ನೋಡಿಕೊಂಡು ಅವನನ್ನು ಶಸ್ತ್ರವಿದ್ಯೆ ಪಾರಂಗತನನ್ನಾಗಿ ಮಾಡಿದುದಲ್ಲದೆ, ಓದುಬರಹಗಳಲ್ಲೂ ಪ್ರವೀಣನನ್ನಾಗಿ ಮಾಡಿದ್ದ. ಅಲ್ಲದೆ ಅವನಿಗೆ ಅನೇಕ ಜವಾಬ್ದಾರಿ ಕೆಲಸಕೊಟ್ಟು ಅವುಗಳಲ್ಲಿ ತೇರ್ಗಡೆಯಾದುದನ್ನು ಕಂಡು, ಸೈನ್ಯದಲ್ಲಿ ದಳಪತಿಯನ್ನಾಗಿ ಮಾಡಿದ್ದ. ವಿಜಯನಗರಕ್ಕೆ ಬಂದಾಗ ಮುಕುಂದನಾಯಕನನ್ನು ದಂಡನಾಯಕನ ಪದವಿಗೇರಿಸಿದ್ದ. ಇಂತಹ ಸ್ವಾಮಿ ನಿಷ್ಠ ಸೇವಕರು ರಾಜಧಾನಿಯಲ್ಲಿದ್ದರೆ ಕ್ಷೇಮವೆಂದು ಅವನನ್ನು ನಗರ ರಕ್ಷಕನಾಗಿ ನೇಮಿಸಿದ್ದ ಈ ಹುದ್ದೆಯಲ್ಲಿ ಅವನು ಬಹುಬೇಗನೆ ಎಲ್ಲರ ಪ್ರೀತಿವಿಶ್ವಾಸಗಳಿಗೆ ಪಾತ್ರನಾಗಿದ್ದ. ಅವನ ವಿಷಯದಲ್ಲಿ ಅಚ್ಯುತರಾಯ, ಸಲಕಂ ಸಹೋದರರಿಗೂ ಸದಭಿಪ್ರಾಯವಿತ್ತು. ಅರಮನೆಯಲ್ಲೂ ಅವನಿಗೆ ಬಹಳಗೌರವವಿತ್ತು. ಅಂತಲೇ ಅಳಿಯರಾಮರಾಯನು ಇವನನ್ನು ತಮಗೆ ಸುದ್ದಿಕೊಡುವಂತಹ ಮಹತ್ಕಾರ್ಯವಹಿಸಿ ತಂಜಾವೂರಿಗೆ ಹೋಗಿದ್ದ.

ಅಳಿಯ ರಾಮರಾಯನು ತನ್ನ ಸೈನ್ಯದೊಂದಿಗೆ ತಂಜಾವೂರು ಕಡೆಗೆ ಹೊರಟಮೇಲೆ ತಿರುಮಲರಾಯನು ಅಚ್ಯುತರಾಯನ ಆಜ್ಞೆಯಂತೆ ಬಿಜಾಪುರದ ಸುಲ್ತಾನ ಅದಿಲ್‌ಷಹನೊಂದಿಗೆ ಒಪ್ಪಂದ ಮಾಡಿಕೊಂಡು ತನ್ನ ಸಹೋದರನ ನೆರವಿಗೆ ಹೊರಟ. ಈ ಒಪ್ಪಂದದಿಂದಾಗಿ, ರಾಯಚೂರು ಮುದ್ಗಲಗಳು ವಿಜಯನಗರದರಸರ ಕೈಬಿಟ್ಟು ಹೋದವು– ಇವುಗಳ ಸಲುವಾಗಿ ಕೃಷ್ಣದೇವರಾಯನು ಎಷ್ಟು ಕಷ್ಟಪಟ್ಟಿದ್ದನೆಂಬುದು ಅಚ್ಯುತರಾಯನಿಗೆ ತಿಳಿದಿದ್ದರಲ್ಲವೆ? ಅವನು ಸಲಕಂ ಸಹೋದರರು ಮಾಡಿದ್ದ ಸಲಹೆಗೆ ತನ್ನ ಅಧಿಕಾರದ ಮುದ್ರೆ ಒತ್ತಿದ್ದನೇ ಹೊರತು, ಅವುಗಳ ಪರಿಣಾಮವೇನಾದೀತೆಂದು ಯೋಚಿಸಿರಲಿಲ್ಲ. ಅದು ಅವನಿಗೆ ಬೇಕಿರಲೂ ಇಲ್ಲ.

ತಂಜಾವೂರಿನ ಸೆಲ್ಲಪ್ಪನ ಮೇಲೆ ಇತ್ತ ಅಳಿಯ ರಾಮರಾಯನನ್ನು ಕಳುಹಿಸಿಕೊಟ್ಟಮೇಲೆ ಇತ್ತ ಸಲಕಂಸಹೋದರರನ್ನು ಗಜಪತಿಯ ಮೇಲೆ ಕಳುಹಿಸಿ, ಉಪಾಯಾಂತರದಲ್ಲಿ ಸಂಧಾನ ಸಾಧಿಸಿದ. ಕೃಷ್ಣೆಯ ದಂಡೆಯ ಉತ್ತರ ಭಾಗಗಳನ್ನು ಗಜಪತಿಗೆ ಬಿಟ್ಟುಕೊಟ್ಟು, ಸೈನ್ಯವನ್ನು ರಾಜಧಾನಿಗೆ ಕರೆಸಿಕೊಂಡ. ಇದೆಲ್ಲದರ ಉದ್ದೇಶ, ಒಳದೇಶದಲ್ಲಿ ಉಂಟಾಗಿದ್ದ ವಿದ್ರೋಹದ ಚಳುವಳಿಯನ್ನು ಮೂಲೋತ್ಪಾಟನೆ ಮಾಡಬೇಕೆಂಬುದೇ ಆಗಿತ್ತು. ರಾಮ

ರಾಯ ಮತ್ತು ತಿರುಮಲರಾಯರನ್ನು ಈ ಕೆಲಸಕ್ಕೆ ನಿಯೋಗಿಸಿದ್ದರೂ, ಅವರಿಂದಲೇ ಇದು ಸಾಧ್ಯವೆಂದು ಹೊಗಳಿದ್ದರೂ, ಅವನಿಗೆ ಅವರ ವಿಷಯದಲ್ಲಿ ಸಂಪೂರ್ಣ ನಂಬಿಕೆಯಿರಲಿಲ್ಲ. ಅವರು ತಮ್ಮ ವಿಷಯದಲ್ಲಿ ಅತೃಪ್ತಿಗೊಂಡಿರುವರೆಂದು ಎಂದೋ ವೇದ್ಯವಾಗಿತ್ತು. ಅವರ ಸಹಾನುಭೂತಿ ಚಳುವಳಿಕಾರರ ಕಡೆಗೆ ಎಂಬುದೂ ತಿಳಿದಿತ್ತು. ಅವರು ದಂಗೆಯನ್ನು ಅಡಗಿಸದೆ ದಂಗೆ ಕೋರರಿಗೆ ಪ್ರತ್ಯಕ್ಷ ಅಥವಾ ಪರೋಕ್ಷ ಸಹಾನುಭೂತಿ ಅನುಕಂಪ ತೋರಿಸಿದರೂ ಈ ಒಂದು ಕಾರಣವನ್ನು ಮುಂದುಮಾಡಿಕೊಂಡು, ಅವರನ್ನು ರಾಜದ್ರೋಹಿಗಳೆಂದು ನಿವಾರಿಸಬಹುದೆಂಬುದೇ ಸಲಕಂ ಸಹೋದರರ ತಂತ್ರವಾಗಿತ್ತು. ಅವರು ರಾಮರಾಯನನ್ನು ಸಂಪೂರ್ಣವಾಗಿ ನಂಬಿರಲಿಲ್ಲ. ಅವನ ಚಟುವಟಿಕೆಗಳನ್ನು ವರದಿಮಾಡಲು ಅಧಿಕ ಸಂಖ್ಯೆಯಲ್ಲಿ ಗೂಢಚಾರರನ್ನು ನೇಮಿಸಿದ್ದರು. ಅಚ್ಯುತರಾಯನ ಮೂಲಬಲವನ್ನು ತೆಗೆದುಕೊಂಡು ಹೋಗುವಂತೆ, ಹೇಳಿದುದರ ಉದ್ದೇಶವಾದರೂ ಇದೇ ಆಗಿತ್ತು. ಒಂದುವೇಳೆ ರಾಮರಾಯನು ವಿದ್ರೋಹವೆಸಗಿ ದಂಗೆಕೋರರ ಕಡೆ ಸೇರಿದರೆ, ಅವನಿಗೆ ನೆರವಾಗದಿರಲೆಂದು ತಮ್ಮ ವಿಶ್ವಾಸಿಗಳನ್ನೇ ಅವನೊಡನೆ ಕಳುಹಿಸಿಕೊಟ್ಟಿದ್ದರು. ಹೀಗೆ ರಾಮರಾಯನಿಂದ ತಮಗೆ ಯಾವ ಅಪಾಯವಿಲ್ಲದೆ ಅವನ ಪ್ರಾಬಲ್ಯವನ್ನು ಕಡಿಮೆ ಮಾಡಲು ಉಪಾಯಾಂತರದಲ್ಲಿ ಸಂಚುಮಾಡಿದ್ದರು. ತನ್ನ ಸುತ್ತ ನೇಯ್ದಿರುವ ಈ ಜಾಲ ರಾಮರಾಯನಿಗೆ ತಿಳಿಯದೆ ಹೋಗಲಿಲ್ಲ. ಅವನು ಅವರಿಗೆ ತನ್ನ ಅಂತರಂಗದ ಆಲೋಚನೆಗಳ ಹೊಳಪು ಲವಲೇಶವೂ ತಿಳಿಯದಂತೆ ಎಚ್ಚರ ವಹಿಸಿದ್ದ. ಅವನು ಅಂತರಂಗದಲ್ಲಿ ದ್ರೋಹವನ್ನು ನೆನೆದರೂ ಮೇಲು ನೋಟಕ್ಕೆ ಅಚ್ಯುತರಾಯನಿಗೆ ಗೆಳೆಯನಂತೆಯೂ ಸಲಕಂ ಸಹೋದರರ ವಿಶ್ವಾಸ ಪಾತ್ರನಂತೆ ನಟಿಸುತ್ತಾ ತನ್ನನ್ನು ಮೋಸಗೊಳಿಸಲು ಬಂದವರನ್ನು ಮೋಸಗೊಳಿಸಲು ಯತ್ನಿಸುತ್ತಿದ್ದ.

ಅನೇಕ ದಿನಗಳು ಪ್ರಯಾಣಮಾಡಿ ತಂಜಾವೂರಿನ ಹೊರವಲಯದಲ್ಲಿ ಬಂದು ಸೈನ್ಯ ಸಮೇತ ಬೀಡುಬಿಟ್ಟ ಅಳಿಯ ರಾಮರಾಯ.

ಅವನಿಗೆ ವೃಥಾಕಾರಣವಾಗಿ ಯುದ್ಧಮಾಡಿ, ನಿರಪರಾಧಿಗಳ ರಕ್ತ ಹರಿಸುವುದು ಇಷ್ಟವಿರಲಿಲ್ಲ. ಉಪಾಯಾಂತರದಲ್ಲಿ ಸೆಲ್ಲಪ್ಪನಾಯಕನಿಗೆ ತನ್ನ ಅಂತರಂಗದ ಭಾವನೆಗಳು ಅರಿವಾಗುವಂತೆ ಮಾಡಬೇಕೆಂದು ಆಶಿಸಿದ್ದ. ಇದರಿಂದ ತಮ್ಮವರಿಂದ ತಪ್ಪುತ್ತರ ಕೊಲೆತಪ್ಪಿ ವಿದ್ರೋಹಕಾರಕ ಶಕ್ತಿ ಬೆಳೆಯುವುದೆಂದು ಭಾವಿಸಿದ್ದ. ಆದರೆ ದಂಗೆ ಅಡಗಿಸಲು ಸಾಮ್ರಾಟರಿಂದ ಆಜ್ಞೆಹೊತ್ತು ಬಂದಿದ್ದ. ಶತ್ರು ಪಕ್ಷದ ತನ್ನನ್ನು ಸೆಲ್ಲಪ್ಪನು ಗೆಳೆಯನೆಂದು ಪರಿಗಣಿಸುವಂತೆ ಮಾಡುವುದು ಹೇಗೆ? ಇದು ಬಹಳ ತೊಡಕಿನ ಪ್ರಶ್ನೆಯಾಗಿತ್ತು. ಈ ಪ್ರಯತ್ನ

ದಲ್ಲಿ ಕೊಂಚ ಎಚ್ಚರ ತಪ್ಪಿದರೂ ಸೆಲ್ಲಪ್ಪನಿಗೆ ಮಾತ್ರವಲ್ಲ ತನಗೇ ಹಾನಿಯಾಗುವ ಸಂಭವವಿತ್ತು. ಇದು ಅತ್ಯಂತ ಸೂಕ್ಷ್ಮಸಂಗತಿಯಾಗಿತ್ತು. ತನ್ನ ಅಂತರಂಗದ ನಿಜವಾದ ಭಾವನೆಗಳನ್ನು ಸೆಲ್ಲಪ್ಪನು ತಿಳಿಯುವಂತೆ ಆದರೆ, ಯುದ್ಧವನ್ನು ತಪ್ಪಿಸಿ ನಿಕಟವಾದ ಸ್ನೇಹಕ್ಕೆ ಬುನಾದಿಯನ್ನು ಹಾಕಬಹುದು ಎಂದು ಆಲೋಚಿಸಿ ತನ್ನ ಹೃದ್ಗತವನ್ನು ತೋಡಿಕೊಂಡು ಒಂದು ಪತ್ರ ಬರೆದು ಈ ಕಾರ್ಯ ಸಾಧಿಸಲು ನಿಶ್ಚಯಿಸಿದನು.

ಪ್ರಿಯ ಸ್ನೇಹಿತರಾದ ಸಾಳ್ವ ಸೆಲ್ಲಪ್ಪನಾಯಕರಿಗೆ,

ರಾಮಭೂಪಾಲನು ಮಾಡುವ ನಮಸ್ಕಾರಗಳು. ಸಾಂಪ್ರತ.

ಈ ಪತ್ರವನ್ನು ನೀವು ನೋಡಿ ಚಕಿತರಾಗಬಹುದು. ಶತ್ರುಪಕ್ಷದ ನನ್ನಿಂದ ಈ ಪತ್ರವನ್ನು ನೋಡಿ ನೀವು ನಂಬದೆ ಇರಬಹುದು. ಆದರೆ ಪಂಪಾಪತಿಯಾಣೆ ಇಟ್ಟು ಬರೆದಿರುವ ಈ ಪತ್ರವನ್ನು ನೀವು ಸಮಾಧಾನದಿಂದ ನಿರುದ್ವೇಗದಿಂದ ಪರಾಂಬರಿಸಬೇಕು.

ಇಂದು ನಾನು ಸಾಮ್ರಾಟ್ ಅಚ್ಯುತರಾಯರ ಆಜ್ಞಾನುಸಾರ, ಸಾಮ್ರಾಜ್ಯದ ವಿರುದ್ಧ ದಂಗೆ ಎದ್ದಿರುವ ನಿಮ್ಮನ್ನು ಕೈಸೆರೆ ಹಿಡಿದುಕೊಂಡು ಹೋಗಲು ಸೈನ್ಯ ಸಮೇತ ಬಂದಿದ್ದೇನೆ. ಆದರೆ ಈ ಕಾರ್ಯ ನನಗೆ ಎಳ್ಳಷ್ಟೂ ಪ್ರಿಯವಲ್ಲವೆಂದು ನಿಮಗೆ ನಾನು ಹೇಗೆ ಮನವರಿಕೆ ಮಾಡಿಕೊಡಲಿ? ನಾನು ಸಾಮ್ರಾಟರ ಬಗ್ಗೆ ಈ ವರೆಗೆ ಸದ್ಭಾವನೆಯನ್ನೇ ತಳೆದಿದ್ದೆ. ಆದರೆ ಸಾಮ್ರಾಟ್ ಕೃಷ್ಣದೇವರಾಯರ ಪುಣ್ಯ ಸಂತಾನ, ಹಾಲುಗಲ್ಲದ ಕಂದಮ್ಮನನ್ನು ಕ್ರೂರ ರೀತಿಯಲ್ಲಿ ಕೊಂದು, ಅದರ ಆರೋಪವನ್ನು ನಿರಪರಾಧಿಯಾದ, ಸೋಮರಸರ ತಲೆಗೆ ಕಟ್ಟಿ, ಅವರನ್ನು ಸರಿಯಾದ ವಿಚಾರಣೆಯಿಲ್ಲದೆ ಕೊಲೆಮಾಡಿದ ನೀಚರಾದ ಸಲಕಂ ಸಹೋದರರಿಗೆ ಎಂದು ರಕ್ಷಣೆ ಕೊಟ್ಟರೋ ಅಂದೇ ಅವರ ವಿಷಯದಲ್ಲಿ ನನಗಿದ್ದ ಸ್ವಾಮಿಭಕ್ತಿ ಕರಗಿಹೋಯಿತು. ಆ ಧೂರ್ತ ಕೊಲೆಪಾತಕರು ಇಂದು ಸಾಮ್ರಾಟರ ಏಕ ಮಾತ್ರ ವಿಶ್ವಾಸಿಗಳು. ರಾಜ್ಯಾಡಳಿತದ ಗಂಧವರಿಯದ ಸಾಮ್ರಾಟರ ಹೆಸರಿನಲ್ಲಿ ಆ ದ್ರೋಹಿಗಳು ಪೈಶಾಚಿಕ ಪ್ರಭುತ್ವ ನಡೆಸಿದ್ದಾರೆ. ನಿರಪರಾಧಿಗಳಾದವರನ್ನೆಲ್ಲಾ, ತಮ್ಮ ಮಹತ್ವಾಕಾಂಕ್ಷೆಗೆ ಭಂಗ ತರುವವರನ್ನೆಲ್ಲಾ ತಮ್ಮ ಕತ್ತಿಗೆ ಬಲಿಗೊಟ್ಟು, ಅನಂತರ ಪ್ರಭುಗಳನ್ನು ಮೂಲೆಗೊತ್ತಿ, ತಾವೇ ಸಾಮ್ರಾಟರಾಗಿ ಮೆರೆಯಲು ಆಲೋಚಿಸಿದ್ದಾರೆ. ಅವರಿಂದ ಸಾಮ್ರಾಜ್ಯಕ್ಕೆ ನಿಜವಾಗಿಯೂ ಗಂಡಾಂತರ ಬಂದೊದಗಿದೆ. ಮದೋನ್ಮತ್ತರಾದ ಆ ದ್ರೋಹಿಗಳು ತಮ್ಮ ಅಭೀಷ್ಟಸಿದ್ಧಿಗಾಗಿ ಯಾವ ಹೇಯ ಕೃತ್ಯಕ್ಕೂ ಹೇಸುವವರಲ್ಲ! ಅವರಲ್ಲಿ ಮಾನವೀಗುಣಗಳಿಗೂ ಸತ್ಯ, ಧರ್ಮ

ನ್ಯಾಯಗಳಿಗೂ ಬೆಲೆಯಿಲ್ಲ. ಸೈತಾನನ ಭಕ್ತರಾದ ಅವರಿಗೆ ನಿರಪರಾಧಿಗಳ ರಕ್ತ ಹರಿಸುವುದು ಒಂದು ವಿನೋದವಾಗಿದೆ. ಇಂಥವರ ಕೈಗೆ ಪವಿತ್ರವಾದ ವಿಜಯನಗರ ಸಾಮ್ರಾಜ್ಯ ದೊರೆತಂದೇ ಸಾಮ್ರಾಜ್ಯದ ಪತನ! ಅವರ ಮುಷ್ಟಿಯಿಂದ ಸಾಮ್ರಾಜ್ಯವನ್ನು ನಾವು ಉಳಿಸಿಕೊಳ್ಳಬೇಕಾದರೆ, ದೇಶ ನಿಷ್ಠರ ಮೇಲೆ ಇಂದು ಮಹತ್ತರ ಜವಾಬ್ದಾರಿ ಬಿದ್ದಿದೆ. ಇದೊಂದು ಪವಿತ್ರವಾದ ಕರ್ತವ್ಯ.

ಇಂತಹ ಪವಿತ್ರವಾದ ಕಾರ್ಯಕ್ಕೆ ನೀವು ಇಂದು ನಾಯಕರಾಗಿದ್ದೀರಿ. ಸಲಕಂ ಸಹೋದರರು ನಡೆಸಿರುವ ಅನ್ಯಾಯದ ವಿರುದ್ಧ ನಿಮ್ಮ ಈ ಹೋರಾಟ ಧರ್ಮ ಸಂಸ್ಥಾಪನೆಗಾಗಿ ನಡೆಸುವ ಹೋರಾಟ. ಇಂತಹ ಹೋರಾಟದಲ್ಲಿ ಪಾಲುಗೊಳ್ಳಲು ನಾನು ಎಷ್ಟು ಹಾತೊರೆಯುತ್ತಿರುವೆನೆಂದು, ನೀವು ಊಹಿಸಲಾರಿರಿ. ನಿಮ್ಮೊಡನೆ ಪ್ರತ್ಯಕ್ಷ ಮಾತನಾಡಿ ತಿಳಿಸಬೇಕಾದ ಅನೇಕ ವಿಷಯಗಳಿವೆ. ಅವುಗಳನ್ನೆಲ್ಲಾ ಪತ್ರದಲ್ಲಿ ಬರೆಯಲಾರೆ. ಆದುದರಿಂದ ನೀವು ಈ ಪತ್ರವನ್ನು ಓದಿಕೊಂಡು, ನನ್ನನ್ನು ನಿಮ್ಮ ವಿಶ್ವಾಸಕ್ಕೆ ತೆಗೆದುಕೊಂಡರೆ, ಹೆಚ್ಚು ರಕ್ತಪಾತವಿಲ್ಲದೆ, ಸಲಕಂ ಸಹೋದರರ ದೈತ್ಯ ಪ್ರಭುತ್ವವನ್ನು ಕೊನೆಗಾಣಿಸುವ ಉಪಾಯ ಆಲೋಚಿಸೋಣ. ಆದುದರಿಂದ ನೀವು ನಮಗೆ ಹೆದರಿ ವಶರಾದಂತೆ, ಕೋಟೆಯನ್ನು ಒಪ್ಪಿಸಿದರೆ, ಮುಂದಿನ ಎಲ್ಲ ಯೋಜನೆಗಳನ್ನೂ ಕಾರ್ಯಗತಮಾಡಲು ಅನುಕೂಲವಾಗುತ್ತದೆ.

ನಾನು ಸದ್ಯದ ಪರಿಸ್ಥಿತಿಯಲ್ಲಿ ಬಹಿರಂಗವಾಗಿ ವಿದ್ರೋಹಿಯಾಗಲು ಸಾಧ್ಯವಿಲ್ಲ. ಸಲಕಂ ಸಹೋದರರ ಹಸ್ತಕರು ಸದಾ ನನ್ನಮೇಲೆ ಕಣ್ಣಿಟ್ಟು ಕಾಯುತ್ತಿದ್ದಾರೆ. ಸ್ವಲ್ಪ ಸುಳಿವು ದೊರೆತರೂ ನನ್ನ ಮೇಲೆ ಬಿದ್ದು ನನ್ನನ್ನು ಬಂಧಿಸಲು, ನನ್ನ ಸಹೋದರ ತಿರುಮಲನು ಸೈನ್ಯದೊಡನೆ ಬಂದು ಸೇರುವವರೆಗೆ ನಾನು ಬಹಿರಂಗವಾಗಿ ದಂಗೆ ಏಳಲಾರೆ. ಅಂತಲೇ ಈ ಪತ್ರ ಬರೆಯಬೇಕಾಗಿದೆ. ನನ್ನ ಮಾತು ನಂಬಿ, ಪಂಪಾಪತಿಯಾಣೆಗೂ ನಾನು ನಿಮ್ಮ ಮಿತ್ರ. ಈ ಮಾತು ಸತ್ಯ.

ನನ್ನ ಪತ್ರ ಓದಿಕೊಂಡು ನಾಶ ಪಡಿಸಿ. ಇದು ಶತ್ರು ಸೈನಿಕರ ಬಗ್ಗೆ ಸಿಕ್ಕಿಬಿದ್ದರೆ ಅನಾಹುತವಾದೀತು.

ಇಂತು ತಮ್ಮ ವಿಶ್ವಾಸಿ;
ನಿಮ್ಮೊಲವಿನ ರಾಮಭೂಪಾಲ.

ಈ ಪತ್ರವನ್ನು ಅತ್ಯಂತ ನಂಬಿಕೆಗೆ ಪಾತ್ರನಾದ ಒಬ್ಬ ಸೈನಿಕನ ಕೈಗೆ ಇತ್ತು ತಂಜಾವೂರಿನ ಸೆಲ್ಲಪ್ಪನಿಗೆ ತಲುಪಿಸಿ ಪ್ರತ್ಯುತ್ತರ ತರಲು ಹೇಳಿಕಳುಹಿಸಿ ಕೊಟ್ಟ.

ಆದರೆ ರಾಮರಾಯನ ದುರದೃಷ್ಟದಿಂದ ಕೋಟೆಯ ಕಡೆ ಸುಳಿದ ಈ ಸೇವಕನ ಮೇಲೆ ಸಲಕಂ ಸಹೋದರರ ಕಡೆಯವರ ಸಂದೇಹ ಹರಿದು, ಹಠಾತ್ತನೆ ಅವನ ಮೇಲೆ ಬಿದ್ದು ಪರೀಕ್ಷಿಸಿದಾಗ ರಾಮರಾಯನ ಪತ್ರ ಕೈಗೆ ಸಿಕ್ಕಿಬಿತ್ತು. ಅವರು ಅವನಿಂದ ಆ ಪತ್ರವನ್ನು ಕಸಿದುಕೊಂಡು, ಆ ಸೈನಿಕನ ಕಥೆ ಮುಗಿಸಿ ಕೂಡಲೇ ರಾಜಧಾನಿಗೆ, ಆ ಪತ್ರವನ್ನು ಕಳುಹಿಸಿಕೊಟ್ಟರು.

ಒಂದೆರಡು ವಾರಗಳಾದರೂ ಸೆಲ್ಲಪ್ಪನಿಂದ ಉತ್ತರ ಬರಲಿಲ್ಲ. ಪತ್ರ ತೆಗೆದುಕೊಂಡು ಹೋಗಿದ್ದ ಸೈನಿಕನೂ ಹಿಂದಿರುಗಿ ಬರಲಿಲ್ಲ. ಇದರಿಂದ ರಾಮರಾಯನಿಗೆ ಗಾಬರಿಯಾಯಿತು. ತಾನೂ ದುಡುಕಿದುದಾಗಿ ಮನವರಿಕೆಯಾಗಿ, ಗಾಬರಿಯಾಯಿತು. ಆ ಸೈನಿಕನೇನಾದರೂ, ಸಲಕಂ ಸಹೋದರರ ಕೈಗೆ ಸಿಕ್ಕಿ ಬಿದ್ದಿರುವನೇ? ಎಂಬ ಸಂಶಯ ಉಂಟಾಯಿತು. ತನ್ನ ಪತ್ರ ಅವರ ಕೈಗೆ ಸಿಕ್ಕಿಬಿದ್ದಿದ್ದರೆ ಏನಾದರೂ ಪ್ರತಿಕ್ರಿಯೆಯೂ ಇರಲಿಲ್ಲ. ಬಹುಶಃ ಸೆಲ್ಲಪ್ಪನಿಂದ ಆ ಸೈನಿಕನು ಬಂಧಿಸಲ್ಪಟ್ಟಿರಬಹುದೆಂದು ಕಳವಳಗೊಂಡ.

ರಾಮರಾಯನು ಯುದ್ಧಕ್ಕೆಂದು ಬಂದುದಾಗಿತ್ತು. ಇದುವರೆಗೆ ಕುಳಿತಂತೆ, ಮುಂದೆ ಸುಮ್ಮನೆ ಕುಳಿತಿರಲು ಸಾಧ್ಯವಿರಲಿಲ್ಲ. ಸೈನಿಕರು ಯುದ್ಧಕ್ಕಾಗಿ ಚಡಪಡಿಸಿದರು. ನಿರ್ವಾಹವಿಲ್ಲದೆ ಯುದ್ಧಕ್ಕೆ ಆರಂಭವಾಯಿತು.

ಅವರು ಅನೇಕ ದಿನಗಳ ವರೆಗೆ ಮುತ್ತಿಗೆ ಹಾಕಿ, ಎಡ ಬಿಡದೆ ಕಾದಿದ ಮೇಲೆ ತಂಜಾವೂರು ಕೋಟೆ ಅವರ ವಶವಾಯಿತು. ಯುದ್ಧದಲ್ಲಿ ಸಹಸ್ರಾರು ಜನರು ಮಡಿಯಬೇಕಾಯಿತು. ಕೋಟೆ ಕೈವಶವಾದ ಕೂಡಲೇ ಮೊದಲು ಸೆಲ್ಲಪ್ಪನನ್ನು ಹಿಡಿಯಲು ರಾಮರಾಯ ಅರಮನೆಯ ಕಡೆಗೆ ನುಗ್ಗಿದ. ಆದರೆ ಅರಮನೆ ಬರಿದಾಗಿತ್ತು – ಸೆಲ್ಲಪ್ಪನು ತನ್ನ ಪತ್ನಿ ಪುತ್ರರೊಡನೆ ಎಲ್ಲೋ ತಪ್ಪಿಸಿಕೊಂಡು ಹೋಗಿದ್ದ. ಇದರಿಂದ ರಾಮರಾಯನಿಗಾದ ನಿರಾಶೆ ಅಷ್ಟಿಷ್ಟಲ್ಲ.

೧೦

ರಾಮರಾಯನು ಸೆಲ್ಲಪ್ಪನಾಯಕನಿಗೆ ಬರೆದ ಕಾಗದ ಸಲಕಂ ಸಹೋದರರ ಕೈ ಸೇರಿದೊಡನೆ ಅವರು ಓದಿಕೊಂಡು ಕಿಡಿಕಿಡಿಯಾದರು, ಕಡೆಗೂ ಅವರ ನಿರೀಕ್ಷಣೆಯಂತೆ ರಾಮರಾಯನು ವಿದ್ರೋಹಿಯಾಗಿದ್ದ. ಅವನನ್ನು ಸೆಲ್ಲಪ್ಪನ ಮೇಲೆ ಕಳುಹಿಸಿಕೊಟ್ಟ ಅವರ ಉದ್ದೇಶ ಫಲಕಾರಿಯಾಗಿತ್ತು. ಅಂತರಂಗದಲ್ಲಿ ದ್ರೋಹಿಯಾಗಿ, ಬಹಿರಂಗದಲ್ಲಿ ತಮ್ಮ ವಿಶ್ವಾಸಿಯಂತೆ ರಾಮರಾಯನು ನಟಿಸಿದ್ದರೂ, ಅವನನ್ನು ಅವರು ಸಂಪೂರ್ಣವಾಗಿ ನಂಬಿರಲಿಲ್ಲ. ಹೇಗಾದರೂ ಮಾಡಿ ರಾಮರಾಯನ ಪ್ರಾಬಲ್ಯವನ್ನು ಕಡಿಮೆ ಮಾಡಿ, ಜನ

ತೆಯ ಕಣ್ಣಿನಲ್ಲಿ ಅವರು ದ್ರೋಹಿಯಾಗುವಂತೆ ಮಾಡಬೇಕೆಂದಿದ್ದ ಸಲಕಂ ಸಹೋದರರಿಗೆ ಈಗ ಸದವಕಾಶ ದೊರೆತಿತ್ತು. ರಾಮರಾಯನ ಈ ಪತ್ರ ವೊಂದರಿಂದ ಅವರು ತಮ್ಮ ಕಾರ್ಯ ಸಾಧಿಸಿಕೊಳ್ಳಲು ನಿಶ್ಚಯಿಸಿದರು.

ಆಳಿಯ ರಾಮರಾಯನನ್ನು ದೇಶದ್ರೋಹಿ ಎಂದು ಕೈಸೆರೆ ಹಿಡಿಯುವುದು ಅಷ್ಟು ಸುಲಭವಾಗಿರಲಿಲ್ಲ. ಅವನು ತಂಜಾವೂರನ್ನು ವಶಪಡಿಸಿಕೊಂಡಿದ್ದ. ಸೆಲ್ಲಪ್ಪನ ಅಳಿದುಳಿದ ಸೈನ್ಯ ಅವನ ವಶದಲ್ಲಿತ್ತು. ಅಷ್ಟೇ ಅಲ್ಲ. ಅವನು ನಿರೀಕ್ಷಿಸಿದ್ದ ತಿರುಮಲರಾಯನ ಸೈನ್ಯ ಕೂಡಿತ್ತು. ಈಗ ಅಚ್ಯುತರಾಯನ ಮೂಲಬಲ– ಅವನ ಮೇಲೆ ಕೈಮಾಡುವಂತಿರಲಿಲ್ಲ. ಸಲಕಂ ಸಹೋದರರ ಅನುಚರರು ರಾಮರಾಯನ ವಿರುದ್ಧ ವರ್ತಿಸುವಂತಿರಲಿಲ್ಲ. ಈಗ ರಾಮ ರಾಯನ ಸಂಚು ತಮಗೆ ತಿಳಿದಿದೆ ಎಂಬ ಸಂಗತಿ ಹೊರಪಟ್ಟರೂ ಅವರು ತಪ್ಪಿಸಿಕೊಂಡು ಶತ್ರುಪಕ್ಷ ಸೇರುವರೆಂಬುದು ಖಚಿತವಾಗಿತ್ತು. ಆದುದರಿಂದ ಅವರು ಸೆಲ್ಲಪ್ಪನನ್ನು ಸೇರುವ ಮೊದಲೇ ಕೈಸೆರೆ ಹಿಡಿಯಬೇಕಾಗಿತ್ತು. ಅವ ರಿಗೆ ರಾಮರಾಯನ ಹಾಗೂ ತಿರುಮಲರಾಯರನ್ನು ಯಾವ ಘರ್ಷಣೆಯೂ ಇಲ್ಲದೆ ಉಪಾಯಾಂತರವಾಗಿ ಕೈಸೆರೆ ಹಿಡಿಯುವುದು ಬೇಕಾಗಿತ್ತು. ಇದಕ್ಕೆ ಹೇಗಾದರೂ ಮಾಡಿ ಅವರನ್ನು ರಾಜಧಾನಿಗೆ ಕರೆಸಿಕೊಂಡು ಕೈಸೆರೆ ಹಿಡಿಯುವ ಆಲೋಚನೆ ಮಾಡಿದರು.

ರಾಮರಾಯನ ವಿದ್ರೋಹದ ಸಂಗತಿಯನ್ನು ಅಚ್ಯುತರಾಯನಿಗೆ ವರದಿ ಮಾಡಿದಾಗ ಅವನಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಸಲಕಂ ಸಹೋದರರ ಶಕ್ತಿ ಸಾಮರ್ಥ್ಯಗಳ ಬಗ್ಗೆ ಇದ್ದ ಅವನ ನಂಬಿಕೆ ಇಮ್ಮಡಿಸಿತು. ಇದರಿಂದ ಆ ಸಹೋದರರಿಗೆ ಹೊಸದೊಂದು ಕೋಡು ಮೂಡಿದಂತೆ ಆಯಿತು.

ರಾಮರಾಯನನ್ನು ರಾಜಧಾನಿಗೆ ಬರಮಾಡಿಕೊಂಡು, ಅವನ ವಿದ್ರೋ ಹಕ್ಕೆ ಶಿಕ್ಷೆ ವಿಧಿಸುವ ಕಾರ್ಯವನ್ನು ಸಲಕಂ ಸಹೋದರರಿಗೆ ವಹಿಸಿ ನಿಶ್ಚಿಂತ ನಾದನು ಸಾಮ್ರಾಟ್ ಅಚ್ಯುತರಾಯ.

ಆ ಸಹೋದರರಿಗೆ ಬೇಕಾಗಿದ್ದುದೂ ಇದೇ. ಕೃಷ್ಣದೇವರಾಯನ ರಾಣಿ ಯರೆಲ್ಲರ ವಿರುದ್ಧ, ಅವರ ಅಳಿಯಂದಿರನ್ನು ಕೆಣಕುವುದು ಅಪಾಯವೆಂದು ಅಚ್ಯುತರಾಯನಿಗೆ ತಿಳಿದಿತ್ತು. ಈಗ ಅವರನ್ನು ಹಿಡಿದು ಶಿಕ್ಷಿಸಲು ಸಮಂಜಸ ವಾದ ಕಾರಣ ಸಿಕ್ಕಿತ್ತು. ಅದಕ್ಕೆ ಬೇಕಾದ ಸಾಕ್ಷ್ಯ ಅವಳ ಬಳಿ ಇತ್ತು. ಈಗ ಸಾಮ್ರಾಜ್ಯದ ಜನತೆಯ, ಸಾಮಂತರ, ಮಾಂಡಲೀಕರ ದೃಷ್ಟಿಯಲ್ಲಿ ತಾವು ನ್ಯಾಯ ತೀರ್ಮಾನದ ಸೋಗುಹಾಕಿ, ಅವರ ಪ್ರಾಬಲ್ಯವನ್ನು ಮುರಿಯ ಬಹುದು – ಇಷ್ಟಪಟ್ಟರೆ ಉಗ್ರವಾಗಿ ಶಿಕ್ಷಿಸಬಹುದು ಆಗ ತಮ್ಮ ಎದುರು ನಿಲ್ಲು ವರೇ ಇರುವುದಿಲ್ಲವೆಂದು ಅಚ್ಯುತರಾಯನು ಈ ಬಾರಿ, ಧೈರ್ಯವಾಗಿ ರಾಮ

ರಾಯನನ್ನು ಸೆರೆಹಿಡಿಯಲು ಅನುಮತಿಕೊಟ್ಟಿದ್ದ. ಅಚ್ಯುತರಾಯನ ಬೆಂಬಲ ದೊರೆತುದೇ ತಡ, ಸಲಕಂ ಸಹೋದರರು, ರಾಮರಾಯ ಮತ್ತು ತಿರುಮಲ ರಾಯನನ್ನು ರಾಜಧಾನಿಗೆ ಕರೆಸಿಕೊಳ್ಳುವ ಸಂಚುಮಾಡಿದರು.

ತಾವು ಅವರನ್ನು ಹಿಂದಕ್ಕೆ ಬರಲು ತಿಳಿಸಿ ಪತ್ರಬರೆದರೆ ಇದರಿಂದ ಕಾರ್ಯ ಸಾಧಿಸುವುದಿಲ್ಲವೆಂದು ಅವರಿಗೆ ತಿಳಿದಿತ್ತು. ರಾಮರಾಯನಿಗೆ ಬೇಕಾದ ವ್ಯಕ್ತಿಗಳಿಂದ ಪತ್ರ ಬರೆಸಿ ಕರೆಸಿಕೊಳ್ಳುವುದೊಂದೇ ಅವರಿಗಿದ್ದ ಮಾರ್ಗ.

ಚಿನ್ನಾದೇವಿ, ತಿರುಮಲಾದೇವಿಯರಿಂದ ಈ ಕಾರ್ಯ ಸಾಧಿಸುತ್ತಿರಲಿಲ್ಲ. ಅವರಿಂದ ತಮಗೆ ಬೇಕಾದ ರೀತಿಯಲ್ಲಿ ಪತ್ರ ಬರೆಸಲು ಸಾಧ್ಯವಿರಲಿಲ್ಲ. ಅಂತೆಯೇ, ಅವರ ಪತ್ನಿಯರು, ತಿರುಮಲಾಂಬೆ, ವೆಂಗಡಾಂಬೆಯರಿಂದಲೂ ಈ ಕಾರ್ಯ ಸಾಧಿಸುವಂತಿರಲಿಲ್ಲ. ರಾಮರಾಯನ ಇಷ್ಟಮಿತ್ರರು ಯಾರೆಂದು ಆಲೋಚಿಸುತ್ತಿದಾಗ ನಗರರಕ್ಷಕನಾಗಿದ್ದ ಮುಕುಂದನಾಯಕನ ನೆನಪಾಯಿತು. ಅವರಿಗೆ.

ಸಲಕಂ ಸಹೋದರರಿಗೆ ಮುಕುಂದನಾಯಕನ ಪರಿಚಯ ಚೆನ್ನಾಗಿತ್ತು. ಅವನು ಆಗಾಗ್ಗೆ ನಗರ ರಕ್ಷಣೆಗೆ ಸಂಬಂಧಿಸಿದ, ಅನೇಕ ವಿಷಯಗಳಲ್ಲಿ ಅವರ ಸಲಹೆ ತೆಗೆದುಕೊಳ್ಳಲು ಬಂದು ಹೋಗುತ್ತಿದ್ದ. ಇಂದು ತಮ್ಮ ಕಾರ್ಯ ಸಾಧಿಸ ಬೇಕಾದ್ದರಿಂದ ಅವನನ್ನು ಕಾಣಲು ತಾವೇ ಹೊರಟರು.

ಆ ದಿನ ಮುಕುಂದನಾಯಕನು ಅಂದಿನ ಕೆಲಸವನ್ನು ಮುಗಿಸಿಕೊಂಡು ಮನೆಗೆ ಬಂದು ವಿಶ್ರಾಂತಿ ಅನುಭವಿಸುತ್ತಿದ್ದ. ಅವನ ಸೇವಕರು ಬಂದು ಸಲಕಂ ಸಹೋದರರು ಬಂದಿರುವ ಸುದ್ದಿಯನ್ನು ತಿಳಿಸಿದಾಗ ಅವನಿಗೆ ಗಾಬರಿಯೇ ಆಯಿತು. ಆದರೂ ಅವರನ್ನು ಸ್ವಾಗತಿಸಲು ಎದ್ದು ಹೊರಟ.

ಅವರ ನಗುಮುಖವನ್ನು ಕಂಡ ಕೂಡಲೇ ಅವನಿಗೆ ಸಮಾಧಾನವಾಯಿತು.

"ವಿಶ್ರಾಂತಿಯಲ್ಲಿದ್ದ ನಾಯಕರಿಗೆ ನಮ್ಮಿಂದ ತೊಂದರೆಯಾಗಿದ್ದರೆ ಕ್ಷಮಿಸಿ." ಎಂದ ಪೆದ್ದತಿರುಮಲ.

"ಅಮಾತ್ಯರೇ ಬಡವರ ಮನೆಗೆ ಭಾಗ್ಯಲಕ್ಷ್ಮಿ ಬಂದರೆ ತೊಂದರೆಯಾಗು ವುದೇ ?" ಎಂದು ಹೇಳಿ ನಕ್ಕು, ಅವರನ್ನು ಆದರದಿಂದ ಒಳಗೆ ಕರೆದುಕೊಂಡು ಹೋಗಿ ಸುಖಾಸನಗಳನ್ನು ತೋರಿಸಿದನು. ಅಲ್ಲಿದ್ದ ಮದ್ಯದ ಕಡೆ ಅವರ ಗಮನ ಹರಿಯಲು, ಮದ್ಯ, ಆ ಸಹೋದರರಿಗೆ ತ್ಯಾಜ್ಯವಲ್ಲವೆಂದು ತಿಳಿದಿದ್ದ ಅವನು, ಸುವರ್ಣ ಪಾತ್ರೆಗಳಲ್ಲಿ ಮದ್ಯವನ್ನು ತುಂಬಿ "ಗರೀಬನ ಸೇವೆ" ಎಂದನು.

"ಗರೀಬರ ಸುಖ, ಈಗ ಸಾಮ್ರಾಟರಿಗೆ ಇಲ್ಲ – ನೀವೇ ಸುಖಪುರುಷರು ನಿಮ್ಮ ಸುಖವನ್ನು ಕಂಡು ನಮಗೆ ಅಸೂಯೆಯಾಗುತ್ತಿದೆ."

" ಏಕೆ ಅಮಾತ್ಯರೇ ?"

" ನೀವು ದಿನವಿಡೀ ಕಷ್ಟ ಪಟ್ಟು ದುಡಿಯುತ್ತೀರಿ. ರಾತ್ರಿ ಮನೆಗೆ ಬಂದು ಸುಖ ಭೋಜನ ಮಾಡಿ, ಕಣ್ಣು ತುಂಬ ನಿದ್ರಿಸುತ್ತೀರಿ. ಅಮಾತ್ಯ ರಾದ ನಮಗೆ ಈ ಭಾಗ್ಯವಿಲ್ಲ! ನಾವು ಕಣ್ಣು ಮುಚ್ಚಿ ನಿಶ್ಚಿಂದೆಯಿಂದ ನಿದ್ರಿ ಸಲು ಸಾಧ್ಯವೇ ಇಲ್ಲ! ಇಲ್ಲದಿದ್ದರೆ, ಎಲ್ಲರೂ ನಿದ್ರಿಸುತ್ತಿರುವ ಈ ಹೊತ್ತಿನಲ್ಲಿ ನಿಶಾಚರರಂತೆ ಅಲೆಯುತ್ತಾ ನಿಮ್ಮನ್ನು ಹುಡುಕಿಕೊಂಡು ಬರುತ್ತಿದ್ದೆವೇ?"

" ಸದಾ ಸಾಮ್ರಾಜದ ಚಿಂತೆಯುಂಲ್ಲಿರುವ, ನಿಮ್ಮಂತಹ ಸ್ವಾಮಿನಿಷ್ಠ ಸೇವಕರಿಗೆ ಹೀಗಾಗುವುದು ಅತಿಶಯವಲ್ಲ ಅಮಾತ್ಯರೇ. ನಿಮ್ಮಂತಹ ಕರ್ತವ್ಯನಿಷ್ಠರು ಪ್ರಧಾನ ಅಮಾತ್ಯರಾಗಿರುವುದು ಸಾಮ್ರಾಜ್ಯದ ಪುಣ್ಯವೇ ಸರಿ! ಈಗ ತಾವು ಬಂದ ಕಾರ್ಯವೇನೆಂದು ತಿಳಿಯುಬಹುದೆ?"

" ನಿಮ್ಮಿಂದ ನಮಗೆ ಒಂದು ಸಹಾಯವಾಗಬೇಕಾಗಿತ್ತು."

" ಅಪ್ಪಣೆಯಾಗಲಿ!"

" ನೋಡಿ ನಾಯಕರೇ, ನೀವು ಇದುವರೆಗೆ ಸಾಮ್ರಾಜ್ಯ ನಿಷ್ಠ ಸೇವಕ ರಾಗಿ, ಸಾಮ್ರಾಜ್ಯಕ್ಕೆ ಅಮೂಲ್ಯವಾದ ಸೇವೆ ಸಲ್ಲಿಸಿದ್ದೀರಿ. ಇನ್ನು ಮುಂದೆ ನಿಮ್ಮಿಂದ ಇದಕ್ಕೂ ಅಮೂಲ್ಯವಾದ ಸೇವೆ ಸಲ್ಲಬೇಕಾಗಿದೆ."

" ನನ್ನಿಂದ ಯಾವ ಕಾರ್ಯವಾಗಬೇಕೆಂದು ತಿಳಿಸಿದರೆ ಅನುಕೂಲ."

" ಇದು ಅತ್ಯಂತ ಮಹತ್ವದ ಗುರುತರವಾದ ಕಾರ್ಯ. ಇದರಲ್ಲಿ ಯಶಸ್ವಿ ಯಾದರೆ ನೀವು ಒಂದೇ ರಾತ್ರಿಯಲ್ಲಿ ಶ್ರೀಮಂತರಾಗಬಹುದು. ಅಧಿಕಾರ ಸಂಪತ್ತುಗಳು ನಿಮ್ಮದಾಗುತ್ತದೆ. ನೀವು ರಾಜವೈಭವ ನಡೆಸಬಹುದು.

" ಅಮಾತ್ಯರು ನನ್ನ ಬಾಯಲ್ಲಿ ನಿರೂರಿಸುತ್ತಿದ್ದಾರೆ—"

" ನನ್ನ ಮಾತು ಅಕ್ಷರಶಃ ಸತ್ಯ—"

" ನನ್ನಿಂದ ಯಾವ ಕಾರ್ಯವಾಗಬೇಕು ?"

" ನೀವು ರಾಮರಾಯರಿಗೆ ಒಂದು ಪತ್ರ ಬರೆಯಬೇಕು."

" ಒಮ್ಮೆಲೆ ಸಹಸ್ರಾರು ಚೇಳುಗಳು ಕುಟುಕಿದಂತೆ, ಸಿಡಿಲೆರಗಿದಂತೆ ಅವ ನಿಗೆ ಭಾಸವಾಯಿತು. ರಾಮರಾಯರ ಹೆಸರು ಕೇಳುತ್ತಲೇ ಮುಖ ಬಿಳಿಚಿ ಕೊಂಡಿತು. ಎದೆ ಡವಡವ ಹಾರಿತು. ತಾನು ರಾಮರಾಯರೊಂದಿಗೆ ಪತ್ರ ವ್ಯವಹಾರವಿಟ್ಟುಕೊಂಡಿರುವ ಸಂಗತಿ ಸಲಕಂ ಸಹೋದರರಿಗೆ ತಿಳಿದು ಹೋಗಿರ ಬೇಕೆಂದು ಹೆದರಿದ. ಆದರೂ ತನ್ನ ಭಾವನೆಗಳನ್ನು ಬಯಲು ಮಾಡದೆ ಹೇಳಿದ.

" ನೀವು ಇಷ್ಟು ಅಲ್ಪಕಾರ್ಯಕ್ಕಾಗಿ ಇಷ್ಟು ದೂರ ಬರಬೇಕೆ? ಇದಕ್ಕಾಗಿ ಇಷ್ಟು ಪ್ರಾರ್ಥಿಸಬೇಕೆ? ಅಪ್ಪಣೆ ಕೊಡಿಸಿದ್ದರೆ ನಾನೇ ಬರುತ್ತಿದ್ದೆ."

" ಈ ಪತ್ರ ಅತ್ಯಂತ ಮಹತ್ವದ ಪತ್ರ. ಇದರ ಮೇಲೆ ಸಾಮ್ರಾಜ್ಯದ ಭವಿಷ್ಯ ನಿಂತಿದೆ." ಎಂದು ಹೇಳಿದಾಗ ಅವನಿಗೆ ನಿಜಕ್ಕೂ ಹೆದರಿಕೆಯಾಯಿತು. ಹಾಗಾದರೆ ಅವರು ಅಳಿಯ ರಾಮರಾಯರ ಜೀವಕ್ಕೆ ಗಂಡಾಂತರ ತರುವಂತಹ ಯಾವುದೋ ಪತ್ರವನ್ನು ತನ್ನಿಂದ ಬರೆಸಬಂದಿದ್ದಾರೆ. ಎಂದು ಅವನಿಗೆ ತಿಳಿಯದೆ ಹೋಗಲಿಲ್ಲ. ಈಗ ತಾನು ಏನು ಉತ್ತರ ಕೊಡಬೇಕು?

" ಈ ಕಾರ್ಯ ನಿಮ್ಮಿಂದ ಮಾತ್ರ ಸಾಧ್ಯ. ನಿಮ್ಮಲ್ಲಿ ರಾಮರಾಯರಿಗೆ ಬಹಳ ನಂಬಿಕೆ ವಿಶ್ವಾಸಗಳಿವೆ. ಈ ಕಾರ್ಯಕ್ಕೆ ನಿಮ್ಮನ್ನು ಪ್ರೇರೇಪಿಸಿ, ನಾವು ನಿಮ್ಮನ್ನು ತೊಂದರೆಗೆ ಒಳಪಡಿಸುತ್ತೇವೆಂದು ಖಂಡಿತ ತಿಳಿಯಬಾರದು. ಇದರಿಂದ ನಿಮಗೆ ಯಾವ ತೊಂದರೆಯೂ ಇಲ್ಲ....ನೀವು ಯಾವುದನ್ನೂ ಆಲೋಚಿಸಿ ಅಭಿಪ್ರಾಯವನ್ನು ತಿಳಿಸಿದರೆ ನಾವೇ ಅರಮನೆಗೆ ಕರೆದೊಯ್ಯುತ್ತೇವೆ."

" ಆಗಲಿ ಆಲೋಚಿಸಿ, ನಿಮಗೆ ತಿಳಿಸುತ್ತೇನೆ!"

" ಇದು ಆಲೋಚಿಸಿ ತಿಳಿಸುವಂತ ಕೆಲಸವೇ ?"

" ನಾನು ಸ್ಪಷ್ಟವಾಗಿ ಮಾತನಾಡುತ್ತೇನೆಂದು ಅಮಾತ್ಯರು ತಪ್ಪು ತಿಳಿಯಬಾರದು. ನಾನು ಅವರ ಪ್ರೀತಿ, ವಿಶ್ವಾಸ, ನಂಬಿಕೆಗಳಿಗೆ ಎಷ್ಟರ ಮಟ್ಟಿಗೆ ಪಾತ್ರನೋ ನನಗೆ ತಿಳಿಯದು. ನನ್ನ ಪತ್ರದಿಂದ ನೀವು ಅಪೇಕ್ಷಿಸಿದ ನೆರವು ದೊರೆಯದೆ ಹೋದರೆ ಎಂದು ಆಲೋಚಿಸುತ್ತಿದ್ದೇನೆ."

" ಆ ಬಗ್ಗೆ ನೀವು ಚಿಂತಿಸಬೇಕಾಗಿಲ್ಲ. ನಾವು ಸೂಚಿಸಿದಂತೆ ಒಂದು ಪತ್ರ ಬರೆದುಕೊಡಿ. ಇಲ್ಲಿಗೆ ನಿಮ್ಮ ಜವಾಬ್ದಾರಿ ಮುಗಿಯಿತು."

ಇನ್ನೂ ಏನನ್ನೋ ಯೋಚಿಸುತ್ತಿದ್ದ ನಾಯಕನನ್ನು ನೋಡಿ ಪೆದ್ದತಿರುಮಲನಿಗೆ ಅದೇನೆನಿಸಿತೋ, " ಇದು ನಿಮ್ಮ ವಿಶ್ರಾಂತಿಯ ವೇಳೆ. ನಿಮಗೆ ತೊಂದರೆ ಕೊಟ್ಟೆವು ಕ್ಷಮಿಸಿ....ಯಾವುದನ್ನೂ ಆಲೋಚಿಸಿ ನಾಳೆ ನಮಗೆ ತಿಳಿಸಿದರೂ ಸರಿ " ಎಂದು ಹೇಳಿ ಅಲ್ಲಿಂದ ಬೀಳ್ಕೊಂಡು ಹೊರಟುಹೋದರು.

ಅವರು ಹೋಗುವ ಮುನ್ನ ಅವನ ಚಲನವಲನಗಳನ್ನು ವರದಿಮಾಡಲು ಅವನ ಮೇಲೆ ಗೂಢಚಾರರನ್ನು ಹಾಕಲು ಮರೆಯಲಿಲ್ಲ.

ರಾಮರಾಯರ ಜೀವಕ್ಕೆ ಗಂಡಾಂತರ ತರುವಂತಹ. ಯಾವುದೋ ಕಾರ್ಯಕ್ಕೆ ತನ್ನನ್ನು ಉಪಯೋಗಿಸಿಕೊಳ್ಳುತ್ತಿರುವರೆಂದು ಅವನಿಗೆ ಭಾಸವಾಯಿತು. ಸಲಕಂ ಸಹೋದರರ ಸಂಚಿಗೆ ತಾನು ಬಲಿಯಾಗಬಾರದು— ತನ್ನನ್ನೇ ನಂಬಿದ ಸ್ವಾಮಿಗೆ ದ್ರೋಹ ಬಗೆಯಬಾರದು. ಎಂದೆನಿಸಿತು. ಆದರೆ ಪತ್ರದ ಸಂದೇಶ ಖಚಿತವಾಗಿ ತಿಳಿಯುವ ವರೆಗೆ ಯಾವ ನಿರ್ಧಾರಕ್ಕೂ ಬರುವಂತಿರಲಿಲ್ಲ. ಒಂದು ವೇಳೆ ತನ್ನ ಪತ್ರದಿಂದ ರಾಮರಾಯನಿಗೆ ಯಾವ ವಿಪತ್ತೂ ಸಂಭವಿಸದ ತನಗೆ ಅಧಿಕಾರ ಸಂಪತ್ತು ದೊರೆಯುವುದಾದರೆ,

ಸಮ್ಮತಿಸಬಾರದೇಕೆಂದಿತು. ಇನ್ನೊಂದು ಮನಸ್ಸು, ಸಲಕಂ ಸಹೋದರರೊಂದಿಗೆ, ತಾನು ಎಚ್ಚರಿಕೆಯಿಂದಿದ್ದು, ರಾಮರಾಯರಿಗೆ ಯಾವ ದ್ರೋಹವೂ ತನ್ನಿಂದ ನಡೆಯದಂತೆ ನೋಡಿಕೊಳ್ಳಬೇಕು. ಸಾಧ್ಯವಾದರೆ, ಅವರ ಸಂಚು ತಿಳಿದು, ರಾಮರಾಯರನ್ನು ಬರಲಿರುವ ವಿಪತ್ತಿನಿಂದ ಪಾರುಮಾಡಬೇಕು ಎಂದು ನಿಶ್ಚಯಿಸಿದ.

ತನ್ನ ವಿಷಯದಲ್ಲಿ ಸಲಕಂ ಸಹೋದರರಿಗೆ ಅನುಮಾನ ಬರಬಾರದೆಂದು ಮಾರನೆಯ ದಿನ ಅವರ ಬಳಿಗೆ ತಾನೇ ಹೋದ.

ಸಲಕಂ ಸಹೋದರರು ತಮ್ಮನ್ನು ಕಾಣಲು ಬಂದ ಮುಕುಂದನಾಯಕನನ್ನು ತಮ್ಮ ರೊಟ್ಟಿ ಜಾರಿ ತುಪ್ಪದಲ್ಲಿ ಬಿತ್ತೆಂದು ಹರ್ಷಿಸಿದರು. ಅವನನ್ನು ವಿಶ್ವಾಸದಿಂದ ಬರಮಾಡಿಕೊಂಡು ಆದರದಿಂದ ಸತ್ಕರಿಸಿದರು. ಅನಂತರ ತಮ್ಮ ಒಳಕೋಣೆಗೆ ಕರೆದುಕೊಂಡು ಹೋಗಿ, ಯಾರನ್ನೂ ಒಳಗೆ ಬಿಡದಂತೆ, ಸೇವಕರಿಗೆ ಕಟ್ಟುಮಾಡಿ, ಮುಕುಂದನಾಯಕನಿಗೆ ಲೇಖಣಿ, ಕಾಗದಗಳನ್ನು ತಂದಿತ್ತರು.

ನಾಯಕನಿಗೆ ಗಾಬರಿಯಾಯಿತು. ಈಗಲೇ ಪತ್ರ ಬರೆಯಬೇಕಾಗಬಹುದೆಂದು ಅವನು ನಿರೀಕ್ಷಿಸಿರಲಿಲ್ಲ. ತನಗಿಂತಲೂ ಸಲಕಂ ಸಹೋದರರು ಬುದ್ಧಿವಂತರೆಂದು ತಿಳಿದು ಅವನಿಗೆ ಯೋಚನೆಗಿಟ್ಟುಕೊಂಡಿತು.

ಇದನ್ನು ಕಂಡು ಪೆದ್ದ ತಿರುಮಲನು,

"ನಾಯಕರು ಏನೋ ಕನಸು ಕಾಣುವಂತಿದೆ" ಎಂದನು.

"ಏನು ಬರೆಯಬೇಕೆಂದು ತಿಳಿಯದೆ ಸುಮ್ಮನೆ ಕುಳಿತೆ!" ಎಂದ ತನ್ನ ಭಾವನೆಗಳನ್ನು ತೋರಗೊಡದೆ.

"ಅದನ್ನು ನಾವು ತಿಳಿಸುತ್ತೇವೆ. ಈಗ ಒಪ್ಪಂದ ಮುಗಿಸಿಬಿಡೋಣ."

"ಯಾವ ಒಪ್ಪಂದ?"

"ಈಗ ನೀವು ನಾವು ಹೇಳಿದಂತೆ ಪತ್ರ ಬರೆದುಕೊಡಬೇಕು – ರಾಮರಾಯರು ರಾಜಧಾನಿಗೆ ಬರುವವರೆಗೆ ನೀವು ನಿರ್ಬಂಧದಲ್ಲಿ ಇರಬೇಕು – ರಾಮರಾಯರು ಕೈಗೆ ಸಿಕ್ಕಿದ ಮೇಲೆ— ನಿಮಗೆ ದಂಡನಾಯಕ ಪದವಿ, ಐವತ್ತು ಸಹಸ್ರವರಹ – ಮತ್ತು ಇತರ ಬಹುಮಾನಗಳನ್ನು ಕೊಡಲಾಗುತ್ತದೆ– ಇದು ನಿಮಗೆ ಸಮ್ಮತವೇ?"

ಈ ಸಂಗತಿಯನ್ನು ಕೇಳಿ ಅವನಿಗೆ ವ್ಯಾಕುಲವಾಯಿತು.

"ಏಕೆ? ಹಣ ಸಾಲದೆಂದು ನಿಮ್ಮ ಅಭಿಪ್ರಾಯವೇ? ಹಾಗಾದರೆ ಮತ್ತೊಂದು ಸಾವಿರಹೆಚ್ಚಿಗೆ ಕೊಡೋಣ!"

"ನನಗೆ ನಿಮ್ಮ ಅಧಿಕಾರವೂ ಬೇಡ, ನಿಮ್ಮ ಹಣವೂ ಬೇಡ – ನನ್ನಿಂದ

ಈ ಹೇಯ ಕಾರ್ಯ ಸಾಧ್ಯವಿಲ್ಲ!" ಎಂದ ಮುಕುಂದನಾಯಕ.

ಈ ಮಾತು ಕೇಳಿ ಸಲಕಂ ಸಹೋದರರು ಚಕಿತರಾದರು. ತಮ್ಮ ಬೆರಗು ಮಾತುಗಳಿಗೆ ಬಲಿಯಾಗಿ, ತಮ್ಮ ಬಲೆಯಲ್ಲಿ ಬಿದ್ದನೆಂದು ತಿಳಿದಿದ್ದ ಅವರಿಗೆ, ಈಗ ಒಮ್ಮೆಲೆ ಅದರಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುವುದನ್ನು ಕಂಡು ಅಚ್ಚರಿಯಾಯಿತು.

"ನಾಯಕರೇ ನೀವು ಭಾವೋದ್ವೇಗದಲ್ಲಿ ದುಡುಕವೆ ಚೆನ್ನಾಗಿ ಆಲೋಚಿಸಿ ನಿಮ್ಮ ನಿರ್ಧಾರವನ್ನು ತಿಳಿಸಿ!"

"ನಾನು ಚೆನ್ನಾಗಿ ಆಲೋಚಿಸಿದ್ದೇನೆ! ನನಗೆ ಅನ್ನವಿಟ್ಟು ಕಾಪಾಡಿದ ದಣಿಗೆ ದ್ರೋಹ ಬಗೆಯಲಾರೆ!"

"ನೀವು ಸಾಮ್ರಾಜ್ಯದ ಹಿರಿಯ ಅಧಿಕಾರಿಗಳು ಎಂಬುದನ್ನು ಮರೆಯಬಾರದು. ನೀವು ಪ್ರಭುಗಳ ಉಪ್ಪು ತಿನ್ನುತ್ತಿದ್ದೀರಿ. ಈಗ ನಿಮ್ಮ ಧಣಿ ಸಾಮ್ರಾಟರೇ ಹೊರತು ಅನ್ಯರಲ್ಲ!"

"ನನ್ನನ್ನು ಸಾಕಿ ಸಲಹಿದ ಧಣಿಯ ವಿರುದ್ಧ ನಾನು ಕೈಮಾಡಲಾರೆ!"

"ರಾಷ್ಟ್ರದ ಹಿತಕ್ಕಾಗಿ ನೀವು ಈ ಅಹಿತ ಕಾರ್ಯ ಮಾಡಬೇಕಾಗಿದೆ!"

"ರಾಷ್ಟ್ರದ ಹಿತಕ್ಕಾಗಿ ನಾನು ಸ್ವಾಮಿದ್ರೋಹಿಯಾಗಲಾರೆ!"

"ನಿಮ್ಮ ಸ್ವಾಮಿಯೇ ರಾಜದ್ರೋಹಿಯಾಗಿದಾರೆ. ಅವರು ಸಾಳ್ವ ಸೆಲ್ಲಪ್ಪನಾಯಕರೊಂದಿಗೆ ಸೇರಿಕೊಂಡು, ಸಾಮ್ರಾಜ್ಯದ ವಿರುದ್ಧ ಪಿತೂರಿ ನಡೆಸಿದ್ದಾರೆ–ಅಂತಹವರಿಗೆ ಬಗೆದ ದ್ರೋಹ ದ್ರೋಹವೆನಿಸಿಕೊಳ್ಳದೆ–ದೇಶಸೇವೆ ಎನಿಸಿಕೊಳ್ಳುತ್ತದೆ."

"ನನ್ನನ್ನು ಸಾಕಿ ಸಲಹಿ ಈ ಸ್ಥಿತಿಗೆ ತಂದ ದಣಿಯನ್ನು ನಂಬಿಸಿ ದ್ರೋಹ ಬಗೆಯಲಾರೆ. ಆತ್ಮವಂಚನೆ ಮಾಡಿಕೊಳ್ಳಲಾರೆ!"

"ಈಗ ನೀವು ಸಾಮ್ರಾಟರ ಸೇವಕರು–ಅವರು ಮಾಡಿದ ಆಜ್ಞೆಯನ್ನು ಪಾಲಿಸುವುದಷ್ಟೇ ನಿಮ್ಮ ಈಗಿನ ಕೆಲಸ."

"ನಾನು ನನ್ನ ಕೆಲಸಕ್ಕೆ ಇಂದೇ ರಾಜಿನಾಮೆಯಿತ್ತು, ರಾಜಋಣದಿಂದ ಬಿಡುಗಡೆಯಾಗುತ್ತೇನೆ."

"ನೀವು ಸಾಮ್ರಾಟರ ಆಜ್ಞೆಯನ್ನು ತಿರಸ್ಕರಿಸಿದರೆ ನೀವೂ ರಾಜದ್ರೋಹಿಯಾಗುತ್ತೀರಿ ಎಂಬುದನ್ನು ಮರೆಯಬೇಡಿ."

"ನಾನು ರಾಜದ್ರೋಹಿಯಾಗಿ ಶಿಕ್ಷೆಯನ್ನು ಸಂತೋಷದಿಂದ ಅನುಭವಿಸುತ್ತೇನೆಯೇ ಹೊರತು ನಂಬಿದ ಸ್ವಾಮಿಗೆ ದ್ರೋಹ ಬಗೆಯಲಾರೆ."

"ಈ ಮಾತು ಖಂಡಿತವೇ?"

"ಹೌದು!"

“ ನೀವು ನನುಗೆ ಕೊಟ್ಟಿದ್ದ ವಚನವೇನಾಯಿತು ?”

“ ನನ್ನ ದಣಿಗೆ ಕೇಡುಂಟುಮಾಡುವ ಯಾವ ವಚನವನ್ನೂ ನಾನು ಪಾಲಿಸಲಾರೆ.”

“ ಇದೇ ನಿಮ್ಮ ಅಂತಿಮ ನಿರ್ಧಾರವೊ ?”

“ ಹೌದು !”

“ ನೀವು ನಾವು ಹೇಳಿದಂತೆ ನಡೆಯದಿದ್ದರೆ ನಾವು ನಿಮ್ಮನ್ನು ಬಲಾತ್ಕರಿಸ ಬೇಕಾಗುತ್ತದೆ.”

“ ಬಲಾತ್ಕಾರದಿಂದ ಈ ಪತ್ರವನ್ನು ಬರೆಸಲು ಸಾಧ್ಯವಿಲ್ಲ!”

“ಹಾಗಾದರೆ ನೀವು ಒಳ್ಳೆಯ ಮಾತಿನಲ್ಲಿ ಹಾದಿಗೆ ಬರುವುದಿಲ್ಲ. ನಿಮ್ಮನ್ನು ಹಿಂಸಿಸಿ ನರಳಿಸಿ, ಪತ್ರ ಬರೆಸಬಾರದೆಂದು ನಾವು ಇಷ್ಟೆಲ್ಲಾ ಹೇಳಬೇಕಾ ಯಿತು. ನೀವು ನಮ್ಮ ಮಾತನ್ನು ಉಪೇಕ್ಷಿಸಿದರೆ ನಿರ್ವಾಹವಿಲ್ಲದೆ ನಿಮಗೆ ಚಿತ್ರಹಿಂಸೆ ಕೊಡಬೇಕಾಗುತ್ತದೆ.”

“ ನನ್ನನ್ನು ಕೊಂದರೂ ನೀವು ಅಪೇಕ್ಷಿಸುವ ಹೇಯಕೃತ್ಯ ನಡೆಸುವು ದಿಲ್ಲ !”

“ ಇದೇ ನಿಮ್ಮ ಕಡೆಯ ಮಾತೋ ?”

“ ಹೌದು !”

ಅವರು ಇಷ್ಟೆಲ್ಲಾ ಹೇಳಿದುದೇ ಹೆಚ್ಚಾಯಿತು. ಅವರಿಗೆ ಮುಕುಂದ ನಾಯಕನ ಉತ್ತರದಿಂದ ಭಯಂಕರ ಕೋಪ ಬಂತು. ಅವರು ಕೆರಳಿ, ಮುಕುಂದನಾಯಕನಿಗೆ ಸರಿಯಾದ ಬುದ್ಧಿ ಕಲಿಸಲು ಅಲ್ಲೇ ಇದ್ದ ತಮ್ಮ ಆಪ್ತ ಭಂಟನಾದ ಹನುಮನಾಯಕನಿಗೆ ಆಜ್ಞೆಮಾಡಿ, ಅವನಿಗೆ ಮುಕುಂದನಾಯಕ ನನ್ನು ಒಪ್ಪಿಸಿ ಹೊರಟುಹೋದರು. ಹೋಗುವಾಗ “ ನೀವು ಮನಸ್ಸನ್ನು ಬದ ಲಾಯಿಸಿದ ಕೂಡಲೇ ನಮಗೆ ಸುದ್ದಿ ತಿಳಿಸಿ, ನಾವು ಬರುತ್ತೇವೆ. ನಮ್ಮ ಹಿತವಚನವನ್ನು ದುಡುಕದೆ ಆಲೋಚಿಸಿ ” ಎಂದು ಎಚ್ಚರಿಸಿದರು.

ಹನುಮನಾಯಕನು, ಮುಕುಂದನಾಯಕನನ್ನು ದುರುದುರನೆ ನೋಡಿ, ತನ್ನ ಅನುಚರರಿಗೆ, ಅವನನ್ನು ಸೆರೆಯಲ್ಲಿಡಲು ಆಜ್ಞೆ ಮಾಡಿದ. ಅದರಂತೆ ಅವನನ್ನು ಸೆರೆಮನೆಗೆ ಒಯ್ಯಲಾಯಿತು

ಅಲ್ಲಿ ಅವನಿಗೆ ಕಾದಿದ್ದ ಶಿಕ್ಷೆ ಅವನು ಊಹಿಸಿದ್ದಕ್ಕಿಂತಲೂ ಘೋರವಾ ಗಿತ್ತು. ಉಗುರುಗಳ ಸಂದಿಗೆ ಸೂಜಿ ಚುಚ್ಚಿ ನೋಡಿದರು. ಇದಕ್ಕೆ ಮುಕುಂದ ನಾಯಕನು ಹೆದರಲಿಲ್ಲ. ಅವನನ್ನು ವಿವಸ್ತ್ರಗೊಳಿಸಿ—ಛಡಿಯಿಂದ ಮೈಯೆಲ್ಲಾ ಗಾಯಗೊಳಿಸಿ ರಕ್ತ ಸೋರುವಂತೆ ಹೊಡೆದರು. ಇದರಿಂದಲೂ ಅವನು ಪತ್ರ ಬರೆಯಲು ಸಮ್ಮತಿಸಲಿಲ್ಲ. ಆ ಪಾಪಿಗಳು ಇಷ್ಟಕ್ಕೆ ಸುಮ್ಮನಾಗಲಿಲ್ಲ.

ಆವನ ಚರ್ಮ ಸುಲಿಸಿ ಕುದಿಯುವ ಎಣ್ಣೆಯಲ್ಲಿ ಅದ್ದುವ ನಿಶ್ಚಯ ಮಾಡಿದರು. ಇವನ್ನು ಆ ಯಮಕಿಂಕರರು ತಿಳಿಸಿದಾಗ, ಅವರು ತನ್ನನ್ನು ಕೊಲ್ಲದೆ ಬಿಡುವುದಿಲ್ಲವೆಂದು ಮುಕುಂದನಾಯಕನಿಗೆ ಸ್ಪಷ್ಟವಾಯಿತು. ಆಗ ಅವನಿಗೆ ಒಂದು ಆಲೋಚನೆ ಹೊಳೆಯಿತು. ಒಮ್ಮೆ ತಾನು ಉಳಿದರೆ, ಅನಂತರ ತನ್ನ ದಣಿಯನ್ನು ಗಂಡಾಂತರದಿಂದ ಪಾರುಮಾಡಲು ಸಾಧ್ಯವಾದೀತು ಎಂದು ಆಲೋಚಿಸಿ, ಬದುಕಲು ಇದ್ದ ಒಂದೇ ಮಾರ್ಗ ಸಲಕಂ ಸಹೋದರರು ಕೋರಿದಂತೆ ಪತ್ರ ಬರೆದುಕೊಡಲು ನಿಶ್ಚಯಿಸಿದನು.

ಈ ನಿಶ್ಚಯವನ್ನು ಕೇಳಿ ಸಲಕಂ ಸಹೋದರರು ಸಂತೋಷಿಸಿದರು. ಅವರು ಮುಕುಂದನಾಯಕನನ್ನು ಕಟುಕರ ಕೈಯಿಂದ ಉಳಿಸಿ, ತಮ್ಮ ಬಳಿಗೆ ಕರೆಸಿಕೊಂಡು, ಅವನ ಬಗ್ಗೆ ಸಹಾನುಭೂತಿ ತೋರಿಸಿ ತಾವು ಹೇಳಿದಂತೆ ಪತ್ರ ಬರೆಯಲು ತಿಳಿಸಿದರು.

ಅದರಂತೆ ಮುಕುಂದನಾಯಕನು ಪತ್ರ ಬರೆದು ಸಲಕಂ ಸಹೋದರರ ಕೈಗಿತ್ತು ಅದನ್ನು ಅವರು ಓದಿಕೊಂಡರು.

ಮಾನ್ಯರಾದ ರಾಮಭೂಪಾಲರ ಸಮುಕ್ಷಮಕ್ಕೆ

ಸೇವಕನಾದ ಮುಕುಂದನಾಯಕನು ಮಾಡಿಕೊಳ್ಳುವ ವಿನಂತಿ. ಏನೆಂದರೆ,

ಕಂಚಿ ಪಟ್ಟಣ ವಶವಾದ ಸಂಗತಿ ತಿಳಿದು ಸಂತೋಷವಾಯಿತು. ಆದರೆ ಸೆಲ್ಲಪ್ಪನಾಯಕನು ನಿಮಗೆ ದೊರೆಯದೆ ಹೋದುದಕ್ಕೆ ವಿಷಾದವಾಯಿತು. ಇಂದಲ್ಲ ನಾಳೆ ನಿಮಗೆ ಸೆಲ್ಲಪ್ಪನಾಯಕನ ಮೈತ್ರಿ ದೊರೆತೇ ದೊರೆಯುತ್ತದೆ. ಆದಿನ ಬೇಗ ಬರಲಿ ಎಂದು ಆಶಿಸುತ್ತೇನೆ.

ಈಗ ಬರೆಯುವ ವಿಶೇಷ ಸಂಗತಿ ಏನೆಂದರೆ ಸಾಮ್ರಾಟರ ವಿರುದ್ಧ ಸಲಕಂ ಸಹೋದರರು, ಯಾವುದೋ ರಹಸ್ಯ ಪಿತೂರಿಯಲ್ಲಿ ತೊಡಗಿರುವಂತಿದೆ. ಅವರನ್ನು ಕೊಲೆ ಮಾಡಿ ಸಿಂಹಾಸನವನ್ನು ದುರಾಕ್ರಮಿಸಬೇಕೆಂದು ಸಂಚು ನಡೆಸುತ್ತಿದ್ದಾರೆ. ಅವರ ಈ ಸಂಚು ಸಫಲವಾದರೆ, ಸಾಮ್ರಾಜ್ಯಕ್ಕೆ ಗಂಡಾಂತರ. ಆದುದರಿಂದ ನೀವು ಕೂಡಲೇ ಇಲ್ಲಿಗೆ ಹೊರಟು ಬರಬೇಕೆಂದು, ಚಿನ್ನಾದೇವಿ, ತಿರುಮಲಾದೇವಿಯರು ಆಶಿಸಿದ್ದಾರೆ. ಈಗ ಅವರ ಜೀವಕ್ಕೂ ಗಂಡಾಂತರ ತಪ್ಪಿಲ್ಲ.

ಈ ಪತ್ರವನ್ನು ಕಂಡಕೂಡಲೇ ಎಷ್ಟು ಕೆಲಸವಿದ್ದರು ಬಿಟ್ಟು ಸಹೋದರರೊಡನೆ ಬರುವಿರೆಂದು ನಂಬಿದ್ದೇನೆ.

ಇಂತು ನಿಮ್ಮ ಪಾದಸೇವಕ,

ಮುಕುಂದನಾಯಕ

ಈ ಪತ್ರವನ್ನು ಒಯ್ದು ರಾಮರಾಯನಿಗೆ ಮುಟ್ಟಿಸಲಾಯಿತು. ಅಲ್ಲಿಯ ವರೆಗೆ ಮುಕುಂದನಾಯಕನನ್ನು ಬಂಧನದಲ್ಲಿಡಲಾಯಿತು.

ರಾಮರಾಯ ಈ ಪತ್ರವನ್ನು ಓದಿಕೊಂಡು ಚಿಂತೆಗೀಡಾದ. ಈ ಹಿಂದೆ ರಾಜಧಾನಿಯಿಂದಬರುತ್ತಿದ್ದ ಪತ್ರಗಳೇ ಒಂದು ಬಗೆಯಾಗಿದ್ದವು. ಈ ಪತ್ರವೇ ಒಂದು ಬಗೆಯಾಗಿತ್ತು. ಮುಕುಂದನಾಯಕನು ತನ್ನ ಪತ್ರದಲ್ಲಿ ಅವರನ್ನು ಹುರಿದುಂಬಿಸುತ್ತಿದ್ದು, ಈಗ ಹಠಾತ್ತನೆ ಭಯೋತ್ಪಾದ ಪತ್ರ ಬರೆದಿದ್ದ. ಆ ಪತ್ರದಲ್ಲಿನ ಸಂಗತಿಗಳು, ಗಾಬರಿಯನ್ನುಂಟುಮಾಡಿದವು. ಈ ಸಂಗತಿಗಳೆಲ್ಲವೂ ನಿಜವಾದರೆ ಸಾಮ್ರಾಜ್ಯಕ್ಕೆ ವಿಪತ್ತು ಖಂಡಿತ. ಇದನ್ನು ತಪ್ಪಿಸಲು ತಮ್ಮ ಇರವು ಅವಶ್ಯಕ, ತಾನು ಕೂಡಲೇ ರಾಜಧಾನಿಗೆ ಹಿಂದಿರುಗದಿದ್ದರೆ ರಾಜಕುಟುಂಬ ತೊಂದರೆಗೀಡಾಗಬಹುದು ಎಂದು ಯೋಚಿಸಿ, ಕೂಡಲೇ ತಿರುಮಲ ರಾಯನೊಡನೆ ಯಾರಿಗೂ ತಿಳಿಸದೆ ಸೈನ್ಯದ ವ್ಯವಸ್ಥೆ ಮಾಡಿ ಕೆಲವೇ ದಿನಗಳ ಪ್ರಯಾಣದಿಂದ ವಿಜಯನಗರವನ್ನು ತಲುಪಿದರು. ಅವರು ಇನ್ನೇನು ನಗರ ವನ್ನು ಪ್ರವೇಶಿಸಬೇಕು, ಅಷ್ಟರಲ್ಲಿ ಅಚಾತುರ್ಯ ನಡೆಯಿತು.

ಬಂಧನದಲ್ಲಿದ್ದ ಮುಕುಂದನಾಯಕನು ಹೇಗೋ ತಪ್ಪಿಸಿಕೊಂಡು ಬಂದು ಸಲಕಂ ತಿರುಮಲ ಸಹೋದರರ ಸಂಚು ತಿಳಿಸಿದನು. ಇನ್ನು ಅಲ್ಲೇ ಉಳಿದರೆ ಅಪಾಯ ಬರಬಹುದೆಂದು ಹೆದರಿ ಮೂವರೂ ಹಠಾತ್ತನೆ ಅಲ್ಲಿಂದ ಕಣ್ಮರೆ ಯಾದರು. ಅವರು ಎಲ್ಲಿಗೆ ಹೋದರೆಂದು ಯಾರಿಗೂ ತಿಳಿಯದಾಯಿತು!

ಸಲಕಂ ಸಹೋದರರಿಗೆ ರಾಮರಾಯನು ವಿಜಯನಗರದ ಹೊರವಲ ಯಕ್ಕೆ ಬಂದು, ತಮ್ಮ ಸಂಚನ್ನು ಹೇಗೋ ತಿಳಿದು ತಮ್ಮ ಕೈಗೆ ಸಿಕ್ಕದೆ ಪಲಾ ಯನವಾದ ಸಂಗತಿಯನ್ನು ಕೇಳಿ, ರೋಷದಿಂದ ಹಲ್ಲು ಕಡಿದರು. ಅವರು ತಪ್ಪಿಸಿಕೊಂಡು ಹೋಗಲು ಮುಕುಂದನಾಯಕನೇ ಕಾರಣನೆಂದು, ಅವನ ಮೇಲೆ ಭಯಂಕರ ಕೋಪ ಉಂಟಾಯಿತು. ಈಗ ಬೇರೇನೂ ಮಾಡಲಾಗದೆ ರಾಮರಾಯ ಮತ್ತು ತಿರುಮಲರಾಯರ ಮೇಲಿನ ಸಿಟ್ಟನ್ನು ಚಿನ್ನಾದೇವಿ, ತಿರು ಮಲಾದೇವಿ, ಹಾಗೂ ಅವರ ಪತ್ನಿಯರ ಮೇಲೆ ತೀರಿಸಿಕೊಂಡು ಅವರನ್ನು ಸೆರೆ ಯಲ್ಲಿಟ್ಟರು.

೧೧

ರಾಮರಾಯನು ತಿರುಮಲರಾಯನೊಂದಿಗೆ ಓಡಿಹೋದ ಮೇಲೆ, ತಂಜಾ ವೂರಿನಲ್ಲಿದ್ದ ಅವರ ಸೈನ್ಯ ಶತ್ರುಪಕ್ಷಕ್ಕೆ ಸೇರಿಕೊಂಡು, ತಮ್ಮ ಮೇಲೆ ದಂಗೆ ಏಳುವ ಮುನ್ನ ಅದನ್ನು ಹತೋಟಿಗೆ ತರುವುದು ಸಲಕಂ ಸಹೋದರರ ಪ್ರಥಮ ಕಾರ್ಯವಾಗಿತ್ತು. ಅಲ್ಲದೆ ಸೆಲ್ಲಪ್ಪನಾಯಕನು ತಂಜಾವೂರಿನಿಂದ ತಲೆತಪ್ಪಿಸಿ ಕೊಂಡು, ತಿರುವೇದಿಯ ಅರಸ ತುಂಬುಚ್ಚಿನಾಯಕನ ಆಶ್ರಯಕ್ಕೆ ಹೋಗಿ

ರುವ ವರ್ತಮಾನ ಬಂದಿತ್ತು. ಆದರ ಬೆನ್ನಿಗೆ ಈ ಚೋಳ, ಚೇರ ವಿದ್ರೋಹಿಗಳಿಬ್ಬರೂ ಸೇರಿಕೊಂಡು ನೆರೆಯ ಪಾಂಡ್ಯರ ಮೇಲೆ ಧಾಳಿಯಿಟ್ಟು ಅಲ್ಲಿನ ರಾಜನಾದ, ಚಂದ್ರಶೇಖರವರ್ಮ ಎಂಬುವನನ್ನು ಓಡಿಸಿ, ಆ ರಾಜ್ಯವನ್ನು ತಾವೇ ಆಕ್ರಮಿಸಿಕೊಂಡಿದ್ದರು. ಚಂದ್ರಶೇಖರಪಾಂಡನು ತಲೆ ತಪ್ಪಿಸಿಕೊಂಡು ಹೋಗಿದ್ದನು. ಅವನು ಮೊದಲಿನಿಂದಲೂ ವಿಜಯನಗರದ ಮಿತ್ರನಾಗಿದ್ದನು. ಅಂತಹವನು ವಿದ್ರೋಹಿಗಳ ಕಾಟದಿಂದ ದೇಶ ತ್ಯಾಗ ಮಾಡಬೇಕಾದ ಪ್ರಸಂಗ ಬಂದಿತ್ತು.

ಇಂತಿರುವಲ್ಲಿ ಪಾಂಡ್ಯರಾಜನು ವಿಜಯನಗರಕ್ಕೆ ಬಂದು ತನ್ನ ರಾಜ್ಯವನ್ನು ತನಗೆ ಮತ್ತೆ ದೊರಕಿಸಿಕೊಡಲು ಅಚ್ಯುತರಾಯನಲ್ಲಿ ಮೊರೆಯಿಟ್ಟನು.

"ಪ್ರಭು, ಆ ದುರುಳ, ಚೇರ, ಚೋಳರಿಂದ ನಮಗೆ ಉಳಿಗಾಲವಿಲ್ಲವಾಗಿದೆ. ಸಾಮ್ರಾಜ್ಯದ ವಿರುದ್ಧ ದಂಗೆ ಎದ್ದಿರುವ ಅವರಿಬ್ಬರು ಸಾಮ್ರಾಜ್ಯ ಮಿತ್ರನಾಗಿದ್ದ ನನ್ನ ಮೇಲೆ ಸೇಡು ತೀರಿಸಿಕೊಳ್ಳಲು, ನನ್ನನ್ನು ರಾಜ್ಯಭ್ರಷ್ಟನಾಗಿಸಿ, ನನ್ನ ಪತ್ನಿ ಪುತ್ರರನ್ನು ಸೆರೆಯಲ್ಲಿಟ್ಟಿದ್ದಾರೆ. ಇವರನ್ನು ಬಿಡಿಸಿಕೊಟ್ಟು ರಕ್ಷಿಸಬೇಕು." ಎಂದು ಪ್ರಾರ್ಥಿಸಿದನು.

ಹಿಂದೆ ಒಂದು ಕಾಲದಲ್ಲಿ ಚಕ್ರವರ್ತಿಯ ಬಿರುದು ಪಡೆದಿದ್ದ ಪಾಂಡ್ಯರಾಜನು, ರಾಜ್ಯಕೋಶ ಪತ್ನೀ ಪುತ್ರರನ್ನು ಕಳೆದುಕೊಂಡು ಆರ್ತನಾಗಿ ಮೊರೆಯಿಡುವುದನ್ನು ಕೇಳಿ ಅಚ್ಯುತರಾಯನ ಮನಸ್ಸು ಕರಗಿತು – ಎಂತಹ ಸನ್ಮಿತ್ರನಿಗೆ ವಿದ್ರೋಹಿಗಳಿಂದ ಎಂತಹ ಸ್ಥಿತಿ ಒದಗಿತು ಎಂದು ಕೋಪ ಬಂದಿತು.

"ಪಾಂಡ್ಯರಾಜರೇ ನೀವು ಭಯಪಡಬೇಡಿ, ಇದುವರೆಗೆ ಸುಮ್ಮನೆ ಬಿಟ್ಟಂತೆ ಆ ದ್ರೋಹಿಗಳನ್ನು ಇನ್ನು ಸುಮ್ಮನೆ ಬಿಡಲಾಗದು. ಅವರು ಈಗಾಗಲೇ ಬಹಳ ಸೊಕ್ಕಿದ್ದಾರೆ – ಅವರ ಉಪಟಳ ಸಹಿಸಲಸಾಧ್ಯವಾಗಿದೆ. ಅವರ ದಂಗೆಯನ್ನು ಅಡಗಿಸಿ, ಅವರನ್ನು ಕೈಸೆರೆಹಿಡಿಯಲು ನಾನೇ ಯುದ್ಧಕ್ಕೆ ಹೊರಡುತ್ತೇನೆ." ಎಂದು ಅಭಯಕೊಟ್ಟು ಅಂದೇ ವಿಶೇಷ ಓಲಗ ಕರೆದು, ಸೆಲ್ಲಪ್ಪನ ಮೇಲೆ ಯುದ್ಧ ಘೋಷಿಸಿ – ರಾಜಧಾನಿಯಲ್ಲಿದ್ದ ಸೈನ್ಯದೊಡನೆ ತಾನೇ ಹೊರಟನು. ಈ ಕಾರ್ಯಕ್ಕೆ ಅಚ್ಯುತರಾಯನು ಹೊರಡದೆ, ತಮಗೆ ವೀಳ್ಯ ನೀಡಬೇಕೆಂದು ಅನೇಕ ಹಿರಿಯ, ಕಿರಿಯ ದಂಡನಾಯಕರು ಬೇಡಿದ್ದರೂ ಕೇಳದೆ ಆ ದುರುಳರನ್ನು ಶಿಕ್ಷಿಸುವ ಸಲುವಾಗಿ ತಾನೇ ಹೊರಟನು. ಸಲಕಂ ಸಹೋದರರಲ್ಲಿ, ಕಿರಿಯನಾದ ಚಿನ್ನತಿರುಮಲನು ರಾಜಧಾನಿಯ ರಕ್ಷಣೆಗಾಗಿ ಹಿಂದೆ ಉಳಿದನು. ಪೆದ್ದ ತಿರುಮಲನು ಅಚ್ಯುತರಾಯನೊಡನೆ ತನ್ನ ಸೈನ್ಯದೊಡನೆ ಹೊರಟನು.

ಅಚ್ಯುತರಾಯನು, ಪತ್ನಿಪುತ್ರರೊಡನೆ ಹೊರಟು ಸೈನ್ಯವನ್ನು ನಡೆಸಿ

ಕೊಂಡು ಚಂದ್ರಗಿರಿಗೆ ಬಂದು ಬೀಡುಬಿಟ್ಟನು. ಅಲ್ಲಿಂದ ತಿರುಪತಿಗೆ ಬಂದು ಸಪ್ತಗಿರಿಗಳನ್ನೇರಿ ಕುಲದೈವವಾದ ಶ್ರೀ ವೆಂಕಟಾಚಲಪತಿಯನ್ನು ಭಕ್ತಿಯಿಂದ ಸೇವಿಸಿ, ಈ ದಂಡಯಾತ್ರೆಯಲ್ಲಿ ವಿಜಯವನ್ನು ದೊರಕಿಸಿಕೊಡಲು ಪ್ರಾರ್ಥಿಸಿ ತೀರ್ಥಪ್ರಸಾದಗಳನ್ನು ಪಡೆದು ಮುಂದುವರಿದನು. ಅನಂತರ ಕಾಳಹಸ್ತಿಗೆ ಬಂದಿಳಿದನು. ಅಲ್ಲಿ ಕಾಳಹಸ್ತೀಶ್ವರನನ್ನು ಭಯ, ಭಕ್ತಿಗಳಿಂದ ಸೇವಿಸಿ, ದೈವಾನುಗ್ರಹ ತನಗಾಗಲೆಂದು, ಪ್ರಾರ್ಥಿಸಿದನು. ಕಾಳಹಸ್ತೀಶ್ವರನಿಗೆ ಏಳೂ ಮುಕ್ಕಾಲು ಗ್ರಾಮಗಳನ್ನು ದೇವಮಾನ್ಯವಾಗಿ ಬಿಟ್ಟುಕೊಟ್ಟನು. ಅಲ್ಲದೆ ಅನೇಕ ಬಗೆಯ ತೆರಿಗೆಗಳನ್ನು, ಸುಂಕಗಳನ್ನು ದೇವಾಲಯಕ್ಕೆ ರಿಯಾಯಿತಿ ಮಾಡಿದನು. ಅನೇಕ ಬ್ರಾಹ್ಮಣರಿಗೆ, ಯಥೇಚ್ಛವಾಗಿ ದಾನಮಾಡಿ ಅವರ ಆಶೀರ್ವಾದ ಪಡೆದು ಮುಂದುವರಿದು ಕಂಚಿಗೆ ಬಂದನು. ಅಲ್ಲಿನ ದೈವವಾದ ವರದರಾಜ ಸ್ವಾಮಿಯನ್ನು ಸೇವಿಸಿ, ಅನೇಕ ದಾನ ಧರ್ಮಗಳನ್ನು ಮಾಡಿ, ತಿರುವಣ್ಣಾಮಲೆಯ ಮೇಲೆ ಶ್ರೀರಂಗಕ್ಕೆ ಬಂದನು. ಅಲ್ಲಿ ಅಚ್ಯುತರಾಯನಿಗೆ ಪ್ರಯಾಣದ ಆಲಿಸಿಕೆಯಿಂದ, ದೇಹ ಅಸ್ವಸ್ಥವಾಗಲು ಕೆಲವು ಕಾಲ ವಿಶ್ರಾಂತಿ ಪಡೆಯಲು ನಿಲ್ಲಬೇಕಾಯಿತು. ಆ ಸಮಯದಲ್ಲಿ ಪೆದ್ದತಿರುಮಲನು ಅಚ್ಯುತರಾಯನನ್ನು ಕಂಡು,

"ಪ್ರಭು, ಇಲ್ಲೇ ವಿಶ್ರಾಂತಿಯನ್ನು ಅನುಭವಿಸುತ್ತಾ ನಿಲ್ಲಿರಿ. ಆ ದ್ರೋಹಿಗಳನ್ನು ಸೋಲಿಸಿ ಸೆರೆಹಿಡಿದು ತರುವಭಾರ ನನಗಿರಲಿ. ನೀವು ಈ ಬಗ್ಗೆ ನಿಶ್ಚಿಂತೆಯಿಂದ ಇರಿ. ನನಗೆ ವೀಳ್ಯವನ್ನು ಕೊಡಿ" ಎಂದನು.

"ಅಮಾತ್ಯರೇ, ಆ ದೇಶದ್ರೋಹಿಗಳನ್ನು ನಾನೇ ಯುದ್ಧಮಾಡಿ ಸೆರೆಹಿಡಿದು, ತಕ್ಕಬುದ್ಧಿ ಕಲಿಸಬೇಕೆಂದಿದ್ದೆ. ಆದರೆ ಪಂಪಾಪತಿಯ ಮನಸ್ಸಿಗೆ ಬರಲಿಲ್ಲ. ನಾನು ಇಲ್ಲಿ ಕಾಹಿಲೆ ಬೀಳುವಂತೆ ಆಯಿತು." ಎಂದು ನಿರಾಶೆಯ ಧ್ವನಿಯಲ್ಲಿ ಹೇಳಿದನು.

"ನೀವು ಚಿಂತಿಸುವ ಕಾರಣವಿಲ್ಲ – ಭಗವದ್ಭಕ್ತರಾದ ತಮ್ಮ ಸೇವೆಯನ್ನು ಶ್ರೀರಂಗನಾಥನು ಹೆಚ್ಚುಕಾಲ ಬಯಸಿ, ತಮಗೆ ನೆಪಮಾತ್ರಕ್ಕೆ ಈ ಅಸ್ವಸ್ಥತೆಯನ್ನು ತಂದಿತ್ತಿದ್ದಾನೆ. ತಾವು ರಂಗನಾಥನ ದಯದಿಂದ ಬಹು ಬೇಗನೆ ಗುಣಹೊಂದುತ್ತೀರಿ. ತಾವು ಇಲ್ಲಿರುವಂತೆ ಅತ್ಯಲ್ಪಕಾಲದಲ್ಲಿ ನಿಮಗೆ ವಿಜಯ ವಧುವನ್ನು ತಂದೊಪ್ಪಿಸುತ್ತೇನೆ" ಎಂದು ಹೇಳಿ ಸಮಾಧಾನಪಡಿಸಿ, ಅವನಿಂದ ವೀಳ್ಯವನ್ನು ಪಡೆದು ಹೊರಟನು.

ಪೆದ್ದತಿರುಮಲನೊಂದಿಗೆ ಪಾಂಡ್ಯರಾಜನೂ ಹೊರಟನು. ಸಮುದ್ರದಂತೆ ಅಪಾರವಾಗಿದ್ದ ಸೈನ್ಯ ಸಲಕಂ ತಿರುಮನ ಕೈಕೆಳಗೆ ಹೊರಟಿತು. ಸಲಕಂ ತಿಮ್ಮನು ಶ್ರೀರಂಗದಿಂದ ಮಧುರೆಗೆ ಹೊರಟು ತಾಮ್ರಪಣಿಯನದಿಯ ಬಳಿ ಬೀಡುಬಿಟ್ಟನು.

ಸನ್ನಿವೇಶದಲ್ಲೇ ಚೇರ ಚೋಳರ ದಂಡೂ ಬೀಡುಬಿಟ್ಟಿತ್ತು. ಪಾಂಡ್ಯ ರಾಜನನ್ನು ಗೆದ್ದು ವಿಜಯೋನ್ಮತ್ತನಾಗಿದ್ದ ಸೆಲ್ಲಪ್ಪ ಮತ್ತು ಕಂಬುಚ್ಚಿನಾಯಕರು, ಸಲಕಂ ತಿಮ್ಮುಲನ ದಂಡನ್ನು ಸೋಲಿಸಲು ತಮ್ಮ ಸೈನ್ಯಗಳೊಡನೆ ಸಿದ್ಧರಾಗಿ ನಿಂತರು. ಅವರು ತಂಜಾವೂರನ್ನು ಮತ್ತೆ ಗೆದ್ದು ಅಲ್ಲಿನ ಸೈನ್ಯವನ್ನು ತಮ್ಮ ಕೈವಶಮಾಡಿಕೊಂಡಿದ್ದರು.

ಹೀಗಾಗಿ ಅವರು ಸಾಕಷ್ಟು ಬಲಾಢ್ಯರಾಗಿದ್ದರು. ತಮ್ಮ ಅಗಾಧ ಸೈನ್ಯವನ್ನು ನೋಡಿ ಹೆದರಿ ಓಡಿಹೋಗುವರೆಂದು ತಿಳಿದಿದ್ದ ಸಲಕಂ ತಿರುಮಲನ ಊಹೆ ಸುಳ್ಳಾಯಿತು. ಅವನು ಈ ಯುದ್ಧದ ಜವಾಬ್ದಾರಿಯನ್ನು ಯುವಕ ದಂಡನಾಯಕನಾದ ವಿಶ್ವನಾಥನಾಯಕ ಮತ್ತು ವಿಠಲದೇವರಿಗೆ ವಹಿಸಿ ತಾನು ಹಿಂದೆನಿಂತನು.

ವಿಶ್ವನಾಥನಾಯಕನ ತಂದೆ ನಾಗಮನಾಯಕನು ಕಂಚಿಯ ಸಾಮಂತನಾಗಿದ್ದನು. ಇವನು ಕೃಷ್ಣದೇವರಾಯನ ಪರಮಮಿತ್ರನಾಗಿದ್ದ ಮಾಂಡಲೀಕ ಹಾಗೂ ಸಮರ್ಥ ದಂಡನಾಯಕ. ಇವನಿಗೆ ಬಹಳಕಾಲ ಮಕ್ಕಳಿಲ್ಲದಿದ್ದುದರಿಂದ ಪತ್ನಿಯ ಸಮೇತ ಕಾಶಿಯಾತ್ರೆಯನ್ನು ಕೈಕೊಂಡು, ವಿಶ್ವೇಶ್ವರನನ್ನು ಭಕ್ತಿಯಿಂದ ಪೂಜಿಸಿದ ಮೇಲೆ, ಕಂಚಿಯಲ್ಲಿ ವಿಶ್ವನಾಥನಾಯಕನು ಹುಟ್ಟಿದ್ದನು. ಸಾಳ್ವನರಸಿಂಹನ ಕಾಲದಿಂದಲೂ, ವಿಜಯನಗರ ಹಾಗೂ ಕಂಚಿಯ ಬಾಂಧವ್ಯ ಅತ್ಯಂತ ಮಧುರವಾಗಿತ್ತು. ವಿಶ್ವನಾಥನಾಯಕನು ತನ್ನ ಹದಿನಾರನೆಯ ವಯಸ್ಸಿನಲ್ಲೇ ತನ್ನ ಅಸಾಧಾರಣ ಶೌರ್ಯ ಪ್ರದರ್ಶನದಿಂದ ಸಾಮ್ರಾಟ್ ಕೃಷ್ಣದೇವರಾಯನ ಮೆಚ್ಚುಗೆಗೆ ಪಾತ್ರನಾಗಿದ್ದನು. ಒಂದು ಬಾರಿ ಕೃಷ್ಣದೇವರಾಯನು ಮೃಗಯಾ ವಿಹಾರಕ್ಕೆ ಹೋಗಿದ್ದಾಗ ಜತೆಯಲ್ಲಿ ವಿಶ್ವನಾಥನಾಯಕನು ಇದ್ದನು. ಕೃಷ್ಣದೇವರಾಯನು, ಚಿರತೆಯನ್ನು ಬೆನ್ನಟ್ಟಿ ಬಂದಾಗ ಅದು ಕೆರಳಿ ಕೃಷ್ಣದೇವರಾಯನ ಮೇಲೆ ಬಿದ್ದಿತ್ತು. ಆ ಸಮಯದಲ್ಲಿ ಆಕಸ್ಮಿಕವಾಗಿ ಕುದುರೆಯು ಎಡವಿ ಮುಗ್ಗರಿಸಿ ಬಿದ್ದು ಕೃಷ್ಣದೇವರಾಯನು ನೆಲಕ್ಕೆ ಬಿದ್ದನು – ಇನ್ನೇನು ಆ ಚಿರತೆ ಜ್ಞಾನತಪ್ಪಿದ್ದ ಕೃಷ್ಣದೇವರಾಯನ ಮೇಲೆ ನೆಗೆಯಬೇಕು, ಅಷ್ಟರಲ್ಲಿ – ಅಲ್ಲಿಗೆ ಧಾವಿಸಿ ಬಂದಿದ್ದ ವಿಶ್ವನಾಥನಾಯಕನು ಚಿರತೆಯ ಮೇಲೆ ಹಾರಿ, ಅದರೊಡನೆ ಹೋರಾಡಿ ಚಿರತೆಯನ್ನು ಕೊಂದನು. ಈ ವೇಳೆಗೆ ಕೃಷ್ಣದೇವರಾಯನು ಮೂರ್ಛೆಯಿಂದ ಎಚ್ಚೆತ್ತು ನೋಡುತ್ತಾನೆ! ಹದಿನಾರರ ಬಾಲಕ ವಿಶ್ವನಾಯಕನು – ತನ್ನನ್ನು ಕೊಲ್ಲಲು ಬಂದಿದ್ದ ಚಿರತೆಯನ್ನು ಕೊಂದು, ಮೈಯೆಲ್ಲಾ ಗಾಯಗೊಂಡು, ಎದುರಿಗೆ ನಿಂತಿದ್ದ. ಅವನು ತನ್ನ ಪ್ರಾಣ ಉಳಿಸಿದ ಧೀರನೆಂದು ಕೊಂಡಾಡಿ ಅವನ ಗಾಯಗಳನ್ನು ತೊಳೆದು ಶುಶ್ರೂಷೆಮಾಡಿ, ವಿಶೋಚಿತವಾಗಿ ಸನ್ಮಾನಿಸಿ

ತನ್ನ ಬಳಿಯಲ್ಲೇ ಇಟ್ಟುಕೊಂಡಿದ್ದನು. ಈಗ ಕೃಷ್ಣದೇವರಾಯನ ಅನಂತರ ಅಚ್ಯುತರಾಯನ ದಳದಲ್ಲಿ ಅವನು ಪ್ರಮುಖ ದಂಡನಾಯಕನಾಗಿದ್ದನು.

ಇವನ ಶಕ್ತಿ ಸಾಮರ್ಥ್ಯಗಳನ್ನು ಬಲ್ಲವನಾಗಿದ್ದ ಸಲಕಂ ತಿರುಮಲನು ಇವನಿಗೆ ಯುದ್ಧದ ವೀಳ್ಯವನ್ನು ಕೊಟ್ಟುದು ಅಚ್ಚರಿಯಲ್ಲ.

ಇವನಿಗೆ ಸಾಟಿಯಾಗಿ ವಿಠಲದೇವನು ಜತೆಗಿದ್ದನು. ಇವರಿಬ್ಬರು ಅಂದಿನ ವಿಜಯ ವಧುವನ್ನು ವರಿಸಲು ಸ್ಪರ್ಧೆಗೆ ನಿಂತರು.

ಸಮರ ಸನ್ನಿಹಿತವಾಯಿತು.

ಎರಡು ಕಡೆಯ ಸೈನಿಕರು ವಿವಾಹದ ಸಡಗರದಲ್ಲಿ ಕಾಳಗಕ್ಕೆ ಹೊರಟರು. ಎರಡು ಪಡೆಯ ಸೈನ್ಯ ಬಳಿಯಲ್ಲಿದ್ದ ಬೆಟ್ಟದ ಬಳಿ ಒಂದನ್ನೊಂದು ಸಂಧಿಸಿತು.

ವಿಶ್ವನಾಥನಾಯಕನು ತನ್ನ ಸೈನ್ಯದೊಂದಿಗೆ ಸಾಳ್ವ ಸೆಲ್ಲಪ್ಪನಾಯಕನ ಮೇಲೆ ಬಿದ್ದ, ವಿಠಲದೇವರಾಯನು ತುಂಬುಚ್ಚಿನಾಯಕನ ಮೇಲೆ ಬಿದ್ದ. ಎರಡು ಸೈನ್ಯಗಳಿಗೆ ಭೀಕರ ಕಾಳಗಕ್ಕೆ ಆರಂಭವಾಯಿತು.

ಯುದ್ಧ ಅನೇಕ ದಿನಗಳವರೆಗೆ ಎಳೆದಾಡಿತು. ಸಮಬಲರಾದ ಅವರಲ್ಲಿ ಯಾರಿಗೆ ಯಾರೂ ಸೋಲುವಂತಿರಲಿಲ್ಲ. ಆದರೆ ದಿನ ಕಳೆದಂತೆ ಶತ್ರು ಸೈನ್ಯ ಅಧಿಕ ಸಂಖ್ಯೆಯಲ್ಲಿದ್ದ ವಿಜಯನಗರದ ಸೈನ್ಯವನ್ನು ಎದುರಿಸಲು ಸಾಧ್ಯವಾಗಲಿಲ್ಲ. ಅದು ಸೋಲುವ ಸೂಚನೆ ಕಂಡೊಡನೆಯೇ ವಿಶ್ವನಾಥನ ಕೈ ಜೋರಾಯಿತು.

ಶತ್ರುಧಾಳಿಯನ್ನು ಎದುರಿಸಲಾರದೆ ಸಾಳ್ವ ಸೆಲ್ಲಪ್ಪನ ಸೈನ್ಯ, ತುಂಬುಚ್ಚಿನಾಯಕನ ಸೈನ್ಯ ಬೇರೆ ಬೇರೆ ದಿಕ್ಕಿನಲ್ಲಿ ಹಿಮ್ಮೆಟ್ಟಿತು. ಇಂದಿನ ಯುದ್ಧದಲ್ಲಿ ಜಯಾಪಜಯಗಳನ್ನು ನಿರ್ಧರಿಸಿ ಬಿಡಲು ವಿಶ್ವನಾಥನಾಯಕನು ತನ್ನ ಸ್ವಂತ ದಳದವರೊಂದಿಗೆ, ಸೆಲ್ಲಪ್ಪನನ್ನು ಸೆರೆ ಹಿಡಿಯಲು ಶತ್ರು ಸೈನ್ಯವನ್ನು ಭೇದಿಸಿಕೊಂಡು ಹೊರಟು ಅವನ ಮೇಲೆ ಬಿದ್ದ. ಬಹಳ ಕಾಲ ಹೋರಾಟ ನಡೆದ ಮೇಲೆ ಸೆಲ್ಲಪ್ಪನು ವಿಶ್ವಥನಾಯಕನಿಗೆ ಕೈಸೆರೆ ಸಿಕ್ಕಿದ.

ಈ ಸುದ್ದಿಯನ್ನು ಕೇಳಿ ಸೈನ್ಯದಲ್ಲಿ ಹಾಹಾಕಾರ ಉಂಟಾಯಿತು. ತಮಗೆ ಇನ್ನು ಉಳಿಗಾಲವಿಲ್ಲವೆಂದು ಅವರು ಓಡತೊಡಗಿದರು. ಆದರೆ ವಿಜಯನಗರದ ಸೈನ್ಯದವರು ಕಣಿವೆಯ ದ್ವಾರದಲ್ಲಿ ಅಡ್ಡನಿಂತು ಕೈಗೆ ಸಿಕ್ಕಿದವರನ್ನು ಸಂಹರಿಸುತ್ತಾ ಬಂದರು. ಸೆಲ್ಲಪ್ಪನ ಕಡೆಯ ಸೈನಿಕರು ತಮ್ಮ ನಾಯಕನು ಸೆರೆ ಸಿಕ್ಕಿದ ಮೇಲೆ ಇನ್ನು ಹೋರಾಡಿ ಫಲವಿಲ್ಲವೆಂದು ಶಸ್ತ್ರಾಸ್ತ್ರಗಳನ್ನು ಕೆಳಗೆ ಹಾಕಿ ಶರಣಾಗತರಾದರು. ತುಂಬುಚ್ಚಿನಾಯಕನು ಯುದ್ಧದಲ್ಲಿ ಶತ್ರು ಸೈನ್ಯಕ್ಕೆ ಸಿಕ್ಕಿ ಹತನಾದನು.

ಅವರು ತಮಗೆ ದೊರೆತ ಅಖಂಡ ದಿಗ್ವಿಜಯದೊಂದಿಗೆ, ಯುದ್ಧದಲ್ಲಿ ದೊರೆತ ಅಪಾರ ಸುಲಿಗೆ – ಆನೆಗಳು, ಶಸ್ತ್ರಾಸ್ತ್ರಗಳು, ಸೆರೆಯಾಳುಗಳೊಂದಿಗೆ ಬಂದು ಅವನ್ನು ಸಲಕಂ ತಿರುಮಲನಿಗೆ ಒಪ್ಪಿಸಿ ಅವನಿಂದ ಪಿತೋಚಿತ ಸನ್ಮಾನವನ್ನು ಪಡೆದರು. ತಮಗೆ ದೊರೆತ ದಿಗ್ವಿಜಯಾರ್ಥ ತಾಮ್ರಪರ್ಣಿ ನದಿಯ ದಂಡೆಯಲ್ಲಿ ಒಂದು ಗೆಲ್ಗಂಬವನ್ನು ನೆಟ್ಟು ಸಮಸ್ತ ಸೈನ್ಯದೊಡನೆ, ಶ್ರೀರಂಗದಲ್ಲಿದ್ದ ಅಚ್ಯುತರಾಯನ ಬಳಿಗೆ ಬಂದು ಸೆರೆಸಿಕ್ಕಿದ ಸಾಳ್ವಸೆಲ್ಲಪ್ಪನಾಯಕನನ್ನೂ, ಅವನ ಸಂಗಡಿಗರಾದ ಇತರ ದ್ರೋಹಿಗಳನ್ನು ಅಚ್ಯುತರಾಯನಿಗೆ ಒಪ್ಪಿಸಿದರು.

ಯುದ್ಧದಲ್ಲಿ ಸೋತು ಸೆರೆಸಿಕ್ಕಿದ್ದ ಸಾಳ್ವಸೆಲ್ಲಪ್ಪನನ್ನು ವಿಚಾರಣೆ ಮಾಡಿ, ಶಿಕ್ಷಿಸಲು ಅವನನ್ನು ಸೆರೆಯಲ್ಲಿಟ್ಟು ಅವನಿಂದ ತಂಜಾವೂರಿನ ಮಾಂಡಲೀಕ ಪದವಿಯನ್ನು ಕಿತ್ತುಕೊಂಡು, ವೀರಶೇಖರ ಚೋಳನನ್ನು ಮಾಂಡಲೀಶ್ವರನಾಗಿ ನೇಮಿಸಿದನು. ತುಂಬುಚ್ಚಿನಾಯಕನ ರಾಜ್ಯವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡನು. ದೇಶ ಭ್ರಷ್ಟನಾಗಿದ್ದ ಚಂದ್ರಶೇಖರವರ್ಮನಿಗೆ ಪಾಂಡ್ಯರಾಜ್ಯವನ್ನು ಹಿಂದಿರುಗಿಸಿ, ಸೆರೆಯಲ್ಲಿದ್ದ ಅವನ ಪತ್ನೀ ಪುತ್ರಿಯರನ್ನು ಬಿಡುಗಡೆ ಮಾಡಿಸಿದನು. ಈ ಕಾರ್ಯದಿಂದ ಸುಪ್ರೀತನಾದ ಪಾಂಡ್ಯರಾಜನು, ವಿವಾಹ ವಯಸ್ಕರಾಗಿದ್ದ ತನ್ನ ಮಗಳನ್ನು ಅಚ್ಯುತರಾಯನಿಗೆ ವಿವಾಹ ಮಾಡಿಕೊಟ್ಟು ತನ್ನ ಕೃತಜ್ಞತೆಯನ್ನು ತೋರಿಸಿದನು.

ಸಲಕಂ ಸಹೋದರರು ದೇಶದ್ರೋಹಿಗಳು ದಂಗೆ ಎದ್ದರೆ ಎಂತಹ ಶಿಕ್ಷೆ ಕಾದಿದೆ ಎಂದು ಜನತೆಗೆ ತೋರಿಸಿಕೊಡಲು ಸೆಲ್ಲಪ್ಪನಾಯಕನನ್ನು ಬಹಿರಂಗ ವಿಚಾರಣೆಗೆ ಗುರಿಮಾಡಿದರು.

ವಿಚಾರಣೆಯದಿನ ಸಾಮ್ರಾಟ್ ಅಚ್ಯುತರಾಯನು ನ್ಯಾಯ ಪೀಠದಲ್ಲಿ ಮಂಡಿಸಲು, ಸಾಳ್ವ ಸೆಲ್ಲಪ್ಪನರಸಿಂಹನಾಯಕನನ್ನು ಅಪರಾಧಿಯ ಸ್ಥಾನದಲ್ಲಿ ತಂದು ನಿಲ್ಲಿಸಲಾಯಿತು. ಆ ಸ್ಥಾನ ಪ್ರಮುಖ ಹಾಗೂ ಗಣ್ಯ ವ್ಯಕ್ತಿಗಳಿಂದ ಕಿಕ್ಕಿರಿದಿತ್ತು. ಎಲ್ಲರೂ ಇಂದಿನ ವಿಚಾರಣೆಯ ವೈಖರಿಯನ್ನು ನೋಡಲು ಬಂದಿದ್ದರು.

ವಿಚಾರಣೆಗೆ ಆರಂಭವಾಯಿತು.

ಮಹಾ ಪ್ರಧಾನನಾದ ಸಲಕಂ ಪೆದ್ದ ತಿರುಮಲನು ಮೊದಲು ಮಾತನಾಡಿ, ಸೆಲ್ಲಪ್ಪನ ವಿದ್ರೋಹದ ಕಥೆಯನ್ನೆಲ್ಲಾ ಸವಿಸ್ತಾರವಾಗಿ ವರ್ಣಿಸಿ,

"ಈ ಬಗ್ಗೆ ನೀವು ಏನಾದರೂ ಹೇಳುವುದಿದೆಯೋ?" ಎಂದನು

"ಇದೆ."

"ನೀವು ಹೇಳುವುದೇನು?"

"ನಾನು ನಿರಪರಾಧಿ!"

"ಏನು! ನೀವು ನಿರಪರಾಧಿಯೆ!"

"ಹೌದು!"

"ಅದು ಹೇಗೆ?"

"ನಾವು ಯಾವ ಅಪರಾಧವನ್ನೂ ಮಾಡಿಲ್ಲ."

ಸಭೆ ಅವಾಕ್ಕಾಗಿ ಆಲಿಸಿತು.

"ಹಾಗಾದರೆ ನೀವು ಹಿಂದಿನ ಪ್ರಭುತ್ವದವರು ರಿಯಾಯಿತಿ ತೋರಿಸಿದ್ದ ಅನೇಕ ತೆರಿಗೆಗಳನ್ನು ಮತ್ತೆ ವಸೂಲು ಮಾಡಿದ್ದು ರಾಜದ್ರೋಹವಲ್ಲವೇ? ಅನೇಕ ದೇವಮಾನ್ಯಗಳನ್ನು ಕಿತ್ತುಕೊಂಡುದು ಅಪರಾಧವಲ್ಲವೇ? ನಿರಪರಾಧಿಗಳಂದ ಪಾಂಡ್ಯರಾಜರನ್ನು ದೇಶಭ್ರಷ್ಟರನ್ನಾಗಿ ಮಾಡಿ, ಅವರ ಪುತ್ರಿಯರನ್ನು ಸೆರೆಯಲ್ಲಿಟ್ಟುದು ದ್ರೋಹವಲ್ಲವೇ? ಈ ಅಪರಾಧಗಳಿಗೆ ಏನನ್ನುವಿರಿ?"

"ನನ್ನ ದೇಶದಲ್ಲಿ ನನಗೆ ಇಷ್ಟ ಬಂದಂತೆ ತೆರಿಗೆ, ಸುಂಕಗಳನ್ನು ಎತ್ತುವ ಅಧಿಕಾರವನ್ನು ನನಗೆ ಹಿಂದಿನ ಸಾಮ್ರಾಟರು ಕೊಟ್ಟಿದ್ದಾರೆ. ಇನ್ನು ನನ್ನ ಮೇಲೆ ಹೊರಿಸಿರುವ ಅಪಾದನೆಗಳನ್ನು ನನ್ನ ಆತ್ಮಸಂರಕ್ಷಣೆಯ ಸಲುವಾಗಿ, ಸಾಮ್ರಾಜ್ಯದ ಹಿತರಕ್ಷಣೆಯ ಸಲುವಾಗಿ ಮಾಡಬೇಕಾಯಿತು."

"ನೀವು ಸಾಮ್ರಾಜ್ಯದ ವಿರುದ್ಧ ದಂಗೆ ಎದ್ದುದು ಸಾಮ್ರಾಜ್ಯದ ಹಿತರಕ್ಷಣೆಯೆ?"

"ಹೌದು! ಸಾಮ್ರಾಟರು ಅನರ್ಹರನ್ನು ಕೇವಲ ಸಂಬಂಧೀಕರೆನ್ನುವ ಕಾರಣದಿಂದ ಅಧಿಕಾರಕ್ಕೆ ತಂದಿದ್ದಾರೆ. ಇದು ಅವರು ಮಾಡಿದ ಪ್ರಪ್ರಥಮ ರಾಷ್ಟ್ರಘಾತುಕವಾದ ಕಾರ್ಯ. ಅಲ್ಲದೆ ಕುಮಾರರನ್ನು ಕೊಲೆಮಾಡಿದ ವ್ಯಕ್ತಿಗಳನ್ನು —ಕೊಲೆಪಾತಕರನ್ನು – ರಾಷ್ಟ್ರದ್ರೋಹಿಗಳನ್ನು ಕ್ಷಮಿಸಿ ನಿರಪರಾಧಿಗಳನ್ನು ವಿಚಾರಣೆಯಿಲ್ಲದೆ ಕೊಲ್ಲಿಸಿದ್ದಾರೆ. ಇದು ನ್ಯಾಯಕ್ಕೂ ಸತ್ಯಧರ್ಮಗಳಿಗೂ ಮಾಡಿದ ಅಪಮಾನ! ಸ್ವಾಮಿನಿಷ್ಠೆಗೆ ಮಾಡಿದ ಅಪಚಾರ! ಇಂತಹ ಅನ್ಯಾಯಗಳನ್ನು ಎದುರಿಸುವುದು ಪ್ರತಿಯೊಬ್ಬ ದೇಶಭಕ್ತನ ಕೆಲಸ. ಇದೊಂದು ಪವಿತ್ರ ಕಾರ್ಯ. ಪ್ರಭುಗಳು ತಿಳಿದೋ ತಿಳಿಯದೆಯೋ ಅನ್ಯಾಯಕ್ಕೆ, ಅಧರ್ಮಕ್ಕೆ, ಪ್ರೇರಕರೂ, ಪೋಷಕರೂ ಆಗಿದ್ದಾರೆ. ಆದರೆ ದೇಶದಲ್ಲಿ ನ್ಯಾಯ ನಿಷ್ಠೆಗೆ ಬೆಲೆ ಎಲ್ಲಿ? ನ್ಯಾಯ ಅನ್ಯಾಯಕ್ಕೆ ಮಣಿದಂಪೇ, ಅಧರ್ಮ ಧರ್ಮವನ್ನು ಪಕ್ರಮಿಸಿ —ಮೆರೆದಂದು ಸಾಮ್ರಾಜ್ಯದ ಪತನವೆಂದು ವಿದ್ಯಾರಣ್ಯ ಮುನೀಂದ್ರರ ಭವಿಷ್ಯ ವಾಣಿಯಿದೆ. ಪ್ರಭುಗಳು ಸಾಮ್ರಾಜ್ಯದ ಪತನಕ್ಕೆ ತಾವಾಗಿ ಮುಂದಡಿ ಇಡುವುದನ್ನು ಯಾವ ಸ್ವಾಮಿಭಕ್ತನು ತಾನೇ ನೋಡಿಕೊಂಡು ಇದ್ದಾನು? ಪ್ರಭುಗಳ ಕಣ್ಣು ತೆರೆಸಲು, ಆಗಿರುವ ಅನ್ಯಾಯವನ್ನು ಸರಿಪಡಿಸುವಂತೆ ಮಾಡಲು

ದ್ರೋಹಿಗಳನ್ನು ಸ್ವಾರ್ಥಿಗಳನ್ನು ಅಧಿಕಾರದಿಂದುಳಿಸುವಂತೆ ಮಾಡಲು ನಾನು ಪ್ರಭುತ್ವದ ದಬ್ಬಾಳಿಕೆಯ ವಿರುದ್ಧದಂಗೆ ಎದ್ದಿದ್ದೇನೆ! ನನ್ನ ಈ ಕಾರ್ಯದಿಂದ ರಾಷ್ಟ್ರಕಲ್ಯಾಣವಾಗುವುದಾದರೆ, ನಾನು ರಾಜದ್ರೋಹಿ ಎನಿಸುತ್ತೇನೆಯೇ? ಧರ್ಮಾವತಾರರು, ಧರ್ಮಾ ಧರ್ಮಗಳನ್ನು ತಿಳಿದು ನ್ಯಾಯವಾದ ತೀರ್ಪನ್ನು ಕೊಡುವಿರೆಂದು ನಂಬಿದ್ದೇನೆ."

"ನೀವು ಪಾಂಡ್ಯರಾಜರನ್ನು ರಾಜ್ಯಭ್ರಷ್ಟರನ್ನಾಗಿ ಮಾಡಿದುದೇಕೆ?"

"ನಾವು ಅವರನ್ನು ದೇಶತ್ಯಾಗ ಮಾಡಲು ಪ್ರೇರೇಪಿಸಲಿಲ್ಲ. ಅವರೇ ನಮಗೆ ಹೆದರಿ ಓಡಿಹೋದರು!"

"ನೀವೇಕೆ ಸಾಮ್ರಾಟರ ಮಿತ್ರರಾಗಿದ್ದ ಅವರ ಮೇಲೆ ದಂಡೆತ್ತಿ ಹೋದಿರಿ?"

"ರಾಷ್ಟ್ರಕಲ್ಯಾಣಕ್ಕಾಗಿ ನಡೆಸಿದ ವಿದ್ರೋಹದ ಕಾರ್ಯಕ್ಕೆ ನಾವು ಅವರನ್ನು ಆಹ್ವಾನಿಸಿದೆವು. ಅವರು ನಮಗೆ ಅಪಮಾನ ಮಾಡಿದರು. ಅದರಿಂದ ಅವರ ಮೇಲೆ ಏರಿ ಹೋಗಬೇಕಾಯಿತು."

"ಅವರ ಮೇಲಿನ ಕ್ರೋಧವನ್ನು ಅವರ ಪತ್ನಿಪುತ್ರಿಯರ ಮೇಲೇಕೆ ತೀರಿಸಿಕೊಂಡಿರಿ?"

"ನಾವು ಪಾಂಡ್ಯರಾಜರ ಕುಟುಂಬವನ್ನು ಸೆರೆಯಲ್ಲಿಟ್ಟರೂ ಬಹಳ ಗೌರವದಿಂದ ನಡೆಸಿಕೊಂಡಿದ್ದೇವೆ – ಈ ಬಗ್ಗೆ ಅವರನ್ನೇ ಕೇಳಿ?"

"ಹಾಗಾದರೆ ನಿಮ್ಮ ಮೇಲಿನ ಆರೋಪಗಳನ್ನು ನೀವು ಒಪ್ಪಿಕೊಳ್ಳುವುದಿಲ್ಲವೇ?"

"ಇಲ್ಲ."

"ನಿಮ್ಮ ಅಕೃತ್ಯಕ್ಕಾಗಿ ನೀವು ಪಶ್ಚಾತ್ತಾಪ ಪಟ್ಟು ಕ್ಷಮೆಯಾಚಿಸುವುದಿಲ್ಲವೇ?"

"ಇಲ್ಲ!"

"ಧರ್ಮಾವತಾರರಾದ ಸಭಾಸದರೇ ಮತ್ತು ನ್ಯಾಯಮೂರ್ತಿಗಳೇ ಇದುವರೆಗೆ ನಡೆದ ವಿಚಾರಣೆಯನ್ನು ನೀವು ಆಲಿಸಿದ್ದೀರಿ. ಅವರು ನಿರಪರಾಧಿಗಳೆಂದೇ ಹೇಳುತ್ತಿದ್ದಾರೆ. ಅವರ ಅಪರಾಧವನ್ನು ವಿಚಾರಿಸಿ, ನ್ಯಾಯಮೂರ್ತಿಗಳು ಸೂಕ್ತವಾದ ನ್ಯಾಯ ತೀರ್ಮಾನ ಮಾಡಬೇಕೆಂದು ಕೋರುತ್ತೇನೆ." ಎಂದು ಪೆದ್ದ ತಿರುಮಲನು ಕುಳಿತುಕೊಂಡನು.

ಸಭೆಯಲ್ಲಿದ್ದ ಸಲಕಂ ಸಹೋದರರ ಪಕ್ಷದವರು,

"ಅಪರಾಧಿಗೆ ಮರಣದಂಡನೆ ವಿಧಿಸಬೇಕು!" ಎಂದು ಒಕ್ಕೊರಲಿನಿಂದ ಕೂಗಿದರು.

ಪ್ರಭುಗಳು ನ್ಯಾಯಪೀಠದಿಂದ ತೀರ್ಪು ಹೇಳಿದರು.

"ಅನೇಕ ಬಗೆಯ ರಾಷ್ಟ್ರಘಾತಕ ಕಾರ್ಯಗಳನ್ನು ಮಾಡಿದ ಸೆಲ್ಲಪನಾಯಕನಿಗೆ ಶಿಕ್ಷೆ – ಮರಣದಂಡನೆ ವಿಧಿಸಲಾಗಿದೆ."

ಈ ತೀರ್ಮಾನವನ್ನು ಅಚ್ಯುತರಾಯನು ಹೇಳಿದವನೇ ಸಭೆಯನ್ನು ಬಿಟ್ಟು ಹೊರಟುಹೋದನು.

ಸಭೆಯಲ್ಲಿ ಹಾಹಾಕಾರವೆದ್ದಿತು. ಎಷ್ಟೋ ಜನ ಅನ್ಯಾಯದ ತೀರ್ಪು! ಎಂದರು. ಆದರೆ ಅವರ ಮಾತುಗಳನ್ನು ಲಕ್ಷಿಸದೆ, ಸಲಕಂ ಪೆದ್ದ ತಿರುಮಲನು ಪ್ರಭುಗಳ ತೀರ್ಪನ್ನು ಕಾರ್ಯಗತಮಾಡಲು ತನ್ನ ಸಹೋದರನಿಗೆ ಆಜ್ಞೆಮಾಡಿದನು. ಅವನು ಹನುಮನಾಯಕನ ಕಡೆ ನೋಡಲು ಅವನ ಸಂಗಡಿಗರು ಸೆಲ್ಲಪ್ಪನಾಯಕನನ್ನು ಕಬ್ಬಿಣದ ಸಂಕೋಲೆಗಳಿಂದ ಬಂಧಿಸಿ, ವಧಾ ಸ್ಥಾನಕ್ಕೆ ಕರೆದೊಯ್ದರು.

ಸಲಕಂ ಪೆದ್ದ ತಿರುಮಲನು ತನ್ನ ನಿವಾಸಕ್ಕೆ ಹಿಂದಿರುಗಿ ಸೆಲ್ಲಪ್ಪನ ವಧೆಯ ವಾರ್ತೆಗಾಗಿ ಕಾದು ಕುಳಿತ. ಸಹೋದರನು ಹಿಂದಿರುಗಿ ಪ್ರಭುಗಳ ಆಜ್ಞೆಯಂತೆ ದ್ರೋಹಿ ಸೆಲ್ಲಪ್ಪನ ಮರಣ ಕಾರ್ಯಗತವಾದ ಸಂಗತಿಯನ್ನು ತಿಳಿಸಿದನು. ಇದನ್ನು ಕೇಳಿ ಪೆದ್ದ ತಿರುಮಲನ ಮುಖದಲ್ಲಿ ಮಂದಹಾಸಮೂಡಿತು. ಅವನು ಹಾಗೇ ಕುಳಿತು,

'ಕೊಂಡಮರಸಯ್ಯ.... ಕುಮಾರ.... ಸೋಮರಸ.... ಈಗ ಸೆಲ್ಲಪ್ಪ....!' ಎಂದು ಗೊಣಗಿದ. 'ಅನ್ಯಾಯವಾಗಿ ರಾಮರಾಯ ಮತ್ತು ತಿರುಮಲರಾಯರು ತಪ್ಪಿಸಿಕೊಂಡರು.... ಅವರ ಕಥೆ ಮುಗಿದಮೇಲೆ ನಮಗೆ ಕಣ್ತುಂಬ ನಿದ್ದೆ! ಮನಸ್ಸಿಗೆ ಶಾಂತಿ! ಅಲ್ಲಿಯವರೆಗೆ.... ಅಲ್ಲಿಯವರೆಗೆ....' ಎಂದುಕೊಂಡ ತನ್ನಲ್ಲೇ.

"ನಿಮ್ಮ ಗೋರಿ ಸಿದ್ಧವಾಗುತ್ತಿದೆ...." ಎಂದು ಯಾರೋ ವಿಕಟವಾಗಿ ನುಡಿದರು. ಸಲಕಂ ಸಹೋದರರು ಗಾಬರಿಯಾಗಿ ಧ್ವನಿ ಬಂದತ್ತ ನೋಡಿದರು. ಎದುರಿಗೆ ಅನ್ನಪೂರ್ಣಾದೇವಿ ಹುಚ್ಚುನಗೆ ನಗುತ್ತಾ ಕಾಳಿಯಂತೆ ನಿಂತಿದ್ದಳು.

"ಅಹ್ಹಹ! ಅಹ್ಹಹ! ನಿಮ್ಮ ಗೋರಿ ಸಿದ್ಧವಾಗುತ್ತಿದೆ! ನಿಮ್ಮ ಗೋರಿ ಸಿದ್ಧವಾಗುತ್ತಿದೆ!!" ಎಂದು ಭಯಂಕರವಾಗಿ ಕೂಗಿದಳು.

ಬಂಧನದಲ್ಲಿದ್ದ ಅವಳು ಅಲ್ಲಿಗೆ ಹೇಗೆ ಬಂದಳೆಂದು ಅವರು ಅಚ್ಚರಿಗೊಂಡರು.

ಅನ್ನಪೂರ್ಣಾದೇವಿ, ಸೆಲ್ಲಪ್ಪನ ಮರಣದಂಡನೆಯ ವಾರ್ತೆಯನ್ನು ಕೇಳಿ, ಹೇಗೋ ತನ್ನ ಅರಮನೆಯಿಂದ ತಪ್ಪಿಸಿಕೊಂಡು ಸಲಕಂ ಸಹೋದರರ ಬಳಿಗೆ ಬಂದಿದ್ದಳು – ತಾನು ಕಂಡುಕೊಂಡಿದ್ದ ಸತ್ಯವನ್ನು ಅವರಿಗೆ ತಿಳಿಸಲು!

"ನಿಮ್ಮ ಗೋರಿ ಸಿದ್ಧವಾಗಿದೆ! ನಿರಪರಾಧಿಗಳ ರಕ್ತದಿಂದ ಮಲಿನವಾದ

ನಿಮ್ಮ ಕೈಗಳೇ ತೋಡಿದ ಗೋರಿ.... ಅರಿಯದ ಕಂದಮ್ಮನ ರಕ್ತದಿಂದ ಕಲುಷಿತವಾದ ನಿಮ್ಮ ಕೈಗಳು ತೋಡಿದ ಗೋರಿ ಸಿದ್ಧವಾಗುತ್ತಿದೆ........ ಇನ್ನೆಲ್ಲಾ ಕೆಲವೇ ಕಾಲ ನಿಮ್ಮ ಪೈಶಾಚಿಕ ಪ್ರಭುತ್ವ! ಅನಂತರ ನಿಮ್ಮ ಕೊಲೆ – ನಿಮ್ಮ ಪ್ರಭುತ್ವದ ಕೊನೆ! ಕೊಂಡಮರಸಯ್ಯ.... ಕುಮಾರ.... ಸೋಮರಸ.... ಸೆಲ್ಲಪ್ಪ .... ಇನ್ನೂ ಅನೇಕ ನಿರಪರಾಧಿಗಳು ನಿಮ್ಮಿಂದ ಹತರಾದವರು, ಆಗುವವರು ನಿಮ್ಮ ಅಂಗಾಂಗಗಳನ್ನು ಕ್ರೂರರೀತಿಯಲ್ಲಿ ತುಂಡರಿಸಿ ಕೊಲ್ಲಲು ಅಗೋ ಕಾದಿದ್ದಾರೆ.... ಅಗೋ ನಿಮ್ಮ ಗೋರಿ.... ನೀವೇ ಅಗಿದು ಸಿದ್ಧಪಡಿಸಿರುವ ನಿಮ್ಮ ಗೋರಿ.... ಇನ್ನು ಕೆಲವೇದಿನ!.... ಅಹ್ಹಹ! ಅಹ್ಹಹ!" ಎಂದು ನಕ್ಕು ಅಲ್ಲಿಂದ ಓಡಿಹೋದಳು.

"ಅವಳನ್ನು ಹಿಡಿಯಿರಿ! ಆ ಹುಚ್ಚಿಯನ್ನು ಹಿಡಿಯಿರಿ!" ಎಂದು ಅವರು ಕೂಗುತ್ತಿದ್ದರೂ ಯಾರೂ ಅವಳನ್ನು ತಡೆಯದೆ ಹೋಗಿದ್ದರು. ಹುಚ್ಚಿ ಅಲ್ಲಿಗೆ ಹೇಗೆ ಬಂದಿದ್ದಳೋ ಹಾಗೇ ಹೊರಟು ಹೋಗಿದ್ದಳು. ಎಲ್ಲಿಗೆ ಹೋದಳೆಂದು ಯಾರಿಗೂ ತಿಳಿಯದೆ ಹೋಯಿತು.

ಅವರಿಗೆ ಸೆಲ್ಲಪ್ಪನ ಸಾವಿನಿಂದ ಉಂಟಾಗಿದ್ದ ಆನಂದ ಹೆಚ್ಚುಕಾಲ ಉಳಿಯಲಿಲ್ಲ – ಹುಚ್ಚಳಾದ ಅನ್ನಪೂರ್ಣಾದೇವಿ ಅವರ ಹೊಂಗನಸನ್ನು ಛಿದ್ರಗೊಳಿಸಿ ಹೋಗಿದ್ದಳು! ಅವರ ಹೃದಯದಲ್ಲಿ ಪ್ರಥಮಬಾರಿಗೆ ಹೆದರಿಕೆಯ ಬೀಜ ಬಿದ್ದಿತು! ಅವರ ನೆನಪಿನಲ್ಲಿ ಅವರು ಎಸಗಿದ ಕ್ರೂರಕರ್ಮಗಳ ಅನೇಕ ಚಿತ್ರಗಳು ಸುಳಿದು ಅವರು ಗಡಗಡ ನಡುಗಿದರು.

೧೨

ಅಂದು ಅಳಿಯ ತಿರುಮಲರಾಯನು ಹೇಳಿದ್ದ ಮಾತು ಸುಳ್ಳಾಗಲಿಲ್ಲ. ಬಿಜಾಪುರದ ಸುಲ್ತಾನನಿಗೆ ಬೇಕಾಗಿದ್ದುದು ನಿಜವಾದ ಶಾಂತಿಯಲ್ಲವೆಂದೂ, ತಾತ್ಕಾಲಿಕ ಸಂಧಿ ಎಂದೂ, ಈಗ ತಟಸ್ಥನಾಗಿದ್ದು ಮುಂದೆ ಪೋರ್ಚುಗೀಸರ ನೆರವಿನಿಂದ ವಿಜಯನಗರದ ಮೇಲೆ ಧಾಳಿಯಿಡುವುದೇ ಅವನ ಉದ್ದೇಶವೆಂದು ಹೇಳಿದ್ದ ತಿರುಮಲರಾಯನ ಮಾತು ಇಂದು ನಿಜವಾಗಿತ್ತು. ಆದರೆ ಅಚ್ಯುತರಾಯನು ಕಿವಿಗೊಡದೆ, ತಾತ್ಕಾಲಿಕ ಸಂಧಿಯನ್ನು ಮಾಡಿಕೊಂಡು ರಾಯಚೂರು, ಮುದ್ಗಲ್ಲುಗಳನ್ನು ಬಿಜಾಪುರದ ಸುಲ್ತಾನನ ವಶಕ್ಕೆ ಒಪ್ಪಿಸಿದ್ದ. ಈ ಎರಡು ಪ್ರದೇಶಗಳಿಂದ ಸುಲ್ತಾನನ ದ್ವೇಷದ ಬೆಂಕಿ ಆರುವಂತಿರಲಿಲ್ಲ. ಕೃಷ್ಣದೇವರಾಯನ ಅನಂತರ ಪಟ್ಟಕ್ಕೆ ಬಂದ ಅಚ್ಯುತರಾಯನು ಅಸಮರ್ಥನೆಂದು ತಿಳಿದಿದ್ದ ಅವನು ಸಮಯಸಾಧಿಸಿ ಸದ್ದಿಲ್ಲದೆ ವಿಜಯನಗರದ ಮೇಲೆ ಧಾಳಿ

ಯಿಡಲು ನಿಶ್ಚಯಿಸಿದ್ದನು. ಇದಕ್ಕೆ ಪೋರ್ಚುಗೀಸರೊಡನೆ ಒಂದು ಒಪ್ಪಂದಕ್ಕೆ ಬರುವುದನ್ನೇ ಕಾಯುತ್ತಿದ್ದನು.

ಪೋರ್ಚುಗೀಸರು ಕಳೆದ ಐವತ್ತು ವರ್ಷಗಳಿಂದಲೂ ವಿಜಯನಗರದ ರಸರ ಪರಮ ಮಿತ್ರರಾಗಿದ್ದರು. ಅದರಲ್ಲಿಯೂ ಕೃಷ್ಣದೇವರಾಯನ ಕಾಲದಲ್ಲಿ ಪೋರ್ಚುಗೀಸರ ಸ್ನೇಹ ಗಾಢವಾಗಿ ಬೆಸೆಯಲ್ಪಟ್ಟಿತು. ವಿಜಯನಗರದ ಸೈನ್ಯಕ್ಕೆ ಬೇಕಾಗುವ ಶ್ರೇಷ್ಠದರ್ಜೆಯ ಕುದುರೆಗಳನ್ನು ಅವರೇ ಸರಬರಾಜು ಮಾಡುತ್ತಿದ್ದರು. ಅಲ್ಲದೆ ಪರದೇಶದಿಂದ ಆಮದಾಗುತ್ತಿದ್ದ ರತ್ನಗಂಬಳಿಗಳು, ಒಳ್ಳೆಯ ದ್ರಾಕ್ಷಾರಸ, ಕನ್ನಡಿಗಳು, ಅಮೃತಶಿಲೆ, ಮುತ್ತು ಹವಳಗಳು, ಮದ್ದು ಗುಂಡುಗಳು, ಉಪ್ಪು, ಮತ್ತಿತರ ದಿನಬಳಕೆಯ ಹಾಗೂ ಭಾಗ್ಯ ವಸ್ತುಗಳನ್ನು ಪೋರ್ಚುಗೀಸ್ ವ್ಯಾಪಾರಿಗಳಿಂದಲೇ ಪೂರೈಕೆಯಾಗುತ್ತಿತ್ತು. ವಿಜಯ ನಗರದಲ್ಲಿ ಪೋರ್ಚುಗೀಸರ ಅನೇಕ ಮಳಿಗೆಗಳು ಇದ್ದುವು. ಅವರ ಸಲುವಾಗಿ ಒಂದು ಚರ್ಚನ್ನು ಕೃಷ್ಣದೇವರಾಯನು ಕಟ್ಟಿಸಿಕೊಟ್ಟು ಪೋರ್ಚುಗೀಸ್ ಮಿಷನರಿಗಳಿಂದ ಅವರ ಧರ್ಮವನ್ನು ತಿಳಿಯಲು ಪ್ರಯತ್ನಿಸಿ ಪೋರ್ಚುಗೀಸ ರನ್ನು ನಿಜವಾದ ಮಿತ್ರರಂತೆ ನೋಡಿಕೊಂಡಿದ್ದನು. ಅವನ ಸೈನ್ಯದಲ್ಲಿ ಪೋರ್ಚುಗೀಸರು ಅನೇಕ ಹಿರಿಯಹುದ್ದೆಗಳಲ್ಲಿದ್ದರು. ಅಲ್ಲದೆ ಪೋರ್ಚು ಗೀಸರ ಫಿರಂಗಿ ದಂಡು ಅವನ ಸೈನ್ಯದಲ್ಲಿ ಅತ್ಯಂತ ಪ್ರಭಾವಶಾಲಿ ದಳವಾಗಿತ್ತು. ರಾಯಚೂರಿನ ಇತಿಹಾಸ ಪ್ರಸಿದ್ಧವಾದ ದಿಗ್ವಿಜಯ – ಪೋರ್ಚುಗೀಸ್ ಫಿರಂಗಿ ಯವರ ಶಕ್ತಿಸಾಮರ್ಥ್ಯಗಳಿಂದಲೇ ಸಾಧಿಸಲ್ಪಟ್ಟಿತ್ತು. ಅಂದು ಕೃಷ್ಣದೇವ ರಾಯನಿಗೆ ನೆರವಾಗಿದ್ದ ಕ್ರಿಸ್ಟಫರ್ ಫಿಗ್ಯೆರೋಡೋ ಕೃಷ್ಣದೇವರಾಯನು ಬದುಕಿರುವವರೆಗೆ ಅತ್ಯಂತ ವಿಶ್ವಾಸಪಾತ್ರನಾದ ಮಿತ್ರನಾಗಿದ್ದನು. ರಾಯನು ನಾಗಲಾಪುರದ ಹೊರವಲಯದಲ್ಲಿ ತನ್ನ ಬಹುದಿನಗಳ ಕನಸಾಗಿದ್ದ ಜಲಾ ಶಯದ ನಿರ್ಮಾಣ, ನಾಗಲಾ ಸಮುದ್ರವನ್ನು, ಪೋರ್ಚುಗೀಸ್ ಇಂಜನಿಯರ್ ಜೋಡಿಲಾ ಪೊರಟೆಯ ಸಹಾಯದಿಂದ ಕಟ್ಟಿಸಿ, ನಗರಕ್ಕೆ ಎಲ್ಲಾ ಕಾಲ ದಲ್ಲಿಯೂ ನೀರು ಒದಗಿಸುವ ವ್ಯವಸ್ಥೆ ಮಾಡಿದ್ದನು. ಈ ವಿಶಾಲವಾದ ಜಲಾ ಶಯದ ನಿರ್ಮಾಣಕ್ಕೆ ಸಹಸ್ರಾರು ಜನ ಹಗಲು ರಾತ್ರಿ ಎನ್ನದೆ ಅನೇಕ ವರ್ಷ ಕಾಲ ದುಡಿಯಬೇಕಾಯಿತು. ಸುಮಾರು ಅರವತ್ತು ಜನರ ನರಬಲಿಯನ್ನು ಪಡೆದರೂ ಇನ್ನೂ ನಿಲ್ಲದಿದ್ದ ಕಟ್ಟೆ, ಕಡೆಗೆ ನಿಂತುದು ಪೋರ್ಚುಗೀಸ್ ಇಂಜ ನಿಯರ್ ಒಬ್ಬನ ಕೌಶಲ್ಯದಿಂದಲೇ! ಈ ಜಲಾಶಯದಿಂದ ವರ್ಷಕ್ಕೆ ಸುಮಾರು ಇಪ್ಪತ್ತುಸಾವಿರ ಪಗೋಡಗಳು ವರಮಾನ ಕಂದಾಯದ ರೂಪದಲ್ಲಿ ಬರುತ್ತಿದ್ದಿ ತೆಂದರೆ ಅದು ಎಷ್ಟು ದೊಡ್ಡ ಜಲಾಶಯವಾಗಿರಬೇಕು?

ಹೀಗೆ ಪೋರ್ಚುಗೀಸರು ಯುದ್ಧಕಾಲದಲ್ಲೂ, ಶಾಂತಿಕಾಲದಲ್ಲೂ ವಿಜಯ

ನಗರದರಸರ ಮಿತ್ರರಾಗಿದ್ದರು. ಇಂತಹವರನ್ನು ಒಮ್ಮೆಲೆ ಶತ್ರುಗಳನ್ನಾಗಿ ಸುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಆದರೆ ಅಚ್ಯುತರಾಯನ ಕಾಲದಲ್ಲಿ ಪೋರ್ಚುಗೀಸರರೊಡನೆ ಇದ್ದ ಹಳೆಯ ಸ್ನೇಹ ಉಳಿಸಿಕೊಳ್ಳಲು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಅದರ ಬದಲು ವಿದೇಶಿಯರಾದ ಅವರನ್ನು ಸಂಶಯದ ದೃಷ್ಟಿಯಿಂದ ನೋಡಿ, ಎಂದಿದ್ದರೂ ಅವರಿಂದ ತಮಗೆ ತೊಂದರೆ ಎಂದು ಅವರಿಗೆ ಕೊಟ್ಟಿದ್ದ ಸ್ನೇಹ ಹಸ್ತವನ್ನೂ ರಾಜಮನ್ನಣೆಯನ್ನೂ ಹಿಂತೆಗೆದುಕೊಂಡಿದ್ದನು – ಹೀಗೆ ಮಾಡಲು ಸಲಕಂ ಸಹೋದರರೇ ಕಾರಣರಾಗಿದ್ದರು. ಇದರಿಂದ ಪೋರ್ಚುಗೀಸರಿಗೆ ವಿಜಯನಗರದರಸರ ಬಗ್ಗೆ ಅಸಮಾಧಾನ ಉಂಟಾಗಿತ್ತು.

ಇದಕ್ಕೆ ಇನ್ನಷ್ಟು ತುಪ್ಪ ಸುರಿದಂತೆ, ಕೃಷ್ಣದೇವರಾಯನು ಗೋವೆಯ ಗೌರ್ನರಾಗಿದ್ದ ಡಾಕನ್ಹನಿಗೆ, ಗೋವೆಯ ಸುತ್ತಮುತ್ತಲ ಪ್ರದೇಶವನ್ನೂ ಬೆಳಗಾಂ ದುರ್ಗದ ಅಧಿಪತಿಯಾಗಿದ್ದ – ಅಸದ್ ಖಾನನಿಂದ ಕಿತ್ತುಕೊಂಡು ವಿಶ್ವಾಸದ ಕಾಣಿಕೆಯಾಗಿ ಕೊಡಲು ವಾಗ್ದಾನ ಮಾಡಿದ್ದ. ಈ ವಾಗ್ದಾನದಿಂದ ಸುಪ್ರಸನ್ನನಾಗಿ ಅವನು ಕೃಷ್ಣದೇವರಾಯನ ದಂಡಯಾತ್ರೆಯಲ್ಲಿ ಸಹಾಯ ಮಾಡಲು ತನ್ನ ಸ್ವಂತ ಸೈನ್ಯದಿಂದ ಆರುನೂರು ಉತ್ತಮಾಶ್ವಗಳನ್ನೂ ಒಂದು ಫಿರಂಗಿ ದಳವನ್ನೂ ಕಳುಹಿಸಿಕೊಟ್ಟಿದ್ದ. ಆದರೆ ಕೃಷ್ಣದೇವರಾಯನು ಅಸದ್ ಖಾನನ ಮೋಸಕ್ಕೆ ಬಲಿಯಾಗಿ ಬೆಳಗಾಂ ದಂಡಯಾತ್ರೆಯನ್ನು ಸಂಪೂರ್ಣ ಮಾಡಲಾಗಲಿಲ್ಲ. ಅದನ್ನು ಸಂಪೂರ್ಣಗೊಳಿಸಬೇಕೆಂದಿರುವಾಗಲೇ ಅವನು ಮೃತ್ಯುವಶನಾಗಿದ್ದನು. ಪೋರ್ಚುಗೀಸರಿಗೆ ಕೊಟ್ಟಿದ್ದ ವಾಗ್ದಾನ, ವಾಗ್ದಾನವಾಗಿಯೇ ಉಳಿಯಿತು. ಇದನ್ನು ಸಂಪೂರ್ಣಗೊಳಿಸಿಕೊಡಲು ಮೇಲಿಂದ ಮೇಲೆ ಗೋವೆಯ ಗೌರ್ನರ್ ಅಚ್ಯುತರಾಯನನ್ನು ಪ್ರಾರ್ಥಿಸಿ ವಿಫಲನಾಗಿದ್ದನು. ಈಗ ಅವರು ಬಿಜಾಪುರದ ಸುಲ್ತಾನನ ಕಡೆ ಆಶಾದೃಷ್ಟಿಯಿಂದ ನೋಡುತ್ತಿದ್ದರು.

ಆದರೆ ಈ ಕೋರಿಕೆಯನ್ನು ಬಿಜಾಪುರದ ಸುಲ್ತಾನನಾದ ಇಸ್ಮೈಲ್ ಆದಿಲ್‌ಷಹನು ಸದ್ಯದ ಸ್ಥಿತಿಯಲ್ಲಿ ಈಡೇರಿಸುವಂತಿರಲಿಲ್ಲ. ಪೋರ್ಚುಗೀಸರ ಆಶಯುವನ್ನು ಈಡೇರಿಸುವುದೆಂದರೆ, ತನ್ನ ಪ್ರೀತಿಪಾತ್ರನಾಗಿದ್ದ ಅಸದ್ ಖಾನನ ಅವಿಶ್ವಾಸಕ್ಕೆ ಪಾತ್ರನಾಗಬೇಕಾಗಿತ್ತು. ಗೋವೆಯ ಪೋರ್ಚುಗೀಸರಿಗೆ ಸಹಾಯ ಮಾಡದೆ ಇರಲು ಮದಸ್ಸಿರಲಿಲ್ಲ. ಪೋರ್ಚುಗೀಸರು ತನ್ನ ಮಿತ್ರರಾದಾರೆಂದು ಅನೇಕ ವರ್ಷಗಳಿಂದ ಆದಿಲ್‌ಷಹನು ಕನಸು ಕಾಣುತ್ತಿದ್ದ. ಏಕೆಂದರೆ ತನ್ನ ಹಿಂದಿನ ಅರಸರು ಅಶ್ವಪತಿಗಳೆಂಬ ಬಿರುದಿಗೆ ಪಾತ್ರರಾಗಿದ್ದುದು ಪೋರ್ಚುಗೀಸರ ಸಹಾಯದಿಂದಲೇ. ಅಂತಹ ಪೋರ್ಚುಗೀಸರು ಇಂದು

ತಾವಾಗಿ ತಮ್ಮ ಸ್ನೇಹವನ್ನು ನೀಡಲು ಮುಂದೆ ಬಂದಿದ್ದರು. ಇದನ್ನು ತಿರಸ್ಕರಿಸುವುದು ಉಚಿತ ರಾಜನೀತಿಯಾಗಿರಲಿಲ್ಲ, ಹೇಗಾದರೂ ಮಾಡಿ, ಇಬ್ಬರ ವಿಶ್ವಾಸವನ್ನೂ ಉಳಿಸಿಕೊಳ್ಳಲು ಅವನು ತನ್ನ ದಂಡನಾಯಕನೂ, ಪ್ರಧಾನ ಅಮಾತ್ಯನೂ ಆಗಿದ್ದ ಅಸದ್ ಖಾನನನ್ನೇ ಮೊರೆ ಹೊಕ್ಕಿದ್ದನು. ಪೋರ್ಚುಗೀಸರೊಡನೆ ಒಂದು ಒಪ್ಪಂದಕ್ಕೆ ಬರಲು ಅವನನ್ನೇ ಗುಟ್ಟಾಗಿ ಕಳುಹಿಸಿ ಕೊಟ್ಟಿದ್ದನು.

ಕುತಂತ್ರಕ್ಕೆ ಪ್ರಸಿದ್ಧನಾದ ಅಸದ್ ಖಾನನು ಅತ್ತ ತನ್ನ ಅಧೀನದ ಗೋವೆಯ ಸುತ್ತಮುತ್ತಲಿನ ಪ್ರದೇಶಗಳು ಕೈಬಿಡಬಾರದು, ಇತ್ತ ಪೋರ್ಚುಗೀಸರ ಸ್ನೇಹ ತಮಗೆ ಲಭಿಸಬೇಕು ಎಂದು ಆಲೋಚಿಸಿ, ಒಂದು ಉಪಾಯ ಮಾಡಿದನು. ಇದಕ್ಕೆ ಪೋರ್ಚುಗೀಸರನ್ನು ವಿಜಯನಗರದ ಮೇಲೆ ಎತ್ತಿ ಕಟ್ಟುವುದೇ ಉಳಿದಿದ್ದ ದಾರಿ.

ಅಸದ್ ಖಾನನು ನೇರ ಗೋವೆಗೆ ಬಂದಿಳಿದನು. ಗೋವೆಯ ಗೌರ್ನರರಾಗಿದ್ದ ಡಾಕುನ್ಹ ಅವನನ್ನು ವಿಶ್ವಾಸದಿಂದಲೇ ಬರಮಾಡಿಕೊಂಡನು. ಅವನನ್ನು ಉಚಿತ ರೀತಿಯಲ್ಲಿ ಸತ್ಕರಿಸಿ, ಅನಂತರ ಬಂದ ಕಾರ್ಯ ವಿಚಾರಿಸಿಕೊಂಡನು.

"ಮಾನ್ಯ ಡಾಕುನ್ಹರವರೇ ಈಗ ನಾನು ಸುಲ್ತಾನರಿಂದ, ಬಂದಿದ್ದೇನೆ. ಖಾವಂದರು ತಮಗೆ ಒಂದು ಪತ್ರ ಕೊಟ್ಟಿದ್ದಾರೆ – ಪರಾಂಬರಿಸಬೇಕು" ಎಂದು ಹೇಳಿ ತನ್ನೊಡನೆ ತಂದಿದ್ದ ಪತ್ರವನ್ನು ಕೊಟ್ಟನು.

ಆ ಪತ್ರವನ್ನು ಓದಿಕೊಂಡು ಡಾಕುನ್ಹನ ಮುಖ ಅರಳಿತು. ಅವನು ತನ್ನ ಕಣ್ಣನ್ನು ತಾನು ನಂಬದಾದ. ಅವನ ಬಹಳ ದಿನಗಳ ಆಸೆ ಈಡೇರುವ ಸೂಚನೆ ಕಂಡಿತ್ತು. ಸಾಮ್ರಾಟ್ ಕೃಷ್ಣದೇವರಾಯನಿಂದ ಈಡೇರಿಸಲಾಗದ ಕಾರ್ಯವನ್ನು ಆದಿಲ್ ಷಹನು ಅಯಾಚಿತನಾಗಿ ಈಡೇಲಿಸಲು ತಾನಾಗಿ ಬಂದಿದ್ದನು.

ಆ ಪತ್ರದಲ್ಲಿ ಆದಿಲ್ ಷಹನು, ತನ್ನ ತಂದೆ ತಾತಂದಿರ ಕಾಲದಿಂದಲೂ ಪೋರ್ಚುಗೀಸರು ಬಿಜಾಪುರದ ಸುಲ್ತಾನರ ಮಿತ್ರರಾಗಿದ್ದರೆಂದೂ, ಆದರೆ, ಕೃಷ್ಣದೇವರಾಯನು ಮಾಡಿದ್ದ ತಂತ್ರದಿಂದ, ತಮ್ಮ ಸ್ನೇಹ ಹಸ್ತವನ್ನು ತೊರೆದು, ವಿಜಯನಗರದರಸರ ಸ್ನೇಹಕ್ಕೆ ಮರುಳಾದರೆಂದೂ ಅವರನ್ನು ಆಕ್ಷೇಪಿಸಿದ್ದನು. ಆದರೂ ಶತ್ರುಪಕ್ಷಕ್ಕೆ ಸೇರಿದ ಪೋರ್ಚುಗೀಸರನ್ನು ದ್ವೇಷಿಸದೆ ಅವರನ್ನು ತಾನು ಈವರೆಗೆ ಮಿತ್ರರೆಂದೇ ತಿಳಿದಿದ್ದುದಾಗಿಯೂ, ಈಗ ವಿಜಯನಗರದ ಅರಸರು ಕೇವಲ ಕಾರ್ಯಸಾಧಕರೂ, ವಿಶ್ವಾಸಘಾತುಕರೂ ಇರುವರೆಂಬ ಅಂಶ ಪೋರ್ಚುಗೀಸರ ಮನಸ್ಸಿಗೆ ಬಂದುದಕ್ಕಾಗಿ ತನಗೆ ಸಂತೋಷವುಂಟಾ

ಗಿರುವುದಾಗಿಯೂ, ಈಗ ಅವರ ಸ್ನೇಹ ಬಯಸಿ ತಾನು ಸ್ನೇಹ ಹಸ್ತ ನೀಡಲು ಮುಂದೆ ಬಂದಿರುವುದಾಗಿ ತಿಳಿಸಿದ್ದ – ಅವರ ಬಹಳ ಕಾಲದ ಆಶಯವನ್ನು ಈಡೇರಿಸುವುದರ ಮೂಲಕ ಅವರ ಬಗ್ಗೆ ತನಗಿರುವ ನಿಜವಾದ ವಿಶ್ವಾಸಗಳನ್ನು ತೋರಿಸಲು ಈ ಪತ್ರ ಬರೆದಿರುವುದಾಗಿ ತಿಳಿಸಿ, ಗೋವೆಯ ಸುತ್ತಮುತ್ತಲ ಪ್ರದೇಶಗಳನ್ನು ಅವರಿಗೆ ಬಿಟ್ಟು ಕೊಡುವುದಾಗಿಯೂ, ಈ ಬಗ್ಗೆ ಒಪ್ಪಂದ ಮಾಡಿಕೊಳ್ಳಲು ಅಸದ್‌ಖಾನನನ್ನು ಕಳುಹಿಸಿಕೊಟ್ಟಿರುವುದಾಗಿ ತಿಳಿಸಿದ್ದನು.

"ಸುಲ್ತಾನರು ನಮ್ಮ ಬಗ್ಗೆ ಅನುಗ್ರಹ ಬುದ್ಧಿ ತೋರಿದ್ದಾರೆ. ನಮ್ಮ ಅದೃಷ್ಟ ದೊಡ್ಡದು!" ಎಂದ ಡಾಕುನ್ಹ.

"ಸುಲ್ತಾನರು ನಿಮ್ಮ ವಿಷಯದಲ್ಲಿ ಮೊದಲಿನಿಂದಲೂ ವಿಶ್ವಾಸಿಗಳಾಗಿದ್ದಾರೆ. ಆದರೆ ವಿಜಯನಗರದ ಅರಸರನ್ನು ನಂಬಿದಂತೆ ನೀವು ಅವರನ್ನು ನಂಬಲಿಲ್ಲ. ಈಗಲಾದರೂ ನೀವು ನಮ್ಮ ಮಿತ್ರರಾಗಿ ಗೋವೆಯ ಸುತ್ತ ಮುತ್ತಲ ಪ್ರದೇಶಗಳಿಗೆ ಅಧಿಪತಿಗಳಾಗಿ!" ಎಂದ ಅಸದ್‌ಖಾನ್.

"ನಾವು ಇದಕ್ಕಾಗಿ ಕೃತಜ್ಞರಾಗಿದ್ದೇವೆ – ನಮ್ಮ ಈ ಸ್ನೇಹ ಚಿರಕಾಲ ಉಳಿಯಬೇಕೆಂದೇ ನಮ್ಮ ಬಯಕೆ! ನಾವು ಪರದೇಶಿಯರು – ಮೇಲಾಗಿ ವ್ಯಾಪಾರಿಗಳು. ನಮ್ಮಿಂದ ನಿಮಗೆ ಯಾವ ನೆರವು ಬೇಕು ತಿಳಿಸಿ – ನಿರ್ವಂಚನೆಯಿಂದ ಮಾಡುತ್ತೇವೆ."

"ನೀವು ಇನ್ನು ಮುಂದೆ ನಿಮ್ಮ ಬಂದರಿನಲ್ಲಿ ಬರುವ ಎಲ್ಲ ವಿದೇಶಿ ವಸ್ತುಗಳನ್ನೂ, ಮುಖ್ಯವಾಗಿ ಶ್ರೇಷ್ಠವಾದ ಅಶ್ವಗಳನ್ನು ನಮ್ಮ ಸುಲ್ತಾನರಿಗೇ ವಿಕ್ರಯಿಸಬೇಕು – ಅಲ್ಲದೆ ನಿಮ್ಮ ಬಳಿಯಿರುವ ಮದ್ದು ಗುಂಡುಗಳನ್ನೂ, ನಿಮ್ಮ ಸೈನ್ಯವನ್ನೂ, ವಿಜಯ ನಗರದ ಮೇಲೆ ನಾವು ನಡೆಸುವ ದಂಡಯಾತ್ರೆಯಲ್ಲಿ ನಮಗೆ ಸಹಾಯ ಮಾಡಬೇಕು!— ಇಷ್ಟೇ ನಮ್ಮ ಶರತ್ತು."

"ಇದನ್ನು ನೀವು ಹೇಳಬೇಕಾಗಿಲ್ಲ. ಸ್ನೇಹಿತರ ಕಷ್ಟ ಸುಖಗಳಿಗೆ ಆಗದ ಮೇಲೆ ಅಂತಹ ಸ್ನೇಹದಿಂದ ಪ್ರಯೋಜನವೇನು? ಇನ್ನು ಅಶ್ವ, ಶಸ್ತ್ರಾಸ್ತ್ರಗಳ ಸರಬರಾಜು – ವ್ಯಾಪಾರಿಗಳಾದ ನಮಗೆ ನೀವು ಯೋಗ್ಯ ಬೆಲೆ ಕೊಡುವುದಾದರೆ, ನಾವು ನಿಮಗೇ ವಿಕ್ರಯಿಸುತ್ತೇವೆ. ಇದು ನಿಮಗೆ ನಾವು ಮಾಡುವ ಸಹಾಯವೇ ಅಲ್ಲ – ಕರ್ತವ್ಯ!"

"ನಿಮ್ಮಿಂದ ನಮಗೆ ಇಷ್ಟು ಸಹಾಯವಾದರೆ ಸಾಕು! ಈ ಬಗ್ಗೆ ನಾವು ಒಂದು ಒಡಂಬಡಿಕೆ ಇಂದೇ ಮಾಡಿಕೊಳ್ಳೋಣ. ನನಗಾಗಿ ಸುಲ್ತಾನರು ಬಿಜಾಪುರದಲ್ಲಿ ಕಾಯುತ್ತಿದ್ದಾರೆ...."

"ಆಗಲಿ ಇಂದೇ ಒಪ್ಪಂದ ಮಾಡಿಕೊಳ್ಳಬಹುದು.... ಆದರೆ...."

"ಏನು ಆದರೆ—? ಏಕೆ ಇನ್ನೂ ಅನುಮಾನ?"

"ನಾನು ನಿಮ್ಮೊಡನೆ ಸ್ಪಷ್ಟವಾಗಿ ಮಾತನಾಡುವೆನೆಂದು ನೀವು ಅನ್ಯಥಾ ಭಾವಿಸಬಾರದು. ಈಗ ನೀವು ನಮಗೆ ವಹಿಸುತ್ತಿರುವ ಅನೇಕ ಪ್ರದೇಶಗಳು ಹಿಂದೆ ವಿಜಯನಗರದ ಅರಸರ ಕೈವಶವಾಗಿದ್ದಂತಹ ಪ್ರದೇಶಗಳು ಇಂದು ಅವರ ಕೈ ತಪ್ಪಿ ನಿಮ್ಮದಾಗಿವೆ. ಆದರೆ ಈ ದೇಶಪ್ರದೇಶಗಳನ್ನು ನಿಮ್ಮಿಂದ ಕಿತ್ತುಕೊಳ್ಳಲು ಅವರು ಮೇಲಿಂದ ಮೇಲೆ ಪ್ರಯತ್ನಿಸಿದ್ದಾರೆ. ಅಂದರೆ ಈ ಪ್ರದೇಶ ವಿವಾದಾಸ್ಪದ ಪ್ರದೇಶ! ಇದನ್ನು ನಾವು ಆಕ್ರಮಿಸಿದರೆ, ಈ ಸುದ್ದಿಯನ್ನು ಕೇಳಿ, ಮೊದಲೇ ನಮ್ಮ ಮೇಲೆ ಅಸಮಾಧಾನದಿಂದಿರುವ ವಿಜಯನಗರದರಸರು ತಮ್ಮ ಸೈನ್ಯದೊಡನೆ ತಮ್ಮ ಮೇಲೆ ಧಾಳಿಯಿಟ್ಟರೆ, ನಮ್ಮ ಪುಟ್ಟ ರಾಜ್ಯ ಅದನ್ನು ಎಷ್ಟು ಕಾಲ ಎದುರಿಸಿ ಯುದ್ಧಮಾಡೀತು? ಇದರಿಂದ ನಮ್ಮ ಹೆಸರೇ ಭಾರತದ ಭೂಪಠದಿಂದ ಅಳಿಸಿಹೋಗಬಹುದೆಂಬ ಹೆದರಿಕೆ ನಮಗೆ ಭಾದಿಸುತ್ತಿದೆ. ಇಂದಿನ ನಮ್ಮ ವರ್ತನೆಯ ಫಲ ನಾವು ನಾಳೆ ಅನುಭವಿಸಬೇಕಾಗಿ ಬಂದರೆ? ಎಂಬ ಹೆದರಿಕೆಯಾಗಿದೆ."

"ಅಂತಹ ಸಮಯದಲ್ಲಿ ನಿಮ್ಮ ಸಹಾಯಕ್ಕೆ ನಾವು ಬರುತ್ತೇವೆ. ನಮ್ಮ ವಚನವನ್ನು ಪಾಲಿಸಲು, ನಮ್ಮ ಸರ್ವಸ್ವವನ್ನೂ ಈ ಕಾರ್ಯಕ್ಕೆ ವಿನಿಯೋಗಿಸುತ್ತೇವೆ, ನೀವು ಭಯಪಡಬೇಕಾಗಿಲ್ಲ!"

"ನಮ್ಮ ಕಾರಣದಿಂದ ನೀವು ವೃಥಾ ಯುದ್ಧಕ್ಕಿಳಿಸುವುದು ನನಗೆ ಇಷ್ಟವಿಲ್ಲ. ಈ ಯುದ್ಧ ಪ್ರಯತ್ನ ವೃಥಾಹಾನಿಯಲ್ಲವೆ? ನೀವು ನನ್ನ ಸಲಹೆ ಕೇಳುವುದಾದರೆ ನನ್ನದೊಂದು ವಿಜ್ಞಾಪನೆಯುಂಟು."

"ಏನದು ಸಂಕೋಚವಿಲ್ಲದೆ ತಿಳಿಸಿ!"

"ನೀವು ನಮಗಾಗಿ ಇಷ್ಟುತೊಂದರೆ ತೆಗೆದು ಕೊಳ್ಳಬೇಕಾಗಿದೆ. ಈಗ ನಿಮ್ಮ ಸುಲ್ತಾನರೂ ವಿಜಯನಗರದರಸರೂ ತಾತ್ಕಾಲಿಕಕ್ಕಾದರೂ ಮಿತ್ರರಾಗಿದ್ದಾರೆ. ಈಗ ನೀವು ನಮಗಾಗಿ ಈ ಕೆಲಸ ಮಾಡಿಕೊಡಬೇಕು. ನೀವು ವಿಜಯನಗರದರಸರನ್ನು ಕಂಡು, ಗೋವೆಯ ಸುತ್ತಮುತ್ತಲಿನ ಪ್ರದೇಶಗಳನ್ನು ನಮಗೆ ಬಿಟ್ಟುಕೊಡಲು ಮಧ್ಯಸ್ಥಿಕೆವಹಿಸಿ ಅವರು ಹಿಂದೆ ಮಾಡಿದ್ದ ವಾಗ್ದಾನದಂತೆ ನಡೆದು ಕೊಳ್ಳಲು ತಿಳಿಸಿ. ನಿಮ್ಮ ಸ್ವಾಧೀನದಲ್ಲಿರುವ, ಪ್ರಾಂತ್ಯಗಳನ್ನು ನೀವು ನಮಗೆ ಕೊಟ್ಟಿರುವುದಾಗಿ ತಿಳಿಸಿ, ನಮ್ಮ ನಿಮ್ಮ ಸ್ನೇಹ ಚಿರಕಾಲಬಾಳುವಂತೆ ಮಾಡಿ."

ಈ ಸಲಹೆ ಅಸದ್‌ಖಾನನಿಗೆ ಪ್ರಿಯವಾಯಿತು. ಅವನು ಈ ಸಂಧಾನವನ್ನು ಹೇಗಾದರೂ ಸಾಧಿಸಲು ಮನಸ್ಸು ಮಾಡಿದ.

ಅವನು ಅಚ್ಯುತರಾಯನಿಗೆ ಪತ್ರಬರೆದು ಯಾವುದೋ ಮಹತ್ವದ ವಿಷಯ ಪರ್ಯಾಲೋಚಿಸಲು ಇಚ್ಛಿಸುವುದಾಗಿಯೂ, ಅವಕಾಶಕೊಟ್ಟರೆ ಬಂದು

ಕಾಣುವುದಾಗಿಯೂ, ತಿಳಿಸಿದ. ಆದರೆ ತಾನು ಗೋವೆಗೆ ಬಂದುಹೋದ ಎಲ್ಲ ಸಂಗತಿಯನ್ನು ಮಾತ್ರ ಗೋಪ್ಯವಾಗಿರಿಸಿದ್ದ. ಆ ಪತ್ರವೂ ಸಕಾಲದಲ್ಲಿ ಅಚ್ಯುತರಾಯನಿಗೆ ತಲುಪಿತು. ಆಗಷ್ಟೇ ನಾಡಿನಲ್ಲಿ, ನವರಾತ್ರಿ ಉತ್ಸವ ನಡೆಯಲಿದ್ದುದರಿಂದ, ಈ ಉತ್ಸವಕ್ಕೆ ಬರಲು ಇತರ ಬಂಧುಮಿತ್ರರಿಗೆ ಆಹ್ವಾನ ಕೊಟ್ಟಂತೆ ಅಸದ್ ಖಾನನಿಗೂ ರಾಜಧಾನಿಗೆ ಬರಲು ಅಮಂತ್ರಣವೀಯಲಾಯಿತು. ಅದರಂತೆ ಅಸದ್ ಖಾನನು ವಿಜಯನಗರಕ್ಕೆ ಪರಿವಾರದೊಡನೆ ಬಂದು, ತನಗೆಂದೇ ಗೊತ್ತುಮಾಡಿದ್ದ ಬಿಡಾರದಲ್ಲಿ ಇಳಿದುಕೊಂಡನು.

ನವರಾತ್ರಿಯ ಸಂಭ್ರಮವೆಲ್ಲ ಮುಗಿದಮೇಲೆ, ಒಂದು ದಿನ ಸಲಕಂ ಸಹೋದರರು ಬಂದು ಅಸದ್ ಖಾನನ್ನು ಕರೆದುಕೊಂಡು ಹೋಗಿ, ಅಚ್ಯುತ ರಾಯನಿಗೆ ಭೇಟಿಮಾಡಿಸಿದರು.

ಕುಶಲಪ್ರಶ್ನೆಯಾದ ಮೇಲೆ,

"ಜಹಾಪನಾ, ತಮ್ಮಲ್ಲಿ ಒಂದು ಆಪ್ತ ಸಂಗತಿಯನ್ನು ಅರಿಕೆಮಾಡಿಕೊಳ್ಳಲು ಬಂದಿದ್ದೇನೆ. ಅಪ್ಪಣೆಮಾಡಿದರೆ ಅರಿಕೆಮಾಡಿಕೊಳ್ಳುತ್ತೇನೆ" ಎಂದನು ಅಸದ್ ಖಾನ್.

"ಏನುಸಂಗತಿ ತಿಳಿಸಬಹುದು!"

"ನಮ್ಮ ಸುಲ್ತಾನರೊಡನೆ ಖಾವಂದರು ಸಂಧಿಮಾಡಿಕೊಂಡು, ತಮ್ಮ ಹಳೆಯವೈರವನ್ನು ಮರೆಯಲು ನಿರ್ಧರಿಸಿದಿರಿ. ಇದು ತಮ್ಮ ದೊಡ್ಡಗುಣ ಆದರೆ...."

"ಏನು ಆದರೆ....?"

"ಖಾವಂದ್, ನಾನು ಸುಲ್ತಾನರ ಸೇವೆಯಲ್ಲಿದ್ದೇನೆ. ಅವರ ಉಪ್ಪು ತಿನ್ನುತ್ತಿದ್ದೇನೆ. ಎಂದು ನೀವು ನನ್ನ ಮಾತನ್ನು ತಿರಸ್ಕರಿಸಬಹುದು. ಆದರೆ ನಾನು ಎರಡು ರಾಷ್ಟ್ರಗಳ ಸ್ನೇಹ ಚಿರಕಾಲ ಉಳಿಸುವ ಆಶಯದಿಂದ ತಮಗೆ ಈ ಸಂಗತಿಯನ್ನು ವರದಿ ಮಾಡುತ್ತಿದ್ದೇನೆ. ಕಳೆದ ಮೂವತ್ತು ವರ್ಷಗಳು ಮೇಲಿಂದ ಮೇಲೆ ಯುದ್ಧ ನಡೆದು ಎರಡು ರಾಷ್ಟ್ರಗಳಿಗೂ ಶಾಂತಿ ಇಲ್ಲದಾಗಿದೆ. ನಾಡಿನ ಜನತೆ ಯುದ್ಧದಿಂದ ಬೇಸರಗೊಂಡಿದೆ. ಎಂದಿಗೆ ಇದರಿಂದ ಮುಕ್ತಿ ಎಂದು ಹಾತೊರೆಯುತ್ತಿದೆ. ಅವರಿಗೆ ಬೇಕಾಗಿರುವುದು ಯುದ್ಧವಲ್ಲ – ಶಾಂತಿ ನೆಮ್ಮದಿಗಳು. ಇದು ದೈವಾನುಗ್ರಹದಿಂದ ಇದು ದೊರೆತಿದೆ. ಯಾವುದರ ಸಲುವಾಗಿ ಕಳೆದ ಇಪ್ಪತ್ತು ವರ್ಷಗಳು ಸಂತತವಾಗಿ ಯುದ್ಧ ನಡೆದು ಅಪಾರ ಸಾವು ನೋವುಗಳಿಗೆ ಎರಡು ರಾಷ್ಟ್ರಗಳೂ ಇಡಾಗಿದ್ದವೋ ಆ ರಾಯಚೂರು ಮತ್ತು ಮುದ್ಗಲ್ಲುಗಳನ್ನು ಖಾವಂದರು ಉದಾರ ಮನಸ್ಸಿನಿಂದ ನಮಗೇ ಉಳಿಸಿಕೊಟ್ಟು, ನಮಗೆ ಸ್ನೇಹ ಹಸ್ತ ನೀಡಿ, ಸಂಧಾನ ಮಾಡಿಕೊಂಡಿರಿ. ನಿಮ್ಮ

ಉಪಕಾರವನ್ನು ನಮ್ಮ ನಾಡಿನ ಜನತೆ ಎಂದಿಗೂ ಮರೆಯಲಾರದು. ಆದರೆ ....ಸುಲ್ತಾನರು ಏಕೋ ಜನತೆಯನ್ನು ಮತ್ತೆ ಯುದ್ಧದ ಮಾರಿಗೆ ಬಲಿಕೊಡುವ ಯೋಜನೆ ಮಾಡುತ್ತಿದ್ದಾರೆ – ಇದನ್ನು ತಿಳಿದು ಜನತೆ ಕಂಗೆಟ್ಟಿದ್ದಾರೆ. ಅವರ ಭೀತಿಯನ್ನು ಅರಿತ ನಾನು, ಸುಲ್ತಾನರನ್ನು ಯುದ್ಧ ಪ್ರಯತ್ನದಿಂದ ವಿಮುಖ ಮಾಡಲು ಪ್ರಯತ್ನಿಸಿದೆ. ಕಡೆಗೆ ಯುದ್ಧ ವಿರೋಧಿಯಾದ ನಾನು ವಿಶ್ವಾಸ ಘಾತುಕರ ಮಾತು ಕೇಳಿಕೊಂಡ ಸುಲ್ತಾನರಿಗೂ ವಿರೋಧಿಯಾದೆ ಅವರು ನನ್ನನ್ನು ಸಂಶಯ ದೃಷ್ಟಿಯಿಂದ ನೋಡಿದುದು ಮಾತ್ರವಲ್ಲ. ನನ್ನನ್ನು ಸೆರೆಯಲ್ಲಿಡಲು ಆಲೋಚಿಸಿದರು. ಈ ಸಂಗತಿಯನ್ನು ಹೇಗೋ ತಿಳಿದ ನಾನು ಬೆಳಗಾಂ ದುರ್ಗಕ್ಕೆ ಓಡಿಬಂದು ತಲೆತಪ್ಪಿಸಿಕೊಂಡೆ, ಈಗ ನನ್ನನ್ನು ಹಿಡಿಯಲು, ಅವರು ದಂಡೆತ್ತಿ ಬರಲಿರುವ ಸಂಗತಿಯನ್ನು ಕೇಳಿ ನಾನು ನಿಮಗೆ ಶರಣು ಬಂದಿದ್ದೇನೆ. ನನ್ನನ್ನು ಸುಲ್ತಾನರಿಂದ ಉಳಿಸಿ ಕಾಪಾಡಬೇಕು...." ಎಂದು ಬೇಡಿಕೊಂಡನು.

ಈ ಎಲ್ಲ ಮಾತನ್ನು ಕೇಳಿ ಅಚ್ಯುತರಾಯ ಮತ್ತು ಸಲಕಂ ಸಹೋದರರು ಚಕಿತರಾದರು. ಅವರು ಅಸದ್ ಖಾನನಿಂದ, ಅದೂ ಬಿಜಾಪುರದ ಸುಲ್ತಾನನ ಬಲಗೈಯಂತಿದ್ದ ಸಮರ್ಥ ದಂಡನಾಯಕನಿಂದ ಈ ದ್ರೋಹದ ಕಥೆ ಕೇಳಿ ನಂಬಲಾಗಲಿಲ್ಲ. ಸಲಕಂ ಸೋದರರಿಗೆ ಅಸದ್ ಖಾನನ ಪೂರ್ವ ಚರಿತ್ರೆ ಕೇಳಿದ್ದುದರಿಂದ ಅವನ ಮಾತುಗಳಲ್ಲಿ ನಂಬಿಕೆ ಹುಟ್ಟಲಿಲ್ಲ. ಪೆದ್ದ ತಿರುಮಲನು ಪ್ರಶ್ನಿಸಿದ.

" ಅಸದ್ ಖಾನರೇ ನಿಜಕ್ಕೂ ಮಹತ್ವಪೂರಿತ ಸಂಗತಿಯನ್ನು ನೀವು ತಂದಿದ್ದೀರಿ. ನಾವು ಸಂಧಿಯಾದ ಮೇಲೆ, ಎರಡು ರಾಷ್ಟ್ರಗಳಿಗೂ ಸ್ನೇಹ ಸೌಹಾರ್ದಗಳು ಏರ್ಪಟ್ಟಿತೆಂದು ನಂಬಿದ್ದೆವು. ಆದರೆ ನಿಮ್ಮ ಸುಲ್ತಾನರು ಹೀಗೆ, ಶಾಂತಿಯ ಹೆಸರಿನಲ್ಲಿ, ಸಾಮ್ರಾಜ್ಯದ ಮೇಲೆ ಯುದ್ಧದ ಸಿದ್ಧತೆ ಮಾಡಿಕೊಳ್ಳುವರೆಂದು ನಮಗೆ ತಿಳಿದಿರಲಿಲ್ಲ. ನೀವು ಈ ಎಲ್ಲ ಸಂಗತಿಯನ್ನು ಹೇಳಿದ ಮೇಲೂ ನಂಬುವುದು ಕಠಿಣವಾಗಿದೆ. ಅವರಿಗೆ ಕಳೆದ ಇಪ್ಪತ್ತು ವರ್ಷಗಳಲ್ಲಿ ವಿಜಯನಗರದ ಮೇಲೆ ಕೈಮಾಡಿದರೆ ಆಗುವ ಪರಿಣಾಮವೇನೆಂದು ತಿಳಿದಿದೆ. ನೀವು ಈ ವಾರ್ತೆಯನ್ನು ನಮಗೆ ತಿಳಿಸಿ ಬಹಳ ಉಪಕಾರ ಮಾಡಿದಿರಿ. ನಾವೂ ಬಿಜಾಪುರದ ಮೇಲೆ ಯುದ್ಧ ಸಿದ್ಧತೆಗಳನ್ನು ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಿರಿ. ಪೂರ್ವಭಾವಿಯಾಗಿ ಇದರ ಸುಳಿವು ತಿಳಿಸಿ...."

" ಈ ಬಾರಿ ಸುಲ್ತಾನರು ಪೋರ್ಚುಗೀಸರ ಸಹಾಯದಿಂದ ನಮ್ಮ ಮೇಲೆ ಧಾಳಿಯಿಡಬೇಕೆಂದಿದ್ದಾರೆ....ಪೋರ್ಚುಗೀಸರಿಗೆ ಗೋವೆಯ ಪ್ರದೇಶಗಳನ್ನು ಕೊಟ್ಟು ಆ ಮೂಲಕ ಅವರ ಸ್ನೇಹವನ್ನು ಸಂಪಾದಿಸಿದ್ದಾರೆ." ಎಂದ ಅಸದ್ ಖಾನ್.

"ಏನು? ಪೋರ್ಚುಗೀಸರು ಸುಲ್ತಾನರಿಗೆ ನೆರವಾಗುವರೆ?" ಎಂದು ಪ್ರಶ್ನಿಸಿದ ಅಚ್ಯುತರಾಯ.

"ಹೌದು ಖಾವಂದ್. ನಿಮ್ಮ ಮೇಲೆ ಅವರಿಗೆ ಮೊದಲಿನಿಂದಲೂ ಅಸಮಾಧಾನವಿತ್ತು. ಸಾಮ್ರಾಟ್ ಕೃಷ್ಣದೇವರಾಯರು ಆ ಪ್ರದೇಶಗಳನ್ನು ಅವರಿಗೆ ಕೊಡುವುದಾಗಿ ವಾಗ್ದಾನ ಮಾಡಿ ಆಸೆ ಹುಟ್ಟಿಸಿ, ವಚನ ಭಂಗ ಮಾಡಿದರಂತೆ, ಈಗ ಸುಲ್ತಾನರು ತಮ್ಮ ವಚನ ಪಾಲಿಸಿದ್ದರಿಂದ ಅವರು, ಸುಲ್ತಾನರಿಗೆ ತಮ್ಮ ಎಲ್ಲ ನೆರವು ಕೊಡಲು ನಿಶ್ಚಯಿಸಿದ್ದಾರೆ. ಅವರು ಸಂಧಾನ ಮಾಡಿಕೊಂಡು ಅಶ್ವ ವ್ಯಾಪಾರವನ್ನು ಸಹ ಸುಲ್ತಾನರೊಂದಿಗೆ ಮಾಡಲು ನಿಶ್ಚಯಿಸಿದ್ದಾರೆ."

"ಅಂತಾದರೆ ಪರಿಸ್ಥಿತಿ ನಾವು ತಿಳಿದಿದುಕ್ಕಿಂತಲೂ ಹದಗೆಟ್ಟಿದೆ. ಆ ಪೋರ್ಚುಗೀಸರಿಗೆ ನಮ್ಮ ವಿರುದ್ಧ ಸುಲ್ತಾನರಿಗೆ ಸಹಾಯಮಾಡಲು ಧೈರ್ಯ ಬಂತೆ? ಆಶ್ಚರ್ಯ! ಎಲ್ಲಿಂದಲೋ ಬಂದು ಇಲ್ಲಿ ಮಳಿಗೆಕಟ್ಟಿಕೊಂಡು, ವ್ಯಾಪಾರ ಮಾಡಲು ನಿಂತ ಅವರಿಗೆ ನಮ್ಮನ್ನು ಎದುರಿಸುವ ಧೈರ್ಯಬಂತೆ?" ಎಂದು ಅಚ್ಯುತರಾಯ ಕೆರಳಿದ.

"ಅವರಿಗೆ ಆ ಧೈರ್ಯ ಹೇಗೆ ಬರುತ್ತದೆ ಖಾವಂದ್, ಸ್ವಯಂ ಸುಲ್ತಾನರೇ ಅವರನ್ನು ನಿಮ್ಮ ವಿರುದ್ಧ ಎತ್ತಿಕಟ್ಟಿದ್ದಾರೆ!"

"ಹಾಗಾದರೆ ಯುದ್ಧ ಅನಿವಾರ್ಯ!" ಎಂದು ನಿಟ್ಟುಸಿರುಬಿಟ್ಟ ಅಚ್ಯುತರಾಯ – ಯುದ್ಧಕ್ಕೆ ಹೆದರಿದವನೆಂಬಂತೆ. ಇದನ್ನು ಅರಿತ ಸಲಕಂ ಪೆದ್ದ ತಿರುಮಲನು,

"ಪ್ರಭುಗಳು ಈಬಗ್ಗೆ ಚಿಂತಿಸಬಾರದು. ವಿಶ್ವಾಸ ಘಾತುಕ ಸುಲ್ತಾನನು ನಮ್ಮ ಮೇಲೆ ದಂಡೆತ್ತಿ ಬರಲಿ. ನಾವು ಸರಿಯಾದ ಬುದ್ಧಿ ಕಲಿಸುತ್ತೇವೆ" ಎಂದು ಹೂಂಕರಿಸಿದ. ಅನಂತರ ಅಸದ್ ಖಾನನ ಕಡೆತಿರುಗಿ,

"ಅಸದ್ ಖಾನರೇ, ನೀವು ಸಕಾಲದಲ್ಲಿ ಬಂದು ನಮ್ಮನ್ನು ಎಚ್ಚರಿಸಿದುದಕ್ಕಾಗಿ ನಿಮಗೆ ವಂದನೆಗಳು."

"ಪ್ರಭುಗಳು ಬಿಜಾಪುರದ ಸುಲ್ತಾನರ ವಿರುದ್ಧ ನಮಗೆ ಆಶ್ರಯಕೊಟ್ಟರೆ ನನಗೆ ಬೇರಿಯಾವ ಪ್ರತ್ಯುಪಕಾರ ಬೇಡ ಅಮಾತ್ಯರೆ?"

"ಅದು ನೀವು ಯೋಚಿಸದಿದ್ದರೂ, ನಿಮಗೆ ದೊರೆಯುತ್ತದೆ. ವಿಜಯನಗರದ ಅರಸರು – ಎಂದೂ ಶರಣಾಗತರಾದವರನ್ನು ಶತ್ರುಗಳಿಗೆ ಒಪ್ಪಿಸಿಲ್ಲ— ಒಪ್ಪಿಸುವುದೂ ಇಲ್ಲ! ನಿಮ್ಮ ಸಲುವಾಗಿ, ನಾವು ಸುಲ್ತಾನರೊಡನೆ ಸಮಯ ಬಂದರೆ ಯುದ್ಧಕ್ಕೂ ಸಿದ್ಧರಾಗಿದ್ದೇವೆ. ನೀವು ಈ ಬಗ್ಗೆ ನಿಶ್ಚಿಂತೆಯಿಂದ ಇರಿ!" ಎಂದು ಅಭಯ ನೀಡಿ ಅಸದ್ ಖಾನನನ್ನು ಆಸ್ಥಾನದಲ್ಲೇ ಉಳಿಸಿಕೊಂಡನು.

ಇಷ್ಟಾದರೂ ಅಸದ್ ಖಾನನು ಹೇಳಿದ್ದ ಸಂಗತಿಗಳನ್ನು ಸಂಪೂರ್ಣವಾಗಿ ನಂಬದೆ ಸಲಕಂ ಸಹೋದರರು, ಬಿಜಾಪುರಕ್ಕೂ, ಗೋವೆಗೂ ಗೂಢಚಾರರನ್ನು ಕಳುಹಿಸಿಕೊಟ್ಟರು. ಅವರು ಸಕಾಲದಲ್ಲಿ ಹಿಂದಿರುಗಿ ಬಂದು ಅಸದ್ ಖಾನನು ಹೇಳಿದ್ದ ಎಲ್ಲ ಸಂಗತಿಗಳೂ ನಿಜವೆಂದು ವರದಿ ಮಾಡಿದರು. ಆಗಲೇ ಸಲಕಂ ಸೋದರರಿಗೆ ನಿಜವಾಗಿಯೂ ಅವರ ವಿಷಯದಲ್ಲಿ ನಂಬಿಕೆ ಉಂಟಾದುದು.

ಅಚ್ಯುತರಾಯನ ನಂಬಿಕೆ ವಿಶ್ವಾಸಗಳನ್ನು ಗಳಿಸಿಕೊಂಡ ಮೇಲೆ ಅಸದ್ ಖಾನನು ಸುಮ್ಮನೆ ಕುಳಿತುಕೊಳ್ಳಲಿಲ್ಲ. ಅವನು ಅಚ್ಯುತರಾಯನನ್ನು ಭೇಟಿ ಮಾಡಿ, ಹತ್ತಾರು ವರ್ಷಗಳಿಂದ ವಿಜಯನಗರದ ವಶದಲ್ಲಿದ್ದ ರಾಯಚೂರು, ಮುದ್ಗಲ್ಲಗಳನ್ನು ಬಿಟ್ಟುಕೊಟ್ಟುದು ತಪ್ಪಾಯಿತೆಂದೂ, ಅವುಗಳಿಗಾಗಿ ಕೃಷ್ಣದೇವರಾಯನು ಪಟ್ಟ ಶ್ರಮ, ಮಾಡಿದ ಸಾಹಸಗಳನ್ನು ತಿಳಿಸಿದ. ಗಡಿಪ್ರದೇಶದ ಆ ದುರ್ಗಗಳು ಅತ್ಯಂತ ಪ್ರಾಮುಖ್ಯವಾದುದೆಂದೂ, ಹೇಗಾದರೂ ಅವನ್ನು ಮತ್ತೆ ವಶಪಡಿಸಿಕೊಳ್ಳಬೇಕೆಂದೂ ಪ್ರೇರೇಪಿಸಿದ.

" ಪ್ರಭೂ, ಈಗ ತಾವು ಸೈನ್ಯ ಸಮೇತ ಹೊರಟು ಸದ್ದಿಲ್ಲದೆ, ರಾಯಚೂರಿನ ಮೇಲೆ ಧಾಳಿಯಿಟ್ಟರೆ ಅಲ್ಪ ಸೈನ್ಯದ ರಕ್ಷಣೆಯಲ್ಲಿರುವ ಅದನ್ನು ಸುಲಭವಾಗಿ ವಶಮಾಡಿಕೊಳ್ಳಬಹುದು."

ಎಂದು ಹೇಳಿ, ಗೋವೆಯ ಪೋರ್ಚುಗೀಸರ ನೆರವು ದೊರೆಯುವ ಮೊದಲೇ ಸುಲ್ತಾನನ ಯುದ್ಧ ಸಿದ್ಧತೆಗಳನ್ನು ಮುರಿಯಬೇಕೆಂದು ಸಲಹೆ ಮಾಡಿದ ಈ ಸಲಹೆಯನ್ನು ಸಲಕಂ ಸಹೋದರರು ಆದರದಿಂದ ಸ್ವಾಗತಿಸಿದರು ಅವರು ಆದಷ್ಟು ಬೇಗ, ರಾಯಚೂರನ್ನು ಹಠಾತ್ತನೆ ಧಾಳಿಯಿಟ್ಟು ವಶಪಡಿಸಿಕೊಳ್ಳಲು ಸೈನ್ಯಸಿದ್ಧತೆ ಭರದಿಂದ ಮಾಡಿಕೊಂಡರು. ಅಷ್ಟರಲ್ಲಿ ಬಿಜಾಪುರದಿಂದ ಒಂದು ಮಹತ್ವದ ಪತ್ರ ಬಂದಿತು. ಅದರಲ್ಲಿ ಬಿಜಾಪುರದ ಸುಲ್ತಾನನು ತನ್ನ ಸೇವೆಯಲ್ಲಿದ್ದು ತನಗೆ ದ್ರೋಹವೆಸಗಿ ತಲೆತಪ್ಪಿಸಿಕೊಂಡಿರುವ ಅಸದ್ ಖಾನನನ್ನು ತನಗೆ ಒಪ್ಪಿಸಬೇಕೆಂದೂ, ಇಲ್ಲವಾದರೆ ಸಂಧಿಯ ಶರತ್ತುಗಳನ್ನು ವಿಜಯನಗರದವರೇ ಮುರಿದಂತಾಗುವುವೆಂದೂ, ಇದರಿಂದ ಯುದ್ಧ ಅನಿವಾರ್ಯವಾಗಬಹುದೆಂದು ತಿಳಿಸಿದ್ದ. ಎಲ್ಲವನ್ನೂ ತಿಳಿದ ಸಾಮ್ರಾಟರು ಒಬ್ಬ ಅಸದ್ ಖಾನನ ಸಲುವಾಗಿ ಎರಡುರಾಷ್ಟ್ರಗಳ ನಡುವೆ ಆಗಿರುವ ಶಾಂತಿ ಒಪ್ಪಂದವನ್ನು ಮುರಿಯುವುದಿಲ್ಲವೆಂದು ತಾವು ತಿಳಿದಿರುವುದಾಗಿ ತಿಳಿಸಿದ್ದ.

ಈ ಪತ್ರಕ್ಕೆ ಅಚ್ಯುತರಾಯನು ವಿರೋಚಿತವಾದ ಉತ್ತರವನ್ನೇ ಕೊಟ್ಟನು.

" ವಿಜಯನಗರದ ಅರಸರು ಹಿಂದಿನಿಂದಲೂ, ಆಶ್ರಿತಜನರಕ್ಷಕನೆಂಬ ಬಿರುದಿಗೆ ಪಾತ್ರರಾಗಿದ್ದಾರೆ. ಅವರು ಪ್ರಾಣಹೋದರೂ ತಮಗೆ ಶರಣಾಗಿ

ಬಂದವರನ್ನು ಬಿಟ್ಟುಕೊಡರು. ಆನೆಗೊಂದಿಯ ಜಂಬುಕೇಶ್ವರರಾಯರು, ಮಹಮದ್‌ಬಿನ್‌ತೊಗಲಖ್‌ನಂತಹ ದಿಲ್ಲೀಶ್ವರನನ್ನು ಎದುರಿಸಿ ಹೋರಾಡಿ ಮಡಿದರೇ ಹೊರತು, ತನಗೆ ಶರಣಾಗಿದ್ದ ಬಹಾವುದ್ದೀನನನ್ನು ಬಿಟ್ಟುಕೊಡಲಿಲ್ಲ. ಆ ಪುಣ್ಯಪುರುಷರು ತುಳಿದ ಬೀಡು ಈ ವಿಜಯನಗರ! ಇಲ್ಲಿಗೆ ಶರಣು ಬಂದ ಯಾರನ್ನೂ ನಾವು ಯಾವ ಕಾರಣಕ್ಕೂ ಹಿಂದಿರುಗಿಸಲಾರೆವು! ಇದರಿಂದ ಯುದ್ಧ ಸಂಭವಿಸುವುದಾದರೆ ಆದಕ್ಕೆ ನಾವು ಸಿದ್ಧರಿದ್ದೇವೆ." ಎಂಬ ಮಾತು ಗಳನ್ನು ಬರೆದನು.

ಈ ಪತ್ರವನ್ನು ಓದಿಕೊಂಡ ಸಲಕಂ ಸಹೋದರರು ಅಚ್ಯುತರಾಯನಲ್ಲಿ ಇಂತಹ ಕಲಿತನವಿದೆಯೇ ಎಂದು ಅಚ್ಚರಿಪಟ್ಟರು.

"ಇದು ಸಿಂಹಾಸನದ ಪ್ರಭಾವ – ನಿಂತ ನೆಲದ ಪ್ರಭಾವ; ಅವು ಹೇಡಿ ಗಳಲ್ಲೂ ಇಂತಹ ಕಲಿತನದ ಕೆಚ್ಚನ್ನು ಕೆರಳಿಸುತ್ತದೆ." ಎಂದು ತಮ್ಮಲ್ಲೇ ಅಂದುಕೊಂಡರು.

ಯುದ್ಧ ಅನಿವಾರ್ಯವಾಗುವುದೆಂದು ತಿಳಿದ ಮೇಲೆ, ಇನ್ನು ತಡ ಮಾಡಿ ದರೆ ಪ್ರಯೋಜನವಿಲ್ಲವೆಂದು ಸಲಕಂ ಸಹೋದರರು ವಿಜಯನಗರದ ಸಮಸ್ತ ಸೇನಾಬಲದೊಂದಿಗೆ ರಾಯಚೂರಿನ ಮಾರ್ಗ ಹಿಡಿದರು.

ಅಸದ್‌ಖಾನನು ಬೆಳಗಾಂ ದುರ್ಗದಲ್ಲಿರುವ ತನ್ನ ಸ್ವಂತ ಸೈನ್ಯವನ್ನು ಜೊತೆಯಲ್ಲಿ ತೆಗೆದುಕೊಂಡು ಬಂದು ನಡುದಾರಿಯಲ್ಲಿ ಅವರನ್ನು ಕೂಡಿಕೊಳ್ಳು ವುದಾಗಿ ಹೇಳಿ ರಾಜಧಾನಿಯಿಂದ ಹೊರಟುಹೋದನು.

ಅವನು ಬೆಳಗಾಂ ದುರ್ಗಕ್ಕೆ ಹೋಗದೆ ನೇರ ಗೋವೆಗೆ ಹೋಗಿ, ಅಲ್ಲಿನ ಗೌರ್ನರ್ ಡಾಕುನ್ಹನನ್ನು ಕಂಡು ನಡೆದಿದ್ದ ಸಂಗತಿಯನ್ನು ತಿಳಿಸಿದ.

"ಮಾನ್ಯ ಡಾಕುನ್ಹರವರೇ, ನಾನು ನಿಮ್ಮ ಸಲುವಾಗಿ ಬಹಳ ಪ್ರಯತ್ನ ಮಾಡಿದೆ ನನ್ನ ಶ್ರಮ ನಿಷ್ಪ್ರಯೋಜನವಾಯಿತು. ತಮ್ಮದಾಗಿದ್ದು ಈಗ ಕೈಬಿಟ್ಟು ಹೋಗಿರುವ ಆ ಪ್ರಾಂತ್ಯಗಳನ್ನು ಬಿಟ್ಟುಕೊಡಲು ವಿಜಯನಗರದ ಅರಸರು ಒಪ್ಪಲಿಲ್ಲ." ಎಂದು ಹೇಳಿದ.

ಇದನ್ನು ನಿಜವೆಂದು ನಂಬಿದ ಡಾಕುನ್ಹ ವಿಜಯನಗರದವರ ವಿರುದ್ಧ, ಬಿಜಾಪುರದ ಸುಲ್ತಾನನಿಗೆ ನೆರವಾಗಲು ತನ್ನ ಬಳಿ ಇದ್ದ ಮದ್ದು ಗುಂಡು ಗಳನ್ನೂ ಸೈನ್ಯವನ್ನೂ ಕಳುಹಿಸಿಕೊಡಲು ನಿಶ್ಚಯಿಸಿ, ಅಂದೇ ಸುಲ್ತಾನನಿಗೆ ಪತ್ರ ಬರೆದು ತನ್ನ ನಿರ್ಧಾರವನ್ನು ತಿಳಿಸಿದನು.

ಗೋವೆಯ ಸುತ್ತಮುತ್ತಲ ಪ್ರಾಂತ್ಯಗಳು ಕೈಬಿಡದೆ, ಪೋರ್ಚುಗೀಸರ ನೆರವು ದೊರೆತುದಕ್ಕಾಗಿ, ಆದಿಲ್‌ಷಹನು ಅಸದ್‌ಖಾನನನ್ನು ಹೊಗಳದೆ ಇರಲಿಲ್ಲ. ತನ್ನ ವಿರೋಧಿಯಂತೆ ನಟಿಸಿ ವಿಜಯನಗರದವರ ವಿಶ್ವಾಸಕ್ಕೆ ಪಾತ್ರನಾಗಿ,

ರಾಯಚೂರು ಯುದ್ಧದಲ್ಲಿ ಮೋಸದಿಂದ, ಅವರ ಮೇಲೆ ವಿಜಯಗಳಿಸಿಕೊಡಲು ತಂತ್ರ ಹೂಡಿದ್ದ ಸಂಗತಿ ಕೇಳಿ, ಅಸದ್ ಖಾನನ ಬಗ್ಗೆ ಅಭಿಮಾನ ಉಂಟಾಗಿತ್ತು.

ಸೈನ್ಯದೊಡನೆ ರಾಯಚೂರಿಗೆ ಬಂದಿದ್ದ ಸಲಕಂ ಸಹೋದರರ ನಿರೀಕ್ಷೆ ಸುಳ್ಳಾಯಿತು. ರಾಯಚೂರಿನ ರಕ್ಷಣೆಗಾಗಿ, ಆದಿಲ್‌ಷಹನನ್ನು ಗೋವೆಯ ಪೋರ್ಚುಗೀಸರ ದಂಡನ್ನು ಕೂಡಿಸಿಕೊಂಡು, ಅಗಾಧವಾದ ಸೈನ್ಯದೊಡನೆ ಧಾವಿಸಿ ಬಂದಿದ್ದನು. ಅವರು ತಮ್ಮನ್ನು ಮಾರ್ಗ ಮಧ್ಯದಲ್ಲಿ ತನ್ನ ಸೈನ್ಯ ದೊಡನೆ ಬಂದು ಕೂಡಿಕೊಂಡಿದ್ದ ಅಸದ್‌ಖಾನನನ್ನು ಆಕ್ಷೇಪಿಸದೆ ಇರಲಿಲ್ಲ.

"ಅಮಾತ್ಯರೇ ಅಚಾತುರ್ಯವಾಯಿತು, ಈ ಮೊದಲು ಇಲ್ಲಿ ಹೆಚ್ಚು ಸೈನ್ಯವಿರಲಿಲ್ಲ. ನಾವು ರಾಯಚೂರನ್ನು ವಶಪಡಿಸಿಕೊಳ್ಳುವ ಸುದ್ದಿಯನ್ನು ಸುಲ್ತಾನರು ಹೇಗೋ ತಿಳಿದುಕೊಂಡು ಅದರ ರಕ್ಷಣೆಗೆ ಧಾವಿಸಿ ಬಂದಿದ್ದಾರೆ." ಎಂದು ಹೇಳಿ ಜಾರಿಕೊಂಡಿದ್ದ ಅಸದ್ ಖಾನ್.

ಈಗ ಯುದ್ಧಕ್ಕೆಂದು ಬಂದ ಮೇಲೆ ಹಿಂದಿರುಗಲು ಸಾಧ್ಯವಿರಲಿಲ್ಲ. ಯುದ್ಧ ಅನಿವಾರ್ಯವಾಯಿತು.

ಎರಡು ಕಡೆಯ ಸೈನ್ಯಗಳು ಭೀಕರವಾಗಿ ಯುದ್ಧ ಮಾಡಿದವು. ಪೋರ್ಚುಗೀಸರ ಮದ್ದು ಗುಂಡುಗಳಿಗೆ ಸಿಕ್ಕಿ ಬಹುಸಂಖ್ಯೆಯಲ್ಲಿ ವಿಜಯನಗರದ ಸೈನ್ಯ ಹತವಾಯಿತು. ಅಧಿಕ ಸಂಖ್ಯೆಯಲ್ಲಿದ್ದ ವಿಜಯನಗರದ ಸೈನ್ಯದ ಕೈ ಜೋರಾಯಿತೆನ್ನುವಷ್ಟರಲ್ಲಿ ಅಸದ್ ಖಾನನು ತನ್ನ ಸೈನ್ಯದೊಂದಿಗೆ ಬಿಜಾಪುರ ದವರ ಕಡೆ ಸೇರಿಕೊಂಡನು. ಇದರಿಂದ ಸೈನ್ಯದಲ್ಲಿ ಹಾಹಾಕಾರ ಉಂಟಾ ಯಿತು. ಅನಾಯಕತೆ ತಲೆದೋರಿತು ಏನಾಯಿತೆಂದು ತಿಳಿಯದೆ ದಿಗ್ಭ್ರಾಂತ ರಾಗಿ ಪೋರ್ಚುಗೀಸರ ಮದ್ದು ಗುಂಡುಗಳಿಗೆ ಬಲಿಯಾದರು. ಈ ಹೋರಾಟ ದಲ್ಲಿ ಜಯದ ಮಾತು ದೂರವಾಗಿ, ಪ್ರಾಣ ಉಳಿದರೆ ಸಾಕೆಂದು, ಸಲಕಂ ಸಹೋದರರು, ಸೈನ್ಯವನ್ನು ಅದರ ಹಣೆಯಬರಹಕ್ಕೆ ಬಿಟ್ಟು ರಣರಂಗದಿಂದ ಓಡಿ ತಲೆತಪ್ಪಿಸಿಕೊಂಡರು. ವಿಶ್ವನಾಥನಾಯಕ, ವಿಠಲದೇವ ಮುಂತಾದ ನಾಯಕರು ಯುದ್ಧದ ಸ್ವರೂಪವನ್ನು ಬದಲಾಯಿಸಲು ಎಷ್ಟು ಪ್ರಯತ್ನ ಸಿದರೂ ಸಾಧ್ಯವಾಗದೆ ವೃಥಾ ಕೊಲೆಯನ್ನು ತಪ್ಪಿಸಲು, ಬಿಜಾಪುರದವರಿಗೆ ಶರಣಾಗತರಾದರು.

ಯುದ್ಧದಲ್ಲಿ ದೊರೆತ ಅಪಾರ ಸೂರೆ, ಶಸ್ತ್ರಾಸ್ತ್ರಗಳು ಆನೆ, ಕುದುರೆ ಒಂಟೆ ಗಳು, ಡೇರೆ ಸಾಮಾನುಗಳು ಅವರದಾದವು. ಅವರು ವಿಪುಲವಾದ ಸಂಪ ತ್ತನ್ನು ಬಿಜಾಪುರಕ್ಕೆ ಸಾಗಿಸಿ, ಸೆರೆಯಾಳುಗಳ ರಕ್ಷಣೆಗೆ ಸೂಕ್ತ ವ್ಯವಸ್ಥೆ ಮಾಡಿ, ರಕ್ಷಿಸಲು ಸೈನ್ಯವಿಲ್ಲದೆ ಅಸಹಾಯಕವಾಗಿದ್ದ ವಿಜಯನಗರವನ್ನು ವಶಪಡಿಸಿ ಕೊಳ್ಳಲು ಅಸದ್ ಖಾನನು ಆದಿಲ್‌ಷಹನೊಂದಿಗೆ ಹೊರಟ.

ನಗರದ ಹೊರವಲಯದಲ್ಲಿದ್ದ ನಾಗಲಾಪುರವು ಸುಲಭವಾಗಿ ಶತ್ರುಗಳ ಕೈವಶವಾಯಿತು. ಅಲ್ಲಿನ ಅನೇಕ ಭವ್ಯ ಸೌಧಗಳು ನೆಲಸಮವಾದುವು. ಶತ್ರು ಸೈನಿಕರ ಕೈಗೆ ತಡೆಯಿಲ್ಲದಾಯಿತು. ಅನೇಕ ಗೋಬ್ರಾಹ್ಮಣರೂ, ಸ್ತ್ರೀಯರು, ಸೈನಿಕರ ಅತ್ಯಾಚಾರಕ್ಕೆ ಒಳಗಾದರು ದೇವಾಲಯಗಳು ನೆಲಸಮವಾಗಿ, ಮೂರ್ತಿಗಳು ಭಿನ್ನವಾದವು. ರಾಜಧಾನಿಯು ಕೈವಶವಾದರೆ ಇವೇ ದುರವಸ್ಥೆ ಬರುವುವೆಂದು ಹೆದರಿ, ಅಚ್ಯುತರಾಯನು ಯುದ್ಧದಲ್ಲಿ ಸೋತು ವಿಜಯನಗರಕ್ಕೆ ತಪ್ಪಿಸಿಕೊಂಡು ಬಂದಿದ್ದ, ಸಲಕಂ ಸಹೋದರರ ಸಲಹೆಯಂತೆ, ನಿರ್ವಾಹವಿಲ್ಲದೆ ಸಂಧಾನಕ್ಕೆ ದೂತರನ್ನು ಕಳುಹಿಸಿಕೊಟ್ಟನು. ಅಸದ್‌ಖಾನನಂತಹ ದ್ರೋಹಿಗೆ ರಕ್ಷಣೆ ಕೊಟ್ಟದ್ದು ಇಷ್ಟೆಲ್ಲಾ ಅಚಾತುರ್ಯಕ್ಕೆ ಕಾರಣವಾಗಿತ್ತು. ಈಗ ಆ ದ್ರೋಹಿಯನ್ನೇ ಸಂಧಾನಕ್ಕಾಗಿ, ಬೇಡಬೇಕಾದ ಪ್ರಸಂಗ ಬಂದಿತ್ತು. ಅನೇಕ ರಾಜಕೀಯ ಕಾರಣಗಳಿಂದಾಗಿ, ವಿಜಯೋನ್ಮತ್ತ ಸುಲ್ತಾನನು ಸಂಧಾನಕ್ಕೆ ಒಪ್ಪಿದನು.

ಎರಡು ಕಡೆಯ ರಾಯಭಾರಿಗಳು ಸೇರಿ, ಸಂಧಾನದ ಶರತ್ತುಗಳನ್ನು ರಚಿಸಿದರು. ಅದಿಲ್‌ಷಹನು ತನ್ನ ಸಕಲ ಸೈನ್ಯದೊಡನೆ ಹಿಂದಿರುಗಬೇಕೆಂದೂ, ಅವನಿಗೆ ಹತ್ತು ಲಕ್ಷ ಪಗೋಡಗಳನ್ನೂ, ಒಂದು ಲಕ್ಷ ಪಗೋಡ ಬೆಲೆಬಾಳುವ ಒಡವೆಗಳನ್ನೂ ಯುದ್ಧದ ಖರ್ಚಿಗಾಗಿ ಕೊಡಬೇಕೆಂದು ತಿರ್ಮಾನವಾಯಿತು. ಅಲ್ಲದೆ ರಾಯಚೂರನ್ನು ಬಿಟ್ಟುಕೊಡಬೇಕೆಂದೂ ಅದೇ ಎರಡು ರಾಷ್ಟ್ರಗಳ ಗಡಿ ಪ್ರದೇಶವೆಂದೂ ನಿರ್ಣಯವಾಯಿತು. ಸೆರೆಸಿಕ್ಕಿದ ಸೈನಿಕರನ್ನು ಬಿಡುಗಡೆ ಮಾಡಬೇಕೆಂದು ತೀರ್ಮಾನವಾಯಿತು.

ಉಭಯ ರಾಷ್ಟ್ರಗಳ ಅರಸರು ಅದರಂತೆ ನಡೆಯಲು ಒಪ್ಪಿಕೊಂಡ ಮೇಲೆ ಅಚ್ಯುತರಾಯನು ತನ್ನ ರಾಜಭಂಡಾರವನ್ನು ಸೂರೆಗೊಟ್ಟು ಸೆರೆಸಿಕ್ಕಿದವರನ್ನು ಬಿಡಿಸಿಕೊಂಡನು. ಅದಿಲ್‌ಷಹನು ತನಗೆ ದೊರೆತ ಸಂಪತ್ತಿನೊಡನೆ ಹಿಂದಿರುಗಿದ. ಅವನು ವಿಜಯನಗರದ ಅರಸರ ಮೇಲೆ ಸಾಧಿಸಿದ ಅಖಂಡ ದಿಗ್ವಿಜಯದ ಸಂಕೇತವಾಗಿ ವಿಜಯನಗರದ ಅರಸರ ಬಳಿಯಿದ್ದ ನೂರ ಅರವತ್ತೆರಡು ಕ್ಯಾರೆಟ್ ತೂಗುತ್ತಿದ್ದ ಸುಮಾರು ಒಂದುಲಕ್ಷರೂಪಾಯಿ ಬೆಲೆಬಾಳುತ್ತಿದ್ದ ಒಂದು ವಜ್ರ - ಅದಿಲ್‌ಷಹನ ಕುದುರೆಯ ಹಣೆಯಲ್ಲಿ ಶೋಭಿಸುತ್ತಿತ್ತು!

೧೩

ಹೀಗಾದೀತೆಂದು ಯಾರೂ ತಿಳಿದಿರಲಿಲ್ಲ. ಅಚ್ಯುತರಾಯನಿಗೆ ಕನಸಿನಲ್ಲೂ ಈ ರೀತಿಯಾಗುವುದೆಂದು ತಿಳಿದಿರಲಿಲ್ಲ. ಅವನ ಬಳಿಯಲ್ಲಿ ಮೂರು

ಸಾವಿರ ಆನೆಗಳೂ, ಮೂವತ್ತು ಸಾವಿರ ಕುದುರೆಗಳೂ, ಅಸಂಖ್ಯಾತ ಪದಾತಿ ಸೈನ್ಯಗಳಿದ್ದರೂ ಅಸದ್‌ಖಾನನ ಕುತಂತ್ರದಿಂದ ಅವನಿಗೆ ಸೋಲಾಗಿತ್ತು. ವಿಧಿ ಅವನಿಗೆ ಅನುಕೂಲವಾಗಿರಲಿಲ್ಲ. ಪ್ರಥಮಬಾರಿಗೆ ಬಿಜಾಪುರದ ಆದಿಲ್‌ಷಹನಿಗೆ ವಿಜಯನಗರದ ಅರಸರಮೇಲೆ ಜಯದೊರೆತಿತ್ತು. ಕೃಷ್ಣದೇವರಾಯನು ಬಿಜಾಪುರದವರೆಗೆ ದಂಡೆತ್ತಿಹೋಗಿ ಅದನ್ನು ಹಾಳುಗೆಡವಿದಂತೆ – ಆದಿಲ್ ಷಹನು ವಿಜಯನಗರದವರೆಗೆ ದಂಡೆತ್ತಿ ಬಂದು ನಾಗಲಾಪುರವನ್ನು ಧ್ವಂಸ ಮಾಡಿ ಮುಯ್ಯಿಗೆ ಮುಯ್ಯಿ ತೀರಿಸಿಕೊಂಡಿದ್ದನು.

ತಮ್ಮನ್ನು ಯಾರೂ ಮೋಸಗೊಳಿಸಲಾರರೆಂದು ತಿಳಿದಿದ್ದ ಸಲಕಂ ಸಹೋದರರೂ ಈ ಬಾರಿ ಮೋಸಹೋಗಿದ್ದರು. ರಾಯಚೂರಿನ ಯುದ್ಧದಲ್ಲಿ ಅವರು ಉಳಿದು ಬಂದುದೇ ಹೆಚ್ಚಾಗಿತ್ತು. ದೈವ ಹೇಗೋ ಅವರನ್ನು ಪಾರು ಮಾಡಿತ್ತು.

ಈಗ ಅವರಿಗೆ ಅಚ್ಯುತರಾಯನಿಗೆ ಮುಖತೋರಿಸಲು ನಾಚಿಕೆಯಾಗಿತ್ತು. ಈ ಬಗೆಯ ಪರಾಭವ ಎಂದೂ ಅನುಭವಿಸಿರಲಿಲ್ಲ. ದೇವರು ಅವರ ದುರಹಂಕಾರಕ್ಕೆ ತಕ್ಕ ಶಿಕ್ಷೆ ವಿಧಿಸಿದ್ದ. ಬಿಜಾಪುರದವರ ಮೇಲಿನ ಯುದ್ಧ ಪ್ರಥಮ ಬಾರಿಗೆ ಅಗೋಚರ ಶಕ್ತಿಯ ಮುಂದೆ ತಮ್ಮ ಶಕ್ತಿ ನಿಷ್ಪ್ರಯೋಜಕ ಎಂದು ಅವರು ತಿಳಿಯುವಂತೆ ಮಾಡಿತ್ತು. ಆದರೆ ಅವರಿಗೆ ಬಿದ್ದಿದ್ದ ಪೆಟ್ಟು ಅವರನ್ನು ಅಧೀರರನ್ನಾಗಿ ಮಾಡಲಿಲ್ಲ – ಅವರ ಮಹತ್ವಾಕಾಂಕ್ಷೆಯನ್ನು ಕುಗ್ಗಿಸಲಿಲ್ಲ. ಅವರು ತಮ್ಮ ದುರಾಲೋಚನೆಗಳನ್ನು ಬಿಡಲಿಲ್ಲ. ಅವರು ತಮಗಾದ ಸೋಲಿನಿಂದ ಅಪಮಾನಿತರಾಗಿ, ಖಿನ್ನನಾಗಿ ಕುಳಿತ ಅಚ್ಯುತರಾಯನ ಬಳಿಗೆ ಬಂದು ಅವನನ್ನು ಸಮಾಧಾನಗೊಳಿಸಲೆತ್ನಿಸಿದರು. ಆದರೆ ಅವರೆಷ್ಟು ಸಮಾಧಾನಗೊಳಿಸಲೆತ್ನಿಸಿದರೂ, ಅವನ ಮನಸ್ಸಿನ ದುಗುಡ ಕಳೆಯಲಿಲ್ಲ.

"ಪ್ರಭು, ಇದೊಂದು ಅಲ್ಪವಿಷಯಕ್ಕಾಗಿ ತಾವು ಇಷ್ಟು ವ್ಯಾಕುಲಗೊಳ್ಳಬಾರದು. ನಾವು ಆದಿಲ್‌ಷಹನಿಗೆ ಸೋತೆವೆಂದು ನಿಮಗೆ ಇಷ್ಟು ದುಃಖವೆ? ಅವರಿಗೆ ರಾಯಚೂರು, ಮುದ್ಗಲ್ಲುಗಳನ್ನು ಬಿಟ್ಟುಬಿಡಬೇಕಾಯಿತೆಂದು ಚಿಂತೆಯೆ? ಅವರಿಗೆ ಅಪಾರಹಣ ಕೊಡಬೇಕಾಯಿತಲ್ಲ ಎಂದು ಕೊರಗೆ? ಈ ಅಲ್ಪ ಸಂಗತಿಗಳಿಗಾಗಿ ಇಷ್ಟು ದುಃಖ ಪಡಬಾರದು ಪ್ರಭು! ನಮಗೆ ಸೋಲಾಯಿತು ನಿಜ. ಆದರೆ ಸಾಮ್ರಾಟ್ ಕೃಷ್ಣದೇವರಾಯರಿಂದ ಅನೇಕ ಬಾರಿ ಅವರಿಗೆ ಸೋಲಾಗಿದೆ – ಅವುಗಳ ಮುಂದೆ ಇದು ಸೋಲೇ ಅಲ್ಲ. ಆದಿಲ್ ಷಹನನ್ನು ಅಂದು ಸಾಮ್ರಾಟರು ಪಾದಚುಂಬನ ಮಾಡುವವರೆಗೆ ಸ್ನೇಹಭಿಕ್ಷೆ ಇಲ್ಲವೆಂದು ಸಾರಿದಾಗ ಇವರುಗಳ ದುರಹಂಕಾರ ಎಲ್ಲಿಹೋಗಿತ್ತೋ....? ಈ ದ್ರೋಹಿ ಅಸದ್‌ಖಾನನನ್ನು ಊರಿಂದೂರಿಗೆ ಅಟ್ಟಿಸಿಕೊಂಡುಹೋಗಿ ಬೇಟೆ

ಯಾಡಿದ್ದರು. ಅದನ್ನು ಅವನು ಮರೆತಿರಲಾರ! ಈಗ ದೈವ ನಮಗೆ ಪ್ರತಿಕೂಲವಾಗಿದೆ! ಇದಕ್ಕಾಗಿ ನೀವು ಚಿಂತಿಸಬೇಡಿ........ನಾವು ಅವರಿಗೆ ಬಿಟ್ಟು ಕೊಟ್ಟ ಊರುಗಳನ್ನು ದೈವಾನುಗ್ರಹದಿಂದ ನಿಮಿಷಮಾತ್ರದಲ್ಲಿ ಮತ್ತೆ ವಶ ಮಾಡಿಕೊಳ್ಳಬಹುದು. ಇದಕ್ಕಾಗಿ ನೀವು ಚಿಂತಿಸಬಾರದು ನಾವು ಅವರಿಗೆ ಕೊಟ್ಟ ಹಣ – ನಮ್ಮ ಭಂಡಾರದಲ್ಲಿರುವ ಅನರ್ಘ್ಯ ನಿಧಿನಿಕ್ಷೇಪಗಳಲ್ಲಿ ಸಾವಿರದಲ್ಲಿ ಒಂದು ಅಂಶವಿಲ್ಲ. ಹಾಳುಬಿದ್ದ ನಾಗಲಾಪುರವನ್ನು ಮತ್ತೆ ಕಟ್ಟಬಹುದು – ನಾವು ಮತ್ತೆ ಸೈನ್ಯ ಸಜ್ಜುಗೊಳಿಸಬಹುದು....ಆದರೆ ನೀವು ಧೈರ್ಯದಿಂದ ಇರಬೇಕು ಅಷ್ಟೇ" ಎಂದು ಧೈರ್ಯ ಹೇಳಿದನು ಪೆದ್ದತಿರುಮಲ.

"ನನ್ನ ಚಿಂತೆ ಅದಲ್ಲ ಅಮಾತ್ಯರೇ. ನಾನು ಆ ದಿನ ಸೆಲ್ಲಪ್ಪನಾಯಕರು ಹೇಳಿದ್ದ ಮಾತನ್ನು ನೆನೆಯುತ್ತಿದ್ದೆ. ಅವರು ಹೇಳಿದ್ದರು, ಸಾಮ್ರಾಜ್ಯಕ್ಕೆ ಎಲ್ಲಿಯವರೆಗೆ ಧರ್ಮದ ರಕ್ಷೆ ಇದೆಯೋ ಅಲ್ಲಿಯವರೆಗೆ ಅದಕ್ಕೆ ಯಾವ ಚ್ಯುತಿಯಿಲ್ಲ. ಅಧರ್ಮ ಧರ್ಮದ ಸ್ಥಾನ ಆಕ್ರಮಿಸಿದಂದು ನ್ಯಾಯ ಅನ್ಯಾಯಕ್ಕೆ ಎಡೆಕೊಟ್ಟಂದು ಸಾಮ್ರಾಜ್ಯಕ್ಕೆ ಅಳಿವುಸಿದ್ಧ – ಎಂದು ವಿದ್ಯಾರಣ್ಯರ ಭವಿಷ್ಯವಾಣಿ ಇದೆ ಎಂದು ಸಾಮ್ರಾಟ್ ಕೃಷ್ಣದೇವರಾಯರು ತಮ್ಮ ಮರಣಶಾಸನದಲ್ಲಿ ತಿಳಿಸಿದ್ದಾರೆ. ಈಗಾಗಿರುವ ಅನರ್ಥ ಪರಂಪರೆಗಳನ್ನು ನೆನೆದರೆ ನಾವು ಅಧರ್ಮದ ಹಾದಿಯಲ್ಲಿ ನಡೆದಿದ್ದೇವೆಯೋ ಏನೋ ಎಂದು ಎನಿಸುತ್ತಿದೆ...."

"ಓ! ಇಷ್ಟಕ್ಕೆಲ್ಲಾ ಪ್ರಭುಗಳು ಹೆದರುವುದೇ. ಯುದ್ಧವೆಂದರೆ ಸೋಲು ಗೆಲವುಗಳ ಆಟ. ಇದು ಪ್ರಕೃತಿನಿಯಮ. ಈ ಬಾರಿ ನಮಗೆ ಸೋಲಾಗಿದೆ – ಮುಂದಿನ ಬಾರಿ ಅವರಿಗೆ ಸೋಲಾಗಬಹುದು." ಎಂದು ಸಲಕಂ ಪೆದ್ದ ತಿರುಮಲನು ಸಮಾಧಾನಗೊಳಿಸಿದ.

"ಹೌದು. ಈ ಅನಿಶ್ಚಿತ ಯುದ್ಧಗಳ ಕಣ್ಣುಮುಚ್ಚಾಲೆಯಾಟದಿಂದಲೇ ಸಾಮ್ರಾಜ್ಯಗಳು ಹುಟ್ಟಿ ಹಾಳಾಗುವುದು!"

"ಈಗ ನಮಗೆ ಅಂತಹ ಭಯವೇನು ಬಂದಿದೆ?"

"ನಮಗೆ ಯಾವ ಭಯವೂ ಇಲ್ಲ – ದೈವಾನುಗ್ರಹದಿಂದ ಸಾಮ್ರಾಜ್ಯ ಸುಭದ್ರವಾಗಿದ್ದರೆ ಸಾಕಾಗಿದೆ, ಕಡೆಯತನಕ ಹೀಗೆಯೇ ನಡೆದುಬರಲೆಂದು ನನ್ನ ಪ್ರಾರ್ಥನೆ. ಆದರೂ ನಾವು ಯಾವುದನ್ನು ಧರ್ಮವೆಂದು ತಿಳಿದು ಅದರ ರಕ್ಷಣೆಗೆ ಹೊರಟೆವೋ ಅದೇ ಅಧರ್ಮವಾಗಬೇಕೆ? ಅದೇ ನಮ್ಮ ಪಾಲಿನ ಮೃತ್ಯುವಾಗಬೇಕೆ?"

"ನೀವು ಯಾವ ವಿಷಯವನ್ನು ಕುರಿತು ಹೇಳುತ್ತಿದ್ದೀರೋ ತಿಳಿಯಲಿಲ್ಲ!"

"ನಾವು ನಮಗೆ ಶರಣಾಗತನಾದ ಅಸದ್ ಖಾನನನ್ನು ರಕ್ಷಿಸುವುದು

ನಮ್ಮ ಧರ್ಮವೆಂದು ಅರಿತೆವು – ಆದರೆ ಅವನಿಂದಲೇ ನಮಗೆ ಸೋಲಾಯಿತು!"

"ಅವನನ್ನು ನಾವು ನಂಬಿ ಕೆಟ್ಟೆವು ಪ್ರಭು!"

"ದೈವ ವಂಚಿಸುವುದು ಹೀಗೆಯೇ. ಎಲ್ಲವೂ ನಮ್ಮ ಇಚ್ಛೆಯಂತೆ ನಡೆಯುವುದಿಲ್ಲ. ನಾವು ಸೋಮರಸ ಹಾಗೂ, ಸೆಲ್ಲಪ್ಪನ ವಿಚಾರಣೆಯಲ್ಲಿ ಎಡವಿರಬಾರದೇಕೆ? ಅವುಗಳ ಪರಿಣಾಮ ಈ ಪರಾಭವ ಎಂದೆನಿಸುತ್ತಿದೆ!"

"ಪ್ರಭುಗಳು, ಇಲ್ಲದ ವಿಷಯವನ್ನು ತಲೆಗೆ ಹಚ್ಚಿಕೊಂಡು ಕೊರಗ ಬಾರದು, ಸಾಕ್ಷಾತ್ ದೇವತಾ ಸ್ವರೂಪರಾದ ಪ್ರಭುಗಳಿಂದ ಅನ್ಯಾಯ ನಡೆ ಯುವುದು ಸಾಧ್ಯವೇ ಇಲ್ಲ. ದ್ರೋಹಿಗಳಿಗೆ ತಕ್ಕ ಶಿಕ್ಷೆಯಾಯಿತು. ನಾವು ಕಳೆದುದನ್ನು ಮರೆತು, ಮುಂದೆ ಮಾಡಬೇಕಾಗಿರುವುದನ್ನು ಚಿಂತಿಸಬೇಕಾಗಿದೆ ....ನಮಗಾದ ಪರಾಭವ ಜನತೆಯನ್ನು ಕಂಗೆಡಿಸಿದೆ. ಅವರಿಗೆ ನಾವು ಜೀವಂತ ವಾಗಿದ್ದೇವೆ ಮಾತ್ರವಲ್ಲ ಸಶಕ್ತರಾಗಿದ್ದೇವೆ ಎಂದು ತೋರಿಸಿ ಕೊಡಬೇಕಾಗಿದೆ. ಈಗ ಎಲ್ಲಕ್ಕೂ ಮೊದಲು ಅಗಾಧವಾದ ಸೈನ್ಯವನ್ನು ಸಿದ್ಧಪಡಿಸಬೇಕಾಗಿದೆ. ಇದಕ್ಕಾಗಿ ಅಪಾರ ಹಣಬೇಕಾಗಿದೆ."

"ಈಗಾಗಲೇ ಅಪಾರಹಣ ವೆಚ್ಚವಾಗಿದೆ. ಸಾಮ್ರಾಟ್ ಕೃಷ್ಣದೇವ ರಾಯರ ಕಾಲದಲ್ಲಿ ನಡೆದ, ಅಸಂಖ್ಯಾತ ಯುದ್ಧಗಳ ಸಲುವಾಗಿ ಭಂಡಾರದ ಬಹುಭಾಗದ ಹಣ ವೆಚ್ಚವಾಗಿದೆ. ನಾನು ಪಟ್ಟಕ್ಕೆ ಬಂದಮೇಲೂ ಅದನ್ನು ತುಂಬುವ ಮಾತು ದೂರವೇ ಉಳಿಯಿತು. ಇಂತಾದರೆ ನಾಳೆ ಸಾಮ್ರಾಜ್ಯ ದಿವಾಳಿಯಾದೀತು, ನಾವು ಯುದ್ಧದ ಪ್ರಯತ್ನ ಮಾಡುವ ಮೊದಲು ರಾಜ ಬೊಕ್ಕಸವನ್ನು ತುಂಬುವ ಏರ್ಪಾಡು ಮಾಡಬೇಕು."

"ಸಾಮ್ರಾಜ್ಯದ ರಾಜಬೊಕ್ಕಸ ಬರಿದಾದರೇನು. ಹಿಂದಿನವರು ಕಾಯ್ದಿ ಟ್ಟಿರುವ ಗುಪ್ತನಿಧಿ ಇರಬಹುದು."

"ಪೂರ್ವಿಕರ ಗುಪ್ತನಿಧಿ ಇದೆ ಎಂದು ನಾನೂ ಕೇಳಿದ್ದೇನೆ. ಆದರೆ ಅದು ಎಲ್ಲಿದೆ ಎಂಬುದು ಸೋಮರಸರಿಗೆ ತಿಳಿದಿತ್ತು. ಅವರನ್ನು ಶಿಕ್ಷಿಸುವ ಭರದಲ್ಲಿ ಅವರಿಂದ ಇದನ್ನು ನಾವು ತಿಳಿಯದೆ ಹೋದೆವು. ಅದು ಕನ್ನಡಿಯ ಗಂಟು. ಈಗ ರಾಜ ಬೊಕ್ಕಸವನ್ನು ಸುಂಕ, ತೆರಿಗೆ, ದಂಡ ಮೊದಲಾದ ವರ ಮಾನಗಳಿಂದ ತುಂಬಬೇಕಾಗಿದೆ."

"ಪ್ರಭುಗಳು ಆಜ್ಞೆ ಮಾಡಿ, ನಾಳೆ ಸೂರ್ಯೋದಯವಾಗುವುದರೊಳಗೆ ಬೊಕ್ಕಸವನ್ನು ತುಂಬಿಸುವ ಜವಾಬ್ದಾರಿ ನಮ್ಮದು."

"ನಿಮ್ಮ ಶಕ್ತಿ ಸಾಮರ್ಥ್ಯಗಳ ಬಗ್ಗೆ ನನಗೆ ನಂಬಿಕೆಯಿದೆ. ರಾಜ ಬೊಕ್ಕಸವನ್ನು ತುಂಬಿಸುವ ಹುರುಪಿನಲ್ಲಿ ಪ್ರಜೆಗಳನ್ನು ಶೋಷಿಸಬೇಡಿ. ನ್ಯಾಯಬದ್ಧವಾಗಿ ಹಣವನ್ನು ಕೂಡಿಸಿ ಈ ಬಗ್ಗೆ ನಾನು ನಿಮಗೆ ಸರ್ವಾಧಿ

ಕಾರವನ್ನು ಕೊಟ್ಟಿದ್ದೇನೆ." ಎಂದು ಹೇಳಿ ಅವರನ್ನು ಬೀಳ್ಕೊಟ್ಟ.

ಹಣ ಕೂಡಿಸಲು ಸಲಕಂ ಸಹೋದರರಿಗೆ ಅಧಿಕಾರ ಕೊಟ್ಟದ್ದು ಚೇಳಿಗೆ ಪಾರುಪತ್ಯ ಕೊಟ್ಟಂತಾಗಿತ್ತು. ಪ್ರಜೆಗಳಿಂದ ಹಣಕೂಡಿಸಲು ಯಾವ ಯಾವ ದಾರಿ ಹುಡುಕಬಹುದೋ, ಒಂದನ್ನು ಬಿಡದೆ – ಹಣವನ್ನು ಕಡಿಮೆ ಕಾಲದಲ್ಲಿ ಸಂಗ್ರಹಿಸಲು ಅವರು ಕಂಕಣ ತೊಟ್ಟು ನಿಂತರು. ಮೊದಲೇ ಅವರದು ದಬ್ಬಾಳಿಕೆಯ ಆಡಳಿತವಾಗಿತ್ತು. ಈಗ ಅವರ ದಬ್ಬಾಳಿಕೆಗೆ ಹೇಳ ಲಸದಳವಾಯಿತು.

ಕಳೆದ ಇಪ್ಪತ್ತು ವರ್ಷಗಳಲ್ಲಿ, ಸಾಮ್ರಾಜ್ಯವು ಉಳಿದ ಎಲ್ಲ ವಿಷಯಗಳಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದರೂ ಆದರ ಆರ್ಥಿಕ ಪರಿಸ್ಥಿತಿ ಮಾತ್ರ ಉತ್ತಮ ವಾಗಿರಲಿಲ್ಲ. ಒಂದಲ್ಲ ಒಂದು ರೀತಿಯಲ್ಲಿ ಜನತೆಯ ಶೋಷಣೆ ನಡೆದಿತ್ತು. ತಿಮ್ಮರಸನ ಆಳ್ವಿಕೆಯ ಮೊದಲದಿನಗಳಲ್ಲಿ ಜನ ಸುಭಿಕ್ಷವನ್ನು ಕಂಡಿದ್ದರು. ಆದರೆ ಕಳೆದ ಹತ್ತು ವರ್ಷಗಳಲ್ಲಿ ಶಾಂತಿ ಸುಭಿಕ್ಷಗಳು ಕನಸಿನ ಗಂಟಾಗಿತ್ತು. ಯುದ್ಧದ ದೆಸೆಯಿಂದ ವ್ಯಾಪಾರ, ಕೃಷಿಗಳು ಹಿಂದೆ ಬಿದ್ದಿದ್ದವು. ನಾಡಿನ ಸಂಪತ್ತು, ರಣಮಾರಿಗೆ ಬಲಿಯಾಗಿತ್ತು. ಸಾಮ್ರಾಜ್ಯದ ಕೆಲವೆಡೆಗಳಲ್ಲಿ ಸಂತತ ವಾದ ಕ್ಷಾಮಡಾಮರಗಳು ತಾಂಡವವಾಡುತ್ತಿತ್ತು, ಇಂತಹ ಪರಿಸ್ಥಿತಿಯಲ್ಲಿ ಆ ಸಹೋದರರು ಬೊಕ್ಕಸವನ್ನು ತುಂಬಿಸಲು ಹೊರಟಿದ್ದರು!

ಅವರು ಮೊದಲು ದೇಶದ ಪ್ರತಿಯೊಬ್ಬ ಮಾಂಡಲೀಕ ಹಾಗೂ ಸಾಮಂತ ರಿಗೆ ವಿಶೇಷ ನಿರೂಪಗಳನ್ನು ಬರೆದು, ಇಷ್ಟು ಹಣ ಆ ಪ್ರಾಂತ್ಯಗಳಿಂದ ಇಷ್ಟು ಕಾಲದೊಳಗೆ ರಾಜಬೊಕ್ಕಸಕ್ಕೆ ಪಾವತಿಯಾಗಬೇಕೆಂದು ಆಜ್ಞೆ ಮಾಡಿದರು.

ಅಲ್ಲದೆ ಸಾಮ್ರಾಜ್ಯದ ಭದ್ರತೆಯ ಸಲುವಾಗಿ, ಅನೇಕ ಬಗೆಯ ಹೊಸ ತೆರಿಗೆ ಸುಂಕಗಳನ್ನು ವಿಧಿಸಲಾಯಿತು. ನಿಶ್ಚಿತ ವರಮಾನವುಳ್ಳ ಅಧಿಕಾರಿಗಳು ತಮ್ಮ ವರಮಾನಗಳಿಗೆ ಅನುಸಾರವಾಗಿ ಹಣಕೊಡಬೇಕೆಂದು ಆದಾಯ ತೆರಿಗೆ ವಿಧಿಸಿದರು. ನಾಯಿಂದರಿಗೆ, ವೇಶ್ಯರಿಗೆ – ಕುಂಬಾರರಿಗೆ, ಬಡಗಿ, ಕಮ್ಮಾರ, ಇತರ ಬಗೆಯ ಕಸಬುದಾರರಿಗೆ, ತೆರಿಗೆ ವಿಧಿಸಿ ಅವರ ಆದಾಯದ ಬಹುಪಾ ಲನ್ನು ದೋಚಿದರು. ಪುರೋಹಿತರು ಮೊದಲುಗೊಂಡು ಎಲ್ಲರಿಗೂ ತೆರಿಗೆ ವಿಧಿಸಲಾಯಿತು. ಅಲ್ಲದೆ ಕೆಲವೊಂದು ವಿಶಿಷ್ಟ ಉತ್ಸವಗಳ ಮೇಲೆ, ಮದುವೆ, ಮುಂಜಿಗಳ ಮೇಲೆ ತೆರಿಗೆ ಹಾಕಿದರು. ಇದರ ಜತೆಗೆ ಮನೆಗಂದಾಯ, ತಲೆ ಗಂದಾಯ, ಕುಟುಂಬಕಂದಾಯಗಳನ್ನು ವಿಧಿಸಿದರು. ನೆಲ, ನೀರು ಮುಂತಾದ ಪ್ರಕೃತಿಯನ್ನೂ ಬಿಡದೆ ದೋಚುವಷ್ಟು ದೋಚಿದರು. ಅವರ ವಕ್ರದೃಷ್ಟಿ ಯಿಂದ ದೇವಾಲಯಗಳು, ಗುರುಕುಲಗಳೂ ತಪ್ಪಿಸಿಕೊಳ್ಳಲಾಗಲಿಲ್ಲ. ಹೀಗೆ ತೆರಿಗೆ, ಸುಂಕಗಳಿಂದ ಬರಮಾಡಿಕೊಳ್ಳುವಷ್ಟು ಬರಮಾಡಿಕೊಂಡು, ದಂಡದ

ಕಡೆ ತಿರುಗಿದರು. ಸಣ್ಣ ಪುಟ್ಟ ತಪ್ಪಿಗೆ ಅಧಿಕ ದಂಡಗಳನ್ನು ವಿಧಿಸಿದರು. ಅಧಿಕಾರ ನ್ಯಾಯಗಳನ್ನು ಹಣಕ್ಕೆ ಮಾರಲಾಯಿತು. ತಪ್ಪುಮಾಡಿದವರು ಹಣತೆತ್ತು ಶಿಕ್ಷೆ ತಪ್ಪಿಸಿಕೊಳ್ಳುವಂತಾಯಿತು. ಇವುಗಳಿಂದ ತೃಪ್ತಿಗೊಳ್ಳದೆ ಹೊಸ ಬಗೆಯ ವರಮಾನದ ದಾರಿ ಹುಡುಕಿದರು.

ಹನುಮನಾಯಕನ ನೇತೃತ್ವದಲ್ಲಿ ದೊಡ್ಡದೊಂದು ಸೈನಿಕರ ಪಡೆ ರಚಿಸಿದರು ಸರಕಾರದಿಂದಲಾಗಲೀ, ವ್ಯಾಪಾರದಿಂದಲಾಗಲೀ, ಬೇಸಾಯದಿಂದಲಾಗಲೀ, ಯಾವುದೇ ವೃತ್ತಿಯಿಂದ, ಹಣವನ್ನು ಸಂಗ್ರಹಿಸಿ, ಶ್ರೀಮಂತರಾದವರನ್ನೆಲ್ಲಾ ಒಂದಲ್ಲಾ ಒಂದು ಕಾರಣದಿಂದ ದೋಚಲು ತೊಡಗಿದರು. ಅವರು ಹಣವನ್ನು ದೋಚಲು ನ್ಯಾಯವಾದ ಕಾರಣವೇ ಬೇಕಾಗಿರಲಿಲ್ಲ. ಅವರನ್ನು ವಿರೋಧಿಸಿದವರನ್ನು ಸೆರೆಯಲ್ಲಿಟ್ಟು, ಎದುರಿಸಿದವರನ್ನು ಹಿಂಸಿಸಿ, ತಮ್ಮ ಸುಲಿಗೆಯ ಕಾರ್ಯವನ್ನು ಸಾಂಗವಾಗಿ ನೆರವೇರಿಸಿದರು. ಅದರಲ್ಲೂ ರಾಜಧಾನಿಯಲ್ಲಿದ್ದ ವಿದೇಶಿಯರ ಮಳಿಗೆಗಳನ್ನು ದೋಚಿದರು. ನಗರದಲ್ಲಿನ ವೇಶ್ಯರಾಟಗಳ ವೈಭವವನ್ನು ಬತ್ತಿಸಿದರು. ವ್ಯಾಪಾರ, ಉದ್ಯೋಗಗಳನ್ನು ಹಿಂಡಿದರು. ಉಪ್ಪರಿಗೆಗಳಲ್ಲಿ ವಾಸಿಸುತ್ತಿದ್ದ ಶ್ರೀಮಂತರ ಮನೆಗಳಿಗೆ ನುಗ್ಗಿ ಹಗಲು ದರೋಡೆ ಮಾಡಿದರು. ಕೃಷ್ಣಪ್ಪನಾಯಕನ ಪ್ರಸಂಗ ಇವುಗಳಲ್ಲಿ ಅತ್ಯಂತ ಕರುಣಾಜನಕವಾದುದು.

ಕೃಷ್ಣಪ್ಪನಾಯಕನ ಸಿರಿವಂತಿಕೆ, ಠೀವಿಗಳನ್ನು ನೋಡಿದ ಜನ ಅವನನ್ನು ಕೃಷ್ಣರಾಯನಾಯಕರೆಂದು ಬಹುವಚನದಲ್ಲಿ ಕರೆಯುತ್ತಿದ್ದರು. ಇವನು ಕೃಷ್ಣದೇವರಾಯನ ಬಿಜಾಪುರದ ಮುತ್ತಿಗೆಯಲ್ಲಿ, ಆದಿಲ್‌ಷಹನ ಅರಮನೆಯಿಂದ ಅಮೂಲ್ಯವಾದ ರತ್ನಾಭರಣಗಳನ್ನೂ ಮತ್ತು ರತ್ನಗಳನ್ನೂ ಸೂರೆ ಹೊಡೆದು ಶ್ರೀಮಂತನಾದನೆಂದು ಜನರು ಹೇಳಿಕೊಳ್ಳುತ್ತಿದ್ದರು. ಕೆಲವರು ಅವನ ಪೂರ್ವಜರು ಕೊಡಿಟ್ಟ ಹಣ, ಅವನು ಸಂಪಾದಿಸಿದ ಹಣ ಎರಡೂ ಸೇರಿ ಶ್ರೀಮಂತನಾದನೆಂದು ಹೇಳಿದರೆ, ಮತ್ತೆ ಕೆಲವರು ಭೂಮಿಯಲ್ಲಿ ಹೂಳಿಟ್ಟ ನಿಧಿ ಸಿಕ್ಕಿ ದೊಡ್ಡವನಾದನೆಂದು ಹೇಳುತ್ತಿದ್ದರು. ಹಿಂದೆ ಕರ್ನಾಟಕ ಸಾಮ್ರಾಜ್ಯ ಕಟ್ಟಲು ಬೇಕಾಗುವ ಹಣವನ್ನು ಹಕ್ಕಬುಕ್ಕರಿಗೆ ದೊರಕಿಸಿಕೊಡಲು ಪೂಜ್ಯ ವಿದ್ಯಾರಣ್ಯರು ಭಗವತೀ ಭುವನೇಶ್ವರಿಯನ್ನು ಸಾಕ್ಷಾತ್ಕರಿಸಿಕೊಂಡು ಮೂರುಮುಕ್ಕಾಲು ಘಳಿಗೆ ಸುವರ್ಣ ವೃಷ್ಟಿ ಕರೆಸಿದಾಗ ಅದರ ಒಂದು ಭಾಗ ನೆಲದಲ್ಲಿ ಹೂತುಹೋಗಿದ್ದು ಅದು ಕೃಷ್ಣಪ್ಪನಾಯಕನ ಅದೃಷ್ಟದಿಂದ ಅವನಿಗೆ ದೊರೆಯಿತೆಂದು ಹೇಳಿಕೊಳ್ಳುತ್ತಿದ್ದರು. ಸ್ವಭಾವತಃ ಗಂಭೀರ ವ್ಯಕ್ತಿಯಾದ ಕೃಷ್ಣಪ್ಪನಾಯಕನು ಇವುಗಳನ್ನು ಅಲ್ಲಗಳೆಯುವ ಬದಲು ಸುಮ್ಮನೆ ನಕ್ಕು ಬಿಡುತ್ತಿದ್ದನು. ವಾಸ್ತವ ಸಂಗತಿ ಎಂದರೆ ಪೂರ್ವಜರು ಕೊಡಿಟ್ಟ ಹಣಕ್ಕೆ, ರಾಯನ

ದಿಗ್ವಿಜಯಗಳಲ್ಲಿ ತನಗೆ ದೊರೆತಿದ್ದ ಸೂರೆ ಸೇರಿ, ಅವನು ಸಾಕಷ್ಟು ಸಮೃದ್ಧಿವಂತನಾಗಿದ್ದನೇ ಹೊರತು, ಜನಹೇಳುವಷ್ಟು ಶ್ರೀಮಂತನಾಗಿರಲಿಲ್ಲ. ಅವನಲ್ಲಿ ಯಾವ ಬಗೆಯ ದುಶ್ಚಟಗಳೂ ಇರಲಿಲ್ಲವಾಗಿ ಹಣ ಪೋಲಾಗಲು ಅವಕಾಶವಿರಲಿಲ್ಲ. ಅವನು ಅತಿ ಉದಾರಿಯೂ, ಅತಿ ಜಿಪುಣನಾಗಿಯೂ ಇರಲಿಲ್ಲ. ಅವನು ಮೊದಲಿನಿಂದಲೂ ಒಂದೇ ಸ್ಥಿತಿಯಲ್ಲಿ ಇದ್ದ. ಇದೇ ಅವನ ಶ್ರೀಮಂತಿಕೆಗೆ ಸಾಕ್ಷಿಯಾಗಿತ್ತು.

ಆದರೆ ಜನರನ್ನು ಮರಳು ಮಾಡುವ ಶ್ರೀಮಂತಿಕೆ, ರಾಜಠೀವಿ, ಅವನ ಸ್ವಭಾವ, ಅಭಿರುಚಿಗಳಲ್ಲಿತ್ತು. ಅವನು ಉಡುತ್ತಿದ್ದುದು ಕಂಚಿಯಲ್ಲಿ ನೇಯ್ಸಿದ ರೇಷ್ಮೆಯ ಮುಗುಟವೇ. ಕಾಲಿಗೆ ಹೊನ್ನಿನ ಚಿತ್ರಕೆಲಸ ಮಾಡಿದ ಜಡಾವು. ಹೊದೆಯುವ ವಲ್ಲಿಯ ಮೇಲೂ ಚಿನ್ನದ ಎಳೆಯ ಕುಸುರಿನ ಕೆಲಸ ಮಾಡಿತ್ತು. ನಿತ್ಯದ ಉಪಯೋಗಕ್ಕೆ ಕಾಶ್ಮೀರದ ಶಾಲುಗಳು. ಪರ್ಶಿಯಾ ದೇಶದ ರತ್ನಗಂಬಳಿಗಳು ಮನೆತುಂಬಾ ದಂತದ ಸಾಮಾನುಗಳು, ಕರಿಮರ, ಗಂಧದ ಮರದ ವಸ್ತುಗಳು ಮನೆಯಲ್ಲಿ ಹೇರಳವಾಗಿದ್ದವು. ನೆಲಕ್ಕೆ ಅಮೃತಶಿಲೆಯ ಹಾಸುಗಲ್ಲು, ವಿಶಾಲವಾದ ಉದ್ಯಾನವನ್ನು ಒಳಗೊಂಡ ಉಪ್ಪರಿಗೆಯ ಮನೆ ಅವನದು. ಒಳಗೆ ನೂರಾರು ಜನ ದಾಸದಾಸಿಯರು ಇಬ್ಬರು ಹೆಂಡಿರು. ಒಬ್ಬನೇ ಮಗ – ಮತ್ತು ಸೊಸೆ ಅವರಿಗೆ ಒಂದೇ ಒಂದು ಗಂಡು ಮಗು. ಇದು ಅವನ ಸಂಸಾರ. ಜೀವನ ವೈಭವ, ಶ್ರೀಮಂತಿಕೆಗಳು ಆದರೆ ಸಾಮಾನ್ಯ ಜನಕ್ಕೆ ಅವನು ಸಹಸ್ರಾರು ಪಗೋಡಗಳು ವರಮಾನ ವಿರುವ ಶ್ರೀಮಂತನಂತೆ ಕಾಣುತ್ತಿದ್ದ. ಅವನ ಜೀವನದ ರಸಿಕತೆ ಅವನಿಗೆ ಇಲ್ಲದ ಶ್ರೀಮಂತಿಕೆಯನ್ನು ತಂದುಕೊಟ್ಟಿತು.

ಕೃಷ್ಣಪ್ಪನಾಯಕನು ಹೆಚ್ಚು ಜನರ ಜತೆಯಲ್ಲಿ ಬೆರೆಯುತ್ತಿರಲಿಲ್ಲ. ತಾನಾಯಿತು ತನ್ನ ಕೆಲವೇ ಆಪ್ತಮಿತ್ರರಾಯಿತು. ಸೈನ್ಯದಿಂದ ವಿರಾಮ ಪಡೆದ ಮೇಲೆ, ಅವನು ತನ್ನ ವಿರಾಮವನ್ನು ತೋಟಗಾರಿಕೆಯಲ್ಲಿ, ಅಮೂಲ್ಯವಾದ ವ್ಯಾಸಂಗದಲ್ಲಿ – ಕಲಾವಿದರ ಗೋಷ್ಠಿಯಲ್ಲಿ – ಕಳೆಯುತ್ತಿದ್ದನು. ಇಲ್ಲದಿದ್ದರೆ ಪತ್ನೀಪುತ್ರರೊಡಗೂಡಿ ಉದ್ಯಾನದಲ್ಲಿದ್ದ ಲತಾಮಂಟಪದಲ್ಲಿ ಕಾಲ ಕಳೆಯುತ್ತಿದ್ದನು. ಇದನ್ನು ದೂರದಿಂದ ನೋಡಿದವನಿಗೆ ಅವರ ಸಂಸಾರವನ್ನು ಕರುಬುವಂತೆ ಆಗುತ್ತಿತ್ತು.

ದೇವರು ಅವನಿಗೆ ಎಲ್ಲ ಭಾಗ್ಯಗಳನ್ನು ಕೊಟ್ಟಿದ್ದನು. ಆದರೆ ಅವನಿಗೆ ಪುತ್ರಸಂತಾನದ ಭಾಗ್ಯದೊರೆತುದು ಬಹಳ ಕಾಲದ ಮೇಲೆ, ಅವನು ನಲವತ್ತರ ಹರಯ ದಾಟಿದ ಮೇಲೆ – ಅವನ ಯೌವನದ ದಿನಗಳೆಲ್ಲವೂ ಯುದ್ಧರಂಗದಲ್ಲಿ ಕಳೆದಿತ್ತು. ಸಂಸಾರದ ಚಿಂತೆ ಹೆಚ್ಚು ಕಾಡಿರಲಿಲ್ಲ. ಪತ್ನಿಯನ್ನು ಹಿಂದುಳಿಸಿ

ಹೊರಟರೆ, ಹಿಂದಕ್ಕೆ ಬರುತ್ತಿದ್ದುದು ವರ್ಷಕ್ಕೆ – ಎರಡು ವರ್ಷಕ್ಕೊಮ್ಮೆ. ಆಗ ಬಂದು ಕೆಲವು ಕಾಲ ಪತ್ನಿಯೊಡನೆ ಇದ್ದರೆ ಮತ್ತೆ ಹಿಂದಿರುಗುತ್ತಿದ್ದುದು ಎಂದೋ ಏನೋ!

ಅವನು ಪ್ರತಿಬಾರಿ ಹಿಂದಿರುಗಿ ಬಂದಾಗಲೂ ತನಗೆ ಯುದ್ಧದಲ್ಲಿ ದೊರೆತ ಸೂರೆ, ಸನ್ಮಾನದ ಉಡುಗರೆಗಳನ್ನು ತಂದು ತನ್ನ ಪತ್ನಿಯ ಮುಂದೆ ಇಡುತ್ತಿದ್ದನು. ಆದರೆ ಪತ್ನಿ ಇದರಿಂದ ತೃಪ್ತಳಾಗಿರಲಿಲ್ಲ. ಅವಳಿಗೆ ಇವೆಲ್ಲ ಭೋಗ, ಭಾಗ್ಯಗಳಿಗಿಂತ, ಪುತ್ರಸಂತಾನದ ಭಾಗ್ಯ ಬೇಕಾಗಿದ್ದಿತು. ಇದೊಂದೇ ಅವಳಿಗಿದ್ದ ಕೊರತೆ. ಪುತ್ರಸಂತಾನಕ್ಕಾಗಿ ಆ ದಂಪತಿಗಳು ಅನೇಕ ದೇವರುಗಳ ಮೊರೆ ಹೊಕ್ಕರು. ಕಂಡಕಂಡ ದೇವರಿಗೆಲ್ಲಾ ಮೊರೆಯಿಟ್ಟರು. ಹರಕೆ, ಕಾಣಿಕೆ, ದಾನ, ಧರ್ಮಗಳು ಯಥೇಚ್ಛವಾಗಿ ಸಾಗಿದವು. ಆದರೂ ಪ್ರಯೋಜನವಾಗಲಿಲ್ಲ. ಈ ಜನ್ಮದಲ್ಲಿ ತನಗೆ ಪುತ್ರಸಂತಾನವಿಲ್ಲವೆಂದು ಅವಳಿಗೆ ಖಚಿತವಾಯಿತು. ತನ್ನ ದೆಸೆಯಿಂದ ವಂಶ ಕ್ಷಯವಾಗಬಾರದೆಂದು, ಅವಳು ಬಹಳ ಬಲವಂತಮಾಡಿ ಕೃಷ್ಣಪ್ಪನಾಯಕನಿಂದ ದ್ವಿತೀಯ ವಿವಾಹಕ್ಕೆ ಸಮ್ಮತಿ ದೊರಕಿಸಿಕೊಂಡಳು. ಅನಂತರ ತಾನೇ ನಿಂತು ತನ್ನ ಸವತಿಯಾಗಲು ಅರ್ಹಳಾದ ರೂಪಗುಣಗಳಲ್ಲಿ ತನ್ನನ್ನೇ ಹೋಲುವ ವ್ಯಕ್ತಿಯೊಬ್ಬಳನ್ನು ಆರಿಸಿ ತಾನೇ ನಿಂತು ಮದುವೆ ಮಾಡಿದಳು. ಅವಳ ನಿರೀಕ್ಷೆ ವ್ಯರ್ಥವಾಗಲಿಲ್ಲ.

ಕೃಷ್ಣಪ್ಪನಾಯಕನಿಗೆ ದ್ವಿತೀಯ ಪತ್ನಿಯಲ್ಲಿ ಒಂದು ಪುತ್ರ ಸಂತಾನವಾಯಿತು. ಆಗ ಆ ದಂಪತಿಗಳಿಗಾದ ಹಿಗ್ಗು ಅಷ್ಟಿಷ್ಟಲ್ಲ. ಅವನಿಗೆ ಈ ಬಾರಿ ಯುದ್ಧರಂಗಕ್ಕೆ ತೆರಳಲು ಮೊದಲಿನ ಉತ್ಸಾಹವಿರಲಿಲ್ಲ. ಮಗನನ್ನು ಬಿಟ್ಟು ತೆರಳುವಾಗ ಅವನಿಗಾದ ನೋವು ಹೇಳಲಸದಳ. ಪತ್ನಿಯೇ ಅವನನ್ನು ಹುರಿದುಂಬಿಸಿ ಕಳುಹಿಸಿಕೊಟ್ಟಿದ್ದಳು. ಸದಾ ಪುತ್ರನ ಧ್ಯಾನದಲ್ಲೇ ಇದ್ದ ಅವನು ಅನೇಕವೇಳೆ ಗೆಳೆಯರ ಹಾಸ್ಯಕ್ಕೆ ಗುರಿಯಾಗಿದ್ದ.

ಉತ್ಕಲದ ವಿಜಯ ಮುಗಿಸಿ ಕೃಷ್ಣಪ್ಪನಾಯಕನು ಹಿಂದಿರುಗಿ ಬಂದನು. ಒಂದೆರಡು ವರ್ಷ ವಿರಾಮ ಮಾತ್ರ ಅವನ ಪಾಲಿಗಿತ್ತು. ಮತ್ತೆ ಬಿಜಾಪುರದ ಸುಲ್ತಾನನ ಮೇಲೆ ಯುದ್ಧ ಸನ್ನಿಹಿತವಾಯಿತು. ಸಾಮ್ರಾಟರ ಕರೆಯನ್ನು ತಿರಸ್ಕರಿಸಲಾರದೆ ತಾನೂ ದಂಡಯಾತ್ರೆಯಲ್ಲಿ ಭಾಗವಹಿಸಿದನು. ರಾಯಚೂರು ವಿಜಯದಲ್ಲಿ ಅವನ ಅದೃಷ್ಟದ ಬಾಗಿಲು ತೆರೆಯಿತು. ಅಂದಿನ ಸೂರೆಯಿಂದ ಅವನು ಶ್ರೀಮಂತನಾದನೆಂದು ಹೇಳಬೇಕು. ಮುಂದೆ ಬಿಜಾಪುರದ ಮುತ್ತಿಗೆಯಲ್ಲಿ ಸುಲ್ತಾನನು ತನ್ನ ಅರಮನೆಯನ್ನು ತೊರೆದು ಓಡಿಹೋದಾಗ, ಅವನ ಅರಮನೆಯಲ್ಲಿ ಅನೇಕ ಬೆಲೆಬಾಳುವ ವಸ್ತುಗಳು ಅವನಿಗೆ ದೊರೆತಿದ್ದವು. ಯುದ್ಧ ಸಮಾಪ್ತಿಯಾಗಲು ಇವುಗಳನ್ನೆಲ್ಲಾ ಮನೆಗೆ ಸಾಗಿಸಿ, ಸೈನ್ಯದಿಂದ

ವಿರಾಮ ಪಡೆದು ಸುಖದಿಂದ ಇರತೊಡಗಿದ್ದನು.

ಯುದ್ಧ ಮುಗಿದಾಗ ಮಗನಿಗೆ ಹದಿನಾರರ ಪ್ರಾಯ. ಮಗನಿಗೆ ಆ ವಯಸ್ಸಿನಲ್ಲಿಯೇ ಮದುವೆ ಮಾಡಲು ಆಶಿಸಿ, ಎಂಟು ವರ್ಷದ ಹುಡುಗಿಯನ್ನು ತಂದು ಮದುವೆಮಾಡಿದನು. ಆ ಪುಟ್ಟದಂಪತಿಗಳ ನಲಿವು ತಂದೆತಾಯಿಗಳ ಸಂತೋಷಕ್ಕೆ ಹಾಲಿಗೆ ಸಕ್ಕರೆಯಂತೆ ಬೆರೆತು ಕೃಷ್ಣಪ್ಪನಾಯಕನ ಸಂಸಾರ ಜೀವನ ಅಮೃತದ ಹೊಂಗಡವಾಗಿತ್ತು.

ಮಗನು ಪ್ರಾಪ್ತವಯಸ್ಕನಾಗಲು, ಮಗನನ್ನು ಸೈನ್ಯಕ್ಕೆ ಸೇರಿಸದೆ, ವ್ಯಾಪಾರಕ್ಕೆ – ವಜ್ರ, ಮುತ್ತು ರತ್ನಗಳ ವ್ಯಾಪಾರಕ್ಕೆ ಹಚ್ಚಿದ್ದನು. ಅವನು ತನ್ನದೇ ಆದ ರತ್ನಪಡಿ ವ್ಯಾಪಾರ ಆರಂಭಿಸುವ ಮೊದಲು ಆ ವ್ಯವಹಾರದ ಅನುಭವ ಬರಲೆಂದು, ನಾಲ್ಕೈದುವರ್ಷ ತನ್ನ ಗೆಳೆಯನೊಬ್ಬನ ಅಂಗಡಿಯಲ್ಲಿ ತರಪೇತು ಕೊಡಿಸಿದನು.

ಈ ಅವಧಿಯಲ್ಲಿ ಅವನಿಗೆ ಒಂದು ಗಂಡುಮಗು ಜನಿಸಿತ್ತು. ಕೃಷ್ಣಪ್ಪ ನಾಯಕನು ಮೊಮ್ಮಗನು ಹುಟ್ಟಿದ ಸಂಭ್ರಮದಲ್ಲಿ, ಸಕ್ಕರೆಗೆ ಬದಲು ಮುತ್ತು, ರತ್ನಗಳನ್ನು ತನ್ನ ಮಿತ್ರರಿಗೆ ಹಂಚಿದನು. ಮೊಮ್ಮಗನೊಂದಿಗೆ ಮಗನ ಭಾಗ್ಯೋದಯವಾಗಲೆಂದು – ಮೊದಲು ಕೊಂಚ ಬಂಡವಾಳದೊಡನೆ ಮುತ್ತು ರತ್ನಗಳ ವ್ಯಾಪಾರಕ್ಕೆ ಹಚ್ಚಿದನು. ನಾಲ್ಕೈದುವರ್ಷದೊಳಗೆ, ಈ ವ್ಯಾಪಾರ ದಲ್ಲಿ ಮಗನು ಚೆನ್ನಾಗಿ ಪಳಗಿ ವೃತ್ತಿ ಬಾಂಧವರ ಪ್ರೀತಿವಿಶ್ವಾಸಗಳಿಗೆ ಪಾತ್ರ ನಾಗಿ, ಅಧಿಕ ಹಣ ಸಂಪಾದಿಸಿದನು. ಇದೇ ರೀತಿಯಲ್ಲಿ ಅವನ ವಹಿವಾಟು ಮುಂದುವರಿದಿದ್ದರೆ ಅವನು ಅಧಿಕ ಶ್ರೀಮಂತನಾಗುತ್ತಿದ್ದುದರಲ್ಲಿ ಸಂದೇಹವಿರ ಲಿಲ್ಲ. ಆದರೆ ಅವನ ಬಾಳಿಗೆ ಕುಠಾರವಾಗಿ ಸಲಕಂ ಸೋದರರು ಒದಗಿದ್ದರು.

ನಗರದ ಇತರ ಎಲ್ಲ ಶ್ರೀಮಂತರಿಗೆ ವಿಧಿಸಿದಂತೆ ಕೃಷ್ಣಪ್ಪನಾಯಕನಿಗೆ ಸಲಕಂ ಸಹೋದರರ ದೂತರು, ಹನುಮನಾಯಕನ ಮೂಲಕ ಅವನು ರಾಜ ಬೊಕ್ಕಸಕ್ಕೆ ಸಲ್ಲಿಸಬೇಕಾಗಿದ್ದ ಹಣವನ್ನು ನಮೂದಿಸಿ, ನಿರೂಪ ಕಳುಹಿಸಿ ಕೊಟ್ಟಿದ್ದರು. ಅದರಲ್ಲಿ ವೃತ್ತಿ ತೆರಿಗೆ, ಆದಾಯತೆರಿಗೆ, ತಲೆಗಂದಾಯ, ಮನೆ ಗಂದಾಯ, ಕುಟುಂಬ ತೆರಿಗೆ, ಇವೇ ಮೊದಲಾದ ತೆರಿಗೆಗಳ ಮೊತ್ತ ಸಾವಿರ ಪಗೋಡಗಳನ್ನು ಖಜಾನೆಗೆ ಮೂರುದಿನಗಳಲ್ಲಿ ಪಾವತಿಮಾಡಬೇಕೆಂದೂ ಪಾವತಿಮಾಡದಿದ್ದರೆ ದಿನಕ್ಕೆ ಐದುಪಗೋಡದಂತೆ ದಂಡಕೊಡಬೇಕೆಂದು ಆಜ್ಞೆ ಮಾಡಿದ್ದರು.

ಇದನ್ನು ನೋಡಿ ಕೃಷ್ಣಪ್ಪನಾಯಕನು ಕುಪಿತನಾದನು. ಆ ತೆರಿಗೆಗಳು ಅನ್ಯಾಯವೆಂದೂ, ತಾನು ಕೊಡುವುದಿಲ್ಲವೆಂದೂ ಪ್ರತಿಭಟಿಸಿದನು. ನಡೆದ ಸಂಗತಿಯನ್ನು ದೂತರು ಸಲಕಂ ಸಹೋದರರಿಗೆ ವರದಿಮಾಡಿದರು. ನಗರದ

ಗಣ್ಯವ್ಯಕ್ತಿಯಾದ ಕೃಷ್ಣಪ್ಪನಾಯಕನೊಡನೆ, ತಾನೇ ಖುದ್ದು ಮಾತನಾಡಿದರೆ, ಈ ಸಮಸ್ಯೆ ಬಗೆಹರಿಯಬಹುದೆಂದು, ಸಲಕಂ ಸಹೋದರರೇ ಅವನ ಮನೆಗೆ ಬಂದರು. ಮನೆಯಲ್ಲಿ ? ಇದ್ದ ಕೃಷ್ಣಪ್ಪನಾಯಕನು ಅವರನ್ನು ಆದರದಿಂದಲೇ ಬರಮಾಡಿಕೊಂಡು, ಬಂದ ಕಾರಣ ಕೇಳಿದ,

" ನಾಯಕರೇ, ಎಲ್ಲವನ್ನೂ ತಿಳಿದ, ಅಸೀಮ ಸ್ವಾಮಿನಿಷ್ಠ ಸೇವಕರೆಂದು ಹೆಸರುಗಳಿಸಿರುವ ನೀವೇ ಹೀಗೆ ಹೇಳಿದರೆ ಹೇಗೆ? ನೀವು ಪ್ರಕಟವಾಗಿರುವ ರಾಜ ಘೋಷಣೆಯನ್ನು ಕೇಳಲಿಲ್ಲವೇ? ಓದಲಿಲ್ಲವೆ ?" ಎಂದು ನಯವಾಗಿ ಪ್ರಶ್ನಿಸಿದರು.

" ಕೇಳಿದ್ದೇನೆ ಓದಿದ್ದೇನೆ."

" ಆದರೂ ನೀವು ವಿಧಿಸಿರುವ ತೆರಿಗೆಯನ್ನು ಕೊಡಲು ಇಷ್ಟ ಪಡುವುದಿಲ್ಲವೇ ?"

" ಇಲ್ಲ—"

" ಏಕೆ ?"

" ಇವುಗಳು ಅನ್ಯಾಯವಾದ ಶಾಸನ ಬಾಹಿರ ತೆರಿಗೆಗಳು. ಇವುಗಳನ್ನು ನಾನು ಕೊಡಲಾರೆ."

" ಇವುಗಳ ನ್ಯಾಯಾನ್ಯಾಯವನ್ನು ವಿಮರ್ಶಿಸಲು ನಾವು ಇಲ್ಲಿಗೆ ಬಂದಿಲ್ಲ. ಇವು ಶಾಸನಬದ್ಧವೆನ್ನಲು ಸಾಮ್ರಾಟರ ಅಂಕಿತದಲ್ಲಿ ಪ್ರಕಟವಾಗಿವೆ. ಇವುಗಳನ್ನು ನೀವು ಮಾನ್ಯ ಮಾಡಲೇಬೇಕು."

" ಸಾಧ್ಯವಿಲ್ಲ."

" ನಿಮಗೆ ವಿಧಿಸಿರುವ ತೆರಿಗೆಯನ್ನು ನಿಶ್ಚಿತ ಅವಧಿಯೊಳಗೆ ಕೊಡದಿದ್ದರೆ ನಾವು ಬಲಾತ್ಕರಿಸಬೇಕಾಗುತ್ತದೆ."

" ಅದನ್ನು ನಾನು ವಿರೋಧಿಸುತ್ತೇನೆ."

" ಹಾಗಾದರೆ ನೀವು ನಿಮಗೆ ವಿಧಿಸಿರುವ ತೆರಿಗೆಯನ್ನು ಕೊಡುವುದಿಲ್ಲವೋ ?"

" ಇಲ್ಲ."

" ಇದೇ ನಿಮ್ಮ ಕಡೆಯ ಮಾತೇ ?"

" ಹೌದು ?"

" ಹಾಗಾದರೆ ನಾವಿನ್ನು ಬರುತ್ತೇವೆ !" ಎಂದು ಹೇಳಿ ಬಿರುಗಾಳಿಯ ವೇಗದಲ್ಲಿ ಅಲ್ಲಿಂದ ಹೊರಟು ಹೋದರು.

ಮೂರುದಿನಗಳ ನಂತರ ಮತ್ತೆ ಅವರ ಬಳಿಗೆ ಬಂದಾಗ, ರಾಜಭಟರಿಗೆ ಮೊದಲಿನ ಉತ್ತರವೇ ದೊರೆಯಿತು. ಈ ಬಾರಿ ಇಂತಹ ಅನ್ಯಾಯದ ಶಾಸನ

ಗಳನ್ನು ಮಾಡಿ, ಪ್ರಜೆಗಳನ್ನು ಗೋಳಾಡಿಸಲು ಆರಂಭಿಸಿರುವ ಸಲಕಂ ತಿರುಮಲರನ್ನು ಮನಸ್ವಿ ನಿಂದಿಸಿದ್ದನು ಈ ನಿಂದನೆಗಳನ್ನು ರಾಜಭಟರಿಂದ ಕೇಳಿ ರೋಷಗೊಂಡ ಆ ಸೋದರರು, ತಮ್ಮನ್ನು ಧಿಕ್ಕರಿಸಿ ಮಾತನಾಡಿದ ಕೃಷ್ಣಪ್ಪನಾಯಕನಿಗೆ ಸರಿಯಾದ ಬುದ್ಧಿ ಕಲಿಸಲು ನಿಶ್ಚಯಿಸಿ, ಹನುಮನಾಯಕನನ್ನು ಕೃಷ್ಣಪ್ಪನಾಯಕನ ಮಳಿಗೆಗೆ ಕಳುಹಿಸಿಕೊಟ್ಟು, ಅಲ್ಲಿನ ಮುತ್ತು ರತ್ನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ತಿಳಿಸಿದರು.

ನಾಲ್ವರು ಸಶಸ್ತ್ರ ಸೈನಿಕರೊಡನೆ ಹನುಮನಾಯಕನು ಅವರ ವ್ಯಾಪಾರದ ಮಳಿಗೆಗೆ ಹೋಗಿ, ರಾಜಾಜ್ಞೆಯನ್ನು ತೋರಿಸಿ, ಅಲ್ಲಿನ ಬೆಲೆಬಾಳುವ ಮುತ್ತು ರತ್ನಗಳನ್ನು ವಶಪಡಿಸಿಕೊಳ್ಳಲು ಬಂದಾಗ, ಅವರ ದುರಾಕ್ರಮಣವನ್ನು ಕೃಷ್ಣಪ್ಪನಾಯಕನ ಮಗನು ತಡೆದನು. ಅವನನ್ನು ದೂರತಳ್ಳಿ, ಅಲ್ಲಿದ್ದ ಅಮೂಲ್ಯವಾದ ಆಭರಣಗಳ ಪೆಟ್ಟಿಗೆಗಳನ್ನು ವಶಪಡಿಸಿಕೊಳ್ಳುತ್ತಿದ್ದಾಗ ಅವನು ಸಿಟ್ಟನ್ನು ತಡೆಯಲಾರದೆ, ರತ್ನಗಳನ್ನು ಮುಟ್ಟಲು ಬಂದ ಸೈನಿಕರನ್ನು ತಳ್ಳಿ, ಅವರಲ್ಲಿ ಒಬ್ಬನ ಕೈಯಿಂದ ಕತ್ತಿಯನ್ನು ಕಿತ್ತುಕೊಂಡು, “ನಿಮಗೆ ಪ್ರಾಣದ ಮೇಲೆ ಆಸೆಯಿದ್ದರೆ, ಮೊದಲು ಇಲ್ಲಿಂದ ಹೊರಡಿ” ಎಂದು ಗರ್ಜಿಸಿದನು.

ಇದನ್ನು ಕೇಳಿ ಸೈನಿಕರು ಗಾಬರಿಗೊಂಡರು. ಆಗ ಹನುಮನಾಯಕನು “ಏನು ನೋಡುತ್ತೀರೋ, ಅವನನ್ನು ಹಿಡಿದು ಕಟ್ಟಿಹಾಕಿ, ಒಂದೆಡೆ ಉರುಳಿಸಿ, ನಿಮ್ಮ ಕೆಲಸ ಮಾಡಿ!” ಎಂದು ಆಜ್ಞೆಮಾಡಿದನು. ಅದರಂತೆ ಅವರು ಮುನ್ನುಗ್ಗಲು, ಅವರಲ್ಲಿ ಒಬ್ಬನ ಕೈ ಕತ್ತರಿಸಿ ಬಿತ್ತು. ಮತ್ತೊಬ್ಬನು ಮುಂದಡಿಯಿಡಲು ಅವನ ರುಂಡ, ಮುಂಡದಿಂದ ಬೇರ್ಪಟ್ಟಿತ್ತು. ಮತ್ತಿಬ್ಬರು ಹೆದರಿ ಓಡಿಹೋದರು. ಇನ್ನು ತಡ ಮಾಡಿದರೆ ಪ್ರಯೋಜನವಿಲ್ಲವೆಂದು, ಹನುಮನಾಯಕನೇ ಅಲ್ಲಿಂದ ಹೊರಟು ಹೋಗಿ ಹತ್ತಿಪ್ಪತ್ತು ಸಶಸ್ತ್ರ ಸೈನಿಕರನ್ನು ಕರೆತಂದು, ಅವನನ್ನು ಬಂಧಿಸಿ, ಅವನ ಅಂಗಡಿಯಲ್ಲಿದ್ದ ಸಮಸ್ತವನ್ನೂ ಲೂಟಿ ಮಾಡಿ, ಅವನ ಮೇಲೆ ಸೇಡನ್ನು ತೀರಿಸಿಕೊಂಡನು – ಅವರು ಅಲ್ಲಿಂದ ಹೋಗುವಾಗ ಕೃಷ್ಣಪ್ಪನಾಯಕನ ಮಗನನ್ನು ಕರೆದೊಯ್ದು ಸೆರೆಯಲ್ಲಿಟ್ಟರು.

ಮರುದಿನ ಸಲಕಂ ಸಹೋದರರಿಂದ ಕೃಷ್ಣಪ್ಪನಾಯಕನಿಗೆ ಕರೆ ಬಂದಿತ್ತು. ಅವನನ್ನು ನಗುನಗುತ್ತಲೇ ಬರಮಾಡಿಕೊಂಡು, ಅವನ ಸಮ್ಮುಖದಲ್ಲಿ ಅವನ ಮಗನನ್ನು ಛಿದ್ರಛಿದ್ರವಾಗಿ ಕತ್ತರಿಸಿ, ಪೈಶಾಚಿಕ ನಗು ನಗುತ್ತಾ ಅಬ್ಬರಿಸಿದರು.

“ಈಗ ನಿನಗೆ ತಿಳಿಯಿತೇ ನಮ್ಮನ್ನು ರಾಜಶಾಸನವನ್ನು ಎದುರಿಸಿದವರ ಗತಿ ಏನಾಗುವುದೆಂದು ?”

ಕೃಷ್ಣಪ್ಪನಾಯಕನಿಂದ ಈ ದೃಶ್ಯ ನೋಡಲಾಗಲಿಲ್ಲ. ಕಣ್ಣಿಗೆ ಕತ್ತಲೆ ಕವಿಯಿತು. ತಲೆ ಸುತ್ತಿಬಂತು, ನೆಲಕ್ಕೆ ಕುಸಿಯುವಂತೆ ಆಯಿತು. ಆದರೆ

ಸಲಕಂ ಸಹೋದರರ ಸೈನಿಕರು ಅವನನ್ನು ಭದ್ರವಾಗಿ ಹಿಡಿದುಕೊಂಡಿದ್ದರು. ಅವನ ಕಿವಿಯಲ್ಲಿ ಆ ಪೈಶಾಚಿಕ ನಗೆ ಇನ್ನೂ ಮೊಳಗುತ್ತಿತ್ತು. ಹುಚ್ಚು ಹಿಡಿದವನಂತೆ ಕೂಗುತ್ತಾ, ಕೃಷ್ಣಪ್ಪನಾಯಕನು ತನ್ನ ಮನೆಗೆ ಬಂದು ನಡೆದ ಸಂಗತಿಯನ್ನು ತಿಳಿಸಿದರೆ, ಹೆಂಗಸರು ಎದೆಯೊಡೆದು ಸಾಯುವರೆಂದು ಈ ಸುದ್ದಿಯನ್ನು ತಿಳಿಸಲಿಲ್ಲ.

ಮಾರನೆಯ ದಿನ ಬೆಳಿಗ್ಗೆ ಪ್ರಭುಗಳ ಸಮ್ಮುಖಕ್ಕೆ ಮನೆಯಲ್ಲಿದ್ದವರನ್ನೆಲ್ಲಾ ಸಾಲಾಗಿ ಕರೆದುಕೊಂಡು ಹೋಗಿ ನಿಲ್ಲಿಸಿ, ಅನಂತರ ಅಚ್ಯುತರಾಯನ ಕಣ್ಣೆದುರಿನಲ್ಲೇ ಯಮಕಿಂಕರನಂತೆ ನಿಂತು, ತನ್ನ ಪತ್ನಿಯರಿಬ್ಬರ ತಲೆಯನ್ನೂ ಸೊಸೆಯ ಹಾಗೂ ಮೊಮ್ಮಗನ ತಲೆಗಳನ್ನು ಕಡಿದು ಹುಚ್ಚನಂತೆ ಗರ್ಜಿಸಿದನು.

“ಈಗ ನಿಮಗೆ ತೃಪ್ತಿಯಾಯಿತೆ?” ಎಂದು ವಿಕಟವಾಗಿ ನಕ್ಕನು. ಅವನಿಗೆ ಹುಚ್ಚು ಹಿಡಿದಿದೆ ಎಂದು ಭಾವಿಸಿ ಅವನಬಳಿ ಸುಳಿಯಲು ಯಾರಿಗೂ ಧೈರ್ಯವಿರಲಿಲ್ಲ.

ಅನಂತರ ಸಲಕಂ ಸಹೋದರರನ್ನು ದುರದುರನೆ ನೋಡಿ, “ಪಾಪಿಗಳಿರಾ, ನಿಮಗೆ ಇನ್ನೆಷ್ಟುಜನ ನಿರಪರಾಧಿಗಳ ರಕ್ತಾಭಿಷೇಕವಾಗಬೇಕು? ನಾಳೆ ನಿಮ್ಮ ಗೋರಿ ಸಿದ್ಧವಾಗಿದೆ. ಅನ್ಯಾಯವನ್ನು ಬಗೆದ ನೀವೂ, ನಿಮ್ಮ ಪ್ರಭುಗಳೂ, ಇದಕ್ಕೂ ನೂರ್ಮಡಿ ಶಿಕ್ಷೆಯನ್ನು ಈ ದೇಹದಲ್ಲೇ ಅನುಭವಿಸುತ್ತೀರಿ. ಸತ್ತನಂತರ ಅನಾದಿಕಾಲದವರೆಗೂ ರೌರವ ನರಕವನ್ನನುಭವಿಸುತ್ತೀರಿ! ಈಗ ನಿಮಗೆ ತೃಪ್ತಿಯಾಯಿತೆ? ನನ್ನ ಮನೆಯನ್ನು ತೊಳೆದ ನಿಮಗೆ, ನಿಮ್ಮ ಮನೆ ತೊಳೆಯಲ್ಪಡುವ ಕಾಲ ದೂರವಿಲ್ಲ? ನಿಮ್ಮ ವಂಶ ನಿರ್ವಂಶವಾಗುವ ಕಾಲ ದೂರವಿಲ್ಲ! ಪಾಪಿಗಳಿರಾ! ಇದೋ ನನ್ನ ರಕ್ತ!” ಎಂದು ಹೇಳಿ ಕತ್ತಿಯಿಂದ ತನ್ನ ತಲೆಯನ್ನು ತುಂಡರಿಸಿಕೊಂಡನು.

ಆಸ್ಥಾನದಲ್ಲಿ ಕೋಡಿಹರಿದ ಕೆನ್ನೆತ್ತರಿನ ಹೊಳೆ – ದೇಶದಲ್ಲಿ ಸಲಕಂ ಸಹೋದರರು ನಡೆಸಿದ ಅತ್ಯಾಚಾರಗಳಿಗೆ ದೌರ್ಜನ್ಯ ಕೃತ್ಯಗಳಿಗೆ ತಿಲಕವಾದಂತೆ ಕಂಗೊಳಿಸುತ್ತಿತ್ತು!

ಅಚ್ಯುತರಾಯನಿಗೆ ನಡೆದ ವಿದ್ಯಮಾನಗಳೊಂದೂ ತಿಳಿಯದೆ ದಿಙ್ಮೂಢನಾಗಿ ಕುಳಿತನು. ಅವನಿಗೆ ಕೃಷ್ಣಪ್ಪನಾಯಕನ ಎಲ್ಲ ವೃತ್ತಾಂತ ತಿಳಿಯಲು ಅವನಿಗೆ ನಿಜವಾದ ಪಶ್ಚಾತ್ತಾಪ ಉಂಟಾಯಿತು. ಅವನನ್ನು ಉಳಿಸುವ ಮೊದಲೇ ಪ್ರಮಾದ ನಡೆದುಹೋದುದರಿಂದ ಅವನು ಅಸಹಾಯಕನಾಗಿದ್ದನು.

ಆ ದಿನವೆಲ್ಲಾ ಅವನಿಗಾಗಲೀ, ಅರಮನೆಯಲ್ಲಿದ್ದ ಸಭಾಸದರಿಗಾಗಲೀ ನಿದ್ರೆ ಬರಲಿಲ್ಲ. ಕೃಷ್ಣಪ್ಪನಾಯಕನ ಪ್ರೇತ ಕಣ್ಣು ತೆರೆದವರೂ, ಕಣ್ಣು ಮುಚ್ಚಿದ್ದವರೂ ಹೂಂಕರಿಸುತ್ತಿತ್ತು.

ಕೃಷ್ಣಪ್ಪನಾಯಕನ ಕೇವಲ ಆಯುಧಗಳ ಮಾರಾಟದಿಂದ ಮೂರುಸಾವಿರ ಪಗೋಡಗಳು ದೊರೆತವಂತೆ. ಉಳಿದ ಸರ್ವ ಸಂಪತ್ತು ರಾಜಬೊಕ್ಕಸಕ್ಕೆ ಸೇರಿತು.

ಅಚ್ಯುತರಾಯನಿಗೆ ಸಲಕಂ ಸಹೋದರರು ಕೊಟ್ಟಿದ್ದ ವಚನದಂತೆ, ಒಂಭತ್ತು ಕೋಟಿ ಪಗೋಡಗಳನ್ನು ದೇಶದಾದ್ಯಂತ ವಸೂಲು ಮಾಡಿ ರಾಜಬೊಕ್ಕಸವನ್ನು ತುಂಬಿದ್ದರು. ಅವನು ನವಕೋಟಿ ನಾರಾಯಣನೆಂಬ ಬಿರುದಿಗೆ ಪಾತ್ರನಾದರೂ, ಅದರಿಂದ ಎಳ್ಳಷ್ಟು ಸಂತೋಷ ಅವನಿಗೆ ಆಗಿರಲಿಲ್ಲ.

೧೪

ಅಚ್ಯುತರಾಯನಿಗೆ ಮತ್ತೆ ಪಾಂಡ್ಯರಾಜನದು ಒಂದು ಸಮಸ್ಯೆಯಾಯಿತು. ಅವನು ಚಂದ್ರಶೇಖರ ಪಾಂಡ್ಯನನ್ನು ಮಧುರೆಯ ಸಿಂಹಾಸನದ ಮೇಲೆ ಕೂಡಿಸಿ, ಅವನ ಮಗಳನ್ನು ಮದುವೆಯಾಗಿ ರಾಜಧಾನಿಗೆ ಹಿಂದಿರುಗಿದ ಮೇಲೆ ದಕ್ಷಿಣದೇಶದಲ್ಲಿ ಶಾಂತಿ ನೆಲಸಿತೆಂದು ತಿಳಿದಿದ್ದನು. ಆದರೆ ಅವನ ನಿರೀಕ್ಷೆ ಸುಳ್ಳಾಯಿತು. ಸಾಳ್ವ ಸೆಲ್ಲಪ್ಪನಾಯಕನನಂತರ ತಂಜಾವೂರಿನ ಚೋಳ ಸಿಂಹಾಸನಕ್ಕೆ ಬಂದ ವೀರಶೇಖರ ಚೋಳನು ಅಚ್ಯುತರಾಯನಿಗೆ ಬಿಜಾಪುರದ ಅದಿಲ್‌ಷಹನಿಂದ ಆದ ಪರಾಜಯದಿಂದ ಪ್ರೋತ್ಸಾಹಗೊಂಡು ಪಾಂಡ್ಯರಾಜನಮೇಲೆ ಇದ್ದ ಹಳೆಯದ್ವೇಷವನ್ನು ತೀರಿಸಿಕೊಳ್ಳಲು ಇದೇ ಸಮಯವೆಂದು ಮತ್ತೆ ದಂಡೆತ್ತಿ ಬಂದು, ದುರ್ಬಲನಾದ ಪಾಂಡ್ಯರಾಜನನ್ನು ಸಿಂಹಾಸನದಿಂದ ತಳ್ಳಿ, ತಾನೇ ಚೋಳ ಹಾಗೂ ಪಾಂಡ್ಯರಾಜ್ಯಗಳ ಏಕೈಕ ಸಾಮ್ರಾಟನೆಂದು ಘೋಷಿಸಿಕೊಂಡಿದ್ದನು.

ಚಂದ್ರಶೇಖರ ಪಾಂಡ್ಯರಾಜನಿಗೆ ಮತ್ತೆ ಅಚ್ಯುತರಾಯನಲ್ಲಿ ಮೊರೆ ಹೋಗದ ಹೊರತು ಗತ್ಯಂತರವಿರಲಿಲ್ಲ. ಅವನು ಬಂದು ಅಳಿಯನನ್ನು ದುರುಳ ಚೋಳನಿಂದ ತನಗೆ ಪುನಃ ರಾಜ್ಯ ಕೊಡಿಸಬೇಕೆಂದು ಪ್ರಾರ್ಥಿಸಿದನು.

ಚಂದ್ರಶೇಖರನ ಮೇಲೆ, ವಿರಶೇಖರನು ಯುದ್ಧಕ್ಕೆ ಬರಲು ಅವನ ವಯಸ್ಸೂ ಒಂದು ಕಾರಣ. ಸುಮಾರು ಅರವತ್ತು ಪ್ರಾಯದ ಚಂದ್ರಶೇಖರ ಪಾಂಡ್ಯನು, ವಿಸ್ತಾರವಾದ ಪಾಂಡ್ಯರಾಜ್ಯವನ್ನು ಆಳಲು ಶಕ್ತನಾಗಿರಲಿಲ್ಲ. ಅಲ್ಲದೆ ಅವನಿಗೆ ಗಂಡುಮಕ್ಕಳಿರಲಿಲ್ಲ. ಅವನನಂತರ ರಾಜ್ಯಕ್ಕೆ ಯೋಗ್ಯ ಹಕ್ಕುದಾರರು ಯಾರೂ ಇಲ್ಲದುದನ್ನು ನೋಡಿ, ವೀರಶೇಖರಚೋಳನು ದಂಡೆತ್ತಿ ಬಂದಿದ್ದನು. ಅವನನ್ನು ಎದುರಿಸಿ ಯುದ್ಧಮಾಡಲಾಗದೆ ಪಾಂಡ್ಯರಾಜನು, ಅಚ್ಯುತರಾಯನನ್ನು ಮರೆಹೊಕ್ಕಿದ್ದನು.

ತನ್ನ ಮಾವನನ್ನು ಅಧಿಕಾರದಿಂದ ತಳ್ಳಿ ಪಾಂಡ್ಯರಾಜ್ಯಕ್ಕೆ ತಾನೇ ಅಧಿ

ಪತಿ ಎಂದು ಘೋಷಿಸಿದ, ವೀರಶೇಖರ ಚೋಳನ ಧಾಷ್ಟ್ಯತೆಯನ್ನು ನೆನೆದು, ಅವನಿಗೆ ಭಯಂಕರವಾದ ಕೋಪಬಂತು. ತನ್ನ ಕೃಪಾಭಿಕ್ಷೆಯಿಂದ, ಸಾಳ್ವಸೆಲ್ಲಪ್ಪನ ಅನಂತರ ಪಟ್ಟಕ್ಕೆ ಬಂದಿದ್ದ ಅವನಿಗೆ ಇಷ್ಟು ಸೊಕ್ಕುಬಂತೇ ಎಂದು ಆಶ್ಚರ್ಯವಾಯಿತು! ಅವನಿಗೆ ಇಷ್ಟು ಧೈರ್ಯ ಬರಲು, ತಪ್ಪಿಸಿಕೊಂಡಿದ್ದ ಅಳಿಯರಾಮರಾಯನೇ ಪ್ರಚೋದನೆಗೆ ಕಾರಣವಿರಬೇಕೆಂದು ಊಹಿಸಿದನು.

ಇದನ್ನು ನೋಡಿ ಅಚ್ಯುತರಾಯನಿಗೆ ಸುಮ್ಮನಿರಲು ಸಾಧ್ಯವಾಗಲಿಲ್ಲ. ಅವನು ತನಗೆ ಆದಿಲ್‌ಷಹನಿಂದ ಉಂಟಾದ ಪರಾಭವವೇ – ತನ್ನನ್ನು ಚೋಳನು ಉಪೇಕ್ಷಿಸಲು ಕಾರಣವೆಂದು ತಿಳಿಯಲು ಹೆಚ್ಚು ಕಾಲ ಬೇಕಾಗಲಿಲ್ಲ. ತನ್ನವಿರುದ್ಧ ತನ್ನ ಮಾಂಡಲೀಕರೇ ಎದುರುಬಿದ್ದರೆ ಸಾರ್ವಭೌಮ ಪದವಿ ಮೂರುದಿನ ಬಾಳಲಾರದೆಂದು ಅರಿತು ಅವನನ್ನು ಶಿಕ್ಷಿಸಲು ನಿಶ್ಚಯಿಸಿದನು.

ಅವನು ವೀರಶೇಖರ ಚೋಳನನ್ನು ಸೋಲಿಸಿ, ಅವನನ್ನು ಸೆರೆಹಿಡಿದು ತರಲು ತನ್ನ ದಂಡನಾಯಕರಲ್ಲಿ ಅತ್ಯಂತ ಸಮರ್ಥನೆನಿಸಿದ ನಾಗಮನಾಯಕನನ್ನು ಕಳುಹಿಸಿಕೊಟ್ಟನು.

ನಾಗಮನಾಯಕನು ಅರವತ್ತರ ಹರಯವನ್ನು ಮುಟ್ಟಿದ್ದರೂ, ಅವನಲ್ಲಿ ಮೂವತ್ತರ ಯುವಕನನ್ನೂ ನಾಚಿಸುವಂತಹ ಸಮರೋತ್ಸಾಹವಿತ್ತು. ಅವನ ದೇಹದಲ್ಲಿ ಕಸುವಿತ್ತು. ಅನೇಕ ಯುದ್ಧಗಳ ಅನುಭವವಿತ್ತು. ಆದ್ದರಿಂದ ಅವನೇ ಸಮರ್ಥನೆಂದು ಅವನನ್ನು ಸೈನ್ಯದೊಡನೆ ಕಳುಹಿಸಿಕೊಟ್ಟನು.

ನಾಗಮನಾಯಕನು ಅಚ್ಯುತರಾಯನ ನಿರೀಕ್ಷೆಯನ್ನು ವ್ಯರ್ಥಮಾಡಲಿಲ್ಲ. ಅವನು ವಿಜಯನಗರದ ಸೈನ್ಯವನ್ನು ನಡೆಸಿಕೊಂಡು ಪ್ರಯಾಣಮಾಡಿ, ಮಧುರೆಯನ್ನು ಮುತ್ತಿದನು. ಮಧುರೆಯು ಸುಲಭವಾಗಿ ವಶವಾಯಿತು. ವೀರಶೇಖರ ಚೋಳನು ಸೆರೆಸಿಕ್ಕದೆ ತಪ್ಪಿಸಿಕೊಂಡನು. ವೀರಶೇಖರ ಚೋಳನ ಕಾಲದಲ್ಲಿ ಉಂಟಾಗಿದ್ದ ಅನಾಯಕತೆಗಳನ್ನು ಸರಿಪಡಿಸಲು ನಾಗಮನಾಯಕನು ಮಧುರೆಯಲ್ಲಿ ಹೆಚ್ಚುಕಾಲ ನಿಲ್ಲಬೇಕಾಯಿತು.

ನಾಗಮನಾಯಕನ ದಿಗ್ವಿಜಯ ವಾರ್ತೆಯನ್ನು ಕೇಳಿ ಅಚ್ಯುತರಾಯನು ಸಂತೋಷಪಟ್ಟನು. ಅವನು ತನ್ನ ಮಾವನನ್ನು ಕಳುಹಿಸಿಕೊಟ್ಟು, ಪಾಂಡ್ಯರಾಜ್ಯವನ್ನು ಒಪ್ಪಿಸಿಕೊಟ್ಟು, ರಾಜಧಾನಿಗೆ ಹಿಂದಿರುಗಿಬರಲು, ನಾಗಮನಾಯಕನಿಗೆ ನಿರೂಪ ಕಳುಹಿಸಿಕೊಟ್ಟನು.

ಈ ಅವಧಿಯಲ್ಲಿ ಪಾಂಡ್ಯರಾಜ್ಯದ ಸಿರಿಸಂಪತ್ತುಗಳು. ನಾಗಮನಾಯಕನ ಮನಸ್ಸಿನಲ್ಲಿ ದುಷ್ಟ ಆಲೋಚನೆಗಳನ್ನು ಕೆರಳಿಸಿದ್ದವು. ನಾಯಕನಿಲ್ಲದ ಪಾಂಡ್ಯರಾಜ್ಯಕ್ಕೆ ಏಕೆ ತಾನೇ ಅಧಿಪತಿಯಾಗಬಾರದೆಂದು ಆಸೆ ಮೊಳೆಯಿತು. ಹೇಗೂ ಪಾಂಡ್ಯರಾಜನು ದುರ್ಬಲನಾಗಿದ್ದಾನೆ. ವಿಸ್ತಾರವಾದ ರಾಜ್ಯವನ್ನು

ಆಳಲು ಅವನಿಂದ ಸಾಧ್ಯವಿಲ್ಲ. ಅವನ ಬದಲು ತಾನೇ ಪಾಂಡ್ಯ ಸಿಂಹಾಸನವನ್ನೇರಬಾರದೇಕೆ? ಎಂದೆನಿಸಿತು. ಆದರೆ ತನ್ನಲ್ಲಿ ನಂಬಿಕೆ ಇರಿಸಿದ್ದ ಸಾಮ್ರಾಟ್ ಅಚ್ಯುತರಾಯನಿಗೆ ರಾಜ್ಯಲೋಭದಿಂದ ದ್ರೋಹವೆಸಗುವುದೆ? ಇದುವರೆಗೆ ಸಾಮ್ರಾಜ್ಯದ ಹಿರಿಯ ಸ್ವಾಮಿನಿಷ್ಠ ಸೇವಕನೆಂಬ ಬಿರುದಿಗೆ ಪಾತ್ರನಾಗಿ, ಈಗ ವೃದ್ಧಾಪ್ಯದಲ್ಲಿ ದೇಶದ್ರೋಹಿಯಾಗುವುದೇ? ಎಂದು ಒಂದು ಮನಸ್ಸು ಪ್ರಶ್ನಿಸಿತು. ಆದರೆ ಅಚ್ಯುತರಾಯನು ಜನತೆಗೆ ದ್ರೋಹ ಬಗೆಯುತ್ತಿದ್ದಾನೆ—ಅನ್ಯಾಯವೆಸಗುತ್ತಿದ್ದಾನೆ ಇಂತಹ ಸಾಮ್ರಾಟನಿಗೆ ನಿಷ್ಠೆಯಿಂದ ಇರುವುದು ಸಾಮ್ರಾಜ್ಯಕ್ಕೆ ದ್ರೋಹ ಬಗೆದಂತೆ. ತಾನು ಪಾಂಡ್ಯ ಸಿಂಹಾನವನ್ನಾಕ್ರಮಿಸಿ, ಅಚ್ಯುತರಾಯನನ್ನು ದುರ್ಮಾರ್ಗಕ್ಕೆಳೆದಿರುವ ಸಲಕಂ ಸಹೋದರರನ್ನು ಎದುರಿಸಿ, ಆ ಮೂಲಕ ಜನತೆಯ ಬೆಂಬಲಕ್ಕೆ ನಿಲ್ಲಬಾರದೇಕೆ ಎನಿಸಿತು. ಅವನಿಗೆ ಲಕ್ಷ್ಮಣಕ್ಕೆ, ಸೆಲ್ಲಪ್ಪನಾಯಕ, ತುಂಬುಚ್ಚಿನಾಯಕ, ಕೃಷ್ಣಪ್ಪನಾಯಕನಿಗೆ ಬಂದಿದ್ದ ಗತಿ ನೆನಪಾಯಿತು! ಎದೆಯಲ್ಲಿ ಮುಳ್ಳಾಡಿಸಿದಂತಾಗಿ ಅಪಾರ ಯಾತನೆಯಾಯಿತು. ಇಂತಹ ನಿರಪರಾಧಿಗಳನ್ನು ಅಕಾರಣವಾಗಿ ಶಿಕ್ಷಿಸಿದ ಸಾಮ್ರಾಟರಿಗೆ ತಾನು ನಿಷ್ಠೆಯಿಂದ ಇರಬೇಕೆ? ಕಡೆಯವರೆಗೆ ನಿಷ್ಠೆಯಿಂದಿದ್ದ ಕೃಷ್ಣಪ್ಪನಾಯಕನಿಗೆ ಏನಾಯಿತು! ನಾಳೆ ತನ್ನಮೇಲೆ ಸಲಕಂ ಸಹೋದರರ ವಕ್ರದೃಷ್ಟಿ ಬಿದ್ದರೆ ತನಗೂ ಆಗತಿ ಬರುವುದು ಹೆಚ್ಚಲ್ಲ. ಅವರ ವಕ್ರದೃಷ್ಟಿ ಬೀಳುವ ಮೊದಲೇ ಪಾರಾಗಿದ್ದೇನೆ. ಈಗ ತಾನು ಸಲಕಂ ಸಹೋದರರ ದಬ್ಬಾಳಿಕೆಯನ್ನು ಎದುರಿಸಿ, ಜನತೆಯನ್ನು ಅವರ ಕಪಿಮುಷ್ಠಿಯಿಂದ ಉದ್ಧರಿಸಬೇಕು ಎಂದು ಆಲೋಚಿಸಿದ.

ಈ ವೇಳೆಗೆ ಪಾಂಡ್ಯರಾಜ ಚಂದ್ರಶೇಖರವರ್ಮನು ಮಧುರೆಗೆ ಹಠಾತ್ತನೆ ಹಿಂದಿರುಗಿದ್ದ. ಅದರ ಬೆನ್ನಿಗೆ ಅವನಿಗೆ ರಾಜ್ಯವನ್ನೊಪ್ಪಿಸಲು ಅಚ್ಯುತರಾಯನಿಂದ ನಿರೂಪ ಬಂದಿತ್ತು. ಈಗ ಏನು ಮಾಡಬೇಕೆಂದು ಅವನಿಗೆ ತಿಳಿಯದೆ ಹೋಗಿತ್ತು. ಹೇಗಾದರೂ ಮಾಡಿ ಪಾಂಡ್ಯರಾಜನನ್ನು ಮೋಸಗೊಳಿಸಿ ಸಿಂಹಾಸನವನ್ನು ಪಡೆಯಲು ಉಪಾಯಮಾಡಿದನು.

ವಿಜಯನಗರದಿಂದ ಬಂದಿದ್ದ ಪಾಂಡ್ಯರಾಜ ಚಂದ್ರಶೇಖರವರ್ಮನನ್ನು ಆದರದಿಂದ ಸ್ವಾಗತಿಸಿ, ತನ್ನ ಮನಸ್ಸಿನ ಕಾರಾಗಾರವನ್ನು ತಿಳಿಯಗೊಡದೆ,

"ಸಾಮ್ರಾಟರ ನಿರೂಪದಂತೆ, ಪ್ರಭುಗಳಿಗೆ ಪಾಂಡ್ಯರಾಜ್ಯವನ್ನು ಒಪ್ಪಿಸುತ್ತಿದ್ದೇನೆ. ಆ ದುರುಳ ಚೋಳನ ಭಯವಿಲ್ಲದೆ ನಿಶ್ಚಿಂತರಾಗಿ ರಾಜ್ಯವಾಳಬಹುದು" ಎಂದನು.

"ತಮ್ಮ ಉಪಕಾರವನ್ನು ಹೇಗೆ ತೀರಿಸಬೇಕೋ ತಿಳಿಯದಾಗಿದೆ. ನಿಮ್ಮಂತಹ ಸ್ವಾಮಿನಿಷ್ಠ ಸೇವಕರನ್ನು ಪಡೆದ ನಾವು ನಿಜಕ್ಕೂ ಧನ್ಯ" ಎಂದು,

ಹೇಳಿ ಅವನ ಶೌರ್ಯವನ್ನು ಬಾಯಿತುಂಬ ಹೊಗಳಿದ.

"ಇಷ್ಟೆಲ್ಲಾ ಹೊಗಳಿಕೆಗೆ ನಾನು ಪಾತ್ರನಲ್ಲ. ನನ್ನ ಅಲ್ಪಸೇವೆ ನಿಮ್ಮ ಮನಸ್ಸಿಗೆ ಬಂದಿದ್ದರೆ ನಾನು ಧನ್ಯ! ನಾನು ನನ್ನಪಾಲಿನ ಕರ್ತವ್ಯವನ್ನು ನಿರ್ವ ಹಿಸಿದ್ದೇನೆ ಅಷ್ಟೆ. ತಮ್ಮ ವಿಶ್ವಾಸಕ್ಕೆ ನಾನು ಚಿರಋಣಿಯಾಗಿದ್ದೇನೆ" ಎಂದು ವಿನೀತನಾಗಿ ತಲೆಬಾಗಿದ.

"ನಿಮ್ಮ ಕರ್ತವ್ಯ ನಿಷ್ಠೆ, ವಿನಯ ನನ್ನನ್ನು ಮೂಕನನ್ನಾಗಿ ಮಾಡಿದೆ. ನಿಮ್ಮಂತಹವರು ನಾಡಿನ ಭಾಗ್ಯವಿಶೇಷ. ನೀವು ಸದಾಕಾಲ ಸಾಮ್ರಾಜ್ಯಕ್ಕೆ ಸೇವೆಸಲ್ಲಿಸಿ, ಅತಿಶಯವಾದ ಕೀರ್ತಿಗೆ ಪಾತ್ರವಾಗಲೆಂದು ನಾನು ಹಾರೈಸು ತ್ತೇನೆ."

"ತಮ್ಮ ಹಾರೈಕೆ ಸದಾ ನಮ್ಮ ಮೇಲಿರಲಿ – ಇದು ನನ್ನ ರಕ್ಷಾಕವಚ ವಾಗಲಿ." ಎಂದು ಅವನಿಂದ ರಾಜೋಚಿತವಾದ ಸನ್ಮಾನದಿಂದ ಬೀಳ್ಕೊಂಡ.

ಇಷ್ಟಾದರೂ ನಾಗಮನಾಯಕನು ಸಿಂಹಾಸನವನ್ನು ಪಾಂಡ್ಯರಾಜನಿಗೆ ಬಿಟ್ಟುಕೊಡದೆ, ಇಂದು ನಾಳೆ ಅಧಿಕಾರವಹಿಸಿಕೊಡುವುದಾಗಿ ಹೇಳಿಕೊಂಡು ದಿನ ತಳ್ಳುತ್ತಾ ಬಂದನು. ಇದರಿಂದ ಬೇಸರಗೊಂಡ ಪಾಂಡ್ಯರಾಜನು ಈ ಬಗ್ಗೆ ಮಾತು ತೆಗೆಯಲು,

"ಪ್ರಭು, ನನ್ನ ಮೇಲೆ ನೀವು ಕೋಪಿಸಬಾರದು! ನಾನು ಸಿಂಹಾಸನ ವನ್ನು ತಮಗೆ ವಹಿಸಿಕೊಡದೆ ಇರುವುದರಲ್ಲಿ ಯಾವ ದುರುದ್ದೇಶವೂ ಇಲ್ಲ. ಈಗ ತಾತ್ಕಾಲಕ್ಕೆ ಆ ವೀರಶೇಖರ ಚೋಳನಿಂದ ನಿಮಗೆ ತೊಂದರೆಯಿಲ್ಲ–ನಿಜ. ಆದರೆ ಅವನು ನಮಗೆ ಸೆರೆಸಿಕ್ಕದೆ ತಪ್ಪಿಸಿಕೊಂಡಿದ್ದಾನೆ. ಅವನು ಜೀವಂತ ವಿರುವವರೆಗೂ, ನೀವು ನಿಶ್ಚಿಂತೆಯಿಂದಿರಲು ಸಾಧ್ಯವಿಲ್ಲ. ಆದುದರಿಂದ ಆ ದ್ರೋಹಿಯನ್ನು ಸೆರೆಹಿಡಿದು, ನಿಮ್ಮ ಪಾದದ ಮೇಲೆ ಕೆಡವಿ ತನ್ನ ಅಕೃತ್ಯಕ್ಕೆ ಪರಿತಪಿಸುವಂತೆ ಮಾಡಿ,ಶತ್ರುಭಯ ತಪ್ಪಿಸಿ ಅನಂತರ ನಿಮಗೆ ಸಿಂಹಾಸನವನ್ನು ವಹಿಸಿಕೊಡಲು ನಾನು ನಿಶ್ಚಯಿಸಿದ್ದೇನೆ – ಅಲ್ಲಿಯವರೆಗೆ ತಾವು ಸಮಾಧಾನ ದಿಂದಿರಬೇಕೆಂದು ನನ್ನ ನಮ್ರಕೋರಿಕೆ. ತಮಗೆ ಯಾವ ತೊಂದರೆಯೂ ಆಗ ದಂತೆ ನೋಡಿಕೊಳ್ಳುತ್ತೇನೆ. ರಾಜ್ಯಾಡಳಿತ ನನಗೆ ವಹಿಸಿ ತಾವು ನಿಶ್ಚಿಂತೆ ಯಿಂದಿರಬಹುದು" ಎಂದು ಹೇಳಿ ಚಂದ್ರಶೇಖರ ಪಾಂಡ್ಯನನ್ನು ಸುಮ್ಮನಿರಿಸಿದ.

ಹೀಗೆ ಕೆಲವು ದಿನಗಳು ಕಳೆದುವು. ವೀರಶೇಖರ ಚೋಳನನ್ನು ಸೆರೆ ಹಿಡಿಯುವ ಪ್ರಯತ್ನ ಮಾಡುತ್ತಿರುವಂತೆ ನಟಿಸಿ, ಸಿಂಹಾಸನವನ್ನಾಗಲೀ, ಅಧಿ ಕಾರವನ್ನಾಗಲೀ ಬಿಟ್ಟುಕೊಡದೆ ಕಾಲತಳ್ಳುತ್ತಾ ಬಂದನು. ಮತ್ತೆ ಈ ಬಗ್ಗೆ ಪಾಂಡ್ಯರಾಜನು ಪ್ರಸ್ತಾಪಿಸಲು, "ಪ್ರಭು! ಕ್ಲೇಶದಾಯಕವಾದ ಈ ರಾಜ್ಯದ ತೊಂದರೆ ತಮಗೇಕೆ? ತಾವು ಈಗಿರುವಂತೆಯೇ ನಿಶ್ಚಿಂತೆಯಿಂದ ಇದ್ದು ಬಿಡಿ!

ಇಲ್ಲಿನ ಆಡಳಿತ ತಹಬಂದಿಗೆ ತರುವ ಜವಾಬ್ದಾರಿ ಪಾದಸೇವಕನಾದ ನನಗೆ ಇರಲಿ!" ಎಂದು ಹೇಳಿ ಸುಮ್ಮನಿರಿಸಿದನು.

ಈ ವೇಳೆಗೆ ಚಂದ್ರಶೇಖರವರ್ಮನಿಗೆ ನಾಗಮನಾಯಕನ ಕುತಂತ್ರ ತಿಳಿಯದೆ ಹೋಗಲಿಲ್ಲ. ತನಗೆ ಸಿಂಹಾಸನ, ಹಾಗೂ ರಾಜ್ಯಾಡಳಿತದ ಸೂತ್ರ ಒಪ್ಪಿಸಿಕೊಡದೆ ದಿನ ತಳ್ಳುತ್ತಿರುವುದರ ನಿಜವಾದ ಕಾರಣ ವೀರಶೇಖರನ ಭಯವಲ್ಲ – ನಾಗಮನಾಯಕನ ರಾಜ್ಯಲೋಭ ಎಂದು ಅರಿಯದೆ ಹೋಗಲಿಲ್ಲ. ಈ ಬಗ್ಗೆ ಮತ್ತೊಮ್ಮೆ ಪಾಂಡ್ಯರಾಜನು ಮಾತುತೆಗೆಯಲು, ನಾಗಮನಾಯಕನು ಸ್ಪಷ್ಟವಾಗಿ ಹೇಳಿಬಿಟ್ಟನು.

"ಪ್ರಭು! ತಮಗೆ ಈ ವಯಸ್ಸಿನಲ್ಲಿ ಅರಾಜಕತೆ, ಅನಾಯಕತೆಗಳಿಗೆ ಅವಕಾಶಕೊಡದಂತೆ ರಾಜ್ಯಾಡಳಿತವನ್ನು ಯಶಸ್ವಿಯಾಗಿ ನಿರ್ವಹಿಸಲು ಸಾಧ್ಯವಿಲ್ಲ! ತಾವು ರಾಜ್ಯ ಸೂತ್ರಕ್ಕೆ ಕೈಹಾಕಿದರೆಂದರೆ ಮತ್ತೆ ಶತ್ರುಗಳು ಪ್ರಬಲಗೊಂಡು ತಮ್ಮ ಮೇಲೆ ಬೀಳುವುದು ಖಂಡಿತ! ರಾಜ್ಯವನ್ನು ಶತ್ರುಗಳಿಂದ ಕಾಪಾಡುವುದು ತಮಗೆ ಪ್ರಯಾಸಕರವಾದ ಕಾರ್ಯ! ಅಂತಲೇ ನಾನು ಈ ಸಲಹೆಯನ್ನು ಸನ್ನಿಧಾನದಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ತಮಗೇಕೆ ಈ ವಯಸ್ಸಿನಲ್ಲಿ ರಾಜ್ಯದ ಚಿಂತೆ! ಇಷ್ಟಕ್ಕೂ ಯಾವ ಪುತ್ರನಿಗಾಗಿ ನೀವು ರಾಜ್ಯವನ್ನು ಕಾಪಾಡಬೇಕಾಗಿದೆ! ತಮಗೆ ಪುತ್ರ ಸಂತಾನವಿಲ್ಲ – ರಾಜ್ಯವೆಂದಿದ್ದರೂ ಅನ್ಯರಪಾಲಾಗುವುದು ದಿಟ! ರಾಜ್ಯಾಡಳಿತದ ಸಮಸ್ತ ಜವಾಬ್ದಾರಿ ನನಗಿರಲಿ. ನಿಮಗೆ ಎಷ್ಟು ಹಣ ಬೇಕೋ ಅಷ್ಟನ್ನು ಮಾಸಾಶನವಾಗಿ ಬೊಕ್ಕಸದಿಂದ ತೆಗೆದುಕೊಡುತ್ತೇನೆ. ಇದರಿಂದ ದಾನಧರ್ಮಗಳನ್ನು ಮಾಡಿಕೊಳ್ಳಿ! ನಿಮ್ಮ ಉಳಿದವೇಳೆಯನ್ನು ನನಗೆ ಸಲಹೆನೀಡುವುದರಲ್ಲಿ, ಸಾಧು ಸಂತರ ಸಹವಾಸದಲ್ಲಿ – ವ್ಯಾಸಂಗದಲ್ಲಿ – ಈ ಬಗೆಯ ಪುಣ್ಯ ಸಂಚಯನದಲ್ಲಿ ತೊಡಗಿ ಜನ್ಮ ಸಾರ್ಥಕಪಡಿಸಿಕೊಳ್ಳುತ್ತಾ ನೀವು ನೆಮ್ಮದಿಯಿಂದ ಇದ್ದು ಬಿಡಿ!"

"ಏನು ನನ್ನನ್ನು ಅಧಿಕಾರಚ್ಯುತನನ್ನಾಗಿ ಮಾಡಿ – ನನಗೆ ಮಾಸಾಶನ ಕಲ್ಪಿಸಿ, ನೀವೇ ಪಾಂಡ್ಯಸಿಂಹಾಸನವನ್ನು ಆಕ್ರಮಿಸಬೇಕೆಂದಿರುವಿರೊ?"

"ನನ್ನ ಮಾತಿನಿಂದ ನಿಮಗೆ ಅಪಚಾರವಾಗಿದ್ದರೆ ಕ್ಷಮಿಸಿ, ಇದು ತಮ್ಮ ಚಿತ್ತಕ್ಕೆ ಬಾರದಿದ್ದಲ್ಲಿ – ಪ್ರಭುಗಳ ಚಿತ್ತವಿದ್ದಂತೆ ದಾಸಾನುದಾಸನಾದ ನಾನು ನಡೆದುಕೊಳ್ಳುತ್ತೇನೆ."

"ನೀವು ನನ್ನನ್ನು ಹೀಗೆ ಸವಿನಯನಗಳಿಂದ ಮೋಸಗೊಳಿಸಲಾರಿರಿ ನಾಗಮನಾಯಕರೇ! ನಿಮ್ಮ ಉದ್ದೇಶವೇನೆಂದು ನನಗೆ ತಿಳಿದಿದೆ. ನೀವು ಸಿಂಹಾಸನವನ್ನೂ – ರಾಜ್ಯ ಸೂತ್ರವನ್ನು ಇನ್ನೊಂದು ವಾರದಲ್ಲಿ ಒಪ್ಪಿಸದೆ ಹೋದರೆ, ನಾನು ಸಾಮ್ರಾಟರಿಗೆ ಎಲ್ಲವನ್ನೂ ವರದಿಮಾಡಬೇಕಾಗುತ್ತದೆ....

ಇದರಿಂದ ನಿಮಗೆ ತೊಂದರೆಯಾಗಬಹುದು – ನೀವು ರಾಜ್ಯ ಲೋಭದಿಂದಾಗಿ ಇದುವರೆಗೆ ಸಂಪಾದಿಸಿರುವ ಸತ್ಯಕೀರ್ತಿಗೆ, ಉತ್ತಮ ಚಾರಿತ್ರಕ್ಕೆ ಕಳಂಕ ಬಳಿಯದಂತೆ ವರ್ತಿಸಬೇಡಿ" ಎಂದು ಹೇಳಿ ಅಲ್ಲಿಂದ ಹೊರಟುಹೋದನು.

ಒಂದು ತಿಂಗಳು ಕಳೆಯಿತು. ನಾಗಮನಾಯಕನು ತನ್ನ ಮಾತನ್ನು ಈಡೇರಿಸುವ ಸೂಚನೆ ಕಾಣಲಿಲ್ಲ. ಪಾಂಡ್ಯರಾಜನು, ಕಡೆಗೆ ನಿರ್ವಾಹವಿಲ್ಲದೆ ಸಾಮ್ರಾಟ್ ಅಚ್ಯುತರಾಯನಿಗೆ ನಡೆದ ಎಲ್ಲ ಸಂಗತಿಗಳನ್ನೂ ವರದಿ ಮಾಡ ಬೇಕಾಯಿತು. ಅಧಿಕಾರ ಸೂತ್ರವನ್ನೆಲ್ಲಾ ಕೈಲಿಹಿಡಿದು, ಪ್ರಬಲನಾಗಿದ್ದ ನಾಗಮನಾಯಕನನ್ನು ಎದುರು ಹಾಕಿಕೊಂಡರೆ ತನ್ನ ಜೀವಕ್ಕೆ ಅಪಾಯ ಬರ ಬಹುದೆಂದು ಅಚ್ಯುತರಾಯನಿಗೆ ಬರೆದ ಪತ್ರವನ್ನು ಅತಿ ರಹಸ್ಯವಾಗಿಟ್ಟದ್ದನು.

ಇದಾದ ಕೆಲವು ದಿನಗಳಲ್ಲಿ ಪಾಂಡ್ಯರಾಜನನ್ನು ನಾಗಮನಾಯಕನು ಕಂಡನು.

"ಬನ್ನಿ ನಾಯಕರೇ ಕುಳಿತುಕೊಳ್ಳೀ.... ಈಚೆಗೆ ತಮ್ಮ ದರ್ಶನ ಅಪರೂಪ ವಾಗಿದೆ.... ಆರೋಗ್ಯತಾನೇ...." ಎಂದು ಕೃತಕ ವಿಶ್ವಾಸ ನಟಿಸಿ, ಅನಂತರ ಕುಳಿತುಕೊಳ್ಳದೆ, ಪತ್ರ ಹಿಡಿದು ನಿಂತಿದ್ದ ನಾಗಮನಾಯಕನನ್ನು ನೋಡಿ "ಏನು ಸಮಾಚಾರ? ನಿಂತೆ ಇದ್ದೀರಿ...." ಎಂದು ಉಪಚಾರ ಹೇಳಿದನು.

"ಇದು ಕುಳಿತುಕೊಳ್ಳುವ ವೇಳೆಯಲ್ಲ ಪ್ರಭು! ಈ ಪತ್ರ ನೋಡಿ! ಅಚ್ಯುತ ಪ್ರಭುಗಳಿಂದ ಬಂದಿದೆ." ಎಂದು ಹೇಳಿ ಪತ್ರವನ್ನು ಪಾಂಡ್ಯರಾಜನಿಗೆ ಕೊಟ್ಟನು.

ಚಂದ್ರಶೇಖರವರ್ಮನು ಆ ಪತ್ರವನ್ನು ಕೂಲಂಕಶವಾಗಿ ಓದಿಕೊಂಡನು.

ದಂಡನಾಯಕರಾದ ನಾಗಮನಾಯಕರಿಗೆ,

ಸಾಮ್ರಾಟ್ ಅಚ್ಯುತರಾಯರು ಮಾಡುವ ವಿಜ್ಞಾಪನೆಗಳು.

ನಾವು ಯಾವ ಕಾರ್ಯಕ್ಕಾಗಿ ನಿಮ್ಮನ್ನು ಮಧುರೆಗೆ ಕಳುಹಿಸಿಕೊಟ್ಟೆವೋ ಆ ಕಾರ್ಯವನ್ನು ನೀವು ಮರೆತಂತಿದೆ. ನೀವು ವೀರಶೇಖರಚೋಳನನ್ನು ಸೋಲಿ ಸಿದರೂ ಅವನನ್ನು ಸೆರೆಹಿಡಿಯದೆ ಬಿಟ್ಟರೆಂಬ ದೂರು ಬಂದಿದೆ. ಇದು ಹೇಗೇ ಇರಲಿ ನಾವು ಹಿಂದೆ ಕಳುಹಿಸಿಕೊಟ್ಟಿದ್ದ ನಿರೂಪದಂತೆ, ಪಾಂಡ್ಯರಾಜ್ಯವನ್ನು ಪೂಜ್ಯರಾದ ಚಂದ್ರಶೇಖರವರ್ಮರಿಗೆ ಬಿಟ್ಟುಕೊಟ್ಟು, ರಾಜಧಾನಿಗೆ ಹಿಂದಿರುಗಿ ಬರುವುದು ನಿಮ್ಮ ಪ್ರಥಮ ಕರ್ತವ್ಯವಾಗಿತ್ತು. ಆದರೆ ನೀವು ರಾಜ್ಯಲೋಭ ದಿಂದ, ಮಧುರೆಯ ಸಿಂಹಾಸನವನ್ನು, ಅಧಿಕಾರವನ್ನು ಅವರಿಗೆ ವಹಿಸಿಕೊಡದೆ ವೃಥಾ ಕಾಲಯಾಪನೆ ಮಾಡುತ್ತಿರುವಿರೆಂದು, ನಮಗೆ ನಂಬಲರ್ಹವಾದ ಕಡೆ ಯಿಂದ ವರ್ತಮಾನ ಬಂದಿದೆ. ನಿಮ್ಮ ಈ ವರ್ತನೆ ಕ್ಷಮಾರ್ಹವಾದುದಲ್ಲ— ನಿಮ್ಮಿಂದ ಸಾಮ್ರಾಜ್ಯಕ್ಕೆ ಸಲ್ಲಿರುವ ಅಮೋಘವಾದ ಸೇವೆಯನ್ನು ಮನಗೊಂಡು,

ನಿಮ್ಮ ಎಲ್ಲ ಅಪರಾಧಗಳನ್ನು ಕ್ಷಮಿಸಿದ್ದೇವೆ. ನೀವು ಕೂಡಲೇ ಪಾಂಡ್ಯರಾಜ್ಯವನ್ನು ಚಂದ್ರಶೇಖರನವರ್ಮರಿಗೆ ವಹಿಸಿಕೊಟ್ಟು, ರಾಜಧಾನಿಗೆ ಸಮಸ್ತ ಸೈನ್ಯದೊಡನೆ ಹಿಂದಿರುಗಬೇಕೆಂದು ಕೋರಲಾಗಿದೆ.

ಇಂತು ನಿಮ್ಮ ವಿಶ್ವಾಸಿ
ಸಾಮ್ರಾಟ್ ಅಚ್ಯುತರಾಯ

ಈ ಪತ್ರವನ್ನು ಓದಿದ, ಪಾಂಡ್ಯರಾಜನಿಗೆ ಮುಖ ಅರಳಿತು. ಇದನ್ನು ತಾನು ನಿರೀಕ್ಷಿಸಿದ್ದೆ ಎಂಬಂತೆ, ಕಿರುನಗೆಯೊಂದು ತೇಲಿತು. ಆ ಪತ್ರವನ್ನು ನಾಗಮನಾಯಕನಿಗೆ, ಹಿಂದಿರುಗಿಸಿ ಸುಮ್ಮನೆ ಅವನ ಮುಖ ನೋಡಿದ.

"ಇವೆಲ್ಲಾ ನಿಮ್ಮದೇ ಕುತಂತ್ರ! ನನ್ನ ವಿರುದ್ಧ ಸಾಮ್ರಾಟರಿಗೆ ವರದಿ ಮಾಡಿದ್ದೀರಿ." ಎಂದು ಗರ್ಜಿಸಿದ ನಾಗಮನಾಯಕ.

"ನನಗೆ ಇದಾವ ಸಂಗತಿಯೂ ತಿಳಿಯದು ನಾಯಕರೇ!"

"ನನಗೆ ಎಲ್ಲವೂ ತಿಳಿದಿದೆ. ನೀವು ವರದಿ ಮಾಡದೆ ಇದ್ದರೆ– ಸಾಮ್ರಾಟರಿಂದ ಈ ಬಗೆಯ ಪತ್ರ ಬರುತ್ತಿರಲಿಲ್ಲ. ಎಲ್ಲವೂ ನಿಮ್ಮದೇ ಕೈವಾಡ! ನನ್ನ ವಿಷಯದಲ್ಲಿ ಸಾಮ್ರಾಟರಿಗಿದ್ದ ನಂಬಿಕೆ ಪ್ರೀತಿ ವಿಶ್ವಾಸಗಳನ್ನು ನೀವು ಹಾಳು ಮಾಡಿದ್ದೀರಿ."

"ನಾನು ಹಾಳುಮಾಡಲಿಲ್ಲ! ನೀವೇ ಹಾಳುಮಾಡಿಕೊಂಡಿರಿ! ಇಲ್ಲಿನ ನಿಮ್ಮ ವರ್ತನೆ ನಿಮ್ಮ ಕೀರ್ತಿಗೆ ಕಳಂಕ ತರುವುದೆಂಬ ವಿಷಯ ಎಲ್ಲರಿಗೂ ತಿಳಿದುದೇ – ಇದು ಸಾಮ್ರಾಟರಿಗೆ ತಿಳಿದುದರಲ್ಲಿ ಅಚ್ಚರಿ ಏನು?"

"ಸಾಮ್ರಾಟರಿಗೆ ನೀವು ತಿಳಿಸಿದ ಹೊರತೂ ಹೇಗೆ ತಿಳಿಯಲು ಸಾಧ್ಯ! ಎಲ್ಲವನ್ನೂ ನೀವೆ ಬಣ್ಣಕಟ್ಟಿ ವರದಿ ಮಾಡಿದ್ದೀರಿ. ಈಗಲೂ ನಿಮ್ಮ ರಾಜ್ಯವನ್ನು ನೀವು ಹಿಂದೆ ತೆಗೆದುಕೊಳ್ಳಿ – ನಿಮ್ಮ ಹಿತಾಸಕ್ತಿಯಿಂದ ನಾನು ಈ ಸಲಹೆ ಮಾಡಿದ್ದೆ – ಅದನ್ನು ನೀವು ತಪ್ಪು ತಿಳಿಯುವಂತಾಯಿತು – ನಾನು ರಾಜಧಾನಿಗೆ ಹಿಂದಿರುಗುತ್ತೇನೆ–ನೀವು ನನಗೆ ಬರಬೇಕಾಗಿರುವ ಹಣವನ್ನು ಕೊಟ್ಟೊಡನೆಯೇ ನಾನು ಹಿಂದಿರುಗುತ್ತೇನೆ."

ಈ ಮಾತು ಕೇಳಿ ಚಕಿತನಾದ ಪಾಂಡ್ಯರಾಜ. "ನಿಮಗೆ ಯಾವ ಹಣ ನಾನು ಕೊಡಬೇಕು ನಾಯಕರೆ?" ಎಂದು ಕೇಳಿದ.

"ಅವ್ಯವಸ್ಥೆಯಾಗಿದ್ದ ನಿಮ್ಮ ರಾಜ್ಯವನ್ನು ಸುವ್ಯವಸ್ಥೆಗೊಳಿಸಲು, ಅರಾಜಕತೆ ಅನಾಯಕತೆ ತಲೆದೋರಿದ್ದ ರಾಜ್ಯದಲ್ಲಿ–ಶಿಸ್ತು ಶಾಂತಿ ನೆಲೆಗೊಳಿಸಲು, ನಾನು ನನ್ನ ಸ್ವಂತ ಹಣ ವೆಚ್ಚಮಾಡಿದ್ದೇನೆ – ಇದರ ಪ್ರತಿಯೊಂದಕ್ಕೂ ಲೆಕ್ಕವಿರಿಸಿದ್ದೇನೆ. ಅದು ಸುಮಾರು ಎರಡು ಕೋಟಿ ವಗೋಡಗಳಾಗುತ್ತದೆ!"

"ಎರಡು ಕೋಟಿ ವಗೋಡ! ನಮ್ಮ ರಾಜ್ಯದ ಎರಡು ವರ್ಷದ ಹುಟ್ಟು

ವಳಿ! ನಿಮಗೆ ನಾನು ಕೊಡಬೇಕೆ? ಆಶ್ಚರ್ಯ! ನೀವು ವೆಚ್ಚಮಾಡಿದ ಹಣ ರಾಜಬೊಕ್ಕಸದಿಂದ ಮಾಡಿದ್ದೀರೆಂದು ನಮಗೆ ತಿಳಿದಿದೆ – ನಿಮಗೆ ನಾವು ಯಾವ ಹಣವನ್ನೂ ಕೊಡಬೇಕಾಗಿಲ್ಲ!"

"ನೀವು ಹಣಕೊಡದ ಹೊರತು ನಿಮಗೆ ಆಡಳಿತವನ್ನು ವಹಿಸಿಕೊಡುವುದಿಲ್ಲ!"

"ಅದೊಂದೂ ನನಗೆ ತಿಳಿಯದು! ನಿಮಗೆ ಕೊಡುವುದು ಏನುಂಟೋ ಅದನ್ನು ಸಾಮ್ರಾಟರಿಂದ ಕೇಳಿ ಪಡೆದುಕೊಳ್ಳಿ!"

"ಹಾಗಾದರೆ ನಿಮಗೂ ಇದಕ್ಕೂ ಸಂಬಂಧವಿಲ್ಲವೋ?"

"ಇಲ್ಲ!"

ನಾಗಮನಾಯಕ ಅಲ್ಲಿ ನಿಲ್ಲದೆ ಹೊರಟುಹೋದ. ತಾನು ಬೀಸಿದ್ದ ಬಲೆಯಿಂದ ಪಾಂಡ್ಯರಾಜ ತಪ್ಪಿಸಿಕೊಂಡಿದ್ದ. ಆದರೂ ಇನ್ನೊಂದು ಪ್ರಯತ್ನವೆಂದು ತಾನು ಪಾಂಡ್ಯರಾಜ್ಯದ ಆಡಳಿತದ ಸಲುವಾಗಿ ವೆಚ್ಚವಾದ ಹಣದ ಬಗ್ಗೆ ಬರೆದು – ಅದನ್ನು ಚಂದ್ರಶೇಖರವರ್ಮರಿಂದ ಕೊಡಿಸಿ ಕೊಡಲು ಸಾಮ್ರಾಟರನ್ನು ಪ್ರಾರ್ಥಿಸಿ ಒಂದು ಪತ್ರ ಬರೆದಿದ್ದ.

ಈ ಪತ್ರ ಅಚ್ಯುತರಾಯನಿಗೆ ಮುಟ್ಟಿ ಅವನಿಂದ ಮಾರ್ಮಿಕವಾದ ಉತ್ತರ ಬಂತು. ಈ ಪತ್ರದಲ್ಲಿ ಅಚ್ಯುತರಾಯನು ಈ ಮಾತುಗಳನ್ನು ಬರೆದಿದ್ದ.

"ನಾಗಮನಾಯಕರೇ, ಪಾಂಡ್ಯರಾಜ್ಯದ ಸಲುವಾಗಿ ನೀವು ಎರಡು ಕೋಟಿ ಪಗೋಡಗಳನ್ನು ವೆಚ್ಚಮಾಡಬೇಕಾದರೆ ನಿಮಗೆ ಅಷ್ಟು ಹಣ ಎಲ್ಲಿ ಬಂತು? ನೀವು ವಿಜಯನಗರದ ರಾಜಬೊಕ್ಕಸದಿಂದ ತೆಗೆದುಕೊಂಡು ಹೋದಿರಾ ಅಥವಾ ಪಾಂಡ್ಯರಾಜ್ಯದ ಬೊಕ್ಕಸವನ್ನು ಬರಿದು ಮಾಡಿದಿರೋ ಹೇಗೆ? ನೀವು ಒಳ್ಳೆಯ ಮಾತಿನಲ್ಲಿ ಹಿಂದಿರುಗಿ ಬಂದರೆ ಸಮ, ಇಲ್ಲವಾದರೆ ನಿಮ್ಮನ್ನು ಎರಡು ಅಪರಾಧಗಳಿಗಾಗಿ – ನಮ್ಮ ಆಜ್ಞೆಯನ್ನು ತಿರಸ್ಕರಿಸಿದ ಅಪರಾಧಕ್ಕಾಗಿ, ರಾಜಬೊಕ್ಕಸದಿಂದ ಹಣವನ್ನು ದುರುಪಯೋಗಪಡಿಸಿಕೊಂಡ ತಪ್ಪಿಗಾಗಿ, ನಿಮ್ಮನ್ನು ಶಿಕ್ಷಿಸಬೇಕಾಗುತ್ತದೆ."

ಏಕೋ ಪರಿಸ್ಥಿತಿ ವಿಕೋಪಕ್ಕೆ ಹೋಯಿತೆಂದು ನಾಗಮನಾಯಕ ಹೆದರಿದ ಈಗ ತಾನು ರಾಜಧಾನಿಗೆ ಹಿಂದಿರುಗಿದರೆ, ತನ್ನನ್ನು ಕ್ಷಮಿಸಿ ಮೊದಲಿನಂತೆ ತನ್ನನ್ನು ಬರಮಾಡಿಕೊಳ್ಳುವನೆಂದು ಏನು ನೆಚ್ಚಿಕೆ? ಈಗ ರಾಜಧಾನಿಗೆ ಹೋದರೆ ಒಂದು ಅಪಾಯ, ಹೋಗದಿದ್ದರೆ ಮತ್ತೊಂದು ಅಪಾಯ. ಏನು ಮಾಡಬೇಕೆಂದು ತಿಳಿಯದೆ ಪರಿತಪಿಸಿದ. ಕಡೆಗೆ ಒಂದು ವಿಷಯ ನಿರ್ಧರಿಸಿದ. ತಾನು ರಾಜ್ಯಲೋಭಕ್ಕೆ ಒಳಗಾಗಿ ಹೇಗೂ ಸಾಮ್ರಾಟರ ವಿಶ್ವಾಸವನ್ನು ಕಳೆದುಕೊಂಡುದಾಗಿದೆ, ಈಗ ರಾಜಧಾನಿಗೆ ಹೋಗಿ, ಆ ಧೂರ್ತ ಸಲಕಂ ಸಹೋದರರ

ಕೈಗೆ ಸಿಕ್ಕಿ ನರಳುವುದಕ್ಕಿಂತಲೂ ಇಲ್ಲೇ ನಿಂತು ತನ್ನ ಅದೃಷ್ಟ ಪರೀಕ್ಷೆ ಮಾಡುವುದು ಒಳ್ಳೆಯದೆಂದು ನಿರ್ಧರಿಸಿದ ನಾಗಮನಾಯಕ.

ಅಚ್ಯುತರಾಯನು ನಾಗಮನಾಯಕನಿಂದ, ಯಾವ ಉತ್ತರವೂ ಬಾರದೆ ಇರುವುದನ್ನು ಕಂಡು ಕೆರಳಿ, ತನ್ನ ಸೇವಕನು ತನ್ನ ಆಜ್ಞೆಯನ್ನು ಧಿಕ್ಕರಿಸುವಷ್ಟು ಸೊಕ್ಕಿದ್ದಾನೆಯೇ? ಎಂದು ಕ್ರೋಧದಿಂದ ಕುದಿದನು.

ಅವನು ತನ್ನ ದಂಡನಾಯಕರನ್ನೆಲ್ಲಾ ಸಮ್ಮುಖಕ್ಕೆ ಬರಮಾಡಿಕೊಂಡು,

"ಆ ದ್ರೋಹಿ ನಾಗಮನಾಯಕನನ್ನು ಸೆರೆಹಿಡಿದು, ತರಬಲ್ಲಧೀರರು ನಿಮ್ಮಲ್ಲಿ ಯಾರಾದರೂ ಇದ್ದರೆ ಮುಂದೆ ಬನ್ನಿ." ಎಂದು ಗರ್ಜಿಸಿದನು.

ಎಲ್ಲ ದಂಡನಾಯಕರು ಒಬ್ಬರ ಮುಖ ಒಬ್ಬರು ನೋಡಿಕೊಂಡರು ಯಾರೂ ಕ್ಷಣಕಾಲ ಮಾತನಾಡಲಿಲ್ಲ! ನಾಗಮನಾಯಕನು ಎಂತಹ ವೀರನೆಂಬುದು ಅವರೆಲ್ಲರಿಗೂ ತಿಳಿದಿತ್ತು. ಅಲ್ಲದೆ ಅವನು ಅವರಲ್ಲನೇಕರ ಪ್ರೀತಿ ವಿಶ್ವಾಸಗಳಿಗೆ ಪಾತ್ರನಾಗಿದ್ದ. ಇಂತಹವನ ಮೇಲೆ ಕೈಮಾಡುವುದೇ? ಅಗಾಧ ಸೈನ್ಯದೊಂದಿಗೆ ವಿಜಯೋನ್ಮತ್ತನಾಗಿ ಸಾಮ್ರಾಟರ ಆಜ್ಞೆಯನ್ನು ಧಿಕ್ಕರಿಸಿರುವ ಅವನನ್ನು ಸೆರೆಹಿಡಿಯಲು ಸಾಧ್ಯವೆ? ಎಂದು ಎಲ್ಲರೂ ಮೌನದಿಂದ ಕುಳಿತರು.

ಆಗ ವಿಶ್ವನಾಥನಾಯಕನು – ನಾಗಮನಾಯಕನ ಮಗ – ಎದ್ದು ನಿಂತು ಹೀಗೆ ಹೇಳಿದ,

"ಪ್ರಭು ನನಗೆ ಅಪ್ಪಣೆ ಕೊಡಿ! ನಾನು ಆ ದ್ರೋಹಿಯನ್ನು ಸೆರೆಹಿಡಿದು ತರುತ್ತೇನೆ."

ಎಲ್ಲರೂ ಅವಕ್ಕಾಗಿ ಅವನನ್ನೇ ನೋಡಿದರು. ತಂದೆಯನ್ನು ಹಿಡಿದು ತರಲು ಮಗನೇ ಪ್ರಭುಗಳ ಅಪ್ಪಣೆ ಬೇಡುತ್ತಿದ್ದಾನೆ! ಇದೇನು ಆಶ್ಚರ್ಯ!

"ನೀನು ಯಾರಮೇಲೆ ದಂಡೆತ್ತಿ ಹೋಗುವುದು ತಿಳಿದಿದೆಯೆ?"

"ತಿಳಿದಿದೆ ಪ್ರಭು!"

"ತಿಳಿದಿದ್ದೂ ತಂದೆಯ ವಿರುದ್ಧ ಯುದ್ಧ ಮಾಡಲು ಅಪ್ಪಣೆ ಬೇಡುತ್ತಿರುವೆಯಾ?"

"ಹೌದು ಪ್ರಭು!"

"ನಿಮ್ಮ ತಂದೆಯಂತೆ ನೀನು ದ್ರೋಹ ಬಗೆದರೆ? ನಿನ್ನನ್ನು ನಂಬುವುದೆಂತು?"

"ಪ್ರಭುಗಳು ನನ್ನ ಸ್ಪಷ್ಟೋಕ್ತಿಗೆ ಕ್ಷಮಿಸಬೇಕು – ನನಗೆ ನಾಗಮನಾಯಕರು ಜನ್ಮವಿತ್ತು ಪೊರೆದು, ಪೋಷಿಸಿದ ತಂದೆ ನಿಜ! ಆದರೆ ಪ್ರಭುಗಳು ದೈವಾಂಶ ಸಂಭೂತರು ಅವರಿಗಿಂತಲೂ ದೊಡ್ಡವರು. ತಂದೆಯ ಸೇವೆಗಿಂತಲೂ ಸಾಮ್ರಾಜ್ಯಸೇವೆ ದೊಡ್ಡದು. ನನ್ನ ಕರ್ತವ್ಯದಮುಂದೆ – ತಂದೆ,

ಮಣಿಯುವುದಿಲ್ಲ. ನನ್ನ ಸಾಮ್ರಾಜ್ಯ ಭಕ್ತಿ–ರಾಜಭಕ್ತಿ ಅಂತಹುದು ಪ್ರಭುಗಳು ಇದನ್ನು ಪರೀಕ್ಷಿಸಲು ಅವಕಾಶ ಕೊಡಬೇಕು!"

"ಭಲೆ! ವೀರವರ! ನಿನ್ನಂಥ ಸುಪುತ್ರನನ್ನು ಪಡೆದ ನಾಡು ಪುಣ್ಯ ಭೂಮಿ! ನೀನು ಹೇಳಿದಂತೆಯೇ ಆಗಲಿ ನಿನ್ನ ಸ್ವಾಮಿನಿಷ್ಠೆಯನ್ನು ಒರೆಹಚ್ಚುವ ಅಗ್ನಿಪರೀಕ್ಷೆಯಲ್ಲಿ ಯಶಸ್ವಿಯಾಗಿ ಬಂದರೆ ರಾಜಸನ್ಮಾನ ಕಾದಿದೆ. ಸೋತರೆ ಮೂರು ಬಗೆಯ ಅಪರಾಧ! ಸ್ವಾಮಿದ್ರೋಹ! ಸಾಮ್ರಾಜ್ಯದ್ರೋಹ! ಪಿತೃ ದ್ರೋಹ!" ಎಂದು ಹೇಳಿ ಅವನಿಗೆ ವೀಳ್ಯವನ್ನು ಕೊಟ್ಟು ನಾಗಮನಾಯಕನ ಮೇಲೆ ಕಳುಹಿಸಿಕೊಟ್ಟನು.

ವಿಶ್ವನಾಥನಾಯಕನು ತನ್ನ ಆಪ್ತರಾದ ಅರಿಯನಾಥಮೊದಲಿಯಾರ್, ಕೇಶವದಂಡನಾಯಕ ಮುಂತಾದವರೊಡನೆ, ಸಮಾಲೋಚಿಸಿ, ಆರು ಸಾವಿರ ಕಾಲಾಳು, ಎರಡು ಸಾವಿರ ಅಶ್ವಬಲದೊಂದಿಗೆ ಅನೇಕ ದಿನಗಳು ಪ್ರಯಾಣ ಮಾಡಿ, ಮಧುರೆಯನ್ನು ಬಂದು ತಲುಪಿದನು.

ತನ್ನನ್ನು ಸೆರೆಹಿಡಿಯಲು ತನ್ನ ಮಗ ವಿಶ್ವನಾಥನಾಯಕನೇ ಬಂದಿರುವ ಸುದ್ದಿಯನ್ನು ಕೇಳಿ ನಾಗಮನಾಯಕನಿಗೆ ಸಂತೋಷವಾಯಿತು. ಈಗ ತಂದೆ ಮಕ್ಕಳಿಬ್ಬರೂ ಸೇರಿ, ಸಾಮ್ರಾಟರ ವಿರುದ್ಧ ದಂಗೆ ಎದ್ದು, ಮಧುರೆಯ ಸಿಂಹಾ ಸನವನ್ನು ಆಕ್ರಮಿಸಿ, ರಾಜರೆಂದು ಘೋಷಿಸಿಕೊಳ್ಳಬಹುದೆಂದು ಹರ್ಷತಾಳಿ ದನು. ಮಗನೊಡನೆ ಯುದ್ಧಕ್ಕಿಳಿಸದೆ, ಅವನೊಡನೆ ಅನೇಕ ರಹಸ್ಯ ಸಂಗತಿ ಗಳನ್ನು ಮಾತನಾಡಬೇಕೆಂದು ಪತ್ರ ಬರೆದು ದೂತರನ್ನು ಕಳುಹಿದನು. ಆ ಪತ್ರ ಕಂಡು ಅದೇನು ರಹಸ್ಯವೆಂದು ತಿಳಿದರೂ ತಂದೆಯನ್ನು ಕಾಣಲು ಹೊರಟನು. ಅವನ ಉದ್ದೇಶ ತಂದೆಗೆ ಬುದ್ಧಿ ಹೇಳಿ, ತನ್ನ ಅಕೃತ್ಯಕ್ಕಾಗಿ ಪಶ್ಚಾತ್ತಾಪ ಪಡು ವಂತೆ ಮಾಡಿ, ಎರಡು ಸೈನ್ಯಗಳ ನಡುವೆ ಹರಿಯುವ ವೃಥಾ ರಕ್ತಪಾತವನ್ನು ನಿಲ್ಲಿಸಬೇಕೆಂದು! ಆದರೆ ತನ್ನ ಪತ್ರಕ್ಕೆ ಮಗನ ಸಮ್ಮತಿ ದೊರೆತುದನ್ನು ಕಂಡು ನಾಗಮನಾಯಕನು ದೂರಾಲೋಚನೆ ಮಾಡಿದನು.

ಅವನು ಮಗನನ್ನು ಪ್ರೀತಿಯಿಂದ ಬರಮಾಡಿಕೊಂಡು, ಕುಶಲಪ್ರಶ್ನೆ ಮಾಡಿದಮೇಲೆ ಅವನಿಗೆ ತನ್ನ ಎಲ್ಲ ಹಂಚಿಕೆಯನ್ನು ತಿಳಿಸಿ,

"ಇದರ ಯಶಸ್ಸು ನಿನ್ನ ನಿರ್ಧಾರದ ಮೇಲೆ ನಿಂತಿದೆ ಮಗು! ನೀನು ದುಡುಕಿದರೆ ನನ್ನ ಯೋಜನೆಗಳೆಲ್ಲಾ ವಿಫಲವಾಗುತ್ತದೆ! ಸಾಹಸವೆಲ್ಲ ವ್ಯರ್ಥ ವಾಗುತ್ತದೆ. ನಿನ್ನ ಅಭ್ಯುದಯಕ್ಕಾಗಿ ನಾನು ಇಷ್ಟೆಲ್ಲಾ ಸಾಹಸ ಪಡುತ್ತಿರು ವುದು. ಆ ದುರುಳ ಸಲಕಂ ಸಹೋದರರು ಸಾಮ್ರಾಟರ ವಿಶ್ವಾಸಕ್ಕೆ ಪಾತ್ರ ರಾಗಿರುವವರೆಗೆ ನಿನಗೆ ಕೇಡು ತಪ್ಪದು. ನಿನ್ನ ಏಳಿಗೆಯನ್ನು ನೋಡಿ ಅಸೂಯೆ

ಗೊಂಡು ಅವರು ನಿನ್ನ ಪ್ರಾಣಕ್ಕೆ ಗಂಡಾಂತರ ತರುವುದೂ ಹೆಚ್ಚಲ್ಲ — ಈ ಮಾತು ಖಂಡಿತ! ನನ್ನ ಪ್ರಯತ್ನವನ್ನು ವ್ಯರ್ಥಗೊಳಿಸುವುದೂ, ಸಾರ್ಥಕ ಗೊಳಿಸುವುದೂ ನಿನ್ನ ನಿರ್ಧಾರದ ಮೇಲೆ ನಿಂತಿದೆ." ಎಂದನು ನಾಗಮ ನಾಯಕ. ಮಗನ ಮನವೊಲಿಸಿಕೊಳ್ಳಲು ಪ್ರಯತ್ನಿಸುತ್ತಾ,

ವಿಶ್ವನಾಥನಾಯಕನು ಎಲ್ಲವನ್ನೂ ಸಮಾಧಾನಚಿತ್ತದಿಂದ — ಯಾವ ಬಗೆಯ ಭಾವೋದ್ವೇಗಕ್ಕೂ ಒಳಗಾಗದೆ ಆಲಿಸಿದನು. ನಾಗಮನಾಯಕನು ಹೇಳಿದ್ದ ಎಲ್ಲ ಮಾತುಗಳು ಸತ್ಯವಾಗಿತ್ತು. ತನ್ನ ಸಲುವಾಗಿ ತನ್ನ ಸಚ್ಚಾರಿತ್ರಕ್ಕೆ ಕಳಂಕ ತಂದುಕೊಳ್ಳಲು ಸಿದ್ಧನಾಗಿದ್ದನು. ತನ್ನ ಮೇಲೆ ಅವನಿಗೆ ಅತಿಶಯವಾದ ಮಮತೆಯಿತ್ತು. ಈಗ ತಾನು ಏನು ಮಾಡಬೇಕು? ಒಂದು ಕಡೆ ತಂದೆಗಾಗಿ ಮಾಡಬೇಕಾದ ಕರ್ತವ್ಯ! ಮತ್ತೊಂದು ಕಡೆ ಪ್ರಭುವಿಗಾಗಿ ಸೇವಕನ ಕರ್ತವ್ಯ! ಕೊನೆಯದಾಗಿ ಸಾಮ್ರಾಜ್ಯಕ್ಕೆ ಮಾಡಬೇಕಾದ ಕರ್ತವ್ಯ! ಇವುಗಳಲ್ಲಿ ಯಾವುದನ್ನೂ ಕೈಬಿಡಲು ಸಾಧ್ಯವಿರಲಿಲ್ಲ. ಈ ಯೋಚನೆಗಳ ತಾಕಲಾಟಕ್ಕೆ ಸಿಕ್ಕಿ ಜರ್ಝರಿತನಾದನು.

ಕಡೆಗೆ ವಿಶ್ವನಾಥನಾಯಕನ ಸಾಮ್ರಾಜ್ಯನಿಷ್ಠೆ ಮೇಲ್ಮೈಯಾಯಿತು. ತಾನು ಪಿತೃದ್ರೋಹಿಯಾಗಿ ರೌರವ ನರಕ ಅನುಭವಿಸಿದರೂ ಚಿಂತೆಯಿಲ್ಲ. ತನ್ನನ್ನು ನಂಬಿದ ಪ್ರಭುಗಳಿಗೆ ದ್ರೋಹ ಬಗೆಯಬಾರದೆಂದು ನಿಶ್ಚಯಿಸಿದನು. ತಂದೆಗಿಂತಲೂ ಅತಿಶಯವಾಗಿರುವ ಜನ್ಮಭೂಮಿಗೆ ತಾಯಿನಾಡಿಗೆ ದ್ರೋಹ ಬಗೆಯಬಾರದೆಂದು ನಿಶ್ಚಯಿಸಿದನು. ಈಗ ಅವನಿಗೆ ತಾಕಲಾಟವಿರಲಿಲ್ಲ. ಅವನ ಮಾರ್ಗ ಸ್ಪಷ್ಟವಾಗಿತ್ತು. ಅಂತಲೇ ತಂದೆಯನ್ನು ಕುರಿತು ಹೇಳಿದ,

"ಅಪ್ಪಾಜಿ, ನನ್ನ ಮೇಲೆ ಅತಿಶಯವಾದ ಮಮತೆ ನಿಮಗಿದೆಯೆಂದು ನಾನು ಬಲ್ಲೆ! ಆದರೆ ಅದಕ್ಕಾಗಿ ನಾನು ಅವಿವೇಕ ಮಾರ್ಗದಲ್ಲಿ ನಡೆಯಲಾರೆ! ಈಗ ನಿಮಗೆ ಕೀರ್ತಿ ತರಬಲ್ಲ ಪುತ್ರನಾಗಿರಬೇಕಾದರೆ, ನನ್ನಿಂದ ತಾಯಿನಾಡಿಗೆ ಸೇವೆ ಸಲ್ಲಿಸಬೇಕಾದರೆ ನನ್ನಲ್ಲಿ ವಾತ್ಸಲ್ಯವಿಟ್ಟು, ನಂಬಿಕೆಯಿಟ್ಟು ಕಳುಹಿಸಿದ ಸ್ವಾಮಿಗೆ ದ್ರೋಹ ಬಗೆಯಲಾರದು. ನನಗೆ ಪಿತೃನಿಷ್ಠೆಗಿಂತಲೂ, ರಾಜನಿಷ್ಠೆ ಅಧಿಕವಾಗಿದೆ. ಪುತ್ರನ ಕರ್ತವ್ಯಕ್ಕಿಂತಲೂ ಭೃತ್ಯನ ಕರ್ತವ್ಯ ಮಿಗಿಲಾಗಿದೆ! ಪಿತೃಋಣಕ್ಕಿಂತಲೂ ತಾಯಿನಾಡಿನ ಋಣವನ್ನು ತೀರಿಸುವುದು ಉತ್ತಮವೆನಿಸುತ್ತಿದೆ. ನಿಮಗೆ ನನ್ನಲ್ಲಿ ನಿಜವಾದ ಪ್ರೀತಿವಿಶ್ವಾಸಗಳಿದ್ದರೆ ನಾನು ಹೇಳಿದಂತೆ ಕೇಳಿ!"

"ಏನದು?"

ತಾಯಿ, ಬಂಧು ಬಳಗ ಎಲ್ಲವೂ ಅಲ್ಪ. ದೈವವೇ ಎದುರು ನಿಂತರೂ ನಾನು

" ನೀವು ನಿಮ್ಮ ಅಕೃತ್ಯಕ್ಕಾಗಿ ಪಶ್ಚಾತ್ತಾಪಪಡಿ! ನಿಮ್ಮ ಸ್ವಾಮಿದ್ರೋಹಕ್ಕಾಗಿ ಪಶ್ಚಾತ್ತಾಪಪಡಿ! ಇದರಿಂದ ನಿಮಗೆ ಕೀರ್ತಿಯುಂಟು! ಯಾವ ಅಧಿಕಾರ ಸಾಮ್ರಾಜ್ಯಗಳೂ ಕೊಡದ ಸದ್ಗತಿಯುಂಟು!"

" ಈಗ ನಾನು ಪಶ್ಚಾತ್ತಾಪಪಟ್ಟರೆ ಪ್ರಯೋಜನವಿಲ್ಲ ಮಗು! ನಾನು ಹಿಂದಿರುಗಲಾಗದಷ್ಟು ಆಳವಾದ ನೀರಿನಲ್ಲಿ ಕಾಲಿಟ್ಟಿದ್ದೇನೆ – ನಾನು ಮುಳುಗಬೇಕೇ ಹೊರತು – ಉಳಿಯುವ ದಾರಿಯಿಲ್ಲ."

" ನಿಮಗೆ ನಿಜವಾದ ಪಶ್ಚಾತ್ತಾಪವಾಗಿದ್ದರೆ – ಈಗಲೂ ನಿಮ್ಮನ್ನು ಉಳಿಸಿಕೊಳ್ಳಲು ಸಾಧ್ಯವಿದೆ ಅಪ್ಪಾಜಿ!"

" ನೀನು ತಪ್ಪುತಿಳಿದಿರುವೆ ಮಗು! ನಿನಗೆ ಲೋಕ ವ್ಯವಹಾರ ತಿಳಿಯದು! ನಾನು ಪಶ್ಚಾತ್ತಾಪ ಪಟ್ಟರೆ ಫಲವಿಲ್ಲ! ಕಡೆಯತನಕ ದ್ರೋಹಿಯಾಗುವುದೇ ಸುಖಕರ! "

" ಹಾಗಾದರೆ ನಿಮ್ಮ ದಾರಿ ಬೇರೆಯಾಗಿದೆ!"

" ಎಂದೋ ಬೇರೆಯಾಗಿದೆ?"

" ಆದರೂ ಇನ್ನೊಮ್ಮೆ ಎಚ್ಚರಿಸುತ್ತೇನೆ ಅಪ್ಪಾಜಿ! ನಮ್ಮಿಬ್ಬರ ವಿರೋಧಾಭಿಪ್ರಾಯದಿಂದ ವೃಥಾ ಯುದ್ಧ ನಡೆದು, ನಿರಪರಾಧಿಗಳ ರಕ್ತವೇಕೆ ಹರಿಯಬೇಕು. ನೀವು ನನ್ನ ಮಾತು ಕೇಳಿ ಸಾಮ್ರಾಟರಿಗೆ ಶರಣು ಬರುವುದು ಒಳ್ಳೆಯದು!"

" ಇದೊಂದು ಮಾತು ಸಾಧ್ಯವಿಲ್ಲ!"

" ಹಾಗಾದರೆ ಯುದ್ಧ ಅನಿವಾರ್ಯವೆಂದು ಹೇಳುತ್ತೀರಾ?"

" ಹೌದು!"

ತಂದೆಯಿಂದ ಬೀಳ್ಕೊಂಡು, ವಿಫಲಸಂಧಾನಕ್ಕಾಗಿ ಮರುಗದೆ – ನಾಗಮನಾಯಕನ ಮೇಲೆ ಯುದ್ಧ ಘೋಷಿಸಿದನು.

ತಂದೆ ಮಕ್ಕಳ ಯುದ್ಧ ಅನೇಕ ದಿನಗಳವರೆಗೆ – ಭೀಕರವಾಗಿ ನಡೆಯಿತು. ನಾಗಮನಾಯಕನ ಮುಂದೆ ವಿಶ್ವನಾಥನಾಯಕನ ಕೈ ನಡೆಯಲಿಲ್ಲ. ' ಏನೇ ಆಗಲಿ, ಈ ಅಗ್ನಿಪರೀಕ್ಷೆಯನ್ನು ಗೆದ್ದರೆ ಮಾತ್ರ ರಾಜಧಾನಿಗೆ ಹಿಂದಿರುಗಬೇಕು. ಇಲ್ಲವಾದರೆ ರಣರಂಗದಲ್ಲಿ ಮಡಿದು ವೀರಸ್ವರ್ಗ ಸೇರಬೇಕು.' ಎಂದು ಪ್ರಾಣದ ಮೇಲಿನ ಆಸೆಯನ್ನು ತೊರೆದು ಹೋರಾಡುತ್ತಿದ್ದ ವಿಶ್ವನಾಥನಾಯಕನ ಧೈರ್ಯ ಸಾಹಸಗಳನ್ನು ನೋಡಿ ನಾಗಮನಾಯಕನು ಬೆರಗಾದ. ಸೈನಿಕರು ಚಕಿತರಾದರು. ಇನ್ನೇನು ನಾಗಮನಾಯಕನ ಕೈ ಮೇಲಾಗಿ, ಅವನಿಗೇ ಜಯದೊರೆಯುತ್ತದೆನ್ನುವಷ್ಟರಲ್ಲಿ, ಅನಿರೀಕ್ಷಿತವಾಗಿ ವಿಶ್ವನಾಥನಾಯಕನಿಗೆ ಪಾಂಡ್ಯರಾಜನ ನೆರವು ದೊರಕಿ ಯುದ್ಧದ ಸ್ವರೂಪವೇ ಬದಲಾಯಿಸಿತು.

ವೀರಾವೇಶದಿಂದ ಹೋರಾಡುತ್ತಿದ್ದ. ಮಗನನ್ನು ಎದುರಿಸಲಾರದೆ ನಾಗಮನಾಯಕನು ಸೋತು ಹಿನ್ನಟ್ಟಿದ. ಈ ಸಮಯದಲ್ಲಿ ಮಿಂಚಿನ ವೇಗದಲ್ಲಿ ಮುಂದೆ ನುಗ್ಗಿ ತಂದೆಯನ್ನು ನಿಶ್ಶಸ್ತ್ರಗೊಳಿಸಿ, ಅವನನ್ನು ಕೈಸೆರೆ ಹಿಡಿದ ವಿಶ್ವನಾಥನಾಯಕ! ಎರಡು ಕಡೆಯ ಸೈನಿಕರೂ ವಿಶ್ವನಾಥನ ಸಾಹಸ, ಸ್ವಾಮಿಭಕ್ತಿಯನ್ನು ಕಂಡು 'ಉಘೇ' ಎಂದರು. ಎಲ್ಲರಿಗಿಂತಲೂ ವಿಶ್ವನಾಥನು ತನ್ನ ಉದಾತ್ತ ನಡವಳಿಕೆಯಿಂದ ಪಾಂಡ್ಯರಾಜನಾದ ಚಂದ್ರಶೇಖರವರ್ಮನ ಮನಸ್ಸನ್ನು ಸೂರೆಗೊಂಡು ಅವನ ಅಭಿಮಾನದ ಪುತ್ಥಳಿಯಾದ.

ತನ್ನ ಸಲುವಾಗಿ ಸ್ವಂತತಂದೆಯನ್ನು ವಿರೋಧಿಸಿ, ತನಗೆ ಜಯವನ್ನು ಸಂಪಾದಿಸಿಕೊಟ್ಟ ಪಾಂಡ್ಯರಾಜನು ವಿಶ್ವನಾಥನನ್ನು ಬಾಚಿ ತಬ್ಬಿಕೊಂಡು, ಅವನ ಮೈದಡವಿ, ಅವನ ಧೈರ್ಯ ಸಾಹಸಗಳನ್ನು ಕೊಂಡಾಡಿದ. ಅವನಿಂದ ತನಗಾಗಿರುವ ಉಪಕಾರವನ್ನು ಯಾವರೀತಿ ಸ್ಮರಿಸಿದರೂ ಸಾಲದೆನ್ನಿಸಿತು. ವಿಶ್ವನಾಥನನ್ನು ತುಂಬಿದ ಸಭೆಯಲ್ಲಿ ಉಚಿತ ರೀತಿಯಲ್ಲಿ ಸತ್ಕರಿಸಿ, ಹೀಗೆ ಹೇಳಿದನು. "ಮಗೂ ವಿಶ್ವನಾಥ! ನಿನ್ನಂಥಹ ಉದಾರ ಚರಿತ, ಸ್ವಾಮಿನಿಷ್ಠ ಸೇವಕನನ್ನು ಇದುವರೆಗೆ ನೋಡಿರಲಿಲ್ಲ – ಪ್ರಭುಗಳ ಸಲುವಾಗಿ, ಸಾಮ್ರಾಜ್ಯದ ಹಿತದೃಷ್ಟಿಯಿಂದ, ಹೆತ್ತ ತಂದೆಯನ್ನೇ ಎದುರಿಸಿ ಹೋರಾಡಿದ ನಿನ್ನ ಅಮರ ಚಾರಿತ್ರ – ಆಚಂದ್ರಾರ್ಕಪರಿಯಾಗಿ ಇತಿಹಾಸದಲ್ಲಿ ನಿಲ್ಲುವುದು ನೀನೇ ಧನ್ಯ! ನಿನ್ನನ್ನು ಪಡೆದ ನಾಡು ಧನ್ಯ! ನಮ್ಮ ನಾಡಿನ ಜನರೆಲ್ಲರ ಹೃದಯದಲ್ಲಿ ನಿನ್ನ ಸದ್ಗುಣಗಳಿಂದ ಚಿರಸ್ಥಾಯಿಯಾಗಿ ನೆಲಸಿದ್ದೀಯೆ. ಸಮಸ್ತ ಪಾಂಡ್ಯರಾಜ್ಯದ ಜನರ ಅಭಿಮಾನವನ್ನು ಸೂರೆಗೊಂಡಿರುವ ನೀನು ನನ್ನ ಮಗನಿಗೂ ಅತಿಶಯವಾಗಿದ್ದಿ. ನನಗೆ ಹೇಗೂ ಪುತ್ರಸಂತಾನವಿಲ್ಲ! ನೀನೇ ನನ್ನ ದತ್ತುಮಗನಾಗು! ನಿನ್ನನ್ನು ಪುತ್ರನನ್ನಾಗಿ ಪಡೆದರೆ ನನ್ನಂಥಹ ಭಾಗ್ಯಶಾಲಿಗಳು ಬೇರಿಲ್ಲ! ನೀನು ನನ್ನ ಅನಂತರ ಮಧುರೆಯ ಸಿಂಹಾಸನದಲ್ಲಿ ಸಾಮ್ರಾಟನಾಗಿ ಮೆರೆ! ಈ ಪಾಂಡ್ಯರಾಜ್ಯವನ್ನೇ ನಿನಗೆ ಧಾರೆ ಎರೆದಿದ್ದೇನೆ. ವೀರವರ, ನಿನಗೆ ಒಳ್ಳೆಯದಾಗಲಿ! ದೇವರು ನಿನ್ನನ್ನು ಚಿರಕಾಲ ರಕ್ಷಿಸಲಿ! ನಿನ್ನ ಕೀರ್ತಿ ಅಜರಾಮರವಾಗಿ ಮೆರೆಯಲಿ!" ಎಂದು ಹೇಳಿ ಅವನನ್ನು ಬೀಳ್ಕೊಟ್ಟನು.

ವಿಶ್ವನಾಥನಾಯಕನು ತನಗೆ ದೊರೆತ ರಾಜಸನ್ಮಾನದಿಂದ ಮೈಯುಬ್ಬದೆ ಪಾಂಡ್ಯರಾಜನನ್ನು ಉಚಿತರೀತಿಯಲ್ಲಿ ಬೀಳ್ಕೊಟ್ಟು, ಸೆರೆಸಿಕ್ಕಿದ ನಾಗಮನಾಯಕನೊಡನೆ, ವಿಜಯನಗರಕ್ಕೆ ಪ್ರಯಾಣ ಬೆಳೆಸಿದ. ರಾಜಧಾನಿಯನ್ನು ತಲುಪಿ, ಅಚ್ಯುತರಾಯನ ಬಳಿ ತಂದೆಯನ್ನು ನಿಲ್ಲಿಸಿ. "ಪ್ರಭೂ, ಪಂಪಾಪತಿಯ ದಯೆಯಿಂದ, ಈ ಅಗ್ನಿಪರೀಕ್ಷೆಯಲ್ಲಿ ನಾನುಗೆದ್ದು ಬಂದಿದ್ದೇನೆ. ಇದೋ ನೀವು ಬಯಸಿದ ಆ ದ್ರೋಹಿ!" ಎಂದು ಹೇಳಿದನು.

ವಿಶ್ವನಾಥನಾಯಕನ ಕಾರ್ಯದಿಂದ ಸುಪ್ರಸನ್ನಗೊಂಡಿದ್ದ ಅಚ್ಯುತರಾಯನಿಗೆ, ಅವನನ್ನು ಹೇಗೆ ಶ್ಲಾಘಿಸಬೇಕೋ ತಿಳಿಯದಾಯಿತು. ಅವನನ್ನು ಬಳಿಗೆ ಕರೆಸಿಕೊಂಡು ಮೈದಡವಿ, "ಮಗು ವಿಶ್ವನಾಥ! ವೀರನೆಂದರೆ ನೀನೆ! ನನ್ನ ಆಜ್ಞೆಯನ್ನು ಶಿರದಲ್ಲಿ ಹೊತ್ತು, ತಂದೆಯವಿರುದ್ಧ ಹೋರಾಡಿ ಸೆರೆಹಿಡಿದು ತಂದ ನಿನ್ನ ರಾಜಭಕ್ತಿ – ಲೋಕೋತ್ತರವಾದುದು – ಅನುಪಮವಾದುದು ನಿನಗೆ ಏನು ಬೇಕೋ ಕೇಳು! ನಡೆಸಿಕೊಡುತ್ತೇನೆ!" ಎಂದನು.

"ಪ್ರಭುಗಳ ಕೃಪೆ ಸೇವಕನ ಮೇಲೆ ಅನಂತವಾಗಿರಬೇಕೆಂಬುದೇ ಸೇವಕನ ಕೋರಿಕೆ!"

"ನೀನು ನನ್ನ ಅಭಿಮಾನದ ಪುತ್ಥಳಿ! ನಮ್ಮ ಪ್ರೀತಿ ವಿಶ್ವಾಸಗಳು ಆಯಾಚಿತವಾಗಿ ನಿನ್ನದಾಗಿದೆ! ಇದಕ್ಕೂ ಮೀರಿದ ಸನ್ಮಾನಕ್ಕೆ ನೀನು ಅರ್ಹನಾಗಿದ್ದಿ! ನಿನಗೇನು ಬೇಕು ಹೇಳು! ನಡೆಸಿಕೊಡುತ್ತೇನೆ!"

"ಪ್ರಭುಗಳು ನನ್ನ ಮಾತನ್ನು ಅನ್ಯಥಾ ಭಾವಿಸಬಾರದು. ನನ್ನ ಅಲ್ಪ ಸೇವೆಗೆ ನೀವು ತೋರಿರುವ ಅಭಿಮಾನ ಅಪಾರವಾಗಿದೆ. ಪ್ರಭುಗಳಲ್ಲಿ ನನ್ನದೊಂದು ಕೋರಿಕೆಯಿದೆ. ಕೃಪೆಮಾಡಬೇಕು!"

"ಏನದು ನಿಸ್ಸಂಕೋಚವಾಗಿ ತಿಳಿಸು! ಈಡೇರಿಸುತ್ತೇನೆ."

"ನಮ್ಮ ತಂದೆಯವರು ಸನ್ನಿಧಾನದ ವಿರುದ್ಧ ಮಾಡಿದ ಎಲ್ಲ ತಪ್ಪುಗಳನ್ನು ಮನ್ನಿಸಿ, ಅವರಿಗೆ ಜೀವದಾನ ಕೊಡಬೇಕು."

"ತಥಾಸ್ತು!" ಎಂದು ಹೇಳಿ ಪಶ್ಚಾತ್ತಾಪದ ಕಣ್ಣೀರು ಸುರಿಸುತ್ತಾ ನಿಂತಿದ್ದ ನಾಗಮನಾಯಕನ ಕಡೆ ತಿರುಗಿ,

"ನಾಗಮನಾಯಕರೇ, ನಿಮ್ಮ ಚಿರಂಜೀವಿಯ ಸಲುವಾಗಿ, ನೀವು ಮಾಡಿರುವ ಎಲ್ಲ ಅಪರಾಧಗಳನ್ನು ಕ್ಷಮಿಸಿದ್ದೇನೆ! ಇಂಥಹ ಪುತ್ರನನ್ನು ಪಡೆದ ನೀವೇ ಧನ್ಯರು! ನಿಮ್ಮ ಪುಣ್ಯವೇ ಪುಣ್ಯ! ಇವರು ನಿಮ್ಮ ಮಗನಲ್ಲ! ನಾಡಿನ ಪುತ್ರರು! ಇವರ ಕೀರ್ತಿ ಅಜರಾಮರವಾಗಿ ಬೆಳೆಯಲಿ!" ಎಂದು ಹೇಳಿ ಆ ಮಕ್ಕಳ ಕೈಯನ್ನು ಒಟ್ಟಾಗಿ ಸೇರಿಸಿದ.

ನಾಗಮನಾಯಕನಿಗೆ ಮಾತು ಹೊರಡಲಿಲ್ಲ – ಹೊರಡುವ ಸ್ಥಿತಿಯಲ್ಲೂ ಇರಲಿಲ್ಲ. ಅವನು ತನ್ನ ಪುನರ್ಜನ್ಮಕ್ಕೆ ಕಾರಣನಾದ ಮಗನ ಮೈದಡವಿ "ಕಂದಾ! ಸಹಸ್ರವರ್ಷ ಚೆನ್ನಾಗಿ ಬದುಕು" ಎಂದು ಉದ್ಗರಿಸಿದ! ಇದಕ್ಕಿಂತಲೂ ಹೆಚ್ಚಿನ ಮಾತು ಹೊರಡಲಿಲ್ಲ.

೧೫

ವಿಶ್ವನಾಥನಾಯಕನಿಗೆ ದೊರೆತ ರಾಜಸನ್ಮಾನ ಸ್ವಾಮಿನಿಷ್ಠ ಸೇವಕರಿಗೆ ದೊರೆತ ಸನ್ಮಾನ! ಅವನಿಗೆ ದೊರೆತ ಜಯ – ಅವರಿಗೆ ದೊರೆತ ಜಯವಾಗಿತ್ತು. ಅಚ್ಯುತರಾಯನ ಸದ್ಗುಣಗಳು ಪ್ರಥಮಬಾರಿಗೆ ವಿಶ್ವನಾಥನಾಯಕನ ಪ್ರಸಂಗದಲ್ಲಿ ಪ್ರಕಟವಾಗಿದ್ದವು. ಜನತೆ ಅವನನ್ನು ಸಲಕಂ ಸಹೋದರರಂತೆ ಹೃದಯಶೂನ್ಯವ್ಯಕ್ತಿ ಎಂದು ತಿಳಿದಿದ್ದರು. ಆದರೆ ವಿಶ್ವನಾಥನಾಯಕನಿಗೆ ಮಾಡಿದ ವಿಶೇಷೋಚಿತವಾದ ಪ್ರಶಂಸೆ ಸನ್ಮಾನ ಅವನ ಗುಣಗ್ರಾಹಿತನವನ್ನು ತೋರಿಸಿತ್ತು; ಅಷ್ಟೇ ಅಲ್ಲ ವಿಶ್ವನಾಥನಾಯಕನ ತಂದೆ ನಾಗಮನಾಯಕನ ವಿಷಯದಲ್ಲಿ ತೋರಿಸಿದ ಕ್ಷಮೆ ಅವನ ವಿಷಯದಲ್ಲಿ ಪ್ರಜೆಗಳ ಅಭಿಪ್ರಾಯ ಬದಲಿಸುವಂತೆ ಆಯಿತು. ಅಚ್ಯುತರಾಯನ ಹೃದಯದಲ್ಲಿ ರವೆಯಷ್ಟೂ ಕ್ಷಮೆ, ಕರುಣೆ ಇಲ್ಲವೆಂದೂ, ಅದು ಸಲಕಂ ಸಹೋದರರಷ್ಟೇ ಪಾಷಾಣವೆಂದುತಿಳಿದಿದ್ಧ ಜನತೆಗೆ, ಅಚ್ಯುತರಾಯನೂ ವಾತ್ಸಲ್ಯದ ಮೂರ್ತಿ, ಅವನಿಗೂ ಮಾನವ ಸಹಜವಾದ ಭಾವನೆಗಳು ಉಂಟು ಎಂಬ ಸಂಗತಿಯನ್ನು ಪರಿಚಯ ಮಾಡಿಕೊಟ್ಟಿದ್ದವು. ಇಂದಲ್ಲ ನಾಳೆ ತಮಗೆ ದೈತ್ಯ ಸ್ವರೂಪರಾದ ಸಲಕಂ ಸಹೋದರರ ದಬ್ಬಾಳಿಕೆಯಿಂದ, ದೌರ್ಜನ್ಯಗಳಿಂದ, ಅತ್ಯಾಚಾರಗಳಿಂದ ಬಿಡುಗಡೆ ದೊರಕಬಹುದು ಎಂದು ಆಶಿಸುವಂತೆ ಆಯಿತು. ಸಲಕಂ ಸಹೋದರರ ಕೈಯಲ್ಲಿ ನೊಂದಿದ್ದ ಜನ, ಹತಾಶರಾಗುವ ಬದಲು ಅಚ್ಯುತರಾಯನಿಗೆ ಪಂಪಾಪತಿಯು ಸದ್ಬುದ್ಧಿಯನ್ನು ದಯಪಾಲಿಸಿ ತಮ್ಮನ್ನು ಕಷ್ಟನಷ್ಟಗಳಿಂದ ಬಿಡುಗಡೆ ಮಾಡುವನೆಂದು ದೂರದ ಆಸೆಯನ್ನು ಕಾಣುವಂತೆ ಆಯಿತು.

ವಾಸ್ತವವಾಗಿ ಅಚ್ಯುತರಾಯನು ಕೇಡುಕನೂ ಅಲ್ಲ, ಹೃದಯಶೂನ್ಯನೂ ಅಲ್ಲ. ಅವನು ಗುಣಗ್ರಾಹಿಯಾಗಿದ್ದುದಲ್ಲದೆ ಮೃದು ಸ್ವಭಾವದವನಾಗಿದ್ದ. ಆದರೆ ಅವನಲ್ಲಿ ಏಕಪಕ್ಷೀಯ ನಿಷ್ಠೆ ಇರಲಿಲ್ಲ – ಒಂದು ಧೃಡ ನಿರ್ಧಾರವಿರಲಿಲ್ಲ. ಬಹುಬೇಗ ಅನ್ಯರ ಮಾತುಗಳಿಗೆ ಕಿವಿಗೊಡುವ ಸ್ವಭಾವ. ಮೊದಲಿನಿಂದಲೂ ತಾನಾಯಿತು ತನ್ನ ಭೋಗ ಜೀವನವಾಯಿತು ಎಂದು ಇದ್ದ ಅವನಿಗೆ ಅರಮನೆಯ ಆಚೆ ವಿಶಾಲಜಗತ್ತಿದೆ, ತಾನು ಅದರ ಸಾಮ್ರಾಟ, ಜನತೆಯ ನೆಮ್ಮದಿ ತನ್ನನ್ನೇ ಅವಲಂಬಿಸಿದೆ ಎಂಬೆಲ್ಲ ಭಾವನೆಗಳು ಅವನ ತಲೆಯಲ್ಲಿ ಒಂದು ಬಾರಿಯೂ ಸುಳಿಯುತ್ತಿರಲಿಲ್ಲ. ಅರಮನೆಯ ನಾಲ್ಕು ಗೋಡೆಗಳೇ ಅವನ ಪ್ರಪಂಚ – ಆ ಸಂಕುಚಿತ ಪ್ರಪಂಚದಲ್ಲಿ ಹೊಗಳುಭಟ್ಟರಿಗೆ ಕಡಿಮೆಯಿರಲಿಲ್ಲ. ಇಂದ್ರಿಯಗಳು ಬಯಸಬಹುದಾದ ಎಲ್ಲ ಸುಖಸ್ವರ್ಗಗಳ ಮಹಾದ್ವಾರ ತೆರೆ

ದಿದ್ದವು. ಅಲ್ಲಿನ ವಿಲಾಸ ಜೀವನದಲ್ಲಿ, ನರ್ತಕಿಯರು, ಗಾಯಕಿಯರು, ಮೊದಲಾದ ಕಲಾವಿದರ ಮಧುರ ಸಹವಾಸದಲ್ಲಿ – ಪ್ರೇಯಸಿಯರ ಸರಸ ಸಜ್ಜನಿಕೆಯಲ್ಲಿ – ಭಟ್ಟಂಗಿಗಳ ಉದ್ಗಾರದಲ್ಲಿ, ಅಚ್ಯುತರಾಯನ ಜೀವನ ತುಂಬಿ ಬಂದಿತ್ತು. ಹೊರಗಿನ ಪ್ರಪಂಚದೊಡನೆ ಇದ್ದ ಒಂದೇ ಒಂದು ಸಂಬಂಧ ವೆಂದರೆ ಅದು ಸಲಕಂ ಸಹೋದರರು. ಆದಷ್ಟು ಅಧಿಕಾರವನ್ನು ತಾವೇ ಉಳಿಸಿಕೊಳ್ಳುವ ದೃಷ್ಟಿಯಿಂದ ಅಚ್ಯುತರಾಯನ ಭೋಗ ಜೀವನ ನಿರಾತಂಕ ವಾಗಿ ನಡೆಯಲು ಅವರು ಅನುವು ಕೊಟ್ಟಿದ್ದರು. ಹೊರಗಿನ ಪ್ರಪಂಚದ ಯಾವ ಗದ್ದಲದಿಂದಲೂ ಅವನ ಚಿತ್ತಶಾಂತಿ ಕದಡದಂತೆ, ನೋಡಿಕೊಂಡಿದ್ದರು ಹೀಗಾಗಿ ಅವರ ದಬ್ಬಾಳಿಕೆ ಕ್ರೌರ್ಯ ಅಚ್ಯುತರಾಯನ ಕಿವಿಗೆ ಬೀಳುತ್ತಿರಲಿಲ್ಲ– ಅವರು ಬೇರೆಯವರು ಅಚ್ಯುತರಾಯನ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗದಂತೆ ಬಹಳ ಎಚ್ಚರಿಕೆಯಿಂದಿದ್ದರು. ಎಲ್ಲಿಯವರೆಗೆ ಹೊರಗಿನ ಸಂಗತಿಗಳು ಅಚ್ಯುತ ರಾಯನ ಮನಸ್ಸನ್ನು ಕದಡುವುದಿಲ್ಲವೋ ಅಲ್ಲಿಯವರೆಗೆ ಪ್ರಪಂಚದಲ್ಲಿ ಎಲ್ಲಿ ನೆಮ್ಮದಿ ಇದೆ ಎಂದು ಭಾವಿಸುವಂತೆ ತಮ್ಮ ಪ್ರಭಾವಬೀರಿದ್ದರು. ಹೀಗಿದ್ದೂ ಬಿಜಾಪುರದ ಸುಲ್ತಾನನಿಂದಾದ ಪರಾಭವ, ಸೆಲ್ಲಪ್ಪನಾಯಕನ ವಿಚಾರಣೆ, ಕೃಷ್ಣಪ್ಪನಾಯಕನ ದುರಂತ ಮರಣ ಅವನಿಗೆ ಚಿತ್ತಕ್ಷೋಭೆಯನ್ನುಂಟು ಮಾಡಿದ್ದವು. ಈಗ ವಿಶ್ವನಾಥನಾಯಕ ಹಾಗೂ ನಾಗಮನಾಯಕರ ಪ್ರಸಂಗ ದಲ್ಲಿ ಅವನ ಉದಾರಾಂತಃಕರಣ ಪ್ರಕಟವಾಗಿತ್ತು. ಅವರು ವಿಶ್ವನಾಥನಾಯಕ ನಿಗೆ ಸಂದ ರಾಜ ಸನ್ಮಾನವನ್ನು ಸಹಿಸದಾದರು.

ಅವರಿಗೆ ಎಲ್ಲದಕ್ಕಿಂತಲೂ ಹೆಚ್ಚಾಗಿ ನಾಗಮನಾಯಕನಿಗೆ ಕ್ಷಮೆ ದೊರೆ ತುದು ಸಹನವಾಗಲಿಲ್ಲ. ಅವರು ರಾಜದ್ರೋಹಿಯಾಗಿದ್ದ ನಾಗಮನಾಯಕ ನಿಗೆ ಮರಣದಂಡನೆ ವಿಧಿಸಲ್ಪಟ್ಟು ಪ್ರಬಲ ಸಾಮ್ರಾಜ್ಯನಿಷ್ಠ ಸೇವಕನ ಪತನ ವಾಗಿ, ತಮ್ಮ ಮಹತ್ವಾಕಾಂಕ್ಷೆಯ ದಾರಿ ಇನ್ನಷ್ಟು ಸುಗಮವಾಗುವುದೆಂದು ಆಶಿಸಿದರು. ಸಾಮ್ರಾಜ್ಯದ ವಿರದ್ಧ ಕತ್ತಿ ಎತ್ತಿದ ರಾಜದ್ರೋಹಿಗಳನ್ನು ಅಚ್ಯುತರಾಯನು ಕ್ಷಮಿಸುತ್ತಾ ಬಂದರೆ, ತಮ್ಮ ಗುರಿಯನ್ನು ಮುಟ್ಟಲೂ ತಮ್ಮ ದಾರಿ ಬಳಸಾಗುವುದೆಂದು ಹೆದರಿದರು.

ಒಮ್ಮೆ ಅವರು ಅಚ್ಯುತರಾಯನು ಪ್ರಸನ್ನನಾಗಿರುವ ವೇಳೆಯನ್ನು ಕಂಡು ಈ ಬಗ್ಗೆ ಪ್ರತಿಭಟಿಸದೆ ಇರಲಿಲ್ಲ.

"ಪ್ರಭುಗಳು ಇತ್ತೀಚೆಗೆ ಕರುಣಾಮೂರ್ತಿಗಳೇ ಆಗಿದ್ದೀರಿ!" ಎಂದು ಹಾಸ್ಯಮಾಡುವ ದನಿಯಲ್ಲಿ ಕೇಳಿದ ಸಲಕಂ ಪೆದ್ದತಿರುಮಲ.

"ನಿಮ್ಮ ಮಾತು ನನಗೆ ಅರ್ಥವಾಗುತ್ತಿಲ್ಲ!"

"ಇನ್ನೇನು ಸಾಮ್ರಾಜ್ಯದ ವಿರುದ್ಧ ದ್ರೋಹ ಬಗೆದ ಆ ನಾಗಮನಾಯ

ಕನಿಗೆ ಕ್ಷಮೆ ದೊರೆಯಿತು! ಯಃಕಶ್ಚಿತ ದ್ರೋಹಿಯನ್ನು ಹಿಡಿದು ತಂದ ಆ ವಿಶ್ವನಾಥನಾಯಕನನ್ನು ಲೋಕೋತ್ತರ ವೀರನೆಂದು ಹೊಗಳಿದಿರಿ!"

"ನಿಮ್ಮ ಮಾತಿನಲ್ಲಿ ವ್ಯಂಗ್ಯವಿದೆ. ನಾಗಮನಾಯಕರಿಗೆ ನಾನು ಕ್ಷಮಾದಾನ ನೀಡಬಾರದಾಗಿತ್ತೆಂದು ನಿಮ್ಮ ಅಭಿಪ್ರಾಯವೊ!"

"ನಿಜ ಹೇಳುವುದಾದರೆ ಹೌದು! ಅವನ ಅಪರಾಧಗಳಿಗೆ ಕ್ಷಮೆ ತಕ್ಕ ಶಿಕ್ಷೆಯಲ್ಲ! ಅಲ್ಲದೆ ಆ ಹುಡುಗನನ್ನು ವೀರನೆಂದು ಹೊಗಳಿ ತಲೆ ನಿಲ್ಲದಂತೆ ಮಾಡಿದಿರಿ. ಇದರಿಂದ ನಮ್ಮ ಕಾಲ ಮೇಲೆ ನಾವೇ ತಿಳಿದೂ ತಿಳಿದೂ ಕೊಡಲಿಯ ಪೆಟ್ಟು ಹಾಕಿಕೊಂಡಂತಾಯಿತು!"

"ನಿಮಗೆ ಅವರ ವಿಷಯದಲ್ಲಿ ಏಕಿಷ್ಟು ಅಸಮಾಧಾನವೊ ಕಾಣೆ! ಅವರು ನಿಜವಾದ ವೀರರು. ಅದರಲ್ಲೂ ಅವರ ರಾಜಭಕ್ತಿ ಸ್ವಾಮಿನಿಷ್ಠೆಗಳು ಅನುಪಮವಾದುದು."

"ಈಗ ಅವರು ಸಣ್ಣ ಮರಿಗಳೆಂದು ಹಾಲೆರೆದರೆ – ನಾಳೆ ಅವು ಭಯಂಕರ ಸರ್ಪವಾಗಿ ಮಾರ್ಪಟ್ಟೀತೆಂದು ನಮ್ಮ ಹೆದರಿಕೆ!"

"ಓಹೊ! ಅವರಿಂದ ಸಾಮ್ರಾಜ್ಯಕ್ಕೆ ಕೇಡಾಗುವುದೆಂದು ನಿಮ್ಮ ಭಾವನೆಯೇ?"

"ಇದು ಕೇವಲ ನಮ್ಮ ಭಾವನೆ – ಕಲ್ಪನೆಯಲ್ಲಿ ಪ್ರಭು! ತಮ್ಮನ್ನು ಧಿಕ್ಕರಿಸಿ ನಿಂತ ಆ ನಾಗಮನಾಯಕ – ತಮ್ಮಂಥ ಪೂಜ್ಯರನ್ನೇ ತಿರಸ್ಕರಿಸಿದ ಆ ದ್ರೋಹಿ ಈಗ ಪ್ರಭುಗಳ ಬಗ್ಗೆ ನಿಷ್ಠೆಯಿಂದ ನಡೆಯುವನೆಂದು ಭಾವಿಸಿದಿರಾ?"

"ಅವರು ತಮ್ಮ ಅಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟಿದ್ದಾರೆ – ಅವರ ಎಲ್ಲ ಅಪರಾಧಗಳು ಪಶ್ಚಾತ್ತಾಪದ ದಿವ್ಯಾಗ್ನಿಯಲ್ಲಿ ಬೆಂದು ಅವರು ಮೊದಲಿನಂತೆ ಪರಿಶುದ್ಧರಾಗಿದ್ದಾರೆ!"

"ಅದು ನಿಮ್ಮ ಭ್ರಮೆ! ಆ ನಾಟಕ ಹೂಡದೇ ಹೋಗಿದ್ದರೆ ಅವರಿಗೆ ಕ್ಷಮಾದಾನ ಹೇಗೆ ದೊರೆಯುತ್ತಿತ್ತು! ಅದನ್ನು ನಿಜವೆಂದು ನಂಬಿ ನೀವು ಮೋಸಹೋದಿರಿ!"

"ಅವರಿಗೆ ಪಶ್ಚಾತ್ತಾಪವಾಗಿಲ್ಲವೆಂದು ನಿಮ್ಮ ಗ್ರಹಿಕೆಯೇ?"

"ಇದು ನಮ್ಮ ಗ್ರಹಿಕೆಯಲ್ಲ – ವಾಸ್ತವ ಸತ್ಯ."

"ನಿಮಗೆ ಹೇಗೆ ಗೊತ್ತು?"

"ನಿಮಗೆ ದೂತರು ವರದಿಮಾಡಿದ ಸಂಗತಿಯ ಮೇಲಿಂದ ಊಹಿಸಿದೆವು."

"ದೂತರು ಏನು ವರದಿ ಮಾಡಿದರು?"

"ವಿಶ್ವನಾಥನಾಯಕನು ತನ್ನ ತಂದೆಯ ಮೇಲೆ ಯುದ್ಧ ಮಾಡುವ

ಮೊದಲು ಅವನನ್ನು ರಹಸ್ಯವಾಗಿ ಭೇಟಿಮಾಡಿದ್ದನಂತೆ. ಆ ರಹಸ್ಯ ಭೇಟಿಯಲ್ಲಿ ಏನು ತೀರ್ಮಾನಿಸಿದರೋ? ಯಾರಿಗೆ ಗೊತ್ತು, ನೆಪಕ್ಕೆ ಯುದ್ಧ ಮಾಡಿ, ಆನಂತರ ಮಗನಿಗೆ ಸೆರೆ ಸಿಕ್ಕಿದಂತೆ!"

"ಹಾಗೋ ಸಂಗತಿ!"

"ಹೌದು ಪ್ರಭು! ಈ ಬಗ್ಗೆ ದೂತರ ವರದಿಯನ್ನು ತಾವೇ ಪರಾಂಬರಿಸಬೇಕು." ಎಂದು ಹೇಳಿದನು. ಇದನ್ನು ಕೇಳಿ ಅಚ್ಯುತರಾಯನ ಹೃದಯದಲ್ಲಿ ಸಂಶಯದ ಮಿಂಚೊಂದು ಹೊಳೆದು ಮಾಯವಾಯಿತು.

"ಹಾಗಾದರೆ ಇವೆಲ್ಲವೂ ಪೂರ್ವಭಾವಿಯಾಗಿ ಸಿದ್ಧಗೊಳಿಸಿದ್ದ ಸಂಚೇ?"

"ಎಲ್ಲರಿಗೂ ತಿಳಿಯುವ ಸಂಚು ನಿಮ್ಮ ಸರಳ ಮನಸ್ಸಿಗೆ ತಿಳಿಯುವುದಿಲ್ಲ. ಯಾರಾದರೂ ತಂದೆಯನ್ನು ಎದುರಿಸಲು ಯುದ್ಧಕ್ಕೆ ಹೊರಡುವರೇ? ವಿಶ್ವನಾಥನಾಯಕನು ನಿಷ್ಠೆಯ ಸೋಗು ಹಾಕಿ, ನಿಮ್ಮನ್ನು ಮೋಸಗೊಳಿಸಿ, ತಂದೆಯನ್ನು ಸೆರೆ ಹಿಡಿದು ತರಲು ತಾನೇ ಹೊರಟ. ನೀವು ಇದನ್ನು ಮಹಾ ನಿಷ್ಠೆ ಎಂದು ತಿಳಿದು ಹೊಗಳುತ್ತೀರಿ!"

"ಹಾಗಾದರೆ ವಿಶ್ವನಾಥನಾಯಕನೂ, ನಾಗಮನಾಯಕನೂ ನಮ್ಮ ವಿರುದ್ಧ ಸೇರಿ ಸಂಚು ಮಾಡಿದ್ದಾರೆಯೇ?"

"ಇದು ಸಂಚಲ್ಲದಿದ್ದರೆ ಪಾಂಡ್ಯರಾಜರನ್ನು ಪದಚ್ಯುತರನ್ನಾಗಿ ಮಾಡಿದ್ದ ಆ ವೀರಶೇಖರಚೋಳನನ್ನು ಅವರು ಏಕೆ ಸೆರೆಹಿಡಿಯದೆ ಹೋಗುತ್ತಿದ್ದರು. ಅವನು ಇನ್ನೂ ತಲೆ ತಪ್ಪಿಸಿಕೊಂಡಿದ್ದಾನೆ! ಇದು ಹೇಗೆ ಸಾಧ್ಯ?"

"ಹೌದು ನಿಮ್ಮ ಮಾತು ನಿಜ!"

"ಅಷ್ಟೇ ಅಲ್ಲ – ಅವನನ್ನು ಪಾಂಡ್ಯರಾಜರ ಮೇಲೆ ಯುದ್ಧಕ್ಕೆ ಪ್ರೇರೇಪಿಸಿದರೆಂದು ನಂಬಲಾದ, ಅಳಿಯ ರಾಮರಾಯ ಮತ್ತು ತಿರುಮಲರಾಯರು ಇನ್ನೂ ತಲೆ ತಪ್ಪಿಸಿಕೊಂಡಿದ್ದಾರೆ. ಇವುಗಳ ಅರ್ಥವೇನು? ಅಲ್ಲಿನ ವಿದ್ರೋಹದ ಕಾರ್ಯ ಇನ್ನೂ ಜೀವಂತವಾಗಿದೆ ಎಂದು ಯಾರಿಗಾದರೂ ತಿಳಿಯುತ್ತದೆ. ಇವರಿಗೆ ವಿಶ್ವನಾಥನಾಯಕ, ನಾಗಮನಾಯಕರ ಬೆಂಬಲವಿರಬೇಕೆಂದು ನಮ್ಮ ಊಹೆ" ಎಂದು ಅಚ್ಯುತರಾಯನ ತಲೆಯಲ್ಲಿ ಸಂಶಯದ ಬೀಜವನ್ನು ಬಿತ್ತಿದರು.

"ಹಾಗಾದರೆ.... ನಮಗೆ ತಿಳಿಯದ ಯಾವುದೋ ವಿದ್ರೋಹ ಆಭಾಗದಲ್ಲಿ ನಡೆಯುತ್ತಿದೆ ಎಂದಾಯಿತು!"

"ಹೌದು ಪ್ರಭು. ಇದನ್ನು ತಮ್ಮ ಗಮನಕ್ಕೆ ತರುವ ಸಲುವಾಗಿ ತಮಗೆ ಅಹಿತವೆನಿಸುವ ಮಾತುಗಳನ್ನು ಹೇಳಬೇಕಾಯಿತು. ಅವನೊಂದಿಗೆ ವ್ಯವಹರಿಸುವಾಗ ತಾವು ಎಚ್ಚರಿಕೆಯಿಂದಿರಬೇಕು?" ಎಂದು ಹೇಳಿ ತಾವು ಬಂದ ಕಾರ್ಯ ಒಗ್ಗಿನಲ್ಲಿವಾದ ತೆರಳಿದರು.

ಅಚ್ಯುತರಾಯನ ಮನಸ್ಸಿನಲ್ಲಿ ಒಂದು ಬಗೆಯ ತುಮುಲ ಯುದ್ಧಕ್ಕೆ ಆರಂಭವಾಯಿತು. ತಾನು ಯಾರನ್ನು ಅಪ್ರತಿಮ ವೀರನೆಂದೂ, ಅಸಮಾನ್ಯ ನಿಷ್ಠನೆಂದೂ ತಿಳಿದು ಆದರಿಸಿ, ಗೌರವಿಸಿದ್ದನೋ ಆ ವಿಶ್ವನಾಥನಾಯಕನು ನಿಜವಾಗಿಯೂ ತನಗೆ ದ್ರೋಹವೆಸಗುತ್ತಿದ್ದಾನೆಯೆ? ಇರಲಾರದು ಎಂದಿತು ಒಂದು ಮನಸ್ಸು! ಆ ದಿನ ತಂದೆ ಮಕ್ಕಳು ಯುದ್ಧದ ಪೂರ್ವದಲ್ಲಿ ರಹಸ್ಯ ಮಾತು ಕತೆ ನಡೆಸಿದ್ದು ಸತ್ಯ ಸಂಗತಿಯಾದರೆ, ಯಾವುದೋ ಪಿತೂರಿ ನಡೆದಿದೆ ಎಂದೇ ಅರ್ಥ, ಎಂದಿತು ಇನ್ನೊಂದು ಮನಸ್ಸು. ಹೇಗಾದರಾಗಲೀ ಈ ತಂದೆ ಮಕ್ಕಳ ನಿಷ್ಠೆಯ ಬಗ್ಗೆ ಚೆನ್ನಾಗಿ ತಿಳಿದಿದ್ದ ಪಾಂಡ್ಯರಾಜನನ್ನೇ ವಿಚಾರಿಸುವುದೇ ಒಳಿತೆಂದು ಸುಮ್ಮನಾದನು ಅದರಂತೆ ಒಂದು ರಹಸ್ಯ ಪತ್ರ ಬರೆದು, ಸಲಕಂ ಸೋದರರಿಗೆ ತಿಳಿಯದಂತೆ, ಮಧುರೆಗೆ ಕಳುಹಿಸಿ, ಶೀಘ್ರದಲ್ಲಿ ಉತ್ತರ ತರುವಂತೆ ದೂತರನ್ನು ಕಳುಹಿಸಿದನು.

ಪಾಂಡ್ಯರಾಜನಿಂದ ಉತ್ತರ ಬರುವುದನ್ನೇ ನಿರೀಕ್ಷಿಸುತ್ತಾ ಕುಳಿತಿರುವಾಗ, ಒಮ್ಮೆ ವಿಶ್ವನಾಥನಾಯಕನನ್ನು ಅಂತರಂಗದಲ್ಲಿ ಭೇಟಿಮಾಡುವ ಅವಕಾಶ ದೊರೆತಿತ್ತು. ಆಗ ಸಹಜವಾಗಿಯೇ ಮಾತು ಸಲಕಂ ಸಹೋದರರು ಬಿತ್ತಿದ್ದ ಸಂಶಯದ ಬಗ್ಗೆ ಹೊರಳಿತು,

"ನಾಯಕರೇ ನಿಮ್ಮನ್ನೊಂದು ಸಂಗತಿ ಕೇಳಬೇಕಾಗಿದೆ. ನೀವು ನಡೆದ ಸಂಗತಿಯನ್ನು ಮರೆಮಾಚದೆ ತಿಳಿಸಬೇಕಾಗಿದೆ."

"ಅದೇನೆಂದು ಸಂಕೋಚವಿಲ್ಲದೆ ಕೇಳಿ ಪ್ರಭು!"

"ನೀವು ನಿಮ್ಮ ತಂದೆ ನಾಗಮನಾಯಕರನ್ನು ಯುದ್ಧದ ಮೊದಲು ರಹಸ್ಯವಾಗಿ ಭೇಟಿ ಮಾಡಿದ್ದರಂತೆ ನಿಜವೇ?"

ಈ ಮಾತಿನಿಂದ ವಿಶ್ವನಾಥನಾಯಕನು ಚಕಿತನಾದರೂ ಉದ್ವೇಗ ರಹಿತವಾದ ದನಿಯಲ್ಲಿ,

"ಹೌದು ಪ್ರಭು!"

"ಕಾರಣ ತಿಳಿಯಬಹುದೇ?"

"ಪ್ರಭುಗಳು ನಾಗಮನಾಯಕರನ್ನು ಸೆರೆಹಿಡಿದು ತರಲು ನನಗೆ ಆಜ್ಞೆ ಮಾಡಿದಿರಿ ಅದರಂತೆ ನಾನು ಸೈನ್ಯದೊಡನೆ ಮಧುರೆಯ ಬಳಿ ಬೀಡುಬಿಟ್ಟೆ. ಆಗ ನನ್ನ ತಂದೆಯವರು ನನ್ನೊಡನೆ ರಹಸ್ಯ ಭೇಟಿಯನ್ನು ಕೋರಿದರು. ಅದರ ಕಾರಣ ತಿಳಿಯದಿದ್ದರೂ ನಾನು ಒಪ್ಪಿಕೊಂಡೆ. ಅನ್ಯಾಯವಾಗಿ ನಡೆಯುವ ರಕ್ತಪಾತವನ್ನು ತಪ್ಪಿಸಲು ಸಾಧ್ಯವಾದರೆ ಪ್ರಯತ್ನಿಸಲು, ಅಲ್ಲದೆ ತಂದೆಗೆ ಬುದ್ಧಿ ಹೇಳಿ ಅವರ ಅಕೃತ್ಯಕ್ಕಾಗಿ ಪಶ್ಚಾತ್ತಾಪ ಪಡುವಂತೆ ಮಾಡಲು ಅವರನ್ನು ಭೇಟಿ ಮಾಡಿದೆ."

" ನಿಮ್ಮ ಭೇಟಿಯ ಫಲಿತಾಂಶವೇನಾಯಿತು ?"

" ನಾಗಮನಾಯಕರು ನನ್ನನ್ನು ತಮ್ಮ ಕಡೆ ಸೇರುವಂತೆ ಎಷ್ಟೋ ಸಾಹಸ ಪಟ್ಟರು. ಅನೇಕ ಬಗೆಯ ಪ್ರಲೋಭವೊಡ್ಡಿ ನನ್ನನ್ನು ಕರ್ತವ್ಯಚ್ಯುತನನ್ನಾಗಿ ಸಲು ಪ್ರಯತ್ನಿಸಿದರು – ಆದರೆ ನನ್ನ ಸಾಮ್ರಾಜ್ಯನಿಷ್ಠೆಯನ್ನಾಗಲೀ, ರಾಜ ಭಕ್ತಿಯನ್ನಾಗಲೀ ಚಲಿಸಲು ಅವರಿಂದ ಸಾಧ್ಯವಾಗಲಿಲ್ಲ – ನಾನು ಹೇಳಿದ ಮಾತಿಗೆ ಅವರು ಕಿವಿಗೊಡದೆ, ಯುದ್ಧವನ್ನೇ ಆಕ್ಷೇಪಿಸಿದರು. ಹೀಗಾಗಿ ಯುದ್ಧ ಅನಿವಾರ್ಯವಾಯಿತು!"

" ಈ ಮಾತು ಸತ್ಯವೆ ?"

" ಪಂಪಾಪತಿಯಾಣೆಗೂ ಸತ್ಯ !"

ಅನಂತರ ಅವರ ಮಾತು ಬೇರೆಯ ಕಡೆ ಹರಿದು, ಅವನನ್ನು ವಿಶ್ವಾಸ ದಿಂದಲೇ ಬೀಳ್ಕೊಂಡಿದ್ದರು. ಅಚ್ಯುತರಾಯನಿಗೆ ವಿಶ್ವನಾಥನಾಯಕನಿಂದ ಸಂಪೂರ್ಣ ನಂಬಿಕೆ ಉಂಟಾಗದಿದ್ದರೂ – ಅವನ ಬಗ್ಗೆ ಇದ್ದ ಸಂಶಯದ ಬಹುಪಾಲು ಕಡಿಮೆಯಾಯಿತು. ಆದರೆ ತನ್ನ ನಿಷ್ಠೆಯ ಬಗ್ಗೆ ಅಚ್ಯುತರಾಯ ನಿಗೆ ಸ್ವಲ್ಪವೂ ಸಂಶಯವಿಲ್ಲವೆಂದು ನಿರಾಳದಿಂದಿದ್ದ ವಿಶ್ವನಾಥನಾಯಕನಿಗೆ ಅಚ್ಯುತರಾಯನ ಪ್ರಶ್ನೆ ಕುತೂಹಲಕ್ಕೆ ಕಾರಣವಾಯಿತು. ತಂದೆಯೊಡನೆ ಈ ವಿಷಯವನ್ನು ಪ್ರಸ್ತಾಪಿಸಲು ನಾಗಮನಾಯಕನು ಹೌಹಾರಿದ. ಅವನು

"ನಮ್ಮ ಏಳಿಗೆಯನ್ನು ಸಹಿಸದ ಯಾರೋ ಪ್ರಭುಗಳ ತಲೆಯಲ್ಲಿ ಸಂಶಯ ಬೀಜವನ್ನು ಬಿತ್ತಿದ್ದಾರೆ." ಎಂದು ಉದ್ಗಾರ ತೆಗೆದ.

ಪ್ರಭುಗಳ ಮನಸ್ಸನ್ನು ಕೆಡಿಸಲು ಪ್ರಯತ್ನಿಸಿದ ವ್ಯಕ್ತಿ ಯಾರೆಂದು ಅವ ರಿಗೆ ತಿಳಿಯದೆ ಹೋಗಲಿಲ್ಲ. ತಮ್ಮ ಏಳಿಗೆ, ರಾಜಸನ್ಮಾನಗಳನ್ನು ಕಂಡು ಸಲಕಂ ಸಹೋದರರು ಮಾಡಿರುವ ಕುತಂತ್ರವೇ ಎಂದು ಊಹಿಸಿ ತಿಳಿದರು.

" ನೋಡು ಮಗು. ಆ ದಿನ ನಾನು ಹೇಳಿದ್ದ ಮಾತು ನಿಜವೆಂದು ನಿನಗೆ ಈಗಲಾದರೂ ಅನುಭವಕ್ಕೆ ಬಂದಿತೆ? ಸಲಕಂ ಸಹೋದರರು ಪ್ರಭುಗಳ ವಿಶ್ವಾಸಕ್ಕೆಪಾತ್ರರಾಗಿರುವವರಿಗೆ ಸ್ವಾಮಿನಿಷ್ಠ ಸೇವಕರಿಗೆ ತೊಂದರೆ ತಪ್ಪ ದೆಂದು ನಾನು ಹೇಳಿದ್ದ ಮಾತು ಇಂದು ಚೆನ್ನಾಗಿ ಅರ್ಥವಾಗಿರಬೇಕಲ್ಲವೇ ?"

" ಹೌದು ಅಪ್ಪಾಜಿ. ನಾನು ಹೇಳಿದ್ದ ಮಾತು ಇಂದು ಚೆನ್ನಾಗಿ ಅರ್ಥ ವಾಗಿರಬೇಕಲ್ಲಿವೇ ?"

" ಹೌದು ಅಪ್ಪಾಜಿ, ನಾನು ಸಲಕಂ ಸಹೋದರರು ಇಷ್ಟು ಅಸೂಯಾ ಪರರೆಂದು ತಿಳಿದಿರಲಿಲ್ಲ."

"ಅವರು ಎಂದು ಉದಾತ್ತವಾಗಿ ನಡೆದಿರುವರೆಂದು ಅವರಲ್ಲಿ ತುಚ್ಛತೆ ಯನ್ನು ಆರೋಪಿಸಬೇಕು; ಅವರು ಅಧಿಕಾರಕ್ಕೆ ಬಂದುದು ಮೋಸದಿಂದ! ಅಧಿ

ಕಾರದಲ್ಲಿರುವುದು ಕುತಂತ್ರದಿಂದ! ಕೊಲೆ, ಸುಲಿಗೆ, ಮೋಸ, ವಂಚನೆ, ಕ್ರೌರ್ಯ ಗಳಿಂದ ಅಧಿಕಾರಕ್ಕೆ ಬಂದಿರುವ ಅವರು ಅಧಿಕಾರವನ್ನು ಭದ್ರಗೊಳಿಸಲು ಅವು ಗಳಿಗೇ ಶರಣುಹೋಗುತ್ತಿದ್ದಾರೆ ಅವರ ಜೀವದ ಜೀವಾಳವೇ ತುಚ್ಛತನ! ಇವರ ಬಗ್ಗೆ ಎಷ್ಟು ಎಚ್ಚರದಿಂದಿದ್ದರೂ ಸಾಲದು!"

"ಹೌದು ಅಪ್ಪಾಜಿ. ನಾನು ಸಲಕಂ ಸಹೋದರರ ಸವಿ ಮಾತುಗಳನ್ನು ನಿಜವೆಂದು ತಿಳಿದು ಮೋಸಹೋಗಿದ್ದೆ – ಅವರ ಗೋಮುಖವ್ಯಾಘ್ರತನ ತಿಳಿದಿರಲಿಲ್ಲ!"

"ಅದು ತಿಳಿಯಲು ನಿನಗೆ ಇಷ್ಟು ಕಾಲಬೇಕಾಯಿತು. ಈಗಲಾದರೂ ಅರಿತೆಯಲ್ಲ. ನಿನ್ನ ನಿಷ್ಠೆಯ ಬೆಲೆ ಏನೆಂದು – ಅಷ್ಟೇ ಸಂತೋಷ! ನನಗೆ ಅವರ ಸ್ವರೂಪ ಎಂದೋ ಅರಿವಾಯಿತು – ಆದರೆ ಒಂದು ನಿಶ್ಚಯಕ್ಕೆ ಬಂದಿರಲಿಲ್ಲ. ಕುಮಾರನನ್ನು ಕೊಲೆಮಾಡಿದವರು ಇವರೆ. ಆದರೆ ಕೊಲೆಯ ಆರೋಪವನ್ನು ನಿಸ್ಪೃಹರಾದ ಸೋಮರಸನಿಗೆ ಆರೋಪಿಸಿ, ಮೋಸದಿಂದ ಅವನನ್ನು ಕೊಲ್ಲಿಸಿದರು. ಅನಂತರ ಇದರಿಂದ ನಡೆದಿರುವ ದೌರ್ಜನ್ಯ ಕೃತ್ಯಗಳು ಒಂದೇ ಎರಡೇ....?"

"ಎಲ್ಲಕ್ಕಿಂತಲೂ ರಾಜಬಂಧುಗಳ ನಿರ್ಮೂಲನವೇ ಅವರ ಉದ್ದೇಶವಿರುವಂತಿದೆ! ಸಾಮ್ರಾಟನ ಮೂವರು ಪತ್ನಿಯರನ್ನು ಅವರ ಅರಮನೆಗಳಲ್ಲೇ ಬಂಧನದಲ್ಲಿ ಇಟ್ಟಿದ್ದಾರೆ. ಅಳಿಯ ರಾಮರಾಯರು, ತಿರುಮಲರಾಯರು ವಿಜಯನಗರಕ್ಕೆ ಬಂದಿದ್ದಾಗ ಕೊಲೆಮಾಡಲೆತ್ನಿಸಿದರಂತೆ ಆದರೆ ಸುದೈವದಿಂದ ಹೇಗೊ! ಅವರ ಸಂಚು ತಿಳಿದು ಅವರು ಪೆನಗೊಂಡೆಗೆ ಹೋಗಿ ತಲೆ ತಪ್ಪಿಸಿಕೊಂಡಿದ್ದಾರೆಂದು ವದಂತಿ."

"ಅವರೇ ಅದೃಷ್ಟಶಾಲಿಗಳು. ಈ ದುಷ್ಟರ ಕೈಯಿಂದ ತಪ್ಪಿಸಿಕೊಂಡರು —ಆದರೆ ಹಿಂದಿನ ಪ್ರಭುತ್ವದಲ್ಲಿ ರಾಜನಿಷ್ಠ ಸೇವಕರೆಂದು ಪರಿಗಣಿಸಲ್ಪಟ್ಟಿದ್ದ, ಪೆಲ್ಲಪ್ಪ ಕೃಷ್ಣಪ್ಪನಾಯಕರಿಗೆ ಬಂದ ಗತಿ ನೆನಸಿಕೊಂಡರೆ ನೆತ್ತರು ಹೆಪ್ಪುಗಟ್ಟುತ್ತದೆ ಅಳಿಯ ರಾಮರಾಯರಂತಹವರೂ ದೇಶಭ್ರಷ್ಟರಾಗಬೇಕಾಯಿತು – ಈಗ ನೋಡಿದರೆ ನಮ್ಮ ಸರದಿ ಬಂದಿತೆಂದು ಕಾಣುತ್ತದೆ. ನಾವು ಆದಷ್ಟು ಬೇಗ ಇಲ್ಲಿಂದ ಹೊರಟುಹೋಗುವುದು ಒಳ್ಳೆಯದು!"

"ಹೋಗುವುದಾದರೂ ಎಲ್ಲಿಗೆ? ಹಾಗೆ ಹೋದರೆ ನಮ್ಮ ಮೇಲೆ ವೃಥಾ ಸಂಶಯಕ್ಕೆ ಆಸ್ಪದವಾಗುತ್ತದೆ. ಇದರಿಂದ ನಮಗೆ ಕೆಡಕೇ ಆದೀತು!"

"ಯಾವ ಬಗೆಯ ಸಂಶಯಕ್ಕೆ ಅವಕಾಶವಿಲ್ಲದಂತೆ, ನಾವು ಈ ಕೆಲಸವನ್ನು ಸಾಧಿಸಬಹುದು – ಹೇಗೂ ನಿನ್ನನ್ನು ಪಾಂಡ್ಯರಾಜರು ದತ್ತುಪುತ್ರರಾಗಿ ಸ್ವೀಕರಿಸಿದ್ದಾರೆ – ನೀನು ಅದೇ ನೆಪದಲ್ಲಿ ಮಧುರೆಗೆ ಹೋಗಿ ಸೇರಿಕೋ! ನಾನು

ನಮ್ಮ ರಾಜಧಾನಿ ಕಂಚಿಯನ್ನು ಸೇರಿಕೊಳ್ಳುತ್ತೇನೆ. ಆಗ ನಾವು ಸಲಕಂ ಸಹೋದರರ ವಕ್ರದೃಷ್ಟಿಯಿಂದ ಪಾರಾಗುತ್ತೇವೆ. ಅನಂತರ ರಾಜಬಂಧು ಗಳಿಗೆ ಬಂದಿರುವ ದುರವಸ್ಥೆಯನ್ನು ತಪ್ಪಿಸಲು ನಾವು ಏನಾದರೂ ಪ್ರಯತ್ನ ಮಾಡಬಹುದು!”

ಈ ಸಲಹೆಯನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ಇಳಿಸಬೇಕೆಂದು ಅವರು ನಿಶ್ಚಯಿಸಿದರು. ಸುದೈವದಿಂದ ಅಂತಹ ಸುಯೋಗ ಅವರನ್ನು ಹುಡುಕಿ ಕೊಂಡು ಬಂದಿತ್ತು.

ಅಚ್ಯುತರಾಯನು ಮಧುರೆಗೆ ಬರೆದಿದ್ದ ಪತ್ರಕ್ಕೆ ಉತ್ತರ ಬಂದಿತ್ತು. ಪಾಂಡ್ಯರಾಜ ಚಂದ್ರಶೇಖರವರ್ಮನು ಆ ತಂದೆ ಮಕ್ಕಳ ಬಗ್ಗೆ, ಅದರಲ್ಲೂ ವಿಶ್ವನಾಥನಾಯಕನ ಬಗ್ಗೆ ಮುಕ್ತ ಕಂಠದಿಂದ ಹೊಗಳಿ, ತನಗೆ ವೃದ್ಧಾಪ್ಯದಲ್ಲಿ ಆಡಳಿತ ಕಾರ್ಯದಲ್ಲಿ ನೆರವಾಗಲು, ಅವನನ್ನು ಕಳುಹಿಸಿ ಕೊಡಲು ಪ್ರಭುಗಳನ್ನು ಪ್ರಾರ್ಥಿಸಿದ್ದ. ಅವನ ಪ್ರಾರ್ಥನೆಯನ್ನು ನಿರಾಕರಿಸುವಂತೆ ಇರಲಿಲ್ಲ – ಏಕೆಂ ದರೆ ಪಾಂಡ್ಯರಾಜ್ಯಕ್ಕೆ ವೀರಶೇಖರ ಚೋಳನಿಂದ ಇನ್ನೂ ಭಯತಪ್ಪಿರಲಿಲ್ಲ. ಅಂತಲೇ ಪಾಂಡ್ಯರಾಜ್ಯದ ಉತ್ತರಾಧಿಕಾರಿಯಾದ ವಿಶ್ವನಾಥನಾಯಕನ ಇರವು ಮಧುರೆಯಲ್ಲಿ ಅವಶ್ಯಕವಾಗಿತ್ತು. ಹೀಗಾಗಿ ಅಚ್ಯುತರಾಯನೇ ವಿಶ್ವನಾಥ ನಾಯಕನನ್ನು ಬರಮಾಡಿಕೊಂಡು, ಮಧುರೆಯಿಂದ ಬಂದಿದ್ದ ಕರೆಯನ್ನು ತಿಳಿಸಿ, ಉಚಿತ ಉಡುಗೊರೆಯಿತ್ತು ಪಾಂಡ್ಯರಾಜ್ಯಕ್ಕೆ ಕಳುಹಿಸಿಕೊಟ್ಟ. ಇದಾದ ಕೆಲವು ದಿನಗಳಲ್ಲಿ ನಾಗಮನಾಯಕನು ತನ್ನ ವೈಯುಕ್ತಿಕ ಕಾರಣಗಳನ್ನು ಮುಂದೆ ಮಾಡಿಕೊಂಡು, ತನ್ನ ಮಾಂಡಳವಾದ ಕಂಚಿಗೆ ತೆರಳಿದ ಹೀಗೆ ಅವರಿ ಬ್ಬರೂ ಸಲಕಂ ಸಹೋದರರ ಕೈಯಿಂದ ಪಾರಾಗಿದ್ದರು.

ಈಚಿನ ದಿನಗಳಲ್ಲಿ – ಅಂದರೆ ಬಿಜಾಪುರದ ಸುಲ್ತಾನನ ಮೇಲೆ ಅಪ ಜಯ ಉಂಟಾದಲಾಗಾಯಿತು, ಸಲಕಂ ಸೋದರರ ಶಕ್ತಿ ಸಾಮರ್ಥ್ಯಗಳ ಬಗ್ಗೆ ಅಚ್ಯುತರಾಯನಿಗೆ ನಂಬಿಕೆ ತಪ್ಪಿಹೋಗಿತ್ತು. ಅವರ ಮೇಲೆ ಆಡಳಿತದ ಸಮಸ್ತ ಜವಾಬ್ದಾರಿಯನ್ನು ಹೊರೆಸಿ ತಾನು ಆ ಬಗ್ಗೆ ನಿಶ್ಚಿಂತನಾದರೆ, ಅವರು ತನ್ನ ಬುಡಕ್ಕೆ ನೀರುಬಿಡಬಹುದೆಂಬ ಸಂಶಯವೂ ಬಾರದೆ ಇರಲಿಲ್ಲ. ಅಲ್ಲದೆ ಅವರು ತನ್ನ ಹೆಸರಿನಲ್ಲಿ ನಡೆಸುತ್ತಿದ್ದ ದಬ್ಬಾಳಿಕೆಯ ಸಂಗತಿಗಳು ಅಚ್ಯುತ ರಾಯನ ಕಿವಿಗೆ ಬೀಳಲು ಆರಂಭವಾಗಿತ್ತು. ತಾನಾಗಿ ಯಾರೂ ತಿಳಿಸದಿದ್ದರೂ ಆಗಾಗ್ಗೆ ತನ್ನನ್ನು ಸುತ್ತುವರಿದಿದ್ದ ದಾಸದಾಸಿ ಜನರಿಂದಲೂ ಮಂತ್ರಿಗಳಿಂದಲೂ ಆಡಳಿತದ ವಿಷಯದಲ್ಲಿ ಸಲಹೆ ಕೇಳುತ್ತಿದ್ದ ಇತರರಿಂದಲೂ ಲೋಕಾಭಿರಾಮ ವಾಗಿ ಪ್ರಶ್ನಿಸಿ ತಿಳಿದುಕೊಳ್ಳುತ್ತಿದ್ದನು. ಇದಕ್ಕೆ ಕಾರಣ ಆ ದಿನ ಆಸ್ಥಾನ ದಲ್ಲಿ ತನ್ನ ಇದುರಿನಲ್ಲಿಯೇ ತನ್ನ ಪತ್ನಿಯರೀರ್ವರನ್ನು ಸೊಸೆ ಮೊಮ್ಮಗನನ್ನೂ

ಕೊಂದು ಭೀಕರ ರೀತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ ಕೃಷ್ಣಪ್ಪನಾಯಕನ ಪ್ರಸಂಗವಾದಲಾಗಾಯಿತು ಅಚ್ಯುತರಾಯನು ತನ್ನ ಸುತ್ತ ನಡೆಯುತ್ತಿದ್ದ ಸಂಗತಿಗಳನ್ನು ತಿಳಿಯುಲು ಆಸಕ್ತಿಯುಂಟಾಗಿತ್ತು. ಅಷ್ಟೊಂದು ಜನ ನಿರಪ ರಾಧಿಗಳ ರಕ್ತ ಹರಿದುದನ್ನು ನೋಡಿದುದು ಅದೇ ಮೊದಲು. ಆ ಬಗ್ಗೆ ಸಲಕಂ ಸಹೋದರರನ್ನು ವಿಚಾರಿಸಿದ್ದಾಗ ಅವರು ನಡೆದಿದ್ದ ಸಂಗತಿಯನ್ನು ತಿಳಿಸವೆ ಒಂದು ಕಟ್ಟು ಕಥೆಯನ್ನೇ ಹೇಳಿದ್ದರು. ಕೃಷ್ಣಪ್ಪನಾಯಕನಿಗೆ ಕೆಲವು ದಿನಗಳಿಂದಲೂ ಬುದ್ಧಿ ಸ್ಥಿಮಿತದಲ್ಲಿರಲಿಲ್ಲವೆಂದೂ, ಅವನು ತನ್ನನ್ನು ಮಾತ ನಾಡಿಸಿದವರ ಮೇಲೆ ಬೀಳಲು ಬರುತ್ತಿದ್ದನೆಂದೂ, ಇತರ ಶ್ರೀಮಂತರ ಮೇಲೆ ವಿಧಿಸಿದಂತೆ ಕೆಲವು ತೆರಿಗೆಯನ್ನು ವಿಧಿಸಲು, ಅವುಗಳನ್ನು ಕೊಡಲೊಪ್ಪದೆ, ವಸೂಲು ಮಾಡಲು ಬಂದ ರಾಜಭಟರನ್ನು ಬೈದು, ಒಬ್ಬಿಬ್ಬರನ್ನು ಹೊಡೆ ದಟ್ಟಿದನೆಂದು ಹೇಳಿದರು, ಅವನನ್ನು ಬಿಟ್ಟು ಅವನ ಮಗನಿಂದ ಅದನ್ನು ಪಾವತಿಪಡೆಯಲು ಹೋದಾಗ, ಅವನು ಸಿಟ್ಟಾಗಿ ಇಬ್ಬರನ್ನು ಅಲ್ಲೇ ಕೊಂದು ತಾನು ಆತ್ಮಹತ್ಯೆ ಮಾಡಿಕೊಂಡನೆಂದೂ, ಇದನ್ನು ತಿಳಿದು ಕೃಷ್ಣಪ್ಪನಾಯಕ ನಿಗೆ ಹುಚ್ಚುಕೆರಳಿ ಪ್ರಭುಗಳ ಎದುರಿನಲ್ಲಿ ಭೀಕರ ರೀತಿಯಲ್ಲಿ ಆತ್ಮಹತ್ಯೆ ಮಾಡಿ ಕೊಂಡನೆಂದು ಹೇಳಿದರು. ಆದರೆ ಅಚ್ಯುತರಾಯನು ಅದನ್ನು ನಂಬಿದಂತೆ ನಟಿಸಿದರೂ, ಬೇರೆಯವರ ಮೂಲಕ ನಡೆದಿದ್ದ ಸಂಗತಿಯನ್ನು ತಿಳಿದು ಬಹು ವಾಗಿ ಪರಿತಪಿಸಿದ್ದ. ಸಲಕಂಸಹೋದರರ ಅತ್ಯಾಚಾರದಿಂದ ಒಂದು ಸಭ್ಯ ಸಂಸಾರವೇ ತೊಳೆದುಹೋಯಿತೆಂದು ಅವನಿಗೆ ಅತಿಯಾದ ದುಃಖವಾಗಿತ್ತು. ಕೃಷ್ಣಪ್ಪನಾಯಕ ಹೇಳಿದ್ದ ಮಾತುಗಳು ಅಚ್ಯುತರಾಯನ ಕಿವಿಯಲ್ಲಿ ಇನ್ನೂ ಮೊಳಗುತ್ತಿತ್ತು. ಅವುಗಳನ್ನು ಮರೆಯುಲು ಅವನೆಷ್ಟು ಪ್ರಯತ್ನಿಸಿದ್ದರೂ ಸಾಧ್ಯವಾಗಿರಲಿಲ್ಲ.

ಕೃಷ್ಣಪ್ಪನಾಯಕನು ಅಚ್ಯುತರಾಯನನ್ನು ಸಲಕಂ ಸಹೋದರರ ಎಲ್ಲ ಕ್ರೌರ್ಯ, ದೌರ್ಜನ್ಯಗಳಲ್ಲಿ ಸಹಭಾಗಿಯೆಂದು ತಿಳಿದು ಅವರೊಡನೆ ಅವನನ್ನು ಶಪಿಸಿದ್ದ. ಅವನಿಗೆ ಬರಲಿದ್ದ ಸ್ಥಿತಿಗಾಗಿ ಎಚ್ಚರಿಸಿದ್ದ. ಸಹಜವಾಗಿ ದೈವ ಭಕ್ತನೂ, ಧರ್ಮಭೀರುವೂ ಆಗಿದ್ದ ಅಚ್ಯುತರಾಯನಿಗೆ ಈ ಲೋಕದಲ್ಲಿ ತನಗೆ ದೊರೆಯುವ ಶಿಕ್ಷೆಗಿಂತಲೂ, ಪರಲೋಕದ ಶಿಕ್ಷೆಯನ್ನು ನೆನೆದು ಗಾಬರಿಯಾ ಗಿತ್ತು. ಈ ಬಗ್ಗೆ ಸಲಕಂ ಸಹೋದರರೊಡನೆ ವಾದಿಸಿ ಪ್ರಯೋಜನವಿಲ್ಲ ವೆಂದು ಅವನು ತಿಳಿದಿದ್ದನು. ಸ್ವಯಂ ವರದಾದೇವಿಯೇ ಈ ಪ್ರಸಂಗದಲ್ಲಿ ತನ್ನ ಸೋದರರ ಪಕ್ಷವಹಿಸಿ ಮಾತನಾಡಿದ್ದಳು. ಅವನ ಅಂತರಂಗದಲ್ಲಿ ಯಾವುದೋ ಭೀತಿ – ಹೀಗೆಂದು ಹೇಳಲಾರದ ಭೀತಿ–ಮನೆಮಾಡಿಕೊಂಡಿತ್ತು. ಅವನಿಗೆ ಸೋಮರಸನು ಸಾಯುವಾಗ ಹೇಳಿದ್ದ ಮಾತುಗಳು ಪುನಃ ಪುನಃ

ನೆನಪಾಗುತ್ತಿತ್ತು. ರಾಮರಾಯನು ರಾಜಧಾನಿಯಿಂದ ಪರಾರಿಯಾದಮೇಲೆ, ಮೂವರು ರಾಣಿಯರನ್ನು ಅರಮನೆಯಲ್ಲಿಯೇ ಸೆರೆಯಲ್ಲಿಟ್ಟಿರುವ ಸಂಗತಿ ವರದಿಯಾಗಿತ್ತು. ಸೆಲ್ಲಪ್ಪನ ಮರಣದಂಡನೆ ವಿಧಿಸಿದಾಗ ತಾನು ಒಮ್ಮೆ ಮೈ ದುಡುಕಿದನೆಂದು ಭಾವನೆ ಬರುತ್ತಿತ್ತು. ಇದು ಖಂಡಿತವಾಗಿಯೂ ತನ್ನ ಹೆಸರಿನಲ್ಲಿ ಸಲಕಂ ಸಹೋದರರು ನಡೆಸಿದ ಅನ್ಯಾಯ! ಅಧರ್ಮ! ಅತ್ಯಾಚಾರ! ತನ್ನ ಗಮನಕ್ಕೆ ಬಾರದಂದೆ ಇಂತಹ ಎಷ್ಟು ಪ್ರಸಂಗಗಳು ತನ್ನ ಹೆಸರಿನಲ್ಲಿ ನಡೆದಿದೆಯೋ ಬಲ್ಲವರಾರು? ಅವರು ಬೊಕ್ಕಸವನ್ನು ತುಂಬಿದ್ದ ಒಂಭತ್ತು ಕೋಟಿ ಪಗೋಡಗಳ ಸಲುವಾಗಿ ಎಷ್ಟೊಂದು ಅನ್ಯಾಯ ನಡೆದಿದೆಯೋ, ಆ ರಕ್ತದ ಕಾಣಿಕೆಗೆ ಬಾಯಿದ್ದಿದ್ದರೆ ಎಂತಹ ಭಯಂಕರ ಸತ್ಯಕಥೆಗಳನ್ನು ಹೇಳುತ್ತಿದ್ದವೋ....ತನ್ನನ್ನು ಎಷ್ಟೊಂದು ನಿರಪರಾಧಿಗಳು ಶಪಿಸಿದ್ದರೋ.... ಯಾರು ಬಲ್ಲರು?....

ಇವುಗಳಿಗೆ ಸಾಮ್ರಾಟನಾದ ತಾನೇ ಹೊಣೆ! ಇವುಗಳ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವಂತಿಲ್ಲ. ತಾನು ಸಲಕಂ ಸಹೋದರರನ್ನು ನಂಬಿ, ತನ್ನ ಮೃತ್ಯುವನ್ನು ತಾನೇ ಆಹ್ವಾನಿಸಿದ್ದೇನೆ. ತಾನು ನಿರೀಕ್ಷಿಸಿದ್ದಕ್ಕಿಂತಲೂ ಪಾಪದ ನೀರಿಗೆ ಬಿದ್ದಿದ್ದೇನೆ. ಇದರಿಂದ ತನಗೆ ಮುಕ್ತಿಯೇ ಇಲ್ಲ – ಸಲಕಂ ಸಹೋದರರ ಕೈಯಿಂದ ತನಗೆ ಬಿಡುಗಡೆಯೇ ಇಲ್ಲ – ತನ್ನ ಬಾಳು ಹೀಗೆಯೇ ಸತ್ಯಧರ್ಮಗಳಿಂದ ವಂಚಿತವಾಗಿ ಮುಂದುವರೆಯಬೇಕು! ಕಾಲನ ಕರೆ ಬರುವವರೆಗೆ ಅಧರ್ಮ, ಅನ್ಯಾಯ, ಅನೀತಿಗಳ ಸಂಚಾಲಕನಾಗಿ ನಡೆಯಬೇಕು! ತನಗೆ ಕಾದಿರುವ ರೌರವ ನರಕದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ....ಎಂಬ ಒಳದನಿಯೊಂದು ನುಡಿಯುತ್ತಲೇ ಇತ್ತು. ಇದರ ಭಾರಕ್ಕೆ ಸಿಕ್ಕಿ ಅವನ ಜೀವನ ದಿನ ದಿನಕ್ಕೂ ಜರ್ಝರಿತವಾಗುತ್ತಿತ್ತು.

೧೬

ಅಚ್ಯುತರಾಯನು ಬಯಸುತ್ತಿದ್ದ ಬಿಡುಗಡೆ ಅವನಿಗೆ ಬರಲು ತಡವಾಗಲಿಲ್ಲ. ಅದು ಅವನ ನಿರೀಕ್ಷೆಗೂ ಬೇಗ ಬಂದಿತ್ತು. ಅದೂ ಸಲಕಂ ಸಹೋದರರ ಮೂಲಕವೇ ಬಂದಿತ್ತು. ಆದರೆ ಆ ವಿಷಯ ಅಚ್ಯುತರಾಯನಿಗೆ ಸಾವು ಸನ್ನಿಹಿತವಾಗುವವರೆಗೂ ತಿಳಿದಿರಲಿಲ್ಲ.

ಅಚ್ಯುತರಾಯನಿಗೆ ಸಲಕಂ ಸಹೋದರರ ಬಗ್ಗೆ ಸಂಶಯ ಉಂಟಾಗಿದ್ದಂತೆ, ಅವರಿಗೂ ಅಚ್ಯುತರಾಯನ ಮೇಲೆ ಸಂದೇಹಪ್ರಾಪ್ತವಾಗಿತ್ತು. ಇಂದಲ್ಲ ನಾಳೆ ಅವನಿಗೆ ತಮ್ಮ ನಿಜಸ್ವರೂಪ ತಿಳಿದು ತಮ್ಮಲ್ಲಿದ್ದ ನಂಬಿಕೆ

ಮಾಯವಾಗಬಹುದು. ಅವನು ತಮ್ಮ ನಾಶಕ್ಕೆ ಹವಣಿಸಬಹುದು. ಹಾಗಾಗಲು ಅವಕಾಶ ಕೊಡಬಾರದು! ಅವನು ತಮ್ಮ ದುರಾಲೋಚನೆಯನ್ನೂ, ದ್ರೋಹವನ್ನೂ ತಿಳಿಯುವ ಮುನ್ನವೇ ಅವನನ್ನು ನಿವಾರಿಸಬೇಕು ಎಂದು ನಿಶ್ಚಯಿಸಿದರು.

ಸಲಕಂ ಸೋದರರಿಗೆ ವಿಶ್ವನಾಥನಾಯಕನ ಬಗ್ಗೆ ಸಂಶಯ ಬಂದಿತ್ತು. ಅವನು ಪ್ರಬುದ್ಧಿಸಿದರೆ ಅವನಿಂದ ತೊಂದರೆ ಬರಬಹುದೆಂದು ಅವನ ವಿಷಯದಲ್ಲಿ ಅಸೂಯೆ ಉಂಟಾಗಿತ್ತು. ಹೇಗಾದರೂ ಮಾಡಿ ಅಚ್ಯುತರಾಯನಿಗೆ ಅವನ ವಿಷಯದಲ್ಲಿ ಮನಸ್ಸುಕೆಡಿಸಿ, ಅವನನ್ನು ನಿವಾರಿಸಿಕೊಳ್ಳಬೇಕೆಂದು ಆಶಿಸಿದ್ದ ಅವರಿಗೆ, ಅವರ ಪ್ರಯತ್ನ ಯಶಸ್ವಿಯಾಯಿತೆಂದು ತಿಳಿದ ಘಳಿಗೆಯಲ್ಲಿ ವಿಫಲವಾಗಿತ್ತು. ಆ ತಂದೆ ಮಕ್ಕಳು ಅಷ್ಟು ಬೇಗ ರಾಜಧಾನಿಯನ್ನು ಬಿಡುವುದು ಅವರಿಗೆ ಇಷ್ಟವಿರಲಿಲ್ಲ. ಈ ಬಗ್ಗೆ ಮಾತು ತೆಗೆದಾಗ ಅಚ್ಯುತರಾಯ ಹೇಳಿದ್ದ.

"ಸಲಕಂ ಸಹೋದರರೇ, ನಿಮಗೆ ಆ ತಂದೆ ಮಕ್ಕಳ ಮೇಲೆ ಏಕಿಷ್ಟು ಅಸೂಯೆಯೋ ತಿಳಿಯದಾಗಿದೆ! ಅವರ ನಿಷ್ಠೆಯ ಬಗ್ಗೆ ನೀವೆಷ್ಟು ಹೇಳಿದರೂ ನನಗೆ ಸಂಶಯ ಬರುವುದಿಲ್ಲ, ಸಾಮ್ರಾಜ್ಯನಿಷ್ಠರ ಮೇಲೆ ವೃಥಾ ಸಂಶಯ ಕ್ಕೊಳಗಾಗಿದ್ದು ನಿಮ್ಮ ಪ್ರಯತ್ನ ಗಟ್ಟಿ ನೆಲವನ್ನು ಅಗಿದು ಹಳ್ಳಮಾಡಿ, ಇಲ್ಲಿ ಹಳ್ಳವಿದೆ ಎಚ್ಚರಿಕೆ ಎಂದು ಹೇಳುವಂತೆ ಆಗಿದೆ."

"ಪ್ರಭು, ನಿಮ್ಮ ಮೇಲೆ ಅವರು ಏನೋ ಮಂಕುಬೂದಿ ಎರಚಿ, ನಿಮ್ಮ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಅವರು ನಿಜವಾಗಿಯೂ ಸಾಮ್ರಾಜ್ಯದ್ರೋಹಿಗಳು ನಮ್ಮ ಮಾತನ್ನು ನಂಬಿ!"

"ನನಗೆ ಯಾರು ಸಾಮ್ರಾಜ್ಯದ್ರೋಹಿಗಳು – ಯಾರು ಹಿತಚಿಂತಕರು ಎಂಬುದು ಚೆನ್ನಾಗಿ ತಿಳಿದಿದೆ. ಬೆಳ್ಳಗಿರುವುದೆಲ್ಲಾ ಸುಣ್ಣವೆಂದು ತಿಳಿಯುವ ನಿಮಗೆ ಹಾಲೂ ಸುಣ್ಣದ ನೀರಾಗಿಯೇ ಕಾಣುತ್ತದೆ! ಅವರ ಬಗ್ಗೆ ವೃಥಾ ಸಂದೇಹ ಸಲ್ಲದು!"

"ಪ್ರಭು, ನಾವು ಬೆಳ್ಳಗಿರುವುದೆಲ್ಲ ಸುಣ್ಣವೆಂದು ಸಂದೇಹಿಸಿದರೆ ನೀವು ಹಾಲೆಂದು ಭ್ರಮಿಸಿದ್ದೀರಿ! ಸುಣ್ಣವೆಂದು ಭ್ರಮಿಸಿದವರು ಯಾರೂ ಅದನ್ನು ಕುಡಿಯಲು ಹೋಗುವುದಿಲ್ಲ. ಆದರೆ ಹಾಲೆಂದು ಭ್ರಮಿಸಿದರೆ ಅದು ಹಾಲಾಹಲವಾಗುವ ಸಂಭವವುಂಟು!"

"ಅಮಾತ್ಯರೇ, ಯಾವುದು ನಿಜವಾದ ಹಾಲು, ಯಾವುದು ಹಲಾಹಲ ಎಂಬ ಭೇದ ನಮಗೆ ತಿಳಿದಿದೆ. ಲೋಕದಲ್ಲಿ ನಿಮಗಿಂತಲೂ, ನಮಗಿಂತಲೂ

ಬುದ್ಧಿವಂತರಿದ್ದಾರೆ. ನಾವೇ ಅತಿ ಬುದ್ಧಿವಂತರೆಂದೂ, ನಮ್ಮ ಸಮಾನವಿಲ್ಲ ವೆಂದೂ ತಿಳಿದರೆ, ಅಂತಹ ಅತಿ ಬುದ್ಧಿವಂತಿಕೆಯಿಂದ ನಮ್ಮ ಪತನ ಸನ್ನಿಹಿತ ವಾದೀತು! ನೀವು ಎಲ್ಲರನ್ನೂ ನಿಷ್ಕಾರಣವಾಗಿ ಶಂಕಿಸುವುದನ್ನು ಇನ್ನಾದರೂ ಬಿಡಿ. ಈ ನಿಮ್ಮ ಸಂಶಯ ದೃಷ್ಟಿಯಿಂದ, ಎಷ್ಟು ಜನ ನಿರಪರಾಧಿಗಳು ಅಪ ರಾಧಿಗಳಾಗಿದ್ದಾರೋ, ಎಷ್ಟು ಜನ ನಿಜವಾದ ಸ್ವಾಮಿನಿಷ್ಠಸೇವಕರು ದ್ರೋಹಿ ಗಳಾಗಿದ್ದಾರೋ? ಎಂದು ಈಗ ಅನಿಸಹತ್ತಿದೆ!"

"ಪ್ರಭುಗಳಿಗೆ ನಮ್ಮ ಮಾತು ಕಹಿಯಾಗಿರಬಹುದು. ಆದರೆ ಕಾಹಿಲೆ ಹರಿಯಬೇಕಾದರೆ ಕಹಿಯನ್ನು ನುಂಗಲೇಬೇಕು. ಅಲ್ಲದೆ ಸತ್ಯವಾಗಲು ಕಹಿ, ನಗ್ನಸತ್ಯ – ಕಣ್ಣು ಕುಕ್ಕುತ್ತದೆ – ಸೂರ್ಯನ ಪ್ರಕಾಶದಂತೆ, ಆದರೆ ಕುರುಡರ ಪಾಲಿಗೆ ಸೂರ್ಯನಿದ್ದರೂ ತಿಳಿಯುವುದಿಲ್ಲ – ಕಣ್ಣಿದ್ದೂ ಕುರುಡರಾಗಬೇಕೆ?"

"ನಾವು ಕಣ್ಣಿದ್ದೂ ಕುರುಡರಲ್ಲ. ನಮ್ಮ ಮುಂದೆ, ನಮ್ಮ ಹಿಂದೆ ಯಾವ ವಿದ್ರೋಹ ನಡೆಯುತ್ತಿದೆ ಎಂದು ಸ್ಪಷ್ಟವಾಗಿ ತಿಳಿಯುತ್ತಿದೆ. ಸತ್ಯಸೂರ್ಯನ ಪರಿಚಯ ಮಾಡಿಕೊಡಲು ನನಗೆ ಇನ್ನೊಬ್ಬರ ನೆರವು ಬೇಡ, ಕೈ ಸುಟ್ಟುಕೊಂಡ ಮೇಲೆ ಬೆಂಕಿಯ ಪರಿಚಯವಾಗುವಂತೆ, ನನಗೆ ಸ್ವಾಮಿನಿಷ್ಠಸೇವಕರು ಯಾರು, ದ್ರೋಹಿಗಳು ಯಾರು ಎಂದು ಸ್ಪಷ್ಟವಾಗಿ ತಿಳಿದಿದೆ!" ಎಂದು ನಿಷ್ಠುರವಾ ಗಿಯೇ ಹೇಳಿದ.

"ಪ್ರಭುಗಳಿಗೆ ಬುದ್ಧಿ ಹೇಳುವ ಶಕ್ತಿ ಈ ಪಾಮರರಿಗೆ ಇಲ್ಲ!" ಎಂದು ಹೇಳಿ ಅಲ್ಲಿಂದ ಕಾಲ್ತೆಗೆದಿದ್ದರೂ, ತಮ್ಮ ಬಗ್ಗೆ ಯಾರೋ ಅಚ್ಯುತರಾಯನ ಮನಸ್ಸನ್ನು ಕೆಡಿಸಿದ್ದಾರೆ. ಅಚ್ಯುತರಾಯನು ತಮ್ಮ ವಿಷಯದಲ್ಲಿ ಸಂಶಯ ಗ್ರಸ್ತನಾಗಿದ್ದಾನೆ ಎಂಬುದು ತಿಳಿಯಿತು. ಆದರೆ ಈ ಅಪ್ರಿಯವಾದ ಕಟು ಸತ್ಯವನ್ನು ಎಂದಿರಿಸಲು ಅವರು ಹೆದರಿದರು. ಅಚ್ಯುತರಾಯನನ್ನು ಆರೋಪಿ ಸಲು ಹೊರಟಿದ್ದ ಅವರೇ ಆ ದುಸ್ಥಿತಿಗೆ ಇಳಿದಿದ್ದರು.

ತಮ್ಮ ಬಗ್ಗೆ ಅಚ್ಯುತರಾಯನಿಗೆ ಮೊದಲಿನ ನಂಬಿಕೆ ಇಲ್ಲವೆಂದು ತಿಳಿದ ಮೇಲೆ ಸಹೋದರರು ಕೊಂಚ ಎಚ್ಚರ ವಹಿಸಿದರು. ತಮ್ಮ ವಿರುದ್ಧ ಅಚ್ಯುತ ರಾಯನ ಮನಸ್ಸನ್ನು ಕೆಡಿಸಿದ ಆ ದ್ರೋಹಿ ಯಾರೆಂದು ಪತ್ತೆಮಾಡಲು ಅವ ರೆಷ್ಟು ಪ್ರಯತ್ನಿಸಿದರೂ ತಿಳಿಯದಾದರು. ಅವರಿಗೆ ಈ ಪರಿಸ್ಥಿತಿ ಕಳವಳಕ್ಕೆ ಕಾರಣವಾಯಿತು. ಸಾಧು ಹಸುವೆಂದು ತಿಳಿದಿದ್ದ ಅವರಿಗೆ ಅಚ್ಯುತರಾಯನು ಸ್ವಲ್ಪ ಬಾಲ ಆಡಿಸುವುದು ಕಲಿತುದು ಮುಂದೆ ಅದು ಒದೆಯುವುದೂ ಹೆಚ್ಚಲ್ಲ ಎಂಬ ಸಂಗತಿಯನ್ನು ಅರಿವುಮಾಡಿಕೊಟ್ಟಿತ್ತು. ಆದ್ದರಿಂದ ಒದೆಯುವ ಮೊದಲೇ ಅದರ ಕೆಚ್ಚಲನ್ನು ಕತ್ತರಿಸಿ, ಹಸುವನ್ನು ಕಟುಕರ ಪಾಲು ಮಾಡ ಮಾಡಬೇಕೆಂದು ನಿರ್ಧರಿಸಿದರು.

ಆ ನಿರ್ಧಾರ ಕಾರ್ಯಗತ ಮಾಡುವ ಮೊದಲು, ಹಸುವಿಗೆ ಮೂಗುದಾರ ಹಾಕಿ, ತಮ್ಮ ಅಂಕಿತದಲ್ಲಿಟ್ಟುಕೊಳ್ಳಲು ಸಾಧ್ಯವೇ ಎಂದು ಆಲೋಚಿಸಿ, ಅವರು ತಮ್ಮ ತಂಗಿಯಾದ ವರದಾದೇವಿಯ ಮೂಲಕ ಪ್ರಯತ್ನಿಸಿದರು.

ಏನೋ ಕಷ್ಟ ಸುಖ ಹೇಳಿಕೊಳ್ಳುವವರಂತೆ ನಟಿಸಿ, ಅವಳು ಒಬ್ಬಳೇ ಸುಪ್ರಸನ್ನಳಾಗಿರುವ ಸಮಯವನ್ನು ಸಾಧಿಸಿ, ಅವಳನ್ನು ಕಂಡು, ಅನಾಹುತ ವೇನೋ ನಡೆದಿರುವಂತೆ ಮೊಸಳೆಯ ಕಣ್ಣೀರು ಸುರಿಸಿದರು.

"ವರದಾಂಬಿಕೆ, ಹೀಗೆ ಮಹಾಪ್ರಭುಗಳು ನಮ್ಮನ್ನು ವೃಥಾ ಶಂಕಿಸುವ ರೆಂದು ನಾನು ತಿಳಿದಿರಲಿಲ್ಲ." ಎಂದು ಹೇಳಿ ಆದಿನ ನಡೆದ ಮಾತುಕತೆಗಳನ್ನು ಬಣ್ಣಗಟ್ಟಿ ಹೇಳಿದರು.

"ನಮ್ಮ ವಿಷಯಗಳಲ್ಲೇ ಸಂಶಯ ವ್ಯಕ್ತಪಡಿಸಿದ ಮೇಲೆ, ನಾವು ಅಮಾತ್ಯಪದವಿಯಲ್ಲಿದ್ದು ತಾನೇ ಏನು ಪ್ರಯೋಜನ? ಮಹಾಪ್ರಭುಗಳು ಸಂದೇಹಕ್ಕೆ ಒಳಗಾಗಿ ಕ್ಷುದ್ರ ಬಾಳ್ವೆ ಬಾಳುವುದಕ್ಕಿಂತ ಸಾಯುವುದು ಮೇಲು!" ಎಂದು ಕಂಬನಿಗರೆದರು.

"ನೀವು ಆ ಬಗ್ಗೆ ಚಿಂತಿಸಬೇಡ ಅಣ್ಣಯ್ಯ! ನಾನು ಅವರೊಂದಿಗೆ ಮಾತನಾಡಿ ಅವರ ಸಂಶಯದಿಂದ ನೀವೆಷ್ಟು ನೊಂದಿರುವಿರೆಂದು ಅವರಿಗೆ ಮನ ದಟ್ಟು ಮಾಡುತ್ತೇನೆ. ಸಾಮ್ರಾಟರಿಗಾಗಿ, ಸಾಮ್ರಾಜ್ಯಕ್ಕಾಗಿ ಹಗಲಿರುಳೂ ಅನ್ನಾನೀರುಗಳನ್ನು ಬಿಟ್ಟು ದುಡಿಯುತ್ತಿರುವ ನಿಮ್ಮ ನಿಷ್ಠೆಯನ್ನು ಶಂಕಿಸಿದ ಮೇಲೆ ಅವರು ನನ್ನನ್ನು ನಂಬುತ್ತಾರೆಯೇ? ಏನೋ ಇದು ಕೇಡಿನ ಬುದ್ಧಿ! ಇದರಿಂದ ಅನರ್ಥ ಪರಂಪರೆಯೊದಗದೆ ಇರದು. ನಾವು ಈಗಲೇ ಎಚ್ಚೆತ್ತು ಕೊಂಡು ಬುದ್ಧಿ ಹೇಳಿ – ಅವರನ್ನು ಸನ್ಮಾರ್ಗಕ್ಕೆ ಹಚ್ಚಬೇಕು" ಎಂದು ಸಂತೈ ಸಿದಳು ವರದಾಂಬಿಕೆ.

ವರದಾಂಬಿಕೆ ಸಮಯ ಸಾಧಿಸಿ ಪತಿಯೊಡನೆ ಈ ಮಾತು ತೆಗೆದಳು,

"ಪ್ರಭು! ನಿಮಗೇಕೆ ಈ ವಯಸ್ಸಿನಲ್ಲಿ– ಇಷ್ಟೆಲ್ಲಾ ಕಾಲವಾದ ಮೇಲೆ, ಈ ದುರ್ಬುದ್ಧಿ ಬಂದಿತು! ನನಗೆ ಇದನ್ನು ಕೇಳಿ ಎಷ್ಟು ವ್ಯಥೆಯಾಯಿತು ಬಲ್ಲಿರಾ?"

"ವರದಾ ಏನಾಯಿತೆಂದು ಹೀಗೆ ಹಾರಿಹಾಯುತ್ತಿದ್ದಿ. ಏನು ಸಂಗತಿ ತಿಳಿಸಬಾರದೆ?"

"ಇನ್ನೇನಾಗಬೇಕು! ಸ್ವಾಮಿನಿಷ್ಠ ಸೇವಕರ ಬಗ್ಗೆ ಇಲ್ಲದ ಸಂಶಯ ವ್ಯಕ್ತಗೊಳಿಸಿದ ಮೇಲೆ ಅವರು ಇನ್ನೇಕೆ ಬದುಕಿರಬೇಕು!"

"ನಿನ್ನ ಮಾತು ನನಗೆ ಅರ್ಥವಾಗುವುದಿಲ್ಲ – ಬಿಡಿಸಿ ಹೇಳಬಾರದೆ!"

"ಎಲ್ಲವನ್ನೂ ತಿಳಿದ ನಿಮಗೆ ಹೇಳುವುದೇನಿದೆ? ಇದೆಲ್ಲಾ ಒಂದು

ನಾಟಕ, ನೀವು ನಿರಪರಾಧಿಗಳೆಂದು ತೋರಿಸಿಕೊಳ್ಳಲು ಹೂಡಿರುವ ಆಟ. ನನ್ನ ಬಾಯಿಂದಲೇ ನೀವು ಆ ವಿಷಯವನ್ನು ಕೇಳಬೇಕೆಂದಿದ್ದರೆ ಹೇಳುತ್ತೇನೆ. ನೀವು ನಮ್ಮ ಸಹೋದರರ ವಿಷಯದಲ್ಲಿ ಸಂಶಯ ವ್ಯಕ್ತಪಡಿಸಿದ್ದೀರಂತೆ. ಇದರಿಂದ ಅವರೆಷ್ಟು ನೊಂದುಕೊಂಡಿರುವರೆಂಬುದನ್ನು ಬಲ್ಲಿರಾ ?"

"ಏನು ನಾನು ಸಲಕಂ ಸಹೋದರರ ಬಗ್ಗೆ ಸಂಶಯ ವ್ಯಕ್ತಪಡಿಸಿದೆನೆ? ಯಾವಾಗ? ಏನು ಸಂಗತಿ? ನನಗೊಂದೂ ತಿಳಿಯದು! ಯಾವುದಕ್ಕಾಗಿ ಸಂಶಯ ವ್ಯಕ್ತಪಡಿಸಬೇಕು? ನನಗಾಗಿ ಅವರು ಎಷ್ಟು ಶ್ರಮವಹಿಸುತ್ತಿದ್ದಾರೆ. ಎಂಬುದು ನನಗೆ ತಿಳಿಯದೆ? ಅವರು ರಾಜ್ಯಾಡಳಿತದ ಹೊರೆ ಹೊರದೆ ಹೋಗಿದ್ದರೆ ನಾನು ಇಷ್ಟು ನಿಶ್ಚಿಂತೆಯಿಂದ ಇರಲು ಸಾಧ್ಯವಾಗುತ್ತಿತ್ತೆ ?"

"ನಿಮ್ಮ ಸಲುವಾಗಿ, ಸಾಮ್ರಾಜ್ಯದ ಸಲುವಾಗಿ ಅವರು ಎಷ್ಟು ದುಡಿತ್ತಿದ್ದಾರೆ. ನಿಮ್ಮ ಆಜ್ಞೆ ಎಂದರೆ ದೇವರ ಆಜ್ಞೆಯಷ್ಟು ಶ್ರದ್ಧಾಭಕ್ತಿಯಿಂದ ನಡೆಯುತ್ತಿದ್ದಾರೆ – ಎಂಬುದು ನಿಮಗೆ ತಿಳಿದಿಲ್ಲವೆ? ಅತ್ಯಲ್ಪ ಕಾಲದಲ್ಲಿ ಒಂಭತ್ತು ಕೋಟಿ ಪಗೋಡಗಳನ್ನು ರಾಜಭಂಡಾರಕ್ಕೆ ತುಂಬಿ, ನಿಮಗೆ ನವಕೋಟಿನಾರಾಯಣ ಎಂಬ ಬಿರುದನ್ನು ತರಲಿಲ್ಲವೇ? ದೇಶದಲ್ಲಿ ನಡೆಯುವ ವಿದ್ರೋಹಗಳನ್ನೂ, ಪಿತೂರಿಗಳನ್ನು ಪತ್ತೆಮಾಡುವುದರಲ್ಲಿ ಅವರ ಕೂದಲು ಬೆಳ್ಳಗಾಗಿಲ್ಲವೇ? ಇಂತಹವರ ಬಗ್ಗೆ ನೀವು ಸಂಶಯ ವ್ಯಕ್ತ ಪಡಿಸಿದರೆ – ಅವರೆಷ್ಟು ನೊಂದುಕೊಂಡಿದ್ದಾರೆ ತಿಳಿದಿದೆಯೇ ?"

"ಇಷ್ಟೆಲ್ಲಾ ಹಗರಣ ನನ್ನಿಂದಾಗಿದೆ ಎಂದು ತಿಳಿಯುತ್ತಿರುವುದು ಇದೇ ಮೊದಲು. ಈಚಿನ ದಿನಗಳಲ್ಲಿ ಅವರು ಒಂದು ತರಹೆ ಇದ್ದಾರೆ....ವರದಾ ನನ್ನ ಮಾತು ಕೇಳು. ನನಗೆ ಇದೊಂದೂ ತಿಳಿಯದು."

"ನೀವು ವಿಶ್ವನಾಥನಾಯಕನ ಪ್ರಸಂಗದಲ್ಲಿ ಅವರೊಂದಿಗೆ ಸಂಶಯದಿಂದ ಮಾತನಾಡಿದಿರಂತೆ!"

"ಓ! ಹಾಗೋ ಸಂಗತಿ! ನನಗೆ ಈಗ ಅರ್ಥವಾಯಿತು." ಎಂದು ನಡೆದಿದ್ದ ಎಲ್ಲ ಸಂಗತಿಯನ್ನು ವರದಿಮಾಡಿ,

"ಈ ಅಲ್ಪ ವಿಷಯ ಇಷ್ಟು ಹಗರಣವಾಗುತ್ತದೆಂದು ನಾನು ತಿಳಿದಿರಲಿಲ್ಲ. ನನ್ನ ಮಾತು ಅವರು ತಪ್ಪು ತಿಳಿದಿದ್ದಾರೆ ಎನ್ನುವುದು ನೀನು ಹೇಳುವವರೆಗೂ ನಾನು ತಿಳಿದಿರಲಿಲ್ಲ."

"ಈ ವಿಷಯ ಹಾಗಿರಲಿ. ಆಡಳಿತದ ಹಲವಾರು ವಿಷಯಗಳಲ್ಲಿ ನೀವು ಅನಾವಶ್ಯಕವಾಗಿ ತಲೆ ಹಾಕುತ್ತಿದ್ದೀರಂತೆ!"

"ನನ್ನ ರಾಜ್ಯದ ಸ್ಥಿತಿಗತಿಗಳು ನನಗೆ ತಿಳಿಯಬೇಡವೇ ?"

"ತಿಳಿಯಬೇಕು – ಸಾಮ್ರಾಟರು ಎಷ್ಟು ಸಂಗತಿ ತಿಳಿಯಬೇಕೋ

ಅಷ್ಟನ್ನು ಅವರೇ ತಿಳಿಸುತ್ತಿದ್ದಾರಲ್ಲ – ಅವರ ಮೇಲೆ ಇಲ್ಲದ ಸಂಶಯ ವ್ಯಕ್ತ ಪಡಿಸಿದರೆ ಅವರಿಗೆ ರಾಜ್ಯಾಡಳಿತದಲ್ಲಿ ಹೇಗೆ ಆಸಕ್ತಿ ಶ್ರದ್ಧೆಗಳು ಹುಟ್ಟೀತು? ಇದುವರೆಗೆ ಇದ್ದಂತೆ ಮುಂದೆಯೂ ಇರಬಾರದೆ?"

"ಮತ್ತೆ ಕೃಷ್ಣಪ್ಪನಾಯಕನ ಪ್ರಸಂಗ ನಡೆಯಬಾರದೆಂದು ನಾನು ರಾಜ್ಯಾಡಳಿತದಲ್ಲಿ ಆಸಕ್ತಿ ವಹಿಸಿದ್ದುಂಟು. ಇದಕ್ಕೆ ಅವರೇಕೆ ಬೇಸರಗೊಳ್ಳಬೇಕು? ನಾನು ಸೂತ್ರದ ಗೊಂಬೆಯಾಗಿಯೇ ಉಳಿಯಬೇಕೆ? ಸಾಮ್ರಾಟನಾದ ಮಾತ್ರಕ್ಕೆ ನನಗೆ ಹೃದಯ, ಮಾನವ ಸಹಜವಾದ ಭಾವನೆಗಳು ಇರಬಾರದೆ?" ಎಂದು ಕೆರಳಿ ಕೇಳಿದ ಅಚ್ಯುತರಾಯ.

"ನೀವು ಆಟದ ಗೊಂಬೆಯಾಗಬೇಕೆಂದು ಯಾರೂ ಹೇಳುವುದಿಲ್ಲ. ನೀವು ವಿಜಯನಗರದ ಸಾಮ್ರಾಜ್ಯದ ಇತಿಹಾಸದಲ್ಲಿ ಅದ್ವಿತೀಯ ಸಾಮ್ರಾಟರಾಗಿ ಮೆರೆಯಬೇಕೆಂಬುದೇ ನಮ್ಮೆಲ್ಲರ ಆಶಯ."

"ನನಗೆ ಕೃಷ್ಣಪ್ಪನಾಯಕನ ಪ್ರಸಂಗದಲ್ಲಿ ಇಷ್ಟೆಲ್ಲಾ ನಡೆದಿರಬಹುದೆಂದು ತಿಳಿದಿರಲಿಲ್ಲ. ಅದಕ್ಕಾಗಿ ಕೂಲಂಕಶವಾಗಿ ಪ್ರಶ್ನಿಸಬೇಕಾಯಿತು. ಅವನಿಗೆ ಹುಚ್ಚು ಹಿಡಿದಿರಲಿಲ್ಲವೆಂಬುದಕ್ಕೆ ಅಂದು ಆಸ್ಥಾನದಲ್ಲಿ ಅವನು ಹೇಳಿದ ಮಾತುಗಳೇ ಸಾಕ್ಷಿ. ಅನ್ಯಾಯದ, ಅಧರ್ಮದ ರಾಜ್ಯದಲ್ಲಿ ಯಾರೂ ಬದುಕಿರಬಾರದೆಂದು ಅವನು ಎಲ್ಲರನ್ನೂ ಕತ್ತರಿಸಿಹಾಕಿದನೆಂದು ಜನ ಹೇಳುತ್ತಿದ್ದಾರೆ! ತನ್ನ ಸಂಸಾರವನ್ನು ನಮಗೆ ಬಲಿಗೊಡಬೇಕಾದರೆ ಅವನಿಗೆ ನಮ್ಮ ವಿರುದ್ಧ ಅದೆಷ್ಟು ದ್ವೇಷ, ಅಸಹನೆ ಇರಬೇಕು? ಈ ಬಗೆಯ ಅನ್ಯಾಯಗಳಿಂದ ನಾನು ನವಕೋಟಿನಾರಾಯಣನಾಗಿದ್ದರೆ – ನಿರಪರಾಧಿಗಳ ರಕ್ತದಿಂದ ನನ್ನ ರಾಜಬೊಕ್ಕಸ ತುಂಬಿದ್ದರೆ – ನಾನು ಮಹಾ ಪಾಪಿ! ನನಗೆ ರೌರವ ನರಕ ನಿಶ್ಚಿತ! ದೇವರಿಗೆ ಹೆದರಿ ನನ್ನಿಂದ ನಡೆಯಲಿರುವ ಅನ್ಯಾಯವನ್ನು ತಡೆಗಟ್ಟಬೇಕಾಗಿದೆ! ಅದಕ್ಕಾಗಿ ನಾನು ರಾಜ್ಯಾಡಳಿತದಲ್ಲಿ ಆಸಕ್ತಿ ವಹಿಸಬೇಕಾಗಿದೆ. ಎಂದ ಮಾತ್ರಕ್ಕೆ ಅವರ ಸ್ವಾಮಿನಿಷ್ಠೆಯನ್ನು ಶಂಕಿಸಿದೆನೆಂದು ಅವರೇಕೆ ತಿಳಿಯಬೇಕು?"

"ನಿಮ್ಮಿಂದಲಾಗಲೀ ಅವರಿಂದಲಾಗಲೀ ಯಾವ ಅನ್ಯಾಯವೂ ನಡೆದಿಲ್ಲ. ಸಾಮ್ರಾಜ್ಯದ ಬಗ್ಗೆ ದ್ರೋಹ ಬಗೆದ ವಿದ್ರೋಹಿಗಳನ್ನು, ಸ್ವಾರ್ಥಿಗಳನ್ನು ನಿರ್ವಾಹವಿಲ್ಲದೆ, ಶಿಕ್ಷಿಸಬೇಕಾಗುತ್ತದೆ. ನ್ಯಾಯದ ಹೆಸರಿನಲ್ಲಿ ನಡೆದ ಅವು ಅನ್ಯಾಯವೆನಿಸಿಕೊಳ್ಳಲಾರದು. ಅಂತಹ ಸ್ವಾಮಿನಿಷ್ಠ ಸೇವಕರನ್ನು ಕಳೆದುಕೊಂಡರೆ ನಮಗಾಗುವ ನಷ್ಟವನ್ನು ಯಾರೂ ತುಂಬಲಾರರು. ನೀವು ಮೊದಲಿನಂತೆ ನಿಶ್ಚಿಂತೆಯಿಂದ ಇರಿ. ಇದರಿಂದ ನಮಗೂ ರಾಷ್ಟ್ರಕ್ಕೂ ಕ್ಷೇಮ."

"ಏನು ಮಾಡುವುದು ತಿಳಿದೂ, ತಿಳಿದೂ – ಅನ್ಯಾಯ ನೋಡದೆ ಕಣ್ಮುಚ್ಚಿ ಕುಳಿತಿರುವುದು ಹೇಗೆ ಸಾಧ್ಯ? ನಾನು ದುರ್ದೈವದಿಂದ ಬದುಕಿದ್ದೇನೆ!

ಮನುಷ್ಯನಾಗಿ ಬಾಳುವ ಆಸೆಯನ್ನು ಹೊತ್ತಿದ್ದೇನೆ! ಅನ್ಯಾಯವನ್ನು ಕಂಡಾಗ ಮನಸ್ಸಿಗೆ ಖೇದವಾಗಿ ಅದನ್ನು ಸರಿಪಡಿಸುವ ಮನವಾಗುತ್ತದೆ! ದುಃಖಗಳನ್ನು ಕಂಡಾಗ ಮರುಕವಾಗುತ್ತದೆ! ಇದು ತಪ್ಪೆ?....ನಾನು ಮನುಷ್ಯನಾಗಿರಲು ಈ ಸಾಮ್ರಾಜ್ಯ ಪದವಿ ಅಡ್ಡ ಬಂದರೆ ನನಗೆ ಈ ಪದವಿಯೇ ಬೇಡ! ನಾನು ಹೃದಯಶೂನ್ಯ ವಿಗ್ರಹವಾಗಿರುವುದಕ್ಕಿಂತಲೂ, ಹೃದಯ ದೌರ್ಬಲ್ಯವುಳ್ಳ ಮಾನವನಾಗಿರಲು ಬಯಸುತ್ತೇನೆ."

"ಈಗ ನನ್ನ ಸಹೋದರರಿಂದ ಯಾವ ಅನ್ಯಾಯ ನಡೆದಿದೆ ಎಂದು ನೀವು ಇಷ್ಟು ಪಶ್ಚಾತ್ತಾಪ ಪಡುತ್ತಿರುವಿರಿ?"

"ನನಗೆ ಅವರ ಬಗ್ಗೆ ಆಕ್ರೋಶವಿಲ್ಲ – ನನ್ನ ಬಗೆಗೇ ಪಶ್ಚಾತ್ತಾಪ ಉಂಟಾಗಹತ್ತಿದೆ. ರಾಜ್ಯವಾಳಬಲ್ಲ ಶಕ್ತಿ ಇಲ್ಲದ ಮೇಲೆ ರಾಜನಾಗಿರಬಾರದು! ರಾಜ್ಯ ಸುಖಗಳ ಪ್ರಲೋಭಕ್ಕೆ ಬೀಳದಿದ್ದರೆ – ಖಂಡಿತ ಈ ಸಾಮ್ರಾಟ ಪದವಿಯನ್ನು ತಿರಸ್ಕರಿಸುತ್ತಿದ್ದೆ! ಇಷ್ಟು ವಿಸ್ತಾರವಾದ ಸಾಮ್ರಾಜ್ಯವನ್ನಾಳಲು ನನಗೆ ಶಕ್ತಿಯಿಲ್ಲವೆಂದು ಮೊದಲಿನಿಂದಲೂ ತಿಳಿದಿತ್ತು! ಆದರೆ ಸಾಮ್ರಾಟ್ ಪದವಿ ಬಂದಾಗ ಬೇಡವೆನ್ನುವಷ್ಟು ಜಿತೇಂದ್ರಿಯ ನಾನಾಗಿರಲಿಲ್ಲ. ಆದರೆ ಈಗ ಪಶ್ಚಾತ್ತಾಪ ಪಟ್ಟರೆ ಉಪಯೋಗವಿಲ್ಲ. ಅಂತಲೇ ನನ್ನ ಹೆಸರಿನಲ್ಲಿ ನಡೆಯುವ ಅನ್ಯಾಯವನ್ನು ತಪ್ಪಿಸಲು ನಾನು ಆಡಳಿತದಲ್ಲಿ ಆಸಕ್ತಿ ವಹಿಸುತ್ತಿದ್ದೇನೆಯೇ ಹೊರತು ಅನ್ಯರ ಮೇಲಿನ ಶಂಕೆಯಿಂದಲ್ಲ. ನಡೆದಿರುವ ಅನ್ಯಾಯವನ್ನು ಹೇಳ ಹೊರಟರೆ – ಅದೇ ದೊಡ್ಡ ಕಥೆಯಾಗುತ್ತದೆ. ಒಂದು ಮಾತಿನಲ್ಲಿ ಹೇಳುವುದಾದರೆ, ನನ್ನಿಂದ, ನನ್ನ ಹೆಸರಿನಲ್ಲಿ ಇದುವರೆಗೆ ನಡೆದಿರುವುದೆಲ್ಲಾ ಅನ್ಯಾಯವಲ್ಲದೆ ಬೇರೆಯಲ್ಲ. ಎಂದು ನನಗೆ ಮನವರಿಕೆಯಾಗುತ್ತಿದೆ! ಇದರಿಂದ ಸಲಕಂ ಸಹೋದರರು ನನಗೆ ಅನ್ಯಾಯ ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಅನ್ಯಾಯಗಳನ್ನು ಯಾರೂ ಉದ್ದೇಶಪೂರ್ವಕವಾಗಿ ಮಾಡುವುದಿಲ್ಲವೆಂದು ನನಗೆ ನಂಬಿಕೆಯಿದೆ. ರಾಜ್ಯಾಡಳಿತದ ಹೊರೆ ಹೊತ್ತವರು ತಿಳಿದೋ ತಿಳಿಯದೆಯೋ! ಅನ್ಯಾಯಗಳನ್ನು ನಡೆಸಬೇಕಾಗುತ್ತದೆ. ಇವುಗಳಲ್ಲಿ ವೈಯುಕ್ತಿಕ ಕಾರಣಗಳನ್ನು ಹುಡುಕುವುದು ತಪ್ಪು. ನಾಬಲ್ಲೆ! ಸಲಕಂ ಸೋದರರಿಂದ ನನಗೆ ಅಮೂಲ್ಯ ಸಹಾಯವಾಗಿದೆ. ಅವರನ್ನು ಯಾವ ಶಂಕೆ, ಸಂಶಯಗಳಿಂದ ನೋಡಿಲ್ಲವೆಂದು ಅವರಿಗೆ ತಿಳಿಸು – ನಾನೇ ಅವರಿಗೆ ಸಾಧ್ಯವಾದರೆ ತಿಳಿಸುತ್ತೇನೆ." ಎಂದು ಹೇಳಿ ಅಚ್ಯುತರಾಯನು ಮಾತನ್ನು ಪರಿಸಮಾಪ್ತಿಗೊಳಿಸಿದ ಮೇಲೆ ವರದಾಂಬಿಕೆಗೆ ಯಾವ ಮಾತು ಹೇಳಲೂ ತಿಳಿಯಲಿಲ್ಲ.

ಅಚ್ಯುತರಾಯನಿಗೆ ಈ ಎಲ್ಲ ಮಾತುಗಳೂ ಬೇಸರವನ್ನೇ ತಂದಿದ್ದವು.

ಅಲ್ಪ ವಿಷಯಕ್ಕಾಗಿ ಅವರು ಇಷ್ಟು ಹಗರಣ ಎಬ್ಬಿಸಿರುವುದನ್ನು ಕಂಡು, ಅವರ ಮೇಲೆ ನಿಜವಾಗಿಯೂ ಸಂಶಯ ಉಂಟಾಯಿತು. ತಮ್ಮ ಮೇಲೆ ಬಂದಿರುವ ಸಂದೇಹವನ್ನು ನಿವೃತ್ತಿಮಾಡಿಕೊಳ್ಳುವುದೇ ಅವರ ಉದ್ದೇಶವಾಗಿದ್ದರೆ, ಈ ಬಳಸುದಾರಿ ಏಕೆ? ತನ್ನನ್ನೇ ನೇರ ಪ್ರಶ್ನಿಸಬಹುದಿತ್ತು. ಈಚೆಗೆ ಅವರ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಿದ್ದ ತನಗೆ, ಅವರ ನಿರಂಕುಶಾಡಳಿತದಲ್ಲಿ ತಲೆಹಾಕಿ, ಅದೂ ಇದೂ ಪ್ರಶ್ನೆ ಕೇಳುತ್ತಿದ್ದ ತನಗೆ ಕೊಟ್ಟಿದ್ದ ಎಚ್ಚರಿಕೆಯೇ ಇದು ಎಂದು ಅರಿವಾಗದೆ ಇರಲಿಲ್ಲ. ಆದರೂ ಎಲ್ಲರೊಡನೆ ಮೊದಲಿನಿಂದಲೂ ಇದ್ದಂತೆ ವಿಶ್ವಾಸದಿಂದಿರಲು ಯತ್ನಿಸಿದ. ಆದರೂ ಅವನ ಮನಸ್ಸು ಮುರಿದುಹೋಗಿತ್ತು. ಅವರು ತನ್ನನ್ನು ಅರಮನೆಯ ನಾಲ್ಕು ಗೋಡೆಗಳ ನಡುವೆ ಸೆರೆಯಲ್ಲಿಟ್ಟು, ಮನಸ್ಸನ್ನು ವಿಲಾಸಭೋಗಗಳ ಕಡೆ ತಿರುಗಿಸಿ, ತನ್ನ ವಿರುದ್ಧ ಯಾವುದೋ ಸಂಚು ನಡೆಸುತ್ತಿದ್ದಾರೆ ಎಂದು ಊಹಿಸುವಂತೆ ಆಯಿತು.

ಇತ್ತೀಚೆಗೆ ಸಲಕಂ ಸಹೋದರರ ಬಗ್ಗೆ ನಂಬಿಕೆ ತಪ್ಪಿಹೋದ ಮೇಲೆ ಮೇಲೆ ಅವರು ಮಾಡಿದ್ದ ಒಂದೊಂದೇ ಕಾರ್ಯಗಳು ಪುನರ್ವಿಮರ್ಶಿಸಿದಾಗ ಒಂದು ವಿಷಯ ಸ್ಪಷ್ಟಪಟ್ಟಿತ್ತು – ಸಲಕಂ ಸಹೋದರರು ಹಳೆಯ ಪ್ರಭುತ್ವದ ಕೃಷ್ಣದೇವರಾಯನ ಕಾಲದಲ್ಲಿ ಸ್ವಾಮಿನಿಷ್ಠ ಸೇವಕರೆಂದು ಪರಿಗಣಿತರಾಗಿದ್ದ ಎಲ್ಲರನ್ನೂ ಒಂದಲ್ಲ ಒಂದು ಕಾರಣದಿಂದ ಶಿಕ್ಷಿಸಿದ್ದರು, ಕೆಲವರನ್ನು ಸೆರೆಯಲ್ಲಿಡಲಾಗಿತ್ತು. ಮತ್ತೆ ಕೆಲವರು ತಲೆ ತಪ್ಪಿಸಿಕೊಂಡಿದ್ದರು. ಅವರಿಗೆ ಕೃಷ್ಣದೇವರಾಯನ ಬಗ್ಗೆ ಅಸಾಧಾರಣ ಪ್ರೀತಿ, ಗೌರವಗಳಿದ್ದದರಿಂದ ಸಾಮ್ರಾಟ್ ಕೃಷ್ಣದೇವರಾಯನು ತನ್ನನಂತರ ಪಟ್ಟಕ್ಕೆ ಬರುವವರ ವಿಷಯದಲ್ಲಿ ಮರಣಶಾಸನ ಬರೆದ ಮೇಲೆ ಅವರು ಅವನ ಆಶಯವನ್ನು ಈಡೇರಿಸಲು ಸರ್ವಸ್ವವನ್ನು ಬಲಿಗೊಡಲು ಸಿದ್ಧರಾಗಿದ್ದರು, ಇಂತಹವರ ಮೇಲೆ ಆ ಸೋದರರು ದ್ವೇಷ ಸಾಧಿಸಿದ್ದರು. ಮೊದಲು ಕುಮಾರನ ಕೊಲೆ – ಅದರ ನೆಪದಲ್ಲಿ ಸೋಮರಸನ ಮರಣದಂಡನೆ – ಭರತಾಚಾರ್ಯರು, ರಾಜವೈದ್ಯರೇ ಮೊದಲಾದ ವೃದ್ಧರ ಕಾರಾಗೃಹವಾಸ – ಅಳಿಯ ರಾಮರಾಯರು, ತಿರುಮಲರಾಯರ ಮೇಲೆ ರಾಜದ್ರೋಹದ ಆಪಾದನೆ – ಅವರ ಪಲಾಯನ – ಚಿನ್ನಾದೇವಿ, ತಿರುಮಲದೇವಿಯ ನಿರ್ಬಂಧ – ಸೆಲ್ಲಪ್ಪ, ತುಂಬುಚ್ಚಿ ನಾಯಕರ ವಿದ್ರೋಹ – ಸೆಲ್ಲಪ್ಪನ ಮರಣದಂಡನೆ – ಕೃಷ್ಣಪ್ಪನಾಯಕನ ಆತ್ಮಹತ್ಯೆ – ವೀರಶೇಖರಚೋಳನ ಕಣ್ಮರೆ – ನಾಗಮನಾಯಕ, ವಿಶ್ವನಾಥನಾಯಕರ ಮೇಲೆ ಬಂದ ರಾಜದ್ರೋಹ – ಇವುಗಳು ಒಂದು ಸೂತ್ರದಂತೆ ಕಂಡವು. ಎಲ್ಲರನ್ನೂ ಸಾಮ್ರಾಜ್ಯದ ಭದ್ರತೆಗಾಗಿ ಸಿಂಹಾಸನದ ರಕ್ಷಣೆಗಾಗಿ, ತನ್ನ ಹೆಸರಿನಲ್ಲಿ ಸಲಕಂ ಸಹೋದರರು ಶಿಕ್ಷಿಸಿದ್ದರು!

ಅವರು ತನ್ನನ್ನು ಮೂಲೆಗೊತ್ತಿ ತನ್ನ ಹೆಸರಿನಲ್ಲಿ ರಾಜ್ಯವಾಳಬೇಕೆಂದಿರುವ ಬಗ್ಗೆ ಅವರ ಇತ್ತೀಚಿನ ವರ್ತನೆ ಸಾಕ್ಷಿಯಾಗಿತ್ತು. ಅವರನ್ನು ವಿರೋಧಿಸ ಲೆತ್ನಿಸಿ ಅವರ ಅಧಿಕಾರದಲ್ಲಿ ಕೈಹಾಕಲೆತ್ನಿಸಿದಾಗ ತನಗೆ ವರದಾದೇವಿಯಿಂದ ಎಚ್ಚರಿಕೆ ಕೊಟ್ಟಿದ್ದರು. ಇಂದು ಎಚ್ಚರಿಕೆ ಕೊಟ್ಟವರು ನಾಳೆ ಬಂಧಿಸಬಹುದು ಇಲ್ಲವೇ ಇತರರನ್ನು ಕೊಲೆಮಾಡಿದಂತೆ, ತನ್ನನ್ನೂ ಕೊಲೆಮಾಡಬಹುದು! ಇದು ಅಸಂಭವವಲ್ಲ! ಸಾಮ್ರಾಜ್ಯದ ಎಲ್ಲ ಅಧಿಕಾರ, ಜನಬಲ, ಹಣಬಲವನ್ನು ಹೊಂದಿರುವ ಅವರಿಂದ, ಪೈಶಾಚಿಕ ಲಲಾಸೆಯುಳ್ಳ ಅವರಿಂದ ಯಾವುದೂ ಅಸಂಭವವಲ್ಲ! ಅಂತಾದರೆ ತನ್ನ ಮಗ ವೆಂಕಟಾದ್ರಿಯ ಗತಿ?....

ಏಕೋ ಯೋಚಿಸಿದಂತೆ ತಾನು ನಿರೀಕ್ಷಿಸಿದುದಕ್ಕೂ ಆಳವಾದ ವಿದ್ರೋಹದ ಪ್ರಪಾತಕ್ಕೆ ಸಲಕಂ ಸಹೋದರರು ತನ್ನನ್ನು ತಳ್ಳಿರುವಂತೆ ಭಾಸವಾಯಿತು....ಅವರು ಬೀಸಿದ್ದ ಗಾಳದಿಂದ ಬಿಡುಗಡೆ ಸುಲಭವಲ್ಲ....ಇದರಿಂದ ಉಳಿದುಕೊಳ್ಳುವ ಮಾರ್ಗ ಅವನಿಗೆ ಕಾಣದಾಗಿತ್ತು!

೧೭

ವನರಾಜನನ್ನು ಬಂಧಿಸಿಟ್ಟಂತಾಗಿತ್ತು ಅಚ್ಯುತರಾಯನ ಸ್ಥಿತಿ. ಅವನ ಕೈಕೆಳಗಿನ ಅಧಿಕಾರಿಗಳೇ ಅಚ್ಯುತರಾಯನ ಮಾತನ್ನು ಲಕ್ಷ್ಯಕ್ಕೆ ತಾರದಂತಾಗಿತ್ತು. ಬಹುಬೇಗನೆ ತಾನೊಬ್ಬನೇ ಅರಮನೆಯಲ್ಲಿ ಒಂದು, ಉಳಿದವರು ಬೇರೆ ಎಂಬುದು ಅವನ ಮನಸ್ಸಿಗೆ ಬಂದಿತ್ತು. ಇತ್ತೀಚಿನ ದಿನಗಳಲ್ಲಿ ಅವನ ಪತ್ನಿ ವರದಾಂಬಿಕೆಯಲ್ಲೂ ಅವನಿಗೆ ನಂಬಿಕೆ ತಪ್ಪಿಹೋಗಿತ್ತು. ಅವಳಿಗೆ ತನ್ನ ಹಿತಾಸಕ್ತಿಗಿಂತಲೂ, ಸಹೋದರರ ಹಿತಾಸಕ್ತಿ ಅಧಿಕವಾಗಿತ್ತು. ಅಂತಲೇ ಪತ್ನಿಯಾದವಳು ಅವನ ಪಾಲಿಗೆ ಪರಕೀಯಳಾಗಿದ್ದಳು. ಅವನ ಈ ಏಕಾಕಿ ಬಾಳಿನಲ್ಲಿ ಅವನ ಜೀವನವನ್ನು ಸುಖಮಯವಾಗಿ ಮಾಡುತ್ತಿದ್ದ ಏಕೈಕ ವ್ಯಕ್ತಿ ಎಂದರೆ ಅವನ ಮಗ ವೆಂಕಟಾದ್ರಿ, ಈಗ ಅವನೂ ಶಿಕ್ಷಣದ ನೆವದಿಂದ ದೂರವಾಗಿದ್ದ.

ವೆಂಕಟಾದ್ರಿಗೆ ಈಗ ಹನ್ನೆರಡು ತುಂಬಿ ಹದಿಮೂರನೆ ವರ್ಷ ಕಾಲಿರಿಸಿತ್ತು. ಅವನು ತಾಯಿತಂದೆಯರ ಮುದ್ದಿನ ಮಗನಾಗಿ ಬೆಳೆದಿದ್ದ. ಅಚ್ಯುತರಾಯನು ಕೃಷ್ಣದೇವರಾಯನ ಪುತ್ರ ಮಡಿದ ಮೇಲೆ ಸಿಂಹಾಸನ ತನ್ನದಾದ ಮೇಲೆ–ವೆಂಕಟಾದ್ರಿಯನ್ನು ಪ್ರಿನ್ಸ ವೆಂಕಟಾದ್ರಿ ಎಂಬ ಹೆಸರಿನಲ್ಲಿ ಯುವರಾಜ್ಯಾಭಿಷೇಕ ಮಾಡಿದ್ದನು. ಅವನು ಬಾಲ್ಯದಲ್ಲಿಯೇ ತನ್ನ ವಿದ್ಯಾಬುದ್ಧಿಗಳಿಂದ ಎಲ್ಲರ ಮನಸ್ಸನ್ನೂ ಅಪಹರಿಸಿದ್ದ. ಅವನಿಗೆ ರಾಜ್ಯಾಡಳಿತದಲ್ಲಿ ಅಪಾರವಾದ ಆಸಕ್ತಿಯಿತ್ತು. ಇದರಲ್ಲಿ ತರಬೇತುಕೊಡಲು ವರದಾದೇವಿ

ಅವನನ್ನು ತನ್ನ ತಮ್ಮಂದಿರಿಗೆ ಒಪ್ಪಿಸಿದ್ದಳು. ಆದರೆ ಇದು ಅಚ್ಯುತರಾಯನಿಗೆ ಅಷ್ಟು ಇಷ್ಟವಿರಲಿಲ್ಲ. ಕುಮಾರನನ್ನು ಅವರಿಗೆ ಒಪ್ಪಿಸುವ ಮಾತು ಬಂದಾಗ ಅವನು ವಿರೋಧಿಸಿದ್ದ. ಆಗ ವರದಾದೇವಿಯು, ಮುಖಗಂಟಿಕ್ಕಿಕೊಂಡು,

"ಏಕೆ? ಅವನೂ ನಿಮ್ಮಂತೆ ರಾಜ್ಯಾಡಳಿತದ ಗಂಧವಿಲ್ಲದೆ ಪೆದ್ದನಂತೆ ಬೆಳೆಯಬೇಕೆಂದು ನಿಮ್ಮ ಆಸೆಯೆ? ಎಂದು ಮೂದಲಿಸಿದ್ದಳು. ಮಗುವಿನ ಮೇಲೆ ಅತಿಶಯವಾದ ಮೋಹವಿದ್ದರೂ, ಅವನು ಸಲಕಂ ಸಹೋದರರ ವಶಕ್ಕೆ ಹೋಗುವುದನ್ನು ತಡೆಯಲು ಅವನಿಂದ ಸಾಧ್ಯವಿರಲಿಲ್ಲ. ಮಗನ ಶಿಕ್ಷಣದ ಕಾರಣದಿಂದ ಪತಿ ಪತ್ನಿಯರಲ್ಲಿ ವೈಮನಸ್ಯ ಉಂಟಾಯಿತೇ ಹೊರತು, ಯಾವ ಪ್ರಯೋಜನವಾಗಲಿಲ್ಲ. ಆ ವೆಂಕಟಾದ್ರಿಗೆ ತಂದೆಗಿಂತಲೂ, ತಾಯಿಯ ಸಾನ್ನಿಧ್ಯ ಪ್ರಿಯವಾಗಿತ್ತು. ಅದಕ್ಕಿಂತ ಹೆಚ್ಚಿಗೆ ಸಲಕಂ ಸಹೋದರರ ಸಹವಾಸ ಸುಖಕರವಾಗಿತ್ತು. ಹೀಗಾಗಿ ಮಗನು ತಂದೆಯನ್ನು ನಿರ್ಲಕ್ಷಿಸುತ್ತಾ ನಡೆದಿದ್ದ – ಇದರಿಂದ ಅಚ್ಯುತರಾಯನಿಗಾದ ದುಃಖ ಅಷ್ಟಿಷ್ಟಲ್ಲ.

ಅಚ್ಯುತರಾಯನಿಗೆ ಬಂಧನದ ಈ ಸಾಮ್ರಾಟ ಪದವಿಗಿಂತಲೂ, ಚಂದ್ರಗಿರಿಯ ಜವಾಬ್ದಾರಿಯಿಲ್ಲದ, ಹಂಗಿಲ್ಲದ ಜೀವನ ಹೆಚ್ಚು ಪ್ರಿಯವಾಗಿತ್ತು. ಅಲ್ಲಿ ತನ್ನನ್ನು ಓಲೈಸುವ ನೆಪದಲ್ಲಿ ತನ್ನ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಜನರು ಇರಲಿಲ್ಲ. ಆ ಹಕ್ಕಿಯಂತೆ ಇದ್ದ ಆ ಜೀವನ ಮತ್ತೆ ಬಾರದೆ? ಎಂದು ಹಾತೊರೆಯುತ್ತಿದ್ದ.

ಒಮ್ಮೊಮ್ಮೆ ಅವನಿಗೆ ತನ್ನ ಸಾಮ್ರಾಟ ಪದವಿಯ ಬಗ್ಗೆ ತಿರಸ್ಕಾರ ಉಂಟಾಗುತ್ತಿತ್ತು. ಅಧಿಕಾರವಿಲ್ಲದ ಮೇಲೆ ಏತರ ಸಾಮ್ರಾಟ ಪದವಿ ಎಂದು ಸಿಡಿದೇಳುತ್ತಿದ್ದ. ಅದನ್ನೇ ಪತ್ನಿಯ ಮುಂದೆ ಒಂದೆರಡುಬಾರಿ ಪ್ರಕಟಿಸಿಯೂ ಇದ್ದ. ಸಲಕಂ ಸಹೋದರರಂತೆ ಅವಳೂ 'ನಿಶ್ಚಿಂತೆಯ' 'ನೆಮ್ಮದಿಯ' 'ತೃಪ್ತಿಯ' 'ವಿಲಾಸದ' ಜೀವನವನ್ನೇ ಉಪದೇಶಿಸಿದ್ದಳು. ಈಗ ಎಲ್ಲರಿಗೂ ಅವನು ಒಂದು ಬಗೆಯ ಅರ್ಥವಾಗದ ವ್ಯಕ್ತಿಯಾಗಿ ಮಾರ್ಪಟ್ಟಿದ್ದ. ಈಗ ಅವನಲ್ಲಿ ಮೊದಲಿನ ಭೋಗೇಚ್ಛೆಯಿರಲಿಲ್ಲ. ಅವನಿಗೆ ತನ್ನ ಹಿಂದಿನ ವಿಲಾಸ ಜೀವನ ಹೇಸಿಗೆಯನ್ನು ತಂದಿತ್ತು. ಒಂದು ಕಾಲದಲ್ಲಿ ಯಾವುದು ತನ್ನ ಜೀವಿತದ ಪರಮೋದ್ದೇಶವೆಂದು ಭಾವಿಸಿದ್ದನೋ ಆ ವಿಲಾಸ ಭೋಗಗಳು ಇಂದು ಅರ್ಥಶೂನ್ಯವಾಗಿ ಕಂಡಿದ್ದವು. ಅವನು ಪಾನಗೋಷ್ಠಿಗಳನ್ನು ನಿಲ್ಲಿಸಿದ್ದನು. ತನ್ನ ಸಲುವಾಗಿ ಸೀಮಿತವಾಗಿದ್ದ ನರ್ತಕಿಯರನ್ನೂ, ಇನ್ನಿತರ ಕಲಾವಿದರನ್ನೂ ಹೊರಗಟ್ಟಿದ್ದನು. ಸವಿಮಾತುಗಳಿಂದ ವಂಚಿಸುತ್ತಿದ್ದ ಭಟ್ಟಂಗಿಗಳನ್ನು ದೂರವಿಟ್ಟಿದ್ದನು. ವನಭೋಜನ, ಮೃಗಯಾ ವಿಹಾರ,

ಜಲಕ್ರೀಡೆ, ಮಧು ಮಹೋತ್ಸವಗಳನ್ನು ತಪ್ಪಿಸಿದ್ದನು.. ಈಗ ಅವನಿಗೆ ಬೇಕಾಗಿದ್ದುದು ಏಕಾಂತ, ಅವನು ನಿಂತಲ್ಲಿ, ಕೂತಲ್ಲಿ, ತನ್ನನ್ನೇ ಮರೆತು ಸ್ವಚ್ಛಂದ ಜೀವನದ ಕನಸು ಕಾಣುವನು, ಇಲ್ಲವಾದರೆ ಸಲಕಂ ಸಹೋದರರ ರಹಸ್ಯಪಿತೂರಿಯ ಬಗ್ಗೆ ಯೋಚಿಸುವನು. ಅವರಿಂದ ತಾನು ತಪ್ಪಿಸಿಕೊಂಡು ಸಾಮ್ರಾಜ್ಯವನ್ನು ಉಳಿಸುವುದು ಹೇಗೆ ಎಂದು ಯೋಚಿಸುವನು. ತನ್ನ ಅಸಹಾಯ ಸ್ಥಿತಿಗಾಗಿ ಅವನಿಗೆ ಪರಿತಾಪವಾಗುತ್ತಿತ್ತು.

ಅವನಿಗೆ ಒಮ್ಮೆ ಇದ್ದಕ್ಕಿದ್ದಂತೆ ಒಂದು ಆಲೋಚನೆ ಹೊಳೆಯಿತು. ತಾನೇಕೆ ನಿಜವಾದ ಸಾಮ್ರಾಟನಂತೆ ಅಧಿಕಾರ ಚಲಾಯಿಸಬಾರದು? ತಾನು ಸಾಮ್ರಾಟನೆಂದು ಇತರರಿಗೆ ಮನದಟ್ಟು ಮಾಡಿಕೊಡದ ಹೊರತು, ಸಾಮ್ರಾಟನ ಅಧಿಕಾರ ತನಗಿಲ್ಲವೆಂದು ಗ್ರಹಿಸಿದನು. ತಾನು ನಿಜವಾದ ಸಾಮ್ರಾಟ! ತನ್ನದೇ ಪರಮಾಧಿಕಾರ! ತನ್ನಮಾತೇ ಶಾಸನ! ಎಂಬುದನ್ನು ಕಾರ್ಯದಲ್ಲಿ ತೋರಿಸಬೇಕು! ಸಾಮ್ರಾಜ್ಯದ ಜನತೆಯನ್ನು ಆ ಸಹೋದರರ ಕಪಿಮುಷ್ಟಿಯಿಂದ ಬಿಡಿಸಬೇಕು! ಎಂದು ಆಲೋಚಿಸಿ, ತನ್ನ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲು ನಿಶ್ಚಯಿಸಿದನು....

ಪ್ರಥಮವಾಗಿ ತನ್ನ ಒಪ್ಪಿಗೆ ತೆಗೆದುಕೊಳ್ಳದೆ, ನಿರ್ಬಂಧದಲ್ಲಿ ಇರಿಸಿದ್ದ ಸಾಮ್ರಾಟ್ ಕೃಷ್ಣದೇವರಾಯನ ಪತ್ನಿಯರನ್ನು ನಿರ್ಬಂಧದಿಂದ ಬಿಡಿಸಿ, ಆ ಮೂಲಕ ಸಲಕಂ ಸಹೋದರರ ದಬ್ಬಾಳಿಕೆಯನ್ನು ಅಡಗಿಸಲು ನಿಶ್ಚಯಿಸಿ, ತನ್ನ ನಿರ್ಧಾರವನ್ನು ಯಾರಿಗೂ ತಿಳಿಸದೆ, ತನ್ನ ಆಪ್ತ ಅನುಚರರೊಡನೆ ಚಿನ್ನಾದೇವಿಯ ಅಂತಃಪುರಕ್ಕೆ ಬಂದನು.

ನಿರ್ಬಂಧವೆಂದರೆ ತಾನು ಚಂದ್ರಗಿರಿಯಲ್ಲಿ ಇದ್ದಂತೆ ಎಂದು ತಿಳಿದಿದ್ದ ಅಚ್ಯುತರಾಯನಿಗೆ ಚಿನ್ನಾದೇವಿಯ ಅಂತಃಪುರ ಚಕಿತಗೊಳಿಸಿತು. ಅವಳು ಅಲ್ಲಿ ಸಾಮಾನ್ಯ ಖೈದಿಯಂತೆ ಇದ್ದಳು. ಅಂತಃಪುರದಲ್ಲಿ ಮೊದಲಿನ ವೈಭವ ವಿರಲಿಲ್ಲ. ದಾಸದಾಸಿ ಪರಿಜನರನ್ನೆಲ್ಲಾ ಕೆಲಸದಿಂದ ತೆಗೆದುಹಾಕಲಾಗಿತ್ತು. ಅಲ್ಲಿದ್ದ ಅನರ್ಘ್ಯ ವಸ್ತುಗಳನ್ನೆಲ್ಲಾ ವರದಾದೇವಿಯ ಅಂತಃಪುರಕ್ಕೆ ಸಾಗಿಸಲಾಗಿತ್ತು. ಅವಳು ಪರಿತ್ಯಕ್ತರಾಣಿಯಂತೆ, ಸಾಮಾನ್ಯ ಶ್ರೀಮಂತ ಸ್ತ್ರೀಯಂತೆ ತನ್ನ ಅರಮನೆಯ ಒಂದು ಭಾಗದಲ್ಲಿ ವಾಸಿಸುತ್ತಿದ್ದಳು. ಆವಳ ಬಳಿ ನಿತ್ಯದ ಅವಶ್ಯಕತೆಗಳಿಗೆ ಬೇಕಾದ ಪದಾರ್ಥಗಳು ಮಾತ್ರವೇ ಇದ್ದುವು. ಸಲಕಂ ಸಹೋದರರು ಅವಳ ಚಲನವಲನಗಳನ್ನು ತಿಳಿಯಲು ನೇಮಿಸಿದ್ದ ಕೆಲವೇ ದಾಸಿಯರು ಅವಳ ಪರಿಚಾರಿಕೆಗೆ ಇದ್ದರು. ಇದಿಷ್ಟೇ ಅವಳ ಶ್ರೀಮಂತಿಕೆಯ ಕುರುಹಾಗಿ ಉಳಿದಿದ್ದುದು.

ಅಚ್ಯುತರಾಯನಿಗೆ ಚಿನ್ನಾದೇವಿಯ ಸ್ಥಿತಿಯನ್ನು ಕಂಡು ಬಹಳ ವ್ಯಥೆ

ಯಾಯಿತು. ಕೃಷ್ಣದೇವರಾಯನ ಮೋಹದರಾಣಿಯಾಗಿ ಅತ್ಯಂತ ಪ್ರಭಾವ ಶಾಲಿಯಾಗಿದ್ದ ವ್ಯಕ್ತಿಗೆ ಬಂದಿದ್ದ ದುರ್ಗತಿಯನ್ನು ಕಂಡು ಕನಿಕರವಾಯಿತು. ಯಾರ ಕೃಪೆಯಿಂದ ತಾನು ಸಾಮ್ರಾಟನಾದನೋ ಅವರ ಮಡದಿಯರನ್ನು, ತನ್ನ ಅತ್ತಿಗೆಯರನ್ನು ಈ ರೀತಿ ಅವಮಾನಗೊಳಿಸುತ್ತಿರುವುದು ಮಹಾಪರಾಧ ವೆನಿಸಿತು. ಅಚ್ಯುತರಾಯನು ನಾಗಲಾಪುರದ ಚಿನ್ನಾದೇವಿಯ ಅರಮನೆಗೆ ಬಂದಾಗ ಶಸ್ತ್ರಸಜ್ಜಿತ ರಾಜಭಟರು. ಏಕಾಂಗಿಯಾಗಿ ಬಂದ ಸಾಮ್ರಾಟನನ್ನು ನೋಡಿ ಚಕಿತರಾದರು. ಅವನೊಡನೆ ಸಲಕಂ ಸಹೋದರರು ಏಕೆ ಬರಲಿಲ್ಲವೆಂದು ಅಚ್ಚರಿಗೊಂಡರು. ಸಾಮ್ರಾಟರನ್ನು ಒಳಗೆ ಬಿಡಬೇಕೆ? ಬೇಡವೇ? ಎಂದು ಯೋಚಿಸುತ್ತಿರುವಷ್ಟರಲ್ಲೇ ಅವರನ್ನು ಲಕ್ಷಿಸದೆ, ಅಚ್ಯುತರಾಯನು ನೇರ ಅರ ಮನೆಯನ್ನು ಪ್ರವೇಶಿಸಿ, ಚಿನ್ನಾದೇವಿಯಿದ್ದ ಕೋಣೆಯ ಬಳಿಗೆ ಬಂದಿದ್ದನು.

ತಾನು ಚಿನ್ನಾದೇವಿಯನ್ನು ನೋಡಲು ಬಂದಿರುವ ಸಂಗತಿಯನ್ನು ತಿಳಿ ಸಲು ದಾಸಿಯೊಬ್ಬಳಿಗೆ ತಿಳಿಸಿ, ಅಲ್ಲೇ ಇದ್ದ ಆಸನದಲ್ಲಿ ಕುಳಿತುಕೊಂಡನು. ದಾಸಿಯು ಹಿಂದಿರುಗಿ ಬಂದು, ತನ್ನನ್ನು ಯಾರೂ ನೋಡಬೇಕಾಗಿಲ್ಲವೆಂದು ಚಿನ್ನಾದೇವಿ ತಿಳಿಸುವುದಾಗಿ ವಿಜ್ಞಾಪಿಸಿಕೊಂಡಳು. ತನ್ನನ್ನು ಈ ಸ್ಥಿತಿಗೆ ತಂದ ಅಚ್ಯುತರಾಯನ ಮುಖದರ್ಶನ ಮಾಡಬಾರದೆನ್ನುವಷ್ಟು ಸಿಟ್ಟು ಅವಳಿಗೆ ಬಂದಿತ್ತು. ಈಗ ತಮ್ಮ ಪರಾಭವವನ್ನು ನೋಡಿ, ಆನಂದಿಸಲು ಬಂದಿರುವ ನೆಂದು ತಿಳಿದು ಹಾಗೆ ತಿಳಿಸಿದ್ದಳು. ಪಾಪ! ಇದಕ್ಕೆಲ್ಲ ಅಚ್ಯುತರಾಯನು ಕಾರಣನಲ್ಲ – ಅವನ ಹೆಸರಿನಲ್ಲಿ ಸಲಕಂ ಸಹೋದರರು ನಡೆಸಿರುವ ದುಷ್ಕೃತ್ಯ ಗಳು ಎಂಬುದು ಅವಳಿಗೆ ಹೇಗೆ ತಿಳಿಯಬೇಕು?

ಅಚ್ಯುತರಾಯನು ಈ ಮಾತಿನಿಂದ ಕೋಪಗೊಳ್ಳದೆ ಮತ್ತೆ ದಾಸಿಯ ಮೂಲಕ ತಾನು ಯಾವುದೋ ಮಹತ್ವ ಸಂಗತಿಯಬಗ್ಗೆ, ಅವರೊಡನೆ ಸಂಭಾ ಷಿಸಲು ಬಂದಿರುವುದಾಗಿ ಹೇಳಿಕಳುಹಿಸಿದನು.

"ಆಗಲಿ! ತಮ್ಮನ್ನು ಈ ದುಸ್ಥಿತಿಗೆ ತಂದ ಆ ನೀಚರು ಅದೇನು ಹೇಳಲು ಬಂದಿದ್ದಾರೋ ಅದನ್ನೂ ಕೇಳಿಬಿಡೋಣ!" ಎಂಬ ಧೋರಣೆಯಿಂದ ಅಚ್ಯುತ ರಾಯನನ್ನೇ ನೋಡಲು ಒಪ್ಪಿದ್ದಳು.

"ಮಹಾರಾಣಿಯವರಿಗೆ ಬಹಳ ಅಸಮಾಧಾನವಾದಂತಿದೆ. ನನ್ನಿಂದಾ ಗಿರುವ ಅಪರಾಧವನ್ನು ತಾವು ಕ್ಷಮಿಸಬೇಕು!" ಎಂದು ಕ್ಷಮೆಯಾಚಿಸಿದ ಅಚ್ಯುತರಾಯ, ಕುಳಿತುಕೊಳ್ಳದೆ, ದೂರದಲ್ಲಿ ನೆಟ್ಟ ದೃಷ್ಟಿಯಿಂದ, ತನ್ನನ್ನು ತಿರಸ್ಕಾರದಿಂದ ನೋಡುತ್ತಾ ನಿಂತಿದ್ದ, ಚಿನ್ನಾದೇವಿಯನ್ನು ನೋಡಿ, ಕಳೆ ಗುಂದಿದ ಆ ಮ್ಲಾನ ಮುಖ, ನಿಸ್ತೇಜವಾದ ಆ ಕಣ್ಣುಗಳು ಅವಳ ಮಾನಸಿಕ ಹಾಗೂ ದೈಹಿಕ ಯಾತನೆಯ ಪತಾಕೆಯಂತಿದ್ದವು. ಸರಳ ಹೃದಯದ

ಸಾಮ್ರಾಟರಿಗೆ ಅವರನ್ನು ನೋಡಿ ಕಣ್ಣುಗಳಲ್ಲಿ ನೀರೂರಿತು – ಭಾವೋದ್ವೇಗವನ್ನು ತಡೆಯಲಾರದೆ. ತನ್ನನ್ನು ಹಂಗಿಸಿ, ಭಂಗಿಸಿ, ಅಟ್ಟಹಾಸಗೈಯಲು ಬಂದ ಸಾಮ್ರಾಟನೇ ಎಳೆಮಗುವಿನಂತೆ ಅಳುತ್ತಿರುವುದನ್ನು ಕಂಡು, ಅವಳ ಮುಖದಲ್ಲಿ ಹೆಪ್ಪುಗಟ್ಟಿದ್ದ ತಿರಸ್ಕಾರ ಮಂಜಿನಂತೆ ಕರಗಿತು. ಆದರೂ ಅವಳು ಯಾವ ಮಾತನ್ನೂ ಆಡದೆ ಶಿಲಾವಿಗ್ರಹದಂತೆ ನಿಂತಿದ್ದಳು.

"ನನ್ನೊಡನೆ ಮಾತನಾಡಬಾರದೆಂದು ತಾವು ನಿರ್ಧರಿಸಿದಂತಿದೆ?"

"ಅಷ್ಟೇ ಅಲ್ಲ, ನಿಮ್ಮ ಮುಖಾವಲೋಕನ ಮಾಡಬಾರದೆಂದಿದ್ದೆ!"— ಸಿಡಿಲಿನಂತೆ ನುಡಿದಳು ಚಿನ್ನಾದೇವಿ.

"ಏಕೆ ಮಹಾರಾಣಿ, ನಾನು ನಿಮಗೆ ಮಾಡಿರುವ ಅಪರಾಧವಾದರೂ ಏನು?"

"ಆ ಪ್ರಶ್ನೆಯನ್ನು ನೀವೇ ಕೇಳಿಕೊಳ್ಳಿ!"

"ನನಗೆ ಇದೊಂದೂ ತಿಳಿಯದು. ಆ ಸಲಕಂ ಸಹೋದರರು ನಡೆಸಿರುವ ಈ ದುರ್ವ್ಯಾಪಾರ ನನಗೆ ತಿಳಿದಿರಲಿಲ್ಲ. ಅವರು ನಿಮ್ಮನ್ನು ಕೇವಲ ನಿರ್ಬಂಧದಲ್ಲಿಟ್ಟಿರುವುದಾಗಿಯೂ ವ್ಯಕ್ತಿ ಸ್ವಾತಂತ್ರವಿಲ್ಲದಿದ್ದರೂ, ನಿಮಗೆ ಎಲ್ಲ ಬಗೆಯ ಅನುಕೂಲಗಳನ್ನು ಕಲ್ಪಿಸಿಕೊಟ್ಟಿರುವುದಾಗಿ ತಿಳಿಸಿದ್ದರು. ಆ ಧೂರ್ತರು ನನ್ನನ್ನು ಮೋಸಗೊಳಿಸಿದರು, ನನ್ನನ್ನು ವಂಚಿಸಿರುವರೆಂಬುದು ನನಗೆ ಈಗ ತಿಳಿಯಿತು; ಇದಕ್ಕಾಗಿ ನನಗಾಗುತ್ತಿರುವ ವೇದನೆಯನ್ನು ನೀವು ಅರಿತುಕೊಳ್ಳಲಾರಿರಿ!"

"ಇದೆಲ್ಲಾ ಕಪಟನಾಟಕ – ನಿಮ್ಮ ಮಾತುಗಳಿಗೆ ಬೆರಗಾಗುವವಳು ನಾನಲ್ಲ!"

"ನನ್ನ ಮಾತು ಅಕ್ಷರಶಃ ಸತ್ಯ! ಪಂಪಾಪತಿಯಾಣೆಗೂ ನನ್ನ ಮಾತು ಸತ್ಯ!"

"ಈ ಮಾತಿನಿಂದ ಚಿನ್ನಾದೇವಿಗೆ ಅಚ್ಚರಿಯಾಯಿತು. ಅವಳು ಚಕಿತಳಾಗಿ ಕೇಳಿದಳು,

"ಹಾಗಾದರೆ ನಿಮಗೆ ಇದೊಂದೂ ತಿಳಿದಿಲ್ಲವೆ? ಸುಳ್ಳು! ನಿಮ್ಮ ಅಂಕಿತದಲ್ಲೇ, ಹೆಸರಿನಲ್ಲೇ ಆ ಧೂರ್ತರು ಇಷ್ಟೆಲ್ಲಾ ನಡೆಸಿದ್ದಾರೆ? ಸಾಮ್ರಾಟರ ಆಜ್ಞೆಯಂತೆ ಇಷ್ಟೆಲ್ಲಾ ನಡೆಸಿರುವುದಾಗಿ ತಿಳಿಸಿದ ಆ ದ್ರೋಹಿ ಪೆದ್ದ ತಿರುಮಲ!"

"ನನ್ನನ್ನು ವಂಚಿಸಿದಂತೆ ನಿಮ್ಮನ್ನು ವಂಚಿಸಲು ಹೀಗೆ ಮಾಡಿದ್ದಾನೆ."

"ಯಾರನ್ನು ಯಾರು ಮೋಸಗೊಳಿಸಲು ಹೂಡಿರುವ ಆಟ ಇದು ಯಾರಿಗೆ ಗೊತ್ತು ಅಂತೂ ಸಾಮ್ರಾಜ್ಞಿಯರಾಗಿದ್ದ ನಮಗೆ ಈ ದುರ್ಗತಿ ಬಂತು!

ನಮ್ಮನ್ನು ಹೀಗಿರಿಸುವ ಬದಲು ವಿಧಿ ನಮ್ಮ ಪ್ರಾಣವನ್ನಾದರೂ ತೆಗೆದುಕೊಂಡು ಹೋಗಿದ್ದರೆ ಜೀವಕ್ಕೆ ಎಷ್ಟೋ ನೆಮ್ಮದಿ ಇರುತ್ತಿತ್ತು. ನಮಗೆ ಇಲ್ಲಿ ಆತ್ಮ ಹತ್ಯೆ ಮಾಡಿಕೊಳ್ಳಲೂ ಸ್ವತಂತ್ರವಿಲ್ಲ! ನಮ್ಮ ಜೀವದ ಮೇಲೆ ನಮಗೇ ಅಧಿ ಕಾರವಿಲ್ಲ! ನಮ್ಮ ಮರಣಕ್ಕೂ ಕನಿಕರವಿಲ್ಲ. ನಾವು ಮಾಡಿದ ಪಾಪದ ಫಲ ವನ್ನು ಅನುಭವಿಸಲೇಬೇಕಲ್ಲವೇ?" ಎಂದು ಗಳಗಳನೆ ಅತ್ತಳು ಚಿನ್ನಾದೇವಿ. ಕೃಷ್ಣದೇವರಾಯನ ಕಳೇಬರದ ಮುಂದೂ ಅಳದಿದ್ದ ಚಿನ್ನಾದೇವಿ!

"ಮಹಾರಾಣಿ, ನೀವು ದುಃಖಿಸಬೇಡಿ! ನಿಮ್ಮನ್ನು ಈ ಪರಾಧೀನದಿಂದ ಬಿಡುಗಡೆಮಾಡುತ್ತೇನೆ. ನಾನು – ನೀವು ತಿಳಿದಿರುವಷ್ಟು ಕ್ಷುದ್ರ ಜಂತುವಲ್ಲ! ನನಗೂ ಹೃದಯವಿದೆ! ನಿಮ್ಮ ಸ್ಥಿತಿಗೆ ನಾನೂ ಕಣ್ಣೀರಿಡುತ್ತೇನೆ! ಇದು ನಿಮ್ಮ ಬಾಳಿನ ದುಃಸ್ವಪ್ನವೆಂದು ತಿಳಿಯಿರಿ!...."

"ಆಗಲಿ, ದೈವ ನಮ್ಮ ಹಣೆಯಲ್ಲಿ ಏನೆಲ್ಲ ಬರೆದಿದ್ದಾನೋ ನೋಡೋಣ. ನಿಮ್ಮ ಮಾತನ್ನು ನಂಬುತ್ತೇನೆ....ನಮ್ಮ ಗೋಳಿನ ಕಥೆ ಹಾಗಿರಲಿ. ಈಗ ನೀವು ಬಂದ ಕಾರ‍್ಯವನ್ನು ತಿಳಿಸಿ!"

"ನನ್ನ ಮಾತನ್ನು ನೀವು ಅನ್ಯಥಾ ಭಾವಿಸಬಾರದು – ಇದರಲ್ಲಿ ಯಾವ ದುರಾಲೋಚನೆ ಇಲ್ಲ – ಪಂಪಾಪತಿಯಾಣೆಯಿಟ್ಟು ಹೇಳುತ್ತೇನೆ. ಈಗ ಅಳಿಯ ರಾಮರಾಯ ಮತ್ತು ತಿರುಮಲರಾಯರು ಎಲ್ಲಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ತಿಳಿದಿದ್ದರೆ ದಯವಿಟ್ಟು ತಿಳಿಸಿ!"

"ಏಕೆ ಅವರನ್ನು ಸೆರೆಹಿಡಿಯಲೆಂದೆ?"

"ನಿಮ್ಮಾಣೆಗೂ ಈ ಬಗೆಯ ದುರುದ್ದೇಶ ನನಗಿಲ್ಲ!"

"ನಿಮ್ಮ ಉದ್ದೇಶ?"

ಸುತ್ತಲೂ ಯಾರೂ ಇಲ್ಲದುದನ್ನು ಖಚಿತಪಡಿಸಿಕೊಂಡು ಮೆಲ್ಲನೆ ಹೇಳಿದ,

"ಅವರನ್ನು ಕರೆಸಿಕೊಂಡು, ಅವರ ನೆರವಿನಿಂದ ಈ ದುರುಳರನ್ನು ಅಧಿಕಾರಚ್ಯುತರನ್ನಾಗಿ ಮಾಡಿ, ಸಾಮ್ರಾಜ್ಯದ ಆಡಳಿತವನ್ನು ಅವರಿಗೆ ಒಪ್ಪಿಸ ಬೇಕೆಂದು ನಿರ್ಧರಿಸಿದ್ದೇನೆ."

"ಏಕೆ ನಿಮಗೂ ಸಲಕಂ ಸಹೋದರರ ಆಳ್ವಿಕೆ ಸಾಕಾಯಿತೆ? ಆಗ ನೀವೆ ಅವರನ್ನು ಕರೆಸಿಕೊಂಡು ಮಹಾ ಪ್ರಧಾನರನ್ನಾಗಿ ಮಾಡಿದಿರಿ. ಏಕೆ– ಅವರ ಸೇವೆ ಇಷ್ಟು ಬೇಗನೆ ಬೇಸರವಾಯಿತೆ?" ಅವಳ ಮಾತಿನಲ್ಲಿ ವ್ಯಂಗ್ಯ ತುಳುಕುತ್ತಿತ್ತು.

"ನಾನು ಆಗ ದುಡುಕಿದೆ. ಈಗ ಅದಕ್ಕಾಗಿ ಪಶ್ಚಾತ್ತಾಪ ಪಡುತ್ತಿದ್ದೇನೆ."

"ಇಷ್ಟಕ್ಕೆ ಅವರ ಪೈಶಾಚಿಕ ಪ್ರಭುತ್ವ ಕೊನೆಗೊಂಡರೆ ನಮ್ಮ ಪುಣ್ಯ. ಅದರಿ ಸಾಮ್ರಾಜ್ಯವನ್ನು ಹಾಳುಮಾಡಿವೆ, ವಿಜಯನಗರವನ್ನು ಮಸಣಮಾಡಿ

ಅವರೆಲ್ಲಿ ಅಧಿಕಾರದಿಂದ ಕೆಳಗಿಳಿಯುತ್ತಾರೆ? ಸಾಮ್ರಾಜ್ಯ ರುದ್ರಭೂಮಿಯಾಗದ ಹೊರತು ಆ ಪಿಶಾಚಿಗಳಿಗೆ ತೃಪ್ತಿಯಿಲ್ಲ. ಅಲ್ಲಿಗೆ ಅವರ ಅವತಾರ ಕಾರ್ಯ ಮುಗಿಯುತ್ತದೆ."

"ಆ ಭೀಕರ ಚಿತ್ರವನ್ನು ನೆನೆದೇ, ಅವರು ನನ್ನ ಹತೋಟಿ ಮೀರುವ ಮುನ್ನ ಅವರನ್ನು ಅಧಿಕಾರಚ್ಯುತರನ್ನಾಗಿ ಮಾಡಬೇಕೆಂದಿದ್ದೇನೆ!"

"ಈ ಕಾರ್ಯ ನಿಮ್ಮಿಂದ ಸಾಧ್ಯವೇ?"

"ಸಾಧ್ಯವಾದೀತೆಂದು ನನ್ನ ಭಾವನೆ!"

"ನನಗೆ ಆ ಧೈರ್ಯ ಇಲ್ಲ!"

"ಏಕೆ?"

"ಇದುವರೆಗೆ ನಿಷ್ಕ್ರಿಯರಾಗಿದ್ದ ನೀವು ಒಮ್ಮೆಲೆ ಕಾರ್ಯ ಸಾಧಿಸಲು ಹೊರಟರೆ – ಯಾವ ಪ್ರಯೋಜನವೂ ಆಗಲಾರದೆಂದೇ ನನ್ನ ನಂಬಿಕೆ! ಸಾಮ್ರಾಜ್ಯದ ಸಮಸ್ತ ಅಧಿಕಾರ ಬಲಗಳನ್ನು ತಮ್ಮದಾಗಿಸಿಕೊಂಡು ನಿಮನ್ನು ಕೇವಲ ಹೆಸರಿನ ಸಾಮ್ರಾಟರಾಗಿ ಕೂಡಿಸಿರುವ ಅವರನ್ನು – ಆ ಮದೋನ್ಮತ್ತ ಸೈತಾನ ಕಿಂಕರರನ್ನು – ನೀವು ಅಧಿಕಾರಚ್ಯುತರನ್ನಾಗಿಸುವುದು ಸಾಧ್ಯವೇ? ಇದರಿಂದ ನಿಮ್ಮ ಜೀವಕ್ಕೆ ತೊಂದರೆ ತಂದುಕೊಳ್ಳುತ್ತೀರಿ ಅಷ್ಟೇ."

"ಈ ಕಾರ್ಯದಲ್ಲಿ ನಾನು ಮಡಿದರೂ ಚಿಂತೆಯಿಲ್ಲ! ಈ ಪುಣ್ಯ ಕಾರ್ಯದಲ್ಲಿ ಭಾಗಿಯಾಗುತ್ತೇನೆ!"

"ನಿಮಗೆ ಕೊನೆಗಾದರೂ ವಿವೇಕ ಬಂದಿತಲ್ಲ – ನಮ್ಮ ನಾಡಿನ ಅದೃಷ್ಟ ದೊಡ್ಡದು! ಈಗ ನಿಮ್ಮ ಮಾತಿನಿಂದ ನನಗೆ ಆಸೆಯ ಹೊಂಬೆಳಕು ಮೂಡುತ್ತಿದೆ. ಆದರೆ ಸೂರ್ಯೋದಯವಾಗುವ ಮೊದಲೇ ಮತ್ತೆ ಗಾಡಾಂಧಕಾರ, ಆವರಿಸಿದರೆ ಎನ್ನುವ ಭೀತಿ ಮಾತ್ರ ತಪ್ಪಿಲ್ಲ."

"ಪುರುಷ ಪ್ರಯತ್ನ ನಮ್ಮದು, ಉಳಿದುದು ದೈವೇಚ್ಛೆ!"

"ಪಂಪಾಪತಿಯ ದಯದಿಂದ ನಿಮ್ಮ ಇಚ್ಛೆ ಕಾರ್ಯಗತವಾಗಲಿ! ಈ ಸಾಮ್ರಾಜ್ಯ ಆ ರಾಹುಕೇತುಗಳಿಂದ ಬಿಡುಗಡೆ ಹೊಂದಲಿ!"

"ಇದಕ್ಕಾಗಿ ನಿಮ್ಮ ಸಹಕಾರ, ಸಲಹೆ ಕೋರಲು ಬಂದೆ, ಈ ವಿಷಮ ಪರಿಸ್ಥಿತಿಯಲ್ಲಿ ನಮಗೆ ಅಳಿಯ ರಾಮರಾಯರ ನೆರವು, ಸಹಾಯ ಅತ್ಯಮೂಲ್ಯವಾಗಿದೆ! ಆದರೆ ಅವರು ನಮಗೆ ದುರ್ಲಭವಾಗಿದ್ದಾರೆ – ನಿಮಗೇನಾದರೂ ಅವರು ಸುದ್ದಿ ತಿಳಿಸಿದ್ದರೆ...."

"ನಾವು ಅಷ್ಟು ಭಾಗ್ಯಶಾಲಿಗಳಲ್ಲ. ನಮಗೆ ಅವರ ವಿಷಯವಾಗಿ ಏನೂ ತಿಳಿಯದು. ಸಾಮ್ರಾಜ್ಯ ಉಳಿಯಬೇಕೆಂದು ವಿಧಿಸಂಕಲ್ಪವಿದ್ದರೆ ಉಳಿಯುತ್ತದೆ – ಇಲ್ಲವಾದರೆ ದೈವೇಚ್ಛೆಯಿದ್ದಂತಾಗುತ್ತದೆ."

“ಪ್ರಯತ್ನ ನಮ್ಮದು – ದೈವೇಚ್ಛೆಯಿದ್ದಂತೆ ನಡೆಯಲಿ!” ಎಂದು ಹೇಳಿ ಚಿನ್ನಾದೇವಿಗೆ ಶೀಘ್ರ ಬಿಡುಗಡೆಯ ಆಶ್ವಾಸನವಿತ್ತು ಅಲ್ಲಿಂದ ಬೀಳ್ಕೊಂಡು, ನೇರ ತಿರುಮಲಾದೇವಿಯ ಅಂತಃಪುರವನ್ನು ತಲುಪಿದ.

ಅಲ್ಲಿಯೂ ಅವನು ನಿರೀಕ್ಷಿಸಿದ್ದ ನೋಟವೇ ಎದುರಾಯಿತು. ಆದರೆ ಈಗ ಅಷ್ಟು ನಿರಾಶೆಯಾಗಲಿಲ್ಲ – ಚಿನ್ನಾದೇವಿ ಇದ್ದ ಸ್ಥಿತಿಯಿಂದ ತಿರುಮಲಾದೇವಿಯ ಸ್ಥಿತಿಯನ್ನು ಊಹಿಸಿಕೊಂಡಿದ್ದುದರಿಂದ ಎಲ್ಲೆಲ್ಲೂ ರುದ್ರಶಾಂತಿ ನೆಲಸಿತ್ತು. ಪಹರೆ ಕಾಯುತ್ತಿದ್ದ ಸೈನಿಕರ ತಿರುಗಾಟದ ಗದ್ದಲವಲ್ಲದೆ ಬೇರೆ ಸದ್ದು ಇರಲಿಲ್ಲ.

ತಿರುಮಲಾದೇವಿಯ ಅಂತಃಪುರದ ಮುಂದೆ ಅಚ್ಯುತರಾಯನು ಬಂದು ನಿಂತಾಗ, ಸಾಧಾರಣ ಉಡಿಗೆಯಲ್ಲಿ ಮಿತಪರಿವಾರದೊಡನೆ ಬಂದಿದ್ದ ಅವನನ್ನು ಲಕ್ಷಕ್ಕೆ ತರಲಿಲ್ಲ. ಅವನು ಯಾರೋ ಆಗಂತುಕನೆಂದು ಬಾಗಿಲಬಳಿ ಇದ್ದ ಪಹರೆಯವರು ಅವನನ್ನು ತಡೆದರು.

“ತಿರುಮಲಾದೇವಿಯರನ್ನು ಕಾಣಲು ಪ್ರಧಾನ ಅಮಾತ್ಯರ ಅನುಮತಿ ಬೇಕು.”

“ಸ್ವಯಂ ಸಾಮ್ರಾಟರಿಗೂ ಪ್ರವೇಶವಿಲ್ಲವೇ?”

ಈ ಮಾತು ಕೇಳಿ ಪಹರೆಯವನು ಚಕಿತನಾದ. ಅವನು ಅಚ್ಯುತರಾಯನ ಕಾಲಿಗೆ ಬಿದ್ದು ಕ್ಷಮಾಪಣೆ ಬೇಡಿಕೊಂಡ. ಅಚ್ಯುತರಾಯನು ತಾನು ತಿರುಮಲಾದೇವಿಯನ್ನು ಕಾಣಲು ಬಂದಿರುವುದಾಗಿ ಮಹಾರಾಣಿಯವರಿಗೆ ತಿಳಿಸಬೇಕೆಂದು ಒಬ್ಬ ಸೇವಕನನ್ನು ಕಳುಹಿಸಿದ.

ಅವನು ಕೊಂಚ ಹೊತ್ತಿಗೆ ಹಿಂದಿರುಗಿಬಂದು “ಮಹಾರಾಣಿಯವರು ತಮ್ಮನ್ನು ಕರೆತರಬೇಕೆಂದು ಅಪ್ಪಣೆ ಮಾಡಿದ್ದಾರೆ ಪ್ರಭು!” ಎಂದು ಹೇಳಿ ಅವನನ್ನು ತಿರುಮಲಾದೇವಿಯ ಸಮ್ಮುಖಕ್ಕೆ ಕರೆದೊಯ್ದ.

ತಿರುಮಲಾದೇವಿಯ ಅಂತಃಪುರಕ್ಕೂ, ಚಿನ್ನಾದೇವಿಯ ಅಂತಃಪುರಕ್ಕೂ ಹೆಚ್ಚು ವ್ಯತ್ಯಾಸವಿರಲಿಲ್ಲ. ಒಂದು ಕಾಲದಲ್ಲಿ ಸಹಸ್ರಾರು ದಾಸಿಯರು, ಪರಿಚಾರಕರು ಮೊದಲಾದ ಊಳಿಗದವರಿಂದ ತುಂಬಿದ್ದ ಅಂತಃಪುರ ಇಂದು ಬಟ್ಟ ಬಯಲಾಗಿತ್ತು. ತಿರುಮಲಾದೇವಿಯು ವಾಸಿಸುತ್ತಿದ್ದ ಸ್ಥಳಮಾತ್ರ ಆಶ್ರಮದಂತೆ ನಿರಾಡಂಬರವಾಗಿ ಸಜೀವವಾಗಿತ್ತು. ತಿರುಮಲಾದೇವಿಯ ಮುಖದಲ್ಲಿ ಒಂದು ಬಗೆಯ ಶಾಂತಿ ನೆಲಸಿತ್ತು. ಅವಳೊಬ್ಬ ವಿರಾಗಿಣಿಯಂತೆ ಕಾಣುತ್ತಿದ್ದಳು.

ಅವಳು ಅಚ್ಯುತರಾಯನನ್ನು ಕಾಣುತ್ತಲೇ,

“ಪ್ರಭುಗಳು ಇತ್ತ ದಯಮಾಡಿಸಬೇಕು.” ಎಂದು ಹೇಳಿ ಕೂತುಕೊಳ್ಳಲು ಆಸನ ತೋರಿದಳು.

" ಪ್ರಭುಗಳು ನಮ್ಮ ಭೇಟಿಗೆ ಇಂತಹ ಹೊತ್ತಿನಲ್ಲಿ ಬಂದಿದ್ದೀರಿ! ಕುಳಿತು ಕೊಳ್ಳಲು ಸರಿಯಾದ ಆಸನ ಕೊಡುವ ಸ್ವತಂತ್ರ್ಯ ನನಗಿಲ್ಲ. ಎಲ್ಲಕ್ಕೂ ಪರ ರನ್ನು ಆಶ್ರಯಿಸಬೇಕು" ಎಂದಳು ವ್ಯಾಕುಲಚಿತ್ತಳಾಗಿ.

" ಮಹಾರಾಣಿಯವರೇ ನೀವು ತೋರಿಸುವ ವಿಶ್ವಾಸವೊಂದೇ ಸಾಕು."

" ಕೇವಲ ಮಾತಿನ ಉಪಚಾರದಿಂದ ಪ್ರಯೋಜನವೇನು? ಮನಸ್ಸಮಾ ಧಾನಕ್ಕೆ ಹಾಗೆ ತಿಳಿಯಬೇಕು. ಇಷ್ಟನ್ನೇ ದೊಡ್ಡದೆಂದು ಭಾವಿಸಿದ ನಿಮ್ಮ ಗುಣವೂ ದೊಡ್ಡದು. ಇರಲಿ, ಇಲ್ಲಿಗೆ ಬಂದ ಕಾರ್ಯ?"

" ನಿಮ್ಮೊಡನೆ ಒಂದು ಮಹತ್ಪೂರಿತ ಸಂಗತಿಯನ್ನು ಆಲೋಚಿಸಬೇಕಾ ಗಿತ್ತು."

" ಏನು ಸಂಗತಿ ಅಪ್ಪಣೆ ಕೊಡಿಸಿ."

" ನಿಮಗೆ ಅಳಿಯರಾಮರಾಯರು ಎಲ್ಲಿದ್ದಾರೆ ತಿಳಿದಿದೆಯೆ?"

" ಏಕೆ?"

" ಅವರಿಂದ ನನಗೆ ಸಹಾಯವಾಗಬೇಕಾಗಿತ್ತು."

" ರಾಜದ್ರೋಹಿಗಳೆಂದು ಪರಿಗಣಿತರಾದ ಅವರಿಂದ ಯಾವ ಸಹಾಯ ವಾಗುತ್ತದೆ?"

" ಅವರನ್ನು ರಾಜದ್ರೋಹಿಗಳೆಂದು ತಿಳಿದು ತಪ್ಪುಮಾಡಿದೆ– ಅದಕ್ಕಾಗಿ ನಾನು ಸಾಕಷ್ಟು ದಂಡತೆತ್ತಿದ್ದೇನೆ."

" ಅವರು ರಾಜಧಾನಿಗೆ ಬಂದಾಗ ನನ್ನನ್ನು ಕಾಣುವುದಾಗಿ ಪತ್ರ ಬರೆದಿ ದ್ದರು. ನಾವು ಅವರ ನಿರೀಕ್ಷೆಯಲ್ಲಿದ್ದೆವು. ಆದರೆ ಅವರ ಮೇಲೆ ರಾಜದ್ರೋಹದ ಅಪಾದನೆ ಹೊರೆಸಿ ಅವರನ್ನು ಶಿಕ್ಷಿಸಲು ಕರೆಸಿದ್ದೀರೆಂದು ತಿಳಿದು ಅವರು ಯಾರಿಗೂ ತಿಳಿಸದೆ ತಲೆತಪ್ಪಿಸಿಕೊಂಡರು. ಅನಂತರ ಅವರ ಇತಿಗತಿಗಳೊಂದೂ ತಿಳಿಯಲಿಲ್ಲ. ತಿರುಮಲಾಂಬೆಯನ್ನು ಸಂತೈಸಿ ಸಮಾಧಾನ ಪಡಿಸಲು ಸಾಕು ಸಾಕಾಯಿತು. ನಿಮಗೇನಾದರೂ ಅವರಸುದ್ದಿ ತಿಳಿದಿದ್ದರೆ, ತಿಳಿಯಬೇಕೆಂದಿದ್ದೆ. ಆದರೆ ಈ ಬಗ್ಗೆ ನೀವೂ ನಮ್ಮಷ್ಟೇ ಅಜ್ಞರಾಗಿದ್ದೀರಿ! ಈಗ ಅವರಿಂದ ಯಾವ ಸಹಾಯ ಆಗಬೇಕಾಗಿದೆ ಎಂದು ಕೇಳಬಹುದೆ?"

" ಈಗ ಸಾಮ್ರಾಜ್ಯಕ್ಕೆ ಬಂದಿರುವ ಗಂಡಾಂತರದಿಂದ ಅದನ್ನು ಪಾರು ಮಾಡಲು ಅವರ ನೆರವು ನನಗೆ ಬೇಕಾಗಿದೆ."

" ಈಗ ಸಾಮ್ರಾಜ್ಯಕ್ಕೆ ಯಾವ ಗಂಡಾಂತರ ಬಂದಿದೆ?"

ಈ ಮಾತಿನಿಂದ ಅಚ್ಯುತರಾಯ ಚಕಿತನಾದ.

" ಹಾಗಾದರೆ ನಿಮಗೇನೂ ತಿಳಿಯದೆ?"

" ಯಾವ ಸಂಗತಿ!"

" ಸಲಕಂ ಸಹೋದರರ ದೌರ್ಜನ್ಯ ಕೃತ್ಯಗಳು."

" ಇಲ್ಲಿ ಸೇರಿಕೊಂಡಿರುವ ನಮಗೆ ಹೊರಗಿನ ಜಗತ್ತಿನ ವ್ಯವಹಾರ ಹೇಗೆ ತಿಳಿಯಬೇಕು ?"

" ಇಲ್ಲಿ ನೀವು ನೆಮ್ಮದಿಯಿಂದ ಇದ್ದೀರಾ ?"

" ನಿಮ್ಮ ಪ್ರಶ್ನೆ ವಿಚಿತ್ರವಾಗಿದೆ!"

" ಹೌದು! ನೀವು ನಿಲ್ಲಿ ಸುಖವಾಗಿದ್ದೀರಾ ?"

" ಅಂದರೆ!"

" ಮೊದಲಿನಂತೆ ಸುಖವಾಗಿದ್ದೀರಾ ?"

" ಸುಖವೆಂದರೆ ಏನು ತಿಳಿದಿದ್ದೀರಿ ಪ್ರಭು! ಅದೇನು ಅಂಗಡಿಯ ವಸ್ತುವೇ? ಅದು ಮನಸ್ಸಿನ ಸ್ಥಿತಿ! ಮನಸ್ಸನ್ನು ಚಪಲಗೊಳಿಸುವ ಇಂದ್ರಿಯ ವನ್ನು ನಿಗ್ರಹಿಸಿ, ಸಂಯಮದಿಂದ, ದೇವರು ಕೊಟ್ಟದನ್ನು ಶ್ರದ್ಧೆ, ನಿಷ್ಕಾಮ ಭಕ್ತಿಯಿಂದ ಅನುಭವಿಸುವುದನ್ನು ಕಲಿತರೆ ಎಲ್ಲಿದ್ದರೂ ಅವನು ಸುಖಿ! ನಿತ್ಯ ತೃಪ್ತ! ಅವನ ನೆಮ್ಮದಿ ಯಾರಿಗೂ ಇಲ್ಲ! ಅವನು ಶಿಲೆಯ ಮೇಲಿದ್ದರೂ ಭೋಗಿ! ಸ್ತ್ರೀಸಂಗದಲ್ಲಿದ್ದರೂ ಯೋಗಿ!"

ಇದು ತಾತ್ವಿಕ ದೃಷ್ಟಿಯಾಯಿತು! ಇಂತಹ ಯೋಗಿಗಳು ಸಾವಿರಕ್ಕೊಬ್ಬರು ಸಿಕ್ಕುವುದೂ ದುರ್ಲಭ! ಅಂತಹವರು ಶ್ರೀವ್ಯಾಸರಾಯ ಸ್ವಾಮಿಗಳು – ಕನಕದಾಸರು – ಪುರಂದರದಾಸರು! ದಾಸಕೂಟದ, ಆ ಭಕ್ತಶಿರೋಮಣಿಗಳ ಮಾತು ಬೇರೆ! ಅವರಿಗೆ ಪ್ರಾಪಂಚಿಕ ಚಿಂತೆಗಳಿಲ್ಲ. ಅವರ ಸಂಸ್ಕಾರ ಎಷ್ಟು ಜನ್ಮನಗಳ ಪರಿಪಾಕವೋ! ಅವರ ಮಾತುಬೇಡ – ಈಗ ನಿಮ್ಮ ವಿಷಯ ಹೇಳಿ!"

"ನಾನು ದೇವರು ಕೊಟ್ಟಸ್ಥಿತಿಯಲ್ಲಿ ಆದಷ್ಟು ನೆಮ್ಮದಿಯಿಂದ ಇದ್ದೇನೆ"

" ಅಂದರೆ ನಿಮಗೆ ಸಂಪೂರ್ಣ ನೆಮ್ಮದಿ ಇಲ್ಲವೆಂದಾಯಿತು ?"

" ಹೇಗೆ ಸಾಧ್ಯ! ಅಷ್ಟು ನೆಮ್ಮದಿ ನನಗೆ ಇಲ್ಲ – ದೊರೆತಷ್ಟು ಸೌಲಭ್ಯ ಸಾಕೆಂದು ತಿಳಿಯುವಷ್ಟು ನಿಗ್ರಹ ಬುದ್ಧಿ ಇಲ್ಲ. ಆದರೆ ಎಷ್ಟು ಲಭ್ಯವೋ ಅಷ್ಟು ದೊರೆಯುವುದೇ ಹೊರತು ಇಲ್ಲದನ್ನು ಬೇಕೆಂದರೆ ಅದು ದೊರೆಯುವುದೇ? ಇದರಿಂದ ವೃಥಾ ಕ್ಲೇಶ, ಇರುವ ನೆಮ್ಮದಿಯಭಂಗ, ಅಂತಲೇ ನಾನು ದೇವರಿತ್ತುದರಲ್ಲಿ ಆದಷ್ಟು ನೆಮ್ಮದಿಯಿಂದಿರಲು ಯತ್ನಿಸುತ್ತಿದ್ದೇನೆ"

" ನೀವು ಹಿಂದೆ ಯಾವಾಗಲೂ ಹೀಗೆ ಇರಲಿಲ್ಲ. ಪಟ್ಟಮಹಿಷಿಯಾಗಿ ವೈಭವದಿಂದ ಬಾಳಿ ಬದುಕಿದ್ದವರು! ಈಗ ಬಡಕುಟೀರವಾಸಿಯಾಗಿದ್ದೀರಿ. ನಿಮ್ಮ ಆಹಾರ, ಉಡುಗೆ, ತೊಡುಗೆ ಎಲ್ಲವೂ ಸರಳವಾಗಿದೆ! ಇವುಗಳಿಂದ ನಿಮಗೆ ಹೇಗೆ ತೃಪ್ತಿ ದೊರೆಯುತ್ತದೆ? ಮೊದಲಿನ ಸ್ಥಿತಿ – ಈಗಿನ ಸ್ಥಿತಿ, ಒಂದನ್ನೊಂದು ಅಣಕಿಸುವುದಿಲ್ಲವೇ? ನೀವು ಕಳೆದುಕೊಂಡ ಭಾಗ್ಯಕ್ಕಾಗಿ ಮರುಗುವುದಿಲ್ಲವೆ ?"

"ಹಿಂದಣ ವೈಭವ ಜೀವನವನ್ನು ಇಂದಿನ ಸರಳ ಜೀವನದೊಂದಿಗೆ ಹೋಲಿಸುವಾಗ ವ್ಯಥೆಯಾಗುತ್ತದೆ. ನಿಜ! ಇಲ್ಲದುದಕ್ಕಾಗಿ ವ್ಯಥೆ ಪಟ್ಟರೆ, ಕಳೆದುಕೊಂಡುದು ಮರಳಿ ಬರುವುದಿಲ್ಲ—"

"ದೇವರ ಇಚ್ಛೆ ಇದ್ದರೆ ಏಕೆ ಬರಬಾರದು?"

"ಹೌದು ದೇವರ ಇಚ್ಛೆ ಇದ್ದರೆ ಬರಬಹುದು. ಆದರೆ ಅವನ ಕೃಪೆಗೆ ನಾವು ಪಾತ್ರರಾಗಬೇಕಷ್ಟೇ! ಅವನ ಅನುಗ್ರಹವಿದ್ದರೆ ನಾನೇಕೆ ಈ ಸ್ಥಿತಿಗೆ ಬರುತ್ತಿದ್ದೆ. ಆ ನನ್ನ ಮಗ ತಿರುಮಲದೇವನೇಕೆ ತೀರಿಕೊಳ್ಳುತ್ತಿದ್ದ? ಸಾಮ್ರಾಟರೇಕೆ ಹಠಾತ್ತನೆ ಉದರವ್ಯಾಧಿಗೆ ತುತ್ತಾಗುತ್ತಿದ್ದರು? ಅವರ ಕುಮಾರನ ಕೊಲೆ ಏಕೆ ನಡೆಯುತ್ತಿತ್ತು? ರಾಣಿ ಅನ್ನಪೂರ್ಣಾದೇವಿ ಏಕೆ ಹುಚ್ಚಿಯಾಗುತ್ತಿದ್ದಳು? ನೀವೇಕೆ ನಮ್ಮನ್ನು ಈ ದುಸ್ಥಿತಿಗೆ ತರುತ್ತಿದ್ದಿರಿ! ನಿಜವಾಗಿಯೂ ನಾವು ಹತಭಾಗ್ಯರು! ಪಾಪಿಗಳಾದ ನಮ್ಮ ಕರ್ಮಫಲವನ್ನು ಅನುಭವಿಸಲೇಬೇಕಲ್ಲದೆ ಇದರಿಂದ ನಮಗೆ ಮುಕ್ತಿಯಿಲ್ಲ – ಅಂತಲೇ ನಾನು ಆದಷ್ಟು ನಿಶ್ಚಿಂತೆಯಿಂದಿದ್ದೇನೆ."

"ನಿಮ್ಮ ನಿಶ್ಚಿಂತೆ, ನೆಮ್ಮದಿ, ಚಿತ್ತಶಾಂತಿ ನನಗೆ ಅಸೂಯೆಯನ್ನುಂಟು ಮಾಡುತ್ತಿವೆ. ಸಾಮ್ರಾಟನಾದ ನನಗೆ ಈ ನೆಮ್ಮದಿ ಇಲ್ಲ. ಇದರ ರಹಸ್ಯ ವೇನು?"

"ನೀವು ರಾಜ್ಯಲೋಭದಿಂದ ಅತೃಪ್ತರಾಗಿದ್ದೀರಿ. ನಿರಪರಾಧಿಗಳನ್ನು ವೃಥಾ ತೊಂದರೆಗೀಡು ಮಾಡುತ್ತಿದ್ದೀರಿ! ಸಾಮ್ರಾಜ್ಯ ನಿಷ್ಠ ಸೇವಕರನ್ನು ಅನ್ಯಾಯವಾಗಿ ಶಿಕ್ಷಿಸುತ್ತಿದ್ದೀರಿ! ಇದರಿಂದ ನಿಮಗೆ ನೆಮ್ಮದಿ ಹೇಗೆ ದೊರೆ ತೀತು? ಪ್ರತಿಯೊಂದು ಘಳಿಗೆಯಲ್ಲೂ ದ್ರೋಹ, ಕ್ರೌರ್ಯ, ಮೋಸ, ವಂಚನೆ, ಅತ್ಯಾಚಾರಗಳನ್ನೇ ನೆನೆಯುತ್ತಿರುವವರಿಗೆ ಹೇಗೆ ಚಿತ್ತಶಾಂತಿ ದೊರೆತೀತು? ನೀವು ಇವುಗಳನ್ನು ತೊರೆದು, ಸತ್ಯ, ಧರ್ಮ, ನ್ಯಾಯ, ನಿಷ್ಠೆಗಳ ಪಥದಲ್ಲಿ ನಡೆದರೆ ನಿಮಗೆ ನಿಜವಾದ ಶಾಂತಿ ದೊರಕಬಲ್ಲದೇ ಹೊರತು ರಾಜ್ಯ ಲೋಭ ದಿಂದ ದೊರಕಲಾರದು!"

"ನೀವು ನನ್ನ ಮೇಲೆ ಹೊರಸಿರುವ ಆರೋಪಗಳೆಲ್ಲವೂ ಮಿಥ್ಯಾರೋಪ ಗಳು. ನಾನು ನೀವು ತಿಳಿದಷ್ಟು ನೀಚನಲ್ಲ – ದ್ರೋಹಿಯಲ್ಲ!"

"ಹಾಗಾದರೆ ಸಾಮ್ರಾಟರ ಹೆಸರಿನಲ್ಲಿ ಇಷ್ಟೊಂದು, ಅತ್ಯಾಚಾರಗಳು, ದೌರ್ಜನ್ಯ ಕೃತ್ಯಗಳು, ಕೊಲೆ, ಸುಲಿಗೆಗಳು ಏಕೆ ನಡೆದವು? ಏಕೆ ನಡೆಯು ತ್ತಿವೆ?"

"ಇದಕ್ಕೆ ಕಾರಣ ನಾನಲ್ಲ – ಆ ಸಲಕಂ ಸಹೋದರರು! ನಿಮ್ಮನ್ನು ಈ ಸ್ಥಿತಿಗೆ ತಂದವರು ಅವರು, ನಾನು ಆ ನೀಚರ ಮಾತುಕೇಳಿ ಮೋಸಹೋದೆ.

ನಿಮ್ಮಂಥಹ ಸಾತ್ವಿಕರಿಗೆ ಇಂತಹ ದುಸ್ಥಿತಿ ಬಂದುದನ್ನು ನೋಡಿ ಪಶ್ಚಾತ್ತಾಪವಾಗುತ್ತಿದೆ."

"ನಿಮಗೆ ನಿಜವಾಗಿಯೂ ಪಶ್ಚಾತ್ತಾಪವಾಗಿದ್ದರೆ. ನಿಮ್ಮ ಎಲ್ಲ ಪಾಪಗಳೂ ಪರಿಹಾರವಾಗುತ್ತದೆ. ನೀವು ಈ ಬಗ್ಗೆ ಚಿಂತಿಸಬಾರದು."

"ನನ್ನ ಚಿಂತೆ ಅದಲ್ಲ – ಈ ಸಾಮ್ರಾಜ್ಯಕ್ಕೆ ಗಂಡಾಂತರವಾಗಿ ಬಂದಿರುವ ಆ ವಿಶ್ವಾಸದ್ರೋಹಿಗಳಿಂದ, ಸಾಮ್ರಾಜ್ಯ ಲಕ್ಷ್ಮಿಯನ್ನು ಹೇಗೆ ಪಾರು ಮಾಡಬೇಕೆಂಬುದೇ ಆಗಿದೆ?"

"ಹಾಗಾದರೆ ನಿಮಗೆ ಸಲಕಂ ಸಹೋದರರ ನಿಜಸ್ವರೂಪ ತಿಳಿದಿದೆ ಎಂದಾಯಿತು!"

"ಹೌದು ತಿಳಿದನಂತರವೇ ನಿಮ್ಮ ಭೇಟಿಗೆ ಬಂದುದು. ಈಗ ಅವರಿಂದ ಅಧಿಕಾರವನ್ನು ಕಸಿದುಕೊಂಡು ಅಳಿಯರಾಮರಾಯರಿಗೆ ಕೊಡಬೇಕೆಂದಿದ್ದೇನೆ. ಈಗ ಅವರಿಂದ ಸಾಮ್ರಾಜ್ಯಕ್ಕೆ ಅಮೂಲ್ಯವಾದ ಸಹಾಯವಾಗಬೇಕಾಗಿದೆ."

"ಇಂಥಹ ವಿಷಮಪರಿಸ್ಥಿತಿಯಲ್ಲಿ ಅವರು ಇಲ್ಲದಿರುವುದು ನಮ್ಮ ದುರದೃಷ್ಟ."

"ಎಲ್ಲರಿಗಿಂತಲೂ ನಾನು ಹೆಚ್ಚು ದೌರ್ಭಾಗ್ಯಶಾಲಿ! ವೃಥಾ ಶಂಕೆಯಿಂದ ಅವರಿಗೆ ಅನ್ಯಾಯ ಬಗೆಯಲೆತ್ನಿಸಿದೆ. ದೇವರು ಸರಿಯಾದ ಶಿಕ್ಷೆ ವಿಧಿಸಿದ. ಈಗ ಕಳೆದು ಹೋದುದಕ್ಕೆ ಚಿಂತಿಸಿ ಫಲವಿಲ್ಲ. ಆದರೂ ಅನ್ಯಾಯಗಳನ್ನು ಸರಿಪಡಿಸಬೇಕಾಗಿದೆ – ಮೊದಲು ನಿಮ್ಮನ್ನು ಈ ಸ್ಥಿತಿಯಿಂದ ಬಿಡುಗಡೆಮಾಡಿ ಮೊದಲಿನ ಸ್ಥಾನಮಾನಗಳನ್ನು ಕಲ್ಪಿಸಿಕೊಡಬೇಕಾಗಿದೆ. ಅನಂತರ ಸೆರೆಯಲ್ಲಿರುವ ಅಜ್ಞಾತದಲ್ಲಿರುವ ಸಾಮ್ರಾಜ್ಯನಿಷ್ಠ ಸೇವಕರನ್ನೆಲ್ಲಾ ಆಹ್ವಾನಿಸಿ, ಅವರ ಸಹಾಯದಿಂದ ಈ ಸಲಕಂ ಸಹೋದರರನ್ನು ಪದಚ್ಯುತರನ್ನಾಗಿ ಮಾಡಬೇಕಾಗಿದೆ."

"ದೇವರು ನಿಮಗೆ ಈಗ ಕೊಟ್ಟಿರುವ ಸದ್ಬುದ್ಧಿಯನ್ನು ಮೊದಲೇ ಕೊಟ್ಟಿದ್ದರೆ ಅದೆಷ್ಟು ಒಳಿತಾಗುತ್ತಿತ್ತು! ಎಷ್ಟೊಂದು ಜನರ ರಕ್ತಪಾತ ನಿಲ್ಲುತ್ತಿತ್ತು! ದೈವದ ಮನಸ್ಸಿಗೆ ಅದು ಬರಲಿಲ್ಲ! ಈಗ ನಿಮಗೆ ವಿವೇಕೋದಯವಾಗಿದೆ! ಈ ಸಮಯದಲ್ಲಿ ನೀವು ಎಲ್ಲರಿಗಿಂತಲೂ ಹೆಚ್ಚಿನ ಅನ್ಯಾಯವಾಗಿರುವ ಆ ತಾಯಿಯನ್ನು – ಕುಮಾರನ ವಿಯೋಗದಿಂದ ಹುಚ್ಚಳಾಗಿರುವ ಆ ಅನ್ನಪೂರ್ಣಾದೇವಿಯನ್ನು ಹುಡುಕಿಸಿ, ಅವಳಿಗಾಗಿರುವ ಅನ್ಯಾಯವನ್ನು ಸರಿಪಡಿಸಿ! ನಿಮ್ಮ ಪ್ರಯತ್ನದಲ್ಲಿ ಜಯದೊರಕಲಿ! ದೇವರು ನಿಮಗೆ ಒಳ್ಳೆಯದನ್ನು ಮಾಡಲಿ!" ಎಂದು ಅಚ್ಯುತರಾಯನನ್ನು ಬೀಳ್ಕೊಟ್ಟಳು.

ಅಚ್ಯುತರಾಯನು ತನ್ನ ಅರಮನೆಗೆ ಬಂದೊಡನೆಯೇ ಪ್ರಧಾನ ಅಮಾತ್ಯ ಪೆದ್ದತಿರುಮಲನನ್ನು ಕರೆಸಿಕೊಂಡು, ಅವನಿಂದ ಬಂಧನದಲ್ಲಿರುವ ರಾಣಿಯರನ್ನು ಬಿಡುಗಡೆ ಮಾಡಿಸಿ, ಅವರ ಮೊದಲಿನ ಸ್ಥಾನಮಾನಗಳನ್ನು ಕಲ್ಪಿಸಿಕೊಡುವ ಬಗ್ಗೆ ಆಜ್ಞೆಮಾಡಬೇಕೆಂದು ಆಲೋಚಿಸಿದ. ಸಲಕಂ ಸಹೋದರರನ್ನು ಕರೆಸಬೇಕೆಂದಿರುವಾಗಲೇ ಸಲಕಂಸಹೋದರರು ಬಂದು ಅಚ್ಯುತರಾಯನನ್ನು ಕಂಡರು.

"ನಿಮ್ಮನ್ನು ಇದೇ ತಾನೇ ನೆನೆಯುತ್ತಿದ್ದೆ. ನೆನೆದವರ ಮನದಲ್ಲಿ ಎಂಬಂತೆ ನೀವೇ ಇಲ್ಲಿಗೆ ಬಂದಿರಿ!" ಎಂದ ಅಚ್ಯುತರಾಯ.

"ನಮ್ಮಿಂದ ಏನಾಗಬೇಕಾಗಿತ್ತು ಪ್ರಭು?" ಎಂದು ಪೆದ್ದತಿರುಮಲ ಪ್ರಶ್ನಿಸಿದ.

"ನಾನು ಬಂಧನದಲ್ಲಿರುವ ರಾಣಿಯರನ್ನು ಕಾಣಲು ಹೋಗಿದ್ದೆ!" ಎಂದನು ಅವರಲ್ಲಾಗುವ ಪ್ರತಿಕ್ರಿಯೆಯನ್ನು ತಿಳಿಯಬೇಕೆಂಬಂತೆ.

"ಈ ಸಂಗತಿ ನಮಗೆ ತಿಳಿಯಿತು ಪ್ರಭು!"

"ಆ ರಾಣಿಯರನ್ನು ಕೂಡಲೇ ಬಂಧನದಿಂದ ಬಿಡುಗಡೆಮಾಡಿ ಅವರಿಗೆ ಮೊದಲಿನ ಸ್ಥಾನಮಾನ ಕಲ್ಪಿಸಿಕೊಡಿ!"

"ನಾವು ಅವರನ್ನು ಬಂಧನದಲ್ಲಿಟ್ಟಿಲ್ಲ – ಕೇವಲ ನಿರ್ಬಂಧದಲ್ಲಿಟ್ಟಿದ್ದೇವೆ."

"ಅದು ಎಂತಹ ನಿರ್ಬಂಧವೆಂದು ನಾನು ತಿಳಿದಿದ್ದೇನೆ – ಮೊದಲು ನಾನು ಹೇಳಿದ ಕೆಲಸಮಾಡಿ!"

"ಅಪ್ಪಣೆ ಪ್ರಭು!"

"ಅವರ ಅರಮನೆಗಳಲ್ಲಿದ್ದ ಬೆಲೆಬಾಳುವ ವಸ್ತುಗಳೇನಾದುವು! ಯಾರನ್ನು ಕೇಳಿ ನೀವು ಅಲ್ಲಿಂದ ಅವನ್ನು ಸಾಗಿಸಿದಿರಿ."

"ಮಹಾರಾಣಿಯವರ ಯಾವ ವಸ್ತುಗಳನ್ನೂ ನಾವು ಮುಟ್ಟಲಿಲ್ಲ ಪ್ರಭು! ಮಿತಿಮೀರಿ ಬೆಳೆದಿದ್ದ ಅವರ ಪರಿವಾರವನ್ನು ಮಾತ್ರ ಕಡಿಮೆ ಮಾಡಿದೆವು – ದುಂದುವೆಚ್ಚವನ್ನು ತಪ್ಪಿಸಲು!"

"ಹಾಗಾದರೆ ರಾಣಿವಾಸದವರ ಅನರ್ಘ್ಯ ಬೆಲೆಬಾಳುವ ವಸ್ತುಗಳೇನಾದುವು?"

"ನಿರ್ಬಂಧದಲ್ಲಿರುವ ಅವರೇ ತಮಗೆ ಆ ವಸ್ತುಗಳಿಂದ ಉಪಯೋಗ

ವಿಲ್ಲವೆಂದು, ವರದಾದೇವಿಯರಿಗೆ ಕೆಲವನ್ನು ಬಹುಮಾನವಾಗಿ ಕೊಟ್ಟಿದ್ದಾರೆ ಪ್ರಭು!"

"ಕೆಲವು ನಿಮ್ಮ ಅಂತಃಪುರಗಳನ್ನು ಸೇರಿವೆ ಎಂದು ಕೇಳಿದೆ."

"ಮಹಾರಾಣಿಯವರು ನಮ್ಮ ಸೇವೆಗೆ ಮೆಚ್ಚಿ ಬಹುಮಾನವಾಗಿ ಕೊಟ್ಟ ಕೆಲವು ವಸ್ತುಗಳನ್ನು ಮಾತ್ರ ನಾವು ನಿರ್ವಾಹವಿಲ್ಲದೆ ಸ್ವೀಕರಿಸಬೇಕಾಯಿತು."

"ಚಿಂತೆಯಿಲ್ಲ. ಆ ರಾಣೀ ವಾಸದವರಿಂದ ತೆಗೆದುಕೊಂಡಿರುವ ಪ್ರತಿಯೊಂದು ವಸ್ತುವನ್ನೂ ಕೂಡಲೇ ಹಿಂದಿರುಗಿಸುವ ವ್ಯವಸ್ಥೆ ಮಾಡಿ. ಇನ್ನೊಂದು ವಿಷಯ!"

"ಏನದು ಪ್ರಭು?"

"ಪುತ್ರಶೋಕದಿಂದ ಹುಚ್ಚು ಹಿಡಿದಿರುವ ರಾಣಿ ಅನ್ನಪೂರ್ಣಾದೇವಿಯರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿರುವುದಾಗಿ ನಾವು ಕೇಳಿದೆವು. ಎಲ್ಲಿದ್ದರೂ ಅವರನ್ನು ಹುಡುಕಿಸಿ, ಅವರ ಆಸ್ತಿಯನ್ನು ಅವರಿಗೆ ಹಿಂದಿರುಗಿಸಿ, ಆ ಬಗ್ಗೆ ವರದಿಮಾಡಿ!"

"ಅಪ್ಪಣೆ ಪ್ರಭು!"

"ಬಂಧನದಲ್ಲಿರುವ ಹಿರಿಯರಾದ, ಭರತಾಚಾರ್ಯರನ್ನೂ, ರಾಜವೈದ್ಯರನ್ನೂ ಕೂಡಲೇ ಬಿಡುಗಡೆ ಮಾಡಿ, ನಮ್ಮ ಬಳಿಗೆ ಕಳುಹಿಸಿಕೊಡಿ."

"ಅಪ್ಪಣೆ ಪ್ರಭು!"

"ಅಳಿಯ ರಾಮರಾಯರ ರಾಜದ್ರೋಹಕ್ಕೆ ಕ್ಷಮೆ ದೊರೆತಿದೆ ಎಂದು ತಿಳಿಸಿ ಅವರು ಎಲ್ಲಿದ್ದರೂ ರಾಜಧಾನಿಗೆ ಬರುವ ವ್ಯವಸ್ಥೆ ಮಾಡಿ!"

"ಅಪ್ಪಣೆ ಪ್ರಭು!"

"ವಿದ್ರೋಹಿಗಳೆಂದು ಪರಿಗಣಿತವಾಗಿರುವ ಎಲ್ಲ ಸೆರೆಯಾಳುಗಳನ್ನು ಸೆರೆಮನೆಯಿಂದ ಬಿಡುಗಡೆ ಮಾಡಿ, ಅವರಿಗೆ ಕ್ಷಮಾದಾನ ದೊರೆತಿದೆ ಎಂದು ತಿಳಿಸಿ!"

"ಅಪ್ಪಣೆ ಪ್ರಭು!"

"ಕೃಷ್ಣಪ್ಪನಾಯಕನ ವಂಶದವರು ಎಲ್ಲಾದರೂ ಉಳಿದಿದ್ದರೆ ಅವರನ್ನು ಹುಡುಕಿಸಿ, ಅವರಿಂದ ವಶಪಡಿಸಿಕೊಂಡಿರುವ ಆವರ ಆಸ್ತಿಯನ್ನು ಹಿಂದಿರುಗಿಸಿ ವರದಿಮಾಡಿ!"

"ಆಗಲಿ ಪ್ರಭು!"

"ಇನ್ನು ನೀವು ಹೊರಡಬಹುದು!"

ಈ ಮಾತು ಹೇಳಿ ಅಚ್ಯುತರಾಯ ವಿಶ್ರಮಿಸಿಕೊಳ್ಳಲು ಅಲ್ಲಿಂದ ತೆರಳಿದ. ಸಲಕಂ ಸಹೋದರರು ದಂಗು ಬಡಿದು ನಿಂತಿದ್ದರು! ಅವರಿಗೆ ಇಂದಿನ

ಅಚ್ಯುತರಾಯನ ವರ್ತನೆ ಆಶ್ಚರ್ಯಕರವಾಗಿ ಕಾಣುವುದಕ್ಕಿಂತಲೂ ಅಪಾಯ ಕರವಾಗಿ ಕಂಡಿತು. ಇಷ್ಟು ವರ್ಷಗಳ ಮೇಲೆ ಅಚ್ಯುತರಾಯನು ಅವರನ್ನು ಸೇವಕರಂತೆ ನಡೆಸಿಕೊಂಡಿದ್ದ! ಪ್ರಥಮಬಾರಿಗೆ ಅಚ್ಯುತರಾಯನು ತನ್ನ ಸಾಮ್ರಾಟ ಪದವಿಯನ್ನು ಮೆರೆದಿದ್ದನು! ಅಚ್ಯುತರಾಯನಿಗೆ ಈ ಪೌರುಷ ಹೇಗೆ ಬಂದಿತೆಂದು ತಿಳಿಯಲಿಲ್ಲ! ಯಾರೋ ತಮಗಾಗದವರು ತಮ್ಮ ಎಲ್ಲ ಸಂಚನ್ನೂ ಹೇಗೋ ಕಂಡುಕೊಂಡು, ತಮ್ಮಲ್ಲಿದ್ದ ನಂಬಿಕೆಯನ್ನು ಹಾಳು ಮಾಡಿದ್ದಾರೆ! ಇದಕ್ಕೆ ಹೆಪ್ಪು ಹಾಕುವಂತೆ, ರಾಣಿಯರು ಅಚ್ಯುತರಾಯನಿಗೆ ತಮ್ಮ ವಿರುದ್ಧ ಏನೆಲ್ಲಾ ಹೇಳಿದ್ದಾರೋ ಯಾರು ಬಲ್ಲರು? ಎಂದುಕೊಂಡರು.

ಬಂಧನದಲ್ಲಿರುವ ರಾಣಿಯರನ್ನು ನೋಡಲು ಅವಕಾಶ ಕೊಟ್ಟದು ತಪ್ಪಾಯಿತು! ಅವರನ್ನು ಕಾಣದಿದ್ದರೆ ತಮ್ಮ ಆಳ್ವಿಕೆಯ ಭೀಕರ ಸ್ವರೂಪ ಅವನಿಗೆ ಅರಿವಾಗುತ್ತಿರಲಿಲ್ಲ! ಈಗ ತಮ್ಮ ಅಜಾಗರೂಕತೆಯಿಂದ ತಾವು ಇದು ವರೆಗೆ ಮಾಡಿದ ಎಲ್ಲ ಕಾರ್ಯ ಹಾಳಾಗುವ ಹೊತ್ತು ಬಂದಿತು! ಅವರು ಇದ ಕ್ಕಾಗಿ ತಮ್ಮನ್ನೇ ನಿಂದಿಸಿಕೊಂಡರು.

ಈಗ ಅಚ್ಯುತರಾಯನಿಗೆ ಅವರ ಬಗ್ಗೆ ನಂಬಿಕೆ ಇರಲಿಲ್ಲ. ಅವರು ಮಾಡಿದ್ದ ಪ್ರತಿಯೊಂದು ಕಾರ್ಯದಲ್ಲೂ ತಪ್ಪೆಣಿಸಿದ್ದ! ಅವರು ರಾಜದ್ರೋಹಿ ಗಳೆಂದು ಸೆರೆಯಲ್ಲಿಟ್ಟಿದ್ದವರನ್ನೆಲ್ಲಾ ಬಿಡುಗಡೆ ಮಾಡಲು ತಿಳಿಸಿದ್ದ. ಎಲ್ಲ ಕ್ಕಿಂತ ಭಯಂಕರವಾದ ಸುದ್ದಿ ಎಂದರೆ, ಅಳಿಯ ರಾಮರಾಯ ಮತ್ತು ತಿರು ಮಲರಾಯರಿಗೆ ಕ್ಷಮಾದಾನ ನೀಡಿ, ರಾಜಧಾನಿಗೆ ಅವರನ್ನು ಬರಮಾಡಲು ಮಾಡಿರುವ ಪ್ರಯತ್ನ! ಇದರ ಉದ್ದೇಶ – ತಮ್ಮಿಂದ ಅಧಿಕಾರವನ್ನು ತಪ್ಪಿಸಿ —ಅವರಿಗೆ ಕೊಡುವುದೇ ಇರಬೇಕು! ಈ ಬಗ್ಗೆ ರಾಣಿಯರು ಅವನಿಗೆ ಸಲಹೆ ಮಾಡಿರಬೇಕು ಏಕೋ ಅವರ ಸಂಶಯ ವಿಶ್ವನಾಥನಾಯಕ, ನಾಗಮನಾಯಕರ ಮೇಲೆ ಹರಿಯಿತು. ಯೋಚಿಸಿದಂತೆ ಪರಿಸ್ಥಿತಿ ತಾವು ನಿರೀಕ್ಷಿಸಿದುದಕ್ಕಿಂತಲೂ, ಹೆಚ್ಚು ಅಪಾಯಕರವಾಗಿ ಕಂಡಿತು. ಇದುವರೆಗೆ ಸುಮ್ಮನಿದ್ದಂತೆ ಮುಂದೆಯೂ ಸುಮ್ಮನೆ ಇರಲು ಸಾಧ್ಯವಿಲ್ಲ! ಆದಷ್ಟು ಬೇಗ ಕಾರ್ಯೋನ್ಮುಖರಾಗಲು ನಿರ್ಧರಿ ಸಿದರು. ಅವರು ಮಹಾರಾಣಿ ವರದಾದೇವಿಯೊಂದಿಗೆ ಈ ಬಗ್ಗೆ ಮಾತು ತೆಗೆ ದರು.

ಸಲಕಂ ಸಹೋದರರು ವರದಾದೇವಿಗೆ ಅದೇನು ವರದಿ ಒಪ್ಪಿಸಿದರೋ ಅವಳು ಕೆಣಕಿದ ಸರ್ಪಿಣಿಯಂತೆ, ಬುಸುಗುಟ್ಟುತ್ತಾ ಬಂದು, ಅಚ್ಯುತರಾಯ ನನ್ನು ಕೆಣಕಿದಳು.

"ಪ್ರಭು! ಏನಿದು ಅನ್ಯಾಯ? ಏನು ಹುಚ್ಚಾಟ ಇದು? ನೀವು ಹೀಗೆಲ್ಲಾ ಅವಿವೇಕದಿಂದ ವರ್ತಿಸುವಿರೆಂದು ನಾನು ತಿಳಿದಿರಲಿಲ್ಲ! ಮುಖ್ಯ

ಆ ಮಗುವಿನ ಹಣೆಯಲ್ಲಿ ರಾಜಯೋಗ ಬರೆದಿದೆಯೋ ಇಲ್ಲವೋ? ಅದಕ್ಕೇ ನೀವು ಈ ಬಗೆಯ ಹುಚ್ಚು ಆಜ್ಞೆಗಳಲ್ಲಿ ತೊಡಗಿರುವುದು!" ಎಂದು ಹೇಳಿ ಕಣ್ಣೀರು ಸುರಿಸುತ್ತಾ ಕುಳಿತಳು. ಅವಳು ಬಂದಿದ್ದ ರೀತಿ, ಅವಳ ಆವೇಶ, ಆರ್ಭಟಗಳು, ಕಡೆಗೆ ಅವಳ ಕಂಬನಿಯನ್ನು ನೋಡಿ, ಏನು ಅನಾಹುತ ನಡೆದಿದೆಯೋ ಎಂದು ಅಚ್ಯುತರಾಯ ಹೆದರಿದ.

"ವರದಾ, ಏಕಿಷ್ಟು ಆವೇಶ, ಆರ್ಭಟ? ಗುಡುಗು ಸಿಡಿಲುಗಳ ಆರ್ಭಟ ನಡೆಸಿ ಅನಂತರ ಮಳೆಗರೆದಂತೆ ಏಕೆ ಈ ಕಣ್ಣೀರು? ನನ್ನಿಂದ ಏನು ಅಪಚಾರವಾಯಿತು?" ಎಂದು ಸಂತೈಸಲು ಪ್ರಯತ್ನಪಟ್ಟ.

"ಇದಕ್ಕಿಂತ ಇನ್ನೇನು ಅಚಾತುರ್ಯ ನಡೆಯಬೇಕು? ನೀವು ಮಾಡಿರುವುದು ಒಂದೇ ಎರಡೇ? ನಮ್ಮ ಕುಮಾರನ ಉಜ್ವಲ ಭವಿಷ್ಯಕ್ಕೆ ಮೃತ್ಯುರೂಪವಾಗಿ ಎರಗಿದ್ದೀರಿ? ಕುಮಾರನ ಸಾಮ್ರಾಟತನಕ್ಕೆ ನೀವು ತಿಲತರ್ಪಣ ಕೊಡುವ ಕಾರ್ಯ ನಡೆಸಿದ್ದೀರಿ, ನಿಮ್ಮ ಹುಚ್ಚು ಆಜ್ಞೆಗಳಿಂದ!"

"ನಾನು ಅಂತಹ ಆಜ್ಞೆ ಏನು ಮಾಡಿದೆ?"

"ನೀವು ಆ ನನ್ನ ಸಹೋದರರಿಗೆ ಮಾಡಿರುವ ಆಜ್ಞೆಗಳನ್ನು ಜ್ಞಾಪಿಸಿಕೊಳ್ಳಿ! ನಿಮಗೇ ತಿಳಿಯುತ್ತದೆ ನಿಮ್ಮ ಅವಿವೇಕ!"

"ಓ! ಹಾಗಾದರೆ ನಿನಗೆ ಈ ಎಲ್ಲ ವಿಷಯವನ್ನೂ ವರದಿಮಾಡಿದ್ದಾರೆ ಎಂದಾಯಿತು."

"ಹೌದು, ಎಲ್ಲವನ್ನೂ ವರದಿಮಾಡಿದ್ದಾರೆ, ನೀವು ಮೂರ್ಖರಾಗಿದ್ದ ಮಾತ್ರಕ್ಕೆ ಎಲ್ಲರೂ ಮೂರ್ಖರಾಗುತ್ತಾರೆಯೆ? ಅವರಿಗೆ ನಮ್ಮ ಕುಮಾರನ ಬಗ್ಗೆ ಇರುವ ಹಿತಾಸಕ್ತಿ, ಆದರ, ಅಭಿಮಾನಗಳು ನಿಮಗೆ ಇಲ್ಲವಾಗಿದೆ. ನೀವು ಹುಚ್ಚು ಆಜ್ಞೆಗಳನ್ನು ಮಾಡಿ ಅವರನ್ನು ಗಾಬರಿಗೊಳಿಸಿದ್ದೀರೀ! ಅವರ ಮನಸ್ಸಿಗೆ ಬಹಳ ನೋವುಂಟುಮಾಡಿದ್ದೀರಿ! ಅವರು ಹೇಳಿದ ರೀತಿ ಕಂಡು ಎಲ್ಲವೂ ಕೈಮೀರಿತೆಂದು ತಿಳಿದು ಹೆದರಿ ಓಡಿ ಬಂದೆ! ಸಧ್ಯ ಅವರು ಹೇಳಿದಂತೆ ನಿಮಗೆ ಹುಚ್ಚು ಹಿಡಿದಿಲ್ಲವಲ್ಲಾ ಅಷ್ಟೇ ಸಂತೋಷ!"

"ನನಗೆ ಹುಚ್ಚು ಹಿಡಿದಿದೆ ಎಂದು ಹೇಳಿದರೆ?"

"ನಿಮ್ಮ ಅರ್ಥವಿಲ್ಲದ ಮನಸ್ವೀ ಆಜ್ಞೆಗಳನ್ನು ಕೇಳಿ ಅವರಿಗೆ ಹಾಗೆನ್ನಿಸಿರಬೇಕು!"

"ಹೌದು, ಅವರ ದಬ್ಬಾಳಿಕೆಯನ್ನು ನಾನು ಇನ್ನೂ ಕೆಲವು ಕಾಲ ನೋಡಿಕೊಂಡು ಕಣ್ಮುಚ್ಚಿ ಕುಳಿತಿದ್ದರೆ – ಹುಚ್ಚು ಹಿಡಿಯುತ್ತಿದ್ದುದೂ ಹೆಚ್ಚಲ್ಲ!"

"ಈಗ ಅವರೇನು ಮಾಡಿದರೆಂದು ಅವರ ಮೇಲೆ ಹೀಗೆ ದ್ವೇಷ ಕಾರುತ್ತಿದ್ದೀರಿ?"

"ಅವರು ಮಾಡಿರುವುದನ್ನು ನೆನೆದರೆ ದ್ವೇಷವೊಂದೇ ಅಲ್ಲ ಅವರನ್ನು ಏನು ಮಾಡಿದರೂ ಸಾಲದೆನ್ನುವಷ್ಟು ಭಯಂಕರ ಸಿಟ್ಟು ಬರುತ್ತದೆ!"

"ಈಗ ಅವರಿಂದ ಏನು ಅಪಚಾರವಾಗಿದೆ?"

"ಆಗಿರುವ ಅಪಚಾರ ಒಂದಾಗಿದ್ದರೆ ಹೇಳಬಹುದು. ಅವರು ಮಾಡಿರುವುದೆಲ್ಲವೂ ಅಪಚಾರವೇ! ದ್ರೋಹವೇ! ಅವರು ನನ್ನ ನಂಬಿಕೆ, ವಿಶ್ವಾಸ ಸದುಪಯೋಗಪಡಿಸಿಕೊಂಡಿರುವುದೆಂದು? ಅವರಿಂದ ನಡೆದಿರುವುದೆಲ್ಲಾ— ಅನ್ಯಾಯ, ಅತ್ಯಾಚಾರ, ಹಿಂಸೆ, ಕೊಲೆ, ಸುಲಿಗೆ – ಇವನ್ನು ತಾವು ಮಾಡಿ, ಹೆಸರು ನನಗೆ ಹಚ್ಚಿದ್ದಾರೆ – ಆ ನೀಚ ವಿಶ್ವಾಸ ಘಾತುಕರು!"

"ಈಗ ಅವರು ಏನು ಅಪರಾಧ ಮಾಡಿದರು?"

"ಯಾರು ಅನುಗ್ರಹ ಮಾಡಿ, ನಾನೂ, ನೀನೂ – ನನ್ನ ಮುಂದಿನ ಪೀಳಿಗೆಯವರೂ ಸಾಮ್ರಾಟರಾಗಿ ಮೆರೆಯುವ ಅವಕಾಶ ಕಲ್ಪಿಸಿಕೊಟ್ಟರೋ, ಆ ಸಾಮ್ರಾಟ್ ಕೃಷ್ಣದೇವರಾಯರ ಪ್ರಿಯಪತ್ನಿಯರಿಗೆ ಒದಗಿರುವ ದುಸ್ಥಿತಿಯನ್ನು ನೆನೆದರೆ ರಕ್ತ ಹೆಪ್ಪುಗಟ್ಟುತ್ತದೆ! ಇದನ್ನು ವರ್ಣಿಸುವುದಕ್ಕಿಂತ ನೀನೇ ಹೋಗಿ ನೋಡಿ ಬಾ! ಅವರ ಪರಿಶೋಚನೀಯ ಸ್ಥಿತಿಗೆ ನಾನು ಕಾರಣನಂತೆ! ನನ್ನ ಹೆಸರಿನಲ್ಲಿ ಅವರನ್ನು ಸುಲಿದು ನಿರ್ಬಂಧದಲ್ಲಿಟ್ಟಿದ್ದಾರೆ ಆ ನಿನ್ನ ಸೋದರರು! ನನಗೆ ಸಾಮ್ರಾಟರು ಮಾಡಿದ ಅನುಗ್ರಹಕ್ಕೆ ಆ ನೀಚರು ಸರಿಯಾದ ರೀತಿಯಲ್ಲಿ ಕೃತಜ್ಞತೆಯನ್ನು ಅರ್ಪಿಸಿದ್ದಾರೆ—" ಎಂದು ಅಸಹನೆಯಿಂದ ನುಡಿದ ಅಚ್ಯುತರಾಯ.

"ಇದಕ್ಕಾಗಿ ಅವರಿಗೆ ದ್ರೋಹದ ಆಪಾದನೆ ಹೊರಿಸಬೇಕೆ?"

"ಹೌದು! ಇದು ದ್ರೋಹವಲ್ಲದೆ ಮತ್ತೇನು? ಇದನ್ನು ಯಾರನ್ನು ಕೇಳಿ ಮಾಡಿದರು? ರಾಣಿಯರನ್ನು ಬಂಧನದಲ್ಲಿಡುವ ಮೊದಲು ನನ್ನ ಅನುಮತಿ ಪಡೆದರೆ? ಅವರನ್ನು ರಾಜಕುಟುಂಬದವರೆಂದು ನೋಡದೆ, ಅವರ ಅಂತಃಪುರವನ್ನು ದೋಚಿ, ನಿರ್ಭಾಗ್ಯರನ್ನಿಡುವಂತೆ ಅವರನ್ನು ಸೆರೆಯಲ್ಲಿಟ್ಟಿದ್ದಾರೆ – ಅವರು ಮಾಡಿದ ಯಾವ ಅಪರಾಧಕ್ಕೆ ಈ ಶಿಕ್ಷೆ? ಸಾಮ್ರಾಟನೆಂದರೆ ಅವರಿಗೆ ಅಷ್ಟು ನಿರ್ಲಕ್ಷ್ಯವೆ? ನನ್ನನ್ನು ಸುಲಭವಾಗಿ ವಂಚಿಸಬಹುದೆಂದು ತಿಳಿದುಕೊಂಡಿದ್ದಾರೋ ಏನೋ? ನಾನು ಅವರು ಕುಣಿಸಿದಂತೆ ಕುಣಿಯುವ ಸೂತ್ರದ ಬೊಂಬೆಯಲ್ಲ – ನನಗೂ ವ್ಯಕ್ತಿತ್ವವಿದೆ. ಆಸೆ ಆಕಾಂಕ್ಷೆಗಳಿವೆ! ಎಂದು ಆ ನಿನ್ನ ಸಹೋದರರು ಇನ್ನಾದರೂ ತಿಳಿಯಲಿ."

"ಅವರನ್ನು ನೀವು ತಪ್ಪು ತಿಳಿದುಕೊಂಡಿದ್ದೀರಿ. ಅವರು ಮಾಡಿರುವು

ಡೆಲ್ಲವೂ ನಿಮ್ಮ ಅಭ್ಯುದಯಕ್ಕಾಗಿಯೆ ?"

"ಹೌದು ! ಮಹಾರಾಣಿಯರನ್ನು ಇಷ್ಟು ನಿಕೃಷ್ಟವಾಗಿ ಕಂಡು ಸೆರೆಯಲ್ಲಿಟ್ಟಿರುವುದೂ ನನ್ನ ಅಭ್ಯುದಯದ ಸಲುವಾಗಿಯೆ ?"

"ನೀವು ಶಾಂತವಾಗಿ ಆಲೋಚಿಸಿದರೆ ಈ ಸಂಗತಿ ನಿಮಗೇ ತಿಳಿದೀತು ! ನೀವು ದ್ರೋಹಿಗಳ ಮಾತನ್ನು ನಂಬಿ ಹೀಗೆ ಹುಚ್ಚೆದ್ದು ಕುಣಿಯುವುದರಿಂದೆ, ಯಾವ ಪ್ರಯೋಜನವೂ ಇಲ್ಲ. ಇದರಿಂದ ನಿಮಗೇ ಕೆಡುಕು !"

"ಇದನ್ನು ನೀನು ಹೊಸದಾಗಿ ತಿಳಿಸಬೇಕಾಗಿಲ್ಲ ! ಈ ನಿನ್ನ ಸೋದರರನ್ನು ನಂಬಿದುದಕ್ಕೆ ಎಂತಹ ಕೆಡಕಾಗಿದೆ ಎಂದು ನನಗೆ ಗೊತ್ತು ! ಹೊಸದಾಗಿ ಆಗುವುವೇನೂ ಉಳಿದಿಲ್ಲ ! ಅವರ ಸ್ವಾರ್ಥಸಾಧನೆ ಎಷ್ಟೆಂದು ನಾನು ಬಲ್ಲೆ !"

"ಇದುವರೆಗೆ ಇಲ್ಲದ ಸ್ವಾರ್ಥ ಅದೇನು ಕಂಡಿರಿ ?"

"ಅವರಿಂದ ನನಗೆ, ನಿನಗೆ - ಮಾತ್ರವಲ್ಲ. ಇಡೀ ಸಾಮ್ರಾಜ್ಯಕ್ಕೆ ಮೃತ್ಯು ಕಾದಿದೆ ! ಅವರು ತಮ್ಮ ಪೈಶಾಚಿಕ ಪ್ರಭುತ್ವದಿಂದ ಸಾಮ್ರಾಜ್ಯವನ್ನು ಮಸಣವನ್ನಾಗಿ ಮಾಡಲು ನಿಶ್ಚಯಿಸಿದ್ದಾರೆ !"

"ಅವರ ಬಗ್ಗೆ ಯಾರೋ ನಿಮ್ಮ ಮನಸ್ಸನ್ನು ಸಂಪೂರ್ಣವಾಗಿ ಕೆಡಿಸಿದ್ದಾರೆ."

"ಯಾರೂ ಕೆಡಿಸಬೇಕಾಗಿಲ್ಲ – ಕೈ ಹುಣ್ಣಿಗೆ ಕನ್ನಡಿ ಬೇಕಾಗಿಲ್ಲ."

"ಅವರ ಮೇಲೆ ವೃಥಾ ಸಂಶಯ ತಾಳುವುದಕ್ಕಿಂತ, ಅವರನ್ನು ಅಧಿಕಾರದಿಂದ ತಪ್ಪಿಸಿ, ವಿಚಾರಣೆಗೆ ಗುರಿಪಡಿಸಿ, ತಪ್ಪಿತಸ್ಥರಾಗಿದ್ದರೆ ಶಿಕ್ಷಿಸಿ ! ಅವರು ಬೇಡವೆನ್ನುವುದಿಲ್ಲ. ಆದರೆ ಈ ಬಗೆಯ ವಿಶ್ವಾಸದ್ರೋಹದ ಆರೋಪಣೆಗಳನ್ನು ಮಾತ್ರ ಅವರು ಸಹಿಸರು!"

"ಅದು ಮುಂದಿನ ಮಾರ್ಗ ! ತಿಳಿದೇ ಇದೆ!"

"ನೀವು ಅವರಿಂದ ಅಧಿಕಾರ ತಪ್ಪಿದರೆ, ರಾಜ್ಯಾಡಳಿತದ ಭಾರ ಹೊರುವವರು ಯಾರು ?"

"ನಾನೇ !"

"ನೀವು ರಾಜ್ಯಾಡಳಿತಕ್ಕೆ ಕೈಹಾಕಿದರೆ, ಸಾಮ್ರಾಜ್ಯ ಮೂರುದಿನ ಬಾಳಲಾರದು !"

"ಮುನ್ನೂರು ವರ್ಷ, ನಿನ್ನ ದೈತ್ಯ ಸಹೋದರರ ಕೈಗೆ ಸಿಕ್ಕಿ, ಸಾಮ್ರಾಜ್ಯದ ಜನತೆ ನರಳುವುದಕ್ಕಿಂತ, ಮೂರುದಿನಗಳ ಬಾಳು ಲೇಸು !"

"ನೀವು ಅವರನ್ನು ಅಧಿಕಾರದಿಂದ ತಪ್ಪಿಸಿ ದ್ರೋಹಿಗಳಾದ ಆ ಅಳಿಯ ರಾಮರಾಯ ಹಾಗೂ ತಿರುಮಲರಾಯರಿಗೆ ಅಧಿಕಾರಕೊಡಲು ನಿಶ್ಚಯಿಸಿರುವಿರಂತೆ ಹೌದೆ ?"

"ಹೌದು!"

"ಇದು ಎಂತಹ ತಿಳಿಗೇಡಿತನ – ಎಂತಹ ಅವಿವೇಕವೆಂದು ಆಲೋಚಿಸಿದ್ದೀರಾ?"

"ನಿನ್ನ ಸೋದರರನ್ನು ನಂಬುವುದಕ್ಕಿಂತಲೂ ತಿಳಿಗೇಡಿತನವೆ?"

"ಹೌದು! ಸಿಂಹಾಸನಕ್ಕಾಗಿ, ಸಾಮ್ರಾಜ್ಯದ ವಿರುದ್ಧ ದ್ರೋಹ ಬಗೆಯುತ್ತಿರುವ ಅವರಿಗೆ ರಾಜ್ಯಾಡಳಿತ ವಹಿಸಿದರೆ, ತಿಳಿಗೇಡಿತನವಾಗದೆ?"

"ಅಳಿಯ ರಾಮರಾಯರು ದ್ರೋಹಿಗಳಲ್ಲ – ಅವರ ಸಾಮ್ರಾಜ್ಯ ನಿಷ್ಠೆ ಎಷ್ಟೆಂದು ನನಗೆ ತಿಳಿದಿದೆ? ಅವರನ್ನು ದ್ರೋಹಿಗಳೆಂದು ಹೇಳಿ ಸ್ವಾರ್ಥ ಸಾಧಿಸಿಕೊಳ್ಳುತ್ತಿರುವವರೇ ನಿಜವಾದ ದ್ರೋಹಿಗಳು?"

"ಹಾಗಾದರೆ ಅಳಿಯ ರಾಮರಾಯರಿಗೆ ಕ್ಷಮಾದಾನ ನೀಡಿ ರಾಜಧಾನಿಗೆ ಕರೆಸಿಕೊಳ್ಳುವುದು ನಿಶ್ಚಯವೇ?"

"ಹೌದು!"

"ಇದೇ ನಿಮ್ಮ ಕಡೆಯ ನಿರ್ಧಾರವೇ?"

"ಹೌದು!"

"ನೀವೇಕೆ, ಈ ಬಗ್ಗೆ ಇಷ್ಟು ಹಠ ಹಿಡಿದಿರುವಿರೋ ನನಗೆ ತಿಳಿಯದಾಗಿದೆ. ಇದರಿಂದ ನಿಮಗೆ, ಸಾಮ್ರಾಜ್ಯಕ್ಕೆ ವಿಪತ್ತು ಖಂಡಿತ! ಈ ಸಹೋದರರನ್ನು ಅಧಿಕಾರಚ್ಯುತರನ್ನಾಗಿ ಮಾಡಿದಂದೇ ನಿಮ್ಮ ಪತನ!"

"ನನ್ನ ಪತನವಾದರೂ ಸರಿ? ಆ ನಿನ್ನ ಸಹೋದರರ ಪೈಶಾಚಿಕ ಪ್ರಭುತ್ವಕ್ಕೆ ಕೊನೆತರಬೇಕು? ಸಾಮ್ರಾಜ್ಯ ಮಸಣವಾಗುವ ಮುನ್ನ ಅದನ್ನುಳಿಸಬೇಕು?"

"ನಿಮಗೆ ಹುಚ್ಚು ಹಿಡಿದಿದೆ!"

"ಹುಚ್ಚು ಹಿಡಿದಿರುವುದು ನನಗಲ್ಲ! ಆ ನಿನ್ನ ಸೋದರರಿಗೆ! ಅಧಿಕಾರದ ಹುಚ್ಚು!"

"ಹುಚ್ಚರೊಡನೆ ವಾದಿಸಿ ಪ್ರಯೋಜನವಿಲ್ಲ! ಆದರೆ ಒಂದು ಮಾತು ಮಾತ್ರ ನಿಶ್ಚಯ – ನಿಮ್ಮ ಹುಚ್ಚು ಆಜ್ಞೆಗಳನ್ನು ಕಾರ್ಯಗತಮಾಡಲು ಸಾಧ್ಯವಿಲ್ಲ! ಕುಮಾರನ ಸಲುವಾಗಿ, ನಾಳಿನ ಸಿಂಹಾಸನದ ಭದ್ರತೆಗಾಗಿ, ನಿಮ್ಮ ಆಜ್ಞೆಗಳನ್ನು ನಡೆಸಲು ಸಾಧ್ಯವಿಲ್ಲ! ಇದು ಖಂಡಿತ!" ಎಂದು ಹೇಳಿ ಅಲ್ಲಿ ನಿಲ್ಲದೆ ಬಿರುಗಾಳಿಯಂತೆ ಹೊರಟು ಹೋದಳು.

ತನ್ನ ಎದುರಿಗೇ ತನ್ನ ಆಜ್ಞೆಗಳನ್ನು ಧಿಕ್ಕರಿಸಿ ಹೊರಟುಹೋದ ಪತ್ನಿಯನ್ನು ನೋಡುತ್ತಾ ಶೂನ್ಯಮನಸ್ಕನಾಗಿ ನಿಂತ ಅಚ್ಯುತರಾಯನಿಗೆ – ಅವಳು ಹೇಳಿದ್ದ ಮಾತುಗಳನ್ನು ನೆನೆದು ಹುಚ್ಚುಹಿಡಿದಂತೆ ಆಯಿತು! ಅವನಿಗೆ ಅವಳು

ಹೇಳಿದ್ದ ಒಂದೊಂದು ಮಾತುಗಳೂ ಸುತ್ತಿಗೆಯ ಪೆಟ್ಟಿನಂತೆ ಬೀಳುತ್ತಿತ್ತು! "ದ್ರೋಹಿಗಳಿರಾ ನೀವು ನನ್ನ ಕತ್ತು ಹಿಸುಕುತ್ತಿದ್ದೀರಿ" ಎಂದು ಗಟ್ಟಿಯಾಗಿ ಚೀರಿದ. ಅದನ್ನು ಕೇಳಿ ಅಲ್ಲಿದ್ದ ಸೇವಕರಿಗೆ, ಅಚ್ಯುತರಾಯನಿಗೆ ನಿಜವಾಗಿಯೂ ಹುಚ್ಚು ಹಿಡಿದಿದೆ ಎಂದೆನಿಸಿ ಹತ್ತಿರ ಬರಲು ಹೆದರಿದರು. ಅಲ್ಲಿದ್ದರೆ ತನ್ನ ಬುದ್ಧಿ ಪಲ್ಲಟವಾಗುವುದು ಖಂಡಿತವೆಂದು ತಿಳಿದು ಅವನು ಅರಮನೆಯ ಉದ್ಯಾನಕ್ಕೆ ಬಂದ. ಅಲ್ಲಿನ ಚಂದ್ರಕಾಂತ ಶಿಲೆಯ ಆಸನದ ಮೇಲೆ ತಂಗಾಳಿಗೆ ಮೈಯೊಡ್ಡಿ, ಆಗಸವನ್ನು ನೋಡುತ್ತಾ ಕುಳಿತ! ಆಗಸದಲ್ಲಿ ಚಂದ್ರೋದಯವಾಗಿತ್ತು! ಎಲ್ಲೆಲ್ಲೂ ಬೆಳದಿಂಗಳ ಹೊಳೆ ಹರಿದಿತ್ತು. ಇದ್ದಕ್ಕಿದ್ದಂತೆ ಎಲ್ಲಿಂದಲೋ ಕಪ್ಪುಮೋಡವೊಂದು ತೇಲಿಬಂದು ಚಂದ್ರನಿಗೆ ಮರೆಯಾಗಿ ನಿಂತಿತು. ಜಗತ್ತಿಗೇ ಅಂಧಕಾರ ಕವಿಯಿತು. ಎಲ್ಲವೂ ಕೆಲವೇ ಕ್ಷಣ. ಮರುಕ್ಷಣದಲ್ಲಿ – ಆ ಕಪ್ಪುಮೋಡ ಚಲಿಸಿ, ಮೊದಲಿನ ಬೆಳದಿಂಗಳ ಆಹ್ಲಾದ ಜಗತ್ತನ್ನು ಆವರಿಸಿತು. ಅಂತೆಯೇ ಸಲಕಂ ಸೋದರರಿಂದ ಒದಗಿರುವ ಸಾಮ್ರಾಜ್ಯ ಚಂದ್ರನಿಗೆ ಬಂದಿರುವ ಗಂಡಾಂತರ ಕಳೆಯಲೆಂದು ಅವನ ಹೃದಯ ಹಾರೈಸಿತು.

ಅಚ್ಯುತರಾಯನು, ಸಲಕಂ ಸಹೋದರರಿಗೆ ಆಜ್ಞೆಮಾಡಿ ಒಂದು ವಾರ ಕಳೆದರೂ, ಅವನ ಆಜ್ಞೆ ಕಾರ್ಯಗತವಾಗುವ ಸೂಚನೆ ಕಾಣಲಿಲ್ಲ. ಅಂತಲೇ ತನ್ನನ್ನು ಕಾಣದೆ ತಪ್ಪಿಸಿಕೊಂಡು ತಿರುಗುತ್ತಿದ್ದ, ಸಲಕಂ ಸಹೋದರರನ್ನು ಕರೆಸಿಕೊಂಡು ಈ ಬಗ್ಗೆ ಪ್ರಶ್ನಿಸಿದ.

"ಅಮಾತ್ಯರೇ, ನಾನು ಆಜ್ಞೆ ಮಾಡಿದ ಸಂಗತಿಗಳು ಕಾರ್ಯಗತವಾದವೆ?"

ಈ ಪ್ರಶ್ನೆಗೆ ಉತ್ತರ ಕೊಡದೆ ಅವರು ಮೌನವಾಗಿ ಕುಳಿತುದನ್ನು ಕಂಡು "ಏಕೆ ಮೌನವಾದಿರಿ?" ಮತ್ತೆ ಕೇಳಿದ.

"ಏನು ಉತ್ತರ ಕೊಡಬೇಕೆಂದು ತೋರದಾಗಿದೆ ಪ್ರಭು?"

"ಏಕೆ?"

"ಪರಿಸ್ಥಿತಿ ಹಾಗೆ ಬಂದಿದೆ!"

"ಹೇಗೆ ಬಂದಿದೆ?"

"ನಿಮ್ಮ ಆಜ್ಞೆಯನ್ನು ಪಾಲಿಸಿದರೆ ಒಂದು ಗಂಡಾಂತರ. ಪಾಲಿಸದಿದ್ದರೆ ಮತ್ತೊಂದು ಗಂಡಾಂತರ. ಏನು ಮಾಡಬೇಕೆಂದು ತಿಳಿಯದೆ ಸುಮ್ಮನಿದ್ದೇವೆ ಪ್ರಭು!"

"ನಾನು ಸಾಮ್ರಾಟ. ನನ್ನ ಆಜ್ಞೆಗಳನ್ನು ಕಾರ್ಯಗತ ಮಾಡುವುದು ನಿಮ್ಮ ಕರ್ತವ್ಯ! ಇದಕ್ಕೇಕೆ ಹಿಂದೆ ಮುಂದೆ ತುಳಿಯಬೇಕು?"

"ಇದು ಕೇವಲ ಕರ್ತವ್ಯದ ಪ್ರಶ್ನೆ ಮಾತ್ರವಲ್ಲ ಪ್ರಭು! ಇದು ಸಾಮ್ರಾ-

ಜ್ಯದ ಹಿತ್ತಾಸಕ್ತಿಯ ಪ್ರಶ್ನೆಯೂ ಆಗಿದೆ!"

"ನನ್ನ ಆಜ್ಞೆಯನ್ನು ಕಾರ್ಯಗತ ಮಾಡಿದರೆ ಸಾಮ್ರಾಜ್ಯದ ಹಿತಾಸಕ್ತಿಗಳಿಗೆ ಧಕ್ಕೆ ಬರುವುದೆ?"

"ಹೌದೆಂದು ವಿಷಾದದಿಂದ ಹೇಳಬೇಕಾಗಿದೆ."

"ಹೇಗೆ ಧಕ್ಕೆ ಬರುತ್ತದೆ!"

"ರಾಜದ್ರೋಹಿಗಳೂ, ಸಿಂಹಾಸನದ ಮೇಲೆ ಕಣ್ಣಿಟ್ಟು ವಿದ್ರೋಹದ ಪಿತೂರಿಗಳನ್ನು ಮಾಡಿದವರೂ ಆದ ವ್ಯಕ್ತಿಗಳಿಗೆ ಕ್ಷಮಾಧಾನ ದೊರೆತರೆ—ಬಂಧ ಮುಕ್ತಿ ದೊರೆತರೆ, ಅವರಿಂದ ಸಾಮ್ರಾಜ್ಯಕ್ಕೆ ಗಂಡಾಂತರ ತಪ್ಪುವುದಿಲ್ಲ."

"ಯಾರು ವಿದ್ರೋಹಿಗಳು, ಯಾರು ಸಾಮ್ರಾಜ್ಯನಿಷ್ಠ ಸೇವಕರು ಎಂಬುದನ್ನು ನಿರ್ಧರಿಸಬೇಕಾದವನು ನಾನು. ನನ್ನ ಆಜ್ಞೆಗಳನ್ನು ಕಾರ್ಯರೂಪಕ್ಕೆ ತರುವುದಷ್ಟೇ ನಿಮ್ಮ ಕೆಲಸ."

"ನಾವು ಪ್ರಭುಗಳ ಪಾದಸೇವಕರೆಂತೋ, ಅಂತೇ ಸಾಮ್ರಾಜ್ಯನಿಷ್ಠ ಸೇವಕರೂ ಆಗಿದ್ದೇವೆ! ಅದರಲ್ಲಿಯೂ ರಾಜ್ಯಾಡಳಿತದ ಮಹತ್ತರ ಹೊರೆಯನ್ನು ಹೊತ್ತಿರುವ ನಮ್ಮ ಜವಾಬ್ದಾರಿ ಇನ್ನೂ ಜಟಿಲವಾದುದು! ನಮಗೆ ಸಾಮ್ರಾಜ್ಯದ ಹಿತರಕ್ಷಣೆಯುಳಿದು, ಬೇರೆ ಯಾವ ವೈಯುಕ್ತಿಕ ಆಸೆ ಆಕಾಂಕ್ಷೆಗಳೂ ಇಲ್ಲ. ಈ ಇಬ್ಬಗೆಯ ವ್ಯಕ್ತಿತ್ವದಲ್ಲಿ ನಾವು ಪ್ರಭುಗಳ ಪಾದಸೇವಕರೆನ್ನುವುದನ್ನು ಕಡೆಗಾಣಿಸಬೇಕಾಯಿತು ಪ್ರಭು!"

"ನನ್ನ ಆಜ್ಞೆಗಳನ್ನು ನಡೆಸಲಾಗದ ಮೇಲೆ ನೀವೇಕೆ ಅಧಿಕಾರದಲ್ಲಿದ್ದೀರಿ?"

"ನಾವು ಜನತೆಯನ್ನು ಪ್ರತಿನಿಧಿಸುವ ಮಂತ್ರಿಮಂಡಲದ ತೀರ್ಪಿಗೆ ಬದ್ಧರೇ ಹೊರತು, ಪ್ರಜಾಪಾಲಕರಾದ, ಪ್ರಭುಗಳ ತೀರ್ಪಿಗೆ ಬದ್ಧರಲ್ಲ!"

"ನಿಮ್ಮಿಂದ ಜನತೆಗೆ ಅನ್ಯಾಯವಾಗಿದೆ. ಜನತೆಯನ್ನು ನಿಮ್ಮ ದುಷ್ಟ ಶಾಸನಗಳಿಂದ ಹಿಂಸಿಸಿದ್ದೀರಿ! ನಿಮ್ಮ ಕಪಿಮುಷ್ಠಿಯಲ್ಲಿ ಸಿಕ್ಕಿ ಅವರು ನರಳುತ್ತಿದ್ದಾರೆ!"

"ನಮ್ಮಿಂದ ದೇಶಕ್ಕೆ, ಜನತೆಗೆ ಅನ್ಯಾಯವಾಗಿದೆಯೋ ಇಲ್ಲವೋ ಅದನ್ನು ಪ್ರಜೆಗಳು ನಿರ್ಧರಿಸಬೇಕಾಗಿದೆ ಪ್ರಭು!"

"ಪ್ರಜೆಗಳ ಹಿತರಕ್ಷಣೆಯ ಭಾರ ಹೊತ್ತಿರುವ ನನಗೆ ಆ ಅಧಿಕಾರವಿದೆ!"

"ಅಂತಲೇ ಈ ಅಧಿಕಾರ, ಮಹಾರಾಣಿಯವರಿಗೂ, ರಾಜಕುಮಾರರಿಗೂ ಇದೆ!"

"ಅವರು ನನ್ನ ಆಜ್ಞಾಧಾರಕರು!"

"ಹಾಗೆಂದು ಅವರ ಮೇಲೆ, ನಿಮ್ಮ ಇಷ್ಟವನ್ನು ಹೇರುವುದು ತಪ್ಪು

ಪ್ರಭು! ಅದರಲ್ಲೂ ರಾಷ್ಟ್ರದ ಹಿತಸಂರಕ್ಷಣೆಯ ವಿಷಯದಲ್ಲಿ – ಇದು ಮಹಾಪರಾಧ?"

"ನನ್ನ ಆಜ್ಞೆಯಿಂದ ರಾಷ್ಟ್ರ ಕಲ್ಯಾಣವಾಗುವುದೆಂದು ನನಗೆ ಅಚಲವಾದ ನಂಬಿಕೆ ಇದೆ!"

"ಇದು ರಾಷ್ಟ್ರಘಾತುಕವಾಗುವುದೆಂದು ಉಳಿದವರೆಲ್ಲರ ಅಭಿಪ್ರಾಯ!"

"ನಾನು ಸಾಮ್ರಾಟ! ನೀವು ನನ್ನ ಆಜ್ಞಾಧಾರಕರು!"

"ಅವರು ಸಾಮ್ರಾಜ್ಞಿ! ಅವರು ಆಜ್ಞಾಧಾರಕರೂ ಹೌದು!"

"ನನ್ನ ಆಜ್ಞೆಯನ್ನು ಧಿಕ್ಕರಿಸಲು ಮಹಾರಾಣಿಯವರು ಹೇಳಿದ್ದಾರೆಯೆ?"

"ಹೌದು ಪ್ರಭು! ನಡೆದ ಸಂಗತಿಯನ್ನು ಹೇಳಿದರೆ ತಾವು ಅನ್ಯಥಾ ಭಾವಿಸಬಾರದು! ಇವುಗಳು ಅರ್ಥವಿಲ್ಲದ ಹುಚ್ಚು ಆಜ್ಞೆಗಳೆಂದು ಮಹಾರಾಣಿಯವರ ಅಭಿಪ್ರಾಯ!"

"ಹಾಗಾದರೆ ನನ್ನ ಆಜ್ಞೆಯನ್ನು ನೀವು ತಿರಸ್ಕರಿಸುತ್ತೀರಾ!"

"ತಿರಸ್ಕರಿಸುವುದಿಲ್ಲ ಪ್ರಭು! ಆದರೆ ಪುರಸ್ಕರಿಸಲಾರೆವು!"

"ಏಕೆ?"

"ಲೋಕ ಹುಚ್ಚರ ಮಾತುಗಳನ್ನು ಅಷ್ಟಾಗಿ ಪರಿಗಣಿಸುವುದಿಲ್ಲ!"

"ನನ್ನ ಮಾತು ನಿಮಗೆ ಹುಚ್ಚರ ಮಾತಾಯಿತೆ?"

"ಸತ್ಯ ಹೇಳಿದರೆ ನೀವು ಪೆಚ್ಚಾಗಬಾರದು!"

"ನಾನು ಹುಚ್ಚನೆ?"

"ಇದು ತಮಗೇ ತಿಳಿದಿದೆ!"

"ಅಮಾತ್ಯರೇ, ಸಾಕು ಚರ್ಚೆ! ಈಗ ಸ್ಪಷ್ಟವಾಗಿ ಹೇಳಿ. ನೀವು ನನ್ನ ಆಜ್ಞೆಗಳನ್ನು ಕಾರ್ಯಗತ ಮಾಡುವಿರೋ ಇಲ್ಲವೊ?"

"ದೇಶದ ಹಿತದೃಷ್ಟಿಯಿಂದ ಮಾಡಲಾರೆವು ಪ್ರಭು!"

"ಹಾಗಾದರೆ ನಿಮ್ಮ ಅಧಿಕಾರವನ್ನು ಬಿಟ್ಟುಕೊಡಿ!"

"ಅದು ಸಾಧ್ಯವಿಲ್ಲ ಪ್ರಭು!"

"ನೀವು ಅಧಿಕಾರವನ್ನು ಬಿಟ್ಟು ಕೊಡದಿದ್ದರೆ ನಾನು ಬಲಾತ್ಕರಿಸಬೇಕಾಗುತ್ತದೆ."

"ನಾವು ಸಿದ್ಧರಾಗಿದ್ದೇವೆ."

"ಹಾಗಾದರೆ ಒಳ್ಳೆಯ ಮಾತಿಗೆ ಜಗ್ಗುವುದಿಲ್ಲ?"

"ರಾಷ್ಟ್ರದ ಹಿತಕ್ಕೆ ಧಕ್ಕೆ ತರುವ ಯಾವ ಮಾತಿಗೂ ಜಗ್ಗುವುದಿಲ್ಲ!"

ಈ ಮಾತು ಕೇಳಿ ಅಚ್ಯುತರಾಯನಿಗೆ ಪ್ರಚಂಡ ಕೋಪ ಬಂದಿತು ತನ್ನನ್ನು ಧಿಕ್ಕರಿಸಿ ನುಡಿಯುತ್ತಿರುವ ಸಲಕಂ ಸಹೋದರರ ಸೊಕ್ಕನ್ನು ಅದಗಿಸಲು ಅವರನ್ನು ಬಂಧನದಲ್ಲಿಡುವುದೇ ಯೋಗ್ಯ ಮಾರ್ಗವೆಂದು ತಿಳಿದು,

ಅಲ್ಲಿ ಪಹರೆ ಕಾಯುತ್ತಿದ್ದ ಶಸ್ತ್ರಸಜ್ಜಿತ ಸೈನಿಕರಿಗೆ, ಸಲಕಂ ಸಹೋದರರನ್ನು ಬಂಧಿಸಲು ಆಜ್ಞೆ ಮಾಡಿದ. ಆದರೆ ಅವರು ಅನುಮಾನಿಸುತ್ತಾ ನಿಂತರು. ಅವನು ಮತ್ತೊಮ್ಮೆ ಆ ದ್ರೋಹಿಗಳನ್ನು ಬಂಧಿಸಲು ಆಜ್ಞೆ ಮಾಡಿದ. ಅದನ್ನು ಕೇಳಿ ಅವರು ಮುಂದೆ ಬರಲು, ಅವರಿಗೆ ಪೆದ್ದ ತಿರುಮಲ ಹೇಳಿದ.

"ಹತ್ತಿರ ಬಂದೀರಿ ಜೋಕೆ! ನನ್ನ ಯಾರೆಂದು ತಿಳಿದಿರಿ? ನಮ್ಮನ್ನು ಬಂಧಿಸಲು ಆಜ್ಞೆಮಾಡುವ ಆ ಹುಚ್ಚು ದೊರೆಯ ಮಾತುಗಳನ್ನು ನಿಜವೆಂದು ನಂಬಿ ನಮ್ಮನ್ನು ಬಂಧಿಸಲು ಬರುವ ನಿಮ್ಮ ತಿಳಿಗೇಡಿತನಕ್ಕೆ ಏನನ್ನಬೇಕು?...." ಎಂದು ಹೇಳಿ, ಅವರಿಗೆ ಅಧಿಕಾರ ವಾಣಿಯಲ್ಲಿ ಆಜ್ಞೆಯಿತ್ತ.

"ಈ ಹುಚ್ಚು ದೊರೆಯನ್ನು ಕರೆದುಕೊಂಡು ಹೋಗಿ ಆ ಕೋಣೆಯಲ್ಲಿ ಬಂಧಿಸಿ ಇಡಿ! ಹೊರಗೆ ಬಿಟ್ಟರೆ ಹುಚ್ಚು ವಿಪರೀತವಾಗಿ ಆತ್ಮಹತ್ಯೆ ಮಾಡಿಕೊಳ್ಳಬಹುದು! ಇನ್ನು ಮುಂದೆ ಇವರ ಮಾತನ್ನು ಯಾರೂ ಪುರಸ್ಕರಿಸಬಾರದು!"

ಈ ಮಾತು ಕೇಳಿ ಅವನ ಪಕ್ಷದವರಾದ ಆ ಸೈನಿಕರು ಹಿಂದು, ಮುಂದು ನೋಡದೆ, ಮುಂದೆ ನುಗ್ಗಿ, "ಅನ್ಯಾಯ! ಅನ್ಯಾಯ! ದ್ರೋಹ! ಸ್ವಾಮಿ ದ್ರೋಹ!" ಎಂದು ಪ್ರತಿಭಟಿಸುತ್ತಿದ್ದ ಅಚ್ಯುತರಾಯನನ್ನು ಹಿಡಿದು – ಬಲಾತ್ಕಾರದಿಂದ ಅವನನ್ನು ಕೋಣೆಯಲ್ಲೇ ಬಂಧನದಲ್ಲಿಟ್ಟರು.

ತಾನು ನಿಜವಾದ ಸಾಮ್ರಾಟನೆಂದು ಕನಸುಕಂಡು, ವಾಸ್ತವ ಜಗತ್ತಿನಲ್ಲಿ ಅಧಿಕಾರ ಚಲಾಯಿಸಲು ಬಂದ – ಅಚ್ಯುತರಾಯನು, ತನ್ನ ಅವಿವೇಕತನದಿಂದ ದುಡುಕಿ, ತಾನು ಯಾರನ್ನು ಬಂಧಿಸಿ, ಅಧಿಕಾರಚ್ಯುತನನ್ನಾಗಿ ಮಾಡಬೇಕೆಂದಿದ್ದನೋ, ಅವರಿಂದಲೇ ಬಂಧಿಸಲ್ಪಟ್ಟು ಅಧಿಕಾರಚ್ಯುತನಾಗಿದ್ದ. ಇಷ್ಟೇ ಸಾಲದೆಂಬಂತೆ ಅವನಿಗೆ ಹುಚ್ಚುದೊರೆ ಎಂಬ ಬಿರುದು ಬೇರೆ ಬಂದಿತ್ತು! ಹುಚ್ಚುದೊರೆ! ತಾನು ಹುಚ್ಚುದೊರೆ! ಅದನ್ನು ನೆನೆದು ಅಚ್ಯುತರಾಯನು ಗಹಗಹಿಸಿ ನಕ್ಕ? ಅದನ್ನು ಹುಚ್ಚುನಗೆ ಎಂದೇ ಭಾವಿಸಿ, ಅವನನ್ನು ಮಾತನಾಡಿಸಲು ಯಾರೂ ಹೋಗಲಿಲ್ಲ. ಎಲ್ಲರ ಪಾಲಿಗೆ ಅಚ್ಯುತರಾಯನು ನಿಜವಾಗಿಯೂ ಹುಚ್ಚುದೊರೆಯಾಗಿ ಮಾರ್ಪಟ್ಟಿದ್ದ. ಸಲಕಂ ಸೋದರರ ಸಂಚು ಕಡೆಗೂ ಫಲಿಸಿತ್ತು.

ಅಚ್ಯುತರಾಯನು ಒಂದು ಎಣಿಸಿದ್ದರೆ, ದೈವವೊಂದು ಎಣಿಸಿತ್ತು. ಅವನು ಸಾಮ್ರಾಟನ ಅಧಿಕಾರ ನಡೆಸಲು ಹೋಗಿ, ತಾನು ಯಾರನ್ನು ಬಂಧಿಸಬೇಕೆಂದಿದ್ದನೋ ಅವರಿಂದಲೇ ಬಂಧಿಸಲ್ಪಟ್ಟಿದ್ದನು. ಕಲ್ಪನೆಗೂ, ವಾಸ್ತವ ಜಗತ್ತಿಗೂ ಭೇದವಿದೆ ಎಂಬುದನ್ನು ಮರೆತಿದ್ದ, ಅಚ್ಯುತರಾಯನು ತನ್ನ ಅಧಿಕಾರ ಬಲಪಡಿಸಿಕೊಳ್ಳುವ ಮೊದಲೇ ದುಡುಕಿ ತೊಂದರೆಗೀಡಾಗಿದ್ದ. ವರದಾಂಬಿಕೆಯ ಸಲಹೆಯನ್ನು ಉಪೇಕ್ಷೆಮಾಡಿ, ಸಲಕಂ ಸಹೋದರರನ್ನು ತಿರಸ್ಕರಿಸಲು ಹೋಗಿ ಅವರಿಂದ ತಿರಸ್ಕರಿಸಲ್ಪಟ್ಟಿದ್ದ. ಈಗ ಅವರು ತಮಗೆ ವರದಾದೇವಿಯ ಸಂಪೂರ್ಣ ಬೆಂಬಲವಿರುವುದನ್ನು ಅರಿತು, ಹಗಲುಗನಸು ಕಾಣಲು ಹೊರಟ ಅಚ್ಯುತರಾಯನಿಗೆ ಹುಚ್ಚನ ಪಟ್ಟಗಟ್ಟಿ ಅವನ ಹೆಸರಿನಲ್ಲಿ ತಾವೇ ನಿರಂಕುಶಾಡಳಿತ ಆಳತೊಡಗಿದ್ದರು. ಅಚ್ಯುತರಾಯನು ಅರಮನೆಯಲ್ಲಿ ತನಗಿದ್ದ ಸ್ವತಂತ್ರವನ್ನೂ, ಗೌರವವನ್ನೂ ಕಳೆದುಕೊಂಡು, ಎಲ್ಲರ ತಿರಸ್ಕಾರ, ಅನಾದರಗಳಿಗೆ ಪಾತ್ರನಾಗಿ, ನಿರ್ಬಂಧದಲ್ಲಿರಬೇಕಾಗಿತ್ತು.

ಇದೇ ಕೊರಗಿನಲ್ಲಿ ಅವನು ಆಹಾರ ನಿದ್ರೆಗಳನ್ನು ನಿರ್ಲಕ್ಷಿಸಿ ಬಹುಬೇಗನೆ ಹಾಸಿಗೆ ಹಿಡಿದನು. ಆಗ ಸಲಕಂ ಸೋದರರು, ವಿಷದ ಹಲ್ಲನ್ನು ಕಿತ್ತ ಸರ್ಪವನ್ನು ಬಿಡುಗಡೆ ಮಾಡುವಂತೆ, ಅಚ್ಯುತರಾಯನನ್ನು ಬಿಡುಗಡೆ ಮಾಡಿದರು. ಆದರೂ ಅಚ್ಯುತರಾಯನಿಗೆ ತಾನಿನ್ನೂ ಸಲಕಂ ಸೋದರರ ಸೆರೆಯಾಳು ಎಂಬ ಭಾವನೆ ತಲೆಯಿಂದ ಮಾಸಿ ಹೋಗಿರಲಿಲ್ಲ. ಈ ದುರುಳರಿಂದ ತನಗೆ ಈ ಜನ್ಮದಲ್ಲಿ ಬಿಡುಗಡೆಯಿಲ್ಲವೆಂಬ ಹತಾಶಭಾವ ಉಂಟಾಗುತ್ತಿತ್ತು. ಅವನ ದೈನಂದಿನ ಜೀವನ ಕೇವಲ ಯಾಂತ್ರಿಕವಾಗಿ ನಡೆಯತೊಡಗಿತು. ಜೀವನ–ಪಾರತಂತ್ರದ ಜೀವನ ಒಂದು ಹೊರೆಯಂತೆ ಕಾಣುತ್ತಿತ್ತು. ಆದಷ್ಟು ಬೇಗ ಅದರಿಂದ ಬಿಡುಗಡೆಯಾಗಬೇಕೆಂದು ಬಯಸಿದ. ಅವನಿಗೆ ಬದುಕು ಬೇಸರವಾಗಿ ಸಾವು ಹಿತಕರವಾಗಿ ಕಂಡಿತು.

ಸಲಕಂ ಸೋದರರಿಂದಾದ ಪರಾಭವ ಅಚ್ಯುತರಾಯನ ಜೀವನದಲ್ಲಿ ಭಾರಿ ಪೆಟ್ಟು, ಈ ಪೆಟ್ಟಿನಿಂದ ಅವನು ಚೇತರಿಸಿಕೊಳ್ಳಲೇ ಇಲ್ಲ. ಅದೇ ಕಾರಣದಿಂದ ಕೊರಗಿ ಕೊರಗಿ ಹಾಸಿಗೆ ಹಿಡಿದಿದ್ದ ಅಚ್ಯುತರಾಯನು ಮೇಲೇಳಲೇ ಇಲ್ಲ. ಆರಂಭದಲ್ಲಿ ಮೈಕೈ ನೋವು, ತಲೆಶೂಲೆ, ಜ್ವರಗಳಿಂದ ಕಾಣಿಸಿಕೊಂಡ ವ್ಯಾಧಿ ದಿನಕಳೆದಂತೆ ವಿಚಿತ್ರ ವ್ಯಾಧಿಯ ಸ್ವರೂಪ ಪಡೆದಿತ್ತು. ಮೈಯಲ್ಲಿ ಜ್ವರವಿರಲಿಲ್ಲ. ಬಾಧೆಯೂ ಇರಲಿಲ್ಲ. ಆದರೆ ದೇಹದ ಅಂಗಾಂಗಗಳು

ಯಾವುದೋ ಆಘಾತಕ್ಕೆ ಒಳಗಾದಂತೆ, ಸೊರಗುತ್ತಾ ಹೋಗಿದ್ದವು. ಕೈಕಾಲು ಸಣ್ಣಗಾದರೂ ಹೊಟ್ಟೆಮಾತ್ರ ಮೊದಲಿನಂತೆಯೇ ಊದಿಕೊಂಡಿರುತಿತ್ತು. ಎದೆಯ ಮಾಂಸಖಂಡಗಳು ಕರಗಿ, ಎದೆಯ ಗೂಡು ಕಾಣಿಸುತ್ತಿತ್ತು. ಶ್ವಾಸ ಕೋಶಗಳು ಮೊದಲಿನ ಸ್ಥಿತಿಯಲ್ಲಿದ್ದರೂ, ಉಸಿರಾಡುವುದು ಕಷ್ಟವಾಗಿತ್ತು. ಆಗಾಗ್ಗೆ ಬಿರುಗಾಳಿಯಂತೆ ಅಬ್ಬರಿಸಿಕೊಂಡು ಬಂದ ಕೆಮ್ಮು ಆವನ ಜೀವವನ್ನು ಹಣ್ಣು ಮಾಡಿತ್ತು! ಮುಖಬಾಡಿ ಬತ್ತಲಾಗಿತ್ತು. ಕಣ್ಣುಗಳು ನಿಸ್ತೇಜವಾಗಿ ಗುಳಿಬಿದ್ದಿದ್ದುವು. ಮೈಯಲ್ಲಿ ನಿಶ್ಯಕ್ತಿ ಕಾಣಿಸಿಕೊಂಡಿತ್ತು. ನಾಲ್ಕು ಹೆಜ್ಜೆ ನಡೆಯಲೂ ಸಾಧ್ಯವಿರಲಿಲ್ಲ. ಈ ಬಗೆಯ ಕಾಹಿಲೆಗೆ ಏನನ್ನಬೇಕು!

ಸೆರೆಮನೆಯಲ್ಲಿದ್ದ ರಾಜ ವೈದ್ಯರು ಬಂದು ಪರೀಕ್ಷಿಸಿದರು. ಕಾಹಿಲೆಯ ಮರ್ಮ ಅವರಿಗೂ ತಿಳಿಯಲಿಲ್ಲ. ಆಯುರ್ವೇದದ ಎಲ್ಲ ಔಷಧಗಳನ್ನೂ ಪ್ರಯೋಗಿಸಿದರು. ಅವರು ಕಲಿತ ಜಾಣ್ಮೆಯೆಲ್ಲವನ್ನೂ ವೆಚ್ಚಮಾಡಿದರೂ ಕಾಹಿಲೇ ಗುಣಮುಖವಾಗುವ ಸೂಚನೆಯೇ ಕಾಣಲಿಲ್ಲ.

ದಿನದಿನಕ್ಕೂ ಅಚ್ಯುತರಾಯನ ಸ್ಥಿತಿ ಬಹಳ ಪರಿಶೋಚನೀಯವಾಗುತ್ತಾ ನಡೆದಿತ್ತು. ಅವನ ಮೇಲ್ವಿಚಾರಣೆಯ ಭಾರವನ್ನು ಸ್ವಯಂ ಸಲಕಂ ಸೋದರರೇ ವಹಿಸಿಕೊಂಡಿದ್ದರು — ವರದಾದೇವಿಯೇ ಆರೈಕೆಗೆ ನಿಂತಿದ್ದಳು. ಹಗಲಿರುಳು ಸೇವೆಮಾಡಲು ದಾಸ ದಾಸಿಯರು ಸಾಲುಗಟ್ಟಿ ನಿಂತಿದ್ದರು. ಆದರೆ ಅವರ ಸೇವೆಗಳಿಂದ ಪ್ರಯೋಜನವಿರಲಿಲ್ಲ. ಎಲ್ಲರಿಗೂ ಅಚ್ಯುತರಾಯನು ಉಳಿಯಲಾರನೆಂದು ತಿಳಿದಿತ್ತು. ಆದರೆ ಬಾಯಿಬಿಟ್ಟು ಹೇಳುವ ಧೈರ್ಯವಿರಲಿಲ್ಲ. ಇತರರು ಹೇಳಲು ಹೆದರುತ್ತಿದ್ದ ಸಂಗತಿ ಅಚ್ಯುತರಾಯನಿಗೆ ತಿಳಿದು ಹೋಗಿತ್ತು. ಅವನು ತನ್ನ ಕಾಹಿಲೆ ವಾಸಿಯಾಗುತ್ತದೆಂದು ಹೇಳಿ ಸಂತೈಸಲು ಬಂದವರಿಗೆ, "ಇಲ್ಲ ಈ ಕುತ್ತದಿಂದ ನಾನು ಉಳಿಯುವುದಿಲ್ಲ. ಉಳಿಯುವ ಆಸೆಯೂ ಇಲ್ಲ" ಎಂದು ಹೇಳುತ್ತಿದ್ದನು. ಈ ಮಾತನ್ನು ಕೇಳಿದಾಗಲೆಲ್ಲಾ ವರದಾಂಬಿಕೆಗೆ, ಕರುಳು ಕತ್ತರಿಸಿದಷ್ಟು ಸಂಕಟವಾಗಿ, ತನ್ನ ಮೂಕ ಸಂಕಟವನ್ನು ಕಣ್ಣೀರಿನ ಮೂಲಕ ಪ್ರದರ್ಶಿಸುತ್ತಿದ್ದಳು. ಅವಳಿಗೆ ಇತ್ತೀಚೆಗೆ ತಾನು ಅಚ್ಯುತರಾಯನಿಗೆ ಮಹಾಪರಾಧ ಮಾಡಿದಂತೆ ಅಳುಕು ಉಂಟಾಗಿತ್ತು! ತಾನೇ ಅವನನ್ನು ಈ ಸ್ಥಿತಿಗೆ ತರಲು ಕಾರಣ, ತನ್ನ ಬೆಂಬಲದಿಂದಲೇ ತನ್ನ ಸಹೋದರರು ಅವನನ್ನು ಧಿಕ್ಕರಿಸುವಂತಾದುದು! ಎಂದು ಅವಳಿಗೆ ತಿಳಿದಿತ್ತು. ಅವಳು ತನ್ನ ಪುತ್ರನ ಸಲುವಾಗಿ — ಸಿಂಹಾಸನವನ್ನು ಭದ್ರಗೊಳಿಸಲು ರಾಜ್ಯ ಲೋಭದಿಂದ — ತನ್ನ ಪತಿಯನ್ನೇ ಎದುರಿಸಿದ್ದಳು! ಈಗ ದೇವರು ಅವಳಿಗೆ ಸರಿಯಾದ ಶಿಕ್ಷೆ ವಿಧಿಸಿದ್ದ. ಅವಳ ಸೌಭಾಗ್ಯವೆನಿಸಿದ್ದ ಮುತ್ತೈದೆತನಕ್ಕೇ ಸಂಚಕಾರ ತಂದಿದ್ದ. ತಾನು ಅಚ್ಯುತರಾಯನನ್ನು ನಡೆಸಿಕೊಂಡ ರೀತಿಯನ್ನು

ನೆನೆದು ಈಗ ಕಣ್ಣೀರಿಡುತ್ತಿದ್ದಳು ವರದಾದೇವಿ! ಅವಳ ಮೂಕ ವೇದನೆಯನ್ನು ಕಂಡು ಕನಿಕರಿಸುತ್ತಿದ್ದ ಅಚ್ಯುತರಾಯ ಸಾಯುವ ಮುನ್ನ ಅವಳ ಮೇಲೇಕೆ ದ್ವೇಷ ಸಾಧಿಸಬೇಕೆಂದು, ಅವಳನ್ನು ಸಾಂತ್ವನ ವಚನಗಳಿಂದ ಸಂತೈಸುತ್ತಿದ್ದ. ಆದರೆ ಅವನ ಸಮಾಧಾನ ವಚನಗಳಿಂದ ಅವಳ ದುಃಖ ಮತ್ತಷ್ಟು ಹೆಚ್ಚುತ್ತಿತ್ತು. "ಅಯ್ಯೋ ನನ್ನ ಸ್ವಾಮಿ! ನಿಮಗೆಂತಹ ದ್ರೋಹ ಬಗೆದೆ! ನನ್ನಲ್ಲಿ ನಿಮಗೆ ಮರುಕವೇ?" ಎಂದು ಕಂಬನಿಗರೆದು ರೋಧಿಸುತ್ತಿದ್ದಳು.

ಅಚ್ಯುತರಾಯನಿಗೆ ತಾನು ಇಹಲೋಕವನ್ನು ತ್ಯಜಿಸಲಿರುವ ಸಂಗತಿ ಎಂದೋ ತಿಳಿದುಹೋಗಿತ್ತು. ಆದುದರಿಂದಲೇ ತನ್ನ ಪತ್ನಿಯ ಹಾಗೂ ತನ್ನ ಮಗನ ಭವಿಷ್ಯದ ಬಗ್ಗೆ ಹೆಚ್ಚು ಕಳವಳಗೊಂಡಿದ್ದ. ಸವಿಮಾತುಗಳಿಂದ ಮರುಳುಮಾಡಿ, ಅಂತರಂಗದಲ್ಲಿ ದ್ರೋಹಬಗೆಯುತ್ತಿರುವ ಸಲಕಂ ಸಹೋದರರ ಬಗ್ಗೆ ಅವರು ಎಚ್ಚರದಿಂದಿರಬೇಕೆಂದು ಹೇಳಲಾಸೆಯಾಗುತ್ತಿತ್ತು. ಆದರೆ ತನ್ನ ಮಾತು ಯಾವ ಪ್ರಭಾವ ಬೀರಲಾರದೆಂದು ಸುಮ್ಮನಾಗುತ್ತಿದ್ದ. ದಿನಗಳೆದಂತೆ – ತನ್ನ ಅಂತ್ಯಹತ್ತಿರವಾದಂತೆ – ಈ ಹಂಬಲ ಅದಮ್ಯವಾಗಿ, ಬೃಹದಾಕಾರವಾಗಿ ಬೆಳೆಯಿತು! ತನ್ನ ಹೃದ್ಗತವನ್ನು ಅಂತರಂಗಿಕ ಭಾವನೆಗಳನ್ನು ಅವರಿಗೆ ಹೇಳಿಕೊಳ್ಳದ ಹೊರತು ಮನಸ್ಸಿಗೆ ಸಮಾಧಾನವಿಲ್ಲವಾಯಿತು. ಇದಕ್ಕಾಗಿ ಸೂಕ್ತ ಸನ್ನಿವೇಶಕ್ಕಾಗಿ ಕಾಯುತ್ತಿದ್ದ. ದಿನಕ್ಕೆ ಹತ್ತುಬಾರಿ ತನ್ನನ್ನು ವಿಚಾರಿಸಿಕೊಂಡು ಹೋಗಲು ಬರುತ್ತಿದ್ದ ಸಲಕಂ ಸೋದರರ ಮುಂದೆ ಅದನ್ನು ಹೇಳುವಂತಿರಲಿಲ್ಲ.

ಒಂದು ದಿನ ಅವನು ಬಯಸುತ್ತಿದ್ದ ಸನ್ನಿವೇಶ ದೊರೆಯಿತು. ಅಚ್ಯುತರಾಯನು ವರದಾಂಬಿಕೆಯನ್ನೂ, ಮಗ ವೆಂಕಟಾದ್ರಿಯನ್ನೂ ಬಳಿಗೆ ಕರೆದು, ಹತ್ತಿರ ಕೂಡಿಸಿಕೊಂಡು, ಗದ್ಗದ ಕತದಲ್ಲಿ ಹೇಳಿದ.

"ವರದಾ, ನಾನು ಹೆಚ್ಚು ಕಾಲ ಬದುಕುವುದಿಲ್ಲ – ನನಗೆ ಕಾಲನ ಕರೆ ಬಂದಿದೆ. ಅಂತಲೇ ಈ ಎಲ್ಲ ಮಾತುಗಳನ್ನು ಹೇಳಬೇಕೆಂದಿದ್ದೇನೆ. ನನ್ನ ಮಾತು ಲಕ್ಷ್ಯವಿಟ್ಟು ಆಲಿಸು. ಈ ಕುಮಾರನನ್ನು ನಿನ್ನ ವಶಕ್ಕೆ ಒಪ್ಪಿಸಿ ಹೋಗುತ್ತಿದ್ದೇನೆ. ಇವನನ್ನು ರಕ್ಷಿಸುವ ಭಾರ ನಿನ್ನದು.... ನೀನು ಒಳ್ಳೆಯವರೆಂದು ತಿಳಿದಿರುವ ಆ ಸಲಕಂ ಸೋದರರ ಗೋಮುಖ ವ್ಯಾಘ್ರತನ, ಇಂದಲ್ಲ ನಾಳೆ ನಿನಗೆ ತಿಳಿಯುತ್ತದೆ. ಈಗ ನನ್ನ ಮಾತಿನಲ್ಲಿ ನಂಬಿಕೆ ಬರಲಾರದು! ಚಿಂತೆಯಿಲ್ಲ. ಅವರು ನೀಚರು, ಸ್ವಾರ್ಥಿಗಳು, ಕೃತಘ್ನರೂ, ಅವರು ಕಾರ್ಯಸಾಧನೆಗಾಗಿ ಯಾವ ಹೇಯ ಕೃತ್ಯವನ್ನು ಮಾಡಲೂ ಹೇಸುವುದಿಲ್ಲ! ಅವರ ಎದೆಯಲ್ಲಿ ಮಾನವಸಹಜವಾದ ಭಾವನೆಗಳು ತಿಲಮಾತ್ರವೂ ಇಲ್ಲ. ಅದು

ಪಾಷಾಣದಷ್ಟು ಕಠಿನವಾಗಿದೆ, ಅವರನ್ನು ನಂಬಬೇಡ! ಅವರನ್ನು ದೂರವಿಡು. ಸದಾ ಎಚ್ಚರದಿಂದಿರು. ಅವರು ವಿಷಜಂತುಗಳು! ಅವರಿಂದ ನಿಮಗೆ ಮಾತ್ರ ವಲ್ಲ–ಇಡೀ ಸಾಮ್ರಾಜ್ಯಕ್ಕೆ ಅಪಾಯ ಕಾದಿದೆ! ಅವರನ್ನು ವಿರೋಧಿಸಿದವರಿಗೆ ಮೃತ್ಯು ಕಾದಿದೆ! ಅವರನ್ನು ಎದುರಿಸಿ ಯಾರೂ ಬದುಕಲಾರರು.... ಇದಕ್ಕೆ ನಾನೇ ಸಾಕ್ಷಿ! ಅವರನ್ನು ಅಧಿಕಾರ ಉರುಳಿಸದಿದ್ದರೆ ವಿಪತ್ತು ಖಂಡಿತ.... ಈ ವೆಂಕಟಾದ್ರಿ ನಮ್ಮ ವಂಶದ ಒಂದೇ ಒಂದು ಮೊಳಕೆ. ಅವಳ ಜೀವಕ್ಕೆ ಗಂಡಾಂತರವಿಲ್ಲದಂತೆ ನೋಡಿಕೊಳ್ಳುವ ಭಾರ ನಿನ್ನದು!" ಎಂದು ಹೇಳಿ ಹಠಾತ್ತನೆ ಆರಂಭವಾದ ಕೆಮ್ಮಿನ ಧಾಳಿಯಿಂದ ಮಾತು ಮುಗಿಸಿದ್ದ.

ಈ ಎಲ್ಲ ಮಾತುಗಳು ಆ ತಾಯಿ ಮಕ್ಕಳ ಮೇಲೆ ಎಷ್ಟು ಪರಿಣಾಮ ಮಾಡಿತೋ ಅವನಿಗೆ ತಿಳಿಯಲಿಲ್ಲ. ಆದರೂ – ಅವರಿಬ್ಬರೂ ಕಂಬನಿ ಸುರಿಸುತ್ತಾ ಮೌನವಾಗಿ ಆಲಿಸಿದ್ದರು. ತನ್ನ ಪಾಲಿನ ಕರ್ತವ್ಯ ಮುಗಿಯಿತು ಎಂದು ಅವನ ಹೃದಯದ ಭಾರ ಕಡಿಮೆಯಾದಂತೆ ತೋರಿತು. ಅವನ ಮುಖದಲ್ಲಿ ಒಂದು ಬಗೆಯ ಸಮಾಧಾನ ನೆಲಸಿತು.

ಅವನಿಗಿದ್ದ ಒಂದು ಚಿಂತೆ ಬಂಧನದಿಂದ ಮುಕ್ತಿಗೊಳಿಸಿ, ಮೊದಲಿನ ಸ್ಥಾನಮಾನ ಕಲ್ಪಿಸಿಕೊಡುವುದಾಗಿ ಸಾಮ್ರಾಟ್ ಕೃಷ್ಣದೇವರಾಯನ ರಾಣಿಯರಿಗೆ ಹೇಳಿದ್ದ ಆಶ್ವಾಸನ ನೆರವೇರಲಿಲ್ಲವೆಂಬ ಚಿಂತೆ! ಇನ್ನೊಂದು ಚಿಂತೆ ಎಂದರೆ ಪುತ್ರಶೋಕದಿಂದ ಹುಚ್ಚಳಾಗಿರುವ ಅನ್ನಪೂರ್ಣಾದೇವಿಯ ಬಗ್ಗೆ ಈಚೆಗೆ ಯಾವ ಸುದ್ದಿಯೂ ತಿಳಿದಿರಲಿಲ್ಲ. ಅವಳು ಏನಾದಳೋ ಎಲ್ಲಿ ಹೋದಳೋ ಎಂದು.

ಆ ದಿನ ಸಂಜೆ ಅದೇ ಚಿಂತೆಯಲ್ಲಿ ಮುಳುಗಿ ಅಚ್ಯುತರಾಯನು ಮಲಗಿದ್ದನು. ಹಾಗೆ ನಿದ್ದೆ ಬಂದಂತಾಯಿತು. ಬಳಿಯಲ್ಲಿದ್ದ ವರದಾದೇವಿ ಇನ್ನಿತರ ದಾಸಿಯರು ಹೊರಗೆ ಹೋಗಿದ್ದರು. ಬಳಿಯಲ್ಲಿ ಯಾರೂ ಇರಲಿಲ್ಲ.

ಇದ್ದಕ್ಕಿದ್ದಂತೆ ಯಾರೋ ಗಹಗಹಿಸಿ ನಕ್ಕಂತಾಯಿತು. ಅಚ್ಯುತರಾಯ ಕಣ್ಣು ಬಿಟ್ಟು ನೋಡಿದ. ಎದುರಿಗೆ ಹುಚ್ಚಿ ಅನ್ನಪೂರ್ಣಾದೇವಿ ನಗುತ್ತಾ ನಿಂತಿದ್ದಳು. ಅನೇಕ ವರ್ಷಗಳಿಂದ ಕಣ್ಮರೆಯಾಗಿದ್ದ ಅವಳು ತನ್ನ ಅಂತಃಪುರದಲ್ಲಿ ಹೇಗೆ ಕಾಣಿಸಿಕೊಂಡಳೆಂದು ತಿಳಿಯಲು ಕುತೂಹಲವಾಯಿತು. ಅವನು ತನ್ನನ್ನೇ ನೋಡುತ್ತಾ ಕುಳಿತುದನ್ನು ಕಂಡು,

"ಏಕೆ ಹಾಗೆ ನೋಡುತ್ತೀರಿ! ನಾನು ಅನ್ನಪೂರ್ಣಾದೇವಿ – ಹುಚ್ಚಿ ಅನ್ನಪೂರ್ಣಾದೇವಿ! ನೀವು ಕಾಹಿಲೆ ಬಿದ್ದಿರುವ ಸಂಗತಿಯನ್ನು ಕೇಳಿ ಓಡಿ ಬಂದೆ!"

"ಇಲ್ಲಿಗೆ ಹೇಗೆ ಬಂದಿರಿ? ನಿಮ್ಮನ್ನು ಯಾರೂ ತಡೆಯಲಿಲ್ಲವೇ?"

"ನಾನು ಮನಸ್ಸು ಬಂದ ಕಡೆ ಹೋಗಬಲ್ಲೆ – ನನ್ನನ್ನು ಯಾರೂ ತಡೆಯಲಾರರು !"

"ಆ ಸಲಕಂ ಸೋದರರು ನಿಮ್ಮನ್ನು ಸೆರೆಯಲ್ಲಿಡಲು ಹುಡುಕುತ್ತಿದ್ದಾರೆ!"

"ನಾನು ಅವರ ಕೈಗೆ ಸಿಕ್ಕಿಬೀಳುವವನಲ್ಲ!"

"ಈಗ ಎಲ್ಲಿದ್ದೀರಿ? ಏನು ಮಾಡುತ್ತಿದ್ದೀರಿ?"

"ನನಗೆ ಇರಲೊಂದು ಜಾಗವಿಲ್ಲ! ಮಾಡಲೊಂದು ಕೆಲಸವಿಲ್ಲ. ಮನಸ್ಸು ಬಂದ ಕಡೆ ಗಾಳಿಯಂತೆ ಚಲಿಸುತ್ತೇನೆ—ನೀರಿನಂತೆ ಹರಿಯುತ್ತೇನೆ."

"ನೀವು ಊರೂರು ತಿರುಗಿ ಏನು ಮಾಡುತ್ತೀರಿ?"

"ದ್ರೋಹಿಗಳು – ಸಲಕಂ ತಿರುಮಲರು, ಅವರ ವಿರುದ್ಧ ಜನತೆಯನ್ನು ಎತ್ತಿಕಟ್ಟುತ್ತಿದ್ದೇನೆ! ಅವರು ಜನತೆಗೆ ಮಾಡಿರುವ ಅನ್ಯಾಯಗಳನ್ನು ಹಾಡು ಕಟ್ಟಿ ಹೇಳುತ್ತೇನೆ – ಅವರ ಹಿಂಸೆ, ಕ್ರೌರ್ಯ, ದೌರ್ಜನ್ಯಗಳ ಬಗ್ಗೆ ಭಾಷಣ ಮಾಡುತ್ತೇನೆ. ನನಗೊಂದು ನಿಶ್ಚಿತ ಕಾರ್ಯಕ್ರಮವಿಲ್ಲ!"

"ನಿಮ್ಮ ಸಂಚಾರದಲ್ಲಿ ಅಳಿಯ ರಾಮರಾಯರನ್ನು ಕಂಡಿದ್ದಿರಾ? ಅವರು ಎಲ್ಲಿದ್ದಾರೆ? ಏನು ಮಾಡುತ್ತಿದ್ದಾರೆ? ಸಾಮ್ರಾಜ್ಯಕ್ಕೆ ಒದಗಿರುವ ವಿಪತ್ತು ಅವರಿಗೆ ತಿಳಿದಿದೆಯೆ?"

"ಅವರು ಪೆನಗೊಂಡೆಯ ದುರ್ಗದಲ್ಲಿ ಕ್ಷೇಮದಿಂದ ಇದ್ದಾರೆ, ಅಲ್ಲಿಂದಲೇ ಜನತೆಯನ್ನು ಸಲಕಂ ಸೋದರರ ವಿರುದ್ಧ ಎತ್ತಿಕಟ್ಟುವ ಸಾಹಸದಲ್ಲಿ ತೊಡಗಿದ್ದಾರೆ. ಅವರಿಗೆ ಈ ದುರುಳರಿಂದ ನಿಮಗಾದ ದ್ರೋಹ ತಿಳಿದಿದೆ! ಇವರ ವಿರುದ್ಧ ನಿಮಗೆ ಎಚ್ಚರಿಕೆ ಕೊಡಲು ಅವರೇ ನನ್ನನ್ನು ಇಲ್ಲಿಗೆ ಕಳುಹಿದರು. ಆದರೆ ನಾನು ಬರುವ ವೇಳೆಗೆ ಕಾರ್ಯ ಮಿಂಚಿ ಹೋಗಿದೆ."

"ಈಗ ಏನಾಯಿತು?"

"ನಾವು ಯಾವುದನ್ನು ಆಗಬಾರದೆಂದು ಆಶಿಸಿದ್ದೆವೋ ಅದು ನಡೆದಿದೆ?"

"ಅಂದರೆ?"

"ನಿಮ್ಮ ಕೊಲೆ!"

"ನನ್ನ ಕೊಲೆಯೆ?"

"ಹೌದು ನಿಮ್ಮ ಕೊಲೆ, ಸಲಕಂ ಸೋದರರಿಂದ ನಿಮ್ಮ ಕೊಲೆ! ಆ ನೀಚರು ವಿಷವಿಟ್ಟು ನಿಮ್ಮ ದೇಹ ಕೆಡಿಸಿಹಾರೆ! ತಿನ್ನುವ ಅನ್ನದಲ್ಲಿ ನಂಜಿಟ್ಟು ಕೊಂದಿಹಾರೆ! ಇದರಿಂದ ನಿಮಗೆ ಮುಕ್ತಿಯಿಲ್ಲ! ನೀವು ಇದು ವರೆಗೆ ಬದುಕಿರುವುದೇ ಹೆಚ್ಚು!"

"ಹಾಗಾದರೆ ಇದು ಆ ಘಾತಿಗಳ ಕೆಲಸವೇ?"

"ಹೌದು ಅವರದೇ ಕೆಲಸ. ನನ್ನ ಕುಮಾರನನ್ನು ಕೊಂದಂತೆ, ಇಂದು

ನಿಮ್ಮನ್ನು ಮೋಸದಿಂದ ಕೊಂದು ಸಿಂಹಾಸನವನ್ನು ಆಕ್ರಮಿಸಬೇಕೆಂದಿದ್ದಾರೆ! ನಿಮ್ಮ ವೆಂಕಟಾದ್ರಿಗೂ ದುರ್ಮರಣ ತಪ್ಪಿದ್ದಲ್ಲ—ಅವರು ತಮ್ಮನ್ನು ವಿರೋಧಿಸುವ ಎಲ್ಲರನ್ನೂ ಕೊಲೆಮಾಡುತ್ತಾರೆ!"

"ಹಾಗಾದರೆ ಕುಮಾರನಿಗೆ ಗಂಡಾಂತರ ತಪ್ಪಿದ್ದಲ್ಲವೆ?"

"ಕುಮಾರನಿಗೆ ಮಾತ್ರವಲ್ಲ – ಇಡೀ ಸಾಮ್ರಾಜ್ಯಕ್ಕೆ ಗಂಡಾಂತರ ತಪ್ಪಿಲ್ಲ ಸಾಮ್ರಾಜ್ಯ ಮಸಣವಾಗುವವರೆಗೆ ಅವರಿಗೆ ತೃಪ್ತಿಯಿಲ್ಲ!"

"ಸಾಮ್ರಾಜ್ಯಕ್ಕೆ ಅವರಿಂದ ಮುಕ್ತಿಯೇ ಇಲ್ಲವೆ?"

"ಇದೆ! ಯಾವ ಕೊಲೆ, ಹಿಂಸೆ, ವಂಚನೆಗಳಿಂದ ಅಧಿಕಾರಕ್ಕೆ ಬಂದಿರುವರೋ, ಅವುಗಳಿಂದಲೇ ಅವರಿಗೆ ಅಂತ್ಯ ಬರಲಿದೆ."

"ಹೇಗೆ?"

"ಜನತೆ ಸಹಿಸುವಷ್ಟು ದಿನ ಸಹಿಸಿ, ಅವರ ಪಾಪದ ಬಟ್ಟಲು ತುಂಬಿದೊಡನೆ ದಂಗೆ ಎದ್ದು, ಅವರನ್ನು ನಿರ್ಮೂಲಮಾಡುತ್ತಾರೆ. ಆ ದಿನ ದೂರವಿಲ್ಲ."

"ಅಲ್ಲಿಯವರೆಗೆ ಅವರ ಕ್ರೌರ್ಯವನ್ನು ಸಹಿಸಬೇಕೆ?"

"ಇದು ದೈವಶಾಸನ. ನನಗೆ ವೇಳೆಯಾಯಿತು ನಾನಿನ್ನು ಬರುತ್ತೇನೆ." ಎಂದು ಹೇಳಿ ಅಚ್ಯುತರಾಯನ ಉತ್ತರಕ್ಕೆ ಕಾಯದೆ ಅಲ್ಲಿಂದ ಹೊರಟು ಹೋದಳು. ಅವಳು ಎಲ್ಲಿ ಹೋದಳೆಂದು ಆ ಮಬ್ಬುಗತ್ತಲೆಯಲ್ಲಿ ಅಚ್ಯುತರಾಯನಿಗೆ ತಿಳಿಯಲಿಲ್ಲ!

ಅಚ್ಯುತರಾಯನಿಗೆ ತಾನು ಸಾಯುವ ಸಂಗತಿ ಖಚಿತವಾಯಿತಾದರೂ ಆ ದ್ರೋಹಿಗಳನ್ನು ಎದುರಿಸಿದುದೇ ತನಗೆ ಸಾವು ಸಮೀಪಿಸಿತೆಂದು ಅವನಿಗೆ ತಿಳಿದಿರಲಿಲ್ಲ. ಅವರು ಕೃಷ್ಣದೇವರಾಯನ ಕುಮಾರನನ್ನು ಕೊಂದಂತೆ,ಉಪಾಯವಾಗಿ ತನ್ನ ಕೊಲೆ ಮಾಡಿದ್ದಾರೆ. ನಿಧಾನವಾಗಿ ಕೊಲ್ಲುವ ವಿಷವಿಟ್ಟು ತನ್ನ ದೇಹವನ್ನು ಕೆಡಿಸಿದ್ದಾರೆ. ಅವರು ಹಾಕಿದ್ದ ವಿಷ ಅಂಗಾಂಗಗಳಲ್ಲಿ ವ್ಯಾಪಿಸಿ, ಒಂದೊಂದೇ ಅವಯವಗಳಲ್ಲಿ ತನ್ನ ಕಾರ್ಯ ಮಾಡಿದೆ. ತಾನು ಸಾಯುವ ಮುನ್ನ ಒಂದು ಕೆಲಸ ಮಾಡಬೇಕಾಗಿದೆ. ಚಿನ್ನಾದೇವಿ, ತಿರುಮಲಾದೇವಿಯರನ್ನು ಕರೆಸಿಗೊಂಡು, ಸೆರೆಯಿಂದ ತಪ್ಪಿಸಿಕೊಂಡು ಹೋಗಲು ತಿಳಿಸಬೇಕಾಗಿದೆ. ಹಾಗೇ ಅವರಿಗೆ ಕುಮಾರನ ರಕ್ಷಣೆಯ ಭಾರ ವಹಿಸಬೇಕಾಗಿದೆ. ಅಳಿಯ ರಾಮರಾಯ, ತಿರುಮಲರಾಯರ ಮೂಲಕ ಸಾಮ್ರಾಜ್ಯದ ದುರಂತವನ್ನು ತಪ್ಪಿಸಬೇಕಾಗಿದೆ. ಇದು ತನ್ನ ಅವರ ಕೊನೆಯ ಭೇಟಿ! ಆದರೆ ಅವರನ್ನು ಕರೆತಂದು ತನಗೆ ಭೇಟಿ ಮಾಡಿಸುವವರು ಯಾರು? ಹೇಗಾದರೂ ಅವರನ್ನು ಭೇಟಿಮಾಡಿ ತನ್ನ ಅಂತಿಮ ಸಂದೇಶವನ್ನು ತಿಳಿಸಿ ಬರಬೇಕು. ಆದರೆ

ಹಾಸಿಗೆ ಬಿಟ್ಟು ನಾಲ್ಕು ಹೆಜ್ಜೆ ನಡೆಯಲಾಗದ ತನಗೆ ಈ ಕಾರ್ಯದಲ್ಲಿ ನೆರವಾಗು ವವರು ಯಾರು? ಅವನಿಗೆ ರಾಜವೈದ್ಯರ ನೆನಪಾಯಿತು. ಅವರಿಂದ ಮಾತ್ರ ಈ ಕಾರ್ಯ ಸಾಧ್ಯ! ಎಂದು ಆಲೋಚಿಸಿ ಸಮಯ ಸಾಧಿಸಿ ತನ್ನ ಹೃದ್ಗತವನ್ನು ಅವರಿಗೆ ಅರಿಕೆ ಮಾಡಿಕೊಂಡ.

"ಪ್ರಭು! ಇದರಿಂದ ತಮ್ಮ ಜೀವಕ್ಕೆ ಅಪಾಯ ಬಂದರೆ?"

"ಏನು ಸಲಕಂ ಸೋದರರಿಂದಲೇ?"

"ಅವರಿಗೆ ನಾವು ಹೆದರುವುದಿಲ್ಲ. ಆದರೆ ನಿಮ್ಮ ದುರ್ಬಲವಾದ ಈ ದೇಹ ಇಷ್ಟು ಶ್ರಮವನ್ನು ಸಹಿಸಬಲ್ಲದೆ? ಎಂದು ನನ್ನ ಚಿಂತೆ!"

"ಪಂಪಾಪತಿಯ ದಯವಿದ್ದಂತೆ ಆಗಲಿ! ನನ್ನ ಈ ಕಡೆಯಾಸೆಯನ್ನು ನೀವು ನೆರವೇರಿಸಲೇ ಬೇಕು!"

"ಆಗಲಿ ಪ್ರಭು!" ಎಂದು ಹೇಳಿ ಈ ಕಾರ್ಯಕ್ಕೆ ಅವರು ಸಮ್ಮತಿಸಿದರು. ಅಚ್ಯುತರಾಯನನ್ನು ಚಿನ್ನಾದೇವಿ ಅಂತಃಪುರಕ್ಕೆ ಕರೆದೊಯ್ಯಲು ಮಾಡಬೇಕಾದ ವ್ಯವಸ್ಥೆಯಲ್ಲಿ ಒಂದೆರಡು ದಿನ ಕಳೆದವು. ಸಲಕಂ ಸಹೋದರರು ಇಲ್ಲದ ವೇಳೆ ಯನ್ನು ಸಾಧಿಸಲು ಇನ್ನೆರಡುದಿನ ಕಳೆಯಿತು. ಒಂದು ದಿನ ಮಟಮಟ ಮಧ್ಯಾಹ್ನ ಸಲಕಂ ಸೋದರರು ಆದೇ ತಾನೆ ವಿಶ್ರಾಂತಿಗೆ ತೆರಳಿದ್ದ ಸಮಯ ಸಾಧಿಸಿ ರಾಜವೈದ್ಯರು ಅಚ್ಯುತರಾಯನನ್ನು ಅವನಿಗೆಂದೇ ಸಿದ್ಧಪಡಿಸಿದ್ದ ಮೇನೆಯಲ್ಲಿ ನಾಲ್ವರು ಧೃಢಕಾಯರಾದ ಆಳುಗಳಿಂದ ಹೊರೆಸಿಕೊಂಡು ಚಿನ್ನಾ ದೇವಿಯ ಅಂತಃಪುರಕ್ಕೆ ಬಂದರು. ಸಾಮ್ರಾಟನನ್ನು ರಾಜಭಟರು ತಡೆ ಯುವ ಸಾಹಸಮಾಡಲಿಲ್ಲ.

ತನ್ನನ್ನು ಒಮ್ಮೆಲೆ ಕಾಣಲು ಬಂದ ಅಚ್ಯುತರಾಯನನ್ನು ಕಂಡು ಚಿನ್ನಾ ದೇವಿಗೆ ವಿಸ್ಮಯವಾಯಿತು. ಅವಳು ಅಚ್ಯುತರಾಯನ ಸ್ಥಿತಿಯನ್ನು ಕಂಡು ಗಾಬರಿಯಾದಳು. ರಾಜವೈದ್ಯರು ಎಲ್ಲವನ್ನೂ ಸೂಕ್ಷ್ಮವಾಗಿ ನಿವೇದಿಸಿ, ಅವಳೊಡನೆ ಯಾವುದೋ ಮಹತ್ವದ ಸಂಗತಿಯನ್ನು ಮಾತನಾಡಲು ಬಂದಿರು ವುದಾಗಿ ತಿಳಿಸಿದರು.

"ಮಹಾರಾಣಿಯವರೇ ನಿಮ್ಮೊಡನೆ ಸಾವಕಾಶವಾಗಿ ಮಾತನಾಡಲು ವೇಳೆಯಿಲ್ಲ. ನಿಮ್ಮನ್ನು ಕಡೆಗಾಲದಲ್ಲಿ ನೋಡುತ್ತೇನೆಂಬ ಭರವಸೆಯೇ ಇರ ಲಿಲ್ಲ. ರಾಜವೈದ್ಯರ ಸಹಾಯದಿಂದ ಇಲ್ಲಿಗೆ ಬರಲು ಸಾಧ್ಯವಾಯಿತು. ಇಲ್ಲಿ ಬಂದ ಕಾರ್ಯ ತಿಳಿಸುವ ಮುನ್ನ ನಿಮ್ಮಲ್ಲಿ ಕ್ಷಮೆಯಾಚಿಸುತ್ತಿದ್ದೇನೆ! ಈ ನಿರ್ಭಾಗ್ಯನಿಂದ ನಿಮ್ಮನ್ನು ಬಂಧಮುಕ್ತರನ್ನಾಗಿ ಮಾಡಲು ಸಾಧ್ಯವಿಲ್ಲದೆ ಹೋಯಿತು! ನನ್ನ ಈ ಪ್ರಯತ್ನಕ್ಕೆ ದೊರೆತ ಬಹುಮಾನವೇ ನನಗೆ ಬಂದಿ ರುವ ಈ ದುರವಸ್ಥೆ! ಅವರ ದಬ್ಬಾಳಿಕೆಯನ್ನು ವಿರೋಧಿಸಿದ ನನ್ನನ್ನು ಕೊಲ್ಲಲು

ಆ ನೀಚ ಸೋದರರು ನನಗೆ ವಿಷವಿಟ್ಟಿದ್ದಾರೆ– ನಾನು ಹೆಚ್ಚುಕಾಲ ಬದುಕುವುದಿಲ್ಲ – ಮಹಾರಾಣಿ ಅನ್ನಪೂರ್ಣಾದೇವಿಯವರಿಂದ ಅಳಿಯ ರಾಮರಾಯರು ಪೆನಗೊಂಡೆಯಲ್ಲಿರುವುದಾಗಿ ತಿಳಿಯಿತು. ಅವರಿಂದಲೇ ಆ ನೀಚರ ಕಾರಾಗಾರವೆಲ್ಲ ತಿಳಿಯಿತು! ಆ ಸಹೋದರರು ಕುಮಾರ ವೆಂಕಟಾದ್ರಿಯನ್ನು ನಿವಾರಿಸಲು ನಿಶ್ಚಯಿಸಿದ್ದಾರಂತೆ! ನೀವು ಹೇಗಾದರೂ ಕುಮಾರನನ್ನೂ, ಸಾಮ್ರಾಜ್ಯವನ್ನೂ ಆ ನೀಚರಿಂದ ಉಳಿಸಬೇಕು. ಇದು ನಿಮ್ಮಿಂದ ಮಾತ್ರ ಸಾಧ್ಯ! ಹೇಗಾದರೂ ಇಲ್ಲಿಂದ ತಪ್ಪಿಸಿಕೊಂಡು ಹೋಗಿ, ಅಳಿಯ ರಾಮರಾಯ ತಿರುಮಲರಾಯರಿಗೆ, ರಾಜಧಾನಿಯಲ್ಲಿ ನಡೆದಿರುವ ಎಲ್ಲ ಸಂಗತಿಗಳನ್ನು ತಿಳಿಸಿ ನೀವು ಹೇಗಾದರೂ ಇಷ್ಟು ಕಾರ್ಯವನ್ನು ನನಗಾಗಿ, ಸಾಮ್ರಾಜ್ಯಕ್ಕಾಗಿ ಮಾಡಬೇಕೆಂದು ಪ್ರಾರ್ಥನೆ." ಎಂದು ಮಾತು ಮುಗಿಸಿದನು.

ಈ ಎಲ್ಲ ಸಂಗತಿಗಳನ್ನು ತಿರುಮಲಾದೇವಿಯವರಿಗೆ ತಿಳಿಸುವಂತೆ ರಾಜವೈದ್ಯರನ್ನು ಪ್ರಾರ್ಥಿಸಿ, ತಡಮಾಡದೆ ಮೇನೆಯಲ್ಲಿ ಕುಳಿತು ಹೊರಟರು. ಅವರು ಅರಮನೆಗೆ ಬಂದು ಮುಟ್ಟುವುದಕ್ಕೂ, ದ್ವಾರದಲ್ಲೇ ಸಲಕಂ ಸಹೋದರರು ಸಂಧಿಸುವುದಕ್ಕೂ ಸರಿಹೋಯಿತು. ಅವರು ಅಚ್ಯುತರಾಯನು ಸ್ವಸ್ಥಾನ ಸೇರುವವರೆಗೂ ಸುಮ್ಮನಿದ್ದು, ಅನಂತರ ರಾಜವೈದ್ಯರನ್ನು ಗುಟ್ಟಾಗಿ ಕರೆದು, "ವೈದ್ಯರೇ ಪ್ರಭುಗಳನ್ನು ಈ ಸ್ಥಿತಿಯಲ್ಲಿ ಎಲ್ಲಿಗೆ ಕರೆದುಕೊಂಡು ಹೋಗಿದ್ದಿರಿ?" ಎಂದರು.

"ಚಿನ್ನಾದೇವಿಯ ಅಂತಃಪುರಕ್ಕೆ"

"ಏಕೆ?"

"ಪ್ರಭುಗಳು ಮಹಾರಾಣಿಯವರನ್ನು ನೋಡಲು ಇಚ್ಛಿಸಿದರು."

"ಚಿನ್ನಾದೇವಿಯ ಬಳಿ ಅವರಿಗೇನು ಕೆಲಸ?"

"ನನಗೆ ತಿಳಿಯದು!"

"ನೀವು ಸಂಗಡವೇ ಹೋಗಿದ್ದಿರಿ!"

"ಅವರ ಭೇಟಿ ನಡೆದಾಗ ನಾನು ಹೊರಗೆ ಇದ್ದೆ!"

"ನೀವು ಸುಳ್ಳು ಹೇಳುತ್ತಿದ್ದೀರಿ."

"ನನಗೆ ಯಾವ ಸಂಗತಿಯೂ ತಿಳಿಯದು!"

"ನಿಮಗೆ ತಿಳಿದಿದೆಯೋ ಇಲ್ಲವೋ, ಸಾವಕಾಶವಾಗಿ ವಿಚಾರಿಸಿಕೊಳ್ಳುತ್ತೇವೆ" ಎಂದು ಹೇಳಿ ರಾಜವೈದ್ಯರನ್ನು ಬಂಧಿಸಲು ಆಜ್ಞೆ ಮಾಡಿದರು, ಅನಂತರ ಆಳುಗಳನ್ನು ವಿಚಾರಿಸಲು ನಿಂತರು.

ಮಹಾರಾಣಿ ಅಂತಃಪುರದಿಂದ ತನ್ನ ಪತಿಯ ಆಕಸ್ಮಿಕ ನಿರ್ಗಮನ ಕಳವಳಕ್ಕೀಡುಮಾಡಿತ್ತು. ಅಚ್ಯುತರಾಯನು ಅವನಿದ್ದ ಸ್ಥಿತಿಯಲ್ಲಿ ಎಲ್ಲಿಗೆ ಹೋದನೆಂದು ತಿಳಿಯದಾಗಿತ್ತು. ಅವಳು ಈ ಸ್ಥಿತಿಯಲ್ಲಿರುವಾಗಲೇ ಅಚ್ಯುತ

ರಾಯನನ್ನು ಆಳುಗಳು ತಂದು ಹಾಸಿಗೆಯಲ್ಲಿ ಮಲಗಿಸಿದರು. ಅವಳಿಗೆ ತಾನು ಆರಸುತ್ತಿದ್ದ ನಿಧಿ ಕಾಲಿಗೆ ಬಿದಿದಷ್ಟು ಹರ್ಷವಾಯಿತು. ಅವಳು ಅಚ್ಯುತ ರಾಯನ ಬಳಿಗೆ ಬಂದು, ಕುತೂಹಲದಿಂದ ಕೇಳಿದಳು,

"ಪ್ರಭು ನಿಮ್ಮನ್ನು ಕಾಣದೆ ಬಹಳ ಗಾಬರಿಯಾಯಿತು. ಈ ಸ್ಥಿತಿಯಲ್ಲಿ ಎಲ್ಲಿಗೆ ಹೋಗಿದ್ದಿರಿ?"

"ಚಿನ್ನಾದೇವಿಯರನ್ನು ನೋಡಿ ಬರಬೇಕಾಗಿತ್ತು!"

"ನನಗೆ ಹೇಳಿದ್ದರೆ ನಾನೇ ಅವರನ್ನು ಇಲ್ಲಿಗೆ ಕರೆಸುತ್ತಿದ್ದೆ!"

"ನಿಮಗೇಕೆ ವೃಥಾತೊಂದರೆ ಕೊಡಬೇಕೆಂದು ನಾನೇ ಹೋದೆ."

"ನೀವು ನನ್ನನ್ನೂ ಪರಕೀಯಳನ್ನಾಗಿ ಮಾಡಿಬಿಟ್ಟರಾ?"

"ನನಗೆ ಎಲ್ಲರೂ ನನ್ನವರೇ, ನಾನು ಮಾತ್ರ ಇತರರಿಗೆ ಬೇರೆ!"

"ನಿಮ್ಮ ಮಾತು ವಿಚಿತ್ರವಾಗಿದೆ!"

"ಸತ್ಯ ವಿಚಿತ್ರವೇ?"

"ನಿಮ್ಮ ಮಾತು ನನಗೆ ಅರ್ಥವಾಗುವುದಿಲ್ಲ!"

"ಹೌದು, ನನ್ನ ಮಾತು ಕಾಲನಿಗಲ್ಲದೆ ಬೇರೆಯವರಿಗೆ ಅರ್ಥವಾಗಲಾರದು!"

"ನೀವು ಅಮಂಗಳವನ್ನು ನುಡಿಯುತ್ತಿದ್ದೀರಿ."

"ನನ್ನ ಇರವೇ ನಿಮಗೆ ಅಮಂಗಳ?"

ಈ ಮಾತು ಕೇಳಿ ಓಡಿ ಬಂದು ಅವನ ಬಾಯಿ ಮುಚ್ಚಿ – "ಪ್ರಭು! ಹೀಗೆಲ್ಲಾ ಮಾತನಾಡಿ ನನ್ನನ್ನೇಕೆ ನೋಯಿಸುತ್ತೀರಿ. ನಾನು ನಿಮಗೆ ಯಾವ ತಪ್ಪುಮಾಡಿದೆ?"

"ನೀನು ಯಾವ ತಪ್ಪು ಮಾಡಿಲ್ಲ – ತಪ್ಪೆಲ್ಲಾ ನನ್ನದೇ!"

"ನೀವು ಇಂದೇಕೋ ಒಂದು ಬಗೆ ಇದ್ದೀರಿ. ಪ್ರಯಾಣದ ದಣಿವಿನಿಂದ ಕೊಂಚ ವಿಶ್ರಮಿಸಿಕೊಳ್ಳಿ –" ಎಂದು ಹೇಳಿ, ಅಚ್ಯುತರಾಯನಿಗೆ ಶಾಂತಿ ಕದಡಿರುವ ಹೊತ್ತಿನಲ್ಲಿ ಮಾತನಾಡಿ ಪ್ರಯೋಜನವಿಲ್ಲವೆಂದು ಅಲ್ಲಿಂದ ಹೊರಟು ಹೋದಳು—

ಆ ರಾತ್ರಿ ಅಚ್ಯುತರಾಯನ ಜೀವನದಲ್ಲಿ ಕಾಳರಾತ್ರಿಯಾಗಿತ್ತು. ಅವನ ದೈಹಿಕ ಯಾತನೆಯ ಜೊತೆಗೆ ಮಾನಸಿಕ ಯಾತನೆಯೂ ಸೇರಿತ್ತು. ಅವನ ಜೀವಕ್ಕೆ ಗೆದ್ದಲು ಹತ್ತಿದಷ್ಟು ನೋವಾಗುತ್ತಿತ್ತು. ಅವನು ನೋವಿನ ಉದ್ಗಾರ ತೆಗೆಯುತ್ತಾ ಹಾಸಿಗೆಯಲ್ಲಿ ಹೊರಳುತ್ತಿದ್ದನು. ಅವನ ಚೀರಾಟ, ಗೋಳಾಟವನ್ನು ಕೇಳಿ ಅವಳ ಕರುಳು ಕಿತ್ತುಬರುವಷ್ಟು ವ್ಯಥೆಯಾಗುತ್ತಿತ್ತು. ಅಳುವು ಒಂದೇ ಅವಳಿಗೆಗೊತ್ತಿದ್ದ ದಾರಿ. ರಾಜವೈದ್ಯರಾದರೂ ಬಳಿಯಲ್ಲಿದ್ದಿದ್ದರೆ

ಗಾಢವಾಗಿ ನಿದ್ರೆ ಬರುವ ಔಷಧವನ್ನು ಕೊಡುತ್ತಿದ್ದರು. ಆದರೆ ಅವರೂ ಕಾಣೆಯಾಗಿದ್ದರು. ಎಲ್ಲಿ ಹೋದರೆಂದು ವಿಚಾರಿಸಲಾಗಿ ಸಲಕಂ ಸೋದರರೊಡನೆ ಅವರು ಮಾತನಾಡುತ್ತಿದ್ದುದನ್ನು ತಾವು ನೋಡಿದುದಾಗಿಯೂ ಸೇವಕರು ತಿಳಿಸಿದರು. ಆದರೆ ಸೋದರರನ್ನು ಕೇಳಿದಾಗ ಅವರು ರಾಜವೈದ್ಯರನ್ನು ಕಂಡೇ ಇಲ್ಲವೆಂದು ತಿಳಿಸಿದರು. ಅವರಿಗೆ ಅಚ್ಯುತರಾಯನು ನೋವಿನಿಂದ ನರಳುವುದು ಬೇಕಾಗಿದ್ದಿತೇ ಹೊರತು, ವೈದ್ಯರ ನೆರವು ಕೊಡುವುದು ಬೇಕಿರಲಿಲ್ಲ. ಅವರಿಗೆ ತಮ್ಮನ್ನು ಎದುರಿಸಿದ ಅಚ್ಯುತರಾಯನಿಗೆ ತಕ್ಕ ಶಾಸ್ತಿಯಾಯಿತೆಂದು ಅಂತರಂಗದಲ್ಲಿ, ಆನಂದವಾಗಿದ್ದಿತಾದರೂ, ತಂಗಿಯು ಕಣ್ಣೀರು ಸುರಿಸುವ ಮುಖ ನೋಡಿ, ಅವರೂ ವ್ಯಥೆಪಡುವ ಸೋಗುಹಾಕಿ, ಕೆಲವುಕಾಲ ಅಲ್ಲಿದ್ದು ಆನಂತರ ಹೊರಟುಹೋದರು.

ಆದರೆ ವರದಾದೇವಿಯ ದುಃಖ ಮಾತಿಗೆ ಮೀರಿತ್ತು. ಅವಳು ಗಂಡನ ಕಾಲುಗಳ ಬಳಿ ತಲೆಯಿಟ್ಟು ಕಣ್ಣೀರಿನ ಕಾರಂಜಿ ಪುಟಿಸುತ್ತಿದ್ದಳು. ತನಗಾಗಿ ಪತ್ನಿ ಅಳುತ್ತಿರುವುದನ್ನು ಕಂಡು, ಅವಳನ್ನು ಬಳಿ ಸೆಳೆದುಕೊಂಡು, "ವರದಾ ಏಕೆ ಇಷ್ಟು ದುಃಖಿಸುತ್ತಿದ್ದೀಯೆ? ಏನಾಗಿದೆ?" ಎಂದು ನಗಲೆತ್ನಿಸಿದ. ಆದರೆ ಸಾಧ್ಯವಾಗಲಿಲ್ಲ. ಉಸಿರುಎಳೆದುಕೊಂಡು ಬಂತು. ಅಸಾಧ್ಯವಾದ ಕೆಮ್ಮಿನ ಧಾಳಿ ಎದ್ದಿತು.

"ಪ್ರಭು ಮಾತನಾಡಿ ದಣಿಯಬೇಡಿ!"

"ಇಲ್ಲ ವರದಾ ಇದೊಂದು ದಿನ ತಡೆಯಬೇಡ. ನಾನು ಹೇಳುವುದನ್ನೆಲ್ಲಾ ಇಂದೇ ಹೇಳಿಬಿಡಬೇಕು – ಮಾತನಾಡಲು ಶಕ್ತಿಯಿರುವಾಗ ಹೇಳಿಬಿಡಬೇಕು! ನಾನು....ನಾನು ಉಳಿದರೆ ಇಂದು ನಾಳೆ ಉಳಿಯಬಹುದು! ನನ್ನನ್ನು ಈ ಸ್ಥಿತಿಗೆ ತಂದವರು ಯಾರೆಂದು ನಿನಗೆ ಇದುವರೆಗೆ ತಿಳಿಸಲಾಗಲಿಲ್ಲ. ಇದೆಲ್ಲಾ ನಿನ್ನ ನೀಚ ಸೋದರರ ಪ್ರಭಾವ! ನನ್ನ ಮೇಲಿನ ಸಿಟ್ಟನ್ನು ಅವರು ಹೀಗೆ ತೀರಿಸಿಕೊಂಡಿದ್ದಾರೆ. ಅವರು ನನ್ನನ್ನು ಕೊಲ್ಲಲು ಹಾಕಿದ ವಿಷದ ಪ್ರಭಾವ ಇದೆಲ್ಲಾ! ಇದರಿಂದ ನನಗೆ ಮುಕ್ತಿಯಿಲ್ಲ! ನನ್ನ ಕಥೆ ಮುಗಿಯಿತು! ನಾಳೆ ನೀನು ಆ ದ್ರೋಹಿಗಳನ್ನು ವಿರೋಧಿಸಿದರೆ, ನಿನಗೂ ಇದೇ ಸ್ಥಿತಿ ಬರಬಹುದು! ಇನ್ನಾದರೂ ಆ ದುಷ್ಟರಿಂದ ದೂರವಿರಲು ಯತ್ನಿಸು. ಅವರು ಸಿಂಹಾಸನದ ಮೇಲೆ ಕಣ್ಣಿಟ್ಟಿದ್ದಾರೆ. ಯಾರನ್ನೂ ಅವರು ಉಳಿಸುವುದಿಲ್ಲ. ನಿನ್ನನ್ನೂ....ಕುಮಾರನನ್ನೂ....ಈ ಮಾತು ಖಂಡಿತ!" ಎಂದು ಕಷ್ಟದಿಂದ ಹೇಳಿ ಕಣ್ಣುಮುಚ್ಚಿದ.

ಇಷ್ಟು ಮಾತು ಹೇಳಬೇಕಾದರೆ, ಅವನ ಪ್ರಾಣ ಕುತ್ತಿಗೆಗೆ ಬಂದಿತ್ತು. ಆಯಾಸಗೊಂಡು ಮಲಗಿದ. ಬಹುಬೇಗನೆ ನಿದ್ರೆಹತ್ತಿತ್ತು. ಆದರೆ ನಿದ್ರೆ

ಯಲ್ಲೂ ಏನೇನೋ ಕನವರಿಕೆಗಳು. ಮಧ್ಯರಾತ್ರಿಯ ವೇಳೆಗೆ ಕನವರಿಕೆ ನಿಂತಿತ್ತು. ಎಲ್ಲರೂ ಅವನು ಗಾಢನಿದ್ರೆಯಲ್ಲಿರುವನೆಂದು ಬಗೆದರು. ಆದರೆ ಅವನು ಎಂದೆಂದಿಗೂ ಮುಗಿಯದ ಗಾಢ ನಿದ್ರೆಯಲ್ಲಿರುವನೆಂದು ತಿಳಿಯಲಿಲ್ಲ. ಬೆಳಗಾಯಿತು. ಆದರೆ ಅಚ್ಯುತರಾಯನ ಪಾಲಿಗೆ ಇನ್ನೂ ಕಾರಿರುಳು ಕಳೆದಿರಲಿಲ್ಲ. ಅವನು ನಿದ್ರಿಸುತ್ತಲೇ ಇದ್ದ.

೨೦

ಅಚ್ಯುತರಾಯನ ಮರಣದಿಂದ ಸಲಕಂ ಸೋದರರ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತೆ ಆಯಿತು. ಅವರ ಬಹುಕಾಲದ ನಿರೀಕ್ಷೆ ಕೈಗೂಡುವ ಸೂಚನೆ ತೋರಿತ್ತು. ಅವರು ಕೊಲೆ, ಸುಲಿಗೆ, ಮೋಸ ವಂಚನೆಗಳ ನೂಲೇಣಿಯ ಮೇಲೆ, ಒಂದೊಂದೇ ಮೆಟ್ಟಿಲನ್ನೇರಿದ್ದರು. ಇನ್ನೇನು ಅವರು ಗುರಿ ಮುಟ್ಟಿದಂತೆ ತೋರುತ್ತಿತ್ತು. ಇನ್ನೆಲ್ಲಾ ಒಂದೇ ಮೆಟ್ಟಿಲು ಅದನ್ನು ಜಿಗಿದರೆ ಸಿಕ್ಕುವುದೇ – ಅಖಂಡ ಸಾಮ್ರಾಜ್ಯದ ಸಾಮ್ರಾಟ ಪದವಿ! ಅವರ ಎಲ್ಲ ಆಸೆಗಳ ಚರಮಗುರಿ! ಅವರ ಎಲ್ಲ ಹೊಂಗನಸುಗಳ ಸಾಕ್ಷಾತ್ಕಾರ! ಸಿಂಹಾಸನ ಅವರಿಗೆ ಇಂದು ಕನಸಾಗಿ ತೋರಲಿಲ್ಲ–ಕೈಚಾಚಿದರೆ ಸಿಕ್ಕುವಷ್ಟು ದೂರದಲ್ಲಿತ್ತು. ಆದರೆ ಅದಕ್ಕೆ ಅಂಟಿಕೊಂಡಿದ್ದ ಒಂದೆರಡು ಮುಳ್ಳುಗಳನ್ನು ನಿವಾರಿಸಬೇಕಾಗಿತ್ತು? ಅವರು ಹತ್ತು ವರ್ಷಗಳಿಂದ ಅಹೋರಾತ್ರಿ ಸಿದ್ಧಪಡಿಸಿದ್ದ ಸಂಚನ್ನು ಒಂದೇ ರಾತ್ರಿಯಲ್ಲಿ, ತಮ್ಮ ದುಡುಕು ವರ್ತನೆಯಿಂದ ಮಣ್ಣುಗೂಡಿಸಲು ಅವರಿಗೆ ಇಷ್ಟವಿರಲಿಲ್ಲ. ಅಂತಲೇ ಅವರು ದುಡುಕದೆ ಕಾದರು, ತಮ್ಮ ಸರದಿ ಬರುವ ತನಕ!

ಅಚ್ಯುತರಾಯನ ಮರಣದಿಂದ ಜನತೆಗೆ ಉಲ್ಲಾಸವಾಗಲೀ, ಆನಂದವಾಗಲೀ ಉಂಟಾಗಲಿಲ್ಲ. ಸಲಕಂ ಸಹೋದರರು ಸಾಮ್ರಾಜ್ಯಕ್ಕೆ ರಾಹುಕೇತುಗಳಂತಿರುವಾಗ ಯಾರು ಸಿಂಹಾಸನಕ್ಕೆ ಬಂದರೂ, ತಮ್ಮ ಸ್ಥಿತಿ ಉತ್ತಮಗೊಳ್ಳುವುದಿಲ್ಲವೆಂದು ಅವರು ಅರಿತಿದ್ದರು. ತಮ್ಮನ್ನು ಅವರ ನಿರಂಕುಶಾಡಳಿತದಿಂದ, ಕಿರುಕುಳದಿಂದ ಎಂದಿಗೆ ತಪ್ಪಿಸುವನೋ ಎಂದು ಹಗಲಿರುಳು ಪಂಪಾಪತಿಯಲ್ಲಿ ಮೊರೆಯಿಡುವುದಷ್ಟೇ ಅವರ ಪಾಲಿನ ಕೆಲಸವಾಗಿತ್ತು.

ದೇಶದಲ್ಲಿ ಎಲ್ಲಿ ನೋಡಿದರೂ ಅತೃಪ್ತಿ, ಅನಿಶ್ಚಯತೆ, ಅಶಾಂತಿ, ಅರಾಜಕತೆ, ಅನಾಯಕತೆಗಳು ತಾಂಡವನಾಡುತ್ತಿದ್ದವು. ಜನತೆ ಕ್ರೋಧದಿಂದ, ಅಸಹನೆಯಿಂದ ಕುದಿಯುತ್ತಿದ್ದರು. ಅದು ಜ್ವಾಲಾಮುಖಿಯಾಗಿ, ಲಾಲಾರಸವಾಗಿ, ಆಸ್ಫೋಟಗೊಳ್ಳುವವರೆಗೆ ಸಲಕಂ ಸಹೋದರರ ದಬ್ಬಾಳಿಕೆ ಅವ್ಯಾಹತವಾಗಿ ನಡೆಯಬಹುದಿತ್ತು! ಜನತೆಯ ಕ್ರೋಧಾಗ್ನಿ, ಕಾಳ್ಗಿಚ್ಚಿನಂತೆ ಹಬ್ಬುವವರೆಗೆ ಅವರ ನಿರಂಕುಶಾಡಳಿತ ತಡೆಯಿಲ್ಲದೆ ನಡೆಯಬಹುದಾಗಿತ್ತು!

ಜನತೆ ಅವರ ಪಾಪದ ಬಟ್ಟಲು ತುಂಬುವವರೆಗೆ, ಸೈರಣೆಯಿಂದ ಸಹಿಸಿಕೊಳ್ಳ ಬೇಕಾಗಿತ್ತು! ಅಧಿಕಾರದ ವಿಷ ದೇಹದಲ್ಲಿ ವ್ಯಾಪಿಸುವ ತನಕ ಸುಮ್ಮನಿರ ಬೇಕಾಗಿತ್ತು! ಒಮ್ಮೆ ವಿಷ ಅಂಗಾಂಗಗಳನ್ನು, ವ್ಯಾಪಿಸಿ, ತಿಂದ ಆಹಾರ, ಕುಡಿದ ನೀರು, ತೆಗೆದುಕೊಂಡ ಗಾಳಿಯೂ ವಿಷವಾದ ಮೇಲೆ ವಿಷಜಂತುವನ್ನು ಹೊಸೆದು ಕೊಲ್ಲುವಂತೆ, ಅವರನ್ನು ನಿರ್ಮೂಲಗೊಳಿಸಲು ನಿಶ್ಚಯಿಸಿದ್ದರು. ಜನತೆಯ ಸೈರಣೆ ಸಹನೆಗಳನ್ನು ಅವರು ತಪ್ಪು ತಿಳಿದಿದ್ದರು. ನೇಗಿಲ ಹೋರಿ ಸಾಧುವೆಂದು, ಕೊಂಬು ಹಿಡಿದು ಅದರ ಹಲ್ಲನ್ನು ನೋಡಲು ಹೊರಟಿದ್ದರು! ಅದು ಕೆರಳಿತೆಂದರೆ ತಮ್ಮನ್ನು ತಿವಿದು ತುಳಿಯುವುದೆಂಬ ಪರಿಜ್ಞಾನಮಾತ್ರ ಇರಲಿಲ್ಲ. ಅಂತಹೇ ಅವರು ಅಧಿಕಾರೋನ್ಮತ್ತರಾಗಿ ಮೈಮೇಲೆ ಎಚ್ಚರವಿಲ್ಲದಷ್ಟು ಸೊಕ್ಕಿದ್ದರು – ಇನ್ನೆಲ್ಲಾ ಒಂದೇ ಒಂದು ಮೆಟ್ಟಲು – ಅವರು ಹಾತೊರೆಯುತ್ತಿದ್ದ ಸ್ವರ್ಗ ಸಿಕ್ಕಲು – ಅದು ಕುಮಾರ ವೆಂಕಟಾದ್ರಿಯ ಕೊಲೆ....

ತಮ್ಮ ದುರಾಲೋಚನೆಗಳ ಸೆರೆಯನ್ನು ಅರಿಯದೆ, ಪ್ರೀತಿಯ ಮಳೆಗರೆಯುತ್ತಿದ್ದ, ತಂಗಿ ವರದಾದೇವಿಯನ್ನು ಅಷ್ಟು ಸುಲಭವಾಗಿ ವಂಚಿಸುವುದು ಕಷ್ಟವಾಗಿತ್ತು – ಅವಳಿಗೆ ಅವರಲ್ಲಿದ್ದ ನಂಬಿಕೆ ಅಪಾರವಾಗಿತ್ತು! ಅವಳು ಅವರ ಅಭ್ಯುದಯದ ಸಲುವಾಗಿ ಯಾವ ಸಾಹಸಕ್ಕೂ ಸಿದ್ಧವಿದ್ದಳು. ಅಂತಹವಳನ್ನೂ ತಮ್ಮ ಒಡಹುಟ್ಟಿದ, ವರದಾದೇವಿಯನ್ನು ವಂಚಿಸುವುದು ಅವರಿಗೆ ಕಠಿನವಾಗಿತ್ತು.

ಅಚ್ಯುತರಾಯನು ಸಾಯುವ ಮುನ್ನ ಹೇಳಿದ್ದ ಸಂಗತಿಗಳು ವರದಾದೇವಿಯ ತಲೆಗೆ ಚೆನ್ನಾಗಿ ನಾಟಿತ್ತು. ಅಚ್ಯುತರಾಯನು. ತಮ್ಮ ಕ್ಷೇಮ ಅಭ್ಯುದಯದ ಸಲುವಾಗಿ ಹೋರಾಡಿ, ಕಡೆಗೆ ತನ್ನ ಸೋದರರ ವಿದ್ರೋಹಕ್ಕೆ ಒಳಗಾಗಿ ಮರಣ ಹೊಂದಿದನೆಂಬುದು ತಿಳಿದಿತ್ತು. ಅಚ್ಯುತರಾಯನು ಸದುದ್ದೇಶಸಾಧನೆಗಾಗಿ ಹೋರಾಡಿ ಮಡಿದ ಹುತಾತ್ಮನಂತೆ ಅವಳ ಭಾಗಕ್ಕೆ ಕಂಡಿದ್ದ – ಆದರೆ ಅವರು ತಮ್ಮ ತಂಗಿಯ ಮಾಂಗಲ್ಯಕ್ಕೂ, ಸೌಭಾಗ್ಯಕ್ಕೂ ಧಕ್ಕೆ ತರುವ ಇಂಥ ನೀಚ ಕೆಲಸ ಮಾಡುವರೇ ಎಂಬ ಅನುಮಾನ ಭಾದಿಸುತ್ತಿತ್ತು. ಸೋಮರಸನನ್ನೂ, ಇತರ ಸಾಮ್ರಾಜ್ಯನಿಷ್ಠ ಸೇವಕರನ್ನೂ, ಕೇವಲ ರಾಜದ್ರೋಹದ ಅಪಾದನೆಯಿಂದ ಕೊನೆಗೊಳಿಸಿದ್ದ, ಸಲಕಂ ಸೋದರರು ತನ್ನ ಗಂಡನ ವಿರುದ್ಧ ದ್ರೋಹ ಬಗೆಯಲಿಲ್ಲವೆಂದು ಏನು ನಿಶ್ಚಯ? ಆದರೆ ಅಚ್ಯುತರಾಯನು ತಮ್ಮ ತಂಗಿಯ ಬಾಳಿನ ಬೆಳಕು ಅವಳೆಲ್ಲ ಸುಖ, ಸಂತೃಪ್ತಿಗಳು ಅವನಿಂದ! ತಮಗೆ ಅನ್ನ ಕೊಟ್ಟು ಕಾಪಾಡಿದ ಧಣಿ! ಇಂತಹವನಿಗೆ ವಿಷವಿಟ್ಟು ಕೊಲ್ಲುವಂತಹ ವಂಚಕರೇ ಅವರು?....ಖಂಡಿತ ಇರಲಾರದು. ಎಂದಿತು ಒಂದು ಮನಸ್ಸು 'ಹುಲಿಗೆ ತನ್ನ ಕಾಡಾದರೇನು? ಪರರ ಕಾಡಾದರೇನು? ಅದು ದುಷ್ಟ ಜಂತು!' 'ಇವರು ಮಾನವರು' 'ಇವರಿಗೂ

ದುಷ್ಟಮೃಗಗಳಿಗೂ ಭೇದವೇ ಇಲ್ಲ!' 'ಇವರಿಗೆ ತಮ್ಮ ವಿರುದ್ಧ ನಿಲ್ಲುವ ಎಲ್ಲರೂ ಶತ್ರುಗಳೇ! ಅವರು ಉದ್ದೇಶ ಸಾಧನೆಗಾಗಿ ಯಾರನ್ನೂ ಉಳಿಸುವುದಿಲ್ಲ!'

ಇದೇ ಮಾತನ್ನು ಅಚ್ಯುತರಾಯನೂ ಹೇಳಿದ್ದ, ಎಚ್ಚರಿಸಿದ್ದ. ಅವರು ಬಗೆದಿದ್ದ ಎಲ್ಲ ದ್ರೋಹವನ್ನೂ ಅರಿತಿದ್ದುದರಿಂದಲೇ ಅವನು ತನ್ನ ಪತ್ನೀ, ಪುತ್ರರಿಗೆ, ಅವರ ವಿದ್ರೋಹ ತಿಳಿಸಿ ಎಚ್ಚರಿಸಿದ! ಇದಕ್ಕೆ ಕಿವಿಗೊಡುವುದೂ ಬಿಡುವುದೂ ಅವಳಿಗೆ ಸೇರಿದ ಸಂಗತಿ! ಅಚ್ಯುತರಾಯನು ತನ್ನ ಪಾಲಿನ ಕೆಲಸ ನಿರ್ವಹಿಸಿದ್ದ! ಅವಳ ತನ್ನಂತೆ, ಸಲಕಂ ಸಹೋದರರ ವಿದ್ರೋಹಕ್ಕೆ ಬಲಿಯಾಗಬಾರದೆಂಬ ಆಶಯದಿಂದ, ಈ ಎಲ್ಲ ಸಂಗತಿ ವರದಾಂಬಿಕೆಯ ಮೇಲೆ ವಿಲಕ್ಷಣ ಪರಿಣಾಮ ಮಾಡಿದ್ದುವು.

ಅಚ್ಯುತರಾಯನಿಗೆ, ತನಗೆ ಸಲಕಂ ಸಹೋದರರು ವಿಷಹಾಕಿರುವರೆಂಬುದು ಹೇಗೆ ತಿಳಿಯಿತೆಂಬುದು ವರದಾಂಬಿಕೆಗೆ ತಿಳಿಯದಾಯಿತು ನಿಜವಾಗಿದ್ದರೆ, ಅದನ್ನು ಮೊದಲೇ ತನ್ನೊಡನೆ ಹೇಳದೆ ಇದ್ದುದೇಕೆ? ಈ ವಿಷಯ ನಿಜವಾಗಿದ್ದರೆ ರಾಜವೈದ್ಯರಿಗೆ ತಿಳಿಯದೆ ಹೋಗುತ್ತಿತ್ತೆ? ಬಹುಶಃ ತಿಳಿದಿರಬಹುದು—ತನುಗೆ ತಿಳಿಸದೆ ಹೋಗಿರಬಹುದು. ಯಾಕೋ ಒಂದು ಆಲೋಚಿಸಿದರೆ – ನೂರಾರು ಅನುಮಾನಗಳು ತಲೆಯಲ್ಲಿ ಮುತ್ತುತ್ತಿದ್ದವು. ಈ ಬಗ್ಗೆ ಅವಳು ಹೆಚ್ಚಿನ ಶೋಧನೆ ನಡೆಸಲು ಅಚ್ಯುತರಾಯನ ಕೊನೆಯ ದಿನಗಳಲ್ಲಿ ನಡೆದ ಘಟನೆಗಳು ಹುರುಪುಕೊಟ್ಟವು. ಅಂದಿನ ಘಟನೆಗಳನ್ನು ವಿಚಾರ ಮಾಡಿದಂತೆ, ತನಗೆ ತಿಳಿಯದ ಯಾವುದೋ ರಹಸ್ಯ ಅಚ್ಯುತರಾಯನಿಗೆ ತಿಳಿದಿತ್ತೆನ್ನುವುದು ಸ್ಪಷ್ಟವಾಗಿತ್ತು. ಅಂತಲೇ ಅವನು ಹಾಸಿಗೆ ಬಿಟ್ಟೆದ್ದು ಕುಳಿತುಕೊಳ್ಳಲಾಗದಿದ್ದರೂ, ಚಿನ್ನಾದೇವಿಯನ್ನು ನೋಡಿ ಬಂದಿದ್ದನು. ಅವಳೊಡನೆ ಅವನು ಏನು ಸಂಗತಿ ಮಾತನಾಡಿದನೆಂದು ಇದುವರೆಗೆ ಯಾರಿಗೂ ತಿಳಿದಿರಲಿಲ್ಲ – ತಿಳಿಸುವ ಮುನ್ನ ಅಚ್ಯುತರಾಯನು ತನ್ನ ಕಡೆಯುಸಿರನ್ನು ಎಳೆದಿದ್ದ. ಅವರ ರಹಸ್ಯವನ್ನು ಭೇದಿಸಲಾರದಾಗಿದ್ದಳು ವರದಾದೇವಿ!

ಈ ಬಗ್ಗೆ ಹೆಚ್ಚಿನ ಸಂಗತಿಗಳನ್ನು ರಾಜವೈದ್ಯರಿಂದ ತಿಳಿಯಬಹುದಿತ್ತು. ಆದರೆ ಅವರು ಒಮ್ಮೆಲೆ ಕಣ್ಮರೆಯಾಗಿದ್ದರೂ, ಅಚ್ಯುತರಾಯನು ನರಳುತ್ತಾ ಬಿದ್ದಿದ್ದರೂ, ಅವರಿಗಾಗಿ ಹಂಬಲಿಸುತ್ತಿದ್ದರೂ ರಾಜವೈದ್ಯರು ಹಾಸಿಗೆಯ ಬಳಿ ಇರಲಿಲ್ಲ. ಅವರು ಎಲ್ಲಿ ಹೋದರು? ಏನಾದರು? ಅವರ ನಿರ್ಗಮನಕ್ಕೆ ಕಾರಣವೇನೆಂದು ವಿಚಾರಿಸಿದಾಗ, ಅವರನ್ನು ಸಲಕಂ ಸೋದರರು ಕೋಟೆಯ ಸೆರೆಮನೆಯಲ್ಲಿ ಬಂಧಿಸಿರುವರೆಂದು ತಿಳಿಯಿತು. ಈ ಸಂಗತಿಯನ್ನು ಕೇಳಿ ಅವಳು ನಿಬ್ಬೆರಗಾದಳು. ರಾಜವೈದ್ಯರನ್ನು ತನ್ನ ಸೋದರರೇ ಬಂಧಿಸಿ ಇಟ್ಟಿದ್ದರೆ—

ತನಗೇಕೆ ಅವರು ಸುಳ್ಳು ಹೇಳುತ್ತಿದ್ದರು? ಅಚ್ಯುತರಾಯನಿಗೆ ತಿಳಿದಿದ್ದ ವಿಷಯ ತನಗೂ ತಿಳಿಯುವುದೆಂದು ಅವರು ಹೆದರಿದರೆ? ತಾನೇಕೆ ರಹಸ್ಯವಾಗಿ ಆ ರಾಜವೈದ್ಯರನ್ನು ಭೇಟಿಮಾಡಿ ಈ ಎಲ್ಲ ಸಂಗತಿಯ ನಿಜವಾದ ಸ್ವರೂಪ ತಿಳಿಯಬಾರದು? ಎಂದು ಆಲೋಚಿಸಿ ಅವಳು ವೇಷ ಮರೆಸಿಕೊಂಡು, ಸೆರೆಯಲ್ಲಿದ್ದ ರಾಜವೈದ್ಯರನ್ನು ನೋಡಲು ಹೊರಟಳು.

ಅರಮನೆಯ ಕೋಟೆಯ ಸೆರೆಮನೆಯ ಅಧಿಕಾರಿ ಪರಿಚಯ ವರದಾದೇವಿಗೆ ಚೆನ್ನಾಗಿದ್ದುದರಿಂದ ರಾಜವೈದ್ಯರನ್ನು ಭೇಟಿ ಮಾಡಲು ಕಷ್ಟವಾಗಲಿಲ್ಲ. ಆದರೆ ಇದು ರಹಸ್ಯ ಭೇಟಿ ಎಂದು ಸಲಕಂ ಸಹೋದರರಿಗೆ ಈ ಸಂಗತಿಯನ್ನು ತಿಳಿಸಬಾರದೆಂದು ಹೇಳಿದಾಗ ಮಾತ್ರ ಅವನಿಗೆ ಆಶ್ಚರ್ಯವಾಯಿತು – ಆ ಬಗ್ಗೆ ಭರವಸೆ ಕೊಡುವವರೆಗೆ ವರದಾದೇವಿ ಬಿಡಲಿಲ್ಲ.

ವರದಾದೇವಿ ರಾಜವೈದ್ಯರಿಗೆ ಬಂದ ಸ್ಥಿತಿ ಕಂಡು ಮರುಗದಿರಲಿಲ್ಲ. ಆದರೆ ಆ ಬಗ್ಗೆ ಅವಳು ಏನೂ ಮಾಡುವಂತಿರಲಿಲ್ಲ. ಈ ಭೇಟಿಯನ್ನು ಗೋಪ್ಯವಾಗಿರಿಸಬೇಕೆಂದು ಉತ್ಸುಕಳಾಗಿದ್ದ ವರದಾದೇವಿ, ಕೆಲವೇ ಮಾತುಗಳಲ್ಲಿ ತಾನು ಬಂದ ಕಾರ್ಯ ತಿಳಿಸಿ, ಪಂಪಾಪತಿಯ ಆಜ್ಞೆಯಿಟ್ಟು ತನಗೆ ಸತ್ಯಸಂಗತಿಗಳನ್ನು ತಿಳಿಸಬೇಕೆಂದು ರಾಜವೈದ್ಯರನ್ನು ಬೇಡಿಕೊಂಡಳು.

"ಪ್ರಭುಗಳು ಸಾಯುವ ಮುನ್ನ ನನಗೆ ಸಲಕಂ ಸಹೋದರರ ವಿದ್ರೋಹದ ಬಗ್ಗೆ ಎಚ್ಚರ ಹೇಳಿ ತೀರಿಕೊಂಡರು. ನನ್ನ ಸಹೋದರರು ತಮ್ಮ ವಿಷವಿಟ್ಟು ಕೊಂದಿರುವರೆಂದು ಅವರು ತಿಳಿಸಿದರು. ಈ ಸಂಗತಿ ನಿಜವೇ?"

"ಇದು ಅಕ್ಷರಶಃ ನಿಜ ತಾಯಿ!"

"ಇದು ನಿಮಗೆ ತಿಳಿದಿತ್ತೆ!"

"ತಿಳಿದಿತ್ತು!"

"ಹಾಗಾದರೆ ನೀವು ಈ ಸಂಗತಿಯನ್ನು ನನಗೇಕೆ ಈ ಮೊದಲೇ ತಿಳಿಸದೆಹೋದಿರಿ?"

"ನನಗೆ ಅವರು ಹಾಸಿಗೆ ಹಿಡಿದು, ವಿಚಿತ್ರ ವ್ಯಾಧಿಯಿಂದ ಮಲಗಿದಂದೇ ಸಂಗತಿ ಹೀಗಿರಬಹುದೆಂದು ಅನುಮಾನವಾಯಿತು. ಅವರ ದೇಹ ಪರೀಕ್ಷಿಸಿದಾಗ ನನ್ನ ಊಹೆ ಯಾಥಾರ್ಥವೆಂದು ತಿಳಿಯಿತು. ಈ ಸಂಗತಿಯನ್ನು ಪ್ರಭುಗಳಿಗೆ ತಿಳಿಸಿದೆ. ಆದರೆ ಅವರು ಇದನ್ನು ಕೇಳಿ ನಕ್ಕುಬಿಟ್ಟರು. 'ಅವರು ವಿಷಹಾಕಿದ್ದರೆ, ಕೂಡಲೇ ಸಾಯದೆ ಇಷ್ಟು ಕಾಲ ನರಳಬೇಕೆ?' ಎಂದು ಪ್ರಶ್ನಿಸಿದರು, 'ವಿಷಗಳಲ್ಲಿ ನಾನಾ ಬಗೆಯ ವಿಷಗಳಿವೆ ಎಂದೂ, ಅವರನ್ನು ನಿಧಾನವಾಗಿ ಕೊಲೆಮಾಡಿ, ಆರೋಪವನ್ನು ತಪ್ಪಿಸಿಕೊಳ್ಳಲು, ಅವರು ಹೀಗೆ ಮಾಡಿರಬಹುದೆಂದು ತಿಳಿಸಿದೆ. ಆದರೆ ಅವರಿಗೇಕೋ ನನ್ನ ಮಾತಿನಲ್ಲಿ ನಂಬಿಕೆ

ಹುಟ್ಟಲಿಲ್ಲ. ಈ ಸಂಗತಿಯನ್ನು ಯಾರಿಗೂ ತಿಳಿಸಬಾರದೆಂದೂ, ಇದರಿಂದ ನನ್ನ ಜೀವಕ್ಕೇ ವಿಪತ್ತು ಬರುವುದೆಂದೂ ಸೂಚಿಸಿದರು. ಆದರೆ ಸಾಯುವ ಹಿಂದಿನ ದಿನ ಪ್ರಭುಗಳು ನನ್ನನ್ನು ಕರೆದು ನಾನು ಹೇಳಿದ ಮಾತು ನಿಜವೆಂದೂ, ಅವರು ಅದನ್ನು ಉಪೇಕ್ಷೆ ಮಾಡಿದುದು ತಪ್ಪಾಯಿತೆಂದೂ ಪಶ್ಚಾತ್ತಾಪಪಟ್ಟರು. ಅನಂತರ ಅವರು ತಮಗೆ ಅನ್ನಪೂರ್ಣಾದೇವಿಯು ಬಂದು ಸಂದರ್ಶನ ಕೊಟ್ಟ ಸಂಗತಿಯನ್ನೆಲ್ಲಾ ವಿವರಿಸಿ, ಅದನ್ನು ಗೋಪ್ಯವಾಗಿಡುವಂತೆ ತಿಳಿಸಿದರು. ಅಂತಲೇ ನಾನು ಯಾವ ಸಂಗತಿಯನ್ನೂ ನಿಮಗೆ ತಿಳಿಸಲಿಲ್ಲ."

"ಹಾಗಾದರೆ, ನನ್ನ ಸೋದರರು ವಿಷವಿಟ್ಟು ಪ್ರಭುಗಳನ್ನು ಕೊಂದಿರುವುದು ನಿಜವೇ?"

"ಪಂಪಾಪತಿಯಾಣೆಗೂ ನಿಜ! ನಿಮಗೆ ಈ ಎಲ್ಲ ಸಂಗತಿಯನ್ನು ನಾನೇ ಹೇಳಿ ಎಚ್ಚರಿಸಬೇಕೆಂದಿದ್ದೆ. ಆದರೆ ದುರ್ದೈವದಿಂದ ಆ ಮೊದಲೇ ಸೆರೆಮನೆ ಸೇರಬೇಕಾಯಿತು!"

"ನಿಮ್ಮನ್ನು ಅವರು ಸೆರೆಯಲ್ಲಿಡಲು ಕಾರಣವೇನು?"

"ನಾನು ಅವರಿಗೆ ಚಿನ್ನಾದೇವಿಯೊಡನೆ, ನಡೆದ ಮಾತುಕತೆಗಳನ್ನು ತಿಳಿಸಲೊಪ್ಪಲಿಲ್ಲ. ಈ ಕಾರಣಕ್ಕಾಗಿ ಅವರು ನನ್ನನ್ನು ಸೆರೆಯಲ್ಲಿಟ್ಟರು!"

"ಯಾವಾಗ ಸೆರೆಯಲ್ಲಿಟ್ಟರು!"

"ನಾವು ಅರಮನೆಗೆ ಹಿಂದಿರುಗಿದ ಕೂಡಲೇ."

"ಆದರೆ ನಿಮ್ಮ ಬಗ್ಗೆ ವಿಚಾರಿಸಿದಾಗ ನಿಮ್ಮನ್ನು ಕಂಡೇ ಇಲ್ಲವೆಂದು ಅವರು ತಿಳಿಸಿದರಲ್ಲಾ?"

"ನಡೆದಿದ್ದ ಸಂಗತಿಯನ್ನು ತಿಳಿಸಿದರೆ, ನೀವು ಸಂದೇಹ ತಾಳಬಹುದೆಂದು ಅವರು ಬಹುಶಃ ಹೆದರಿರಬೇಕು. ಅಲ್ಲದೆ ನನ್ನ ಮೂಲಕ ನಿಮಗೆ ಎಲ್ಲ ಸಂಗತಿಗಳೂ ತಿಳಿಯಬಹುದೆಂದು ಪ್ರಭುಗಳ ಅಂತರಂಗಕ್ಕೆ ಸೇರಿದ್ದ ನನ್ನಿಂದ ಅವರ ದ್ರೋಹಗಳೆಲ್ಲ ಹೊರಬಿದ್ದು, ಎಲ್ಲಿ ನನ್ನಿಂದ ಅಪಾಯ ಬರುವುದೋ ಎಂದು ಹೆದರಿ, ನನ್ನನ್ನು ಸೆರೆಯಲ್ಲಿಟ್ಟರು. ನಾನು ಪ್ರಭುಗಳಿಗೆ ಕೊಟ್ಟಿದ್ದ ಆಶ್ವಾಸನ ಕಾರ್ಯರೂಪಕ್ಕೆ ತರುವ ಮುನ್ನವೇ ನನಗೆ ಈ ದುಸ್ಥಿತಿ ಒದಗಿದುದಕ್ಕಾಗಿ ವಿಷಾದವಾಗುತ್ತಿದೆ."

"ಪ್ರಭುಗಳಿಗೆ ನೀವು ಏನು ಆಶ್ವಾಸನ ಕೊಟ್ಟಿದ್ದೀರಿ!"

ರಾಜವೈದ್ಯರು ಹೇಳಲು ಹಿಂಜರಿದು ಕ್ಷಣಕಾಲ ಮೌನ ತಾಳಿದರು.

"ನನ್ನಲ್ಲಿ ನಿಮಗೆ ಅಪನಂಬಿಕೆ ಬೇಡ! ನನಗೆ ಈಗಲೀಗ ಆ ನನ್ನ ಸಹೋದರರ ದ್ರೋಹ ತಿಳಿಯುತ್ತಿದೆ! ಪ್ರಭುಗಳನ್ನು ಅಂತರಂಗಕ್ಕೆ ತೆಗೆದುಕೊಂಡಂತೆ ನನ್ನನ್ನೂ ತೆಗೆದುಕೊಳ್ಳಿ! ನಿಜ ಹೇಳುವುದಾದರೆ ಈ ವಿಷಯ

ಪ್ರಸಂಗದಲ್ಲಿ, ನೀವೇ ನನ್ನ ನಿಜವಾದ ಬಂಧುಮಿತ್ರರು, ನಿಮ್ಮ ಸಹಾಯದಿಂದ ನಾನೂ, ನನ್ನ ಕುಮಾರನೂ ಆ ನೀಚರಿಂದ ಪಾರಾಗಬೇಕಾಗಿದೆ!"

"ಪ್ರಭುಗಳು ನನ್ನಲ್ಲಿ ಸಂಪೂರ್ಣ ನಂಬಿಕೆಯನ್ನಿಟ್ಟಿದ್ದರು ಅವರು ನನ್ನಲ್ಲಿ ತಮ್ಮ ಅಂತರಂಗವನ್ನೆಲ್ಲಾ ತೋಡಿಕೊಂಡಿದ್ದರು – ನಿಮಗೆ ಅವರಲ್ಲಿ ವಿಶ್ವಾಸ ವಿಲ್ಲದುದಕ್ಕಾಗಿ ಬಹಳ ವ್ಯಥೆಪಡುತ್ತಿದ್ದರು. ಆ ದ್ರೋಹಿಗಳ ಮರುಳು ಮಾತಿಗೆ ಬೆರಗಾಗಿ ನೀವು ಗಂಡಾಂತರ ತಂದುಕೊಳ್ಳುತ್ತಿರುವಿರೆಂದು ನಿಮಗಾಗಿ ಮರುಗುತ್ತಿದ್ದರು. ಅವರು ಬದುಕಿರುವ ಪರ್ಯಂತ ನಿಮ್ಮ ಕ್ಷೇಮ, ಹಿತ ರಕ್ಷಣೆಯ ಸಲುವಾಗಿ, ಕುಮಾರನಿಗೆ ಸಿಂಹಾಸನ ಭದ್ರಗೊಳಿಸುವ ವಿಷಯವಾಗಿ ಆತಂಕಗೊಂಡಿದ್ದರು. ಆದರೆ ಅವರಲ್ಲಿ ನಿಮಗೆ ನಂಬಿಕೆಯಿರಲಿಲ್ಲ."

"ಹೌದು, ನಾನು ಪರಮ ಪಾಪಿ! ಆ ಧೂರ್ತರ ಮಾತುಕೇಳಿ ಅವರಿಗೆ ದ್ರೋಹವೆಸಗಿದೆ! ಅವರ ಮಾತುಗಳನ್ನು ಹುಚ್ಚಾಟಗಳೆಂದು ಅಲಕ್ಷಿಸಿದೆ! ಈಗ ನಾನು ಎಂತಹ ತಪ್ಪು ಮಾಡಿದೆನೆಂದು ಅರಿವಾಗಿ ಪಶ್ಚಾತ್ತಾಪವಾಗುತ್ತಿದೆ!"

"ಕಳೆದು ಹೋದುದನ್ನು ಚಿಂತಿಸಿ ಫಲವಿಲ್ಲ! ಈಗ ನೀವೂ ನಿಮ್ಮ ಕುಮಾರನೂ ಗಂಡಾಂತರದಲ್ಲಿ ಬಿದ್ದಿದ್ದೀರಿ! ಈಗ ನೀವು ಬಹಳ ಎಚ್ಚರದಿಂದಿರ ಬೇಕಾಗಿದೆ! ನೀವು ಅವರ ವಿಶ್ವಾಸಿಗಳಂತೆ ನಟಿಸಿಕೊಂಡೇ ಅವರ ಪತನಕ್ಕೆ ಪ್ರಯತ್ನಿಸಬೇಕಾಗಿದೆ! ಈಗ ನೀವು ಸ್ವಾಮಿ ನಿಷ್ಠ ಸೇವಕರಾದ ಅಳಿಯರಾಮ ರಾಯರ ನೆರವು ಪಡೆಯಿರಿ! ಅವರಿಂದ ಮಾತ್ರವೇ ಸಲಕಂ ಸೋದರರ ಪತನ ಸಾಧ್ಯವೆಂದು ಪ್ರಭುಗಳು ಅಚಲವಾಗಿ ನಂಬಿದ್ದರು! ಈ ಕಾರ್ಯವನ್ನು ಸಾಧಿಸಲು ಪ್ರಭುಗಳು ಚಿನ್ನಾದೇವಿಯ ಭೇಟಿ ಮಾಡಿದ್ದರು! ನನ್ನನ್ನು ರಾಮರಾಯರ ಬಳಿಗೆ ಹೋಗಿಬರಲು ನಿಯೋಗಿಸಿದ್ದರು! ಆದರೆ ದುರ್ದೈವದಿಂದ ಮೊದಲೇ ಬಂಧನಕ್ಕೊಳಗಾದೆ!"

"ಈಗಲೂ ಕಾರ್ಯಮಿಂಚಿಲ್ಲ ಹೇಗಾದರೂ ನಿಮ್ಮನ್ನು ಸೆರೆಯಿಂದ ಬಿಡುಗಡೆ ಮಾಡಿಸುತ್ತೇನೆ! ನೀವು ಅಳಿಯ ರಾಮರಾಯರಿಗೆ ಇಲ್ಲಿನ ಸಂಗತಿಗಳನ್ನು ತಿಳಿಸಿ, ಕೂಡಲೇ ರಾಜಧಾನಿಗೆ ಬಂದು ನಮಗೆನೆರವಾಗುವಂತೆ ಮಾಡುತ್ತೀರಾ?"

"ನಿಮ್ಮಿಂದ ಇಷ್ಟು ಉಪಕಾರವಾದರೆ, ಪ್ರಭುಗಳಿಗೆ ನಾನು ಕೊಟ್ಟಿದ್ದ ವಚನ ಪಾಲಿಸಿದಂತೆ ಆಗುತ್ತದೆ. ಅವರ ಆತ್ಮಕ್ಕೆ ಶಾಂತಿ ದೊರಕುತ್ತದೆ!"

"ನೀವು ಯೋಚಿಸಬೇಡಿ, ಸೆರೆಯಿಂದ ತಪ್ಪಿಸಿಕೊಳ್ಳುವ ಬಗ್ಗೆ ಏರ್ಪಾಡು ಮಾಡುತ್ತೇನೆ." ಎಂದು ಹೇಳಿ, ಸೆರೆಮನೆಯ ಅಧಿಕಾರಿಯೊಡನೆ ಬಹಳ ಹೊತ್ತು ರಹಸ್ಯವಾಗಿ ಮಾತನಾಡಿ, ತಾನು ಬಂದ ಕಾರ್ಯ ಸಾಧಿಸಿದ ಹಿಗ್ಗಿನಲ್ಲಿ ವರವಾದೇವಿ ಅರಮನೆಗೆ ಬಂದಳು. ಆದರೆ ಅರಮನೆಯಲ್ಲಿ ತನಗಾಗಿ ಕಾಯುತ್ತಾ ಕುಳಿ

ತಿದ್ದ ಸಲಕಂ ಸೋದರರನ್ನು ನೋಡುತ್ತಲೂ ಅವಳ ಉತ್ಸಾಹ ಸರ್ರನೆ ಇಳಿದು ಹೋಯಿತು. ಅವಳಿಗೆ ಅವರ ದ್ರೋಹ ನೆನೆದು ಅಳು ಬರುವಂತಾಯಿತು – ಅವಳು ಗಳಗಳನೆ ಅತ್ತಳು– ಅವಳನ್ನು ಅವಳ ಸೋದರರೇ ಸಂತೈಸಬೇಕಾಯಿತು.

"ಈ ಅಪರಾತ್ರಿಯಲ್ಲಿ ಎಲ್ಲಿಗೆ ಹೋಗಿದ್ದಿ ವರದಾ?"

"ಆ ಮಧುವನಕ್ಕೆ ಹೋಗಿದ್ದೆ!"

"ನೀನು ಅಲ್ಲಿ ಹೋಗಿ ಆ ಸಮಾಧಿಯ ಬಳಿ ಅತ್ತರೆ ಏನು ಪ್ರಯೋಜನ?"

"ಇದರಿಂದ ನನ್ನ ಮನಸ್ಸಿಗೆ ತೃಪ್ತಿಯಾದರೂ ದೊರೆಯುತ್ತದೆ!"

"ನೀನು ಅಪರಾತ್ರಿಯಲ್ಲಿ ಏಕಾಂಗಿಯಾಗಿ ಅಲ್ಲಿಗೆಲ್ಲಾ ಹೋಗಬಾರದು ವರದಾ! ಅವೆಲ್ಲಾ ಕೆಟ್ಟ ಜಾಗಗಳು! ನೀನು ಮುಂದೆ ನಡೆಯಬೇಕಾದ ಕಾರ್ಯಗಳಿಗೆ ಗಮನಕೊಡದೆ, ಕಳೆದುದನ್ನೇ ನೆನಸಿಕೊಂಡು, ಅಳುತ್ತಾ ಕುಳಿತರೆ ಹೇಗೆ? ಆ ಕುಮಾರನ ಸಲುವಾಗಿ ನೀನು ಧೈರ್ಯತಾಳಬೇಕು! ನೀನೇ ಹೀಗೆ ಅಳುತ್ತಾ ಕುಳಿತರೆ ಆ ಮಗುವನ್ನು ಸಂತೈಸುವರಾರು?" ಎಂದು ಸಮಾಧಾನಗೊಳಿಸಲೆತ್ನಿಸಿದ ಪೆದ್ದ ತಿರುಮಲ.

"ಅವರಿಗೆ ನಾನು ದ್ರೋಹವೆಸಗಿದೆ – ಅವರು ಬದುಕಿರುವವರೆಗೂ ಒಂದು ದಿನವಾದರೂ ಅವರನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ!"

"ನೀನು ವಿವೇಕಶಾಲಿನಿಯರಾದ ಪತ್ನಿಯರು, ತಮ್ಮ ಪತಿಗಳನ್ನು ಯಾವ ರೀತಿ ನಡೆಸಿಕೊಳ್ಳುವರೋ ಹಾಗೆ ನಡೆಸಿಕೊಂಡಿರುವೆ. ನೀನು ಅವರ ಮನಸ್ಸಿಗೆ ನೋವುಂಟು ಮಾಡುವ ಯಾವ ಕಾರ್ಯವನ್ನೂ ಮಾಡಿಲ್ಲ. ಅವರಿಗೆ ಯಾವ ದ್ರೋಹವನ್ನೂ ಬಗೆದಿಲ್ಲ. ಎಲ್ಲವನ್ನೂ ಅವರ ಒಳ್ಳೆಯದಕ್ಕಾಗಿ, ಸಾಮ್ರಾಜ್ಯದ ಹಿತಕ್ಕಾಗಿ ಮಾಡಿದೆ. ನಿನ್ನಂಥ ಪತ್ನಿಯ ನಂಬಿಕೆಯನ್ನು ಅವರು ಉಳಿಸಿಕೊಳ್ಳದೆ ಹೋದರು. ಅವರು ನಿನ್ನನ್ನು ತಪ್ಪು ತಿಳಿದು, ಸರಿಯಾಗಿ ನಡೆಸಿಕೊಳ್ಳದಿದ್ದುದು ನಿಜವಾಗಿಯೂ ಪರಿಶೋಚನೀಯವಾದ ಸಂಗತಿ! ಇದು ನಮ್ಮೆಲ್ಲರ ದೌರ್ಭಾಗ್ಯ." ಎಂದ ಪೆದ್ದ ತಿರುಮಲ.

"ಈಗ ಕಳೆದು ಹೋದುದಕ್ಕೆ ಚಿಂತಿಸಿ ಫಲವಿಲ್ಲ – ಈಗ ಮಾಡಬೇಕಾಗಿರುವ ಕಾರ್ಯ ಬೆಟ್ಟದಷ್ಟು ಬಿದ್ದಿದೆ. ಈ ಶೋಕದ ದಿನಗಳು ಕಳೆದ ಕೂಡಲೇ ಕುಮಾರನ ಪಟ್ಟಾಭಿಷೇಕವನ್ನು ಮುಗಿಸಬೇಕು. ಇಂತಹ ಸಾವಿರ ಕೆಲಸ ನಮಗಾಗಿ ಕಾದಿದೆ. ಈಗ ಅವುಗಳಿಗೆ ಗಮನಕೊಡಬೇಕಾಗಿದೆ" ಎಂದ ಚಿನ್ನ ತಿರುಮಲ.

"ಮೊದಲು ಮಡಿದವರ ಅಂತ್ಯಕರ್ಮಗಳು ಮುಗಿಯಲಿ. ಅನಂತರ ಪಟ್ಟಾಭಿಷೇಕದ ಮಾತು!" ಎಂದಳು ವರದಾದೇವಿ.

"ಇನ್ನೆಲ್ಲಾ ಮೂರು ನಾಲ್ಕುದಿನಗಳು ತಾನೇ? ಅದಾದ ಮೇಲೆ ನಾವು ಪಟ್ಟಾಭಿಷೇಕದ ಪ್ರಶ್ನೆಯನ್ನು ಬಗೆಹರಿಸಲೇ ಬೇಕಲ್ಲ!" ಎಂದ ಪೆದ್ದ ತಿರುಮಲ.

ಈ ಮಾತು ಕೇಳಿ ವರದಾದೇವಿ ಚಕಿತಳಾದಳು. ಚಿನ್ನ ವೆಂಕಟಾದ್ರಿಯೊಬ್ಬನೇ ಸಿಂಹಾಸನಕ್ಕೆ ಹಕ್ಕುದಾರನಾಗಿರುವಾಗ, ಇನ್ನು ಪಟ್ಟಾಭಿಷೇಕದ ಪ್ರಶ್ನೆ ಎಲ್ಲಿ ಬಂತು? ಅವರ ಮಾತಿನಲ್ಲಿ ತನಗೆ ತಿಳಿಯದ ಯಾವುದೋ ರಹಸ್ಯವಿದೆ ಎಂದು ಊಹಿಸಿದಳು. ಮನಸ್ಸಿಗೆ ಏಕೋ ಹೆದರಿಕೆಯಾಗಿ, ಮೈ ಗಡಗಡನೆ ನಡುಗಿತು. ಇದನ್ನು ಸಲಕಂ ಸೋದರರು ಗಮನಿಸಿದರೂ, ಅವಳು ಹೊರಗೆ ಚಳಿಯಲ್ಲಿ ಹೋಗಿ ಬಂದುದೇ ಇದಕ್ಕೆ ಕಾರಣವಿರಬೇಕೆಂದು ಭಾವಿಸಿದರು. ಪಾಪ ವರದಾಂಬಿಕೆ ನಡುಗಿದುದು – ಬಹಿರಂಗದ ಚಳಿಗಲ್ಲ – ಅಂತರಂಗದ ಚಳಿಗೆ ಎಂಬುದು ಹೇಗೆ ತಿಳಿಯಬೇಕು?

೨೧

ಅಚ್ಯುತರಾಯನ ಮರಣದ ಶೋಕದ ದಿನಗಳೆಲ್ಲವೂ ಮುಗಿದು ನಡೆಯಬೇಕಾಗಿದ್ದ ಅಂತ್ಯ ಕ್ರಿಯೆಗಳೆಲ್ಲವೂ ಮುಕ್ತಾಯವಾದ ಮೇಲೆ, ಪಟ್ಟಾಭಿಷೇಕದ ಪ್ರಶ್ನೆ ನಿಜಕ್ಕೂ ತೊಡಕಿನದೆಂದು ಆ ಸೋದರರಿಗೆ ಅರಿವಾಯಿತು. ಅವರು ಇದುವರೆಗೆ ಈ ಸಂಗತಿ ಇಷ್ಟು ಕ್ಲಿಷ್ಟವಾಗುವುದೆಂದು ತಿಳಿದಿರಲಿಲ್ಲ. ಆದರೆ ಮಹಾರಾಣಿ ವರದಾದೇವಿ, ಕುಮಾರನ ಪಟ್ಟಾಭಿಷೇಕ ಮಹೋತ್ಸವದಲ್ಲಿ, ಅವರು ನಿರೀಕ್ಷಿಸದಿದ್ದ ತೊಡಕನ್ನು ತಂದುಹಾಕಿದ್ದಳು.

ಇದುವರೆಗೂ ಸಲಕಂ ಸೋದರರು, ಸಿಂಹಾಸನ ತಮ್ಮದಾಗುವುದೆಂದು ಮನಸ್ಸಿನಲ್ಲೇ ಹರ್ಷಿಸಿದ್ದರು. ಅಚ್ಯುತರಾಯನ ಅನಂತರ ಅವನ ಮಗನನ್ನು ಸಿಂಹಾಸನದ ಮೇಲೆ ಕೂಡಿಸಿ, ತಾವೇ ರಾಜ್ಯವಾಳುವ ಕನಸು ಕಂಡಿದ್ದರು. ಇದಕ್ಕೆ ವರದಾದೇವಿಯೂ ಆಕ್ಷೇಪಿಸಿರಲಿಲ್ಲ. ಕುಮಾರನು ಪಟ್ಟಾಭಿಷಿಕ್ತನಾದರೂ ಅವನು ಪ್ರಾಪ್ತ ವಯಸ್ಸಿಗೆ ಬರುವವರೆಗೆ, ಬೇರೆಯವರು ಆಳುವುದು ಅನಿವಾರ್ಯವಾಗಿತ್ತು. ಆದರೆ ಸಲಕಂ ಸಹೋದರರಲ್ಲಿ ಹಿರಿಯನಾದ ಪೆದ್ದ ತಿರುಮಲನು, ಅಚ್ಯುತರಾಯನು, ಕೃಷ್ಣದೇವರಾಯನ ಪುತ್ರನು ಪ್ರಾಪ್ತ ವಯಸ್ಸಿಗೆ ಬರುವವರೆಗೂ ರಾಜಪ್ರತಿನಿಧಿಯಾಗಿ, ನಿಯೋಜಿತನಾದಂತೆ, ತಾನು ಸಿಂಹಾಸನದಲ್ಲಿ ಸಾಮ್ರಾಟನಾಗಿ ಕುಮಾರನು ಪ್ರಾಪ್ತವಯಸ್ಕನಾಗುವ ತನಕ —ರಾಜಪ್ರತಿನಿಧಿಯಾಗಿ ಆಳುವ ಯೋಜನೆಯನ್ನು ಮುಂದಿಟ್ಟಿದ್ದನು. ಇದರಂತೆ ಚಿನ್ನತಿರುಮಲನು ಪ್ರಧಾನ ಅಮಾತ್ಯನಾಗಿ ಕೆಲಸ ಮಾಡಬೇಕೆಂದು ನಿರ್ಣಯವಾಗಿತ್ತು. ಆದರೆ ಈ ಯೋಜನೆಯನ್ನು ವರದಾದೇವಿ ಏಕೋ ಒಪ್ಪದೆ

ಹೋಗಿದ್ದಳು. ಕುಮಾರನು ಪ್ರಾಪ್ತವಯಸ್ಕನಾಗುವವರೆಗೆ, ಅವನ ಪರ ತಾನು ರಾಜಪ್ರತಿನಿಧಿಯಾಗಿ, ರಾಜಮಾತೆಯಾಗಿ, ಸಿಂಹಾಸನದಲ್ಲಿ ಕುಳಿತು, ಆಳಬೇಕೆಂದೂ, ಸಲಕಂ ಸೋದರರೇ ಮೊದಲಿನಂತೆ ಸಾಮ್ರಾಜ್ಯದ ಹೊರೆಯನ್ನು ಹೊತ್ತು ಅಚ್ಯುತರಾಯನಿಗೆ ರಾಜ್ಯಾಡಳಿತದಲ್ಲಿ ನೆರವಾದಂತೆ ತನಗೂ ನೆರವಾಗಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಳು. ಅವರು ಹೆಂಗಸಿಗೇಕೆ ರಾಜ್ಯಾಡಳಿತದ ಕ್ಲೇಶ ಎಂದು ಎಷ್ಟೋ ಹೇಳಿದರೂ ಪ್ರಯೋಜನವಾಗಲಿಲ್ಲ. ವರದಾದೇವಿ ಹಿಡಿದ ಹಠ ಬಿಡಲಿಲ್ಲ. ಅವರ ಯಾವ ಸವಿಮಾತಿಗೂ, ಚಮತ್ಕಾರಕ್ಕೂ, ಅವಳು ಮರುಳಾಗದೆ ಹೋಗಿದ್ದಳು. ಈಗ ಬಲಾತ್ಕಾರವೊಂದೇ ಉಳಿದಿದ್ದ ದಾರಿ. ಆದರೆ ವರದಾದೇವಿಯ ವಿರುದ್ಧ, ತಾವು ಅಧಿಕಾರಕ್ಕೆ ಬಂದರೆ, ಇದರಿಂದ ಅನೇಕ ತೊಂದರೆಗಳುದ್ಭವಿಸಬಹುದೆಂದು ಅವರು ತಿಳಿದಿದ್ದರು. ಆದಷ್ಟು ಅವಳ ಮನವೊಲಿಸಿ, ಅಧಿಕಾರಕ್ಕೆ ಬರಲೆತ್ನಿಸುವುದು. ಈ ಕಾರ್ಯದಲ್ಲಿ ವಿಫಲರಾದರೆ, ಬಲಪ್ರದರ್ಶನವಿದ್ದೆ ಇದೆ – ಎಂದು ತೀರ್ಮಾನಿಸಿ, ಮತ್ತೆ ವರದಾದೇವಿಯೊಡನೆ ಈ ಪ್ರಸ್ತಾಪ ತೆಗೆದಿದ್ದರು.

"ನಾವು ಸಿಂಹಾಸನವನ್ನು ಹೆಚ್ಚುಕಾಲ, ಬರಿದಾಗಿರಿಸುವುದು ಒಳ್ಳೆಯದಲ್ಲ. ದೇಶದಲ್ಲಿ ಎಲ್ಲೆಲ್ಲೂ ಸಾಮ್ರಾಜ್ಯವನ್ನು ನುಂಗಲು ವಿದ್ರೋಹಿಗಳು ಕಾದು ಕುಳಿತಿರುವಾಗ, ಎಲ್ಲೆಲ್ಲೂ ಸಿಂಹಾಸನಕ್ಕಾಗಿ ಪಿತೂರಿಗಳು ನಡೆಯುತ್ತಿರುವಾಗ, ನಾವು ಈ ರೀತಿ ತಟಸ್ಥರಾಗಿರುವುದು ಒಳ್ಳೆಯದಲ್ಲ. ನಮ್ಮ ವೈಯುಕ್ತಿಕ ಭಿನ್ನಾಭಿಪ್ರಾಯಗಳ ಸಲುವಾಗಿ ಸಾಮ್ರಾಜ್ಯವನ್ನು ಗಂಡಾಂತರಕ್ಕೆ ನೂಕುವುದು ಸರಿಯಲ್ಲ!" ಎಂದ ಪೆದ್ದತಿರುಮಲ.

"ಹೌದು, ನಮ್ಮ ವೈಯುಕ್ತಿಕ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವ ಸ್ವಾರ್ಥದಲ್ಲಿ ಸಿಂಹಾಸನಕ್ಕೆ ಅಪಾಯ ತರಬಾರದೆಂದೇ, ನನ್ನ ಅಭಿಪ್ರಾಯ!" ಎಂದಳು ವರದಾದೇವಿ.

"ಈಗ ನಮ್ಮಿಬ್ಬರಲ್ಲಿ, ನೀನು ಸೋಲಬೇಕು, ಇಲ್ಲ ನಾನು ಸೋಲಬೇಕು! ಯಾರು ಸೋತರೂ ಒಂದೇ. ಸಿಂಹಾಸನ ನಮ್ಮದಾಗಿ ಉಳಿಯುವುದೇ ಹೊರತು, ಅನ್ಯರ ಪಾಲಾಗುವುದಿಲ್ಲ. ವೃಥಾ ಹೆಸರಿನ ಸಲುವಾಗಿ ಏಕೆ ನಾವು ಕಚ್ಚಾಡಬೇಕು! ಇದರಿಂದ ನಮಗೇ ತೊಂದರೆಯಾಗಬಹುದು! ಈಗ ನಾವು ಯಾವುದಾದರೊಂದು ನಿರ್ಧಾರಕ್ಕೆ ಬರಲೇಬೇಕಾಗಿದೆ!"

"ನಾನು ಹೇಳುವುದೂ ಇದನ್ನೇ – ಕುಮಾರನ ಪಟ್ಟಾಭಿಷೇಕವನ್ನು ತಡಮಾಡುವುದು ಸರಿಯಲ್ಲ!"

"ಇದಕ್ಕೆ ನೀನೇ ಅಡ್ಡಿಯಾಗಿ ಕುಳಿತಿದ್ದಿ!"

"ಅದು ಹೇಗೆ?"

" ರಾಜಪ್ರತಿನಿಧಿಯಾಗಿ ಆಳಲು ಹಠ ಹಿಡಿದಿದ್ದಿ ?"

" ಇದು ತಪ್ಪೆ? ನನ್ನ ಮಗನ ಸಲುವಾಗಿ, ನಾನು ಆಳಬಯಸುವುದು ತಪ್ಪೆ? ಇತಿಹಾಸದಲ್ಲಿ ಎಷ್ಟೊಂದು ಮಹಿಳೆಯರು ಹೀಗೆ ಆಳಲಿಲ್ಲ? ಅವರಂತೆ ನಾನೂ ಕುಮಾರನ ಪರ ರಾಜ್ಯವಾಳಬೇಕೆಂದಿದ್ದೇನೆ?"

" ಆದರೆ ವಿಜಯನಗರದ ಸಿಂಹಾಸನದ ಮೇಲೆ ಹಿಂದೆ ಸ್ತ್ರೀ ಎಂದೂ ಮಂಡಿಸಿಲ್ಲ! ಹಿಂದಿನಿಂದ ನಡೆದುಬಂದಿರುವ ಪದ್ಧತಿಯನ್ನು ನಾವು ಒಮ್ಮೆಲೆ ತಿರಸ್ಕರಿಸಿದರೆ, ಇದರಿಂದ ಪ್ರಜೆಗಳ ಮನಸ್ಸಿಗೆ ಕ್ಷೋಭೆಯುಂಟಾಗದೆ ಇರದು. ಸಿಂಹಾಸನದಲ್ಲಿ ಸ್ತ್ರೀ ಇರುವಳೆಂಬ ಕಾರಣದಿಂದ ಶತ್ರುಗಳು ದಂಡೆತ್ತಿ ಬರುತ್ತಾರೆ. ಸಾಮಂತರೂ ಮಾಂಡಲೀಕರೂ ತಾವು ಹೆಂಗಸಿನಿಂದ ಆಳಲ್ಪಡುವುದಕ್ಕೆ ಇಷ್ಟಪಡದೆ, ದ್ರೋಹ ಬಗೆಯಬಹುದು! ಇದರಿಂದ ದೇಶದಲ್ಲೆಲ್ಲಾ ವಿದ್ರೋಹಗಳು ತಲೆದೋರಬಹುದು! ಇದಕ್ಕಾಗಿ, ನಾವು ನಿನ್ನ ಮಾತಿಗೆ ವಿರೋಧಿಸುತ್ತಿದ್ದೇವೆಯೇ ಹೊರತು ಅನ್ಯಥಾ ಅಲ್ಲ. ಈಗಲೂ ನೀನು ಹಠಹಿಡಿಯದೆ – ಕೂಲಂಕುಶವಾಗಿ ವಿಚಾರ ಮಾಡು, ನಮ್ಮ ಮಾತಿನ ಸತ್ಯಾಂಶ ವೇದ್ಯವಾಗುತ್ತದೆ!"

" ವಿಜಯನಗರದ ಸಿಂಹಾಸನದಲ್ಲಿ ಹಿಂದೆ ಸ್ತ್ರೀಯರು ಕುಳಿತು ರಾಜ್ಯಭಾರ ಮಾಡಲಿಲ್ಲವಾದ ಮಾತ್ರಕ್ಕೆ ಸ್ತ್ರೀಯು ಸಿಂಹಾಸನದ ಮೇಲೆ ಕುಳಿತುಕೊಳ್ಳಬಾರದೆಂದು ಯಾರು ಹೇಳುತ್ತಾರೆ. ಸಾಮ್ರಾಟನ ಪಟ್ಟಮಹಿಷಿಯರಿಗೆ ಈ ಹಕ್ಕಿದೆ. ಇದಕ್ಕೆ ಶಾಸ್ತ್ರಾಧಾರವಿದೆ!....ಇನ್ನು ನಾನು ಸಿಂಹಾಸನದಲ್ಲಿ ರಾಜಮಾತೆಯಾಗಿ ಕುಳಿತ ಮಾತ್ರಕ್ಕೆ ದೇಶದಲ್ಲಿ ಅನಾಯಕತೆ ಏಕೆ ಏರ್ಪಡಬೇಕು? ಎಲ್ಲ ಆಡಳಿತ ಸೂತ್ರಗಳು ಸಮರ್ಥರಾದ ನಿಮ್ಮ ಕೈಲಿರುವ ತನಕ ದೇಶದಲ್ಲಿ ಯಾವ ಅರಾಜಕತೆಯೂ ತಲೆದೋರುವುದಿಲ್ಲ. ನೀವು ವೃಥಾ ಶಂಕೆಗೊಳಗಾಗಿದ್ದೀರಷ್ಟೆ?"

" ಇದು ಅಧರ್ಮ, ಅನ್ಯಾಯವೆಂದು ಜನತೆ ದಂಗೆ ಎದ್ದರೆ?"

" ಸಿಂಹಾಸನದಲ್ಲಿ ಯಾರು ಕುಳಿತು ಜನತೆಗೆ ಆಗಬೇಕಾದುದೇನು? ಅವರಿಗೆ ಬೇಕಾಗಿರುವುದು ಶತ್ರುಗಳಿಂದ ರಕ್ಷಣೆ, ಶಾಂತಿ ನೆಮ್ಮದಿಗಳು, ಶಾಸನಬದ್ಧವಾದ ಆಡಳಿತ, ನಿಷ್ಪಕ್ಷಪಾತವಾದ ನ್ಯಾಯ ತೀರ್ಮಾನ, ನ್ಯಾಯವಾದ ತೆರಿಗೆ, ಸುಂಕ ಕಂದಾಯಗಳು ಇಷ್ಟನ್ನು ಪ್ರಜೆಗಳಿಗೆ ನೀಡಿದರೆ ಅವರೇಕೆ ದಂಗೆ ಏಳುತ್ತಾರೆ? ಇವು ಸುಳ್ಳು ಭರವಸೆಗಳೆಂದು ತಿಳಿಯುವವರಿಗೆ ಪ್ರಜೆಗಳಿಂದ ಯಾವ ತೊಂದರೆಯೂ ಇಲ್ಲ! ಆದರೆ ಪ್ರಜೆಗಳು ಸುಮ್ಮನಿರುವರೆಂದು, ಪ್ರಭುತ್ವ ನ್ಯಾಯ ಬಿಟ್ಟು ಅನ್ಯಾಯಕ್ಕೆಳೆಸಿದರೆ ಮಾತ್ರ ಅದು ಕೆಳಗುರುಳುತ್ತದೆ!"

" ಈಗ ರಾಜಪ್ರತಿನಿಧಿಯಾಗಿ ನೀನೇ ಆಳಬೇಕೆಂದು ಏಕಿಷ್ಟು ಹಠ ಹಿಡಿ

ದಿರುವೆ? ನಿನಗೆ ನಮ್ಮಲ್ಲಿ ನಂಬಿಕೆ ಇಲ್ಲವುದರಿಂದತಾನೇ? ನಮ್ಮಲ್ಲಿ ನಂಬಿಕೆ ಯಿಲ್ಲದ ಮೇಲೆ, ನಾವು ನಿರ್ವಹಿಸುವ ರಾಜ್ಯಾಡಳಿತದಲ್ಲೂ ನಿನಗೆ ನಂಬಿಕೆ ಇರದು. ಇದರಿಂದ ವೃಥಾ ವೈಮನಸ್ಸು ತಲೆದೋರದಿರದು! ಮತ್ತೆ ಹಿಂದೆ ಬಂದ ಪ್ರಸಂಗ ಬರಬಾರದಷ್ಟೆ" ಎಚ್ಚರಿಸುವ ರೀತಿಯಲ್ಲಿ ಹೇಳಿದ ಪೆದ್ದತಿರುಮಲ.

"ನಿಮ್ಮಲ್ಲಿ ಅಪನಂಬಿಕೆ ಎಂದು ನೀವೇಕೆ ತಿಳಿಯಬೇಕು? ನಾನು ಸಾಮ್ರಾಜ್ಞಿಯಾದರೆ ನಿಮಗೇನು ತೊಂದರೆ? ಅಧಿಕಾರ ಎಂದಿದ್ದರೂ ನಿಮ್ಮದೇ? ವೃಥಾ ಹೆಸರಿನ ಸಾಮ್ರಾಟತನಕ್ಕೆ ಏಕಿಷ್ಟು ಹಂಬಲಿಸುತ್ತಿದ್ದೀರಿ?"

"ನಮಗೆ ಹೆಸರಿನ ಮೋಹ ಇದೆ ಎಂದು ತಿಳಿದರೂ ಸರಿಯೆ? ಈ ಮೋಹ ವಿಲ್ಲದವರು ನಮಗೇಕೆ ಪದವಿಯನ್ನು ಬಿಟ್ಟು ಕೊಡಬಾರದು?"

"ಇದಕ್ಕೆ ವೈಯುಕ್ತಿಕ ಕಾರಣಗಳಿವೆ!"

"ನಾವು ಅದನ್ನು ತಿಳಿಯಬಹುದೆ?"

"ಸಿಂಹಾಸನವು ಪುರಾತನವಾದುದು! ವಂಶ ಪಾರಂಪರ್ಯವಾಗಿ ಬಂದಿರುವ ಸಿಂಹಾಸನದಲ್ಲಿ ಅನ್ಯರು ಕುಳಿತುಕೊಂಡರೆ, ಜನತೆಯ ಮನಸ್ಸಿನಲ್ಲಿ ಇಲ್ಲದ ಸಂಶಯಕ್ಕೆ ಎಡೆಗೊಟ್ಟಂತಾಗುತ್ತದೆ! ಇದನ್ನು ತಪ್ಪಿಸುವ ಸಲುವಾಗಿ ಸಾಮ್ರಾಟ್ ಕೃಷ್ಣದೇವರಾಯರು ತಮ್ಮ ನಂತರ ತಮ್ಮ ಸಹೋದರರಿಗೆ ಕೊಡಬೇಕಾಯಿತು. ಈ ಭಯವಿಲ್ಲದಿದ್ದರೆ, ನಿರ್ಬಂಧದಲ್ಲಿದ್ದ ಮಲತಮ್ಮಂದಿರಿಗೆ ಸಿಂಹಾಸನವನ್ನು ತಾವಾಗಿ ಕರೆದು ಕೊಡಬೇಕಾದ ಪ್ರಸಂಗ ಬರುತ್ತಿರಲಿಲ್ಲ. ಅವರು ಇಚ್ಛಿಸಿದ್ದರೆ ಸಿಂಹಾಸನವನ್ನು ಅಳಿಯಂದಿರ ಪಾಲು ಮಾಡಬಹುದಿತ್ತು! ಅವರು ಮಾಡಲು ಹೆದರಿದ ಕಾರ್ಯ ನನ್ನಿಂದೇಕೆ ನಡೆಯಬೇಕು!"

"ಸಾಮ್ರಾಟ್ ಕೃಷ್ಣದೇವರಾಯರು ಮನಸ್ಸು ಮಾಡಿದ್ದರೆ ಸಿಂಹಾಸನವನ್ನು ಅಳಿಯಂದಿರಿಗೆ ಕೊಡಬಹುದಾಗಿತ್ತು. ಆದರೆ ಏಕೆ ಕೊಡಲಿಲ್ಲ? ನಿಜವಾದ ಕಾರಣ ಅವರು ಕೈಹಿಡಿದ ಹೆಣ್ಣುಮಕ್ಕಳಿಗೆ ಸಿಂಹಾಸನ ದೊರೆತರೆ, ಇದರಿಂದ ಸಾಮ್ರಾಜ್ಯದಲ್ಲಿ, ಅಶಾಂತಿಯುಂಟಾಗುವುದೆಂದು ಹೆದರಿ! ಜನತೆ ಅನ್ಯರ ವಂಶಿಯರ ಆಳ್ವಿಕೆಯನ್ನು ಸಹಿಸಬಲ್ಲದೇ ಹೊರತು ಸ್ತ್ರೀಯ ಪ್ರಭುತ್ವವನ್ನು ಸಹಿಸಲಾರದು!"

"ದುರ್ಬಲ ಸ್ತ್ರೀಯು ಸಿಂಹಾಸನವನ್ನೇರಿದರೆ, ಆ ಭೀತಿ. ಶಕ್ತಳಾದ ಸ್ತ್ರೀ ಆಡಳಿತದ ಸೂತ್ರವನ್ನು ಕೈಲಿಹಿಡಿದರೆ ದೇಶವೆಂದಿಗೂ ಅನಾಯಕವಾಗದು ತೊಟ್ಟಿಲು ತೂಗುವ ಕೈ ರಾಜ್ಯಭಾರ ಮಾಡಬಲ್ಲದೆಂಬ ನಾಣ್ಣುಡಿಯನ್ನು ನೀವು ಕೇಳಿಲ್ಲವೆ?"

"ಇದರ ಅರ್ಥ ಹಾಗಲ್ಲ – ಸ್ತ್ರೀಗೆ ಎಂದಿದ್ದರೂ ತೊಟ್ಟಿಲು ತೂಗುವುದೇ

ಯೋಗ್ಯ ವೃತ್ತಿ. ಅವಳು ಬೆಳಸಿದ ಮಗು ಪ್ರವರ್ಧಮಾನಕ್ಕೆ ಬಂದು, ರಾಜ್ಯ ವಾಳಿದರೆ, ಅದರ ಕೀರ್ತಿ ತಾಯಿಗೆ! ಮಗನನ್ನ ಚೆನ್ನಾಗಿ ಬೆಳಸಿ, ರಾಷ್ಟ್ರದ ಉತ್ತಮ ಪ್ರಜೆಯನ್ನಾಗಿ ಮಾಡಿದ ತಾಯಿಗೆ ಕೊಡುವ ಗೌರವ ಸನ್ಮಾನವೇ ಹೊರತು – ಅವಳಿಗೆ ರಾಜ್ಯಭಾರ ಮಾಡುವ ಹಕ್ಕಿದೆ ಎಂದಲ್ಲ!"

"ನೀವು ಹೇಗೇ ಅರ್ಥಮಾಡಿರಿ! ನಾನಂತೂ ಈ ಪದವಿಯನ್ನು ಅನ್ಯರಿಗೆ ಬಿಟ್ಟುಕೊಡುವವಳಲ್ಲ!"

"ಇದೇ ನಿನ್ನ ಕಡೆಯ ನಿರ್ಧಾರವೇ?"

"ಹೌದು!"

"ಹಾಗಾದರೆ ನಿನಗೆ ನಮ್ಮಲ್ಲಿ ನಂಬಿಕೆ ಇಲ್ಲವೆಂದಾಯಿತು!"

"ನೀವೇಕೆ ಹಾಗೆ ತಿಳಿಯಬೇಕು?"

"ನಿನ್ನ ಮಾತಿನ ಪರ್ಯಾಯಾರ್ಥವೇ ಇದು!"

"ನೀವು ಹಾಗೆ ತಿಳಿದರೆ ನನ್ನ ಅಡ್ಡಿಯಿಲ್ಲ – ಆದರೆ ಸೋದರರಾದ ನಿಮ್ಮ ಬಗೆಗೆ ನಾನೆಂದೂ ಅವಿಶ್ವಾಸ ತೋರಿಸಿದವಳಲ್ಲ!"

"ಇದು ಕೇವಲ ತೋರಿಕೆಯ ಮಾತು!"

"ಕಾರ್ಯರೂಪದಲ್ಲಿ ತೋರಿಸಲು ನನ್ನ ಪತಿಯನ್ನೇ ಬಲಿಗೊಟ್ಟೆನೆಂಬುದನ್ನು ಮರೆಯಬಾರದು."

"ನಮ್ಮ ಸಲುವಾಗಿ ನೀನು ಈ ಕಾರ್ಯ ಮಾಡಲಿಲ್ಲ! ನಿನ್ನ ಸಲುವಾಗಿ, ಸಾಮ್ರಾಜ್ಯದ ಹಿತದ ಸಲುವಾಗಿ ಮಾಡಿದ ಕೆಲಸವಿದು!"

"ನನ್ನ ಸಲುವಾಗಿ ಈ ಕಾರ್ಯ ಮಾಡಿದೆನೆ? ಅವರನ್ನು ಹುಚ್ಚುದೊರೆ ಎಂದು ಕರೆದುದು ನನ್ನ ಸಲುವಾಗಿಯೆ? ಅವರನ್ನು ನೀವು ಬಂಧನದಲ್ಲಿ ಇರಿಸಿ, ಸರ್ವಾಧಿಕಾರಿಗಳಾಗಿ ಮೆರೆದಾಗ, ನಿಮಗೆ ಬೆಂಬಲ ಕೊಟ್ಟುದು ನನ್ನ ಸಲುವಾಗಿಯೆ?"

"ಆಗ ನಮ್ಮ ಮಾತಿನಲ್ಲಿ ನಿನಗೆ ನಂಬಿಕೆಯಿತ್ತು, ವಿಶ್ವಾಸವಿತ್ತು ನಾವು ಅಧಿಕಾರಕ್ಕೆ ಬರುವುದರಲ್ಲಿ ನಿನಗೆ ವೈಯುಕ್ತಿಕ ಸಂತೋಷವಿತ್ತು, ಭರವಸೆ ಇತ್ತು ಇಂದು ನಮ್ಮಲ್ಲಿ ಆ ನಂಬಿಕೆ ಇಲ್ಲ, ಪ್ರೀತಿವಿಶ್ವಾಸಗಳಿಲ್ಲ. ನಾವು ಅಧಿಕಾರಕ್ಕೆ ಬಂದರೆ ಹೇಗೋ ಎನ್ನುವ ಭೀತಿ, ಯಾವುದೋ ಶಂಕೆ, ಸಂಶಯ ನಿನ್ನನ್ನು ಕಾಡುತ್ತಿವೆ!"

"ನಾನು ನಿಮ್ಮನ್ನು ಒಂದು ಪ್ರಶ್ನೆ ಕೇಳಬೇಕೆಂದಿದ್ದೇನೆ. ಅದಕ್ಕೆ ಉತ್ತರ ಕೊಡುವಿರಾ?"

"ಆಗಲಿ!"

"ಮಹಾಪ್ರಭುಗಳಿಗೆ ನೀವು ವಿಷವಿಟ್ಟು ಕೊಂದಿರಂತೆ ನಿಜವೇ?"

ಈ ಮಾತು ಕೇಳಿ ಅವರ ಮುಖ ಒಮ್ಮೆಲೆ ವಿವರ್ಣವಾಯಿತು!

"ರಾಮ ರಾಮ!" ಎಂದು ಕಿವಿಯನ್ನು ಮುಚ್ಚಿಕೊಂಡು ಅವರು ನಿರಪರಾಧಿಗಳೆಂಬ ಸೋಗುಹಾಕಿ ಹೇಳಿದರು.

"ಈ ಮಾತನ್ನು ನಿನಗೆ ಯಾರು ಹೇಳಿದರು?"

"ಸ್ವಯಂ ಪ್ರಭುಗಳೇ ಹೇಳಿದರು."

"ಈ ಮಾತನ್ನು ನೀನು ನಂಬಿದೆಯಾ?"

"ನಂಬಿದ್ದರೆ ಈ ಪ್ರಶ್ನೆಯನ್ನು ನಿಮಗೆ ಕೇಳುತ್ತಿದ್ದೆನೆ?"

"ಈ ಮಾತು ಸುಳ್ಳು!"

"ಪ್ರಭುಗಳು ಸುಳ್ಳು ಹೇಳಿದರೆ?"

"ಯಾರೋ ನಮಗಾಗದ ದ್ರೋಹಿಗಳು, ಪ್ರಭುಗಳ ಮನಸ್ಸಿನಲ್ಲಿ ಬಿತ್ತಿರುವ ಸಂಶಯದ ಬೀಜವೇ ಇದು!"

"ಪಭುಗಳು ನೀವು ವಿಷವಿಟ್ಟು ಕೊಂದಿರೆಂಬ ಭ್ರಮೆಯಿಂದಲೇ ಮಡಿದರು!"

"ಇದು ನಮ್ಮ ದುರದೃಷ್ಟ. ಕಡೆಗೂ ಅವರಿಗೆ ನಮ್ಮಲ್ಲಿ ನಂಬಿಕೆ ಹುಟ್ಟದೆ ಹೋಯಿತು. ನಮಗಿಂತ ದೌರ್ಭಾಗ್ಯರು ಇನ್ನಿಲ್ಲ!" ಎಂದು ಪಶ್ಚಾತ್ತಾಪದ ಕಣ್ಣೀರು ಸುರಿಸಿದರು. ಆ ಕಣ್ಣೀರನ್ನು ಕಂಡು ವರದಾದೇವಿಗೆ ಎದೆಯಲ್ಲಿ ತಳಮಳವಾಯಿತು. ಅವರ ಬಗ್ಗೆ ಇದುವರೆಗೆ ಇದ್ದ, ವಿರೋದಾಭಿಪ್ರಾಯದ ವೃಕ್ಷವನ್ನು ಹಿಡಿದು ಅಲುಗಾಡಿಸಿದಂತೆ ಆಯಿತು. ಆದರೂ ರಾಜವೈದ್ಯರ ಮಾತು ಅವಳ ನೆನಪಿನಲ್ಲಿ ಅಚ್ಚೊತ್ತಿತ್ತು.

"ಹಾಗಾದರೆ ನೀವೇಕೆ ರಾಜವೈದ್ಯರನ್ನು ಸೆರೆಯಲ್ಲಿಟ್ಟಿರಿ?"

"ಬಹುಶಃ ಅವರೇ ಇರಬೇಕು, ನಮ್ಮ ವಿರುದ್ಧ ಪ್ರಭುಗಳ ಮನಸ್ಸನ್ನು ಕೆಡಿಸಿದವರು! ನಮಗೆ ಮೊದಲಿನಿಂದಲೂ ಅವರಲ್ಲಿ ಸಂದೇಹವಿದ್ದೇ ಇತ್ತು. ಅವರು ಸೆರೆಯಲ್ಲಿರುವ, ಚಿನ್ನಾದೇವಿ, ತಿರುಮಲಾದೇವಿಯರೊಂದಿಗೆ, ಯಾವುದೋ ಪಿತೂರಿ ನಡೆಸುತ್ತಿರುವುದನ್ನು ತಿಳಿದು ಅವರನ್ನು ಸೆರೆಯಲ್ಲಿಡಬೇಕಾಯಿತು."

"ನೀವು ನಿರಪರಾಧಿಗಳೇ?"

"ನಮ್ಮನ್ನು ನೀನು ಬಾಲ್ಯದಿಂದಲೂ ಬಲ್ಲೆ! ಕಳೆದ ಹತ್ತು ವರ್ಷಗಳಲ್ಲಿ ನಮ್ಮ ಅಧಿಕಾರಾವಧಿಯಲ್ಲಿ, ನಾವು ಸಾಮ್ರಾಟರಿಗೂ, ಸಾಮ್ರಾಜ್ಯಕ್ಕೂ ಸಲ್ಲಿಸಿರುವ ಸೇವೆಯನ್ನು ಬಲ್ಲೆ! ಇಷ್ಟೆಲ್ಲಾ ಆದ ಮೇಲೂ, ರಕ್ತ ಹಂಚಿಕೊಂಡು, ಒಡಹುಟ್ಟಿದ ತಂಗಿ ನಿನಗೆ ನಮ್ಮ ವಿಷಯದಲ್ಲಿ ಇನ್ನೂ, ನಂಬಿಕೆ, ವಿಶ್ವಾಸ ಹುಟ್ಟದ ಮೇಲೆ ನಾವು ಬದುಕಿದ್ದು ವ್ಯರ್ಥ! ಇಂತಹ ನಿಕೃಷ್ಟ ಬಾಳಿಗಿಂತಲೂ

ನಾವು ಸುಖಕರ! ನಾವು ಯಾರ ನಂಬಿಕೆಗೂ ಅರ್ಹರಲ್ಲದ ಮೇಲೆ ನಮಗೇಕೆ ಅಧಿಕಾರ, ಪದವಿಗಳು ನಮಗೆ. ಅಧಿಕಾರ ಪದವಿಗಳ ಮೋಹವಿಲ್ಲ! ಈಗ ನಮಗೇನು ಕಡಿಮೆಯಾಗಿದೆ ಎಂದು ನಾವು ಅದಕ್ಕೆ ಹಾತೊರೆಯಬೇಕು? ಆದರೂ ಕುಮಾರನ ಸಲುವಾಗಿ ಈ ಪದವಿಯನ್ನು ಅಪೇಕ್ಷಿಸಿದೆವು. ನ್ಯಾಯವಾಗಿ ಈ ಪದವಿಗಾಗಿ ನಾವು ಇಷ್ಟು ಕೋರಲೇಬಾರದು! ನೀನೇ ಬಲವಂತಪಡಿಸಿ ಕೊಡಬೇಕಾಗಿರುವ ಗೌರವದ ಪದವಿ ಇದು! ತಂಗಿ ಎಂಬ ಅಭಿಮಾನದಿಂದ ನಿನ್ನೊಡನೆ ಇಷ್ಟು ಮನಬಿಚ್ಚಿ ಮಾತನಾಡಬೇಕಾಯಿತು. ಇಷ್ಟೆಲ್ಲಾ ಹೇಳಿದ ಮೇಲೂ ನಿನಗೆ ನಂಬಿಕೆ ಹುಟ್ಟದಿದ್ದರೆ, ನಿನ್ನಿಷ್ಟಬಂದಂತೆ ಮಾಡಿಕೋ! ನಿನ್ನ ಪತಿಯದು ಈ ರಾಜ್ಯ. ನೀನುಂಟು, ನಿನ್ನ ಪುತ್ರನುಂಟು!" ಎಂದು ಹೇಳಿ ಅಲ್ಲಿಂದ ಹೊರಡಲು ಎದ್ದು ನಿಂತರು.

ಇಷ್ಟೆಲ್ಲಾ ಹೇಳಿದ ಮೇಲೆ ಅವರನ್ನು ಎದುರುಹಾಕಿಕೊಳ್ಳಲು ವರದಾದೇವಿಗೆ ಇಷ್ಟವಾಗಲಿಲ್ಲ. ಈಗ ಅವರನ್ನು ತಿರಸ್ಕರಿಸಿ, ಕಳುಹಿಸಿಕೊಟ್ಟರೆ ಮುಂದೆ ತನಗೆ ತೊಂದರೆಯಾಗುವುದೆಂದು ಅವಳಿಗೆ ತಿಳಿಯದೆ ಹೋಗಲಿಲ್ಲ. ನಾಳೆ ನಡೆಯಲಿರುವ ಕುಮಾರನ ಪಟ್ಟಾಭಿಷೇಕಕ್ಕೆ ಇವರಿಂದ ಕಲ್ಲುಬೀಳಬಹುದು. ಸೈನ್ಯ ಸಮೇತ ಬಂದು, ತನ್ನನ್ನು ಸಿಂಹಾಸನದಿಂದ ತಳ್ಳಿ ತಾವೇ ಸಾಮ್ರಾಟರೆಂದು ಘೋಷಿಸಿಕೊಂಡರೆ, ತನ್ನ ನೆರವಿಗೆ ಬರುವವರು ಯಾರು? ಈಗ ತಾನು ದುಡುಕಿದರೆ ಮುಂದೆ ಮಾರಣಹೋಮವೇ ನಡೆಯಬಹುದು! ಸದ್ಯಕ್ಕೆ ಇವರಿಂದ ಕುಮಾರನಿಗೆ ಸಿಂಹಾಸನ ದೊರೆತರೆ, ಮುಂದೆ ಸಮಯ ನೋಡಿ ಇವರನ್ನು ಅಧಿಕಾರದಿಂದ ಉರುಳಿಸಬಹುದು. ತಾವು ಇವರನ್ನು ಅಧಿಕಾರಚ್ಯುತರನ್ನಾಗಿ ಮಾಡುವಷ್ಟು ಪ್ರಬಲರಾಗುವವರೆಗೆ ಇವರಲ್ಲಿ ವಿಶ್ವಾಸ ತೋರುತ್ತಿದ್ದು ಉಪಾಯಾಂತರದಿಂದ ಕಾರ್ಯಸಾಧಿಸಿಕೊಳ್ಳುವುದೇ ವಿವೇಕ ಮಾರ್ಗ. ಎಂದು ಭಾವಿಸಿ ಹೊರಡಲು ಎದ್ದು ನಿಂತಿದ್ದ ಸೋದರರಿಗೆ, ಸಮಾಧಾನಗೊಳಿಸಲೆಂಬಂತೆ ಹೇಳಿದಳು.

"ಅಬ್ಬಾ! ನಿಮಗೆ ಅದೆಷ್ಟು ಬೇಗ ಸಿಟ್ಟು ಬಂತು! ನಾನು ವಿನೋದಕ್ಕೆ ಹೇಳಿದ ಮಾತನ್ನೇ ನಿಜವೆಂದು ನಂಬಿ, ನನ್ನನ್ನು ನಡುನೀರಿನಲ್ಲಿ ಕೈಬಿಟ್ಟು ಹೊರಡಬೇಕೆಂದು ಯೋಚಿಸಿದಿರಾ? ನೀವು ನನ್ನನ್ನು ಅಷ್ಟು ಸುಲಭವಾಗಿ ತೊರೆದು ಹೋಗಲು ಸಾಧ್ಯವಿಲ್ಲ! ವಿಧಿ ನಮ್ಮನ್ನು ಕರುಳ ಬಳ್ಳಿಯಿಂದ ಕಟ್ಟಿ ಹಾಕಿದ್ದಾನೆ. ಇದನ್ನು ಕತ್ತರಿಸಿಕೊಂಡು ಹೋಗಲು ಸಾಧ್ಯವಿಲ್ಲ!" ಎಂದು ಅರೆ ವಿನೋದದ ಚಿರಿತ ದನಿಯಲ್ಲಿ, ಹೇಳಿದಳು. ಈ ಮಾತಿನಿಂದ ಅವರು ಚಕಿತರಾಗಿ ಹೊರಟು ನಿಂತವರು ಮತ್ತೆ ಕುಳಿತುಕೊಂಡರು.

"ಇನ್ನೇನು ಒಂದೇ ಮಾತಿನಲ್ಲಿ ನಿಮ್ಮಲ್ಲಿ ನಂಬಿಕೆಯಿಲ್ಲ ಎಂದು ಹೇಳಿದ

ಮೇಲೆ ನಮಗೆ ಇಲ್ಲಿ ಇನ್ನೇನು ಕೆಲಸ?" ಎಂದ ಪೆದ್ದತಿರುಮಲ.

"ನಾನೆಲ್ಲಿ ಹಾಗೆಂದೆ?"

"ನೀನು ಹಾಗೆ ಅನ್ನಲಿಲ್ಲ. ಆ ಅರ್ಥ ಬರುವ ಮಾತು ಹೇಳಿದೆ."

"ಇಷ್ಟು ದಿನಗಳು ನಿಮ್ಮೊಡನಿದ್ದೂ ನೀವು ನನ್ನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲವಲ್ಲಾ ಎಂದು ವಿಷಾದವಾಗುತ್ತದೆ!"

"ನಾವು ಅರ್ಥಮಾಡಿಕೊಂಡಿದ್ದ ವರದಾಂಬಿಕೆಗೂ, ಮಹಾರಾಣಿ ವರದಾ ದೇವಿಗೂ ಬಹಳ ಅಂತರವಿದೆ!"

"ನಾನು ಮೊದಲಿನಿಂದಲೂ ಒಂದೇ ಸಮನೆ ಇದ್ದೇನೆ! ನನ್ನಲ್ಲಿ ಯಾವ ಬದಲಾವಣೆಯೂ ಆಗಿಲ್ಲ!"

"ಹಾಗಿದ್ದರೆ ಸಾಮ್ರಾಜ್ಞಿ ಪದವಿಗಾಗಿ ನೀನು ಏಕಿಷ್ಟು ಹಠ ಮಾಡು ಮಾಡುತ್ತಿರುವೆ?"

"ಅಧಿಕಾರ ಮೋಹ ಯಾರಿಗೆ ಇಲ್ಲ?"

ಈ ಮಾತು ಹೇಳಿ ನಕ್ಕಳು. ಆ ಮಾತು ಅರ್ಥವಾಗಿ ಆ ಸಹೋದ ರರೂ ನಕ್ಕರು.

ಆ ನಗು ದೂರ ಸರಿದಿದ್ದ ಅವರನ್ನು ಮತ್ತೆ ವಿಶ್ವಾಸದ ಬೆಸುಗೆಯಿಂದ ಬೆಸೆಯಿತು. ಅವರಲ್ಲಿ ತಲೆದೋರಿದ್ದ ವೈಮನಸ್ಸು....ವಿಶ್ವಾಸದ ತುಂಬು ನಗೆ ಯಲ್ಲಿ ತೇಲಿಹೋಯಿತು.

ಕಡೆಗೂ ಸಲಕಂ ಸಹೋದರರು ತಮ್ಮ ಆಶಯವನ್ನು ಈಡೇರಿಸಿಕೊಂಡಿ ದ್ದರು. ಸಾಮ, ದಾನ, ಭೇದಗಳಿಂದ ವರದಾಂಬಿಕೆಯನ್ನು ಮೋಸಗೊಳಿಸಿದೆ ವೆಂದು ಮನದಲ್ಲೇ ಹಿಗ್ಗಿದರು. ಅವರ ಮಾತಿಗೆ ತಾನು ಮರುಳಾದಂತೆ ನಟಿಸಿ, ಅವರ ವಿದ್ರೋಹವನ್ನೆಲ್ಲಾ ಸಂಪೂರ್ಣವಾಗಿ ತಿಳಿದು, ಅವರನ್ನು ಸಮಯ ಸಾಧಿಸಿ, ಅಧಿಕಾರದಿಂದ ಉರುಳಿಸಲು ನಿಶ್ಚಯಿಸಿದ್ದ ವರದಾದೇವಿ ಅವರನ್ನು ತಾನು ಮೋಸಗೊಳಿಸಿದೆನೆಂದು ಹರ್ಷಿಸಿದಳು. ಹೀಗೆ ಒಬ್ಬರಲ್ಲಿ ಒಬ್ಬರಿಗೆ ವಿಶ್ವಾಸವಿಲ್ಲದಿದ್ದರೂ – ಇದ್ದಂತೆ ನಟಿಸಿ ತಮ್ಮ ಕಾರ್ಯವನ್ನು ಸಾಧಿ ಸಲು ಹವಣಿಸಿದ್ದರು.

ಅವರು ತಮ್ಮ ಬಹುದಿನಗಳ ಆಸೆ ಈಡೇರಿದ ಹುರುಪಿನಲ್ಲಿ ಅಲ್ಲಿಂದ ಎದ್ದು ಹೊರಡುವ ವೇಳೆಗೆ ದೂತನೊಬ್ಬನು ಕಾಣಿಸಿಕೊಂಡು, ಹೊಸ ವಾರ್ತೆ ಯನ್ನರುಹಿದನು.

"ಪ್ರಭು ಅನ್ಯಾಯವಾಯಿತು, ರಾಜವೈದ್ಯರು ತಪ್ಪಿಸಿಕೊಂಡರು!"

"ಸೆರೆಯಲ್ಲಿದ್ದವರು ಹೇಗೆ ತಪ್ಪಿಸಿಕೊಂಡರು?"

"ತಮ್ಮ ಆಜ್ಞೆಯಂತೆ, ಅವರನ್ನು ಕೋಟೆಯ ಸೆರೆಮನೆಯಿಂದ, ಆನೆ

ಗೊಂದಿಯ ಸೆರೆಮನೆಗೆ ಸಾಗಿಸುತ್ತಿರುವಾಗ, ನಡುದಾರಿಯಲ್ಲಿ, ಪಹರೆಯವರನ್ನು ವಂಚಿಸಿ, ತಪ್ಪಿಸಿಕೊಂಡರಂತೆ!"

"ಅವರು ಎಲ್ಲಿದ್ದರೂ ಬಿಡದೆ ಅವರನ್ನು ಹುಡುಕಿ ಸೆರೆಯಲ್ಲಿಡಿ. ಅವರು ತಪ್ಪಿಸಿಕೊಂಡರೆ ಸಾಮ್ರಾಜ್ಯಕ್ಕೆ ಬಹಳ ಅಪಾಯವಿದೆ!"

ಎಂದು ಆಜ್ಞೆ ಮಾಡಿ, ಅಲ್ಲಿಂದ ಹೊರಟುಹೋದರು. ಹೊರಡುವಾಗ ಅವರಿಗೆ ಮೊದಲಿನ ಹುರುಪು ಉಳಿಯಲಿಲ್ಲ. ಸಂತೋಷದ ಸಮಯದಲ್ಲಿ ಬಂದ ಈ ಅನಿಷ್ಟ ವಾರ್ತೆ ಅವರನ್ನು ಕಳವಳಕ್ಕೀಡುಮಾಡಿತ್ತು.

ಆದರೆ ಈ ಸಂಗತಿಯನ್ನು ಕೇಳಿ ವರದಾದೇವಿ ಮನಸ್ಸಿನಲ್ಲೇ ಹಿಗ್ಗಿದಳು. ತನ್ನ ಸಂಚು ನೆರವೇರಿತೆಂಬ ಸಂತೋಷ ಅವಳಿಗೆ ಉಂಟಾಗಿತ್ತು. ಮುಂದೆ ಬರಲಿರುವ ಶುಭೋದಯಕ್ಕೆ ಇದು ಮುನ್ಸೂಚನೆ ಎಂದು ಅರಿತಳು.

ಪಟ್ಟಾಭಿಷೇಕದ ಸಿದ್ಧತೆಗಳು ಭರದಿಂದ ನಡೆದವು. ಕ್ರಿ. ಶ. ೧೫೪೨ನೆ ಸಂವತ್ಸರದ ಒಂದು ಶುಭದಿನದಲ್ಲಿ ಸಲಕಂ ಸಹೋದರರು ಚಿನ್ನ ವೆಂಕಟಾದ್ರಿಯನ್ನು ವೆಂಕಟದೇವರಾಯನೆಂಬ ಹೆಸರಿನಲ್ಲಿ ಪಟ್ಟಗಟ್ಟಿದರು. ಪೆದ್ದ ತಿರುಮಲನು ರಾಜಪ್ರತಿನಿಧಿಯಾಗಿಯೂ, ಚಿನ್ನ ತಿರುಮಲನು ಪ್ರಧಾನ ಅಮಾತ್ಯನೆಂದೂ ಘೋಷಿಸಲ್ಪಟ್ಟರು. ವರದಾದೇವಿ ರಾಜಮಾತೆಯಾಗಿ, ಹಿರಿಯ ವ್ಯಕ್ತಿಯ ಸ್ಥಾನವನ್ನಲಂಕರಿಸಿದಳು.

೨೨

ವೆಂಕಟಾದ್ರಿ ಪಟ್ಟಾಭಿಷಿಕ್ತನಾದ ಸಂಗತಿ ಸಾಜ್ಯದ ಜನತೆಗೆ ಸಂತೋಷವನ್ನುಂಟುಮಾಡಿದರೂ, ಸಲಕಂ ಸೋದರರಲ್ಲಿ ಹಿರಿಯನಾದ ಪೆದ್ದ ತಿರುಮಲನು ರಾಜಪ್ರತಿನಿಧಿಯಾಗಿ, ಸಿಂಹಾಸನದಲ್ಲಿ ಮಂಡಿಸಿದುದು ಬಹುಮಂದಿಗೆ, ಪ್ರಿಯವಾಗಲಿಲ್ಲ. ಇದುವರೆಗೆ ಸಾಮ್ರಾಟನ ಅಧಿಕಾರವಿಲ್ಲದಿದ್ದರೂ, ತಾವೇ ಸಾಮ್ರಾಟರಂತೆ ನಿರಂಕುಶಾಡಳಿತ ನಡೆಸಿದ್ದ ಸಲಕಂ ಸೋದರರು, ತಾವೇ ಸಾಮ್ರಾಟರಾದಮೇಲೆ ಅವರ ದಬ್ಬಾಳಿಕೆಯನ್ನು ಎದರಿಸುವವರು ಯಾರೂ ಇಲ್ಲವೆಂದು ಜನ ಹೆದರಿದರು. ಇದುವರೆಗೆ ಒಳ್ಳೆಯ ದಿನಗಳು ಬಂದಾವೆಂದು ಆಶಿಸಿದ್ದ ಜನತೆಗೆ, ಈ ಸೋದರರ ಪ್ರಭುತ್ವವೇರ್ಪಟ್ಟುದು, ಪೈಶಾಚಿಕ ಪ್ರಭುತ್ವವೇರ್ಪಟ್ಟು ಇನ್ನೂ ತಮಗೆ ಸುಖವೆಂಬುದು ಕನಸಿನ ಗಂಟೆಂದೂ ಅರಿತರು. ತಾವು ಈಗಲೇ ಆ ಸೋದರರ ಪ್ರಭುತ್ವವನ್ನು ಎದುರಿಸದಿದ್ದರೆ, ತಮ್ಮದಾಗಿ ಏನೂ ಉಳಿಯುವುದಿಲ್ಲನೆಂದೂ, ನ್ಯಾಯ ದೇವತೆ ಕಾಡುಪಾಲಾಗುವಳೆಂದೂ ಅರಿತರು.

ಅದಕ್ಕೆ ತಕ್ಕಂತೆ ಪಟ್ಟಾಭಿಷೇಕದ ಸಮಯದಲ್ಲಿ ದೇಶದ ಎಲ್ಲ ಪ್ರತಿಷ್ಠಿತ ವ್ಯಕ್ತಿಗಳಿಗೆ ಓಲೆ ಹೋಗಿ, ಅವರ ಆದಾಯದ ಕಾಲುಭಾಗವನ್ನು ನೂತನ

ಸಾಮ್ರಾಟರಿಗೆ ಕಾಣಿಕೆಯಾಗಿ ಸಲ್ಲಿಸಬೇಕೆಂದು ಆಗ್ರಹಪೂರ್ವಕವಾಗಿ ತಿಳಿಸಲಾಗಿತ್ತು. ಪಟ್ಟಾಭಿಷೇಕದ ಸಲುವಾಗಿ ಬೇಕಾಗುತ್ತಿದ್ದ ಸಮಸ್ತ ಪದಾರ್ಥಗಳನ್ನು ಆಯಾ ವರ್ತಕರಿಂದ ಬಲಾತ್ಕಾರವಾಗಿ ಸಂಗ್ರಹಿಸಲಾಗಿತ್ತು. ಏನನ್ನೂ ಕೊಡಲಾಗದ ನಿರ್ಗತಿಕರು ಏನೂ ಪ್ರತಿಫಲವಿಲ್ಲದೆ ದುಡಿಯಬೇಕಾಗಿತ್ತು. ಪಟ್ಟಾಭಿಷೇಕದ ನಿಮಿತ್ತದಲ್ಲಿ ರಾಜಧಾನಿಯಲ್ಲಿದ್ದ ವ್ಯಾಪಾರಿಗಳಿಂದ, ಧನ, ಕನಕ, ವಸ್ತ್ರಗಳನ್ನು ದೋಚಿ, ತಮ್ಮ ಅನುಚರರಿಗೆ ಧಾರಾಳವಾಗಿ ದಾನಮಾಡಿ, ಅವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದರು. ರಾಜಧಾನಿಯಲ್ಲಿದ್ದ ಗಾಯಕರು ನರ್ತಕಿಯರು ವೇಶ್ಯೆಯರಿಂದಲೂ ಪ್ರತಿಫಲ ಕೊಡದೆ, ಮನರಂಜನೆ ಏರ್ಪಡಿಸಿದರು. ಸಾಮ್ರಾಟರ ಆಜ್ಞೆಯನ್ನು ವಿರೋಧಿಸಿದವರು ಸಮಸ್ತವನ್ನೂ ಕಳೆದುಕೊಂಡು, ರಾಜದ್ರೋಹಿಗಳೆಂದು ಪರಿಗಣಿಸಲ್ಪಟ್ಟು ಸೆರೆಮನೆ ಸೇರುವಂತೆ ಆಯಿತು.

ಇವೆಲ್ಲಕ್ಕಿಂತಲೂ ಪಟ್ಟಾಭಿಷೇಕದ ತರುಣದಲ್ಲಿ, ರಾಜಧಾನಿಯ ಶ್ರೀಮಂತ ವರ್ಗದವರ ಮೇಲೆ ನಡೆಸಿದ ದೌರ್ಜನ್ಯ ಕೃತ್ಯ ಉಲ್ಲೇಕನಾರ್ಹ. ಪಟ್ಟಾಭಿಷೇಕದ ಕಾಲದಲ್ಲಿ ಅವರು, ತಮ್ಮ ಗಳಿಕೆಯ ಕಾಲುಭಾಗವನ್ನು, ಕಾಣಿಕೆಯಾಗಿ ಅರ್ಪಿಸಲು ಹೊರಟಿದ್ದ ರಾಜಾಜ್ಞೆಯನ್ನು ವಿರೋಧಿಸಿದರು. ತಮ್ಮನ್ನು ನಿರ್ಜೀವ ವಸ್ತುಗಳಂತೆ, ಉಪಯೋಗಿಸುವುದನ್ನು ಪ್ರತಿಭಟಿಸಲು ಅವರುಗಳು ಯಾರೂ, ಪಟ್ಟಾಭಿಷೇಕ ಸಮಾರಂಭದಲ್ಲಿ ಭಾಗವಹಿಸಲಿಲ್ಲ. ತಮ್ಮ ಇಚ್ಛೆಯನ್ನು ತಿಳಿಸಿ, ನಾಡಿನ ಇತರ ಶ್ರೀಮಂತರನ್ನೂ ಪಟ್ಟಾಭಿಷೇಕಕ್ಕೆ ಬರದಂತೆ ತಡೆದರು, ತಾವು ಕಷ್ಟಬಿದ್ದು ಆರ್ಜಿಸಿದ್ದ ಸಂಪತ್ತನ್ನು, ಜುಲುಮೆಯಿಂದ ಕಾಣಿಕೆಯಾಗಿ ಅರ್ಪಿಸಲು ತಮಗೆ ಆಜ್ಞೆ ಮಾಡಲು ಸಾಮ್ರಾಟರಿಗೆ ಅಧಿಕಾರವಿಲ್ಲವೆಂದೂ, ನಿರ್ಣಯಿಸಿ ಪಟ್ಟಾಭಿಷೇಕದ ದಿನವನ್ನು ಶೋಕದ ದಿನವಾಗಿ ಆಚರಿಸಿದರು.

ಈ ಸಂಗತಿಯನ್ನು ದೂತರಿಂದ ಕೇಳಿದ ಸಲಕಂ ಸಹೋದರರು ಕೆರಳಿದ ಮದಕರಿಗಳಂತಾದರು. ಶ್ರೀಮಂತರು ನಾಡಿನ ನಾಡಿ, ದೇಶದ ವ್ಯಾಪಾರ ವಾಣಿಜ್ಯಗಳು – ಅವರ ಮೇಲೆ ನಿಂತಿವೆ ಎಂಬುದನ್ನು ನಿರ್ಲಕ್ಷಿಸಿದರು. ತಮ್ಮ ಆಜ್ಞೆಯನ್ನು ತಿರಸ್ಕರಿಸಿದ ಅವರಿಂದ ಬಲಾತ್ಕಾರವಾಗಿ, ಕಾಣಿಕೆಯ ಹಣವನ್ನು ವಸೂಲು ಮಾಡಲು ಹನುಮನಾಯಕನ ಪಡೆಗೆ ಆಜ್ಞೆ ಇತ್ತರು. ತಮ್ಮ ಬಲಾತ್ಕಾರಕ್ಕೆ ಬಗ್ಗದವರನ್ನು ರಾಜದ್ರೋಹಿಗಳೆಂದು ಪರಿಗಣಿಸಿ, ಶಿಕ್ಷಾರ್ಹರೆಂದು ತಿಳಿಸಲಾಯಿತು. ಇದನ್ನು ಪ್ರತಿಭಟಿಸಿದವರನ್ನು ಸೆರೆಯಲ್ಲಿಟ್ಟು ಅವರ ಸಮಸ್ತ ಆಸ್ತಿಯನ್ನು ರಾಜಬೊಕ್ಕಸಕ್ಕೆ ಸೇರಿಸಬೇಕೆಂದು ಘೋಷಿಸಲಾಯಿತು.

ರಾಜಘೋಷಣೆ ಕಾರ್ಯಗತವಾಗಲು ತಡವಾಗಲಿಲ್ಲ. ರಾಜಧಾನಿಯ

ಶ್ರೀಮಂತರು, ಒಂದೆಡೆ ಸೇರಿ ಏನು ಮಾಡಬೇಕೆಂದು ನಿರ್ಣಯಿಸುವ ಮೊದಲೇ, ಅವರ ಮನೆಗಳನ್ನು ಸಲಕಂ ಸೋದರರ ದೈತ್ಯಪರಿವಾರ, ಹನುಮನಾಯಕನ ಮುಖಂಡತ್ವದಲ್ಲಿ ಬಂದು ಮುತ್ತಿಗೆ ಹಾಕಿತು. ಶ್ರೀಮಂತರ ಮನೆಗಳಲ್ಲಿದ್ದ ಬೆಳ್ಳಿ, ಬಂಗಾರ ಅನರ್ಘ್ಯವಡವೆ ವಸ್ತುಗಳನ್ನೂ, ಬೆಲೆಬಾಳುವ ಬಟ್ಟೆಗಳನ್ನೂ, ಅವರ ಕರಿ, ತುರಗ, ಗೋ ಸಂಪತ್ತನ್ನೂ ಧಾನ್ಯರಾಶಿಗಳನ್ನೂ, ಒಂದನ್ನೂ ಬಿಡದೆ, ಎಲ್ಲವನ್ನೂ ವಶಪಡಿಸಿಕೊಂಡರು. ಅವರನ್ನು ವಿರೋಧಿಸಿದವರನ್ನು, ಕೊಲೆ, ಹಿಂಸೆ, ಅತ್ಯಾಚಾರಗಳಿಂದ ಶಿಕ್ಷಿಸಿದರು. ಈ ಸಮಯದಲ್ಲಿ ಮನೆಗಳಿಗೆ ಬೆಂಕಿಯಿಟ್ಟ ಪ್ರಸಂಗಗಳೆಷ್ಟೋ. ದರೋಡೆಯನ್ನು ಎದುರಿಸಲು ಹೋಗಿ ಕೈಕಾಲು ಕಳೆದುಕೊಂಡವರೆಷ್ಟೋ. ಅವರ ಮಕ್ಕಳನ್ನು ತಮ್ಮ ಕತ್ತಿಗೆ ಬಲಿ ಬಲಿಕೊಟ್ಟವರೆಷ್ಟೋ ಅವರು ತಮಗೆ ಅಕ್ಕತಂಗಿಯರು, ತಾಯಂದಿರು ಇರುವುದನ್ನು ಮರೆತು, ಕೈಗೆ ಸಿಕ್ಕಿದ ಹೆಂಗಸರ ಮೇಲೆ ಅತ್ಯಾಚಾರ ಮಾಡಿ ಶೀಲ ಭಂಗ ಮಾಡಿದರು. ಈ ದೈತ್ಯರಿಂದ ಪಾರಾಗಲಾರದೆ, ಭಾವಿಗೆ ಬಿದ್ದು, ವಿಷ ತೆಗೆದುಕೊಂಡು, ಆತ್ಮಹತ್ಯೆ ಮಾಡಿಕೊಂಡ ವೀರ ವನಿತೆಯರು ಎಷ್ಟೋ ಮಂದಿ ಶ್ರೀಮಂತರ ಮೇಲೆ ನಡೆಸಿದ, ಅತ್ಯಾಚಾರ, ಕೊಲೆ, ಸುಲಿಗೆಗಳನ್ನು ಕಂಡು, ಉಳಿದವರು ತಮ್ಮ ಆಸ್ತಿಪಾಸ್ತಿಗಳನ್ನು ಬಿಟ್ಟು, ತಮ್ಮ ಪ್ರಾಣ ಉಳಿದರೆ ಸಾಕೆಂದು, ರಾಜಧಾನಿಯಿಂದ ಓಡಿಹೋದರು. ಅಂತಹವರನ್ನು ಸೆರೆ ಹಿಡಿದು, ಶಿಕ್ಷಿಸಲಾಯಿತು. ಮತ್ತೆ ಕೆಲವರನ್ನು ನರಬೇಟೆಯಾಡುವಂತೆ, ಬೇಟೆಯಾಡಿ ಕೊಲ್ಲಲಾಯಿತು.

ಈ ಅತ್ಯಾಚಾರವನ್ನು ಕಂಡು ಉಳಿದವರು ತಮ್ಮ ಪ್ರಾಣ, ಮಾನ ಉಳಿದರೆ ಸಾಕೆಂದು, ತಮ್ಮ ಸಮಸ್ತವನ್ನು ಆ ದೈತ್ಯ ಪರಿವಾರದವರ ಪಾಲುಮಾಡಿ, ನಿರ್ಗತಿಕರಾದರು. ಮೈಮೇಲೆ ಇದ್ದ ಉಟ್ಟ ಬಟ್ಟೆಯ ವಿನಹ ಅವರಿಗೆ ತಮ್ಮದೆನ್ನುವ ಯಾವ ವಸ್ತುವೂ ಉಳಿಯದೆ ಹೋಗಿತ್ತು. ಅವರು ಸೈನಿಕರ ಮುಂದೆ ಪ್ರತಿಭಟಿಸಿ ಪ್ರಯೋಜನವಿಲ್ಲವೆಂದು ಸಾಮೂಹಿಕವಾಗಿ ಹೊರಟು, ಮಹಾರಾಣಿ ವರದಾದೇವಿಗೆ ಮೊರೆಯಿಟ್ಟು ತಮ್ಮ ಸಂರಕ್ಷಣೆ ಮಾಡಲು ಬೇಡಿಕೊಂಡರು.

ವರದಾದೇವಿಗೆ ಪಟ್ಟಾಭಿಷೇಕ ನಡೆದ ತರುಣದಲ್ಲಿ ರಾಜಧಾನಿಯಲ್ಲಿ ನಡೆದ ಈ ಅಮಾನುಷ ಕಥೆ ಕೇಳಿ ಗಾಬರಿಯಾಯಿತು. ಯಾವ ಜನ, ಸಂತೋಷ ಸಂಭ್ರಮಗಳಿಂದ ನಲಿಯಬೇಕಾಗಿತ್ತೋ, ಆ ಜನ ಮನೆ ಮಠಗಳನ್ನು ಕಳೆದುಕೊಂಡು ರಕ್ತದ ಕಣ್ಣೀರು ಸುರಿಸುತ್ತಿರುವುದು ಅಮಂಗಳವೆಂದು ಭಾವಿಸಿದಳು. ಇದನ್ನು ಕೇಳಿ ಸೋದರರ ಬಗ್ಗೆ ಕ್ಷುಬ್ಧಳಾದಳು. ಅವಳಿಗೆ ಏನು ಮಾಡಬೇಕೆಂದು ತಿಳಿಯದೆಹೋಯಿತು. ಹೀಗೆ ಈ ಅತ್ಯಾಚಾರವನ್ನು ತಡೆ

ಕಟ್ಟಬೇಕೆಂದು ಅರಿಯುವಾದಳು! ಅವಳು ತನ್ನನ್ನು ನೊರೆ ಬಂದವರನ್ನು ಸಂರಕ್ಷಿಸುವುದಾಗಿ ಭರವಸೆಯಿತ್ತು, ಅವರಿಗಾದ ಅನ್ಯಾಯವನ್ನು ಸರಿಪಡಿಸುವುದಾಗಿ ವಾಗ್ದಾನ ಮಾಡಿದಳು. ಅಲ್ಲದೆ ರಾಜಧಾನಿಯಲ್ಲಿ ನಡೆದಿದ್ದ, ಕೊಲೆ ಸುಲಿಗೆಗಳನ್ನು ಕೂಡಲೇ ನಿಲ್ಲಿಸಬೇಕೆಂದೂ, ನಿಲ್ಲಿಸದಿದ್ದರೆ, ಅವರನ್ನು ಪುಂಡರೆಂದು ಭಾವಿಸಿ, ಕ್ರೌರ್ಯವಾಗಿ ಶಿಕ್ಷಿಸಲಾಗುವುದೆಂದೂ, ಕುಮಾರನ ಅಂಕಿತದಲ್ಲಿ ರಾಜಶಾಸನ ಹೊರಡಿಸಿ, ರಾಜಧಾನಿಯಲ್ಲಿ ನಡೆದಿದ್ದ ಅತ್ಯಾಚಾರವನ್ನು ಅಡಗಿಸಲು ತಾನೇ ಕುದುರೆಯನ್ನೇರಿ ಹೊರಟಳು.

ಮಹಾರಾಣಿ ವರದಾದೇವಿಯನ್ನು ಕಾಣುತ್ತಲೇ ತಮ್ಮ ಸಮಸ್ತವನ್ನೂ ಕಳೆದುಕೊಂಡ ಶ್ರೀಮಂತ ಕುಟುಂಬದವರು, ನಿರಪರಾಧಿಗಳಾದ ತಮ್ಮ ಮೇಲೆ, ಸೈನಿಕರು ನಡಸಿದ ಬಗೆಬಗೆಯ ಅತ್ಯಾಚಾರಗಳನ್ನು, ಚಿತ್ರಹಿಂಸೆಗಳನ್ನು ಕಲ್ಲೂ ಕಣ್ಣೀರಿಡುವಂತೆ ವರ್ಣಿಸಿದರು. ವರದಾದೇವಿಗೆ ತನ್ನ ಮಗನ ಆಳ್ವಿಕೆಯ ಮೊದಲದಿನಗಳಲ್ಲೇ ಜನರು ಈ ಬಗೆಯ ಚಿತ್ರಹಿಂಸೆಗೆ ಒಳಗಾದುದು ಕೆಡುಕೆನಿಸಿತು. ನಿರಪರಾಧಿಗಳ ರಕ್ತ ಹರಿದುದು ಅನಿಷ್ಟ ಸೂತಕವಾಯಿತು! ಎಲ್ಲೆಲ್ಲೂ ಬೊಬ್ಬೆ, ಹಾಹಾಕಾರ, ಕಣ್ಣೀರು, ರಕ್ತದ ಕೋಡಿ! ಯಾರ ಬಾಯಲ್ಲಿ ನೋಡಿದರೂ ನೋವಿನ ಉದ್ಗಾರ! ತಮಗಾದ ಅನ್ಯಾಯಗಳ ಕರ್ಣಕಠೋರ ವರ್ಣನೆ! ನೂತನ ಪ್ರಭುತ್ವಕ್ಕೆ ಶಾಪ!

ರಾಜಧಾನಿಯಲ್ಲಿ ನಡೆದಿದ್ದ ಶ್ರೀಮಂತರ ಮೇಲಿನ ಅತ್ಯಾಚಾರವನ್ನು ನಿಲ್ಲಿಸಲು ಮಹಾರಾಣಿ ವರದಾದೇವಿಯೇ ಬಂದುದರಿಂದ, ಸಲಕಂ ಸೈನಿಕರ ದೈತ್ಯ ಪರಿವಾರ ಹೆದರಿ ಹಿಮ್ಮೆಟ್ಟಿತು. ವರದಾದೇವಿ ಶ್ರೀಮಂತರಿಂದ ಕಿತ್ತುಕೊಂಡ ಸಮಸ್ತವನ್ನೂ ಹಿಂದಿರುಗಿಸುವಂತೆ ಸೈನಿಕರಿಗೆ ಆಜ್ಞೆಮಾಡಿದಳು. ಅವಳ ಆಜ್ಞೆಯನ್ನು ಪಾಲಿಸಲು ಅನುಮಾನಿಸಿದ ಸೈನಿಕರನ್ನು ಕಂಡು ಕೆರಳಿ, ವರದಾದೇವಿ, ತನ್ನ ಹಿಂದೆ ಬಂದಿದ್ದ ಬಿಚ್ಚುಗತ್ತಿಯ ಮೈಗಾವಲಿನ ಪಡೆಯವರಿಗೆ, ತನ್ನ ಆಜ್ಞೆಯನ್ನು ಕಾರ್ಯಗತ ಮಾಡಲು ತಿಳಿಸಿ, ತಾನೇ ಕತ್ತಿ ಹಿರಿದು ಮುನ್ನುಗ್ಗಿದಳು. ಅವಳ ರೌದ್ರಾವೇಶವನ್ನೂ, ಕೆರಳಿದ ಮುಖವನ್ನೂ, ಆ ಕೆಂಗಣ್ಣುಗಳನ್ನೂ ಕಂಡು ಹೆದರಿ, ತಾವು ದೋಚಿದ ವಸ್ತುಗಳನ್ನು ಅಲ್ಲಲ್ಲೇ ಹಾಕಿ ನಡೆದ ಸಂಗತಿಯನ್ನು ತಮ್ಮ ನಾಯಕನಿಗೆ ತಿಳಿಸಲು ಹೊರಟರು.

ನಿಮಿಷಮಾತ್ರದಲ್ಲಿ ಎಲ್ಲಿಂದಲೋ, ಕುದುರೆಯ ಮೇಲೆ ನಾಗಾಲೋಟದಲ್ಲಿ ಪಸುಪನಾಯಕನು ಬಂದು ವರದಾದೇವಿಯ ಸಮ್ಮುಖದಲ್ಲಿ ನಿಂತನು.

"ತಾಯಿ, ಇದು ಸಾಮ್ರಾಟರ ಆಜ್ಞೆ – ಪ್ರಭುಗಳ ಆಜ್ಞೆಯನ್ನು ನಾವು ತಿರಸ್ಕರಿಸಿದೆವೆಂದರೆ, ಪ್ರಭುಗಳು ಕುಪಿತರಾಗುತ್ತಾರೆ."

"ನಿಮ್ಮ ಪ್ರಭುಗಳು ಹೀಗೆ ಶ್ರೀಮಂತರ ಮೇಲೆ ಅತ್ಯಾಚಾರ ನಡೆ-

ಬೇಕೆಂದು ಆಜ್ಞೆ ಮಾಡಿದ್ದಾರೆಯೆ ?"

"ಹೌದು ತಾಯಿ !"

"ನಿಮ್ಮ ಮಾತು ನಿಜವಾದರೆ, ನಿರಪರಾಧಿಗಳಾದ ಪ್ರಜೆಗಳನ್ನು ಹಿಂಸಿಸಲು ಹೊರಟ ನಿಮ್ಮ ಪ್ರಭುಗಳ ಆಜ್ಞೆಗೆ ಧಿಕ್ಕಾರ! ಅವರು ಪ್ರಭುಗಳಾದರೇನು? ಇಂತಹ ಅಮಾನುಷ, ಅನ್ಯಾಯಗಳನ್ನು ನಡೆಸಲಾಗದು! ಇದು ದಬ್ಬಾಳಿಕೆ! ಹಿಂಸೆ! ದೌರ್ಜನ್ಯ! ಇದನ್ನು ಪುರಸ್ಕರಿಸುವ ಪ್ರಭುಗಳು ಮಾನವರಲ್ಲ ರಾಕ್ಷಸರು! ಇದನ್ನು ನಾನು ಎದರಿಸುತ್ತೇನೆ! ಪ್ರತಿಭಟಿಸುತ್ತೇನೆ!"

"ತಾಯಿ, ಸಾಮ್ರಾಟರ ಆಜ್ಞೆಯನ್ನು...." ಎಂದು ಏನೋ ಹೇಳಲು ಹೊರಟ ಹನುಮನಾಯಕನನ್ನು ಮಧ್ಯೆವೇ ತಡೆದು ಗರ್ಜಿಸಿದಳು ವರದಾದೇವಿ!

"ಸಾಮ್ರಾಟರಂತೆ, ಸಾಮ್ರಾಟರು! ಯಾರು ಆ ಸಾಮ್ರಾಟರು ? ಇಂತಹ ಅನ್ಯಾಯದ ಆಜ್ಞೆಗಳನ್ನು ಮಾಡಲು ಯಾರು ಅವರಿಗೆ ಅಧಿಕಾರ ಕೊಟ್ಟವರು ?"

"ತಾಯಿ ಮಹಾಸಾಮ್ರಾಟರಾದ, ಸಲಕಂ ಪೆದ್ದ ತಿರುಮಲ ಮಹಾರಾಜರು ಮಾಡಿರುವ ಆಜ್ಞೆಯನ್ನು ತಿರಸ್ಕರಿಸುವ ಧೈರ್ಯ ಈ ಪಾದ ಸೇವಕನಿಗಿಲ್ಲ!"

"ಆ ನಿಮ್ಮ ಪ್ರಭುಗಳ ಆಜ್ಞೆಯನ್ನು ನಾನು ತಿರಸ್ಕರಿಸಿವೆನೆಂದು ತಿಳಿಸಿರಿ! ಆ ನಿಮ್ಮ ಸೈನಿಕರಿಗೆ, ಹಿಂದಿರುಗಲು ಆಜ್ಞಾಪಿಸಿರಿ!"

"ತಾಯಿ, ಹೀಗೆ ಮಾಡಿದರೆ ಪ್ರಭುಗಳು ಸುಮ್ಮನಿರುವುದಿಲ್ಲ!"

"ಏನು ಮಾಡುತ್ತಾರೆ ?"

"ಕ್ರೂರವಾಗಿ ಶಿಕ್ಷಿಸುತ್ತಾರೆ!"

"ನಿಮ್ಮನ್ನು ನಾನು ತಡೆದೆನೆಂದು ತಿಳಿಸಿರಿ! ಅವರು ಶಿಕ್ಷೆ ವಿಧಿಸುವುದಾದರೆ ನನಗೇ ವಿಧಿಸಲಿ!"

"ತಾಯಿ....ಇದು ದುಡುಕುವ ವಿಷಯವಲ್ಲ!"

"ಅದು ನನಗೆ ತಿಳಿದಿವೆ, ಹೂಂ. ನಿಮ್ಮ ಈ ಕಿರಾತ ಪರಿವಾರಕ್ಕೆ ದೋಚಿದ್ದನ್ನು ಹಿಂದಿರುಗಿಸಲು ಆಜ್ಞೆ ಮಾಡುತ್ತೀರೋ ಇಲ್ಲವೋ ?"

"ನಾನು ಮಾಡಲಾರ ತಾಯಿ!"

"ನನ್ನನ್ನು ಯಾರೆಂದು ತಿಳಿದಿದ್ದೀರಿ ?"

"ಮಹಾರಾಣಿಯವರು."

"ಅಲ್ಲ ರಾಜಮಾತೆ! ನನ್ನ ಪುತ್ರನ ಅಂಕಿತದಲ್ಲಿ ನಾನು ಆಜ್ಞೆ ಮಾಡುತ್ತೇನೆ."

"ಪ್ರಭುಗಳ ಆಜ್ಞೆ ?"

"ನಿಜವಾದ ಪ್ರಭುಗಳು ಪೆದ್ದ ತಿರುಮಲರಲ್ಲ. ಸಾಮ್ರಾಟ್ ವೆಂಕಟದೇವರಾಯರು! ಸಾಮ್ರಾಟರ ಮಾತೆ ನಾನು – ನನ್ನದು ಈ ಸಾಮ್ರಾಜ್ಯ!

ನನ್ನ ಆಜ್ಞೆಯನ್ನು ಧಿಕ್ಕರಿಸಿ ಒಂದು ಹೆಜ್ಜೆ ಮುಂದೆ ಇಟ್ಟರೂ ಮುಂದೆ ನೀವು ಪರಿತಪಿಸಬೇಕಾದೀತು! ಜೋಕೆ!" ಎಂದು ಹೂಂಕರಿಸಿದಳು.

ಈ ಮಾತಿನಿಂದ ಹನುಮನಾಯಕನು ತನ್ನ ಸೈನಿಕರನ್ನು ನಿರ್ಗಮಿಸಲು ಹೇಳಿ, ಎಲ್ಲವನ್ನೂ ಸಲಕಂ ಸೋದರರಿಗೆ ವರದಿಮಾಡಲು ತಾನೇ ಹೊರಟ.

"ಪ್ರಭು! ಅಚಾತುರ್ಯ ನಡೆಯಿತು." ಎಂದು ನಡೆದ ಸಂಗತಿಯನ್ನೆಲ್ಲಾ ತಿಳಿಸಿದ. ಎಲ್ಲವನ್ನೂ ಸಮಾಧಾನ ಚಿತ್ತದಿಂದಲೇ ಆಲಿಸಿದ ಪೆದ್ದ ತಿರುಮಲ, ಕೆರಳಿದ ಕಾಳಿಯಂತಿರುವ ವರದಾದೇವಿಯನ್ನು ಎದುರು ಹಾಕಿಕೊಳ್ಳಲಿಚ್ಛಿಸದೆ, ಉಪಾಯಾಂತರದಲ್ಲಿ ಕಾರ್ಯಸಾಧಿಸಲು ಆಲೋಚಿಸಿ "ಚಿಂತೆಯಿಲ್ಲ. ಸುಲಿದುದನ್ನು ಮತ್ತೆ ಶ್ರೀಮಂತರಿಗೆ ಹಿಂದಿರುಗಿಸುವ ಸೋಗುಹಾಕಿ, ಮಹಾರಾಣಿಯನ್ನು ಹಿಂದಕ್ಕೆ ಕಳುಹಿಸಿ, ಅನಂತರ ಅವುಗಳನ್ನು ರಾಜಬೊಕ್ಕಸಕ್ಕೆ ಸೇರಿಸಿ, ನಿಮ್ಮ ಕೃತ್ಯವನ್ನು ವಿರೋಧಿಸಿದ ಶ್ರೀಮಂತರನ್ನೆಲ್ಲಾ ಸೆರೆಯಲ್ಲಿಡಿ! ಆದಷ್ಟು ಇವುಗಳನ್ನು ಹೆಚ್ಚು ಗದ್ದಲವಿಲ್ಲದಂತೆ ಮಾಡಿ; ಮುಂದಿನದನ್ನು ನಾವು ನೋಡಿಕೊಳ್ಳುತ್ತೇವೆ" ಎಂದು ಹೇಳಿದ.

ಅದರಂತೆಯೇ ಹನುಮನಾಯಕನು, ತನ್ನ ಸೈನಿಕರನ್ನು ಹಿಂದಕ್ಕೆ ಕಳುಹಿಸಿಕೊಟ್ಟು, ಶ್ರೀಮಂತರಿಗೆ ಅವರವರ ಆಸ್ತಿಗಳನ್ನು ಹಿಂದಿರುಗಿಸುವ ಸೋಗು ಹಾಕಿ, ವರದಾದೇವಿಯನ್ನು ಉಪಾಯವಾಗಿ ಹಿಂದಿರುಗಿಸಿದ.

ವರದಾದೇವಿ, ಶ್ರೀಮಂತರಿಗೆ, ಸೈನಿಕರಿಂದ ಮುಂದೆ ಯಾವ ತೊಂದರೆಯೂ ಆಗದಂತೆ, ತಾನು ನೋಡಿಕೊಳ್ಳುವುದಾಗಿ ಅಭಯವಿತ್ತು ನಡೆದಿದ್ದ ಘಟನೆಗಳಿಗೆ ವಿಷಾದ ವ್ಯಕ್ತಪಡಿಸಿ ಅವರು ನಿಶ್ಚಿಂತೆಯಿಂದಿರುವಂತೆ ಹೇಳಿ ಅರಮನೆಗೆ ಹಿಂದಿರುಗಿ, ಕುಮಾರನಿಗೆ ಎಲ್ಲವನ್ನೂ ವಿವರಿಸಿದಳು.

ಅವಳು ನಗರದಲ್ಲಿ ನಡೆದಿರುವ ದೌರ್ಜನ್ಯ ಕೃತ್ಯಗಳನ್ನು ವೆಂಕಟಾದ್ರಿಗೆ ತಿಳಿಸಿ, ವಾಸ್ತವ ಸಂಗತಿಯನ್ನು ತಿಳಿಯಲು ಸಲಕಂ ಸೋದರರನ್ನು ಬರಮಾಡಿಕೊಳ್ಳಬೇಕೆನ್ನುವಷ್ಟರಲ್ಲಿ ಅವರೇ ಅಲ್ಲಿಗೆ ಆಗಮಿಸಿದರು. ಅವರನ್ನು ಉಚಿತಾಸನದಲ್ಲಿ ಕುಳ್ಳಿರಿಸಿ, ವರದಾದೇವಿಯೇ ಪ್ರಶ್ನಿಸಿದಳು.

"ನಿಮ್ಮನ್ನು ಕರೆಸಿಕೊಳ್ಳಬೇಕೆಂದಿದ್ದೆವು – ನೀವೇ ಬಂದುದು ಒಳ್ಳೆಯದಾಯಿತು."

"ಏಕೆ ಮಹಾರಾಣಿ?" ಎಂದು ಪ್ರಶ್ನಿಸಿದ ಪೆದ್ದತಿರುಮಲ.

"ನೀವು ನಗರದ ಶ್ರೀಮಂತರ ಆಸ್ತಿಗಳನ್ನು ದೋಚಲು ಆಜ್ಞೆ ಮಾಡಿದ್ದೀರಾ?"

"ಇಲ್ಲವಲ್ಲ!"

"ಹಾಗಾದರೆ ನಿಮ್ಮ ನೆಚ್ಚಿನ ಅಧಿಕಾರಿ, ಹನುಮನಾಯಕರು ನಿಮ್ಮ

ಆಜ್ಞೆಯಂತೆ ವರ್ತಿಸುತ್ತಿರುವುದಾಗಿ ತಿಳಿಸಿದರಲ್ಲಾ ಈ ಸಂಗತಿ ಸುಳ್ಳೆ?"

"ಅವರು ನನ್ನ ಇಚ್ಛೆಯಂತೆ ನಡೆಯುತ್ತಿರುವುದಾಗಿ ತಿಳಿಸಿದರೆ?"

"ಹೌದು!"

"ಶ್ರೀಮಂತರಿಂದ ಪಟ್ಟಾಭಿಷೇಕಕ್ಕಾಗಿ ಬರಬೇಕಾಗಿದ್ದ ಕಾಣಿಕೆಯನ್ನು ವಸೂಲು ಮಾಡಲು ಹೇಳಿದ್ದೇವೆ ಹೊರತು, ದೌರ್ಜನ್ಯಕೃತ್ಯಗಳನ್ನು ನಡೆಸಲು ಅವರಿಗೆ ಆಜ್ಞೆ ಮಾಡಿರಲಿಲ್ಲ."

"ಶ್ರೀಮಂತರಿಂದ ಕಾಣಿಕೆ ಏಕೆ ವಸೂಲಾಗಬೇಕು?"

"ಇದು ಹಿಂದಿನಿಂದಲೂ ನಡೆದುಬಂದ ಪದ್ಧತಿ. ಪಟ್ಟಾಭಿಷೇಕದಂತಹ ಮಹೋತ್ಸವದ ಕಾಲದಲ್ಲಿ ಶ್ರೀಮಂತರು ಬಂದು ನಜರು ಒಪ್ಪಿಸುವುದು ಮೊದಲಿನಿಂದಲೂ ಬಂದ ಪರಿಪಾಠ. ಆದರೆ ಈ ಬಾರಿ, ಶ್ರೀಮಂತರು ನಮ್ಮ ಆಮಂತ್ರಣವನ್ನು ತಿರಸ್ಕರಿಸಿ ಸಾಮ್ರಾಟರಿಗೆ ಅಪಮಾನ ಮಾಡಿದರು! ಅವರ ಅವಿಧೇಯತೆಯನ್ನು ಬೆಳೆಯಗೊಟ್ಟರೆ, ಮುಂದೆ ವಿದ್ರೋಹದ ಚಳುವಳಿಗೆ ಹೆಚ್ಚು ಬೆಂಬಲ ದೊರೆಯುವುದೆಂದು, ಅದನ್ನು ಮೊಳಕೆಯಲ್ಲೇ ನಿರ್ಮೂಲ ಮಾಡಬೇಕೆಂದು, ಹನುಮನಾಯಕನಿಗೆ ಆಜ್ಞೆ ಮಾಡಿತ್ತು. ಅವನು ಅಕ್ಷರಶಃ ಅದನ್ನು ಪಾಲಿಸಿರಬೇಕು. ಇದರಿಂದ ಕೆಲವು ಮಂದಿಗೆ ತೊಂದರೆಯಾಗಿರಬಹುದು! ಆದರೆ ಇದು ಅನಿವಾರ್ಯ."

"ನೀವು ನನ್ನನ್ನು ಕೇಳದೆ ಆಜ್ಞೆಯನ್ನು ಹೊರಡಿಸಿ ತಪ್ಪುಮಾಡಿದಿರಿ. ಹಿಂದಿನಿಂದ ಬಂದ ನಜರು ಒಪ್ಪಿಸುವ ಪದ್ಧತಿ – ಅವರು ಸಂತೋಷದಿಂದ ತಂದು ಒಪ್ಪಿಸುತ್ತಿದ್ದ ಕಾಣಿಕೆಯಲ್ಲದೆ ಬೇರೆಯಲ್ಲ. ಅವರ ಸ್ವಂತ ಇಚ್ಛೆಯಿಂದ ನಡೆಯಬೇಕಾಗಿದ್ದ ಈ ಕಾರ್ಯಕ್ಕೆ ನೀವು ಬಲಪ್ರಯೋಗ ಮಾಡಿದುದು ಬಹಳ ತಪ್ಪು! ಈ ಕಾರ್ಯಕ್ಕೆ, ನ್ಯಾಯವಿರುದ್ಧವಾದ ಕಾರ್ಯಕ್ಕೆ ಸೈನ್ಯವನ್ನು ಕಳುಹಿದುದು ಎರಡನೆಯ ತಪ್ಪು! ನಿಮ್ಮ ಆಜ್ಞೆಯನ್ನು ಪಾಲಿಸುವ ಹುರುಪಿನಲ್ಲಿ – ಹನುಮನಾಯಕನಂತಹವರಿಗೆ, ಸ್ವೇಚ್ಛಾ ಪ್ರವರ್ತಕರಾಗಲು ಅವಕಾಶ ಕೊಟ್ಟುದು ಮೂರನೆಯ ತಪ್ಪು! ನಿಮ್ಮ ದೌರ್ಜನ್ಯದಿಂದ ಜನತೆ ಎಷ್ಟು ಹೆದರಿದೆ ತಿಳಿದಿದೆಯೆ? ನಗರದ ಜನ ಭಯಗೊಂಡು ಹಾಹಾಕಾರ ಮಾಡುತ್ತಿದ್ದಾರೆ ನಿಮ್ಮ ಸೈನಿಕರ ಉಪಟಳ ಇಷ್ಟಕ್ಕೆ ನಿಲ್ಲಲಿಲ್ಲ. ರಾಜಧಾನಿಯನ್ನು ತೊರೆದ ಶ್ರೀಮಂತರನ್ನು ಬೇಟೆಯಾಡಿ, ಕೈಗೆಸಿಕ್ಕಿದ ಅಬಲೆಯರ ಮೇಲೆ ಅತ್ಯಾಚಾರ ನಡೆಸಿ, ರಾಜಧಾನಿಯಲ್ಲಿ ಪೈಶಾಚಿಕ ಪ್ರಭುತ್ವ ನಡೆಸಿದ್ದಾರೆ! ಇದಕ್ಕೆ ನೀವೇ ಹೊಣೆಗಾರರು!"

"ನಾವು ಸೈನಿಕರನ್ನು ಕಳುಹಿಸಿದುದು ಕೇವಲ ಆತ್ಮರಕ್ಷಣೆಯ ಸಲುವಾಗಿ ಅವರಿಂದ ಇಂತಹ ದುಂಡಾವರ್ತನೆ, ಅತ್ಯಾಚಾರಗಳು ನಡೆದಿದ್ದರೆ ಇವಕ್ಕೆ ನಾವು ವಿಷಾದಿಸುತ್ತೇವೆ."

"ಕೇವಲ ವಿಷಾದದಿಂದ ಪ್ರಯೋಜನವಿಲ್ಲ. ಮಿತಿಮೀರಿ ವರ್ತಿಸಿದ ದ್ರೋಹಿಗಳನ್ನು ಹಿಡಿತರಿಸಿ, ಕ್ರೂರವಾಗಿ ಶಿಕ್ಷಿಸಬೇಕು."

"ಆಗಲಿ!" ಎಂದು ಹೇಳಿ ವರದಾದೇವಿಯನ್ನು ಸಮಾಧಾನಗೊಳಿಸಿ ಅಲ್ಲಿಂದೆದ್ದು ಹೊರಟು ಹೋದರು. ಅವರಿಗೆ ಎಲ್ಲಿ ವರದಾದೇವಿಯು ತಮ್ಮ ಆಜ್ಞೆಗಳಿಗೆ ಪ್ರತಿಭಟಿಸಿ ಕಾಳಿಯಾಗುವಳೋ ಎಂಬ ಭಯವಿತ್ತು. ಅವಳನ್ನು ಸಮಾಧಾನಪಡಿಸಿ, ಉಪಾಯಾಂತರವಾಗಿ ಕಾರ್ಯಸಾಧಿಸುವ ಉದ್ದೇಶದಿಂದ ಅವಳನ್ನು ಕಾಣಲು ಬಂದಿದ್ದರು. ಕುಮಾರನಿಗೆ ಪಟ್ಟಾಭಿಷೇಕವಾದ ತರುಣ ದಲ್ಲಿ ವರದಾದೇವಿಯ ವಿರೋಧ ಕಟ್ಟಿಕೊಳ್ಳಲು ಅವರಿಗೆ ಇಷ್ಟವಿರಲಿಲ್ಲ. ಅಲ್ಲದೆ ಅವಳಿಗೆ ಈಗಲೇ ತಮ್ಮ ವಿಷಯದಲ್ಲಿ ಸಂದೇಹಕ್ಕೆಡೆಕೊಟ್ಟರೆ ಅವಳು ಎಚ್ಚೆತ್ತು ಕೊಂಡು, ಮುಂದೆ ಅವಳಿಂದ ತಮ್ಮ ಮಹತ್ಕಾರ್ಯಸಾಧನೆಗೆ ಅನಾವಶ್ಯಕ ತೊಂದರೆ ಉಂಟಾಗಬಹುದೆಂದು ಊಹಿಸಿ ಜಾಣ್ಮೆಯಿಂದ ಕಾರ್ಯಸಾಧಿಸಿ ಕೊಳ್ಳಲು ಹವಣಿಸಿದ್ದರು.

ಸಲಕಂ ಸೋದರರ ಉತ್ತರದಿಂದ ವರದಾದೇವಿಗೆ ತೃಪ್ತಿಯುಂಟಾಗ ಲಿಲ್ಲ. ಅವರಿತ್ತ ಆಶ್ವಾಸನಗಳು ಎಷ್ಟು ಮಟ್ಟಿಗೆ ಕಾರ್ಯಗತವಾಗಿವೆ ಎಂದು ಕಂಡು ಬರಲು ದೂತರನ್ನಟ್ಟಿದಳು. ಕೇವಲ ಶೋಷಣೆಯ ದೃಷ್ಟಿಯಿಂದ, ನಿರಪ ರಾಧಿಗಳನ್ನು ಶಿಕ್ಷಿಸುವ ಈ ಕಾರ್ಯ ಕೈಗೊಂಡುದು ಸಾಮ್ರಾಜ್ಯಕ್ಕೆ ಎಂದೆಂದೂ ತೊಳೆಯಲಾಗದ ಕಲಂಕವೆಂದು ಅವಳ ಭಾವನೆ. ಹಿಂದೆ ಕೃಷ್ಣಪ್ಪನಾಯಕನ ಪ್ರಸಂಗದಲ್ಲಿ, ಇಂತಹ ಅನ್ಯಾಯ ನಡೆದು ಅಚ್ಯುತರಾಯನ ಕಣ್ಣು ತೆರೆಸಿತ್ತು. ಇಂದು ರಾಜಧಾನಿಯಲ್ಲಿ ನಡೆದ ಶ್ರೀಮಂತರ ಕೊಲೆ, ಸುಲಿಗೆ ವರದಾದೇವಿಯ ದೃಷ್ಟಿಯ ಪರೆಯನ್ನು ಹರಿಸಿತ್ತು. ಈಗಲೀಗ ತನ್ನ ಸೋದರರು, ತಮ್ಮ ಕಾರ್ಯ ಸಾಧನೆಗಾಗಿ ಎಂತಹ ದುಷ್ಕೃತ್ಯಕ್ಕೂ ಹೇಸುವವರಲ್ಲವೆಂಬ ವಿಷಯ ಮನಗೊಂಡಂತಾಗಿತ್ತು. ಅಚ್ಯುತರಾಯನ ಮರಣದ ಪ್ರಸಂಗದಲ್ಲಿ, ತಮ್ಮ ಕೈವಾಡವಿಲ್ಲವೆಂದು ಹೇಳಿದ್ದರೂ, ರಾಜವೈದ್ಯರಿಂದ ನಿಜವಾದ ಸಂಗತಿ ತಿಳಿ ದಿತ್ತು. ಹಿಂದೊಮ್ಮೆ ಶ್ರೀಮಂತರ ಶೋಷಣೆ ನಡೆದಿತ್ತು. ಇದರ ನಿಜವಾದ ಉದ್ದೇಶ! ಅಚ್ಯುತರಾಯನನ್ನು ನವಕೋಟಿ ನಾರಾಯಣ ಎಂಬ ಬಿರುದಿಗೆ ಪಾತ್ರನನ್ನಾಗಿ ಮಾಡುವ ಹುರುಪಿನಲ್ಲಿ ಅನೇಕ ಮಂದಿ ಶ್ರೀಮಂತರ ಅವಿಶ್ವಾ ಸಕ್ಕೆ ಪಾತ್ರರಾಗಿದ್ದರು. ಅವರು ಅಳಿಯ ರಾಮರಾಯನ ಪಕ್ಷ ಕಟ್ಟಿ, ಸಲಕಂ ಸೋದರರ ನಾಶವನ್ನು ಹಾರೈಸಿದರು. ಅಂತರಂಗರದಲ್ಲಿ ತಳೆದ ಈ ವಿರೋಧವನ್ನು ಸಲಕಂ ಸೋದರರು ತಿಳಿದು ಶ್ರೀಮಂತರು ಕಾಣಿಕೆಯನ್ನು ಒಪ್ಪಿಸಲಿಲ್ಲವೆಂಬ ನೆವದಿಂದ ಅವರನ್ನು ತುಳಿಯಲು ನಿರ್ಧರಿಸಿದ್ದರು. ತಾವು ಸಿಂಹಾಸನದಲ್ಲಿ ಸಾಮ್ರಾಟರಾಗಿ ಮೆರೆಯುವ ವೇಳೆಗೆ, ರಾಜಧಾನಿಯಲ್ಲಿ ಅಳಿಯ

ರಾಮರಾಯರ ಪಕ್ಷದವರು ಒಂದು ಪಿಳ್ಳೆಯೂ ಇಲ್ಲದಂತೆ, ನಿರ್ಮೂಲ ಮಾಡಬೇಕೆಂಬುದೇ ಅವರ ಆಶಯವಾಗಿತ್ತು.

ಅವರ ದುಷ್ಟ ಆಲೋಚನೆಗಳನ್ನು ಗ್ರಹಿಸಲು ವರದಾದೇವಿಗೆ ಹೆಚ್ಚು ಕಾಲ ಬೇಕಾಗಲಿಲ್ಲ. ಶ್ರೀಮಂತರ ಮೇಲಿನ ಸಲಕಂ ಸಹೋದರರ ಸಿಟ್ಟಿಗೆ 'ಕಾಣಿಕೆ'ಯ ಕಾರಣ 'ಅವಿಧೇಯತೆ'ಯ ಕಾರಣಕ್ಕಿಂತಲೂ ಮಹತ್ತರವಾದ ಬೇರೊಂದು ಕಾರಣವಿರಬೇಕೆಂದು ಗ್ರಹಿಸಿದ್ದಳು. ಅಂತಲೇ ಅವರ ಕರಾಳ ಮುಷ್ಟಿಯಿಂದ ಶ್ರೀಮಂತರನ್ನು ಪಾರುಮಾಡಲು ಧಾವಿಸಿ ಬಂದಿದ್ದಳು. ಆದರೆ ಅವಳು ಅಟ್ಟಿದ್ದ ದೂತರು ಬಂದು, ಅವಳು ನಿರೀಕ್ಷಿಸದಿದ್ದ ಭಯಂಕರ ವಾರ್ತೆಯನ್ನು ತಂದರು.

ಹನುಮನಾಯಕನು ವರದಾದೇವಿಯು ಇತ್ತ ಬಂದ ಕೂಡಲೇ, ತನ್ನ ಅನುಚರರನ್ನು ಮತ್ತೆ ಕರಸಿಕೊಂಡು, ಸುಲಿಗೆ ಕಾರ್ಯವನ್ನು ಸಾಂಗವಾಗಿ ನೆರವೇರಿಸಿದನೆಂದೂ, ಅವರನ್ನು ವಿರೋಧಿಸಿದ ಸುಮಾರು ಇಪ್ಪತ್ತೈದು ಮಂದಿ ಶ್ರೀಮಂತರನ್ನು ರಾಜದ್ರೋಹದ ಆಪಾದನೆಯ ಮೇಲೆ ಬಂದಿಸಲಾಗಿದೆ ಎಂದೂ ಸುದ್ದಿ ತಿಳಿಸಿದರು. ಈ ವಾರ್ತೆಯನ್ನು ಕೇಳಿ ಅವಳು ಕಿಡಿಕಿಡಿಯಾದಳು. ಅವಳಿಗೆ ತನ್ನ ಅಸಹಾಯಕತೆಯನ್ನು ನೆನೆದು ಬಹಳ ವ್ಯಥೆಯಾಯಿತು. ತಾನು ಶ್ರೀಮಂತರಿಗಿತ್ತಿದ್ದ ಆಶ್ವಾಸನ ಸುಳ್ಳಾಯಿತೆಂದು ಪರಿತಾಪವಾಯಿತು. ಅವಳು ಕೂಡಲೇ ತನ್ನ ಸೋದರರ ಬಳಿಗೆ ಹೋಗಿ ನಡೆದಿದ್ದ ಸಂಗತಿಯನ್ನು ತಿಳಿಸಿದಳು.

"ಈ ಎಲ್ಲ ಸಂಗತಿಯನ್ನು ಇಷ್ಟು ಬೇಗ ನಿನಗೆ ಯಾರು ತಿಳಿಸಿದರು?" ಎಂದು ಪ್ರಶ್ನಿಸಿದರು.

"ಹಾಗೆಯೇ ತಿಳಿಯಿತು. ಈ ಸಂಗತಿ ಸುಳ್ಳಲ್ಲವಷ್ಟೆ?"

"ಇದು ನಿಜವೆಂದು ವಿಷಾದದಿಂದ ಹೇಳಬೇಕಾಗಿದೆ."

"ನೀವು ಕೊಟ್ಟಿದ್ದ ಆಶ್ವಾಸನದ ಗತಿ ಏನಾಯಿತು?"

"ಅವುಗಳಿಗೆ ಆ ನೀಚರು ಅರ್ಹರಾಗಿಲ್ಲ!"

"ಅವರು ಮಾಡಿದ ಅಪರಾಧವಾದರೂ ಏನು?"

"ಭಯಂಕರ ರಾಜದ್ರೋಹದ ಅಪರಾಧ! ಸಾಮ್ರಾಟರ ವಿರುದ್ಧ ದಂಗೆ ಎದ್ದರು!"

"ಅಂದರೆ?"

"ಪ್ರಭುತ್ವ ಆಜ್ಞೆಗಳನ್ನು ಅನ್ಯಾಯವೆಂದು ಘೋಷಿಸಿ, ಸರಕಾರವನ್ನು ಉರುಳಿಸುವ ಸಂಚು ಮಾಡಿದ್ದರು!"

"ಇದು ಮಿಥ್ಯಾರೋಪವಲ್ಲವಷ್ಟೆ?"

"ಅವರು ತಮಗಾದ ಅನ್ಯಾಯವನ್ನು ಬೆಟ್ಟದಷ್ಟು ಮಾಡಿ ದ್ರೋಹಿ

ಗಳಿಂದ ರಾಮರಾಯನಿಗೆ ತಿಳಿಸಿ ರಾಜಧಾನಿಗೆ ಬಂದರೆ ನಮ್ಮನ್ನು ಅಧಿಕಾರದಿಂದ ಉರುಳಿಸಲು ತಮ್ಮ ತನುಮನ ಧನಗಳನ್ನು ಸಮರ್ಪಿಸುವುದಾಗಿ ಪತ್ರ ಬರೆದಿದ್ದರು! ಈ ಪತ್ರ ಅದೃಷ್ಟವಶಾತ್ ನಮ್ಮ ಗೂಢಚಾರರ ಕೈಗೆ ಸಿಕ್ಕಿ ಹೋಯಿತು!"

"ಅವರು ರಾಮರಾಯರೊಂದಿಗೆ ಪತ್ರವ್ಯವಹಾರ ನಡೆಸಿದ್ದರೆ?"

"ನಾನು ಸುಳ್ಳು ಹೇಳುವೆನೆ?.... ಇದೋ ಪತ್ರ!" ಎಂದು ಒಂದು ಪತ್ರವನ್ನು ಕೈಗಿತ್ತನು.

ಆ ಪತ್ರ ಭಗವಂತರಾಯನೆಂಬ ಶ್ರೀಮಂತನು ಅಳಿಯ ರಾಮರಾಯನಿಗೆ ಬರೆದಿದ್ದ ಪತ್ರ – ಮಾಡಿಕೊಂಡಿದ್ದ ನಿವೇದನೆ. ಅದರಲ್ಲಿ ಸಲಕಂ ಸೋದರರ ಪೈಶಾಚಿಕ ಪ್ರಭುತ್ವವನ್ನು ಸಹಿಸಿ ತಮಗೆ ಸಾಕಾಗಿದೆ ಎಂದೂ ತಮ್ಮನ್ನು ಅವರ ಕ್ರೂರ ಆಡಳಿತದಿಂದ ಬಿಡುಗಡೆ ಮಾಡುವುದಾದರೆ ತಮ್ಮಿಂದಾಗುವ ಎಲ್ಲ ಸಹಾಯ ಮಾಡುವುದಾಗಿಯೂ ತಿಳಿಸಿದ್ದರು. ರಾಜಧಾನಿಯಲ್ಲಿ ಅವನ ವಿರುದ್ಧ ಪಿತೂರಿ ಮಾಡಿ, ಸಾಮ್ರಾಟರನ್ನು ನೆಲಕ್ಕೆ ಉರುಳಿಸಿ, ಸಿಂಹಾಸನ ಅವನಿಗೆ ದೊರಕಿಸಿಕೊಡುವುದಾಗಿ ತಿಳಿಸಿದ್ದನು. ಇದು ತನ್ನೊಬ್ಬನ ಅಭಿಪ್ರಾಯವಾಗಿರದೆ, ರಾಜಧಾನಿಯ ಶ್ರೀಮಂತರೆಲ್ಲರ ಅಭಿಪ್ರಾಯವಾಗಿದೆ ಎಂದು ತಿಳಿಸಿ, ಅವನಿಗೆ ಸಹಾಯ ಕೊಡಲು ಮುಂದೆ ಬಂದ ಶ್ರೀಮಂತರ ಹೆಸರುಗಳನ್ನು ಬರೆಯಲಾಗಿತ್ತು. "ಈ ಪತ್ರದ ಆಧಾರದ ಮೇಲೆ ತಾವು ಆ ಶ್ರೀಮಂತರನ್ನು ಬಂಧಿಸಿದೆವು." ಎಂದು ಅವರು ತಿಳಿಸಿದರು.

"ಈ ಪತ್ರ ನಿಮಗೆ ಹೇಗೆ ದೊರೆಯಿತು?" ಸಂಶಯದಿಂದ ಪ್ರಶ್ನಿಸಿದಳು ವರದಾದೇವಿ.

"ನಗರದಿಂದ ಹೊರಗೆ ಓಡಿಹೋಗುತ್ತಿದ್ದ ಶ್ರೀಮಂತರನ್ನು ಹಿಂಬಾಲಿಸಿ, ಅವರನ್ನು ಸೆರೆಹಿಡಿಯಲು ಹೋಗುತ್ತಿದ್ದಾಗ ಒಬ್ಬ ವ್ಯಕ್ತಿಯ ಬಳಿ ಆ ಪತ್ರ ದೊರೆಯಿತು."

ಈ ಕಥೆಯನ್ನೆಲ್ಲಾ ಕೇಳಿ, ಇದು ತನ್ನ ಸೋದರರ ಸಂಚೇ ಇರಬೇಕೆಂದು ಊಹಿಸಿದಳು. ತಮ್ಮ ಆಶಯವನ್ನು ಈಡೇರಿಸಿಕೊಳ್ಳಲು ಈ ಬಗೆಯ ಕೃತಕ ಪತ್ರ ರಚಿಸಿ, ತಮ್ಮ ಕಾರ್ಯ ಸಾಧಿಸಲು ಹವಣಿಸಿರಬೇಕೆಂದು ಅವಳು ಸಂಶಯಗೊಂಡಳು.

ಏಕೆಂದರೆ ಅಳಿಯ ರಾಮರಾಯನು ಪೆನಗೊಂಡೆಯಲ್ಲಿ ಇರುವ ಸಂಗತಿ ಅವಳಿಗೆ ರಾಜವೈದ್ಯರಿಂದ ತಿಳಿದಿತ್ತು. ಆದರೆ ಆ ಪತ್ರವನ್ನು ಗುತ್ತಿಗೆ ಬರೆಯಲಾಗಿತ್ತು. ಸಲಕಂ ಸೋದರರಿಗೆ ತಿಳಿಯದಂತೆ, ವಿಚಾರಿಸಿಕೊಂಡಾಗ ಶ್ರೀಮಂತರು ನಗರವನ್ನು ಬಿಟ್ಟು ಓಡಿಹೋಗಲಿಲ್ಲವೆಂದೂ, ಹೋರಾಟದ ಕಥೆಯೆಲ್ಲವೂ

ಕಲ್ಪಿತವೆಂದೂ, ತನ್ನನ್ನು ವಂಚಿಸಿ, ನಂಬಿದ ಶ್ರೀಮಂತರ ನಾಶಕ್ಕೆ ಮಾಡುವ ಸಂಚೆಂದೂ ಅವಳಿಗೆ ಸ್ಪಷ್ಟವಾಗಿತ್ತು.

ಕೂಡಲೇ ಅವಳು ತನ್ನ ಸೋದರರನ್ನು ಕಂಡು, ಇಪ್ಪತ್ತೈದು ಮಂದಿ ಶ್ರೀಮಂತರ ಬಂಧನ ಅನ್ಯಾಯವೆಂದೂ, ಅವರ ದ್ರೋಹವನ್ನು ಬಹಿರಂಗ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಿ, ಅವರ ರಾಜದ್ರೋಹ ಸಿದ್ಧಪಟ್ಟರೆ ಮಾತ್ರ ಶಿಕ್ಷಿಸಬೇಕೆಂದೂ, ಹೇಳಿದಳು.

"ಹಾಗಾದರೆ ಈ ಪತ್ರ ಕೃತಕವೆಂದು ನಿನ್ನ ಅಭಿಪ್ರಾಯವೇ?"

"ನಿಜ ಹೇಳುವುದಾದರೆ ನನಗೆ, ಈ ಪತ್ರದ ಬಗ್ಗೆ ಸಂದೇಹ ಬಂದಿದೆ."

"ನಾನು ನಿನಗೆ ಸುಳ್ಳು ಹೇಳಿ ಯಾವ ಸ್ವಾರ್ಥ ಸಾಧಿಸಬೇಕು. ನಾವು ಈಗ ಮಾಡುತ್ತಿರುವುದೆಲ್ಲವೂ ಕುಮಾರನ ಅಭ್ಯುದಯದ ಸಲುವಾಗಿಯೇ" ಎಂದ ಪೆದ್ದ ತಿರುಮಲ.

"ನಿಮ್ಮ ಬಗ್ಗೆ ನನಗೆ ಸಂಶಯವಿಲ್ಲ. ಆದರೆ ನಿಮಗೆ ದೊರೆತ ಪತ್ರದ ಬಗ್ಗೆ ಅನುಮಾನ ಬಂದಿದೆ!"

"ಈ ಬಗ್ಗೆ ನಡೆದುದನ್ನು ಮೊದಲೇ ತಿಳಿಸಿದ್ದೇವೆ!"

"ನೀವು ತಿಳಿಸಿದ್ದೀರಿ ದಿಟ. ಈ ಪತ್ರ ನಿಜವಾದುದಾದರೆ ನೀವೇಕೆ ಅಧೈರ್ಯ ಪಡಬೇಕು. ಅವರುಗಳು ಅಪರಾಧಿಗಳು ಹೌದೊ ಅಲ್ಲವೋ ಎಂಬುದನ್ನು ನ್ಯಾಯಾಲಯವೇ ನಿರ್ಧರಿಸಲಿ! ಕೇವಲ ಸಂಶಯದಿಂದ, ನಮ್ಮಿಂದ ಇಂತಹ ಗುರುತರವಾದ ಅನ್ಯಾಯ ನಡೆಯಬಾರದೆಂದು ನಾನು ಇಷ್ಟೆಲ್ಲಾ ಹೇಳಬೇಕಾಯಿತು." ಅವರು ತನ್ನ ಮಾತಿಗೆ ಸಮ್ಮತಿಸಲು ಸೆರೆಸಿಕ್ಕಿದ ಶ್ರೀಮಂತರ ಬಿಡುಗಡೆಗೆ ಅವಕಾಶ ಉಂಟೆಂದು ತಿಳಿದು ನಿಶ್ಚಿಂತಳಾದಳು.

ಆದರೆ ವಿಚಾರಣೆಯ ದಿನ ಅವಳು ಊಹಿಸಿದುದೇ ಒಂದು, ತೀರ್ಮಾನವಾದುದೇ ಮತ್ತೊಂದು! ಇಪ್ಪತ್ತೈದು ಜನ ಶ್ರೀಮಂತರು ನಿರಪರಾಧಿಗಳೆಂದು ವರದಾದೇವಿಗೆ ತಿಳಿದಿದ್ದರೂ, ಸಲಕಂ ಸೋದರರು ಸುಳ್ಳು ಸಾಕ್ಷ್ಯ ಒದಗಿಸಿ, ಇಪ್ಪತ್ತೈದು ಮಂದಿ ಶ್ರೀಮಂತರ ರಾಜದ್ರೋಹವನ್ನು ಸಿದ್ಧಪಡಿಸಿ, ಅವರು ರಾಜದ್ರೋಹಿಗಳೆಂದು ತೀರ್ಮಾನಿಸಿದರು. ಅವರವರ ಅಪರಾಧಗಳಿಗೆ ತಕ್ಕಂತೆ ಕೆಲವರಿಗೆ ಮರಣದಂಡನೆ, ಮತ್ತೆ ಕೆಲವರಿಗೆ ಅಂಗಚ್ಛೇದ ವಿಧಿಸಿದರು. ಅರ್ಧಕ್ಕಿಂತ ಹೆಚ್ಚು ಮಂದಿಯ ಕಣ್ಣುಗಳನ್ನು ಕಿತ್ತು ಅಂಧರನ್ನಾಗಿ ಮಾಡಿ, ಆಜನ್ಮ ಪರ್ಯಂತ ಸೆರೆಯಲ್ಲಿಟ್ಟರು. ಯಾವುದು ನಡೆಯಬಾರದೆಂದು ವರದಾಂಬಿಕೆ ಆಶಿಸಿದ್ದಳೋ ಅದು ನಡೆದಿತ್ತು. ವೆಂಕಟಾದ್ರಿಯು ಪಟ್ಟಕ್ಕೆ ಬಂದ ತರುಣದಲ್ಲಿ ನಡೆದ ಈ ನಿರಪರಾಧಿಗಳ ರಕ್ತ ಶೋಷಣೆ, ಬರಲಿರುವ ಯಾವುದೋ ಅನಿಷ್ಟದ ಮುನ್ಸೂಚನೆ ಎಂದು ವರದಾಂಬಿಕೆ ಹೌಹಾರಿದಳು. ಅವಳ ಹೃದಯವನ್ನು ಯಾವುದೋ ಅವ್ಯಕ್ತ ಭೀತಿ ಆವರಿಸಿತ್ತು.

೨೩

ರಾಜಧಾನಿಯಲ್ಲಿ ನಡೆದ ಶ್ರೀಮಂತರ ಕೊಲೆ, ವರದಾದೇವಿಯ ಜೀವನದಲ್ಲಿ ಚೇತರಿಸಿಕೊಳ್ಳಲಾಗದ ಭಾರಿ ಪೆಟ್ಟು. ಅಧಿಕಾರೋನ್ಮತ್ತರಾದ ಸಲಕಂ ಸೋದರರು ಕುಮಾರನನ್ನು ಕೊಲೆಮಾಡಿ ತಾವೇ ಸಾಮ್ರಾಟರೆಂದು ಘೋಷಿಸಿಕೊಳ್ಳುವುದೂ ಹೆಚ್ಚಲ್ಲ ಎನಿಸಿತು. ತನ್ನ ಸೋದರರ ಅನ್ಯಾಯಗಳನ್ನು ಎದುರಿಸುವುದರಲ್ಲಿ ತಾನೆಷ್ಟು ಅಸಹಾಯಕಳು ಅಸಮರ್ಥಳು ಎಂಬುದು ಶ್ರೀಮಂತರ ವಿಚಾರಣೆಯಲ್ಲಿ ಸ್ಪಷ್ಟವಾಗಿತ್ತು. ಅಚ್ಯುತರಾಯನಿಗೆ ಬಂದ ದುರವಸ್ಥೆ ತನ್ನ ಮಗನಿಗೂ ಬರಬಹುದು ಎಂದು ತತ್ತರಿಸಿದಳು. ಅಚ್ಯುತರಾಯನು ಮರಣಾವಸ್ಥೆಯಲ್ಲಿ ಹೇಳಿದ್ದ ಮಾತುಗಳ ಸಂಗತಿ ಇಂದು ಅರಿವಾಗಿತ್ತು. ಹೇಗಾದರೂ ಮಾಡಿ, ಅವರನ್ನು ಅಧಿಕಾರಚ್ಯುತರನ್ನಾಗಿ ಮಾಡಿ, ಸಿಂಹಾಸನ ಹಾಗೂ ಸಾಮ್ರಾಜ್ಯವನ್ನು ತನ್ನ ಮಗನಿಗೆ ಉಳಿಸಿಕೊಡಬೇಕೆಂದು ನಿರ್ಧರಿಸಿದಳು.

ಈಗ ಅವಳ ಮುಂದೆ ದೊಡ್ಡದೊಂದು ಸಮಸ್ಯೆ ಎದುರಾಗಿತ್ತು. ಇದನ್ನು ಕಾರ್ಯಗತ ಮಾಡುವುದು ಹೇಗೆ? ಅಳಿಯ ರಾಮರಾಯರಿಂದ ಈ ಕಾರ್ಯ ಸಾಧಿಸಬೇಕೆಂದು ಅಚ್ಯುತರಾಯನು ತಿಳಿಸಿದ್ದ. ಚಿನ್ನಾದೇವಿ, ತಿರುಮಲಾದೇವಿಯರ ಸಹಕಾರ ತೆಗೆದುಕೊಳ್ಳಬೇಕೆಂದು ಸೂಚಿಸಿದ್ದ. ಆದರೆ ಸೆರೆಯಲ್ಲಿರುವ ಅವರಿಂದ ಯಾವ ಮಹತ್ಕಾರ್ಯವನ್ನೂ ಸಾಧಿಸುವಂತಿರಲಿಲ್ಲ. ತನಗೆ ಈಗ ನೆರವು ದೊರೆಯುವಂತಿದ್ದರೆ ಅದು – ಪೆನಗೊಂಡೆಯಲ್ಲಿ ತಲೆತಪ್ಪಿಸಿಕೊಂಡಿರುವ ಅಳಿಯ ರಾಮರಾಯ, ತಿರುಮಲರಾಯರಿಂದ. ಅವರ ಬಳಿಗೆ ಸೆರೆಯಿಂದ ತಪ್ಪಿಸಿಕೊಂಡು ಹೋದ ರಾಜವೈದ್ಯರು ಇನ್ನೂ ಯಾವ ಸುದ್ದಿಯನ್ನೂ ತಿಳಿಸಿರಲಿಲ್ಲ. ಈಗ ಅವರಿಂದ ನೆರವು ದೊರೆಯುವವರೆಗೆ, ತಾನು ಸುಮ್ಮನಿರುವುದು ಅವಳಿಗೆ ಸಾಧ್ಯವಾಗಲಿಲ್ಲ. ಅಳಿಯ ರಾಮರಾಯನು ಸಾಮ್ರಾಜ್ಯನಿಷ್ಠ ಸೇವಕರನ್ನೆಲ್ಲಾ ಕೂಡಿಸಿಕೊಂಡು, ಸಾಕಷ್ಟು ಸೈನ್ಯವನ್ನು ಸಜ್ಜುಗೊಳಿಸಿ ವಿಜಯನಗರಕ್ಕೆ ಬರುವ ವೇಳೆಗೆ ತನ್ನ ಹಾಗೂ ತನ್ನ ಕುಮಾರನ ಜೀವ ಉಳಿದಿರುವುದೆಂದು ಯಾವ ನಂಬಿಕೆ? ಯಾಕೋ ಇದೆಲ್ಲವನ್ನೂ ನೆನೆದಂತೆ ಅವಳಿಗೆ ಭಯವಾಯಿತು. ತಮ್ಮನ್ನು ಅಧಿಕಾರಕ್ಕೆ ತಂದು, ಗೌರವಿಸಿ, ಆದರಿಸಿದ್ದ ಭಾವನನ್ನೇ ವಿಷವಿಟ್ಟು ಕೊಂದಿದ್ದ ಧೂರ್ತರು ಕುಮಾರನನ್ನು ಜೀವಂತ ಉಳಿಸುವರೇ? ಅವಳಿಗೆ ಒಂದು ಆಲೋಚನೆ ಹೊಳೆಯಿತು. ಸಲಕಂ ಸೋದರರನ್ನು ಪದ

ಚ್ಯುತರನ್ನಾಗಿ ಮಾಡಿ, ತನ್ನ ಮಗನಿಗೆ ಸಿಂಹಾಸನ ಹಾಗೂ, ಸಾಮ್ರಾಜ್ಯ ದೊರಕಿಸಿ ಕೊಡುವುದಾದರೆ, ತಾನೇಕೆ ಬಿಜಾಪುರದ ಸುಲ್ತಾನ ಇಬ್ರಾಹಿಂ ಆದಿಲ್‌ಷಹನ ಸಹಾಯ ಕೊಡಬಾರದು! ಈ ಸಮಯದಲ್ಲಿ ಅಳಿಯ ರಾಮ ರಾಯನ ನೆರವಿಗಿಂತಲೂ, ಬಿಜಾಪುರದ ಸುಲ್ತಾನನ ನೆರವು ಸುಲಭವಾಗಿ ದೊರೆಯುತ್ತಿತ್ತು. ಈ ನೆರವಿಗಾಗಿ ಅವನಿಗೆ ಅಪಾರ ಹಣವನ್ನು ಕೊಡ ಬೇಕಾಗುತ್ತದೆ. ಸಿಂಹಾಸನ ಭದ್ರವಾಗುವುದಾದರೆ ಹಣವನ್ನೇಕೆ ವೆಚ್ಚಮಾಡ ಬಾರದು? ಆದರೆ ಅವನು ತನ್ನ ಮಾತನ್ನು ಉಪೇಕ್ಷಿಸಿದರೆ?........ಹೆಂಗಸೆಂಬ ಕಾರಣದಿಂದ ತನ್ನ ಮಾತನ್ನು ನಂಬದಿದ್ದರೆ?....ಹೇಗಾದರಾಗಲಿ! ಪ್ರಯತ್ನಿ ಸುವ ಭಾರ ನನ್ನದು. ಒಂದು ವೇಳೆ ಆದಿಲ್‌ಷಹನ ಸಹಾಯ ತನಗೆ ದೊರೆ ತರೆ ಸಂತೋಷ! ದೊರೆಯದಿದ್ದರೆ ಯಾವ ನಷ್ಟವೂ ಇಲ್ಲ, ಆಗ ಅಳಿಯ ರಾಮರಾಯನ ಸಹಾಯವಿದ್ದೇ ಇದೆ....ಎಂದು ಆಲೋಚಿಸಿದಳು. ಈ ಕಾರ್ಯ ವನ್ನು ಯಶಸ್ವಿಯಾಗಿ ನಿರ್ವಹಿಸಲು ತಾನು ಯಾರನ್ನು ನಿಯೋಜಿಸಬೇಕೆಂದು ಅವಳಿಗೆ ತಿಳಿಯದಾಯಿತು. ತನ್ನ ಸೋದರರಿಗೆ ಈ ಪಿತೂರಿ ತಿಳಿದರೆ ತನ್ನ ಪ್ರಾಣಕ್ಕೇ ಸಂಚಕಾರವಾದ್ದರಿಂದ ಈ ಕಾರ್ಯಕ್ಕೆ ತನ್ನ ನಂಬಿಕೆಗೂ, ಸಲಕಂ ಸೋದರರ ವಿಶ್ವಾಸಕ್ಕೂ ಪಾತ್ರನಾಗಿದ್ದ, ವಿಠಲದೇವನನ್ನು ಕಳುಹಿಸಿಕೊಡಲು ನಿರ್ಧರಿಸಿದಳು....ಅಂತೆಯೇ ಅವಳು ವಿಠಲದೇವನನ್ನು ಗೋಪ್ಯವಾಗಿ ಕರೆಸಿ ಕೊಂಡು, ಅವನನ್ನು ಅಂತರಂಗಕ್ಕೆ ತೆಗೆದುಕೊಂಡು ಈ ಬಗ್ಗೆ ಮಾತು ತೆಗೆದಳು.

ಮೊದಲಿನಿಂದಲೂ ಸ್ವಾಮಿನಿಷ್ಠ ಸೇವಕನಾಗಿದ್ದ ವಿಠಲದೇವನಿಗೂ ಸಲಕಂ ಸೋದರರ ಇತ್ತೀಚಿನ ವರ್ತನೆ ಸರಿಬಂದಿರಲಿಲ್ಲ. ಅವರು ಕೃಷ್ಣಪ್ಪ ನಾಯಕನ ವಿಷಯದಲ್ಲಿ ನಡೆಸಿದ ಅತ್ಯಾಚಾರ, ತನ್ನ ಗೆಳೆಯ ವಿಶ್ವನಾಥ ನಾಯಕನ ಬಗ್ಗೆ ತೋರ್ಪಡಿಸಿದ್ದ ಅಸೂಯೆ, ಶ್ರೀಮಂತರ ಮೇಲೆ ನಡೆಸಿದ ಎಣಿಕೆಯಿಲ್ಲದ ದೌರ್ಜನ್ಯ ಕೃತ್ಯಗಳು ಅವರ ಸ್ವರೂಪವನ್ನು ಬಯಲು ಮಾಡಿ ದ್ದವು; ಅಲ್ಲದೆ ರಾಜಧಾನಿಯಲ್ಲಿ ಹರಡಿದ್ದ ವದಂತಿ ವಿಷವಿಟ್ಟು ಅಚ್ಯುತ ರಾಯನನ್ನು ಕೊಂದ ಸಂಗತಿ ಕೇಳಿದ ಮೇಲಂತೂ ಅವರ ಬಗ್ಗೆ ತಿರಸ್ಕಾರವೇ ಮೂಡಿತ್ತು. ಇಂತಹ ನೀಚರ ಸೇವೆಯಲ್ಲಿರಲು ಅವನಿಗೆ ಇಷ್ಟವಿರಲಿಲ್ಲ. ಅವರ ಅನ್ಯಾಯಗಳನ್ನು ಸಹನೆಯಿಂದ ನೋಡುತ್ತಿರುವುದು ಅವನಿಗೆ ಸಾಧ್ಯ ವಿರಲಿಲ್ಲ. ಅವನು ಉಪಾಯಾಂತರವಾಗಿ ಮಧುರೆಗೆ ಹೋಗಿ ತನ್ನಗೆಳೆಯ ನಾದ ವಿಶ್ವನಾಥನಾಯಕನನ್ನು ಕೂಡಿಕೊಳ್ಳಬೇಕೆಂದು ಆಲೋಚಿಸುತ್ತಿದ್ದನು. ಇಂತಹವೇಳೆಯಲ್ಲಿ ವರದಾದೇವಿ ಅವನನ್ನು ಕರೆಸಿಕೊಂಡಿದ್ದಳು.

ವರದಾದೇವಿ ಅದುವರೆಗೆ ನಡೆದ ಎಲ್ಲ ಸಂಗತಿಯನ್ನೂ ತನ್ನ ನಿಸ್ಸಹಾಯ ಕತೆಯನ್ನೂ ಅವನಿಗೆ ತಿಳಿಸಿ, ಅವನ ಅನುಕಂಪಕ್ಕೆ ಪಾತ್ರಳಾದಳು.

"ಈಗ ನಿಮ್ಮಿಂದ ಸಾಮ್ರಾಜ್ಯಕ್ಕೆ ಅಮೋಘವಾದ ಸೇವೆ ಸಲ್ಲಬೇಕಾಗಿದೆ!" ಎಂದಳು ಕಡೆಯಲ್ಲಿ.

"ಅದೇನು ಅಪ್ಪಣೆ ಕೊಡಿಸಿ ತಾಯಿ! ಆ ನೀಚರಿಂದ ಬಂದಿರುವ ಗಂಡಾಂತರವನ್ನು ತಪ್ಪಿಸಲು ನನ್ನ ಸರ್ವಸ್ವವನ್ನೂ ಬಲಿಗೊಡಬಲ್ಲೆ!"

"ನಿಮ್ಮ ಸ್ವಾಮಿನಿಷ್ಠೆ, ಶಕ್ತಿ ಸಾಮರ್ಥ್ಯಗಳನ್ನು ಅರಿತೇ, ನಾನು ನಿಮ್ಮನ್ನು ಈ ಕಾರ್ಯಕ್ಕೆ ಆರಿಸಿದುದು! ಆದರೂ ಅತ್ಯಂತ ಸೂಕ್ಷ್ಮವೂ ಅಪಾಯಕರವೂ ಅದ ಸಂಗತಿ ಇದು. ನಮ್ಮ ಈ ಸಂಚು, ನನ್ನ ಸೋದರರಿಗೆ ಕೊಂಚ ತಿಳಿದರೂ, ನಮ್ಮ ಜೀವಕ್ಕೆ ಗಂಡಾಂತರ ಬರುವುದು ಖಂಡಿತ!"

"ಈ ಬಗ್ಗೆ ನೀವು ಯೋಚಿಸಬೇಡಿ ತಾಯಿ! ನನ್ನಲ್ಲಿ ನಂಬಿಕೆ ಇರಿಸಿ."

"ನಿಮ್ಮ ನಿಷ್ಠೆಯಲ್ಲಿ ನನಗೆ ನಂಬಿಕೆ ಇದೆ. ಆದರೂ ನೀವು ನನಗೆ ವಚನ ಕೊಡಬೇಕು!"

"ಏನೆಂದು?"

"ಪ್ರಾಣ ಹೋದರೂ, ನಮಗೆ ದ್ರೋಹ ಬಗೆಯುವುದಿಲ್ಲವೆಂದು!"

"ಇಷ್ಟೇ ತಾನೇ. ಪಂಪಾಪತಿಯಾಣೆಗೂ ನಾನು ನಿಮಗೆ ದ್ರೋಹ ಬಗೆಯುವುದಿಲ್ಲ! ಇನ್ನು ನಿಶ್ಚಿಂತೆಯಿಂದ ನನ್ನಿಂದಾಗಬೇಕಾದ ಕಾರ್ಯವೇನೆಂದು ತಿಳಿಸಿ!"

ವಿಠಲದೇವನಿಂದ ವಚನ ತೆಗೊಂಡ ಮೇಲೆ, ತನ್ನ ಹಂಚಿಕೆಯನ್ನೆಲ್ಲಾ ಅವನಿಗೆ ತಿಳಿಸಿ, ಆದಷ್ಟು ಬೇಗ ಈ ಕಾರ್ಯಸಾಧನೆಗೆ ಬಿಜಾಪುರಕ್ಕೆ ಹೊರಡಲು ತಿಳಿಸಿದಳು.

ಈ ಕಾರ್ಯಕ್ಕೆ ವಿಠಲದೇವನು ಸಂತೋಷದಿಂದಲೇ ಸಮ್ಮತಿಸಿದನು. ದುರುಳರಾದ ಸಲಕಂ ಸೋದರರು ನಡೆಸುತ್ತಿದ್ದ ಅನ್ಯಾಯ ಪರಂಪರೆಗಳಿಂದ ನೊಂದಿದ್ದ ಅವನಿಗೆ ಸಾಮ್ರಾಜ್ಯದ ಜನತೆಯನ್ನು ಅವರ ಕರಾಳ ಹಸ್ತದಿಂದ ಬಿಡುಗಡೆ ಮಾಡಲು ಸದವಕಾಶ ಒದಗಿತ್ತು. ವರದಾದೇವಿಯು ಈ ರಾಯಭಾರಕ್ಕೆ ಬೇಕಾಗುವ ಅನುಕೂಲಗಳನ್ನು ಕಲ್ಪಿಸಿಕೊಟ್ಟು, ಅವನಿಗೆ ಒಂದು ರಹಸ್ಯ ಪತ್ರ ಬರೆದುಕೊಟ್ಟು, ಆದಷ್ಟು ಬೇಗ ನೆರವನ್ನು ಪಡೆದು ಬರಲು ಕಳುಹಿಸಿಕೊಟ್ಟಳು.

ವಿಠಲದೇವನು ಸಲಕಂ ಸೋದರರಿಗೆ ತನ್ನ ರಹಸ್ಯರಾಯಭಾರದ ಬಗ್ಗೆ ಯಾವ ಸುಳಿವೂ ಕೊಡದೆ, ದೂರದಲ್ಲಿದ್ದ ತನ್ನ ತಾಯಿ, ತಂದೆಯರನ್ನು ನೋಡಿ ಬರುವ ಸೋಗಿನಲ್ಲಿ, ಬಿಜಾಪುರಕ್ಕೆ ತನ್ನ ನೆಚ್ಚಿನ ಸಂಗಡಿಗರೊಂದಿಗೆ ಪ್ರಯಾಣ ಬೆಳೆಸಿದನು.

ವಿಠಲದೇವನು ಬಿಜಾಪುರದ ಸುಲ್ತಾನನ ಆಪ್ತ ಸಚಿವನಾದ ಅಸದ್ ಖಾನನ ಮೂಲಕ ತನ್ನ ಕಾರ್ಯವನ್ನು ಸಾಧಿಸಬೇಕೆಂದು ನಿಶ್ಚಯಿಸಿದನು.

ಅವನು ಬಿಜಾಪುರಕ್ಕೆ ಬಂದವನೇ ಅಸದ್ ಖಾನನನ್ನು ತನ್ನವನನ್ನಾಗಿ ಮಾಡಿಕೊಳ್ಳುವ ಕಾರ್ಯದಲ್ಲಿ ತೊಡಗಿದನು. ಅವನು ತನ್ನೊಡನೆ ತಂದಿದ್ದ, ಅನೇಕ ಬೆಲೆಬಾಳುವ ವಸ್ತುಗಳನ್ನೂ, ಮುತ್ತುರತ್ನಗಳನ್ನೂ ಬಹುಮಾನವಾಗಿ ಅಸದ್ ಖಾನನಿಗೆ ಅರ್ಪಿಸಿದನು. ಇದರ ಹತ್ತರಷ್ಟು ಬಹುಮಾನವನ್ನು ಬಿಜಾಪುರದ ಸುಲ್ತಾನನ ಸಹಾಯ ದೊರಕಿಸಿಕೊಟ್ಟರೆ ಮಹಾರಾಣಿಯವರು ಕೊಡುವುದಾಗಿ, ತಿಳಿಸಿರುವುದಾಗಿ ಹೇಳಿ, ಲೋಭಿಯಾದ ಅಸದ್ ಖಾನನಿಗೆ ಹಣದ ಆಸೆಯನ್ನು ಒಡ್ಡಿದನು. ಆದರೆ ಅಸದ್ ಖಾನನು ಇವುಗಳಿಗೆ ಬೆರಗಾಗದೆ, ತನಗೆ ಕೊಡಲಿರುವ ಸಂಭಾವನೆಯನ್ನು ನಿಶ್ಚಿತಗೊಳಿಸದ ಹೊರತು ತಾನು ಈ ಕಾರ್ಯಕ್ಕೆ ಕೈಹಾಕುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದನು. ತನಗೆ ಒಂದು ಲಕ್ಷ ಪಗೋಡಗಳನ್ನು ಸುಲ್ತಾನರಿಗೆ ಅರಿಯದಂತೆ ಬಹುಮಾನವಾಗಿ ಕೊಡುವುದಾದರೆ ಮಾತ್ರ ಮಹಾರಾಣಿ ವರದಾದೇವಿಯರ ಕೋರಿಕೆಯಂತೆ, ಸುಲ್ತಾನರ ಸಹಾಯ ದೊರಕಿಸಿಕೊಡುವುದಾಗಿ ತಿಳಿಸಿದನು. ನಿರ್ವಾಹವಿಲ್ಲದೆ ಈ ಷರತ್ತಿಗೆ ವಿಠಲದೇವನು ಒಪ್ಪಬೇಕಾಯಿತು. ತನ್ನ ಕಾರ್ಯ ಯಶಸ್ವಿಯಾಗಲು ಐವತ್ತು ಲಕ್ಷ ಪಗೋಡಗಳು ವೆಚ್ಚವಾದರೂ ಚಿಂತೆಯಿಲ್ಲವೆಂದು ವರದಾದೇವಿ ತಿಳಿಸಿದ್ದಳು. ಇಷ್ಟು ಹಣವನ್ನು ಈ ಕಾರ್ಯಕ್ಕೆ ವೆಚ್ಚಮಾಡಲು ವಿಠಲದೇವನಿಗೆ ಇಷ್ಟವಿರಲಿಲ್ಲ. ಇದಕ್ಕೆ ತಕ್ಕಂತೆ ಅಸದ್ ಖಾನನು ಹಣವನ್ನು ತನಗೆ ಮುಂಗಡವಾಗಿ ಸಲ್ಲಿಸಬೇಕೆಂದು ಹಠಹಿಡಿದನು. ಹಣವು ರಾಜಬೊಕ್ಕಸದಿಂದ ಕೊಡಬೇಕಾಗಿದೆ ಎಂದೂ ಇದು ಸಲಕಂ ಸೋದರರ ವಶದಲ್ಲಿದೆ ಎಂದೂ, ರಾಜಭಂಡಾರ ತಮ್ಮ ವಶವಾದ ಕೂಡಲೇ ಅವನಿಗೆ ಕೊಟ್ಟಿದ್ದ ವಚನವನ್ನು ಪಾಲಿಸುವುದಾಗಿಯೂ, ತಿಳಿಸಿದನು. ಆದರೆ ಈ ಮಾತಿನಿಂದ ಅಸದ್ ಖಾನನು ನಿರುತ್ಸಾಹ ತಾಳಿದುದನ್ನು ಕಂಡು, ತನ್ನ ಬಳಿಯಲ್ಲಿದ್ದ ಹಣದಿಂದ ಇಪ್ಪತ್ತು ಸಾವಿರ ವರಹಗಳನ್ನು ಮುಂಗಡವಾಗಿ ಕೊಟ್ಟು ಉಳಿದುದನ್ನು ಅನಂತರ ಕೊಡುವುದಾಗಿ ಹೇಳಿದ ಮೇಲೆ, ಅಸದ್ ಖಾನನು ಈ ರಾಯಭಾರವನ್ನು ಸಾಧಿಸಲು ಕಂಕಣತೊಟ್ಟನು. ಅವನು ಸಮಯವರಿತು, ಸುಲ್ತಾನನೊಂದಿಗೆ ಮಾತನಾಡಿ ವಿಠಲದೇವನನ್ನು ಸಮ್ಮುಖಕ್ಕೆ ಕರೆಸಿಕೊಳ್ಳುವಂತೆ ಮಾಡಿದನು.

"ಖಾವಂದರಿಗೆ ನಮ್ಮ ಮಹಾರಾಣಿಯವರು ಒಂದು ಪತ್ರ ಕೊಟ್ಟಿದ್ದಾರೆ. ಪರಾಂಬರಿಸಬೇಕು." ಎಂದು ಹೇಳಿ ಅವನು ತಂದಿದ್ದ ಪತ್ರವನ್ನು ಸುವರ್ಣಸಂಪುಟದಿಂದ ತೆಗೆದು ಸುಲ್ತಾನನ ಕೈಗಿತ್ತನು; ಅದನ್ನು ಸೂಕ್ಷ್ಮವಾಗಿ ನೋಡಿ ಓದಲು ಅಸದ್ ಖಾನನ ಕೈಗಿತ್ತನು.

ಅಸದ್ ಖಾನನು ಆ ಪತ್ರವನ್ನು ಓದಿದನು.

ಆ ಪತ್ರದಲ್ಲಿ ವರದಾದೇವಿ ಸಲಕಂ ಸೋದರರು ಅಧಿಕಾರಕ್ಕೆ ಬಂದ ದಿನ

ದಿಂದ ಆದುವನೆಗೆ ನಡೆದಿರುವ ಅನ್ಯಾಯಗಳನ್ನು ಸವಿಸ್ತಾರವಾಗಿ ತಿಳಿಸಿ, ಈಗ ಕುಮಾರ ವೆಂಕಟಾದ್ರಿಯನ್ನು ಹೇಗಾದರೂ ಮಾಡಿ ನಿವಾರಿಸಿ, ಸಿಂಹಾಸನ ವನ್ನು ಆಕ್ರಮಿಸಬೇಕೆಂದು ಪಿತೂರಿ ನಡೆಸಿರುವರೆಂದೂ, ಅವರ ಕೈಯಿಂದ ವಿಜಯನಗರದ ಸಿಂಹಾಸನವನ್ನು ತಪ್ಪಿಸಿ, ಕುಮಾರನಿಗೆ ಭದ್ರಪಡಿಸಿಕೊಡ ಬೇಕೆಂದೂ ಕೋರಿದ್ದಳು.

"ನಿಮ್ಮ ರಾಣಿಯ ಮಾತಿಗಾಗಿ. ನಾವು ಸ್ನೇಹದಿಂದ ಇರುವ ವಿಜಯ ನಗರದ ಮೇಲೆ ದಂಡೆತ್ತಿ ಬರಲು ಸಾಧ್ಯವಿಲ್ಲ." ಎಂದು ಸುಲ್ತಾನನು ಸ್ಪಷ್ಟವಾಗಿ ಹೇಳಿಬಿಟ್ಟನು.

"ನೀವು ವಿಜಯನಗರದ ಮಿತ್ರರಾಗಿದ್ದುದು ನಿಜವಾದರೆ, ಈ ವಿಪತ್ತಿ ನಿಂದ ನಮ್ಮನ್ನು ಪಾರುಮಾಡಬೇಕು!" ಎಂದು ವಿಠಲದೇವ ಹೇಳಿದ.

"ನಮ್ಮೊಂದಿಗೆ ಸಲಕಂ ಸೋದರರು ಮಿತ್ರರಾಗಿಯೇ ಇದ್ದಾರೆ. ನಾವು ಅವರಿಗೆ ದ್ರೋಹ ಬಗೆಯಲಾರೆವು!"

"ಹಾಗಲ್ಲ ಖಾವಂದ್, ಅವರು ನಿಮ್ಮೊಂದಿಗೆ ಸಂಧಿ ಮಾಡಿಕೊಂಡು ಮಿತ್ರರಾಗಿದ್ದರೂ, ವಿಜಯನಗರದ ಸಾಮ್ರಾಜ್ಯಕ್ಕೆ ದ್ರೋಹ ಬಗೆಯುತ್ತಿದ್ದಾರೆ. ಕುಮಾರನನ್ನು ಮೂಲೆಗೊತ್ತಿ ತಾವೇ ಸಿಂಹಾಸನವನ್ನು ಆಕ್ರಮಿಸಿಕೊಳ್ಳಲು ಪಿತೂರಿ ನಡೆಸಿದ್ದಾರೆ. ಈಗ ಏನು ಮಾಡಬೇಕೆಂದು ತಿಳಿಯದೆ, ನಮ್ಮ ರಾಣಿ ಯವರು ವಿಜಯನಗರದ ಸನ್ಮಿತ್ರರಾದ ನಿಮಗೆ ಮೊರೆಹೊಕ್ಕಿದ್ದಾರೆ." ಎಂದು ದೈನ್ಯದಿಂದ ಹೇಳಿದ ವಿಠಲದೇವ.

ಸುಲ್ತಾನನು ನಿಮ್ಮ ಅಭಿಪ್ರಾಯವೇನು ಎಂಬಂತೆ ಅಸದ್‌ಖಾನನ ಮುಖ ನೋಡಿದ.

"ಇವರ ಮಾತು ಯಥಾರ್ಥವಾಗಿದೆ ಖಾವಂದ್ ಸಾಮ್ರಾಟ್ ಅಚ್ಯುತ ರಾಯ ನಮ್ಮ ಸ್ನೇಹಿತರಾಗಿದ್ದರು. ಅಂತಹವರನ್ನು ಆ ನೀಚರು ಕೊಲೆ ಮಾಡಿ, ಸಿಂಹಾಸನವನ್ನು ಆಕ್ರಮಿಸಬೇಕೆಂದು ಪಿತೂರಿ ನಡೆಸಿದ್ದಾರಂತೆ, ನಾವು ವಿಜಯನಗರ ಸಿಂಹಾಸನವನ್ನು ಮಹಾರಾಣಿಯವರಿಗೆ ಭದ್ರಪಡಿಸಿಕೊಡಬೇಕಾ ದುದು, ಸ್ನೇಹಿತರಾದ ನಮ್ಮ ಕರ್ತವ್ಯ!"

ಅವನು ವಿಠಲದೇವನ ಕಡೆ ತಿರುಗಿ,

"ನಿಮ್ಮ ರಾಣಿಯವರು ನಾವು ಸಹಾಯ ಮಾಡಿದರೆ, ತಕ್ಕ ರೀತಿಯಲ್ಲಿ ಸಂಭಾವನೆ ಕೊಡುವುದನ್ನು, ತಿಳಿಸಿದ್ದಾರೆ. ಅದರ ವಿಷಯವನ್ನು ವಿವರವಾಗಿ ಬರೆದಿದ್ದರೆ ಚೆನ್ನಾಗಿತ್ತು." ಎಂದ.

"ಆ ಬಗ್ಗೆ ಮಾತನಾಡಲೆಂದೇ ನಾನು ಬಂದಿರುವುದು. ಆ ಬಗ್ಗೆ ನಿಮಗೆ ಯಾವ ವಿವರಗಳನ್ನು ಬೇಕಾದರೂ ಕೊಡಬಲ್ಲೆ!"

"ನಾವು ನಿಮಗೆ ಸಹಾಯ ಮಾಡಿದರೆ ನೀವು ನಮಗೆ ಎಷ್ಟು ಹಣ ಕೊಡುತ್ತೀರಿ?"

"ಮೊದಲು ಸಲಕಂ ಸೋದರರನ್ನು ಅಧಿಕಾರಚ್ಯುತರನ್ನಾಗಿ ಮಾಡಿ, ಸಿಂಹಾಸನವನ್ನು ನಮ್ಮ ಮಹಾರಾಣಿಯವರಿಗೆ ಭದ್ರಪಡಿಸಿಕೊಡಲು ಆಶ್ವಾಸನವಿತ್ತರೆ, ಅನಂತರ ಉಳಿದ ಸಂಗತಿಯನ್ನು ಮಾತನಾಡಬಹುದು...."

"ನೀವು ಎಷ್ಟು ಹಣ ಕೊಡುವಿರೋ ಅದರ ಮೇಲೆ ನಮ್ಮ ಸಹಾಯ ಕೊಡುವುದೂ ಬಿಡುವುದೂ ನಿರ್ಧರವಾಗುತ್ತದೆ...."

ಇದನ್ನು ಕೇಳಿ, ಇವರು ಕೇವಲ ಹಣಕ್ಕಾಗಿ ಯಾವ ಕಾರ್ಯ ಮಾಡಲೂ ಸಿದ್ಧರಾಗಿದ್ದಾರೆಯೇ ಹೊರತು, ಸ್ನೇಹ ಧರ್ಮವನ್ನು ನೆನೆಯುವುದಿಲ್ಲ – ಎಂದುಕೊಂಡ ವಿಠಲದೇವ. ಆದರೆ ಈ ಬಗ್ಗೆ ಯಾವ ಮಾತನ್ನೂ ನುಡಿಯದೆ,

"ನಾವು ಎಷ್ಟು ಹಣವನ್ನು ಕೊಡಬೇಕೆಂಬುದನ್ನು ನೀವೇ ನಿರ್ಧರಿಸಿ ಬಿಡಿ" ಎಂದ.

"ಇದನ್ನು ನೀವೇ ಹೇಳಿದ್ದರೆ ಚೆನ್ನಾಗಿತ್ತು. ಚಿಂತೆಯಿಲ್ಲ. ಕಳೆದ ಬಾರಿ, ವಿಜಯನಗರದವರೊಂದಿಗೆ ಸಂಧಿಮಾಡಿಕೊಂಡಾಗ, ನಮಗೆ ಹತ್ತು ಲಕ್ಷ ಪಗೋಡಗಳು, ಒಂದು ಲಕ್ಷ ವಡವೆಗಳನ್ನು ಕೊಟ್ಟು ಸನ್ಮಾನಿಸಿದ್ದೀರಿ! ಈಗ ನಿಮ್ಮ ಕಾರ್ಯಕ್ಕೆ ನಾವು ಸೈನ್ಯಸಮೇತ ಬರಬೇಕಾಗುತ್ತದೆ. ಆದ್ದರಿಂದ ಸೈನ್ಯದ ಖರ್ಚು ವೆಚ್ಚವನ್ನು ನೀವೇ ವಹಿಸಿಕೊಳ್ಳಬೇಕು!" ಎಂದ ಅಸದ್ ಖಾನ್.

"ನಮಗಾಗಿ ನೀವು ದಂಡೆತ್ತಿ ಬರುವುದರಿಂದ, ಅದರ ಖರ್ಚು ವೆಚ್ಚಗಳನ್ನು ಸಂತೋಷದಿಂದ ನಾವೇ ವಹಿಸಿಕೊಳ್ಳುತ್ತೇವೆ."

"ಈ ಬಗ್ಗೆ ಯಾವ ನಿರ್ಧಾರಕ್ಕೂ ನಾವು ಈಗಲೇ ಬರಬೇಕಾಗಿದೆ. ನೀವು ಸೈನ್ಯದ ವೆಚ್ಚಕ್ಕೆಂದು ಐವತ್ತು ಲಕ್ಷ ಪಗೋಡಗಳನ್ನೂ, ನಿಮಗೆ ಸಿಂಹಾಸನವನ್ನು ಮತ್ತೆ ಹಿಂದಿರುಗಿಸಿ ಕೊಡುವ ಶ್ರಮಕ್ಕಾಗಿ ಐವತ್ತು ಲಕ್ಷ ಪಗೋಡಗಳನ್ನೂ ಕೊಡಬೇಕಾಗುತ್ತದೆ."

"ಒಂದು ಕೋಟಿ ಪಗೋಡ!" ಅಚ್ಚರಿಗೊಂಡು ಹೇಳಿದ ವಿಠಲದೇವ.

"ಇದು ನಾವು ಮಾಡಿದ ಸಹಾಯಕ್ಕೆ ಅಲ್ಪವೆಂದು ನಿಮಗೇ ತಿಳಿದಿದೆ. ಆದರೂ ನಾವು ಕೇವಲ ಸ್ನೇಹ ಧರ್ಮವನ್ನು ನೋಡುತ್ತಿದ್ದೇವೆ!"

"ಅದನ್ನು ನಾವು ಬಲ್ಲೆವು!"

"ಈ ಬಗ್ಗೆ ಇದೇ ನಮ್ಮ ಕಡೆಯ ನಿರ್ಧಾರ. ಇದರ ಮೇಲೆ ನಾವು ನೆರವು ಕೊಡುವ ಮಾತು ನಿಂತಿದೆ!"

"ನೀವು ಕೇಳಿದಷ್ಟು ಹಣವನ್ನು ನಾವು ಸದ್ಯದ ಸ್ಥಿತಿಯಲ್ಲಿ ಕೊಡಲಾರೆವು."

"ಏಕೆ?"

"ಈ ಹಣವನ್ನು ರಾಜಭಂಡಾರದಿಂದ ತೆಗೆದು ಕೊಡಬೇಕಾಗಿದೆ. ಆದರೆ ರಾಜಭಂಡಾರ ಸಲಕಂ ಸೋದರರ ವಶದಲ್ಲಿದೆ. ಅದು ನಮ್ಮದಾಗುವವರೆಗೆ ನಾವೇನೂ ಮಾಡಲಾರೆವು."

"ನೀವು ನಮಗೆ ಕೊಡುವ ಹಣದ ಬಗ್ಗೆ ನಿರ್ಧರಿಸಿ ಹಣದ ಪಾವತಿಯ ಬಗ್ಗೆ ಅನಂತರ ತೀರ್ಮಾನಿಸೋಣ!"

"ನಾನು ಮಹಾರಾಣಿಯವರೊಡನೆ ಈ ಬಗ್ಗೆ ವಿಚಾರ ಮಾಡದೆ ಯಾವುದನ್ನೂ ನಿರ್ಧರಿಸುವಂತಿಲ್ಲ."

"ಅಂತಾದರೆ ನಮ್ಮ ಸಹಾಯದ ಬಗ್ಗೆ ಸದ್ಯಕ್ಕೆ ನಾವೂ ಏನೂ ಹೇಳಲು ಸಾಧ್ಯವಿಲ್ಲ."

ಈ ಮಾತು ಕೇಳಿ ವಿಠಲದೇವನ ಮುಖ ನಿಸ್ತೇಜವಾಯಿತು. ಈಗ ಅವರ ಸಹಾಯ ಅನಿವಾರ್ಯವಾಗಿತ್ತು. ತನ್ನ ರಾಯಭಾರ ವಿಫಲವಾದರೆ, ಮಹಾರಾಣಿ ವರದಾದೇವಿಗೆ ಮಾತ್ರವಲ್ಲ – ಸಾಮ್ರಾಜ್ಯಕ್ಕೇ ಗಂಡಾಂತರ! ಎಲ್ಲವನ್ನೂ ಕೂಲಂಕಶವಾಗಿ ವಿಚಾರಿಸಿ ವಿಠಲದೇವನು ಹೇಳಿದ: "ಸಾಮ್ರಾಜ್ಯಕ್ಕೆ ಒದಗಿರುವ ವಿಪತ್ತನ್ನು ನೆನೆದು ನಾನು ಸಂಧಾನ ಸಾಧಿಸದೆ ಹಿಂದಿರುಗುವಂತಿಲ್ಲ. ನನಗೆ ಮಹಾರಾಣಿಯವರು ಕೊಟ್ಟಿರುವ ಅಧಿಕಾರದ ಮೇಲೆ, ಸೈನ್ಯದ ವೆಚ್ಚಕ್ಕೆಂದು ಮೂವತ್ತು ಲಕ್ಷ ಪಗೋಡ ಮತ್ತಿತರ ಬೆಲೆ ಬಾಳುವ ವಸ್ತುಗಳನ್ನು ಕೊಡಲು ನಾವು ಸಿದ್ಧರಿದ್ದೇವೆ ಹೊರತು, ಇದಕ್ಕಿಂತ ಹೆಚ್ಚಿನ ಹಣ ಕೊಡಲು ನಮ್ಮಿಂದ ಸಾಧ್ಯವಿಲ್ಲ!"

ಆದಿಲ್‌ಷಹನು ಇಷ್ಟು ಸುಲಭವಾಗಿ, ಇಷ್ಟು ಹಣ ತನಗೆ ದೊರಕೀತೆಂದು ತಿಳಿದಿರಲಿಲ್ಲ. ಅವನು ಸುಪ್ರಸನ್ನನಾಗಿ, ಅಸದ್‌ಖಾನನೊಡನೆ ಆಲೋಚಿಸಿ, ಮುಂಗಡವಾಗಿ ಐದು ಲಕ್ಷ ಹಣ ಕೊಡುವುದಾದರೆ, ಕೂಡಲೇ ವಿಜಯನಗರದ ಮೇಲೆ ದಂಡೆತ್ತಿ ಬರುವುದಾಗಿ ತನ್ನ ಅಂತಿಮನಿರ್ಧಾರವನ್ನು ತಿಳಿಸಿದ.

ಈ ಷರತ್ತಿಗೆ ವಿಠಲದೇವನು ನಿರ್ವಾಹವಿಲ್ಲದೆ ಒಪ್ಪಿ, ತನಗೆ ವರದಾದೇವಿ ಕೊಟ್ಟಿದ್ದ ಹಣದಲ್ಲಿ, ಬಿಜಾಪುರದ ಸುಲ್ತಾನನಿಗೆ ಐದುಲಕ್ಷ ಪಗೋಡಗಳನ್ನು ಪಾವತಿಮಾಡಿ, ಒಪ್ಪಂದಕ್ಕೆ ಸಹಿಹಾಕಿ, ತನ್ನ ರಾಯಭಾರ ಯಶಸ್ವಿಯಾದ ಹಿಗ್ಗಿನಲ್ಲಿ ರಾಜಧಾನಿಗೆ ಹಿಂದಿರುಗಿ, ನಡೆದ ಸಂಗತಿಯನ್ನೆಲ್ಲಾ ವರದಾದೇವಿಗೆ ವರದಿ ಮಾಡಿದನು. ಇದರಿಂದ ವರದಾದೇವಿಯ ಮುಖದಲ್ಲಿ ಹಿಂದೆಂದೂ ಕಾಣದ ತೃಪ್ತಿ ಕಾಣಿಸಿಕೊಂಡಿತು. ಆದರೆ ವಿಠಲದೇವನಿಗೆ ಮಾತ್ರ ಹಿಂದಿದ್ದ ಉತ್ಸಾಹವಿರಲಿಲ್ಲ. ಹಣಕ್ಕಾಗಿ ಬಿಜಾಪುರದ ಸುಲ್ತಾನನು ಏನುಬೇಕಾದರೂ ಮಾಡಬಹುದೆಂಬ ಅನುಮಾನವಿದ್ದೇ ಇತ್ತು. ತಮ್ಮ ಮೇಲೆ ದಂಡೆತ್ತಿ ಬಂದ

ಅವರಿಗೆ ಸಲಕಂ ಸಹೋದರರು ತನುಗಿಂತಲೂ ಅಧಿಕವಾದ ಹಣಕೊಟ್ಟು ಹಿಂದಿರುಗಿಸಿದರೆ? ಎಂಬ ಒಳಭೀತಿ ಇದ್ದೇ ಇತ್ತು. ಈ ವಿಷಯವನ್ನು ವರದಾದೇವಿಗೂ ತಿಳಿಸಿದ. ವರದಾದೇವಿ 'ಎಲ್ಲವೂ ಪಂಪಾಪತಿಯ ಇಚ್ಛೆಯಂತಾಗಲಿ' ಎಂದಳು.

೨೪

ಬಿಜಾಪುರದ ಸುಲ್ತಾನನು ವರದಾದೇವಿಗೆ ಕೊಟ್ಟಿದ್ದ ವಾಗ್ದಾನದಂತೆ ತನ್ನ ಸಕಲ ಸೈನ್ಯಗಳೊಡನೆ ಬಂದು ವಿಜಯನಗರದ ಹೊರವಲಯದಲ್ಲಿ ಬೀಡು ಬಿಟ್ಟನು. ಈ ಸುದ್ದಿಯನ್ನು ದೂತರಿಂದ ಕೇಳಿದ ವರದಾದೇವಿ ತನ್ನ ಮೊರೆ ಪಂಪಾಪತಿಗೆ ಮುಟ್ಟಿತೆಂದು ಹರ್ಷಿಸಿದಳು. ಅವಳ ಹರ್ಷ ಬಹಳ ಕಾಲ ಉಳಿಯಲಿಲ್ಲ. ಯಾವ ಸುಲ್ತಾನನು ತನ್ನ ನೆರವಿಗಾಗಿ ಬಂದಿರುವನೆಂದು ಊಹಿಸಿದ್ದಳೋ. ಅವನು ವಿಜಯನಗರದ ಮೇಲೆ ಧಾಳಿಯಿಡುವ ಬದಲು, ತನ್ನ ಸಮಸ್ತ ಸೈನ್ಯವನ್ನೂ ಹಿಂದುಳಿಸಿ, ತನ್ನ ಆಪ್ತ ಪರಿವಾರದೊಡನೆ, ವಿಜಯನಗರದ ಕೋಟೆಯೊಳಗೆ ಬಂದನೆಂದೂ, ಸಲಕಂ ಸೋದರರು ಅವನಿಗಾಗಿ ಕೋಟೆಯ ಬಾಗಿಲ ಬಳಿ ಕಾದಿದ್ದು, ಅವನನ್ನು ರಾಜಮರ್ಯಾದೆಯಲ್ಲಿ ಸ್ವಾಗತಿಸಿ, ಸುಲ್ತಾನನನ್ನೂ, ಅಸದ್ ಖಾನನನ್ನೂ ಆನೆಯ ಮೇಲೆ ನವರತ್ನಖಚಿತವಾದ ಅಂಬಾರಿಯಲ್ಲಿ ಕುಳ್ಳಿರಿಸಿ, ಮೆರವಣಿಗೆ ಮಾಡಿ, ಅವರಿಗೆಂದೇ ವಿಶೇಷರೀತಿಯಲ್ಲಿ ಸಿದ್ಧಪಡಿಸಿದ್ದ ಅರಮನೆಯಲ್ಲಿ ಬಿಡಾರಮಾಡಿಸಿದರೆಂದೂ ಕೇಳಿ, ಅವಳು ತನ್ನ ಕಿವಿಯನ್ನು ತಾನೇ ನಂಬದಾದಳು. ಇದೇನು ಸೋಜಿಗವೆಂದು ವಿಸ್ಮಯಗೊಂಡು, ಅರಮನೆಯ ಮೆಟ್ಟಿಲನ್ನೇರಿ ನೋಡುವಾಗ, ಸುಲ್ತಾನನು ಇಳಿದಿದ್ದ ಬಿಡಾರದ ಮೇಲೆ ಚಂದ್ರಾಂಕಿತ ಹಸುರು ಧ್ವಜ ಹಾರಾಡುತ್ತಿದ್ದುದು ಕಾಣಿಸಿತು. ಅದನ್ನು ಕಂಡು ಅವಳು ಹಾಗೇ ಕುಸಿದಳು. ಬಹು ಪ್ರಯಾಸದಿಂದ ಅಂತಃಪುರಕ್ಕೆ ಬಂದು ಹಂಸತೂಲಿಕಾತಲ್ಪದ ಮೇಲೆ ಕುಳಿತು ಅಳತೊಡಗಿದಳು. ತಾಯಿ ಅಳುತ್ತಿರುವುದನ್ನು ಕಂಡು ಕುಮಾರ ವೆಂಕಟಾದ್ರಿ ಬಳಿಗೆ ಬಂದು,

"ಅಮ್ಮಾ, ಯಾಕಮ್ಮ ಅಳುತ್ತಿದ್ದಿ? ನಿನಗೇನಾಗಿದೆ ಅಮ್ಮ?" ಎಂದ ತನ್ನ ಬಾಲ ಭಾಷೆಯಲ್ಲಿ.

ಇದರಿಂದ ಅವಳ ದುಃಖ ಮತ್ತಷ್ಟು ಹೆಚ್ಚಿತು.

"ನಮ್ಮ ಸರ್ವನಾಶವಾಯಿತು ಕಂದ!"

"ಯಾರಮ್ಮ ಹೀಗೆ ಮಾಡಿದವರು?"

"ಆ ನಮ್ಮ ದುರ್ವಿಧಿ?" ಎಂದು ಮಗನನ್ನು ತಬ್ಬಿಕೊಂಡು ಗಳಗಳನೆ ಅತ್ತಳು. ಕುಮಾರ ವೆಂಕಟಾದ್ರಿಗೆ ತಾಯಿಯ ಈ ವರ್ತನೆ ಅರ್ಥವಾಗಲಿಲ್ಲ.

“ ಮಾವನೇನಾದರೂ ನಿನ್ನ ಬೈದನೇನಮ್ಮಾ?” ಎಂದು ಪ್ರಶ್ನಿಸಿದ ಸರಳವಾಗಿ.

“ ಅವರೇನು ಬೈಯುವುದಿಲ್ಲ ಕಂದಾ. ಅವರು ವಿಶ್ವಾಸವನ್ನೇ ತೋರಿಸುತ್ತಾರೆ. ಅವರ ವಿಶ್ವಾಸವಿಂದು ನಮ್ಮ ಪಾಲಿಗೆ ಹಾಲಾಹಲವಾಗಿದೆ.”

“ ಅವರು ನಮಗೇನು ಕೆಡಕು ಮಾಡಿದ್ದಾರಮ್ಮಾ ! ನಮಗೆ ಬೇಕಾದುದನ್ನೆಲ್ಲಾ ಒದಗಿಸುತ್ತಾರೆ ! ನೀನೇಕೆ ಅವರಿಗೆ ಸದಾ ಹೆದರುತ್ತೀಯೆ ?”

“ ಅವರಿಂದಾಗಿರುವ ತೊಂದರೆ ನಿನಗೆ ಕಾಣಿಸುವುದಿಲ್ಲ ಕಂದಾ !”

“ ಅಂದು ಅವರು ಅಪ್ಪಾಜಿಗೆ ವಿಷಹಾಕಿ ಕೊಂದರು ಎಂದು ನೀನು ಹೇಳಿದ ಮಾತನ್ನು ಅವರಿಗೆ ಹೇಳಿದೆ. ಅವರು ಏನಂದರು ಗೊತ್ತೆ ?”

“ ಇಲ್ಲ—ಏನಂದರು ಮಗು ?” ಗಾಬರಿಯಿಂದ ಕೇಳಿದಳು.

“ ನಿನ್ನ ತಾಯಿಗೆ ಬುದ್ಧಿಕೆಟ್ಟದೆ. ಅವಳು ಹುಚ್ಚಿ, ಅವಳ ಮಾತನ್ನು ಕೇಳಬೇಡ, ಎಂದು ದೊಡ್ಡ ಮಾವ ಹೇಳಿದರು. ಚಿಕ್ಕಮಾವ, ನಮಗೆ ಆಗದವರು ಯಾರೋ ನಿಮ್ಮಮ್ಮನ ತಲೆ ಕೆಡಿಸಿದ್ದಾರೆ. ನಾವು ನಿಮ್ಮ ಅಪ್ಪಾಜಿಯನ್ನು ಕೊಂದಿದ್ದರೆ ನಿನ್ನ ಮೇಲೆ ನಮಗೆ ಪ್ರೀತಿ ಇರುತ್ತಿತ್ತೇ ! ಎಲ್ಲ ಸುಳ್ಳು. ಅವಳ ಮಾತನ್ನು ಕೇಳಬೇಡ.” ಎಂದರು.

“ ಈ ಮಾತನ್ನು ಮೊದಲೇ ಏಕೆ ತಿಳಿಸಲಿಲ್ಲ ಮಗು ?”

“ ತಿಳಿಸಿದ್ದರೆ, ನೀನು ಇನ್ನಷ್ಟು ಬೇಸರಗೊಳ್ಳುತ್ತಿದ್ದಿ !”

“ ಹೋಗಲಿ, ಇನ್ನು ಮುಂದಾದರೂ ಎಚ್ಚರಿಕೆಯಿಂದಿರು. ಅವರಿಗೆ ನಾನು ಯಾರ ಜೊತೆಯಲ್ಲಿ ಏನು ಮಾತನಾಡಿದರೂ ತಿಳಿಸಬಾರದು ಮಗು !”

“ ಏಕಮ್ಮ?”

“ ಅವರು ಬಹಿರಂಗದಲ್ಲಿ ಒಳ್ಳೆಯ ಮಾತನ್ನೆ ಆಡಿಕೊಂಡು, ನಮಗೆ ಅಂತರಂಗದಲ್ಲಿ ದ್ರೋಹ ಬಗೆಯುತ್ತಿದ್ದಾರೆ !”

“ ಅವರು ನಮಗೇಕೆ ದ್ರೋಹ ಬಗೆಯಬೇಕು ?....ನಾವು ಅವರಿಗೆ ಯಾವ ಕೆಡಕು ಮಾಡಿದ್ದೇವೆ?”

“ ನಾವು ಒಬ್ಬರಿಗೆ ತೊಂದರೆ ಕೊಡದಿದ್ದರೂ, ಅವರು ನಮ್ಮನ್ನು ಹಿಂಸಿಸುವುದು ಜಗತ್ತಿನ ನಿಯಮ !”

“ ಇದು ಬಹಳ ಕೆಟ್ಟದು ಅಲ್ಲವೇನಮ್ಮಾ ?”

“ ಇದು ಒಳ್ಳೆಯದೋ, ಕೆಟ್ಟದ್ದೋ ಅದು ಯಾರಿಗೆ ಬೇಕು? ಪ್ರಪಂಚದ ರೀತಿಯಿರುವುದೇ ಹೀಗೆ. ಹೀಗಿದ್ದವರಿಗೆ ಕಾಲಬರುವುದೇ ಹೊರತು, ನಿನ್ನ ಅಪ್ಪಾಜಿಯಂತಹವರಿಗಲ್ಲ.”

“ ಅವರು ಏನು ಮಾಡಿದರಮ್ಮಾ ?”

"ಬೆಳ್ಳಗಿರುವುದೆಲ್ಲಾ ಹಾಲೆಂದು ನಂಬಿದರು. ಅವರು ಎಲ್ಲರನ್ನೂ ನಂಬಿದಂತೆ, ನಿನ್ನ ಮಾವಂದಿರನ್ನು ನಂಬಿ, ಅದರ ಫಲವನ್ನು ಅನುಭವಿಸಿದರು!"

—ಎಂದು ಕಣ್ಣೀರಿಟ್ಟಳು ವರದಾದೇವಿ.

"ಯಾಕಮ್ಮ ಕಣ್ಣೀರು?"

"ಹಿಂದೆ ನಡೆದುದೆಲ್ಲಾ ನೆನಪಿಗೆ ಬಂತು! ನಿಮ್ಮ ತಂದೆಯವರು ಬಹಳ ಒಳ್ಳೆಯವರು ಮಗು! ನಿಮ್ಮ ಮಾವಂದಿರ ಮಾತನ್ನು ಕೇಳಿ ಅವರನ್ನು ಹುಚ್ಚರೆಂದು ಭಾವಿಸಿದೆ! ಅಸಡ್ಡೆಯಿಂದ ಕಂಡೆ! ಆದರೂ ಅವರು ಸಾಯುವಾಗ ಒಂದು ಕೆಟ್ಟ ಮಾತನ್ನೂ ಆಡಲಿಲ್ಲ! ನನಗೆ ಬುದ್ಧಿ ಹೇಳಿ ತೀರಿಕೊಂಡರು— ಅವರು ದೇವರಂತಹ ಮನುಷ್ಯರು! ಅವರ ಕೈಹಿಡಿದೂ ನಾನು ಪಾಪಿಯಾದೆ. ಅವರಿಗೆ ದ್ರೋಹವೆಸಗಿದೆ! ಆಗ ನಾನು ಮಾಡಿದ ಅವಿವೇಕಕ್ಕೆ ಪ್ರಾಯಶ್ಚಿತ್ತ ರೂಪವಾಗಿ ದೇವರು ಈ ಶಿಕ್ಷೆ ನನಗೆ ಕೊಟ್ಟಿದ್ದಾನೆ!....ಯಾಕೋ ಇಂದು ಭಯವಾಗುತ್ತಿದೆ ಮಗು....! ನೀನು ನನ್ನನ್ನು ಬಿಟ್ಟು ಎಲ್ಲಿಗೂ ಹೋಗಬೇಡ....! ಬಲಗಣ್ಣು ಅದುರುತ್ತಿದೆ....! ಯಾಕೋ ಎದೆಯಲ್ಲಿ ತಳಮಳ ಆಗುತ್ತಾ ಇದೆ.... ಆ ಹಸುರು ನಿಶಾನೆಯನ್ನು ಕಂಡಲಾಗಾಯಿತು!"

ಎಂದು ಹೇಳಿ ಮಗನನ್ನು ಅಪ್ಪಿ ಕಣ್ಣೀರು ಸುರಿಸುತ್ತಲೇ ಇದ್ದಳು. ಅದೆಷ್ಟು ಹೊತ್ತು ಹಾಗೆ ಕುಳಿತಿದ್ದರೋ ಅವರಿಗೆ ತಿಳಿಯದು; ದಾಸಿ ಬಂದು ಎಚ್ಚರಿಸಿದಾಗಲೇ ಅವರಿಗೆ ಎಚ್ಚರ. ಅವಳು ಅವರ ಪಾಲಿಗೆ ಸಿಡಿಲಿನಂತಹ ಸುದ್ದಿಯನ್ನು ತಂದಿದ್ದಳು.

"ಮಹಾರಾಣಿ! ನಿಮ್ಮನ್ನು ಕಾಣಲು ಹನುಮನಾಯಕರು, ಬಾಗಿಲಲ್ಲಿ ನಿಂತು, ಅಪ್ಪಣೆ ಕೇಳುತ್ತಿದ್ದಾರೆ! ನಿಮ್ಮನ್ನು ಕೂಡಲೇ ಕಾಣಲೇಬೇಕಂತೆ!"

ಅವಳಿಗೆ ಹನುಮನಾಯಕನ ಹೆಸರು ಕೇಳಿದ ಕೂಡಲೇ ಗಾಬರಿಯಾಯಿತು. ಹನುಮನಾಯಕನೆಂದರೆ ತನ್ನ ಸೋದರರ ನೆಚ್ಚಿನ ಭಂಟ. ಅವನಿಗೆ ತನ್ನ ಬಳಿ ಏನು ಕೆಲಸ?

ಅವಳ ಕಣ್ಣೆದುರು ಆ ದಿನ ಶ್ರೀಮಂತರನ್ನು ನಿಷ್ಕರುಣೆಯಿಂದ ಸುಲಿಯುತ್ತಿದ್ದ ಹನುಮನಾಯಕನ ಚಿತ್ರ ಬಂತು, ಅವಳ ಎದೆ ಪುಟಹಾರಿತು. ಆದರೂ ಧೈರ್ಯಗೆಡದೆ ಅವನನ್ನು ಕರೆದು ತರಲು ದಾಸಿಗೆ ಆಜ್ಞೆಮಾಡಿದಳು.

ಹನುಮನಾಯಕನು ಮಹಾರಾಣಿ ವರದಾದೇವಿಯೆದುರು ಬಂದು ನಿಂತ. ಅವನ ಮುಖದ ಕಾಠಿಣ್ಯ, ಕ್ರೂರ ನಗೆ, ತೀಕ್ಷ್ಣವಾದ ಕಣ್ಣುಗಳು, ಯಮ ಕಿಂಕರರನ್ನು ನೆನಪಿಗೆ ತರುತ್ತಿತ್ತು.

"ಯಾರು ಹನುಮನಾಯಕರೆ?" ವರದಾದೇವಿ ಪ್ರಶ್ನಿಸಿದಳು.

"ಹೌದು ತಾಯಿ?"

" ತಾವು ಬಂದ ಕಾರ್ಯ ?"

" ನಾನು ತಮಗೆ ಅಪ್ರಿಯವಾದ ಕಾರ್ಯ ಮಾಡಲು ಬಂದಿದ್ದೇನೆ ತಾಯಿ !"

" ಏನದು ?"

" ತಾವು ಅನ್ಯಥಾ ಭಾವಿಸಬಾರದು, ರಾಜಾಜ್ಞೆಯನ್ನು ಮೀರುವಂತಿಲ್ಲ. ನಾನು ತಮ್ಮನ್ನೂ ತಮ್ಮ ಪುತ್ರರನ್ನೂ ಬಂಧಿಸಲು ಬಂದಿದ್ದೇನೆ."

" ಬಂಧಿಸಲು ಕಾರಣವೇನು ?"

" ನಿಮ್ಮ ಮೇಲೆ ರಾಜದ್ರೋಹದ ಆಪಾದನೆ ಇದೆ ತಾಯಿ ?"

" ಎಲ್ಲಿ ರಾಜಾಜ್ಞೆ ?"

" ಇದೋ ರಾಜಾಜ್ಞೆ ?" ಎಂದು ಹೇಳಿ, ವರದಾಂಬಿಕೆಗೆ ರಾಜಾಜ್ಞೆಯನ್ನು ತೋರಿಸಿದ. ಅದರಲ್ಲಿ ಪೆದ್ದ ತಿರುಮಲನು, ವರದಾದೇವಿಯನ್ನೂ, ಕುಮಾರ ವೆಂಕಟಾದ್ರಿಯನ್ನೂ, ರಾಜದ್ರೋಹದ ಆಪಾದನೆಯ ಮೇಲೆ ಬಂಧಿಸಲು ಆಜ್ಞೆಮಾಡಿದ್ದ.

" ಅವರಿಗೆ ಈ ಆಜ್ಞೆಮಾಡಲು ಅಧಿಕಾರವಿಲ್ಲ. ಅವರು ನಮ್ಮ ಆಜ್ಞಾನುವರ್ತಿಗಳು. ನಾವು ಅವರ ಆಜ್ಞಾನುವರ್ತಿಗಳಲ್ಲ ! ಅವರು ಕೇವಲ ರಾಜಪ್ರತಿನಿಧಿಗಳೇ ಹೊರತು ಸಾಮ್ರಾಟರಲ್ಲ. ಸಾಮ್ರಾಟರಾದ ಕುಮಾರ ವೆಂಕಟಾದ್ರಿಯವರ ಮೇಲೆ ನಿಮ್ಮ ಪ್ರಭುಗಳಿಗೆ ಯಾವ ಅಧಿಕಾರವೂ ಇಲ್ಲ !"

" ಇದು ನನಗೆ ತಿಳಿಯದು ತಾಯಿ ! ನಾನು ಅವರ ಸೇವಕ. ಅವರ ಆಜ್ಞೆಯನ್ನು ಪಾಲಿಸುವುದಷ್ಟೇ ನನ್ನ ಕೆಲಸ."

" ಆ ನಿಮ್ಮ ಪ್ರಭುಗಳ ಆಜ್ಞೆಯನ್ನು ನಾವು ತಿರಸ್ಕರಿಸುತ್ತೇವೆ."

" ನಾನು ಬಲಾತ್ಕಾರ ಮಾಡಬೇಕಾದ ಪ್ರಸಂಗ ಬರುತ್ತದೆ."

" ನನ್ನ ಮುಟ್ಟುವ ಧೈರ್ಯವಿದ್ದರೆ ಹತ್ತಿರ ಬನ್ನಿ !"

" ನನ್ನ ಮೇಲೆ ಸಿಟ್ಟಾಗಬಾರದು ತಾಯಿ ! ನಾನು ನಿಮ್ಮ ಪಾದಸೇವಕ. ನೀವು ಹೇಗೆ ಅಪ್ಪಣೆ ಕೊಡಿಸಿದರೆ ಹಾಗೆ ನಡೆಯುತ್ತೇನೆ !"

" ನಿಮ್ಮ ಪ್ರಭುಗಳಿಗೆ, ನಾವು ಅವರ ಆಜ್ಞೆಗೆ ಬದ್ಧರಲ್ಲವೆಂದು ತಿಳಿಸಿ."

ಹನುಮನಾಯಕನು ಅಲ್ಲಿಂದ ಹೋಗುವುದರೊಳಗೆ, ಹೀಗಾಗಬಹುದೆಂದು ಊಹಿಸಿದ್ದ ಸಲಕಂ ಸೋದರರು ಅಲ್ಲಿಗೆ ಬಂದರು.

" ರಾಜದ್ರೋಹದ ಅಪರಾಧಕ್ಕಾಗಿ ನಿಮ್ಮನ್ನು ಬಂಧಿಸಲಾಗಿದೆ " ಎಂದ ಹಿರಿಯ ಸೋದರ.

" ಅದೇನೆಂದು ತಿಳಿಯಬಹುದೆ ?" ಕಾಳಿಯಂತೆ ಪ್ರಶ್ನಿಸಿದಳು ವರದಾದೇವಿ.

" ನೀವು ವಿಠಲದೇವರೊಡನೆ ಸೇರಿಕೊಂಡು ನಮ್ಮ ವಿರುದ್ಧ ಬಿಜಾಪುರ..

ಸುಲ್ತಾನರೊಂದಿಗೆ ಪಿತೂರಿಮಾಡಿದ್ದೀರಿ; ನಮ್ಮನ್ನು ಉರುಳಿಸಲು ಪ್ರಯತ್ನಿಸಿದ್ದೀರೆಂದು ಸ್ವಯಂ ಸುಲ್ತಾನರೇ ನಮಗೆ ತಿಳಿಸಿದ್ದಾರೆ. ವೃಥಾ ಈ ಬಗ್ಗೆ ಚರ್ಚಿಸಿ ಫಲವಿಲ್ಲ. ಹೆಚ್ಚು ಮಾತಿಲ್ಲದೆ ನಿರ್ಬಂಧಕ್ಕೆ ವಿಠಲದೇವರು ಒಳಗಾದಂತೆ ನೀವೂ ಆದರೆ ಒಳಿತು."

"ವಿಠಲದೇವರನ್ನು ಸೆರೆಹಿಡಿಯಲಾಯಿತೆ?"

"ಹೌದು! ಅವರನ್ನು ಸೆರೆಹಿಡಿದು ಆನೆಗೊಂದಿಯ ಸೆರೆಮನೆಯಲ್ಲಿಡಲಾಗಿದೆ! ನಿಮ್ಮ ಹಾಗೂ ಅವರ ವಿಚಾರಣೆ ಒಟ್ಟಿಗೆ ಮಾಡಲಾಗುವುದು!" ಎಂದು ಹೇಳಿ ಅವರ ಸಂರಕ್ಷಣೆಯ ಭಾರವನ್ನು ಹನುಮನಾಯಕನಿಗೆ ವಹಿಸಿ ಹೊರಟುಹೋದರು.

ವರದಾದೇವಿ ತನ್ನರಮನೆಯಲ್ಲೇ ಮೊದಲಿನ ಸ್ವಾತಂತ್ರ್ಯವನ್ನು ಕಳೆದುಕೊಂಡು ಬಂಧನಕ್ಕೊಳಗಾಗಬೇಕಾಯಿತು. ಕೆಲವೇ ನಿಮಿಷಗಳ ಹಿಂದೆ ತನ್ನ ಕುಮಾರನಿಗೆ ಯಾವುದರ ಬಗ್ಗೆ ಎಚ್ಚರಿಸಿದ್ದಳೋ ಅದು ನಡೆದುಹೋಗಿತ್ತು. ವರದಾದೇವಿ ತಮ್ಮ ತಂಗಿ ಎಂಬುದನ್ನು ಮರೆತು, ಕುಮಾರ ವೆಂಕಟಾದ್ರಿ ವಿಜಯನಗರದ ಸಾಮ್ರಾಟ ಎಂಬುದನ್ನು ಮರೆತು, ಅವರನ್ನು ಬಂಧಿಸಿ ಹೋಗಿದ್ದರು ಆ ಸಲಕಂ ಸಹೋದರರು!

ಅವರ ಮಾತಿನಿಂದ ವರದಾದೇವಿಗೆ, ತನ್ನ ಸಂಚೆಲ್ಲವೂ ತನ್ನ ಸೋದರರಿಗೆ ತಿಳಿದಿದೆ ಎಂದು ಭಾಸವಾಯಿತು. ಶತ್ರುವಾಗಿದ್ದ ಆದಿಲ್‌ಷಹನನ್ನು ಅವರು ಹೇಗೆ ಮಿತ್ರರನ್ನಾಗಿ ಮಾಡಿಕೊಂಡರು; ತನ್ನ ಸೋದರರು ಹೇಳಿದಂತೆ ಬಿಜಾಪುರದ ಸುಲ್ತಾನನೇ ಈ ವಿಷಯವನ್ನು ತಿಳಿಸಿರಬೇಕಾದರೆ, ಆದಿಲ್ ಷಹನು ತನಗೆ ದ್ರೋಹ ಬಗೆದಿರಬೇಕು! ಅವನಿಗೆ ಕೊಟ್ಟ ಮುಂಗಡ ಹಣ ವ್ಯರ್ಥವಾಯಿತೆ? ಆ ದಿನ ವಿಠಲದೇವನು, "ಹಣಕ್ಕಾಗಿ ಅವರು ಏನು ಬೇಕಾದರೂ ಮಾಡಬಹುದು. ಅವರನ್ನು ನಂಬುವುದು ಹೇಗೆ?" ಎಂದು ಸಂದೇಹ ವ್ಯಕ್ತಪಡಿಸಿದ್ದ. ಅವನು ಊಹಿಸಿದ್ದಂತೆಯೇ ನಡೆದಿತ್ತು. ತಮಗೆ ನೆರವು ನೀಡಲು ಬಂದ ಆ ಮುಸಲ್ಮಾನರು, ತಮಗಿಂತಲೂ ಅಧಿಕವಾಗಿ ಹಣ ಕೊಡಲು ಒಪ್ಪಿದ ಸಲಕಂ ಸಹೋದರರಿಗೆ ನೆರವಾಗಿದ್ದರು. ಅವರನ್ನು ಮಿತ್ರರೆಂದು ತಿಳಿದು ಮೋಸಹೋದೆನೆಂದು ಆಕೆ ಪರಿತಪಿಸಿದಳು.

ವಾಸ್ತವವಾಗಿ ನಡೆದಿದ್ದುದೂ ಅದೇ. ಬಿಜಾಪುರದ ಸುಲ್ತಾನರು ಎಂದಿಗೂ ವಿಜಯನಗರದವರೊಡನೆ ಸ್ನೇಹದಿಂದಿರಲಿಲ್ಲ. ಅವರಿಗೆ ಬೇಕಾಗಿದ್ದುದು ಸ್ನೇಹವಲ್ಲ - ವಿಜಯನಗರದ ವೈಭವದ ಸೂರೆ! ಅದನ್ನು ಕೊಳ್ಳೆ ಹೊಡೆಯಲು ಅವರು ಹಾತೊರೆಯುತ್ತಿದ್ದರು. ಸಾಮ್ರಾಟ್ ಕೃಷ್ಣದೇವ ರಾಯನು ಬದುಕಿರುವವರೆಗೂ ಅವರ ಆಸೆ ಈಡೇರಿರಲಿಲ್ಲ. ಅಚ್ಯುತರಾಯ

ನನ್ನು ಅಸದ್‌ಖಾನನು ಕುತಂತ್ರದಿಂದ ಮೋಸಪಡಿಸಿ, ಯುದ್ಧದಲ್ಲಿ ಸೋಲಿಸಿ, ಅವನಿಂದ ಅನೇಕ ಬೆಲೆಬಾಳುವ ವಸ್ತುಗಳನ್ನು ಪಡೆದಿದ್ದರೂ, ತೃಪ್ತಿಯುಂಟಾಗಿರಲಿಲ್ಲ. ಆದಿಲ್‌ಷಹನಿಗೆ ವರದಾದೇವಿಯ ಆಹ್ವಾನ ಉತ್ತೇಜನಕಾರಿಯಾಗಿತ್ತು. ಅವನು ಕೃತಕ ಸ್ನೇಹ ನಟಿಸಿ, ಅವಳಿಗೆ ನೆರವಾಗುವ ಸೋಗಿನಲ್ಲಿ ವಿಜಯನಗರದ ಬಳಿ ಬೀಡುಬಿಟ್ಟದ್ದ. ಆಗ ಅಸದ್‌ಖಾನನಿಗೆ ಒಂದು ಯೋಚನೆ ಹೊಳೆಯಿತು. ಸಲಕಂ ಸೋದರರಿಗೆ ತಾವು ಬಂದಿರುವ ಉದ್ದೇಶ ತಿಳಿಸಿದರೆ, ಅವರಿಂದ ತನಗೆ ಇನ್ನೂ ಹೆಚ್ಚು ಲಾಭವಾಗುವುದೆಂದು ಊಹಿಸಿದನು. ಅಸದ್‌ಖಾನನು ಸಲಕಂ ಸೋದರರಿಗೆ ತಾವು ಬಂದಿರುವ ಉದ್ದೇಶವನ್ನು ತಿಳಿಸಿ ಪತ್ರ ಬರೆದು ದೂತರನ್ನು ಕಳುಹಿದನು. ಇದನ್ನು ಕಂಡು ಸಲಕಂ ಸೋದರರು ಕಿಡಿಕಿಡಿಯಾದರು. ಅಸದ್‌ಖಾನನನ್ನು ಭೇಟಿಮಾಡಿದಾಗ ನಡೆದ ಎಲ್ಲ ಸಂಗತಿ ಹೊರಬಿತ್ತು.

ವರದಾದೇವಿಯ ವಿದ್ರೋಹ ಹೊರಬಿದ್ದ ಮೇಲೆ, ತಮ್ಮ ಮೇಲೆ ದಂಡೆತ್ತಿ ಬಂದಿದ್ದ ಅವರನ್ನು ಹಿಂದಿರುಗಿಸುವುದು ಅವರಿಗೆ ದೊಡ್ಡ ಸಮಸ್ಯೆಯಾಗಲಿಲ್ಲ. ಬಿಜಾಪುರದ ಸುಲ್ತಾನನಿಗೆ ಬೇಕಾಗಿದ್ದುದು ಯುದ್ಧವಲ್ಲ, ಯುದ್ಧದ ಹೆಸರಿನಲ್ಲಿ ದೊರಕುವ ಲಾಭ. ಶತ್ರುಗಳಾಗಿದ್ದ ವಿಜಯನಗರದವರೊಂದಿಗೆ ಅವನು ನೀತಿರಹಿತನಾಗಿಯೇ ವರ್ತಿಸಿದ್ದನು. ಸಲಕಂ ಸೋದರರು ವಿಜಯನಗರದ ಸಿಂಹಾಸನವನ್ನು ತನಗೆ ಭದ್ರಪಡಿಸಿಕೊಡುವುದಾದರೆ, ಆದಿಲ್‌ಷಹನು ವಿಜಯನಗರದಲ್ಲಿರುವವರೆಗೂ, ಅವನ ಸೈನ್ಯದ ವೆಚ್ಚಕ್ಕೆ ದಿನಕ್ಕೆ ಮೂರು ಲಕ್ಷ ಪಗೋಡಗಳನ್ನು ಕೊಡುವುದಾಗಿ ವಾಗ್ದಾನಮಾಡಿದ್ದರು. ಇದರಿಂದ ಪ್ರೀತನಾದ ಸುಲ್ತಾನನು ಈ ಬಗ್ಗೆ ಸಲಕಂ ಸೋದರರೊಂದಿಗೆ ಒಂದು ಒಡಬಡಿಕೆಗೆ ಬಂದು ಶತ್ರುವೆಂದು ಪರಿಗಣಿತರಾಗಿದ್ದ ಅವರನ್ನು ಮಿತ್ರರನ್ನಾಗಿ ಪರಿಗ್ರಹಿಸಿದ್ದನು.

ಇದರಿಂದ ಸುಪ್ರಸನ್ನರಾದ ಸಲಕಂ ಸಹೋದರರು, ಆದಿಲ್‌ಷಹನನ್ನೂ ಅಸದ್‌ಖಾನನನ್ನೂ, ರಾಜಮರ್ಯಾದೆಯಿಂದ ನಗರದೊಳಗೆ ಕರೆಸಿಕೊಂಡು ಅವರಿಗೆ ರಾಜೋಚಿತವಾದ ಸನ್ಮಾನ ಮಾಡಿದ್ದರು.

ಅವರ ಸಲುವಾಗಿ ರಾಜಧಾನಿಯಲ್ಲಿ ಏಳುದಿನಗಳ ಕಾಲ ಹಬ್ಬವಾಚರಿಸಬೇಕೆಂದು ರಾಜಘೋಷಣೆ ಹೊರಡಿಸಿದರು. ಪ್ರತಿದಿನವೂ ಸತ್ಕಾರ ಸಮಾರಂಭಗಳು, ಔತಣ ಕೂಟಗಳು! ವಿಜಯನಗರದ ಎಲ್ಲ ವಿಲಾಸ ಭೋಗಗಳೂ ಅವರದಾದುವು. ಸಂಗೀತ, ನಾಟಕ, ನೃತ್ಯಗಳು ಅವರಿಗೆ ಕಾದಿದ್ದುವು—ನಗರದ ಗಾಯಕರು, ವೇಶ್ಯೆಯರು, ನರ್ತಕರು ಅವರ ಸೇವೆಗೆ ನಿಂತಿದ್ದರು. ಕೇವಲ ಸೌಜನ್ಯದ ಸಲುವಾಗಿ ನಡೆದಿದ್ದ ಈ ಭೇಟಿ, ಒಂದು ತಿಂಗಳಾದರೂ ಮುಗಿಯುವ ಸೂಚನೆ ತೋರಲಿಲ್ಲ.

ಸಲಕಂ ಸೋದರರ ಸತ್ಕಾರದಿಂದ ಪ್ರೀತನಾದ ಸುಲ್ತಾನನು ಕುಮಾರ ವೆಂಕಟಾದ್ರಿಯನ್ನು ಅಧಿಕಾರದಿಂದ ಕಿತ್ತು, ಪೆದ್ದ ತಿರುಮಲನನ್ನು ಸಿಂಹಾಸನ ದಲ್ಲಿ ಕೂಡಿಸಿ ಪಟ್ಟಗಟ್ಟಿ, ವಿಜಯನಗರದ ಸಾಮ್ರಾಟನೆಂದು ಘೋಷಿಸಿದನು. ಸಲಕಂ ಸೋದರರ ಬಹುದಿನಗಳ ಹಾರೈಕೆ ಕಡೆಗೂ ಈಡೇರಿತ್ತು. ಅವರನ್ನು ಈಗ ವಿರೋಧಿಸುವವರೇ ಇಲ್ಲವಾಗಿತ್ತು. ಅವರಿಗೆ ಇದ್ದ ಏಕ ಮಾತ್ರ ಪ್ರತಿ ಬಂಧಕ ವರದಾದೇವಿ ಮತ್ತು ಅವಳ ಕುಮಾರ! ಅವರೂ ಸೆರೆಯಲ್ಲಿದ್ದರು. ತಮಗೆ ಬೇಕೆನಿಸಿದಾಗ ಅವರನ್ನು ನಿವಾರಿಸಬಹುದಿತ್ತು. ಇದುವರೆಗೂ ಇದ್ದ ಮಹಮದೀಯರ ಭಯವೂ ತಪ್ಪಿ ಅವರೂ ಮಿತ್ರರಾಗಿದ್ದರು! ರಕ್ತದ ಹಾದಿ ಯಲ್ಲೇ ನಡೆದು ಆ ಸೋದರರು ತಮ್ಮ ಉದ್ದೇಶವನ್ನೂ ಸಾಧಿಸಿಕೊಂಡಿದ್ದರು. ಉಳಿದವರೆಂದರೆ ಅಳಿಯ ರಾಮರಾಯ ಮತ್ತು ತಿರುಮಲರಾಯ. ಅವರನ್ನು ಅಡಗಿಸಲು ಸುಲ್ತಾನ ಆದಿಲ್‌ಷಹನು ತನ್ನ ಸಹಾಯ ಮಾತ್ರವಲ್ಲದೆ ಉಳಿದ ಬಹಮುನೀ ಅರಸುಗಳಾದ ಬರೀದ್‌ಷಹ, ನಿಜಾಂಷಹ ಮತ್ತು ಕುತುಬ್ ಷಹರ ಸಹಾಯ ದೊರೆಕಿಸಿ ಕೊಡುವುದಾಗಿ ವಾಗ್ದಾನ ಮಾಡಿದ್ದ! ಇದರಿಂದ ಸಲಕಂ ಸೋದರರು ತಮಗೆ ಇದಿರೇ ಇಲ್ಲವೆಂಬಂತೆ ಅಧಿಕಾರೋನ್ಮತ್ತರಾಗಿ, ಅಟ್ಟಹಾಸದಿಂದ ವಿಜೃಂಭಿಸಿದರು.

ತಮ್ಮ ಕಾರ್ಯ ಯಶಸ್ವಿಯಾದ ಹಿಗ್ಗಿನಲ್ಲಿ, ಬಿಜಾಪುರದ ಸುಲ್ತಾನನನ್ನು ತಿಂಗಳ ಕಾಲ ಅತಿಥಿಯಾಗಿ ಆದರಿಸಿದ್ದರೂ, ಇಂದು ನಾಳೆ ಹೊರಡುವುದಾಗಿ ತಿಳಿಸಿ ಆದಿಲ್‌ಷಹನು ಮತ್ತೊಂದು ತಿಂಗಳು ತಳ್ಳಿದ. ಪ್ರತಿದಿನ ಸೈನ್ಯದ ವೆಚ್ಚಕ್ಕೆ ಸಲ್ಲುತ್ತಿದ್ದ ಮೂರು ಲಕ್ಷ ಪಗೋಡಗಳ ಸಲುವಾಗಿ ಯಾವುದಾದ ರೊಂದು ಕಾರಣದಿಂದ, ತಮ್ಮ ಪ್ರಯಾಣವನ್ನು ಮುಂದು ಹಾಕುತ್ತಿದ್ದಾರೆ ಎಂದು ಸಲಕಂ ಸಹೋದರರಿಗೆ ತಿಳಿಯದೆ ಹೋಗಲಿಲ್ಲ. ಈ ರೀತಿಯಲ್ಲಿ ಅವ ರಿಗೆ ಹಣವನ್ನು ಪೂರೈಸುತ್ತಾ ನಡೆದರೆ ಬೊಕ್ಕಸ ಬರಿದಾಗಿ, ರಾಜ್ಯಾಡಳಿತ ಕುಸಿದು ಬೀಳುವ ಹೆದರಿಕೆಯಾಯಿತು. ಈ ಬಗ್ಗೆ ಸುಲ್ತಾನನಿಗೆ ಪರೋಕ್ಷ ವಾಗಿ ತಿಳಿಸಿದರೂ ಪ್ರಯೋಜನವಾಗಲಿಲ್ಲ. ಅಸದ್‌ಖಾನನೊಡನೆ ಈ ಬಗ್ಗೆ ಮಾತನಾಡಿ ಯಾವುದನ್ನೂ ನಿರ್ಧರಿಸಬೇಕೆಂದು ಅವನಿಗೇ ಶರಣು ಬಂದರು.

ಅಸದ್‌ಖಾನನು ಅವರು ಬಂದ ಕಾರಣವನ್ನು ಊಹಿಸಿಕೊಂಡ. ಲೋಕಾ ಭಿರಾಮದ ಮಾತುಕಥೆಗಳು ಮುಗಿದ ಮೇಲೆ ಪೆದ್ದ ತಿರುಮಲ ಹೇಳಿದ.

"ನಾವು ನಿಮ್ಮನ್ನು ಇನ್ನೂ ಹೆಚ್ಚು ಕಾಲ ಅತಿಥಿಗಳಾಗಿ ಇಟ್ಟುಕೊಳ್ಳುವ ಆಶೆಯವಿತ್ತು. ಆದರೆ ಸದ್ಯದ ಸ್ಥಿತಿಯಲ್ಲಿ ಸಾಧ್ಯವಿಲ್ಲವಾಗಿದೆ...."

"ನಿಮಗೆ ತೊಂದರೆ ಕೊಟ್ಟುಕೊಂಡು ನಾವು ಹೆಚ್ಚು ಕಾಲ ಇರುವುದಿಲ್ಲ. ಮಳೆಗಾಲ ಕಳೆದೊಡನೆಯೇ ನಾವು ಶಿಬಿರವನ್ನು ಕೀಳುತ್ತೇವೆ!"

"ಹಾಗಾದರೆ ನೀವು ಇನ್ನೂ ಒಂದು ತಿಂಗಳು ಇಲ್ಲಿರಲು ನಿಶ್ಚಯಿಸಿದ್ದೀರಾ?" ನಿರಾಶೆಯಿಂದ ಕೇಳಿದ ಪೆದ್ದ ತಿರುಮಲ.

"ಏಕೆ? ನಿಮಗೆ ನಮ್ಮಿಂದ ತೊಂದರೆಯಾಗುವಂತಿದ್ದರೆ ಮೊದಲೇ ತಿಳಿಸಬಹುದಿತ್ತಲ್ಲಾ." ಎಂದ ಕಟುವಾಗಿ ಅಸದ್ ಖಾನ್.

"ನಮ್ಮ ಸ್ಥಿತಿಗತಿಗಳು ನಿಮಗೆ ತಿಳಿಯದೆ ಇಲ್ಲ. ದಿನವೊಂದಕ್ಕೆ ಮೂರು ಲಕ್ಷ ಪಗೋಡ ನಿಮ್ಮ ವೆಚ್ಚವಹಿಸಿಕೊಳ್ಳುವುದು ನಮ್ಮಿಂದ ಹೆಚ್ಚುಕಾಲ ಸಾಧ್ಯವಾಗಲಾರದು. ಹೆಚ್ಚೇಕೆ ಇನ್ನೆಂಟು ದಿನಗಳೂ ಸಹ ವೆಚ್ಚವನ್ನು ವಹಿಸಿಕೊಳ್ಳಲು ಸಾಧ್ಯವಿಲ್ಲವಾಗಿದೆ. ನೀವು ಏನಾದರೂ ಮಾಡಿ ಇನ್ನು ಎರಡು ಮೂರುದಿನಗಳೊಳಗೆ ತಳ ಕದಲಿಸುವ ಪ್ರಯತ್ನ ಮಾಡಿದರೆ ನಾವು ನಿಮಗೆ ಕೃತಜ್ಞರಾಗಿರುತ್ತೇವೆ!"

"ಶಿಬಿರವನ್ನು ಇಷ್ಟು ಅಲ್ಪ ಕಾಲಾವಧಿಯಲ್ಲಿ ಕಿತ್ತು ಹೊರಡುವುದು ಕಷ್ಟ."

"ನೀವು ಮನಸ್ಸುಮಾಡಿದರೆ ಸಾಧ್ಯ! ನೀವು ಸುಲ್ತಾನರನ್ನು ಒಪ್ಪಿಸಿದರೆ ನಿಮ್ಮ ಶ್ರಮ ನಿರರ್ಥಕವಾಗುವುದಿಲ್ಲ!"

"ನಮ್ಮ ಸುಲ್ತಾನರನ್ನು ಒಪ್ಪಿಸುವುದು ಕಷ್ಟ. ಅವರು ಇಲ್ಲಿಂದ ಬರಿಗೈಯಲ್ಲಿ ಹೋಗಲಾರರು!"

"ಅವರಿಂದ ನಮಗೆ ಇನ್ನೂ ಸಹಾಯವಾಗಬೇಕಾಗಿದೆ—ಅವರಿಗೆ ನಾವು ಕಾಣಿಕೆಯಾಗಿ ಇಪ್ಪತ್ತು ಲಕ್ಷ ಪಗೋಡಗಳನ್ನು ಕೊಡುತ್ತೇವೆ. ಹನ್ನೆರಡು ರಾಜಯೋಗ್ಯವಾದ ಆನೆಗಳು, ಇನ್ನೂರು ಕುದುರೆಗಳು—ಮತ್ತಿತರ ಅನರ್ಘ್ಯವಾದ ವಡವೆ ವಸ್ತುಗಳನ್ನು ಕೊಡುತ್ತೇವೆ. ಅವರು ಸಂತೋಷದಿಂದಲೇ ಇಲ್ಲಿಂದ ಹೊರಡಬೇಕೆಂದು ನಮ್ಮ ಇಷ್ಟ!"

"ಸುಲ್ತಾನರೇನೋ ಸಂತೋಷಚಿತ್ತದಿಂದ ಹೊರಡುತ್ತಾರೆ. ಆದರೆ ಇಷ್ಟೆಲ್ಲಾ ಶ್ರಮವಹಿಸಿದ ನನಗೇನು ಲಾಭ?"

"ನಿಮಗೆ ಒಂದು ಲಕ್ಷ ಪಗೋಡಗಳು, ಒಂದು ಆನೆ, ಐವತ್ತು ಕುದುರೆ ಮತ್ತಿತರ ಬೆಲೆಬಾಳುವ ವಡವೆಗಳನ್ನು ಕೊಡುತ್ತೇವೆ—ಸಮ್ಮತವೆ?"

"ಆಗಲಿ ಪ್ರಯತ್ನಿಸುತ್ತೇನೆ" ಎಂದು ಅಸದ್ ಖಾನನು ಹೇಳಿದನಾದರೂ ಅವನು ಆ ಕಾರ್ಯ ಸಾಧಿಸುವ ಬಗ್ಗೆ, ಸಲಕಂ ಸೋದರರಿಗೆ ಸಂಶಯ ಉಳಿಯಲಿಲ್ಲ. ಮೂರನೆ ದಿನವೇ ಶಿಬಿರವನ್ನು ಕೀಳುವ ಸುವಾರ್ತೆಯನ್ನು ತಂದ ಅಸದ್ ಖಾನ್.

ಆದಿಲ್‌ಷಹನು ಹೊರಡುವಾಗ, ಸಲಕಂ ಸೋದರರು ಅಸದ್ ಖಾನನಿಗೆ ಹೇಳಿದ್ದ ಮಾತಿನಂತೆ, ನಡೆದುಕೊಂಡರು. ಹೀಗೆ ಬಿಜಾಪುರದವರು ಬರು

ವಾಗ ಶತ್ರುಗಳಾಗಿ ಬಂದವರು, ವಿಜಯನಗರದಿಂದ ಹೊರಡುವಾಗ, ಮಿತ್ರರಾಗಿ ಹೊರಟಿದ್ದರು; ಅವರು ಯುದ್ಧವಿಲ್ಲದೆ ವಿಜಯನಗರದ ಅರಸರನ್ನು ತಮ್ಮ ಆಶ್ರಿತರಾಜರಾಗಿ ಮಾಡಿಕೊಂಡಿದ್ದರು.

ಬಿಜಾಪುರದ ಸುಲ್ತಾನನನ್ನು ಅತ್ತ ಕಳುಹಿಸಿ, ವಿಜಯನಗರದ ಅರಸರು ತಾವು ಸಂಗ್ರಹಿಸಿದ್ದ ಒಂಭತ್ತು ಕೋಟಿ ಪಗೋಡಗಳಲ್ಲಿ ಎಷ್ಟು ಉಳಿದಿದೆ ಎಂದು ರಾಜಭಂಡಾರದ ಮುದ್ರೆಯನ್ನು ಒಡೆದು ನೋಡುತ್ತಾರೆ! ಅಲ್ಲಿ ಕೇವಲ ಮೂರು ತಾಮ್ರದ ನಾಣ್ಯಗಳು ಮಾತ್ರ ಉಳಿದಿದ್ದುವು. ಚಿನ್ನ, ಬೆಳ್ಳಿ, ಮುತ್ತು, ರತ್ನ, ಒಡವೆ ವಸ್ತುಗಳನ್ನು ಬಿಟ್ಟು ಅವರದಾಗಿ ಉಳಿದಿದ್ದ ಹಣ – ಕೇವಲ ಮೂರು ತಾಮ್ರದ್ಗಗಡ್ಯಾಣಗಳು! ಇದನ್ನು ನೋಡಿ ಅವರ ಎದೆಯೊಡೆಯಿತು! ಇಷ್ಟಕ್ಕಾಗಿ ತಾವು ಇಷ್ಟೆಲ್ಲಾ ಸಾಹಸಪಡಬೇಕಾಯಿತೆ? ಎಂದುಕೊಂಡರು. ಆ ಮೂರು ಗಡ್ಯಾಣಗಳು ಅವರನ್ನು ಮೂದಲಿಸುತ್ತಿರುವಂತೆ ಭಾಸವಾಯಿತು! ಅವರು ಭಾರವಾದ ನಿಟ್ಟುಸಿರುಬಿಟ್ಟರು.

೨೫

ಈಗ ಬರಿದಾಗಿದ್ದ ಭಂಡಾರವನ್ನು ಮತ್ತೆ ತುಂಬಲು ಹೊಸ ತೆರಿಗೆ, ಸುಂಕ, ಕಂದಾಯಗಳನ್ನು ಸಲಕಂ ಸೋದರು ನಿಷ್ಕರುಣೆಯಿಂದ ಜನರ ಮೇಲೆ ಹೇರಿದರು. ಅವರಿಗೆ ಹಣದ ಆವಶ್ಯಕತೆ ಮಿತಿಮೀರಿತ್ತು. ಅವರು ಈ ಮೊದಲೇ, ರಾಜಧಾನಿಯ ಶ್ರೀಮಂತರನ್ನೆಲ್ಲಾ ದೋಚಿದ್ದರು. ಈಗ ಮಧ್ಯಮ ವರ್ಗದವರನ್ನು ಒಬ್ಬರನ್ನೂ ಬಿಡದಂತೆ ಸುಲಿದರು. ಇದರಿಂದ ಹೆಚ್ಚು ಹಣ ಸಂಗ್ರಹವಾಗಲಿಲ್ಲ. ಅವರ ಬಗ್ಗೆ ಮತ್ತಷ್ಟು ದ್ವೇಷ ಬೆಳೆಯಿತು. ಈಗ ಅವರ ದೃಷ್ಟಿ ವರದಾದೇವಿಯ ಅರಮನೆಯಲ್ಲಿದ್ದ ಬೆಲೆಬಾಳುವ ವಸ್ತುಗಳ ಮೇಲೆ ಬಿತ್ತು. ಅದನ್ನು ಕೈವಶ ಮಾಡಿಕೊಳ್ಳಲು ಅವರು ಹೊರಟಾಗ ವರದಾದೇವಿ ಅವರನ್ನು ಪ್ರತಿಭಟಿಸಿದಳು.

"ಇವುಗಳನ್ನು ಮುಟ್ಟುವ ಹಕ್ಕಿಲ್ಲ ನಿಮಗೆ. ಇವು ನನ್ನ ಸ್ವಂತ ಆಸ್ತಿ." ಎಂದು ಸಿಂಹಿಣಿಯಂತೆ ಆವೇಶದಿಂದ ಗರ್ಜಿಸಿದಳು.

"ಇಲ್ಲಿನ ಬಹುಪಾಲು ಒಡವೆ, ವಸ್ತುಗಳನ್ನು ನಾವು ನಿನಗೆ ಬಹುಮಾನವಾಗಿ ಕೊಟ್ಟ ಕಾಣಿಕೆ. ಇವುಗಳನ್ನು ಮತ್ತೆ ಹಿಂದಕ್ಕೆ ತೆಗೆದುಕೊಂಡು ಹೋಗುವ ಹಕ್ಕಿದೆ ನಮಗೆ" ಎಂದ ಪೆದ್ದ ತಿರುಮಲ.

"ರಾಜಧಾನಿಯ ಶ್ರೀಮಂತರನ್ನೂ, ರಾಜಭಂಡಾರವನ್ನೂ ದೋಚಿ, ಈಗ ಇಲ್ಲಿಗೂ ಬಂದಿರಾ? ಇದು ನನ್ನ ಅಂತಃಪುರ. ಇದರ ಅಧಿಕಾರಿ ನಾನು ಮಾತ್ರ."

“ವಿಜಯನಗರದ ಸಾಮ್ರಾಟರ ಮೇಲೆ ನಿನ್ನ ಅಧಿಕಾರ ನಡೆಯುವುದಿಲ್ಲ.”

“ಯಾರು ವಿಜಯನಗರದ ಸಾಮ್ರಾಟರು?”

“ನಾನು!”

“ಸಾಧ್ಯವೇ ಇಲ್ಲ. ನಾನು ಬದುಕಿರುವವರೆಗೆ, ಕುಮಾರ ಜೀವಂತನಾಗಿರುವವರೆಗೂ, ಸಿಂಹಾಸನ ನಿಮ್ಮದಾಗುವುದೆಂದು ಕನಸಿನಲ್ಲೂ ತಿಳಿಯಬೇಡಿ.”

“ಕುಮಾರನನ್ನು ರಾಜದ್ರೋಹದ ಸಲುವಾಗಿ ಸಿಂಹಾಸನದಿಂದ ತಳ್ಳಿ, ನಮ್ಮನ್ನು ಬಿಜಾಪುರದ ಸುಲ್ತಾನರು ವಿಜಯನಗರದ ಸಾಮ್ರಾಟರಾಗಿ ಮಾಡಿದ್ದಾರೆ!”

“ಸಿಂಹಾಸನವನ್ನು ನಿಮ್ಮಿಂದ ಕಿತ್ತು ನಿಮಗೆ ಕೊಡುವ ಅಧಿಕಾರ ಆ ದ್ರೋಹಿಗಿಲ್ಲ.”

“ಈ ಮೊದಲೇ ಎಲ್ಲಿ ಹೋಗಿತ್ತು ಈ ಬುದ್ಧಿ? ಅವರೊಡನೆ ಸಂಚು ನಡೆಸಿದಾಗ ಎಲ್ಲಿತ್ತು ಈ ಬುದ್ಧಿ?”

“ನಮಗೆ ದ್ರೋಹ ಬಗೆದ ಆ ನೀಚನ ಹೆಸರೆತ್ತಬೇಡ.”

“ಅವರು ಎಂದು ತಾನೇ ನಮ್ಮ ಮಿತ್ರರಾಗಿದ್ದರು? ಅಂತಹವರ ಸಹಾಯ ಕೋರಿದುದು ಅವಿವೇಕವಾಯಿತೆಂದು ಈಗಲಾದರೂ ನಿನಗೆ ತಿಳಿಯಿತೆ? ನೀವು ಮಾಡಿದ ದ್ರೋಹ ನಿಮ್ಮನ್ನೇ ನುಂಗಿತು.”

“ನಾವು ಮಾಡಿದ ದ್ರೋಹ ನಮ್ಮನ್ನು ನುಂಗಿತು! ದಿಟ. ನೀವು ಮಾಡಿದ ದ್ರೋಹ ನಿಮ್ಮನ್ನು ನುಂಗುತ್ತದೆ!”

“ನಾವು ಯಾರಿಗೂ ದ್ರೋಹವೆಸಗಲಿಲ್ಲ.”

“ನನಗೆ ಎಸೆಗಿದ್ದೀರಿ.... ಈ ಕುಮಾರನಿಗೆ ಎಸಗಿದ್ದೀರಿ! ಸಾಮ್ರಾಜ್ಯಕ್ಕೆ ಸಗಿದ್ದೀರಿ!”

“ಇದು ನಿಮ್ಮ ತಪ್ಪುಕಲ್ಪನೆ! ನಾವು ಯಾವಾಗಲೂ ನಿಷ್ಠೆಯಿಂದ ಇದ್ದೇವೆ.”

“ನಿಮ್ಮ ನಿಷ್ಠೆ ಎಂತಹುದೆಂದು ನಮಗೆ ತಿಳಿದಿದೆ – ನಾವು ಎಂತಹ ಹಾವಿಗೆ ಹಾಲೆರೆದೆವೆಂದು ಈಗ ತಿಳಿಯುತ್ತಿದೆ!”

“ನಿಮ್ಮಿಂದಾಗಿರುವ ಉಪಕಾರಕ್ಕೆ ನಾವು ಕೃತಜ್ಞರಾಗಿದ್ದೇವೆ!”

“ಹೌದು ಕೃತಘ್ನರಾಗಿದ್ದೀರಿ. ಬೆನ್ನಿನಲ್ಲಿ ಇರಿದು ಹಾಲು ಕೊಟ್ಟವರಿಗೆ ಹಾಲಾಹಲ ಉಣಿಸಿದಿರಿ! ವಿಶ್ವಾಸ ತೋರಿದವರಿಗೆ ವಿಷವಿಟ್ಟಿರಿ! ನೀವು, ನೀಚರು, ಪಾಪಿಗಳು, ಕೃತಘ್ನರು! ನಿಮ್ಮ ಮುಖದರ್ಶನ ಮಾಡಿದರೆ, ನಿಮ್ಮ ಪಾಪದ ಸೋಂಕು ನಮ್ಮದಾಗುತ್ತದೆ!”

" ನಾವು ನಿಮ್ಮೊಡನೆ ಹರಟಲು ಬರಲಿಲ್ಲ!"

" ನಿಮ್ಮಂಥಹ ದ್ರೋಹಿಗಳೊಂದಿಗೆ ಮಾತನಾಡಲು ನನಗೂ ಇಷ್ಟವಿಲ್ಲ!"

ಎಂದು ಹೇಳಿ ಅಲ್ಲಿ ನಿಲ್ಲದೆ ಹೊರಟುಹೋದಳು. ಆಗ ಸಲಕಂ ಸೋದರರು ಏನು ಮಾಡಬೇಕೆಂದು ತಿಳಿಯದೆ, ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಅವರಿಗೆ ಅದೇನೆನಿಸಿತೋ, ಅಲ್ಲಿ ಗೆಲುಮುಖದಲ್ಲೇ ಹೊರಟರು. ಹೊರಡುವಾಗ ಹನುಮನಾಯಕನ ಕಿವಿಯಲ್ಲಿ ಏನೋ ಉಸುರಿ ಹೋಗಿದ್ದರು.

ಮೂರು ನಾಲ್ಕು ದಿನಗಳು ಹೆಚ್ಚಿನ ಘಟನೆಗಳಿಲ್ಲದೆ ಕಳೆದುವು. ಆದರೂ ಹಠಾತ್ತನೆ ಆವರಿಸಿದ್ದ ಮೌನ, ಅವಳ ಎದೆಯಲ್ಲಿ ಯಾವುದೋ ಅವ್ಯಕ್ತ ಭೀತಿಯನ್ನು ಉಂಟುಮಾಡಿತ್ತು. ಅವರ ವಿದ್ರೋಹವೇನೆಂದು ತಿಳಿಯದಿದ್ದರೂ, ಅವಳ ಎದೆ ಪುಟಿಸುತ್ತಿತ್ತು. ಅವಳು ತನ್ನ ಎಚ್ಚರದಲ್ಲಿದ್ದಳು. ಆದರೆ ಎಷ್ಟು ಎಚ್ಚರದಲ್ಲಿದ್ದರೇನು? ನಡೆಯಬೇಕಾದ ಘಟನೆ ನಡೆದು ಹೋಗಿತ್ತು.

ಆ ದಿನ ವರದಾದೇವಿಗೆ ಎಂದೂ ಇಲ್ಲದ ನಿದ್ರೆ ಬಂದುಬಿಟ್ಟಿತ್ತು. ಇಂತಹ ಗಾಢನಿದ್ರೆ ಬಂದು ಬಹಳ ದಿನಗಳಾಗಿತ್ತು. ಎಚ್ಚೆತ್ತ ಕೂಡಲೇ ರಾತ್ರಿ ತನ್ನ ಬಳಿಯಲ್ಲೇ ಮಲಗಿದ್ದ ಕುಮಾರನಿಗಾಗಿ ಕೈಚಾಚಿದಳು. ಸಿಕ್ಕಿದ್ದು ಬರಿಯ ದಿಂಬು ಮಾತ್ರ. ಅವಳು ಗಾಬರಿಗೊಂಡು, ಎಚ್ಚೆತ್ತು ಸುತ್ತಲೂ ನೋಡಿದಳು, ಕುಮಾರನು ತನಗಿಂತ ಮೊದಲೇ ಎದ್ದು ಎಲ್ಲಿಯಾದರೂ ಹೋಗಿರಬಹುದೆಂದು ಸುತ್ತಲೂ ನೋಡಿದಳು. ದಾಸಿಯರನ್ನು ವಿಚಾರಿಸಿದಳು, ಸೇವಕರನ್ನು ಪ್ರಶ್ನಿಸಿದಳು. ಯಾರಿಂದಲೂ ಸಮಂಜಸವಾದ ಉತ್ತರ ಬರಲಿಲ್ಲ. ರಾತ್ರಿ ತನ್ನ ಹಾಸಿಗೆಯಲ್ಲೇ ಮಲಗಿದ್ದ ಕುಮಾರ ಎಲ್ಲಿಗೆ ಹೋಗಿರಬಹುದು? ತನಗೆ ಮತ್ತು ಬರುವಂತೆ ಮಾಡಿ, ತನ್ನ ಸೋದರರು ಕುಮಾರನನ್ನಪಹರಿಸಿರಬಹುದೆ? ಎಂಬ ಆಲೋಚನೆ ಬಂತು. ಇದು ಬಂದುದೇ ತಡ, ಅವಳ ಮೈ ನಡುಗಿ ದೊಡ್ಡ ಧ್ವನಿಯಲ್ಲಿ ರೋದಿಸತೊಡಗಿದಳು.

ಕುಮಾರ ವೆಂಕಟಾದ್ರಿ ಬದುಕಿರುವವರೆಗೆ, ಸಿಂಹಾಸನ ಅವರಿಗೆ ದಕ್ಕುವುದಿಲ್ಲವೆಂದು ವರದಾದೇವಿ ತನ್ನ ಸೋದರರನ್ನು ಅಂದು ಮೂದಲಿಸುತ್ತಿದ್ದಳು. ಬಂಧನದಲ್ಲಿದ್ದ ಕುಮಾರನಿಂದ ತಮಗೆ ಯಾವ ತೊಂದರೆಯೂ ಇಲ್ಲವೆಂದು, ಅವರೂ ಅವನ ಬಗ್ಗೆ ಉದಾಸೀನರಾಗಿದ್ದರು. ವರದಾದೇವಿಯು ಮಾತಿನ ಚಾಟಿಯ ಪೆಟ್ಟಿನಿಂದ ಅವರು ಎಚ್ಚರಗೊಳ್ಳುವಂತೆ ಮಾಡಿದ್ದಳು. ಕುಮಾರನು ಉಳಿದಿರುವವರೆಗೆ ತಮಗೆ ಸಿಂಹಾಸನ ಭದ್ರವಿಲ್ಲವೆಂದು ತಿಳಿದ ಅವರು, ಕುಮಾರನನ್ನು ನಿವಾರಿಸಲು ಅಂದೇ ನಿರ್ಧರಿಸಿದರು. ಒಂದು ನಿಮಿಷವೂ ಎಡಬಿಡದೆ ಮಗನೊಂದಿಗಿರುತ್ತಿದ್ದ ವರದಾದೇವಿಯ ಕಣ್ಣು ತಪ್ಪಿಸಿ ಕಾರ್ಯ ಸಾಧಿಸುವುದು ಕಷ್ಟವಾಗಿತ್ತು. ಆದರೆ ವರದಾದೇವಿ ಕುಡಿಯುವ ಹಾಲಿನಲ್ಲಿ ಮತ್ತುಬರು

ವಂತೆ ಔಷಧಿಯನ್ನು ಹಾಕಿ, ಅಂದು ತಮ್ಮ ಕಾರ್ಯ ಸಾಧಿಸಿದ್ದರು. ಅದರಂತೆ ವರದಾದೇವಿ ಗಾಢನಿದ್ರೆಗೊಳಗಾದಾಗ ಕುಮಾರನನ್ನು ಅಪಹರಿಸಿ, ಕಟ್ಟುಕರ ಪಾಲು ಮಾಡಿದ್ದರು.

ವರದಾದೇವಿ ಮಗನನ್ನು ಕಾಣದೆ ಅನ್ನ ನೀರು ಬಿಟ್ಟು ರೋದಿಸಿದಳು. ಅವಳ ಮಾತೃಹೃದಯ ಕುಮಾರನ ಸದ್ಗುಣಗಳನ್ನು ನೆನೆಸಿಕೊಂಡು ಹಂಬಲಿಸಿತು. ಅವನನ್ನು ತನಗೆ ದೊರಕಿಸಿಕೊಡುವಂತೆ ಅಂತಃಪುರದಲ್ಲಿದ್ದ ಪ್ರತಿಯೊಬ್ಬರಿಗೂ, ಮೊರೆಯಿಟ್ಟಳು. ಎಲ್ಲರೂ ಮಹಾರಾಣಿಯ ಸ್ಥಿತಿಯನ್ನು ಕಂಡು ಮರುಗಿದರೇ ಹೊರತು ಅವರು ಏನೂ ಮಾಡಲಾಗದ ಸ್ಥಿತಿಯಲ್ಲಿದ್ದರು. ಅವಳನ್ನು ಆ ಸ್ಥಿತಿಯಲ್ಲಿ, ಅಲ್ಲಿಯೇ ಬಿಟ್ಟರೆ ಅನಾಹುತವಾಗಬಹುದೆಂದು ಹೆದರಿದರು. ಬೇರೆಡೆಗೆ ಆಕೆಯನ್ನು ಸಾಗಿಸಲು ಅವರು ಮಾಡಿದ ಪ್ರಯತ್ನ ನಿರರ್ಥಕವಾಯಿತು.

ಹನುಮನಾಯಕನು ವರದಾದೇವಿಯ ಮೇಲೆ ಕರುಣೆ ಬಂದವನಂತೆ ನಟಿಸಿ ಆ ದಿನ ಅವಳಿಗೆ ಪ್ರಿಯವಾದ ಸುದ್ದಿ ತಿಳಿಸಿದನು.

“ನಿಮ್ಮ ಕುಮಾರ ಜೀವಂತವಾಗಿ ಸೌಖ್ಯವಾಗಿದ್ದಾನೆ. ಅವನನ್ನು ನಿಮ್ಮಿಂದ ಬೇರ್ಪಡಿಸಿ ಬೇರೆ ಕಡೆ ಇಡಲಾಗಿದೆ!” ಎಂಬ ಸುದ್ದಿ ತಿಳಿಸಿದನು.

“ನಾನು ಕುಮಾರನನ್ನು ನೋಡಬೇಕು! ಕುಮಾರನನ್ನು ನೋಡಬೇಕು. ನನ್ನನ್ನು ಅಲ್ಲಿಗೆ ಕರೆದೊಯ್ಯಿರಿ!” ಎಂದು ಹಲುಬಿದಳು. ಅವಳ ಕೋರಿಕೆಯಂತೆ ವರದಾದೇವಿಯನ್ನು ಬೇರೆಡೆಗೆ ಕರೆದೊಯ್ದು ಬಂಧಿಸಲಾಯಿತು. “ಕುಮಾರನೆಲ್ಲಿ?” ಎಂಬ ಅವಳ ಪ್ರಶ್ನೆಗೆ

“ನೀವು ಗದ್ದಲ ಮಾಡದಿದ್ದರೆ ಕೊಂಚ ಹೊತ್ತಿನಲ್ಲೇ ಕಳುಹಿಸಿಕೊಡುತ್ತೇನೆ” ಎಂದು ಹೇಳಿ ಹನುಮನಾಯಕನು ಹೊರಟುಹೋದ.

ವರದಾದೇವಿ ಅವನ ಮಾತನ್ನು ನಂಬಿ ಕುಮಾರನಿಗಾಗಿ ಕಾದು ಕುಳಿತಳು. ಸುಮಾರು ಅರ್ಧ ತಾಸು ಕಳೆದ ಮೇಲೆ ಸೈನಿಕನೊಬ್ಬನು ಬಂದು ಎದುರಿಗೆ ನಿಂತ.

“ಎಲ್ಲಿ ಕುಮಾರ? ಎಲ್ಲಿ ಕುಮಾರ?” ಆತಂಕಗೊಂಡು ಕೇಳಿದಳು.

“ಪ್ರಭುಗಳು ಕುಮಾರನ....”

“ಏನು ಏನು? ಕುಮಾರನೆಲ್ಲಿ?”

“ಕ್ಷಮಿಸಬೇಕು ತಾಯಿ, ಪ್ರಭುಗಳು ಕುಮಾರನ ಈ ವಸ್ತ್ರವನ್ನು ತಮಗೆ ತಲುಪಿಸಲು ಆಜ್ಞೆ ಮಾಡಿದ್ದಾರೆ!” ಎಂದು ಗದ್ಗದ ಕಂಠದಲ್ಲಿ ಹೇಳಿ ಅಲ್ಲಿ ನಿಲ್ಲದೆ ಹೊರಟುಹೋದ.

“ಹಾ ಕುಮಾರ! ನೀನೂ ನನ್ನನ್ನು ಆಗಲಿದೆಯಾ?” ಎಂದು ಚೀರಿ

ಮೂರ್ಛಿತಳಾದಳು. ವರದಾದೇವಿ ಇಲ್ಲಿ ಕುಮಾರನಿಗಾಗಿ ಚೀರುತ್ತಿದ್ದರೆ, ಅಲ್ಲಿ ಅವಳ ಅಂತಃಪುರದಲ್ಲಿದ್ದ ಅಮೂಲ್ಯವಾದ ವಸ್ತುಗಳ ಸುಲಿಗೆಯಾಗುತ್ತಿತ್ತು. ಇಲ್ಲಿ ಅವಳು ಪುತ್ರವಿಯೋಗದಿಂದ ಕಂಬನಿಗರೆಯುತ್ತಿದ್ದರೆ, ಅಲ್ಲಿ ಅವಳ ಸೋದರರು ಮದೋನ್ಮತ್ತರಾಗಿ ಅಟ್ಟಹಾಸಗೈಯುತ್ತಿದ್ದರು.

ಕಡೆಗೂ ಅಚ್ಯುತರಾಯನ ಮಾತು ಸತ್ಯವಾಗಿತ್ತು. ಅವರನ್ನು ವಿರೋಧಿಸಿದ ಯಾರೂ ಉಳಿಯುವುದಿಲ್ಲವೆಂಬ ಮಾತು ಅಕ್ಷರಶಃ ಸತ್ಯವಾಗಿತ್ತು. ಅವರು ವರದಾದೇವಿಯ ಮಾತಿನಿಂದ ಎಚ್ಚೆತ್ತು ಕುರಿಯನ್ನು ಕಟುಕರ ಪಾಲುಮಾಡುವಂತೆ, ಕುಮಾರನನ್ನು ಕಟುಕರ ಪಾಲುಮಾಡಿದ್ದರು. ಅಲ್ಲಿಗೆ ಕುಮಾರನ ಕಥೆ ಮುಗಿದಂತಾಗಿತ್ತು. ಅವನ ನೆನಪಿಗಾಗಿ ಉಳಿದಿದ್ದ ಅವನು ಉಟ್ಟ ವಸ್ತ್ರಗಳನ್ನು ಅವನ ತಾಯಿಗೆ ಉಡುಗೊರೆಯಾಗಿ ಕಳುಹಿದ್ದರು. ಯಾರಿಗೂ ಹೆದರದಿದ್ದ ಅವರು, ತಮ್ಮ ತಂಗಿಗೆ ಈ ಸುದ್ದಿಯನ್ನು ಹೇಳಲು ಹೆದರಿದ್ದರು. ಅಂತಲೇ ಅವಳ ಮುಖದರ್ಶನಕ್ಕೆ ಹೆದರಿ ಹೀಗೆ ಕುಮಾರನ ವಿಯೋಗದ ಸುದ್ದಿಯನ್ನು ತಿಳಿಸಿದ್ದರು.

ವೆಂಕಟಾದ್ರಿಯ ಕೊಲೆಯಿಂದ ವಿಜಯನಗರದ ಸಿಂಹಾಸನ ಎಂದೆಂದಿಗೂ ಅವರದಾಯಿತು. ಆದರೂ ಚಂದ್ರಗಿರಿಯಲ್ಲಿದ್ದ ಅಚ್ಯುತರಾಯನ ತಮ್ಮ ರಂಗರಾಯನ ಮಗ ಸದಾಶಿವರಾಯನು ಬದುಕಿರುವತನಕ ತಮಗೆ ಸಿಂಹಾಸನ ಭದ್ರವಿಲ್ಲವೆಂದು ಅರಿತು ಅವನನ್ನು ಸೆರೆ ಹಿಡಿದು ತರಲು ದೂತರನ್ನು ಚಂದ್ರಗಿರಿಗೆ ಅಟ್ಟಿದರು. ಈ ವಾರ್ತೆಯನ್ನು ಕೇಳಿದ ಸದಾಶಿವರಾಯನು ಚಂದ್ರಗಿರಿಯಿಂದ ಓಡಿಹೋಗಿ ಗುತ್ತಿಯಲ್ಲಿ ತಲೆ ತಪ್ಪಿಸಿಕೊಂಡನು. ಅವನು ಎಲ್ಲಿಗೆ ಹೋದನೆಂದು ಸಲಕಂ ಸಹೋದರರಿಗೆ ತಿಳಿಯದೆ ಹೋಯಿತು. ಆ ಬಾಲಕನಿಂದ ತಮಗೆ ಯಾವ ತೊಂದರೆ ಬಾರದೆಂದು ಅವರು ಆ ಬಗ್ಗೆ ನಿರ್ಲಕ್ಷ ತಾಳಿ ನಿಶ್ಚಿಂತರಾದರು!

ಸಲಕಂ ಸೋದರರಿಗೆ ಈಗ ಅವರು ಬಯಸಿದುವೆಲ್ಲವೂ ಅವರದಾಗಿತ್ತು. ಆದರೂ ಅವರ ಮನಸ್ಸಿಗೆ ಮಾತ್ರ ನೆಮ್ಮದಿ ಇಲ್ಲದೆ ಹೋಗಿತ್ತು. ಒಮ್ಮೆ ಅವರು ತಮ್ಮ ಬಾಳಿನ ಆದರ್ಶವನ್ನು ಸಾಧಿಸಿಕೊಂಡ ಮೇಲೆ, ಅವರ ಜೀವನವನ್ನು ಯಾವುದೋ ಬಗೆಯ ಶೂನ್ಯತೆ ಆವರಿಸಿತ್ತು. ಸದಾ ಅವರ ಮನಸ್ಸಿನ ಶಾಂತಿಯನ್ನು ಕದಡುವಂತಹ ಯಾವುದಾದರೊಂದು ಸುದ್ದಿ ಇದ್ದೇ ಇರುತ್ತಿತ್ತು. ಎಲ್ಲಕ್ಕಿಂತಲೂ ಮಿಗಿಲಾಗಿ ಅವರಿಗೆ ಬೇಸರ ತರುತ್ತಿದ್ದ ಸಂಗತಿ ಎಂದರೆ, ಬರಿದಾದ ಬೊಕ್ಕಸವನ್ನು ನಂಬಿ ತಾವು ಹೇಗೆ ಆಡಳಿತ ನಡಸಬೇಕೆಂಬುದೇ ಆಗಿತ್ತು. ಈ ಚಿಂತೆ ದಿನದಿನಕ್ಕೂ ಅವರ ಎಲ್ಲ ಸುಖವನ್ನು ಆಪೋಶನ ತೆಗೆದುಕೊಳ್ಳುತ್ತಿತ್ತು.

ಹಣಕಾಸಿನ ಚಿಂತೆಯನ್ನು ಬಗೆಹರಿಸಿಕೊಳ್ಳಲು ಈಗ ಅವರಿಗೆ ಯಾವ

ಮಾರ್ಗವೂ ಉಳಿದಿರಲಿಲ್ಲ. ಈಗ ದೇಶದ ಮೂಲೆ ಮೂಲೆಗಳಲ್ಲಿ ಜನ ಅವನ ವಿರುದ್ಧ ದಂಗೆ ಏಳಲು ಉತ್ಸುಕರಾಗಿದ್ದರು. ಅವರು ವಿಧಿಸಿದ್ದ ಹೊಸ ಸುಂಕ, ತೆರಿಗೆಗಳನ್ನು ಕೊಡಲು ಒಪ್ಪದೆ ಹೋಗಿದ್ದರು – ಅವರನ್ನು ಬಲಾತ್ಕರಿಸಲು ಹೋದ ಸೈನಿಕರು, ಜನತೆಯ ಆಕ್ರೋಶಕ್ಕೆ ಗುರಿಯಾಗಿ ಪ್ರಾಣ ಕಳೆದುಕೊಳ್ಳಬೇಕಾದ ಪ್ರಸಂಗಗಳು ಬರುತ್ತಿದ್ದುವು. ತಮ್ಮನ್ನು ಹಿಂಸಿಸಲು ಬಂದವರನ್ನು ಜನ ನಿಷ್ಕರುಣೆಯಿಂದ ಕೆಟ್ಟ ಹುಳುಗಳನ್ನು ಕೊಲ್ಲುವಂತೆ ಕೊಲ್ಲಲು ಆರಂಭಿಸಿದ್ದರು – ಮನೆಗಳಿಗೆ ಬೆಂಕಿಯಿಟ್ಟರೆ, ಅದೇ ಬೆಂಕಿಯಲ್ಲಿ ಆ ಸೈನಿಕರನ್ನು ತಳ್ಳಿ ಆನಂದಿಸುತ್ತಿದ್ದರು. ಇವುಗಳನ್ನು ಕೇಳಿ ಆ ಸಹೋದರರು ಕಿಡಿಕಿಡಿಯಾದರು.

ಇದಕ್ಕೆ ತಕ್ಕಂತೆ ಮಾಂಡಲೀಕರೂ, ಸಾಮಂತರೂ ಇವರನ್ನು ವಿರೋಧಿಸ ತೊಡಗಿದ್ದರು. ಅವರ ಸಹನೆಗೂ ಕೊನೆ ಬಂದಿತ್ತು. ವೆಂಕಟಾದ್ರಿಯನ್ನು ಕೊಲೆಮಾಡಿ, ಮುಹಮ್ಮದೀಯರ ಸಹಾಯದಿಂದ ವಿಜಯನಗರ ಸಿಂಹಾಸನವನ್ನು ತಮ್ಮದಾಗಿ ಮಾಡಿಕೊಂಡ ಸಂಗತಿ ಕೇಳಿ, ಸಾಮ್ರಾಜ್ಯನಿಷ್ಠ ಸೇವಕರೆಲ್ಲರೂ ಸೇರಿ, ಸಲಕಂ ಸೋದರರನ್ನು ಉರುಳಿಸುವ ಸಂಚುಮಾಡಿದ್ದರು. ಎಲ್ಲರೂ ಬಹಿರಂಗವಾಗಿಯೇ ಅಳಿಯ ರಾಮರಾಯರ ಪಕ್ಷ ಸೇರಿದ್ದರು.

ಇದೇ ಹೊತ್ತಿನಲ್ಲಿ ರಾಜಬೊಕ್ಕಸವು ಬರಿದಾಗಿ, ಸೈನಿಕರಿಗೆ, ಸಾಮ್ರಾಜ್ಯದ ಆಡಳಿತವನ್ನು ನಿರ್ವಹಿಸುತ್ತಿದ್ದ ವ್ಯಕ್ತಿಗಳಿಗೆ, ಮೂರು ನಾಲ್ಕು ತಿಂಗಳು ಸಂಬಳದ ಹಣವು ಪಾವತಿಯಾಗದೆ ನಿಂತಿತು. ಅವರಲ್ಲಿಯೂ ಅಶಾಂತಿ, ಅತೃಪ್ತಿಗಳು ಹೊಗೆಯಾಡಿದುವು. ಸೈನಿಕರ ದೈನಂದಿನ ಜೀವನಕ್ಕೆ ಬೇಕಾಗುವ ವಸ್ತುಗಳನ್ನು, ಜನರಿಂದ ಸುಲಿದುಕೊಳ್ಳಲು ಅವಕಾಶ ಕೊಡಲಾಯಿತು. ಇದರಿಂದ ಜನರಲ್ಲಿ ಹಾಹಾಕಾರವೆದ್ದಿತು. ರಾಜಧಾನಿಯಲ್ಲಿದ್ದರೆ, ಸುಖ, ನೆಮ್ಮದಿಗಳು ದೊರಕುವುದಿಲ್ಲವೆಂದು, ಜನರು ಊರು ಬಿಟ್ಟು ಹೊರಡಲು ಆರಂಭಿಸಿದರು. ಸಂಪತ್ತು ತುಂಬಿಕೊಳ್ಳುತ್ತಿದ್ದ, ಸಂವೃದ್ಧಿಯಾಗಿದ್ದ, ರಾಜಧಾನಿ ಇಂದು ಸ್ಮಶಾನ ಸಾದೃಶವಾಯಿತು. ಸೈನಿಕರ ಉಪಟಳ ಸಹಿಸಲಾರದೆ, ವ್ಯಾಪಾರಿಗಳು ವ್ಯಾಪಾರವನ್ನು ನಿಲ್ಲಿಸಿ ದೇಶಾಂತರ ಹೊರಟುಹೋದರು. ಹಳ್ಳಿಗಳು ಬರಿದಾದುವು; ಕೃಷಿ ಹಿಂದಕ್ಕೆ ಬಿತ್ತು. ಬೆಳೆಗಳಿಲ್ಲದೆ ಎಲ್ಲೆಲ್ಲೂ ಹಾಳು ಸುರಿಯುತ್ತಿತ್ತು. ಕ್ಷಾಮಡಾಮರಗಳಿಂದ ಪ್ರಜಾಕ್ಷೋಭೆಯುಂಟಾಗಿತ್ತು. ಸಲಕಂ ಸೋದರರು ಬಯಸಿದುದು ಇಂತಹ ಸಾಮ್ರಾಜ್ಯವನ್ನಲ್ಲ. ಅವರ ಕನಸಿನ ಸುಭದ್ರವಾದ ಸಿಂಹಾಸನ, ನೆಮ್ಮದಿಯ ಸಾಮ್ರಾಜ್ಯ ಅವರ ಪಾಲಿಗೆ ಇನ್ನೂ ಕನಸಾಗಿಯೇ ಉಳಿದಿತ್ತು.

ಸಲಕಂ ಸೋದರರು ಹಣಕ್ಕಾಗಿ ಹಂಬಲಿಸಿ ಬೇಸತ್ತರು. ಕೊರಗಿ ಕಂಗೆಟ್ಟರು. ಹಣಕ್ಕಾಗಿ ಹತಾಶರಾಗಿ ಕುಳಿತ ಅವರಿಗೊಂದು ಆಶಾಕಿರಣ ಕಾಣಿಸಿತ್ತು.

ವಿಜಯನಗರದ ಹಿಂದಿನ ಸಾಮ್ರಾಟರು ಮೊದಲಿನಿಂದಲೂ, ವಿಪುಲ ಸಂಪತ್ತಿನ ಒಡೆಯರಾಗಿದ್ದರು. ಅವರು ಆಪತ್ಕಾಲಕ್ಕೆ ಬೇಕಾಗುವುದೆಂದು ತಮ್ಮ ರಾಜಭಂಡಾರದ ಜತೆಗೆ ಒಂದು ಗುಪ್ತ ನಿಧಿಯನ್ನು ಶೇಖರಿಸಿದ್ದರು. ತಾವು ಶತ್ರುಗಳನ್ನು ಗೆದ್ದು ತಂದ, ಅಪೂರ್ವ ಧನಕನಕ ವಸ್ತುಗಳನ್ನು ದಿನಬಳಕೆಯ ವೆಚ್ಚವೆಂದು ರಾಜಬೊಕ್ಕಸದಲ್ಲಿಡದೆ, ಗುಪ್ತನಿಧಿಯಾಗಿ ಕಾಯ್ದಿರಿಸುತ್ತಿದ್ದರು. ಇದು ಅತ್ಯಂತ ರಹಸ್ಯವಾಗಿಡಲ್ಪಟ್ಟಿದು ಕೃಷ್ಣದೇವರಾಯನ ಆಪ್ತರಾದ ಕೆಲವೇ ಮಂದಿಗೆ ತಿಳಿದಿತ್ತಲ್ಲದೆ, ಬೇರೆಯವರಿಗೆ, ತಿಳಿದಿರಲಿಲ್ಲ.

ಕೃಷ್ಣದೇವರಾಯನನಂತರ, ನಂಬಿಕೆಗೆ ಪಾತ್ರರಾಗಿದ್ದ ಅವನ ಪರಮಾಪ್ತ ಮಿತ್ರರಾದ, ಸೋಮರಸ, ಭರತಾಚಾರ್ಯ, ರಾಜವೈದ್ಯರಿಗೆ ತಿಳಿದಿದೆ ಎಂದು ಅರಮನೆಯಲ್ಲಿ ಪ್ರತೀತಿ ಇತ್ತು. ಈ ಮೂವರ ಪೈಕಿ ಸೋಮರಸನು ಸಲಕಂ ಸೋದರರ ಮೋಸಕ್ಕೆ ಬಲಿಯಾಗಿ ಮರಣಹೊಂದಿದ್ದ. ರಾಜವೈದ್ಯರು ಸೆರೆ ತಪ್ಪಿಸಿಕೊಂಡು ಓಡಿಹೋಗಿದ್ದರು. ಇನ್ನುಳಿದವರು ಭರತಾಚಾರ್ಯರು. ಅವರಿಗೆ ತಮ್ಮ ಬಗ್ಗೆ ಸದಭಿಪ್ರಾಯವಿಲ್ಲವೆಂಬುದು ಅವರಿಗೆ ತಿಳಿದಿತ್ತು. ಆದರೂ ಸಾಮ, ದಾನ, ಇವುಗಳಿಂದ ಅವರ ಮನವೊಲಿಸಲು ನಿರ್ಧರಿಸಿದರು. ಸೆರೆಯಲ್ಲಿದ್ದ ಅವರನ್ನು ಕಾಣಲು ತಾವೇ ಹೊರಟರು. ಸಲಕಂ ಸೋದರರ ನೀಚತನ ತಿಳಿದಿದ್ದ ಅವರಿಗೆ ಅವರ ಆಗಮನದಿಂದ ಗಾಬರಿಯೇ ಆಯಿತು. ತಮ್ಮಿಂದ ಇನ್ನು ಯಾವ ಸ್ವಾರ್ಥಸಾಧಿಸಲು ಬಂದಿದ್ದಾರೋ ಎಂದು ಹೆದರಿದರು.

"ಭರತಾಚಾರ್ಯರೇ, ನಿಮ್ಮಿಂದ ನಮಗೆ ಒಂದು ಉಪಕಾರವಾಗಬೇಕಾಗಿದೆ," ಎಂದರು ಪ್ರಾಸ್ತವಿಕ ಮಾತುಕಥೆಗಳು ಮುಗಿದಮೇಲೆ.

"ನಾನು ಯಾವ ಕೆಲಸಕ್ಕೂ ಬಾರದ ವಸ್ತು ! ನನ್ನಿಂದ ನಿಮಗೆ ಯಾವ ಉಪಕಾರವಾಗಬೇಕೋ ತಿಳಿಸಿದರೆ ಸಾಧ್ಯವಾದರೆ ಮಾಡಿಕೊಡುತ್ತೇನೆ."

"ನಿಮ್ಮಿಂದ ಮಾತ್ರವೇ ಇದು ಸಾಧ್ಯ. ಈಗ ನೀವು ಉಪಕಾರ ಮಾಡಿದರೆ, ನಿಮ್ಮ ಕೋರಿಕೆ ಏನಿದ್ದರೂ ನಡೆಸಿಕೊಡುತ್ತೇವೆ. ನೀವು ಬಯಸುವ ಅಧಿಕಾರ, ಸಿರಿ ಸಂಪತ್ತುಗಳು ನಿಮ್ಮದಾಗುತ್ತವೆ."

"ಎಪ್ಪತ್ತರ ವಯಸ್ಸಿನಲ್ಲಿ ಕಾಲಿರಿಸಿರುವ ನನಗೆ ಯಾವ ಅಧಿಕಾರ, ಪದವಿಯ ವ್ಯಾಮೋಹವಿಲ್ಲ!"

"ಸಾಮ್ರಾಜ್ಯವನ್ನು ವಿಷಮ ಸನ್ನಿವೇಶದಲ್ಲಿ ಕಾಪಾಡಿದ ಕೀರ್ತಿ ನಿಮ್ಮದಾಗುತ್ತದೆ."

"ನನಗೆ ಕೀರ್ತಿ ಶನಿಯೂ ಹಿಡಿದಿಲ್ಲ – ಆದರೂ ನನ್ನಿಂದಾಗಬೇಕಾದುದೇನು ತಿಳಿಸಿ."

ಅವರು ಸಾಮ್ರಾಜ್ಯಕ್ಕೆ ಒದಗಿರುವ ಕಷ್ಟದೆಶೆ, ಹಣದ ಕೊರತೆ ಎಲ್ಲ

ವನ್ನೂ ಸವಿಸ್ತಾರವಾಗಿ ಹೇಳಿ,

"ಸಾಮ್ರಾಟ್ ಕೃಷ್ಣದೇವರಾಯರ ಗುಪ್ತನಿಧಿ ಎಲ್ಲಿದೆ ಎಂದು ತಿಳಿಸಿದರೆ ಬಹಳ ಉಪಕಾರವಾದಂತಾಗುತ್ತದೆ."

"ಆ ನಿಧಿ ಎಲ್ಲಿದೆಯೋ ನನಗೆ ತಿಳಿಯದು!"

"ನೀವೇ ಹೀಗೆ ಕೈಬಿಟ್ಟರೆ, ನಮ್ಮನ್ನು ಸದ್ಯದ ಪರಿಸ್ಥಿತಿಯಲ್ಲಿ ಕಾಪಾಡುವರು ಯಾರು?.....ನಿಮಗೆ ಗುಪ್ತನಿಧಿಯ ರಹಸ್ಯ ತಿಳಿದಿದೆ ಎಂಬುದು ನಮಗೆ ಚೆನ್ನಾಗಿ ಗೊತ್ತು. ದಯವಿಟ್ಟು ಕೃಪೆಮಾಡಬೇಕು."

"ಈ ರಹಸ್ಯ ನನಗೆ ತಿಳಿದಿದೆ ಎಂದು ಯಾರು ಹೇಳಿದರು?"

"ಅರಮನೆಯಲ್ಲಿ ಎಲ್ಲರಿಗೂ ಈ ಸಂಗತಿ ತಿಳಿದಿದೆ! ನಿಮ್ಮನ್ನು ಬಿಟ್ಟರೆ ರಾಜವೈದ್ಯರು, ಮತ್ತು ಸೋಮರಸರಿಗೆ ತಿಳಿದಿದ್ದಿತಂತೆ. ದುರ್ದೈವದಿಂದ ಸೋಮರಸರು ತೀರಿಕೊಂಡಿದ್ದಾರೆ. ರಾಜವೈದ್ಯರು ಸೆರೆಯಿಂದ ತಪ್ಪಿಸಿಕೊಂಡು ಹೋದರು!"

"ಏನು, ರಾಜವೈದ್ಯರು ತಪ್ಪಿಸಿಕೊಂಡು ಹೋದರೆ?" ಎಂದು ವಿಸ್ಮಯದಿಂದ ಕೇಳಿದರು.

"ಹೌದು!" ಎಂದು ಹೇಳಿ, ಅಚ್ಯುತರಾಯನ ಕಾಹಿಲೆಯಿಂದ ತೊಡಗಿ ಅವರ ಪಲಾಯನದವರೆಗೆ ನಡೆದ ಎಲ್ಲ ಸಂಗತಿಯನ್ನೂ ಸಂದೇಹಕ್ಕೆಡೆಗೊಡದಂತೆ ಹೇಳಿದರು.

ಈ ಸಂಗತಿಯು ಭರತಾಚಾರ್ಯರ ಮೇಲೆ ವಿಚಿತ್ರ ಪರಿಣಾಮವಾಯಿತು. ತಮ್ಮ ಆಪ್ತಮಿತ್ರರಾದ ಅವರೂ ಈಗ ತಪ್ಪಿಸಿಕೊಂಡು ಸಾಮ್ರಾಜ್ಯಕ್ಕೆ ತಮ್ಮಿಂದಾಗುವ ಸೇವೆ ಸಲ್ಲಿಸುತ್ತಿದ್ದಾರೆ. ತಾನು ಮಾತ್ರ ಏಕೆ ಸೆರೆಯಲ್ಲಿ ಕೊಳೆಯಬೇಕೆಂಬ ಒಂದು ನಿರ್ಧಾರಕ್ಕೆ ಬಂದು ಹೇಳಿದರು:

"ಸಲಕಂ ಸೋದರರೇ, ನೀವು ಇಷ್ಟು ದೈನ್ಯದಿಂದ ಪ್ರಾರ್ಥಿಸಿದ ಮೇಲೆ ನಿಮಗೆ ಇಲ್ಲವೆಂದು ಹೇಳಲು ನನಗೆ ಮನವಿಲ್ಲ – ಆದರೂ ನನ್ನದೊಂದು ಶರತ್ತಿದೆ – ಅದನ್ನು ನೆರವೇರಿಸಿದರೆ ಮಾತ್ರ ನಾನು ಆ ರಹಸ್ಯವನ್ನು ತಿಳಿಸುತ್ತೇನೆ!"

"ಏನು ಶರತ್ತು – ತಿಳಿಸಿ, ನಡೆಸಿಕೊಡುತ್ತೇವೆ."

"ಈಗ ಬಂಧನದಲ್ಲಿರುವ ಸಾಮ್ರಾಟ್ ಕೃಷ್ಣದೇವರಾಯನ ಮಡದಿಯರು ಮತ್ತು ಪುತ್ರಿಯರನ್ನು ಬಂಧಮುಕ್ತರನ್ನಾಗಿ ಮಾಡಿ, ಅವರಿಗೆ ಮೊದಲಿನ ಸ್ಥಾನಮಾನಗಳನ್ನು ಕಲ್ಪಿಸಿಕೊಡಬೇಕು. ಮತ್ತು ನನಗೆ ಮೂರು ದಿನಗಳ ಅವಧಿ ಕೊಡಬೇಕು."

"ನಿಮ್ಮ ಇಚ್ಛೆಯಂತೆ ಆಗಲಿ."

"ಮೊದಲು ಅವರನ್ನು ಬಂಧಮುಕ್ತರನ್ನಾಗಿ ಮಾಡಿ, ಮೊದಲಿನ ಸ್ಥಾನ

ಮಾನ ಕಲ್ಪಿಸಿಕೊಡಿ. ಅವರನ್ನು ನಾನು ಕಂಡುಬಂದ ಮೇಲೆ ನಿಮಗೆ ನಿಧಿಯ ರಹಸ್ಯ ತಿಳಿಸುತ್ತೇನೆ."

"ನೀವು ಮೋಸ ಮಾಡಿದರೆ?"

"ನನ್ನ ಮಾತನ್ನು ನಂಬುವುದೂ ಬಿಡುವುದೂ ನಿಮಗೆ ಸೇರಿದುದು. ನನ್ನ ಮಾತನ್ನು ನಂಬುವಂತೆ ನಾನೇನು ಆಗ್ರಹ ಪಡಿಸುವುದಿಲ್ಲ!"

ಈಗ ಸಲಕಂ ಸಹೋದರರಿಗೆ ಏನು ಮಾಡಬೇಕೆಂದು ತಿಳಿಯದೆ ಹೋಯಿತು. ಒಂದು ವೇಳೆ ಅವರು ಮೋಸ ಪಡಿಸಿದರೆ, ಮತ್ತೆ ರಾಜ ಕುಟುಂಬದವರನ್ನು ಬಂಧನದಲ್ಲಿಡುವುದು ಉಳಿದೇ ಇದೆ – ಎಂದು ಯೋಚಿಸಿ, ಭರತಾಚಾರ್ಯರ ಶರತ್ತಿಗೆ ಒಪ್ಪಿ ಅಲ್ಲಿಂದ ಹೊರಟುಹೋದರು.

ಭರತಾಚಾರ್ಯರಿಗೆ ಕೊಟ್ಟಿದ್ದ ಮಾತಿನಂತೆ, ತಿರುಮಲಾದೇವಿ, ಚಿನ್ನಾದೇವಿ ಮತ್ತು ಅವರ ಪುತ್ರಿಯರನ್ನು ಬಂಧಮುಕ್ತರನ್ನಾಗಿ ಮಾಡಿ ಭರತಾಚಾರ್ಯರಿಗೆ ಸುದ್ದಿ ಕೊಟ್ಟರು. ಭರತಾಚಾರ್ಯರು ಅಂತರಂಗದಲ್ಲಿ ಕಂಡು ನಡೆದ ಎಲ್ಲ ಸಂಗತಿಯನ್ನು ತಿಳಿಸಿ, ಅವರು ತಮ್ಮ ಪುತ್ರಿಯರೊಂದಿಗೆ ಅಲ್ಲಿಂದ ತಪ್ಪಿಸಿಕೊಂಡು ಹೋಗಬೇಕೆಂದೂ, ಈ ಬಗ್ಗೆ ಎಲ್ಲ ವ್ಯವಸ್ಥೆ ತಾವು ಮಾಡುವುದಾಗಿಯೂ ತಿಳಿಸಿ, ಆವರ ವಿಶ್ವಾಸಕ್ಕೆ ಪಾತ್ರರಾದ ವ್ಯಕ್ತಿಗಳಿಂದ ಒಂದು ಸಂಚು ಸಿದ್ಧಪಡಿಸಿದರು.

ಎಲ್ಲ ಸಿದ್ಧತೆಗಳೂ ಭರದಿಂದ ನಡೆದುವು. ಇನ್ನೇನು ತಮ್ಮ ಸಂಚು ಯಶಸ್ವಿಯಾಯಿತೆನ್ನುವಾಗ, ಸಲಕಂ ಸೋದರರು – ಭರತಾಚಾರ್ಯರು ಗುಪ್ತ ನಿಧಿಯ ರಹಸ್ಯ ತಿಳಿಸಲು ದುಂಬಾಲು ಬಿದ್ದರು; ಅವರು ಕೊಟ್ಟ ಮೂರು ದಿನಗಳ ಅವಧಿ ಮುಗಿದನಂತರ ಅವರು ತಿಳಿಸದಿದ್ದರೆ, ತಾವು ಕೊಟ್ಟಿದ್ದ ವಚನವನ್ನು ಹಿಂತೆಗೆದುಕೊಳ್ಳುವುದಲ್ಲದೆ, ಮೋಸಗೊಳಿಸಿದ ಅವರನ್ನು ಕ್ರೂರವಾಗಿ ಶಿಕ್ಷಿಸುವುದಾಗಿ ಬೆದರಿಕೆ ಹಾಕಿದ್ದರು.

ಮೂರು ದಿನಗಳು ಕಳೆದು ನಾಲ್ಕನೆಯ ದಿನ ಕಾಲಿಟ್ಟಿತು. ಭರತಾಚಾರ್ಯರನ್ನು ಕಾಣಲು ಸಲಕಂ ಸೋದರರು ಬಂದಾಗ ಅವರು ತಮ್ಮ ಮನೆಯಲ್ಲಿ ನಿದ್ರಿಸುತ್ತಿರುವರೆಂದು ತಿಳಿಯಿತು. ಅವರಿಗೆ ಅನುಮಾನವಾಗಿ ಒಳಗೆ ಬಂದು ನೋಡಿದರು, ಅವರು ಇನ್ನೂ ಮಲಗಿ ನಿದ್ರಿಸುತ್ತಲೇ ಇದ್ದರು. ಅವರನ್ನು ಎಚ್ಚರಿಸಲು ಹೋದಾಗಲೇ ಅವರಿಗೆ ಅರಿವಾದುದು, ಭರತಾಚಾರ್ಯರು ಕಡೆಗೂ ತಮ್ಮನ್ನು ಮೋಸಗೊಳಿಸಿದರೆಂದು. ಹಿಂದಣ ರಾತ್ರಿಯೇ ಅವರು ಕೈಲಿದ್ದ ಉಂಗುರವನ್ನು ಅರೆದು ಕುಡಿದು ಪ್ರಾಣಬಿಟ್ಟಿದ್ದರು.

"ಕಡೆಗೂ ನಮ್ಮನ್ನು ಮೋಸಪಡಿಸಿದರು!" ಎಂದು ಕಟಕಟನೆ ಆ ಸಹೋದರರು ಹಲ್ಲುಕಡಿದರು. ಮಹಾರಾಣಿಯರನ್ನು ಬಂಧಿಸಲು ಅವರ

ಅರಮನೆಗೆ ಬಂದರು. ಅಲ್ಲಿ ಅವರಿಗೆ ಇನ್ನೊಂದು ಭಯಂಕರ ಸುದ್ದಿ ಕಾದಿತ್ತು. ಆ ರಾಣಿಯರು ಪುತ್ರಿಯರೊಂದಿಗೆ ತಪ್ಪಿಸಿಕೊಂಡು ಹೋಗಿದ್ದರು. ಕಡೆಗೂ ಸಾಮ್ರಾಟ್ ಕೃಷ್ಣದೇವರಾಯನು ತಮ್ಮಲ್ಲಿಟ್ಟಿದ್ದ ವಿಶ್ವಾಸ ನಂಬುಗೆಗಳನ್ನು ಭರತಾಚಾರ್ಯರು ವ್ಯರ್ಥಗೊಳಿಸಲಿಲ್ಲ. ಅವರು ತಾವು ಹೊತ್ತಿದ್ದ ರಾಜಋಣವನ್ನು ತಮ್ಮದೇ ಆದ ವಿಶಿಷ್ಟರೀತಿಯಲ್ಲಿ ತೀರಿಸಿ, ಸಾಮ್ರಾಜ್ಯಕ್ಕೆ ತಮ್ಮಿಂದಾದ ಸೇವೆ ಸಲ್ಲಿಸಿದ್ದರು!

೨೬

ವಿಜಯನಗರದಿಂದ ವೇಷಾಂತರದಲ್ಲಿ ತಪ್ಪಿಸಿಕೊಂಡು ಹೊರಟ ತಿರುಮಲಾದೇವಿ, ಚಿನ್ನಾದೇವಿಯರು, ತಮ್ಮ ಪುತ್ರಿಯರೊಡನೆ ಪೆನಗೊಂಡೆಯಲ್ಲಿದ್ದ ಅಳಿಯ ರಾಮರಾಯ ತಿರುಮಲರಾಯರನ್ನು ಸಕಾಲದಲ್ಲಿ ಕೂಡಿಕೊಂಡಿದ್ದರು. ಸಲಕಂ ಸೋದರರ ಪೈಶಾಚಿಕ ವರ್ತನೆಯೆಲ್ಲಾ ಅಳಿಯ ರಾಮರಾಯನಿಗೆ ವರದಿಯಾಗಿತ್ತು.

ಈ ಮೊದಲೇ ವರದಾದೇವಿಯಿಂದ ಕಳುಹಿಸಲ್ಪಟ್ಟ ರಾಜವೈದ್ಯರೂ ಬಂದು ಅದುವರೆಗೆ ನಡೆದಿದ್ದ ಎಲ್ಲ ಸಂಗತಿಯನ್ನೂ ವರದಿಮಾಡಿದ್ದರು. ಆದರೆ ಅಳಿಯ ರಾಮರಾಯನು ಪೆನಗೊಂಡೆಯಲ್ಲಿ ಮಾಡಬೇಕಾಗಿದ್ದ ಕಾರ್ಯ ಇನ್ನೂ ಪೂರ್ತಿಯಾಗಿರಲಿಲ್ಲ. ಆದ್ದರಿಂದಲೇ ಅವನು ವಿಜಯನಗರಕ್ಕೆ ಕೂಡಲೇ ಸೈನ್ಯ ಸಮೇತ ಹೊರಡುವುದು ಸಾಧ್ಯವಾಗಿರಲಿಲ್ಲ. ಅಳಿಯ ರಾಮರಾಯನ ನೆರವು ನಿರೀಕ್ಷಿಸಿದ್ದ ವೇಳೆಗೆ ದೊರೆಯದೆ, ವರದಾದೇವಿ ಬಿಜಾಪುರದ ಸುಲ್ತಾನನ ನೆರವನ್ನು ಅಪೇಕ್ಷಿಸಿ, ತನ್ನ ಹಾಗೂ ಸಾಮ್ರಾಜ್ಯದ ಪತನವನ್ನು ತಾನೇ ತಂದುಕೊಂಡಿದ್ದಳು. ಮುಹಮ್ಮದೀಯರ ಸ್ನೇಹಕ್ಕಾಗಿ ಸಲಕಂ ಸೋದರರು ರಾಜಬೊಕ್ಕಸವನ್ನು ಬರಿದುಮಾಡಿದ್ದರು. ವಿಜಯನಗರದ ಘನತೆಯನ್ನು ಶತ್ರುಗಳ ದೃಷ್ಟಿಯಲ್ಲಿ ಕೀಳುಮಟ್ಟಕ್ಕಿಳಿಸಿದ್ದರು. ಗುಪ್ತನಿಧಿಯ ಸಲುವಾಗಿ ಸಲಕಂ ಸೋದರರು ಭರತಾಚಾರ್ಯರನ್ನು ಮೋಸಗೊಳಿಸಲು ಹೋಗಿ, ತಾವೇ ಮೋಸಗಳಿಸಲ್ಪಟ್ಟ ಸಂಗತಿಯನ್ನು ಕೇಳಿ ಅವರಿಗಾಗಿ ಕೃತಜ್ಞತೆಯ ಕಣ್ಣೀರು ಮಿಡಿದರು.

ಈ ಮೊದಲೇ ಗುತ್ತಿಯಿಂದ ಬಂದ ಗೂಢಚಾರರಿಂದ ಚಂದ್ರಗಿರಿಯಲ್ಲಿದ್ದ ಅಚ್ಯುತರಾಯನ ತಮ್ಮ ರಂಗರಾಯನ ಮಗ ಹದಿನಾರು ವರ್ಷದ ಸದಾಶಿವರಾಯನು ಹೇಗೆ ಸಲಕಂ ಸೋದರರಿಂದ ಪಾರಾಗಿ, ಗುತ್ತಿ ದುರ್ಗದಲ್ಲಿ ಅಡಗಿರುವನೆಂಬ ವಾರ್ತೆ ತಿಳಿದುಬಂದಿತ್ತು. ಕೂಡಲೇ ರಾಮರಾಯನು ಅವನ ರಕ್ಷಣೆಯ ವ್ಯವಸ್ಥೆಮಾಡಿ ಪೆನಗೊಂಡೆಗೆ ಹಿಂದಿರುಗಿ ಬಂದು ತಮ್ಮ ಕಾರ್ಯವನ್ನು

ತ್ವರೆಗೊಳಿಸಿದ್ದನು. ತಾನು ವಿಜಯನಗರದ ಮೇಲೆ ದಂಡೆತ್ತಿ ಹೋದಾಗ, ತನ್ನ ಪತ್ನಿಯನ್ನು, ಅತ್ತೆಯರನ್ನು ಸಲಕಂ ಸೋದರರು, ತನ್ನ ಮೇಲಿನ ದ್ವೇಷ ದಿಂದ ಕೊಲೆ ಮಾಡುವರೋ ಎಂದು ಹೆದರಿ, ಏನು ಮಾಡಬೇಕೆಂದು ತಿಳಿಯದೆ ಅವರು ಚಿಂತಾಕ್ರಾಂತರಾಗಿ ಕುಳಿತಿದ್ದರು. ಇಂತಹ ವೇಳೆಯಲ್ಲಿ ಭರತಾ ಚಾರ್ಯರ ನೆರವಿನಿಂದ ಅವರು ಸಜೀವವಾಗಿ ಪೆನುಗೊಂಡೆ ಸೇರಿದ್ದರು. ಈಗ ಧೈರ್ಯವಾಗಿ ವಿಜಯನಗರದ ಮೇಲೆ ಧಾಳಿಯಿಡಬಹುದಾಗಿತ್ತು !

ಇದುವರೆಗೂ ಪೆನಗೊಂಡೆಯಲ್ಲಿದ್ದ ರಾಮರಾಯನು ಸುಮ್ಮನಿರಲಿಲ್ಲ. ಅವನು ಸಲಕಂ ಸೋದರರ ವಿರುದ್ಧ, ಮಾಂಡಲೀಕರನ್ನೂ, ಸಾಮಂತರನ್ನೂ ಎತ್ತಿಕಟ್ಟುವ ಕಾರ್ಯದಲ್ಲಿ ತೊಡಗಿದ್ದನು. ಒಂದಲ್ಲ ಒಂದು ಕಾರಣದಿಂದ ಸಲಕಂ ಸೋದರರ, ಶೋಷಣೆಗೆ ಒಳಗಾಗಿ, ಅವರ ಬಗ್ಗೆ ಅತೃಪ್ತಿ ಹೊಂದಿದ್ದವ ರೆಲ್ಲರೂ ತಾವಾಗಿ ಬಂದು ರಾಮರಾಯನ ಪಕ್ಷ ಸೇರಿದ್ದರು. ಸಾಮ್ರಾಜ್ಯದ ಮೂಲೆಮೂಲೆಗಳಿಂದ ಆ ದುಷ್ಟ ಸೋದರರ ಆಳ್ವಿಕೆಯಲ್ಲಿ, ಹಿಂಸೆಗೆ, ಕ್ರೌರ್ಯಕ್ಕೆ, ದೌರ್ಜನ್ಯಕ್ಕೆ, ಅತ್ಯಾಚಾರಗಳಿಗೆ ಒಳಗಾಗಿದ್ದ ಜನ ತಂಡೋಪತಂಡವಾಗಿ, ಪೆನುಗೊಂಡೆಗೆ ಬಂದು ನೆರೆದಿದ್ದರು. ಸಲಕಂ ಸೋದರರ ಶಿಕ್ಷೆಯಿಂದ ಪಾರಾ ದವರೂ ಶ್ರೀಮಂತರನ್ನು ಅಂಗವಿಕಲರನ್ನಾಗಿ ಮಾಡಿದುದನ್ನು ನೋಡಿದ ಧನಿ ಕರೂ, ಸುಲ್ತಾನನಿಗೆ ನಡೆಸಿದ್ದ ಸನ್ಮಾನವನ್ನು ನೋಡಿ ಅಪಮಾನವಾಯಿತೆಂದು ತಿಳಿದ ದೇಶಭಕ್ತರೂ, ಕುಮಾರನ ಕೊಲೆಯನ್ನು ಕೇಳಿ ರೋಸಿದ ಸ್ವಾಮಿನಿಷ್ಠ ಸೇವಕರೂ, ಎಲ್ಲರೂ ಅಳಿಯ ರಾಮರಾಯನ ಪಕ್ಷ ವಹಿಸಿದ್ದರು. ಅನೇಕ, ಸಾಮಂತರೂ, ಮಾಂಡಲೀಕರೂ ಅಳಿಯ ರಾಮರಾಯನಿಗೆ ಬೆಂಬಲ ನೀಡುವ ಭರವಸೆ ಕೊಟ್ಟರು. ವಿಶ್ವನಾಥನಾಯಕ, ವೀರಶೇಖರಚೋಳ, ತಮ್ಮ ಸೈನ್ಯ ಸಹಾಯ ಕೊಡಲು ಮುಂದೆ ಬಂದಿದ್ದರು. ಇವರೆಲ್ಲರಿಗೂ ಗಾಂಧಿಕೋಟೆಯ ನಾಯಕ ಅಯ್ಯಪ್ಪರಸನು ಬೆಂಬಲವಾಗಿ ನಿಂತಿದ್ದನು. ಸೊನ್ನಲಾಪುರದ ದಂಡೆ ಹನುಮಪ್ಪನಾಯಿಡು, ಹಂಡೆವಿಾಸೆ ಪೆದ್ದನಾಯಿಡು, ಪೆಮ್ಮಸಾನಿ ತಿಮ್ಮನಾ ಯಿಡು ಮುಂತಾದ ಜಹಗೀರುದಾರರು ರಾಮರಾಯನ ಬಲಗೈಭಂಟರಾಗಿ ನಿಂತಿದ್ದರು. ಸಾಮ್ರಾಜ್ಯದ ಜನತೆ ಒಂದು ವ್ಯಕ್ತಿಯಂತೆ, ಸಲಕಂ ತಿರುಮಲ ಸೋದರರ ವಿರುದ್ಧ ನಿಂತಿದ್ದರು. ಪೆನಗೊಂಡೆಯಲ್ಲಿ ಅಸಂಖ್ಯಾತ ಸೈನ್ಯ ಸೇರಿತ್ತು. ಜನ ತಾವಾಗಿ ಬಂದು ಸೈನ್ಯ ಶಿಕ್ಷಣ ಪಡೆದಿದ್ದರು. ಎಲ್ಲಿಂದಲೋ ಅವರಿಗೆ ಬೇಕಾದ ಶಿಕ್ಷಣ ದೊರೆತಿತ್ತು. ಮತ್ತೆ ಯಾರೋ ಅವರಿಗೆ ಬೇಕಾದ ಉಡು ಪನ್ನೂ, ಆನೆ ಕುದುರೆಗಳನ್ನೂ ಕೊಟ್ಟರು. ಮೂಲೆಮೂಲೆಗಳಿಂದ ಬಂದ ಕಾಣಿಕೆ ದೊಡ್ಡ ಮೊತ್ತವಾಗಿ, ಸೈನ್ಯಕ್ಕೆ ಬೇಕಾಗುವ ಹಣದ ಕೊರತೆಯನ್ನು ನೀಗಿದ್ದುವು. ಹೀಗೆ ಎಲ್ಲವೂ ಸಿದ್ಧವಾಗಿತ್ತು. ಒಂದು ಶುಭದಿನದಲ್ಲಿ ಅಳಿಯ

ರಾಮರಾಯನು, ತಾನು ಸಿದ್ಧಪಡಿಸಿದ್ದ ಸೈನ್ಯವನ್ನು ತಾನೇ ನಡೆಸಿಕೊಂಡು ವಿಜಯನಗರದ ಮೇಲೆ ದಂಡೆತ್ತಿ ಹೊರಟನು.

ಇವರಿಗೆ ಈಗಾಗಲೇ ಗುತ್ತಿ, ಗಾಂಧಿಕೋಟೆ, ಪೆನಗೊಂಡೆ, ಕರ್ನೂಲುಗಳು ವಶವಾಗಿದ್ದುವು. ಅದವಾನಿಯ ಕೋಟೆಯ ನಾಯಕನು ಸಲಕಂ ಸೋದರರ ವಿರುದ್ಧ ದಂಗೆ ಎದ್ದು ತಾನು ಸ್ವತಂತ್ರನೆಂದು ಘೋಷಿಸಿದ್ದನು. ಈ ಕೋಟೆಯ ರಕ್ಷಣೆಯ ಸಲುವಾಗಿ ಅಳಿಯ ರಾಮರಾಯನು ತನ್ನ ಸೈನ್ಯದ ಒಂದು ಭಾಗವನ್ನು ಸೊನ್ನಲಾಪುರದ ಹಂಡೆಹನುಮಪ್ಪನಾಯಿಡು, ಮಿಾಸೆ ಪೆದ್ದಪ್ಪನಾಯಿಡು ಇವರ ನೇತೃತ್ವದಲ್ಲಿ ಕಳುಹಿಸಿ, ತಾನು ವಿಜಯನಗರದ ದಾರಿ ಹಿಡಿದನು.

ಅದವಾನಿಯು ಶತ್ರುಪಕ್ಷಕ್ಕೆ ಸೇರಿತೆಂಬ ಸುದ್ದಿ, ಗೂಢಚಾರರಿಂದ ಸಲಕಂ ಸೋದರರಿಗೆ ವರದಿಯಾಯಿತು. ಇದನ್ನು ಕೇಳಿ ಕುಪಿತನಾದ ಪೆದ್ದತಿರುಮಲನು ತನ್ನ ತಮ್ಮ ಚಿನ್ನತಿರುಮಲನೊಂದಿಗೆ, ದೊಡ್ಡ ಸೈನ್ಯವನ್ನು ಕೊಟ್ಟು ಕಳುಹಿಸಿದನು. ಅದವಾನಿಯ ರಕ್ಷಣೆಗೆ ರಾಮರಾಯನ ಸೈನ್ಯ ಬರುವುದಕ್ಕೂ, ವಿಜಯನಗರದಿಂದ ಸಲಕಂ ಚಿನ್ನತಿರುಮಲನು ಸೈನ್ಯದೊಡನೆ ಬರುವುದಕ್ಕೂ, ಸರಿಹೋಯಿತು. ಅದವಾನಿಯ ಬಳಿ ಎರಡು ಸೈನ್ಯಗಳಿಗೂ ಘೋರವಾದ ಯುದ್ಧ ಸನ್ನಿಹಿತವಾಯಿತು.

ಎರಡು ಕಡೆಯ ಸೈನಿಕರೂ ವೀರಾವೇಶದಿಂದ ಹೋರಾಡಿದರು. ಸಲಕಂ ಚಿನ್ನತಿರುಮಲನ ಕಡೆ ಅಸಂಖ್ಯಾತದ ಸೈನ್ಯವಿದ್ದರೂ ಅವರು ಹಲವಾರು ಕಾರಣಗಳಿಂದ ತಮ್ಮ ಒಡೆಯರ ಬಗ್ಗೆ ಅಸಮಾಧಾನಗೊಂಡಿದ್ದರು. ಅವರ ಬಳಿಯಲ್ಲಿ ಶಸ್ತ್ರಾಸ್ತ್ರಗಳು ಆನೆಕುದುರೆಗಳು ಅಧಿಕ ಸಂಖ್ಯೆಯಲ್ಲಿ ಇದ್ದುವು. ಇದರಿಂದ ತಮಗೇ ಜಯವಾಗುವುದೆಂದು ಅವರು ನಿರೀಕ್ಷಿಸಿ ಅಷ್ಟು ಹುರುಪಿನಿಂದ ಅವರು ಯುದ್ಧ ಮಾಡಲಿಲ್ಲ. ರಾಮರಾಯನ ಕಡೆಯ ಸೈನ್ಯವಾದರೋ, ದುರುಳರಾದ ಸಲಕಂ ಸೋದರರಿಂದ ವಿಜಯನಗರವನ್ನು ಉಳಿಸುವ ಕಾರ್ಯದಲ್ಲಿ ಯಜ್ಞದೀಕ್ಷಿತರಾಗಿ ಅತ್ಯಂತ ಹುರುಪು, ಉತ್ಸಾಹಗಳಿಂದ ಯುದ್ಧ ಮಾಡಿದರು. ಮೊದಲು ಶತ್ರುಸೈನಿಕರ ಕೈ ಮೇಲಾದಂತೆ ಕಂಡರೂ, ಎದೆಗುಂದದೆ ಹನುಮಪ್ಪನಾಯಕನು ಶತ್ರುಸೈನ್ಯವನ್ನು ಕಾಲಯಮನಂತೆ, ಹಾವಳಿ ಮಾಡುವುದನ್ನು, ಕಂಡು ಉಳಿದ ಸೈನಿಕರಿಗೆ ಮೈ ರೋಮಾಂಚನಗೊಂಡಿತು ಬದುಕಿದ ಸನ್ಮಾನ, ಸತ್ತರೆ ವೀರಸ್ವರ್ಗ ಎಂಬ ಭಾವನೆಯಲ್ಲಿ, ತಮ್ಮ ನಾಯಕನನ್ನು ಹಿಂಬಾಲಿಸಿ, ರೌದ್ರಾವೇಶದಲ್ಲಿ ಹೋರಾಡಿದರು. ಅವರ ಪೆಟ್ಟುಗಳನ್ನು ಸಹಿಸಿಕೊಳ್ಳಲಾರದೆ ಚಿನ್ನತಿರುಮಲನು ಯುದ್ಧರಂಗದಿಂದ ತಲೆತಪ್ಪಿಸಿಕೊಳ್ಳಲು ನೋಡಿದನು. ಅವನನ್ನು ಜೀವಂತ ಕೈಸೆರೆ ಹಿಡಿಯಬೇಕೆಂದು ಇದ್ದ ಹನುಮಪ್ಪ

ನಾಯಕನು, ಯುದ್ಧವನ್ನು ಮುಂದುವರಿಸಲು ಪೆದ್ದಪ್ಪನಾಯಕನಿಗೆ ವಹಿಸಿ, ತನ್ನ ಜಂಗಾವಲ ಪಡೆಯೊಂದಿಗೆ ಸಲಕಂ ಚಿನ್ನತಿರುಮಲನ ಮೇಲೇರಿ ಹೋಗಿ ರಣಾಂಗದಿಂದ ಅವನು ತಪ್ಪಿಸಿಕೊಂಡು ಹೋಗುವುದರೊಳಗೆ ಅವನ ಮೇಲೆ ಬಿದ್ದನು.

ಇಬ್ಬರು ವೀರರೂ ಬಹಳ ಹೊತ್ತು ಸೆಣಸಿದರು. ಏನಾದರೂ ಮಾಡಿ ಅವನನ್ನು ಜೀವಂತ ಕೈಸೆರೆ ಹಿಡಿಯಬೇಕೆಂಬುದು ಹನುಮಪ್ಪನಾಯಕನ ಆಸೆ. ತಾನು ಜೀವಂತ ಸೆರೆ ಸಿಕ್ಕಿದರೆ, ತನ್ನನ್ನು ಕ್ರೂರ ರೀತಿಯಲ್ಲಿ, ಚಿತ್ರಹಿಂಸೆಕೊಟ್ಟು ಕೊಲ್ಲುವರೆಂದು ಚಿನ್ನತಿರುಮಲನು – ಯುದ್ಧದಲ್ಲಿ ಮಡಿಯಬೇಕು. ಇಲ್ಲವೇ ಆತ್ಮಹತ್ಯೆ ಮಾಡಿಕೊಳ್ಳಬೇಕು, ಎಂದು ನಿರ್ಧರಿಸಿದ್ದನು. ಹನುಮಪ್ಪನಾಯಕನ ಕೈ ಮೇಲಾಗುತ್ತಾ ಬರಲು ಅವನಿಗೆ ತಾನು ಸಿಕ್ಕಿಬೀಳುವೆನೆಂದು ತಿಳಿದು ಅವನು ಅಲ್ಲಿಂದ ಜೀವಗಳ್ಳನಂತೆ ಓಡಲು ನೋಡಿದ. ಆಗ ಹನುಮಪ್ಪನಾಯಕನು ಅವನ ಬೆನ್ನಟ್ಟಿ, ತನ್ನ ಕತ್ತಿಯನ್ನು ಅವನ ಕಡೆಗೆ ಬೀಸಿದ. ಆ ಪೆಟ್ಟಿಗೆ ಸಲಕಂ ಚಿನ್ನತಿರುಮಲನ ತಲೆ ಕತ್ತರಿಸಿ, ಮುಂಡದಿಂದ ಬೇರೆಯಾಯಿತು. ಅವನ ದೇಹ ಮಾತ್ರ ನಾಲ್ಕು ಹೆಜ್ಜೆ ಮುಂದೆ ನಡೆದು, ನೆಲಕ್ಕೆ ಬಿತ್ತು. ಅವನ ನೆತ್ತರಿನ ಪಾಪದ ಬಟ್ಟಲು ತುಂಬಿ ತುಳುಕಿತ್ತು. ಅವನ ದೇಹ ರಕ್ತದ ಮಡುವಿನಲ್ಲಿ ತೇಲಿತು. ಹೀಗೆ ಕೊಲೆ, ಸುಲಿಗೆ, ದ್ರೋಹಗಳಿಂದ, ನಿರಪರಾಧಿಗಳ ರಕ್ತದಿಂದ ಸಾಮ್ರಾಜ್ಯವನ್ನು ನುಂಗಲು ಬಂದಿದ್ದ ರಾಹು ಕೇತುಗಳಲ್ಲಿ ಒಬ್ಬನಾಗಿದ್ದ ಚಿನ್ನತಿರುಮಲನು ಸಾವು ಕಂಡನು. ಯಾವ ಕತ್ತಿಯ ಬಲದಿಂದ ಅಧಿಕಾರಕ್ಕೆ ಬಂದಿದ್ದನೋ ಅದೇ ಕತ್ತಿಗೆ ಅವನು ಬಲಿಯಾಗಿದ್ದನು. ಜನತೆಯ ಸಹನೆಯನ್ನು ಪರೀಕ್ಷಿಸಲು ಹೋಗಿ ಅವರ ದ್ವೇಷದ ಬೆಂಕಿಗೆ ಬಲಿಯಾಗಿದ್ದನು.

ಅವನು ಮಡಿದ ಮೇಲೆ ಅವನ ತಲೆಯನ್ನು ಕತ್ತಿಯ ಮೊನೆಗೆ ಸಿಕ್ಕಿಸಿ, ವಿಜೃಂಭಿಸುತ್ತಾ ಬಂದ, ಹನುಮಪ್ಪನಾಯಿಡುವಿನ ಘೋರಾಕೃತಿಯನ್ನು ಕಂಡು, ಶಸ್ತ್ರಗಳು ಕೈವಶವಾಗಿ, ಅವರ ಶಕ್ತಿ ದ್ವಿಗುಣವಾಯಿತು.

ಹನುಮಪ್ಪನಾಯಿಡು ಶೀಘ್ರವಾಗಿ ಪ್ರಯಾಣ ಬೆಳೆಸಿ, ವಿಜಯನಗರದ ಬಳಿ ಬೀಡುಬಿಟ್ಟಿದ್ದ ಅಳಿಯ ರಾಮರಾಯನ ಸೈನ್ಯದೊಡನೆ ಸೇರಿಕೊಂಡು, ತನಗೆ ದೊರೆತ ದಿಗ್ವಿಜಯದ ಕಥೆಯನ್ನು ವರದಿಮಾಡಿ, ಚಿನ್ನತಿರುಮಲನ ತಲೆಯನ್ನು ಕಾಣಿಕೆಯಾಗಿ ಒಪ್ಪಿಸಿದನು. ತಮ್ಮನ್ನು ಎದುರಿಸಿ ಅವನ ತಮ್ಮನಿಗೆ ಬಂದ ಅವಸ್ಥೆಯನ್ನು ತಿಳಿಸುವ ಸಲುವಾಗಿ, ಅವನ ತಲೆಯನ್ನು, ಸಲಕಂ ಪೆದ್ದತಿರುಮಲನಿಗೆ ಕಳುಹಿಸಿ ಯಾದವೀ ಕಲಹದಲ್ಲಿ ನಿರಪರಾಧಿಗಳ ರಕ್ತ ಹರಿಯುವುದನ್ನು ತಪ್ಪಿಸಲು ಸಂಧಾನ ನಡೆಸಲು ಪ್ರಯತ್ನಿಸಿದನು.

ಸಲಕಂ ಪೆದ್ದ ತಿರುಮಲನಿಗೆ, ತನ್ನ ಇನ್ನೊಂದು ದೇಹದಂತಿದ್ದ, ತನ್ನ ಪ್ರತಿಯೊಂದು ಕಾರ್ಯದಲ್ಲೂ ಅನುಚರನಾಗಿ, ಗೆಳೆಯನಾಗಿ, ಸಹೋದರನಾಗಿ, ಬೆಂಬಲ ಕೊಟ್ಟಿದ್ದ ಪ್ರೀತಿಯ ತಮ್ಮನ ಮರಣದ ವಾರ್ತೆ ಕೇಳಿ ಸಿಡಿಲುಬಡಿದಂತಾಯಿತು. ಈ ಅನಿಷ್ಟ ವಾರ್ತೆಯನ್ನು ತಂದ ದೂತನನ್ನು ಆನೆಯ ಕಾಲಿಗೆ ಕಟ್ಟಿಸಿ, ಶತ್ರುಗಳ ಮೇಲೆ ಸೇಡು ತೀರಿಸಿಕೊಂಡಿದ್ದನು. ಈಗ ಅವನಿಗೆ ತಮ್ಮ ನಿಲ್ಲದೆ ತಾನು ಏಕಾಂಗಿ ಎಂಬ ಭಾವನೆ ಬಂದಿತ್ತು. ತಮ್ಮನಿಲ್ಲದ ಜಗತ್ತಿನಲ್ಲಿ ಬಾಳು ದುಸ್ತರವಾಗಿತ್ತು. ನಿಂತಲ್ಲಿ, ಕುಳಿತಲ್ಲಿ, ತಮ್ಮನ ನೆನಪೇ ಕಾಡುತ್ತಿತ್ತು. ಅಳಿಯರಾಮರಾಯನ ಮೇಲೆ ಭಯಂಕರ ಕೋಪ ಬಂದಿತ್ತು. ಅವನು ಸೇಡಿನಿಂದ ಹುಚ್ಚನಂತಾಗಿದ್ದ ! ಆದರೆ ಅವನು ಏನೂ ಮಾಡುವಂತಿರಲಿಲ್ಲ.

ಈಗ ಸಿಂಹಾಸನದ ಸಲುವಾಗಿ ನಡೆಸಿದ್ದ ಒಂದೊಂದೇ ದುಷ್ಕೃತ್ಯಗಳು ನೆನಪಾಗಿ, ಅವನನ್ನು ಕಾಡಲು ಆರಂಭಿಸಿದ್ದುವು. ಅವನು ಮಾಡಿದ್ದ ಎಲ್ಲ ದ್ರೋಹ ಅವನನ್ನು ಮುತ್ತಿ ಹಿಂಸಿಸಿದುವು. ಅವನು ಮೋಸದಿಂದ ಕೊಲೆ ಮಾಡಿದ್ದ ವ್ಯಕ್ತಿಗಳ ಪ್ರೇತಗಳು ಬಂದು ಅವನ ಚಿತ್ತಶಾಂತಿಯನ್ನು ಕದಡಿದುವು. ನಿದ್ರೆಯಲ್ಲಿ, ಎಚ್ಚರದಲ್ಲಿ ಅವು ಅವನನ್ನು ಹೀಯಾಳಿಸಿ ಚಿತ್ರಹಿಂಸೆ ಕೊಡುತ್ತಿದ್ದುವು. ಆ ರಾತ್ರಿ ಅವನು ನಿದ್ರಿಸಿದಾಗ ಕೊಂಡಮರಸಯ್ಯನ ಪ್ರೇತ ಬಂದು,

"ನಾಳೆ ನಿನ್ನ ಎದೆಯ ಮೇಲೆ ಕುಳಿತು ನಿನ್ನ ಕತ್ತು ಹಿಸುಕುತ್ತೇನೆ! ಅಹ್ಹಹ್ಹ........ಅಹ್ಹಹ್ಹ ! ಗೆಳೆಯನೆಂದು ನಂಬಿಸಿ, ನಗರದಿಂದಾಚೆಗೆ ಮೋಸದಿಂದ ಬರಮಾಡಿಕೊಂಡು ಮೋಸದಿಂದ ಕೊಂದುದಕ್ಕೆ, ನಾಳೆ ನಿನ್ನನ್ನು ರಾಮರಾಯನು ಕೊಲ್ಲುವಾಗ, ನಿನ್ನ ರಕ್ತವನ್ನು ಕುಡಿಯದೆ ಬಿಡುವೆನೆ? ರಾಮರಾಯನೇ ಭಯಪಡಬೇಡ! ನಾಳೆ ನಿನಗೇ ಜಯವಧು ಕಾದಿದ್ದಾಳೆ! ಈ ನೀಚನನ್ನು ನಿನ್ನ ಕೂರ್ಗತ್ತಿಗೆ ಬಲಿಗೊಟ್ಟು ನನ್ನ ಪಾಲುಮಾಡು. ಇವನು ಪ್ರಾಣದಿಂದಿರುವಾಗಲೇ ರಕ್ತವನ್ನು ಹೀರುತ್ತೇನೆ" ಎಂದಿತು; ಉಳಿದ ಪ್ರೇತಗಳು "ರಾಮರಾಯನಿಗೆ ಜಯವಾಗಲಿ" ಎಂದು ಕೂಗಿದುವು.

ಕೃಷ್ಣದೇವರಾಯನ ಕುಮಾರನ ಪ್ರೇತ ಕಾಣಿಸಿಕೊಂಡು ಅದು ತನ್ನ ಬಾಲ ಭಾಷೆಯಲ್ಲಿ ಹೀಗೆ ಗರ್ಜಿಸಿತು.

"ನಿದ್ರೆಯಲ್ಲಿ ನನ್ನನ್ನು ಮೋಸದಿಂದ ಕೊಂದೆಯಲ್ಲವೆ? ನಿನ್ನನ್ನು ಕೊಲ್ಲಲು ಅದೋ ಅಳಿಯ ರಾಮರಾಯ ಕಾದಿದ್ದಾನೆ! ಅವನ ಕತ್ತಿಯು ನಿನ್ನ ಎದೆಯನ್ನು ಸೀಳಲು ಹಾತೊರೆಯುತ್ತಿದೆ. ಆಗೋ, ಅಲ್ಲಿ ರಾಮರಾಯನು ನೆಮ್ಮದಿಯಿಂದ ನಿದ್ರಿಸುತ್ತಿದ್ದಾನೆ! ವಿಜಯನಗರದ ಅಭಿಮಾನ ದೇವತೆಗಳೇ ಅವನಿಗೆ ಸ್ವಾಗತವೀಯುತ್ತಿದ್ದಾರೆ! ಅವನಿಗೆ ವಿದ್ಯಾರಣ್ಯರ ಹಾರೈಕೆ ಇದೆ! ಭುವನೇಶ್ವರಿಯ ಆಶೀರ್ವಾದವಿದೆ! ನೀನು ನಾಳೆ ಸೋಲುವುದೇ ದಿಟ! ಸಾಯು

ವುದೇ ದಿಟ! ಗೆಲ್ಲಿ ರಾಮರಾಯ!" ಅವನು ಮಗುವನ್ನು ಹೊಡೆಯಲು ಎದ್ದ. ಅದು ಕಿಲಕಿಲನೆ ನಕ್ಕು ಮಾಯವಾಯಿತು. ಮತ್ತೆ ಕಣ್ಮುಚ್ಚಿದ; ಇಂತಹುದೇ ಕನಸು.

ಈ ಬಾರಿ ಸೋಮರಸನ ಪ್ರೇತ ಪ್ರತ್ಯಕ್ಷವಾಯಿತು.

"ನನ್ನನ್ನು ಮೋಸದಿಂದ ಕೊಲ್ಲಿಸಿದ ನಿನಗೆ ನಾಳಿನ ಯುದ್ಧದಲ್ಲಿ ನಾನೇ ಮೃತ್ಯು! ರಣಹದ್ದು ನಾಯಿನರಿಗಳಂತೆ ಬಂದು ನಿನ್ನ ರಕ್ತವನ್ನು ಕುಡಿಯುತ್ತೇನೆ! ನಿನಗೆ ದೊರೆಯುವುದು ಹಿಡಿಮಣ್ಣು! ನಿನ್ನನ್ನು ಹೂಳುವವರು ನಾಯಿನರಿಗಳು! ನಿನ್ನ ಗೋರಿಯ ಮೇಲೆ ಮುಳ್ಳು ಪಂಟಗಳು ಬೆಳೆಯುತ್ತವೆ! ಬಾಳ್ ಕರ್ನಾಟಕ ಮಾತೆ! ಆಳ್ ಭುವನೇಶ್ವರಿ!" ಎಂದು ಹೇಳಿಕೊಂಡು ಅವನ ಎದೆಯ ಮೇಲೆ ಕಾಲಿಟ್ಟಾಗ ಅಸಾಧ್ಯನೋವಾಯಿತು. ಅವನ ಪ್ರೇತ ಮರೆಯಾದ ಕೂಡಲೇ ಸೆಲ್ಲಪ್ಪನ ಪ್ರೇತ ಎದುರು ನಿಂತಿತು.

"ಧರ್ಮ ಅಧರ್ಮಕ್ಕೆಡೆಗೊಡುವಂದೇ, ನ್ಯಾಯವನ್ನು ಅನ್ಯಾಯ ಆಕ್ರಮಿಸಿದಂದೇ ಸಾಮ್ರಾಜ್ಯದ ಅಳಿವೆಂದು ಮಹರ್ಷಿ ವಿದ್ಯಾರಣ್ಯರ ಭವಿಷ್ಯವಾಣಿ ಇದೆ ಎಂದ ನನ್ನ ಬಾಯನ್ನು ಮುಚ್ಚಿಸಿದೆಯಲ್ಲವೆ? ನನ್ನ ಬಾಳನ್ನು ನುಂಗಿದ ನಿನ್ನ ಬಾಳನ್ನು ನುಂಗಲು ರಾಮರಾಯನು ಕಾದಿದ್ದಾನೆ! ನಿನಗೆ ದೊರಕುವುದು ನರಕ! ನಿನ್ನ ಚೀರಾಟದ ಹಿಮ್ಮೇಳದಲ್ಲಿ ಪ್ರೇತಗಳು ಮಾಡುವ ಕುಣಿತಕ್ಕೆ ನಿನ್ನ ಎದೆಯ ಮೇಲೆ ನಾನು ನರ್ತಿಸುತ್ತೇನೆ."

"ನನ್ನ ಮನೆಯನ್ನು ಅನ್ಯಾಯವಾಗಿ ತೊಳೆದ, ನಿನ್ನ ಮನೆ ತೊಳೆಯುವುದನ್ನು ನಾನು ನಾಳೆ ನೋಡುತ್ತೇನೆ! ನಿನ್ನ ವಂಶ ತೊಳೆಯುವಾಗ ನನಗೆ ಹಬ್ಬ! ನಿನ್ನ ಮಾಂಸದ ಅಡಿಗೆ! ನೆತ್ತರಿನ ಪಾನಕ! ನಿನ್ನ ಕೈಲಿ ಸಾವು ಕಂಡ ಪ್ರೇತಗಳೇ ಅತಿಥಿಗಳು! ನಿನ್ನ ಅನ್ಯಾಯಗಳು ನಿನ್ನನ್ನು ನುಂಗಲಿ! ಹುಚ್ಚು ದೊರೆ ಸಲಕಂ ತಿಮ್ಮ ಸಾಯಲಿ!" ಹೀಗೆ ಹೇಳಿ ಒಕ್ಕೊರಲಿನಿಂದ ಎರಡು ಶ್ರೀಮಂತ ಪ್ರೇತಗಳು ಹಾಡಿದುವು.

"ನಾಳೆ ನಮಗೆ ಕಾದಿದೆ ಮಾರಿಯೌತಣ
ಹುಚ್ಚುದೊರೆಯ ಸತ್ತ ಹೆಣವ ಕಿತ್ತು ತಿನ್ನುವ
ನಾಳೆ ನಮಗೆ ಕಾದಿದೆ ಮಾರಿಯೌತಣ."

ಹೀಗೆ ಹಾಡಿಕೊಂಡು ಅವನ ಮೇಲೆ ಅವು ನಡೆದುಹೋದಾಗ ಅವರ ಪಾದ ಘಾತಕ್ಕೆ ಅವನ ಜೀವ ತತ್ತರಿಸಿ "ಅಯ್ಯೋ ಸತ್ತೆ." ಎಂದು ಚೀರಿದನು.

ಆಗ ಅಚ್ಯುತರಾಯನ ಪ್ರೇತ ಕಾಣಿಸಿಕೊಂಡಿತು.

"ನೀನು ಇಷ್ಟು ಸುಲಭವಾಗಿ ಎಲ್ಲಿ ಸಾಯುತ್ತಿ? ಸವಿಮಾತುಗಳಿಂದ ವಂಚಿಸಿ, ಬೆನ್ನಿನಲ್ಲಿ ಚೂರಿಯಿಟ್ಟ, ನೀಚನಿಗೆ, ವಿಷವಿಟ್ಟು ಕೊಂದ ದ್ರೋಹಿಗೆ

ನಾಳೆ ಇದಕ್ಕೂ ಕ್ರೂರವಾದ ಶಿಕ್ಷೆ ಕಾದಿದೆ! ಎದ್ದೇಳು ದ್ರೋಹಿ? ನಿನಗೇಕೆ ನಿದ್ರೆ! ನಿನ್ನ ಕಲುಷಿತವಾದ ದೇಹಕ್ಕೆ ಕೆನ್ನೀರಿನ ರಕ್ತಾಭಿಷೇಕ ಕಾದಿದೆ! ಇದ ಕ್ಕಾಗಿ ಇಷ್ಟೊಂದು ಜನರನ್ನು ಕೊಂದೆಯಲ್ಲವೆ? ಇದೋ ನಿನ್ನ ಸಿಂಹಾಸನ ಅಸ್ಥಿಪಂಜರದ ಸಿಂಹಾಸನ! ತಲೆಬುರುಡೆ ನಿನಗೆ ಕಿರೀಟ! ಮಡಿದವರ ಕೈಗಳೇ ನಿನಗೆ ಛತ್ರಿ ಚಾಮರಗಳು! ಪ್ರೇತಗಳೇ ಭಟ್ಟಂಗಿಗಳು! ನಾಳೆ ನಿನ್ನ ಓಲಗ ಸಾಲೆಯಲ್ಲಿ ಪ್ರೇತ ನೃತ್ಯ ನಡೆಯುತ್ತದೆ! ಅದಕ್ಕೆ ಸಿದ್ಧನಾಗು, ಎದ್ದೇಳು ದ್ರೋಹಿ!

"ಎದ್ದೇಳು ಅಳಿಯ ರಾಮರಾಯ! ನೀನು ವಿಜಯನಗರದ ಭಾಗ್ಯ ತಾರೆ! ನಾಳೆ ವಿಜಯ ನಿನ್ನದು! ನಿನಗೆ ಮಂಗಳವಾಗಲಿ."

ಈಗ ವೆಂಕಟಾದ್ರಿಯ ಸರದಿ!

"ನಿದ್ರೆಯಲ್ಲಿದ್ದ ನನ್ನನ್ನು ಸದ್ದಿಲ್ಲದೆ ಕೊಲೆಗಡುಕರಿಗೆ ಒಪ್ಪಿಸಿದೆಯಲ್ಲವೇ? ನೀಚ, ನಿದ್ರಿಸು! ಇದೇ ನಿನ್ನ ಕಡೆಯ ನಿದ್ರೆ ನಿನ್ನ ಅಳಿದುಳಿದ ನೀಚತನವನ್ನು ಈ ನಿದ್ರೆಯಲ್ಲಿ ಪೂರೈಸಿಕೊ! ನಾಳೆ ನೀನು ಉಳಿಯುವುದಿಲ್ಲ! ಇದೇ ನಿನ್ನ ಕಡೆಯ ದಿನ! ನಿನ್ನ ಪೈಶಾಚಿಕ ಪ್ರಭುತ್ವದ ಕೊನೆಯ ದಿನ! ನಾಳಿನ ಮಂಗಳ ಪ್ರಭಾತದಲ್ಲಿ ನಿನ್ನ ಅಟ್ಟಹಾಸ, ನಿರಂಕುಶಾಡಳಿತ ಕುಸಿದುಬೀಳುವುದು!" ಎಂದು ಹೇಳಿ ಕಣ್ಮರೆಯಾದ.

ಅಷ್ಟರಲ್ಲಿ ಮತ್ತೆ ಪಿಶಾಚಿಗಳು ಹಾಡಿಕೊಂಡು ನೃತ್ಯಮಾಡಲು ತೊಡಗಿದುವು.

"ನಾಳೆ ನಮಗೆ ಕಾದಿದೆ,
ಮಾರಿಯೌತಣ!
ಹುಚ್ಚುದೊರೆಯ
ಸತ್ತ ಹೆಣವ ಕಿತ್ತು ತಿನ್ನುವ
ನಾಳೆ ನಮಗೆ ಕಾದಿದೆ!
ಮಾರಿಯೌತಣ."

ಅವನಿಗೆ ಮೈಯೆಲ್ಲಾ ಗಾಯಗಳಿಂದ ತೂತು ಬಿದ್ದಂತೆ ಭಾಸವಾಗಿ ಕಿರಿಚಿದನು.

"ಅಯ್ಯೊ ನೋವು! ಮೈಯೆಲ್ಲಾ ಗಾಯಗಳಿಂದ ತೂತು ಬಿದ್ದಿದೆ! ರಕ್ತದ ಕೋಡಿ ಹರಿಯುತ್ತಿದೆ! ಈ ಪಿಸಾಚಿಗಳು ನಾನು ಬದುಕಿರುವಂತೆಯೇ ಕಿತ್ತು ತಿನ್ನುತ್ತಿವೆಯಲ್ಲಾ. ರಕ್ತ ಹೀರುತ್ತಿವೆಯಲ್ಲಾ – ಅಯ್ಯೊ ಸಂಕಟ! ಅಯ್ಯೋ ಬಾಧೆ! ಎಲ್ಲಿಗಾದರೂ ತಪ್ಪಿಸಿಕೊಂಡು ಹೋಗಬೇಕು! ಸಾಮ್ರಾಜ್ಯ ವನ್ನು ಬೇಕಾದರೂ ಕೊಡುತ್ತೇನೆ! ನನಗೆ ಕುದುರೆಯನ್ನು ಕೊಡಿ! ಅಯ್ಯೊ

ನೋವು! ಸಹಿಸಲು ಸಾಧ್ಯವಿಲ್ಲ ...ಸಾಧ್ಯವಿಲ್ಲ......." ಎಂದು ಚೀರಿ, ಕಣ್ಣು ಬಿಟ್ಟು ನೋಡಿದ! ಇದುವರೆಗೆ ನಡೆದುದೆಲ್ಲವೂ ಕನಸೆಂದು ತಿಳಿದು ಸ್ವಲ್ಪ ಸಮಾಧಾನವಾಯಿತು. ಆದರೂ ಪ್ರೇತಗಳನ್ನು ನೆನೆದಾಗ ಭಯವಾಗದೇ ಇರಲಿಲ್ಲ. ಮುಂದೆ ಅವನಿಗೆ ನಿದ್ರೆ ಹತ್ತಲಿಲ್ಲ.

ಹೀಗೆ ಪೆದ್ದತಿರುಮಲನು ತನ್ನ ಅಂತರಂಗದ ಸಾವಿರ ನಾಲಗೆಗಳ ಮೂದಲಿಕೆಗೆ ಸಿಲುಕಿ ಜರ್ಜರಿತನಾಗಿದ್ದನು. ಒಂದೊಂದು ನಾಲಗೆಯೂ ಒಂದೊಂದು ದ್ರೋಹದ ಕಥೆಯನ್ನು ಹೇಳಿ ಗಾಸಿಮಾಡಿದ್ದುವು. ಅಯ್ಯೋ ನಾನೆಂತಹ ಪಾಪಿಯಾದೆ! ನಾನು ಸತ್ತರೂ ಅಯ್ಯೋ ಎನ್ನುವವರು ಇಲ್ಲದಂತೆ ಮಾಡಿಕೊಂಡೆನಲ್ಲಾ! ನನ್ನನ್ನು ಈ ವಿಶಾಲ ಜಗತ್ತಿನಲ್ಲಿ ಒಬ್ಬರೂ ಪ್ರೀತಿಸುವುದಿಲ್ಲ! ಪ್ರೀತಿಸುತ್ತಿದ್ದ ಒಬ್ಬನೇ ಒಬ್ಬ ಸಹೋದರನನ್ನು ಕಳೆದುಕೊಂಡೆ! ಇನ್ನು ನಾನು ಯಾರಿಗಾಗಿ ಈ ಕ್ರೂರಜಗತ್ತಿನಲ್ಲಿ ಬಾಳಬೇಕು. ಎಂದು ಪರಿತಪಿಸುತ್ತಿದ್ದ. ಸಾವು ಅವನಿಗೆ ಹಿತವಾಗಲಿಲ್ಲ. ರಾತ್ರಿ ಕಂಡಿದ್ದ ಪ್ರೇತಗಳು ಸಾವು ಎಷ್ಟು ಘೋರವೆಂದು ತಿಳಿಸಿದ್ದುವು. ಈಗ ಅವನಿಗೆ ಬದುಕು ಘೋರವಾಗಿತ್ತು; ಸಾವು ಬದುಕಿಗಿಂತ ಘೋರವಾಗಿತ್ತು! ಅವನು ಸಾವಿಗೆ ಹೆದರಿ ಬದುಕಿದ್ದ. ಬದುಕಿಗೆ ಹೆದರಿ ಸತ್ತಿದ್ದ! ಹೀಗಿದ್ದ ಅವನಿಗೆ ತನ್ನ ಸಾವಿನ ದೂತನಂತೆ ಯಾರೋ ಬಂದು, ಅಳಿಯ ರಾಮರಾಯನ ಕಾಣಿಕೆಯನ್ನು ತಂದೊಪ್ಪಿಸಿ ಹೋಗಿದ್ದರು. ಅದೇನೆಂದು ತಿಳಿಯುವ ಕುತೂಹಲವಾಗಿ, ಆ ಪೆಟ್ಟಿಗೆಯನ್ನು ಒಡೆದು ನೋಡಲು ಅಳಿಯ ರಾಮರಾಯನ ಪತ್ರ ಹಾಗೂ ತನ್ನ ತಮ್ಮನ ತಲೆ ಕಣ್ಣಿಗೆ ಬಿತ್ತು. ಆ ಪತ್ರದಲ್ಲಿ ಅಳಿಯ ರಾಮರಾಯನು ಹೀಗೆ ಬರೆದಿದ್ದ,

"ನಿನಗೆ ನಿನ್ನ ಸಹೋದರನ ದುರವಸ್ಥೆಯಾಗುವುದು ಇಷ್ಟವಿಲ್ಲದಿದ್ದರೆ, ನಾಳೆ ಯುದ್ಧವಿಲ್ಲದೆ ಕೋಟೆಯನ್ನು ನಮಗೊಪ್ಪಿಸಿ – ನಾಳಿನ ವಿಚಾರಣೆಯನ್ನು ಎದುರುನೋಡು" ಇದನ್ನು ಓದಿ ರೋಷದಿಂದ ಹಲ್ಲು ಕಡಿದ ಪೆದ್ದತಿರುಮಲ.

೨೭

ಪೆದ್ದತಿರುಮಲನು ಕ್ರೋಧದಿಂದ ಹುಚ್ಚನಾಗಿದ್ದ. ಅಳಿಯ ರಾಮರಾಯನು ಚಿನ್ನತಿರುಮಲನನ್ನು ಆದವಾನಿಯ ಯುದ್ಧದಲ್ಲಿ ಕೊಂದು, ವಿಜಯೋನ್ಮತ್ತನಾಗಿ ರಾಜಧಾನಿಯ ಬಳಿ ಬೀಡುಬಿಟ್ಟಿದ್ದ. ಅವನಿಗೆ ಸಲಕಂ ಸಹೋದರರ ಕೈಯಲ್ಲಿ ದಬ್ಬಾಳಿಕೆಯಿಂದ, ಪೈಶಾಚಿಕ ಪ್ರಭುತ್ವದಿಂದ ನೊಂದು, ಬೆಂದ ಜನತೆ, ಬೆಂಬಲವಾಗಿದ್ದರು. ಇಷ್ಟು ಸಾಲದೆಂಬಂತೆ ಯುದ್ಧದಲ್ಲಿ ಸೋತ ಸೈನ್ಯ ರಾಮರಾಯನ ಪಕ್ಷ ಸೇರಿತ್ತು. ಅಳಿಯ ರಾಮರಾಯನು ಪತ್ರ

ದಲ್ಲಿ ತಿಳಿಸಿದ್ದಂತೆ, ಅವನನ್ನು ಎದುರಿಸಿ ಯುದ್ಧ ಮಾಡಬೇಕೆ? ಅಥವಾ ಯುದ್ಧವಿಲ್ಲದೆ ವಿಜಯನಗರವನ್ನು ಶತ್ರುಗಳ ಪಾಲುಮಾಡಬೇಕೆ? ಹೇಗೆ ರಾಜಧಾನಿಯನ್ನು ಕೈವಶ ಮಾಡುವುದರಿಂದ, ಅವನ ಪ್ರಾಣ ಉಳಿಯುವ ನಂಬಿಕೆ ಇರಲಿಲ್ಲ. ಅವನು ತನ್ನನ್ನು ಬಹಿರಂಗ ವಿಚಾರಣೆಗೆ ಗುರಿಪಡಿಸಿ ಕ್ರೂರವಾಗಿ ಶಿಕ್ಷಿಸದೆ ಇರಲಾರ! ಎಂದ ಮೇಲೆ ಸಾವು ನಿಶ್ಚಯ! ಯುದ್ಧಕ್ಕೆಳೆಸಿದರೂ ಸಾವು! ಸುಮ್ಮನಿದ್ದರೂ ಸಾವು!

ಅವನಿಗೆ ವಿಜಯನಗರದಿಂದ ತಪ್ಪಿಸಿಕೊಂಡು ಹೋಗಿ, ಎಲ್ಲಿಯಾದರೂ ತಲೆ ಮರೆಸಿಕೊಳ್ಳಬೇಕೆಂಬ ಆಸೆಯಿತ್ತು. ಆದರೆ ತಪ್ಪಿಸಿಕೊಳ್ಳುವ ಮಾರ್ಗ ಮಾತ್ರ ತಿಳಿಯದಾಗಿತ್ತು. ರಾಜಧಾನಿಯಿಂದ ಹೊರಗೆ ಇದ್ದ ರಹಸ್ಯ ಗುಪ್ತ ಮಾರ್ಗಗಳನ್ನು ತಿಳಿದಿದ್ದ ಅಳಿಯ ರಾಮರಾಯನು, ಅವುಗಳಿಗೆ ವಿಷದ ಹೊಗೆ ಹಾಕಿ ಮುಚ್ಚಿದ್ದ. ಕೋಟೆಯ ಬಾಗಿಲಿನಿಂದ ತಪ್ಪಿಸಿಕೊಳ್ಳಲು ರಾಮರಾಯನು ಕೋಟೆಯ ಬಳಿ ಬೀಡುಬಿಟ್ಟಿದ್ದನು.

ಅವನಿಗೆ ಯುದ್ಧ ಮಾಡುವ ಧೈರ್ಯವಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಸೈನಿಕರಿಗೆ ಸರಿಯಾದ ಭತ್ಯ ಕೊಡದೆ ಅವರ ಅವಿಶ್ವಾಸಕ್ಕೆ ಪಾತ್ರನಾಗಿದ್ದ. ಈಗ ಅಳಿಯರಾಮರಾಯನು ಸೈನ್ಯದೊಡನೆ ಬಂದು ಬೀಡುಬಿಟ್ಟಲಾಗಾಯಿತು – ಅವನಿಗೆ ತಿಳಿಯದ ಯಾವುದೋ ರಹಸ್ಯ ಪಿತೂರಿ ನಡೆಯುತ್ತಿರುವಂತೆ ಅವನಿಗೆ ಭಾಸವಾಗಿತ್ತು. ಇಂತಹವರನ್ನು ನೆಚ್ಚಿದರೆ ಸೋಲು ಮಾತ್ರವಲ್ಲ, ತನ್ನನ್ನು ತನ್ನ ಸೈನಿಕರೇ ಶತ್ರುಗಳ ಪಾಲು ಮಾಡುವುದೂ ಹೆಚ್ಚಲ್ಲ. ಅವರಿಗೆ ಹೆದರಿಕೊಂಡು ಪೆದ್ದತಿರುಮಲನು ಅರಮನೆಯ ಕೋಟೆಯಲ್ಲಿ ತನ್ನ ನೆಚ್ಚಿನ ಭಂಟ ಹನುಮ ನಾಯಕನನ್ನು ಕಾವಲಿಟ್ಟು, ಅಂತಃಪುರದಲ್ಲಿ ತಾನೊಬ್ಬನೇ ಉಳಿದಿದ್ದ.

ಅವನಿಗೆ ಈಗ ಯಾರಲ್ಲೂ ನಂಬಿಕೆಯಿರಲಿಲ್ಲ—ಅವನ ನಂಬಿಕೆಗೆ ಪಾತ್ರನಾಗಿದ್ದ ಅವನ ತಮ್ಮನ ಮರಣ ಅವನನ್ನು ಅಧೀರನನ್ನಾಗಿ ಮಾಡಿತ್ತು. ರಾತ್ರಿ ನಿದ್ರೆಯಲ್ಲಿ ಕಂಡಿದ್ದ ಪ್ರೇತಗಳ ಕನಸಿನಿಂದ ಮನಸ್ಸು ಮತ್ತಷ್ಟು ಪ್ರಕ್ಷುಬ್ಧವಾಗಿತ್ತು. ತನ್ನ ಸೋದರನ ತಲೆ ಅಳಿಯ ರಾಮರಾಯನಿಂದ ಕಾಣಿಕೆಯಾಗಿ ಕಳುಹಿಸಲ್ಪಟ್ಟಿತ್ತು. ಅದರೊಂದಿಗೇ ರಕ್ತದಲ್ಲಿ ಬರೆದ ಅವನ ಬೆದರಿಕೆಯ ಪತ್ರ. ಏನು ಮಾಡಬೇಕೆಂದು ತಿಳಿಯದೆ ಅಂತಃಪುರದಲ್ಲಿ ಶಥಪಥ ತಿರುಗುತ್ತಿದ್ದ. ಇದ್ದಕ್ಕಿದ್ದಂತೆ ಯಾರೋ ಗಹಗಹಿಸಿ ನಕ್ಕಂತಾಯಿತು – ಅದೇ ಚಿರಪರಿಚಿತ ನಗು; ತನ್ನನ್ನು ನೋಡಿ ನಗುವವರು ಯಾರೆಂದು ತಲೆ ಎತ್ತಿ ನೋಡಿದ. ಎದುರಿಗೆ ಹುಚ್ಚಿ ಅನ್ನಪೂರ್ಣಾದೇವಿ – ಕಾಳಿಯಂತೆ ನಿಂತಿದ್ದಳು! ಅದೇ ಕೆಂಗಣ್ಣುಗಳು! ಕೆದರಿದ ಕೇಶ! ಹುಚ್ಚಿಯ ಉನ್ಮತ್ತ ಭಯಾನಕ ನಗು!

"ಯಾರದು?" ಎಂದು ನಿಂತೆಡೆಯಲ್ಲೇ ಗರ್ಜಿಸಿದ.

"ನಾನು ಹುಚ್ಚಿ ಅನ್ನಪೂರ್ಣಾದೇವಿ – ನಿನ್ನ ಭಾಗದ ಮೃತ್ಯು !"

"ನಿನ್ನನ್ನು ಇಲ್ಲಿ ಯಾರು ಬಿಟ್ಟರು?"

"ಯಾರೂ ಬಿಡಲಿಲ್ಲ. ನಾನೇ ಬಂದೆ!"

"ನಿನಗಿಲ್ಲೇನು ಕೆಲಸ?"

"ನಿನ್ನ ಪಾಪದ ಬಟ್ಟಲು ತುಂಬಿತು – ನಿನಗಿನ್ನು ಉಳಿಗಾಲವಿಲ್ಲವೆಂದು ತಿಳಿಸಲು ಬಂದೆ!

"ಅದು ನೀನೇನು ತಿಳಿಸಬೇಕಾಗಿಲ್ಲ. ನನಗೆ ತಿಳಿದಿದೆ!"

"ಹೌದು ನಿನ್ನ ಮೋಸದಿಂದ ಕೊಲೆಯಾದ ಪ್ರೇತಗಳು ತಿಳಿಸಿದ್ದಾರೆ. ನಾ ಬಲ್ಲೆ. ಅಳಿಯ ರಾಮರಾಯನು ಕಳುಹಿಸಿಕೊಟ್ಟ ನಿನ್ನ ಅನುಜನ ತಲೆ, ಅವನು ನಿನಗೆ ಬರೆದಿರುವ ಎಚ್ಚರಿಕೆಯ ಪತ್ರ ನಿನ್ನ ಅಂತ್ಯ ಸನ್ನಿಹಿತವಾಗಿದೆ ಎಂದು ತಿಳಿಸಿವೆ. ನಾ ಬಲ್ಲೆ. ನಾನು ಬಂದುದು ಅದಕ್ಕಾಗಿ ಅಲ್ಲ – ನಿನಗಾಗಿ ಗೋರಿ ಸಿದ್ಧವಾಗಿದೆ. ನಿನ್ನ ಅಕೃತ್ಯಗಳು ನಿನಗಾಗಿ ಅಗೆದು ಸಿದ್ಧಪಡಿಸಿರುವ ಗೋರಿಯನ್ನಲಂಕರಿಸಲು ನಿನಗೆ ಆಹ್ವಾನವೀಯಲು ಬಂದಿದ್ದೇನೆ! ನಿನ್ನಿಂದ ಮಡಿದವರ ಪ್ರೇತಗಳು ಅಮಂಗಳವಾದ್ಯವನ್ನು ಊದುತ್ತಿವೆ. ಭೂತಗಳು ಪರಾಕು ಹೇಳುತ್ತಿವೆ! ಮಜ್ಜೆ ಮಾಂಸ, ಕೆನ್ನೀರುಗಳ ಆರತಿ ನಿನಗಾಗಿ ಸಿದ್ಧವಾಗಿದೆ! ಮೂಳೆಗಳ ಕೈಬೆರಳುಗಳ ವಿಕಟ ನಗೆ! ವಿಧಿಯ ಅಟ್ಟಹಾಸ! ಎಲ್ಲವೂ ನಿನಗಾಗಿ ಸಿದ್ಧವಾಗಿದೆ! ಕೂಡಲೇ ಹೊರಟು ಬಾ....ನಿನ್ನ ಪಾಪದ ಬಟ್ಟಲು ತುಂಬಿದೆ—ನೀನೇ ಸಿದ್ಧಪಡಿಸಿರುವ ಗೋರಿಗೆ ಹಸೆಗೆ ಬರುವ ಮದುವಣಿಗನಂತೆ ಬಾ....ಅಹ್ಹಹ್ಹ ! ಅಹ್ಹಹ್ಹ !"

—ಎಂದು ಹೇಳಿ ಅಲ್ಲಿ ನಿಲ್ಲದೆ ಹೊರಟುಹೋದಳು.

"ಅವಳನ್ನು ಹಿಡಿಯಿರಿ, ಆ ಹುಚ್ಚಿಯನ್ನು ತಡೆದು ಬಂಧಿಸಿರಿ!" ಎಂದು ಕೂಗುತ್ತಾ ಅವಳ ಹಿಂದೆ ಹುಚ್ಚನಂತೆ ಓಡಿಹೋದ ಪೆದ್ದತಿರುಮಲ. ಆದರೆ ಅಲ್ಲಿದ್ದ ಪರಿಚಾರಕರು ಹಿಡಿದು ಬಂಧಿಸಲು ಯಾರನ್ನೂ ಕಾಣದೆ, ಸಲಕಂ ಪೆದ್ದ ತಿರುಮಲನನ್ನೇ, ಹುಚ್ಚುದೊರೆ ಎಂಬ ಶಂಕೆಯಿಂದ ನೋಡಿದರು.

"ಆ ಹುಚ್ಚಿ ಎಲ್ಲಿ ಹೋದಳು?"

"ಯಾವ ಹುಚ್ಚಿ ಪ್ರಭು?"

"ಈಗ ಇಲ್ಲಿಗೆ ಬಂದಿದ್ದ ಹುಚ್ಚಿ ಅನ್ನಪೂರ್ಣಾದೇವಿ!"

"ಇಲ್ಲಿಗೆ ಯಾರೂ ಬರಲಿಲ್ಲ ಪ್ರಭು!"

"ನಾನು ಇದೇ ಕಣ್ಣುಗಳಿಂದ ನೋಡಿದೆ. ಅವಳ ಮಾತನ್ನು ಕೇಳಿದೆ!"

"ನಾವು ಇಲ್ಲೇ ಇದ್ದೇವೆ ಪ್ರಭು! ಇಲ್ಲಿಗೆ ಯಾರೂ ಬರಲಿಲ್ಲ! ನೀವು ಅತ್ತಿಂದಿತ್ತ ಓಡಾಡುತ್ತಾ ಏನೋ ಗೊಣಗುಟ್ಟುತ್ತಿದ್ದಿರಿ! ನಿಮ್ಮ ಬಳಿಗೆ ಬರಲು ಹೆದರಿ ಯಾರೂ ಬರಲಿಲ್ಲ!"

"ಹಾಗಾದರೆ ನಾನು ಕನಸು ಕಾಣುತಿದ್ದೆನೆ?....ಇಲ್ಲ, ಎಚ್ಚರವಾಗಿಯೇ ಇದ್ದೆ! ಹುಚ್ಚಿ ಅನ್ನಪೂರ್ಣಾದೇವಿ ಹಿಂದೊಮ್ಮೆ ಬಂದಿದ್ದಂತೆ, ಯಾರೂ ತಿಳಿಯದಂತೆ ಬಂದು ಯಾರಿಗೂ ತಿಳಿಯದೆ ಹೋಗಿದ್ದಾಳೆ! ಪಹರೆಯವರು ಅವಳ ಪಕ್ಷವಿರಬೇಕು. ಅಂತಲೇ ಅವಳನ್ನು ಒಳಗೆ ಬಿಟ್ಟು ತನ್ನನ್ನು ಹೀಗೆ ಬಾಯಿ ಬಡಿಯುತ್ತಿರುವುದು...." ಎಂದು ಯೋಚಿಸಿ ಅವನು ಕ್ಷುಬ್ಧನಾದನು.

ಅವರನ್ನು ಹತ್ತಿರ ಕರೆದು ಗುಡುಗಿದನು.

"ಇಲ್ಲಿಗೆ ಬಂದಿದ್ದ ಹುಚ್ಚಿಯನ್ನು ಏಕೆ ಬಿಟ್ಟಿರಿ!"

"ಇಲ್ಲಿಗೆ ಯಾರೂ ಬರಲಿಲ್ಲ ಪ್ರಭು!"

"ನಾನು ಸುಳ್ಳು ಹೇಳುವೆನೆಂದು ನಿಮ್ಮ ಭಾವನೆಯೆ?"

"ಪ್ರಭು, ನಮ್ಮಿಂದ ಅಪಚಾರವಾಗಿದ್ದರೆ ಕ್ಷಮಿಸಬೇಕು!"

"ನಿಮಗೆ ತಿಳಿದಿದೆ, ಆದರೂ ನನಗೆ ದ್ರೋಹ ಬಗೆಯುತ್ತಿದ್ದೀರಿ!"

—ಎಂದು ಹೇಳಿ ಹನುಮನಾಯಕನನ್ನು ಕರೆಸಿಕೊಂಡು ಅಲ್ಲಿದ್ದ ಹತ್ತು ಜನ ಪಹರೆಯವರನ್ನು ಶೂಲಕ್ಕೇರಿಸಲು ಆಜ್ಞೆ ಮಾಡಿದ.

ಅಷ್ಟರಲ್ಲಿ ದೂತನೊಬ್ಬನು ಕಾಣಿಸಿಕೊಂಡು,

"ಪ್ರಭು, ಅನ್ಯಾಯವಾಯಿತು. ಅಚಾತುರ್ಯವಾಯಿತು. ಆನೆಗೊಂದಿಯ ಸೆರೆಮನೆಯನ್ನು ದ್ರೋಹಿಗಳು ಒಡೆದಿದ್ದಾರೆ; ಒಳಗಿದ್ದ ಸೆರೆಯಾಳುಗಳನ್ನೆಲ್ಲಾ ಬಿಡಿಸಿದ್ದಾರೆ!"

"ಸೆರೆಮನೆಯ ರಕ್ಷಣೆಗೆ ನೇಮಕರಾಗಿದ್ದ ಸೇವಕರು ಏನಾದರು?"

"ಅವರು ಮಾಡಿದ ದ್ರೋಹವೇ ಇದು!"

"ಅನಾಹುತವಾಯಿತು! ಸೆರೆಮನೆಯಲ್ಲಿದ್ದ ವಿಠಲದೇವ, ಮುಕುಂದ ನಾಯಕ ತಪ್ಪಿಸಿಕೊಂಡರೆ?"

"ಅವರೇ ಸೆರೆಮನೆಯನ್ನು ಒಡೆಸಿದ ಪಿತೂರಿಯ ಮುಖಂಡರು!"

"ಹನುಮನಾಯಕರೇ, ಆ ದ್ರೋಹಿಗಳನ್ನೆಲ್ಲಾ ಹಿಡಿದು ಆನೆಯ ಕಾಲಿಗೆ ಕಟ್ಟಿಸಿ."

"ಅಪ್ಪಣೆ ಪ್ರಭು!"

ಅವನು ಇನ್ನೇನು ಹೊರಡಬೇಕೆನ್ನುವುದರಲ್ಲಿ ಮತ್ತೊಬ್ಬ ಚಾರನು ಓಡಿ ಬಂದು "ಪ್ರಭು, ಸೈನಿಕರಲ್ಲೂ ವಿದ್ರೋಹದ ಕಾರ್ಯ ನಡೆದಿದೆ! ಕೋಟೆಯ ರಕ್ಷಣೆಗೆ ಇದ್ದ ಸೈನಿಕರು ತಮ್ಮ ದಳಪತಿಯನ್ನು ಕೊಂದು ದಂಗೆ ಎದ್ದಿದ್ದಾರೆ!"

"ಹನುಮನಾಯಕರೇ ಸೈನಿಕರನ್ನು ನನ್ನ ಮೇಲೆ ಎತ್ತಿಕಟ್ಟಿದ ಆ ದ್ರೋಹಿಗಳನ್ನು ಕೂಡಲೇ ಗುಂಡಿನ ಬಾಯಿಗೆ ಕಟ್ಟಿರಿ!"

"ಅಪ್ಪಣೆ ಪ್ರಭು."

ಅಷ್ಟರಲ್ಲಿ ಮತ್ತೊಬ್ಬ ದೂತನು ಕಾಣಿಸಿಕೊಂಡು,

“ಪ್ರಭು, ದ್ರೋಹಿಗಳಾರೊ ಶತ್ರು ಸೈನ್ಯಕ್ಕೆ ಕೋಟೆಯ ಬಾಗಿಲನ್ನು ತೆರೆದಿದ್ದಾರೆ! ಶತ್ರುಗಳು ಸಮುದ್ರದಂತೆ ಕೋಟೆಯೊಳಗೆ ಪ್ರವೇಶಿಸಿ ಎಲ್ಲೆಲ್ಲೂ ಆವರಿಸಿದ್ದಾರೆ! ನಮ್ಮ ಕಡೆಯ ಸೈನ್ಯ ಅವರಿಗೆ ಜಯಘೋಷ ಹೇಳಿ ಸ್ವಾಗತಿಸುತ್ತಿದೆ!....ನಗರದ ಮುಖ್ಯ ಬೀದಿಗಳೆಲ್ಲಾ ಅವರ ವಶವಾಗಿದೆ!” ಎಂದನು.

ಇದನ್ನು ಕೇಳಿ ಪೆದ್ದ ತಿರುಮಲ ಹುಚ್ಚನಂತೆ ಕೆರಳಿ ಹೇಳಿದ.

“ದ್ರೋಹಿಗಳೇ, ನನ್ನ ಕಣ್ಣ ಮುಂದೆ ಇರಬೇಡಿ. ಇದಕ್ಕಿಂತ ಒಳ್ಳೆಯ ಸುದ್ದಿ ಹೇಳಲು ನಿಮಗೆ ಇರಲಿಲ್ಲವೆ?....ಹನುಮನಾಯಕರೇ ಆ ದ್ರೋಹಿಗಳನ್ನೆಲ್ಲಾ ಚರ್ಮ ಸುಲಿಸಿ ನಾಯಿನರಿಗಳ ಪಾಲುಮಾಡಿ.”

“ಅಪ್ಪಣೆ ಪ್ರಭು!”

ಇನ್ನೇನು ಹನುಮನಾಯಕನು ಹೊರಟು ಕೊಂಚಕಾಲವಾಗಿರಬೇಕು. ನಗರದೊಳಗೆ ಎಲ್ಲೆಲ್ಲೂ ಗದ್ದಲ. ಕೋಲಾಹಲಗಳೆದ್ದಿದ್ದುವು. ಇವುಗಳನ್ನು ಕೇಳಿ ಹನುಮನಾಯಕನು ಮತ್ತೆ ಓಡಿ ಬಂದನು.

“ಪ್ರಭು, ಶತ್ರುಗಳು ಆರು ಕೋಟೆಗಳನ್ನು ಹಾದು ಅರಮನೆಯ ಕಡೆಗೆ ನುಗ್ಗಿ ಬರುತ್ತಿದ್ದಾರೆ!”

“ಅರಮನೆಯ ಕೋಟೆಯ ಬಾಗಿಲುಗಳನ್ನು ಭದ್ರಪಡಿಸಿ!”

“ಭದ್ರಪಡಿಸಿದ್ದೇನೆ ಪ್ರಭು!”

“ನಿಮ್ಮ ದಳಗಳನ್ನೆಲ್ಲಾ ಅದರ ರಕ್ಷಣೆಗಿಡಿ!”

“ಇಟ್ಟಿದ್ದೇನೆ ಪ್ರಭು?”

“ಹಾಗಾದರೆ ಇನ್ನು ನೀವು ಹೋಗಬಹುದು.”

ಅವನು ನಾಲ್ಕು ಹೆಜ್ಜೆಯಿಡುವುದರಲ್ಲಿಯೇ ಪೆದ್ದ ತಿರುಮಲನು ಮತ್ತೆ “ಹನುಮನಾಯಕರೇ ಇಲ್ಲಿಗೆ ಬನ್ನಿ?” ಎಂದು ಕೂಗಿ ಕರೆದ.

“ಏನು ಪ್ರಭು?”

“ಗಜಶಾಲೆಯಲ್ಲಿ ಎಷ್ಟು ಆನೆಗಳಿವೆ?”

“ಸಾವಿರದ್ದೈನೂರು.”

“ಅಶ್ವಶಾಲೆಯಲ್ಲಿ ಕುದುರೆಗಳು ಎಷ್ಟಿವೆ?”

“ಮೂರು ಸಾವಿರ.”

“ಅವುಗಳ ಕಣ್ಣುಗಳನ್ನು ಕಿತ್ತು ಬಾಲಗಳನ್ನು ಕೊಯ್ದು ಅವುಗಳಿಂದ ಶತ್ರುಗಳಿಗೆ ಉಪಯೋಗವಾಗದಂತೆ ಮಾಡಿ, ಕೂಡಲೇ ಬಂದು ನನಗೆ ಸುದ್ದಿ ತಿಳಿಸಿ!”

“ಪ್ರಭೂ....” ಏನೋ ಹೇಳಲು ಹೊರಟ.

"ಇದು ನನ್ನ ಆಜ್ಞೆ...." ಎಂದು ಕೆರಳಿ ಕೆಂಗಣ್ಣು ಬಿಟ್ಟ.

"ಅರಮನೆಯ ರಾಜಭಂಡಾರದಲ್ಲಿ ಎಷ್ಟು ಹಣವಿದೆ?"

"ಹಣವಿಲ್ಲ ಪ್ರಭು! ಕೇವಲ ಮುತ್ತುರತ್ನ, ಗೋಮೇಧಿಕ, ಪುಷ್ಯರಾಗ, ಮುಂತಾದ ಅನರ್ಘ್ಯವಾದ ಬೆಲೆಬಾಳುವ ವಡವೆವಸ್ತುಗಳಿವೆ."

"ಇವುಗಳ ಬೆಲೆ ಎಷ್ಟಾಗಬಹುದು?"

"ಸುಮಾರು ಇಪ್ಪತ್ತು ಕೋಟಿ ಪಗೋಡಗಳಾಗಬಹುದು."

"ಮುತ್ತುರತ್ನಗಳನ್ನು ಬೀಸುವ ಕಲ್ಲಿಗೆ ಕೊಟ್ಟು ಪುಡಿಪುಡಿ ಮಾಡಿ ಶತ್ರುಗಳ ಉಪಯೋಗಕ್ಕೆ ಬಾರದಂತೆ ಮಾಡಿ. ಬೆಲೆಬಾಳುವ ವಡವೆಗಳನ್ನು ಗಾಣಕ್ಕೆ ಕೊಟ್ಟು ಪುಡಿ ಪುಡಿ ಮಾಡಿಸಿ ಅರಮನೆಯ ಕಂದಕದಲ್ಲಿ ಎಸೆಯಿರಿ."

"ಅಪ್ಪಣೆ ಪ್ರಭು?"

"ಅಂತಃಪುರದಲ್ಲಿರುವವರನ್ನೆಲ್ಲಾ ಹೊರಗೆ ಕಳುಹಿಸಿ ಅರಮನೆಗೆ ಬೆಂಕಿಯಿಡಿ."

"ಆಗಲಿ ಪ್ರಭು."

ಹುಚ್ಚುದೊರೆಯ ಆಜ್ಞೆಯನ್ನು ಕಾರ್ಯಗತಮಾಡಲು ಹನುಮನಾಯಕನು ಅಲ್ಲಿಂದ ಹೊರಟಮೇಲೆ ಸಲಕಂ ಪೆದ್ದ ತಿರುಲನು, ದ್ರೋಹಿಗಳನ್ನು ಶಪಿಸುತ್ತಾ ಹುಚ್ಚು ಹಿಡಿದವನಂತೆ, ಅರಮನೆಯಲ್ಲೇ ಓಡಾಡಿದ. ಕಡೆಗೆ ಅವನಿಗೆ ಅದೇ ನೆನಿಸಿತೋ, ಅರಮನೆಯ ಪಹರೆ ಮುಖಂಡನನ್ನು ಒಳಗೆ ಕರೆದು ಕೇಳಿದ.

"ಅರಮನೆಯ ರಕ್ಷಣೆಗೆ ಎಷ್ಟು ಮಂದಿ ಸೈನಿಕರಿದ್ದಾರೆ?"

"ಐನೂರು ಮಂದಿ ಪ್ರಭೂ."

"ಅರಮನೆಯ ಎಲ್ಲ ಮಹಾದ್ವಾರಗಳನ್ನು ಬಂಧಿಸಿ, ಅರಮನೆಯ ಕೋಟೆಯ ರಕ್ಷಣೆಗೆ ಹೊರಡಿ."

"ಪ್ರಭು ....?"

"ಮೊದಲು ನನ್ನ ಆಜ್ಞೆ ಕಾರ್ಯಗತವಾಗಲಿ. ಅನಂತರ ಮುಂದಿನ ಮಾತು." ಎಂದು ಗರ್ಜಿಸದ.

ಕುಡಿದು ಉನ್ಮತ್ತನಂತೆ ಕೆಂಗಣ್ಣು ಬಿಡುತ್ತಾ, ಎಲ್ಲರನ್ನೂ ನುಂಗಲು ಕುಳಿತ, ಕಾಲ ಭೈರವನಂತಿದ್ದ ಅವನನ್ನು ನೋಡಿ ಆ ಪಹರೆಯ ಮುಖಂಡನು ಮಾತಿಲ್ಲದೆ ಹೊರಟುಹೋದನು.

ಸಲಕಂ ತಿರುಮಲನ ಆಜ್ಞೆಯಂತೆ, ಅರಮನೆಯ ದಾಸ, ದಾಸಿ ಜನರನ್ನು ಹೊರಕ್ಕೆ ಕಳುಹಿಸಿ, ಅದಕ್ಕೆ ಬೆಂಕಿಯಿಡಲಾಯಿತು. ಎಲ್ಲ ಮಹಾದ್ವಾರಗಳನ್ನು ಬಂಧಿಸಿ ಕೋಟೆಯ ರಕ್ಷಣೆಗೆ ಸೈನಿಕರು ಓಡಿದರು.

ಸಲಕಂ ತಿರುಮಲನು ವಿಶಾಲವಾದ ಅರಮನೆಯಲ್ಲಿ, ತನ್ನ ಕೆಲವೇ

ಸಂಗಡಿಗರೊಡನೆ ಉಳಿದನು. ಅವನು ತನ್ನ ನಿರ್ಧಾರವನ್ನು ಕಾರ್ಯರೂಪಕ್ಕೆ ತರುವ ಮುನ್ನ ತನ್ನ ಆಜ್ಞೆಗಳು ಜಾರಿಯಾದವೋ ಇಲ್ಲವೊ ತಿಳಿಯುವ ಸಲುವಾಗಿ ಹನುಮನಾಯಕನ ಬರುವನ್ನೆ ಇದಿರುನೋಡುತ್ತಾ ಕುಳಿತನು. ಸುಮಾರು ಒಂದು ತಾಸು ಕಳೆದರೂ ಹನುಮನಾಯಕನ ಸುಳಿವಿಲ್ಲ. ಅವನ ಬಗ್ಗೆ ಸುದ್ದಿ ತಿಳಿದುಬರಲು ಜತೆಯಲ್ಲಿದ್ದ ಸಂಗಡಿಗರನ್ನು ಕಳುಹಿಸಿಕೊಟ್ಟನು. ಅವನು ಹೊರಟ ಸ್ವಲ್ಪ ಹೊತ್ತಿನಲ್ಲೇ ಭಯಂಕರವಾದ ಸುದ್ದಿ ತಂದನು.

"ಪ್ರಭೂ....ಪ್ರಭೂ...."

"ಏನಾಯಿತು?"

"ಅ....ಅ....ಅನಾಹುತವಾಯಿತು!"

"ಏನಾಯಿತು ಬೇಗ ಬಗುಳು."

"ಶ....ಶ....ಶತ್ರುಗಳು....ಅರಮನೆಯ....ಒಳಗೆ ನುಗ್ಗಿ ಬರುತ್ತಿದ್ದಾರೆ"

"ಹಾಗಾದರೆ ನೀವೆಲ್ಲಾ ಇಲ್ಲಿಂದ ಹೊರಡಿ."

"ಪ್ರಭೂ!...."

"ಹೂಂ, ನನ್ನೊಬ್ಬನನ್ನೇ ಬಿಟ್ಟು ಇಲ್ಲಿಂದ ಹೊರಡಿ!"

ಸೇವಕರು ಅಲ್ಲಿಂದ ಕಾಲ್ತೆಗೆಯದೆ ಇರಲು ರೋಷದಿಂದ ಸಲಕಂ ತಿರುಮಲನು ಒರೆಯಿಂದ ಕತ್ತಿಯನ್ನು ತೆಗೆದು ಝಳಪಿಸುತ್ತಾ ಅವರ ಮೇಲೆ ಬಿದ್ದನು.

ಅವರು ತಮ್ಮ ಪ್ರಭುವಿಗೆ ನಿಜವಾಗಿಯೂ ಹುಚ್ಚು ಹಿಡಿದಿದೆ ಎಂದು ಭಾವಿಸಿ, ಆ ಹುಚ್ಚನಬಳಿ ಇರಲು ಹೆದರಿ ಪ್ರಾಣದ ಮೇಲಿನ ಆಸೆಯಿಂದ ಓಡಿದರು. ಅವರು ಅಲ್ಲಿಂದ ಕಣ್ಮರೆಯಾದ ಕೂಡಲೇ ಸಲಕಂ ಪೆದ್ದತಿರುಮಲನು,

"ದ್ರೋಹಿಗಳು! ನನ್ನ ಮಾತೆಂದರೆ ಅವರಿಗೆ ಅದೆಷ್ಟು ಉಪೇಕ್ಷೆ!" ಎಂದು ಅವರ ಕಡೆ ನೋಡಿ ಕತ್ತಿಯನ್ನು ಒರೆಗೆ ಸೇರಿಸದೆ, ಏನನ್ನೋ ಯೋಚಿಸುತ್ತಾ ಕ್ಷಣಕಾಲ ನಿಂತ.

"ದ್ರೋಹಿಗಳು! ನನ್ನಿಂದ ಸಿಂಹಾಸನವನ್ನು ಕಿತ್ತುಕೊಳ್ಳುತ್ತಾರಂತೆ ಅವರಿಗೆ ಇಷ್ಟು ಸುಲಭವಾಗಿ ಬಿಟ್ಟುಕೊಡಬೇಕೆಂದಲ್ಲ – ಇಷ್ಟೊಂದು ಜನರ ಹತ್ಯೆ ನಡೆಸಿದುದು – ಪ್ರಾಣ ಹೋದರೂ ಈ ಸಿಂಹಾಸನ ಅವರಿಗೆ ಕೊಟ್ಟೇನೆ? ಶಕ್ತಿ ಇದ್ದರೆ ನನ್ನನ್ನು ಬಲಾತ್ಕಾರದಿಂದ ಸಿಂಹಾಸನದಿಂದ ತಳ್ಳಿ ಆಕ್ರಮಿಸಿಕೊಳ್ಳಲಿ! ಅವರಿಗೆ ಹೆದರಿ ಸಿಂಹಾಸನವನ್ನು ಒಪ್ಪಿಸುವ ಹೇಡಿ ನಾನಲ್ಲ! ನಾನು ಸಲಕಂ ಪೆದ್ದತಿರುಮಲ!"

ಅವನನ್ನು ಯಾರೋ 'ಹುಚ್ಚು ದೊರೆ' ಎಂದು ಮೂದಲಿಸಿದಂತೆ ಆಯಿತು.

" ಯಾರು ಹುಚ್ಚು ದೊರೆ?"

" ನೀನು! ಅಧಿಕಾರ ಕೈತಪ್ಪುವುದೆಂದು ನೀನು ಮಾಡಿರುವ ಆಜ್ಞೆಗಳನ್ನು ನೆನಸಿಕೊ."

" ಅವು ನನ್ನವು."

" ನೀನು ಸಂಪಾದಿಸಿದುದಲ್ಲ!"

" ಆದರೇನಂತೆ, ನಾನು ಬಾಹುಬಲದಿಂದ ಸಂಪಾದಿಸಿದುದು."

" ಅಲ್ಲ ಮೋಸ ವಂಚನೆಗಳಿಂದ ದುರಾಕ್ರಮಿಸಿದ್ದು!"

" ರಾಜಕೀಯದಲ್ಲಿ ಇವು ಅಪರಾಧಗಳಲ್ಲ!"

" ಅಂತಲೇ ನೀನು ದ್ರೋಹಕ್ಕೆಳೆಸಿದುದು? ಅದರ ಫಲ ಈಗಲಾದರೂ ತಿಳಿಯಿತೆ?"

" ಈಗೇನಾಯಿತು?"

" ಆದುದೆಲ್ಲಾ ಅನರ್ಥ. ನೀನು ದ್ರೋಹಿ, ಕೃತಘ್ನ!"

" ನನ್ನನ್ನು ಕೆರಳಿಸಬೇಡ!"

" ನಿನ್ನಿಂದೇನಾದೀತು? ನೀನೊಬ್ಬ ಹುಚ್ಚ! ಕೈಲಾಗದ ಹೇಡಿ!"

" ನನ್ನನ್ನು ನಿಂದಿಸುವ ನಿನ್ನನ್ನು ಕೊಲ್ಲುತ್ತೇನೆ!"

" ಇದೂ ಹುಚ್ಚುತನವೇ! ನನ್ನನ್ನು ಕೊಲ್ಲಲು ಬಂದು ನಿನ್ನನ್ನೇ ಕೊಂದು ಕೊಳ್ಳುವೆ."

" ನಾನು ಸತ್ತರೂ ಚಿಂತೆಯಿಲ್ಲ – ನಿನ್ನನ್ನು ಸಾಯಿಸುತ್ತೇನೆ."

" ನೀನೆಷ್ಟು ಪ್ರಯತ್ನಿಸಿದರೂ – ನನ್ನನ್ನು ಸಾಯಿಸಲಾರೆ."

" ಏಕೆ?"

" ಅವಿನಾಶಿ."

" ಅಂದರೆ?"

" ನನಗೆ ಸಾವಿಲ್ಲ! ಮೂರ್ಖ, ನಾನಾರೆಂದು ಆಲೋಚಿಸಿರುವೆ?"

" ನೀನು ನನ್ನ ಅಂತರಾತ್ಮನೆ?"

" ಈಗಲಾದರೂ ತಿಳಿಯಿತೆ–ನಾನಾರೆಂದು? ಈಗಲೂ ಕಾರ್ಯ ಮಿಂಚಿಲ್ಲ. ನಾನು ಹೇಳಿದಂತೆ ಕೇಳು, ಉಳಿಯುತ್ತೀಯೆ!"

" ನನಗೆ ಉಳಿಯುವುದು ಬೇಡ?"

" ಏಕೆ?"

" ಅಂತಹ ಹೇಡಿ ಬಾಳ್ವೆ ನನಗೆ ಬೇಡ."

" ಈಗ ಏನು ಮಾಡುವೆ?"

" ನಾನೇನು ಮಾಡುವೆನೋ ನೋಡುತ್ತಿರು."

"ನಿನ್ನ ಪ್ರತಿಯೊಂದು ಕಾರ್ಯದಲ್ಲೂ ನೆರಳಿನಂತೆ ಹಿಂಬಾಲಿಸಿಕೊಂಡು ಬಂದಿದ್ದೇನೆ – ಆಗಲಿ. ನಿನ್ನ ಜೀವನ ನಾಟಕ ಹೇಗೆ ಅಂತ್ಯಗೊಳ್ಳುವುದೋ ನೋಡುತ್ತೇನೆ!"

ಹುಚ್ಚನಂತೆ ಗಹಗಹಿಸಿ ನಕ್ಕ. ಕೈಲಿದ್ದ ಕತ್ತಿಯನ್ನು ಝಳಪಿಸುತ್ತಾ ಸಂತೋಷದಿಂದಲೇ, ಭುವನ ವಿಜಯದ ಆಸ್ಥಾನ ಮಂದಿರಕ್ಕೆ ಬಿರುಗಾಳಿಯ ವೇಗದಲ್ಲಿ ನುಗ್ಗಿ ಬಾಗಿಲನ್ನು ತನ್ನ ಹಿಂದೆ ಭದ್ರಪಡಿಸಿಕೊಂಡ.

ಈ ವೇಳೆಗೆ ಅರಮನೆಯ ಕೋಟೆಯೂ ರಾಮರಾಯರಿಗೆ ವಶವಾಗಿತ್ತು. ತನಗೆ ಯುದ್ಧಕೊಡದೆ ಅರಮನೆಯಲ್ಲಿ ತಲೆತಪ್ಪಿಸಿಕೊಂಡು ಕುಳಿತಿರುವ ಸಲಕಂ ಪೆದ್ದ ತಿರುಮಲನನ್ನು ಕೈಸೆರೆ ಹಿಡಿಯಲು ಅನುಚರರೊಡನೆ ಅರಮನೆಗೆ ನುಗ್ಗಿದ. ದಾರಿಯಲ್ಲಿ ಹನುಮನಾಯಕನು ಎದುರಾದ. ಅವನನ್ನು ಸೆರೆಹಿಡಿದರೆ ಪೆದ್ದ ತಿರುಮಲನ ಸಮಾಚಾರ ತಿಳಿಯಬಹುದೆಂದು ಅವನ ಮೇಲೆ ಬಿದ್ದ. ಇಬ್ಬರಿಗೂ ಯುದ್ಧವೇ ನಡೆಯಿತು. ತಾನು ಕೈಸೆರೆ ಸಿಕ್ಕಿದರೆ ಅವರಿಂದ ಚಿತ್ರಹಿಂಸೆಗೆ ಒಳಗಾಗಬೇಕೆಂದು ಹೆದರಿ ಅವನು ಮರಣವನ್ನು ಆಹ್ವಾನಿಸಿದ. ಅವನ ಮೇಲೆ ಏರಿಹೋಗುವವನೆಂದು ನಟಿಸಿ, ತನ್ನ ಕತ್ತಿಯನ್ನು ತನ್ನ ಎದೆಯಲ್ಲಿ ನೆಟ್ಟುಕೊಂಡು ಹಾಗೇ ನೆಲಕ್ಕೆ ಉರುಳಿದ. "ಅಯ್ಯೋ! ಅನ್ಯಾಯವಾಯಿತು!" ಎಂದು ಹೇಳಿ ರಾಮರಾಯನು ಅವನ ಬಳಿಗೆ ಬಂದ. ಆದರೆ ಕಾರ್ಯ ಮಿಂಚಿಹೋಗಿತ್ತು. ಹನುಮನಾಯಕನು ಕತ್ತಿಯಿಂದ ಬಲವಾಗಿ ತಿವಿದುಕೊಂಡಿದ್ದರಿಂದ ಅವನ ಪ್ರಾಣೋತ್ಕ್ರಮಣ ಸ್ಥಿತಿಯಲ್ಲಿದ್ದ ಅವನನ್ನು ಉಳಿಸಲು ಯಾರಿಂದಲೂ ಸಾಧ್ಯವಾಗಲಿಲ್ಲ. ಆದರೂ ಅನನಿಂದ ಸಲಕಂ ಪೆದ್ದ ತಿರುಮಲನು ಭುವನ ವಿಜಯಕ್ಕೆ ತನ್ನ ಅನುಚರರೊಂದಿಗೆ ನುಗ್ಗಿದ.

ಅರಮನೆಯ ಬಾಗಿಲುಗಳನ್ನು ಭದ್ರಪಡಿಸಲಾಗಿತ್ತು. ಬಹಳ ಪ್ರಯಾಸದಿಂದ ಅವನ್ನು ತೆರೆದು ಎಲ್ಲೆಡೆಯೂ ಪೆದ್ದತಿರುಮಲನಿಗಾಗಿ ಶೋಧಿಸಿದರು. ಎಲ್ಲೂ ಅವನು ಪತ್ತೆಯಾಗಲಿಲ್ಲ. ಹನುಮನಾಯಕನು ತಮಗೆ ಮೋಸ ಮಾಡಿರಬಹುದೇ ಎಂಬ ಅನುಮಾನ ಬಂತು. ಆದರೂ ಧೈರ್ಯಗೆಡದೆ ಸಲಕಂ ತಿರುಮಲನ ಶೋಧನೆಯಲ್ಲಿ ತೊಡಗಿದರು – ಅರಮನೆ ನಿರ್ಜನವಾಗಿತ್ತು. ಎಲ್ಲೆಲ್ಲೂ ಗಾಢ ಮೌನ, ರುದ್ರಶಾಂತಿ ಆವರಿಸಿತ್ತು! ಅವರು ಹುಡುಕುತ್ತಾ ಭುವನ ವಿಜಯದ ಸಭಾಂಗಣಕ್ಕೆ ಬಂದರು. ಅದರ ಬಾಗಿಲುಗಳನ್ನು ಬಲಾತ್ಕಾರದಿಂದ ತೆಗೆದು ನೋಡುತ್ತಾರೆ! ಅಲ್ಲಿ ಅವರಿಗೆ ಅತ್ಯಂತ ಘೋರವೂ ರುದ್ರರಮಣೀಯವೂ ಆದ ಅದ್ಭುತ ದೃಶ್ಯ ಕಾದಿತ್ತು.

ಸಲಕಂ ತಿರುಮಲನು ಸಿಂಹಾಸನದ ಬಳಿಯಲ್ಲಿದ್ದ ಕಂಭಕ್ಕೆ ಕತ್ತಿಯನ್ನು ಕಟ್ಟಿ, ಓಡಿಬಂದು ಕತ್ತಿಗೆ ಆಹುತಿಯಾಗಿ ಪ್ರಾಣ ಬಿಟ್ಟಿದ್ದ. ಅವನು ಸಾಮ್ರಾಟ

ನಾಗಿಯೇ ಮಡಿದಿದ್ದ. "ಪ್ರಾಣ ಹೋದರೂ ಸಿಂಹಾಸನ ಅವರಿಗೆ ಬಿಟ್ಟು ಕೊಡುವೆನೆ? ಬೇಕಾದರೆ ಬಲಾತ್ಕಾರದಿಂದ ಕಸಿದುಕೊಳ್ಳಲಿ." ಎಂಬ ಅವನ ಮಾತು ಅಕ್ಷರಶಃ ನಿಜವಾಗಿತ್ತು. ಅವನು ತನ್ನ ಕೊನೆಯ ದಿನಗಳಲ್ಲಿ ಹುಚ್ಚ ನಂತೆ ಆಳ್ವಿಕೆ ನಡೆಸಿದ್ದರೂ ವೀರನಂತೆ ಮರಣವನ್ನು ಸ್ವಾಗತಿಸಿದ್ದನು. ಧೀರ ನಂತೆ ತಾನೇ ಕೈಯಾರ ಕತ್ತಿಯಿಂದ ತಿವಿದುಕೊಂಡು, ಆತ್ಮಹತ್ಯೆ ಮಾಡಿಕೊಂಡು ಅಳಿಯರಾಮರಾಯನಿಂದ ಪಾರಾಗಿದ್ದ. ತನ್ನ ನೀಚ ಬಾಳ್ವಿಗೆ ಭವ್ಯವಾದ ಪ್ರಭಾವಳಿಯನ್ನು ರಚಿಸಿದ್ದನು.

ಅಳಿಯ ರಾಮರಾಯನು ಆ ದೃಶ್ಯವನ್ನು ಬೆರಗಾಗಿ ನೋಡಿದನು. ನೆತ್ತರು ಹೆಪ್ಪುಗಟ್ಟುವತನಕ ನೋಡುತ್ತಾ ನಿಂತನು. ಅಷ್ಟರಲ್ಲಿ ಯಾರೋ 'ಪ್ರಭು!' ಎಂದು ಚೀರಿದರು. ರಾಮರಾಯನು ತನ್ನ ಭಾವಸಮಾಧಿಯಿಂದ ಎಚ್ಚೆತ್ತು ಸುತ್ತಲೂ ನೋಡಿದ.

"ಪ್ರಭು ಅರಮನೆಗೆ ಬೆಂಕಿ ಬಿದ್ದಿದೆ—ಆ ನೀಚನು ತನ್ನೊಡನೆ ಸಿಂಹಾ ಸನವನ್ನೂ ಅರಮನೆಯನ್ನೂ ನಾಶಗೈಯಲು ಅರಮನೆಗೆ ಬೆಂಕಿಯಿಟ್ಟಿದ್ದಾನೆ." ಎಂದು ಮುಕುಂದನಾಯಕನು ಹೇಳಿದನು.

ಈ ವಾರ್ತೆಯನ್ನು ಕೇಳಿ ಹೌಹಾರಿ, ಬೆಂಕಿಯನ್ನು ಆರಿಸಲು ಅತ್ತ ಹೊರಟ.

ಅಂತಃಪುರದ ಒಂದು ಭಾಗದಲ್ಲಿ, ನಾಲ್ಕಾರು, ಆಳೆತ್ತರದ, ಬೆಂಕಿಯು ಧಗಧಗನೆ ಉರಿಯುತ್ತಿತ್ತು. ಅದನ್ನು ಆರಿಸಲು ಸೈನಿಕರಿಗೆ ಆಜ್ಞೆಮಾಡಿ ತಾನೂ ಆ ಕಾರ್ಯದಲ್ಲಿ ನೆರವಾದ. ಕರ್ಪೂರ, ತೈಲ, ಅರಗು ಮತ್ತಿತರ ಆಸ್ಫೋಟಕ ದ್ರವ್ಯಗಳನ್ನು ಹಾಕಿ ಬೆಂಕಿಯಿಟ್ಟಿದ್ದುದರಿಂದ, ಸುಲಭವಾಗಿ ಅದನ್ನು ಹತೋಟಿಗೆ ತರುವುದು ಕಷ್ಟವಾಯಿತು. ಅವರು ಮರಳು, ನೀರು— ಮತ್ತಿತರ ಅಗ್ನಿ ನಿರೋಧಕ ವಸ್ತುಗಳಿಂದ ಹತ್ತಾರು ತಾಸು ಸಂತತವಾಗಿ ಪ್ರಯತ್ನಿಸಿದ ಮೇಲೆ ಬೆಂಕಿ ಉಳಿದ ಭಾಗಗಳಿಗೆ ಹರಡುವುದು ತಪ್ಪಿ ಕ್ರಮಕ್ರಮ ವಾಗಿ ಅವರ ಹತೋಟಿಗೆ ಬಂದಿತು.

ಈ ಅಗ್ನಿಜ್ವಾಲೆಯಿಂದ ಸಲಕಂ ಸೋದರರ ಆಡಳಿತದ ಇತಿಹಾಸವೆಲ್ಲಾ ದಗ್ಧವಾದಂತೆ ಎಲ್ಲೆಲ್ಲೂ ಬೂದಿ ಕಾಣಿಸಿತು. ಈ ಬೂದಿಯಿಂದ ನಾಳಿನ ಭವ್ಯ ಅರಮನೆ ಮೇಲೆದ್ದಂತೆ, ಮತ್ತೆ ವೈಭವದ ಸಾಮ್ರಾಜ್ಯವು ಮೇಲೆದ್ದಂತೆ ಕನಸು ಕಾಣುತ್ತಾ, ರಾಮರಾಯ ಬಹಳ ಹೊತ್ತು ಹಾಗೇ ನಿಂತಿದ್ದ.

ಅವನ ಕನಸು ನನಸಾಗಲು ಬಹಳ ಕಾಲ ಬೇಕಾಗಲಿಲ್ಲ.

೨೮

ಸುಮಾರು ಹನ್ನೆರಡು ವರ್ಷಗಳ ಕಾಲ ವಿಜಯ ನಗರ ಸಿಂಹಾಸನಕ್ಕೂ, ಸಾಮ್ರಾಜ್ಯಕ್ಕೂ ರಾಹುಕೇತುಗಳಂತೆ, ಮುತ್ತಿಗೆ ಹಾಕಿದ್ದ ಸಲಕಂ ಸೋದರರ ಪೈಶಾಚಿಕ ಆಳ್ವಿಕೆಯನ್ನು ಅಳಿಯರಾಮರಾಯನು ಮುಕ್ತಾಯಗೊಳಿಸಿದ್ದ. ಈ ವಾರ್ತೆಯನ್ನು ಕೇಳಿ, ತಮಗೆ ಹನ್ನೆರಡು ವರ್ಷಗಳ ಶನಿಕಾಟ ನಿವಾರಣೆಯಾಯಿತೆಂಬಂತೆ, ಜನತೆ ಸಂತೋಷ, ಸಂಭ್ರಮದಿಂದ ನಲಿಯಿತು. ತಮ್ಮನ್ನು ಸಲಕಂ ಸೋದರರ ಕ್ರೂರ ಮುಷ್ಟಿಯಿಂದ ಪಾರುಮಾಡಿ, ಪವಿತ್ರವಾದ ಸಾಮ್ರಾಜ್ಯಕ್ಕೆ ಬಂದಿದ್ದ ಗಂಡಾಂತರವನ್ನು ತಪ್ಪಿಸಿದುದಕ್ಕಾಗಿ, ಅಳಿಯ ರಾಮರಾಯನನ್ನು ಅವರು ಹಾಡಿಹೊಗಳಿದರು. ಅಳಿಯರಾಮರಾಯನು ಜನತೆಯ ನಿರೀಕ್ಷೆಯನ್ನು ವ್ಯರ್ಥಗೊಳಿಸಲಿಲ್ಲ. ಸಿಂಹಾಸನವನ್ನು ತಾನು ದುರಾಕ್ರಮಿಸದೆ, ಸಲಕಂ ಸೋದರರಿಂದ ಉಳಿದ ರಂಗರಾಯನ ಮಗ ಸದಾಶಿವರಾಯನಿಗೆ ಬರುವಾಗ ತಿರುಪತಿಯಲ್ಲಿ ಪಟ್ಟಗಟ್ಟಿ ಕರೆತಂದಿದ್ದನು. ಈಗ ವಿಜಯನಗರದ ಸಿಂಹಾಸನದ ಮೇಲೆ ತುಳುವಂಶದ ಸದಾಶಿವರಾಯನನ್ನು ಕೂಡಿಸಿ, ಕ್ರಿ.ಶ, ೧೫೪೩ನೇ ಸಂವತ್ಸರ ಆಗಸ್ಟ್ ೬ನೇ ತಾರೀಖು ಸೋಮವಾರ, ಪಟ್ಟಗಟ್ಟಿ ವಿಜಯನಗರದ ಸಾಮ್ರಾಟನೆಂದು ಘೋಷಿಸಿದನು.

ಸಾಮ್ರಾಜ್ಯದ ಜನರು ಆನಂದದಿಂದ ಸದಾಶಿವರಾಯನನ್ನು ನೂತನ ಸಾಮ್ರಾಟನನ್ನಾಗಿ ಸ್ವಾಗತಿಸಿದರು. ಅಳಿಯರಾಮರಾಯನಿಗೆ "ಪ್ರಾಚ್ಯ ಕರ್ಣಾಟಕ ರಾಜ್ಯ ಸಂಸ್ಥಾಪನಾಚಾರ್ಯ." ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿದುದಲ್ಲದೆ, ಬಾಲಕನಾದ ಸದಾಶಿವರಾಯನ ಪರ ಆಳಲು ರಾಜಪ್ರತಿನಿಧಿಯಾಗಿ ನೇಮಿಸಿದರು.

ರಾಮರಾಯನ ಆಳ್ವಿಕೆಯೊಂದಿಗೆ, ವಿಜಯನಗರದ ಇತಿಹಾಸದಲ್ಲಿ ನೂತನ ಅಧ್ಯಾಯ ಆರಂಭವಾಯಿತು.